ಶ್ರೀಮದ್ವಾಲ್ಮೀಕಿರಾಮಾಯಣವು

VENKATESHWARA PUBLISHERS

MYLAPORE, MADRAS 600 004

ಶ್ರೀಃ

ವಾಲ್ಮೀಕಿಮಹರ್ಷಿಪ್ರಣೀತ

ಶ್ರೀಮದ್ರಾಮಾಯಣವು

ಅಯೋಧ್ಯಾಕಾಂಡವು

(ಎರಡನೆಯ ಭಾಗವು)

ಕರ್ಣಾಟಕ ವಚನವು

Vol. 3

ಶ್ರೀಮದ್ಯದುಶೈಲನಿವಾಸರಸಿಕ

ಪಂಡಿತ ದೇವಶಿಖಾಮಣಿ ಅಳಸಿಂಗರಾಚಾರ್ಯ ವಿರಚಿತವು.

ವೆಂಕಟೇಶ್ವರ ಪಬ್ಲಿಷರ್ಸ್

14, ಭೀಮಸೇನಾ ಗಾರ್ಡನ್ಸ್, ಮೈಲಾಪುರ, ಮದರಾಸು-4

VENKATESWARA PUBLISHERS

14, Bhimasena Gardens,

Mylapore, Madras-600 004. **Rs. 40/-**

Dedicated to the memory of

H. BHIMASENA RAU

Accountant General

for whose unstinted support the publisher is grateful

All Rights Reserved

ಕಾಪೀರೈಟ್, ೧೯೧೯—ಈ ಪುಸ್ತಕದ ಸರ್ವಸ್ವಾತಂತ್ರ್ಯವೂ ಮದ್ರಾಸ್, ವೆಂಕಟೇಶ್ವರ ಪಬ್ಲಿಷರ್ಸ್ ಅವರಿಗೆ ಸೇರಿದೆ. ಇದಕ್ಕೆ ಇಂಡಿಯಾ ದೇಶದ ಮತ್ತು ಹೊರದೇಶದ ಕಾಪೀರೈಟ್ ತೆಗೆಯಲ್ಪಟ್ಟಿದೆ. ಈ ಪುಸ್ತಕವನ್ನು ಸಂಪೂರ್ಣವಾಗಿಯಾಗಲೀ ಅಥವಾ ಇದರ ಯಾವುದಾದರೂ ಭಾಗವನ್ನಾಗಲಿ, ಪ್ರತ್ಯೇಕವಾಗಿ ಪ್ರಕಟಿಸುವುದಕ್ಕೂ, ಭಾಷಾಂತರೀಕರಿಸಿ ವಿಕ್ರಯಿಸುವುದಕ್ಕೂ ಬೇರೊಬ್ಬರಿಗೂ ಬಾಧ್ಯತೆಯಿರದು. ಈ ಪುಸ್ತಕದೊಳಗಿನ ಭಾವಗಳನ್ನಾಗಲೀ, ಪದಗಳನ್ನಾಗಲೀ, ಚಿತ್ರಪಟಗಳನ್ನಾಗಲೀ ಇತರರು ಕಾಪೀಮಾಡಿದ ಪಕ್ಷದಲ್ಲಿ, ಅಂತವರು ಕಾಪೀರೈಟನ್ನು ಉಲ್ಲಂಘಿಸಿದಂತಾಗುವುದು. ಆದುದರಿಂದ ಯಾವ ಭಾಗದಲ್ಲಿಯಾದರೂ ಈ ಕಾಪೀರೈಟನ್ನು ಉಲ್ಲಂಘಿಸಿದವರು ನಷ್ಟದ ದಾವೆಗೆ ಗುರಿಯಾಗುವರೆಂದು ಇದರಿಂದ ತಿಳಿಯಪಡಿಸಿದೆ.

ಪ್ರಭಾ ಮುದ್ರಣಾಲಯ, ಬಸವನಗುಡಿ, ಬೆಂಗಳೂರು-೪

ಅಯೋಧ್ಯಾಕಾಂಡದ ವಿಷಯಾನುಕ್ರಮಣಿಕೆ

ಸರ್ಗಸಂಖ್ಯೆ	ವಿಷಯಗಳು	ಪುಟಸಂಖ್ಯೆ
೫೪	ರಾಮಾದಿಗಳು ಭರದ್ವಾಜಾಶ್ರಮಕ್ಕೆ ಹೋದುದು. ಭರದ್ವಾಜ ದರ್ಶನವು. ಭರದ್ವಾಜಮುನಿಯು ಚಿತ್ರಕೂಟವನ್ನು ವರ್ಣಿಸಿ ಹೇಳಿದುದು.	೧
೫೫	ಚಿತ್ರಕೂಟಕ್ಕೆ ಪ್ರಯಾಣವು. ದೋಣಿಯಲ್ಲಿ ಯಮುನಾ ನದಿಯನ್ನು ದಾಟಿ, ಆ ದಿನದ ಸಾಯಂಕಾಲವನ್ನು ಯಮುನಾವನದಲ್ಲಿಯೇ ಕಳೆದುದು.	೭
೫೬	ರಾಮಾದಿಗಳು ಚಿತ್ರಕೂಟಪ್ರಾಂತದಲ್ಲಿದ್ದ ವಾಲ್ಮೀಕ್ಯಾಶ್ರಮವನ್ನು ಸೇರಿದುದು. ವಾಲ್ಮೀಕಿದರ್ಶನವು. ಪರ್ಣಶಾಲೆಯನ್ನು ಕಟ್ಟಿ ಕೊಂಡು ಚಿರಕಾಲದವರೆಗೆ ಅಲ್ಲಿ ವಾಸಮಾಡುತ್ತಿದ್ದುದು. ...	೧೧
೫೭	ಇತ್ತಲಾಗಿ ಸುಮಂತ್ರನು ರಾಮನನ್ನು ಬಿಟ್ಟು ಅಯೋಧ್ಯೆಗೆ ಹೋದುದು. ಪುರಜನರ ದುಃಖವು, ದಶರಥನ ಶೋಕವು. ...	೧೫
೫೮	ಸುಮಂತ್ರನು ರಾಮನನ್ನು ಬಿಟ್ಟು ಅಯೋಧ್ಯೆಗೆ ಹೋದುದು. ಪುರಜನರ ದುಃಖವು. ದಶರಥನ ಶೋಕವು. ...	೨೦
೫೯	ಸುಮಂತ್ರನು ಅಯೋಧ್ಯೆಯಲ್ಲಿ ರಾಮವಿಯೋಗದಿಂದುಂಟಾದ ಮಹಾನರ್ಥಗಳನ್ನು ದಶರಥನಿಗೆ ತಿಳಿಸಿದುದು. ಅದನ್ನು ಕೇಳಿ ದಶರಥನು ಮೂರ್ಛಿತನಾದುದು.	೨೫
೬೦	ಸುಮಂತ್ರನಿಂದ ರಾಮನ ವೃತ್ತಾಂತವನ್ನು ತಿಳಿದು, ಕೌಸಲ್ಯೆಯು ಪ್ರಲಾಪಿಸಿದುದು. ಸುಮಂತ್ರನು ಅವಳನ್ನು ಸಮಾಧಾನಪಡಿಸಿದುದು.	೩೧
೬೧	ಕೌಸಲ್ಯೆಯು, ರಾಮನನ್ನು ಕಾಡಿಗೆ ಕಳುಹಿಸಿದುದಕ್ಕಾಗಿ ದಶರಥನನ್ನು ಆಕ್ಷೇಪಿಸಿ ಪ್ರಲಾಪಿಸಿದುದು. ಅದನ್ನು ಕೇಳಿ ರಾಜನು ಮೂರ್ಛಿತನಾದುದು.	೩೬

ಸರ್ಗಸಂಖ್ಯೆ	ವಿಷಯಗಳು	ಪುಟಸಂಖ್ಯೆ
೬೨	ಮೂರ್ಛೆಹೊಂದಿದ ರಾಜನನ್ನು ಕೌಸಲ್ಯೆಯು ಸಮಾಧಾನಪಡಿಸಿದುದು. ಕೌಸಲ್ಯೆಯು ತಾನು ಕ್ರೂರವಾಕ್ಯಗಳನ್ನಾಡಿದುದಕ್ಕಾಗಿ ದಶರಥನ ಮನ್ನಣೆಯನ್ನು ಕೇಳಿದುದು. ...	೪೧
೬೩	ದಶರಥನು ಪೂರ್ವದಲ್ಲಿ ಸರಯೂತೀರದಲ್ಲಿ ಒಬ್ಬ ಋಷಿಕುಮಾರನನ್ನು ತಾನು ಕೊಂದ ವೃತ್ತಾಂತವನ್ನು ಕೌಸಲ್ಯೆಗೆ ಹೇಳಿದುದು. ...	೪೫
೬೪	ದಶರಥನ ಮರಣವು.	೫೩
೬೫	ದಶರಥನ ಮರಣಕ್ಕಾಗಿ ರಾಜಪತ್ನಿಯರ ಪ್ರಲಾಪವು. ...	೬೨
೬೬	ಕೌಸಲ್ಯೆಯ ಪ್ರಲಾಪವು. ದಶರಥನ ದೇಹವನ್ನು ತೈಲದ್ರೋಣಿಯಲ್ಲಿಟ್ಟುದು. ರಾಜಸ್ತ್ರೀಯರ ದುಃಖವು. ಪುರಸಂಕ್ಷೋಭವು. ..	೬೬
೬೭	ರಾಜ್ಯವು ಅರಾಜಕವಾಗಿರುವುದರಿಂದ ಉಂಟಾಗಬಹುದಾದ ದೋಷಗಳನ್ನು ತಿಳಿಸಿ ಮಾರ್ಕಂಡೇಯಾದಿಗಳು ವಸಿಷ್ಠರನ್ನು ಪ್ರಾರ್ಥಿಸಿದುದು.	೬೯
೬೮	ವಸಿಷ್ಠನು ಭರತನನ್ನು ಕರೆತರುವುದಕ್ಕಾಗಿ ಕೇಕಯನಗರಕ್ಕೆ ದೂತರನ್ನು ಕಳುಹಿಸಿದುದು.	೭೪
೬೯	ಇತ್ತಲಾಗಿ ಕೇಕಯನಗರದಲ್ಲಿ ಭರತನು ತಾನು ಕಂಡ ದುಸ್ಸ್ವಪ್ನಗಳನ್ನು ತನ್ನ ಮಿತ್ರರಿಗೆ ಹೇಳಿದುದು.	೭೭
೭೦	ಭರತನು ಅಯೋಧ್ಯೆಗೆ ಪ್ರಯಾಣಮಾಡಿ ಬಂದುದು. ...	೭೯
೭೧	ಭರತನು ಅಯೋಧ್ಯೆಯಲ್ಲಿ ತಂದೆಯ ಮನೆಗೆ ಪ್ರವೇಶಿಸಿದುದು. ...	೮೩
೭೨	ಕೈಕೇಯಿಯು ಭರತನಿಗೆ ದಶರಥನ ಮರಣವನ್ನೂ ರಾಮನ ವನಪ್ರಯಾಣವನ್ನೂ ತಿಳಿಸಿ, ರಾಜ್ಯಾಧಿಕಾರವನ್ನು ವಹಿಸಿಕೊಳ್ಳುವಂತೆ ಹೇಳಿದುದು.	೮೯
೭೩	ಭರತನು ಕೈಕೇಯಿಯನ್ನು ನಿಂದಿಸಿದುದು.	೯೬
೭೪	ಭರತನು ಕೋಪಾವೇಶದಿಂದ ಕೈಕೇಯಿಯನ್ನು ಬಹು ಕ್ರೂರವಾಗಿ ನಿಂದಿಸಿ, ಕೊನೆಗೆ ಮೂರ್ಛೆಬಿದ್ದುದು.	೯೯
೭೫	ಭರತ ಶತ್ರುಘ್ನರಿಬ್ಬರೂ ಕೌಸಲ್ಯೆಯ ಬಳಿಗೆ ಹೋದುದು, ಭರತನು ಕೌಸಲ್ಯೆಯೊಡನೆ ರಾಮನನ್ನು ಕರೆತರುವುದಾಗಿ ಶಪಥಮಾಡಿದುದು.	೧೦೪

ಸರ್ಗಸಂಖ್ಯೆ	ವಿಷಯಗಳು	ಪುಟಸಂಖ್ಯೆ
೭೬	ಭರತನು ದಶರಥನಿಗೆ ಅಪರಸಂಸ್ಕಾರಗಳನ್ನು ನಡೆಸಿದುದು. ...	೧೧೬
೭೭	ಭರತನು ಹನ್ನೆರಡನೆಯ ದಿನದ ಶ್ರಾದ್ಧವನ್ನು ನಡೆಸಿದುದು. ಭರತ ಶತ್ರುಘ್ನರಿಬ್ಬರೂ ತಂದೆಯನ್ನು ನೆನೆಸಿಕೊಂಡು ಎಡೆಬಿಡದೆ ದುಃಖಿಸುತ್ತಿರಲು, ವಸಿಷ್ಠಾದಿಗಳು ಅವರನ್ನು ಸಮಾಧಾನ ಪಡಿಸಿದುದು.	೧೧೯
೭೮	ಶತ್ರುಘ್ನನು ಮಂಥರೆಯನ್ನು ಶಿಕ್ಷಿಸುವಾಗ ಕೈಕೇಯಿಯು ಆಕೆಯನ್ನು ಬಿಡಿಸಿದುದು.	೧೨೨
೭೯	ಭರತನು ರಾಜ್ಯವನ್ನು ಅಂಗೀಕರಿಸದೆ, ರಾಮನನ್ನೇ ಹಿಂತಿರುಗಿಸಿ ಕರೆತರುವುದಕ್ಕಾಗಿ ಕಾಡಿಗೆ ಹೊರಡಬೇಕೆಂದು ನಿಶ್ಚಯಿಸಿ, ಮಾರ್ಗವನ್ನು ಕ್ರಮಪಡಿಸುವಂತೆ ನಿಯಮಿಸಿದುದು. ...	೧೨೬
೮೦	ಅಯೋಧ್ಯೆಯಿಂದ ಗಂಗಾನದಿಯವರೆಗೂ ಮಾರ್ಗವನ್ನು ಕ್ರಮ ಪಡಿಸಿದುದು.	೧೨೮
೮೧	ಭರತನ ಶೋಕವು. ವಸಿಷ್ಠನು ಸುಮಂತ್ರನನ್ನು ಕಳುಹಿಸಿ ಭರತ ಶತ್ರುಘ್ನರನ್ನು ರಾಜಸಭೆಗೆ ಕರೆಸಿದುದು. ...	೧೩೦
೮೨	ಭರತನು ರಾಜ್ಯವನ್ನೊಲ್ಲದೆ ಪೌರರೊಡಗೂಡಿ ರಾಮನಿರುವ ಕಾಡಿಗೆ ಪ್ರಯಾಣ ಮಾಡಿದುದು.	೧೩೨
೮೩	ಭರತನು ಸೈನ್ಯದೊಡನೆ ಪ್ರಯಾಣಮಾಡಿ ಗಂಗಾತೀರವನ್ನು ಸೇರಿದುದು.	೧೩೯
೮೪	ಭರತನಿಗೆ ಗುಹನು ಆತಿಥ್ಯಗಳನ್ನು ಮಾಡಿದುದು.	೧೪೩
೮೫	ಗುಹನು ಭರತನನ್ನು ಸಮಾಧಾನಪಡಿಸಿದುದು. ...	೧೪೬
೮೬	ಗುಹನು ಭರತನೊಡನೆ ರಾಮನ ವಿಷಯವಾದ ಅನೇಕ ಕಥೆಗಳನ್ನಾಡುತಿದ್ದುದು.	೧೪೯
೮೭	ರಾಮನು ಜಲಾಹಾರವನ್ನು ಮಾತ್ರ ಮಾಡಿ ಸೀತೆಯೊಡನೆ ಮರದ ಕೆಳಗೆ ಮಲಗಿದ್ದ ವಿಷಯವನ್ನೂ ಗುಹನು ಭರತನಿಗೆ ತಿಳಿಸಿದುದು.	೧೫೩
೮೮	ಇಂಗಳದಮರದ ಕೆಳಗೆ ಸೀತೆಯ ಆಭರಣದಿಂದುದುರಿದ ರತ್ನಗಳನ್ನೂ ಆಕೆಯ ಪಟ್ಟೆವಸ್ತ್ರದಿಂದ ಉದಿರಿದ ನೂಲುಗಳನ್ನೂ ನೋಡಿ ಭರತನು ದುಃಖಿಸಿದುದು.	೧೫೭

ಸರ್ಗಸಂಖ್ಯೆ	ವಿಷಯಗಳು	ಪುಟಸಂಖ್ಯೆ
೮೯	ಭರತನು ಗಂಗೆಯನ್ನು ದಾಟಿ ಭರದ್ವಾಜಾಶ್ರಮಕ್ಕೆ ಹೋದುದು ...	೧೬೧
೯೦	ಭರತನು ಭರದ್ವಾಜಮಹರ್ಷಿಯನ್ನು ದರ್ಶನಮಾಡಿದುದು. ಪರಸ್ಪರ ಕುಶಲಪ್ರಶ್ನೆಗಳು.	೧೬೪
೯೧	ಭರದ್ವಾಜನು ಭರತನಿಗೂ ಅವನ ಸೈನ್ಯಕ್ಕೂ ಆತಿಥ್ಯವನ್ನು ನಡೆಸಿದುದು.	೧೬೮
೯೨	ಭರತನು ಭರದ್ವಾಜನಿಗೆ ಕೌಸಲ್ಯಾದಿಗಳನ್ನು ತಿಳಿಸಿದುದು. ಚಿತ್ರಕೂಟ ಪ್ರಯಾಣವು. ನಡುವೆ ಯಮುನಾತೀರವನವನ್ನು ಪ್ರವೇಶಿಸಿದುದು.	೧೭೯
೯೩	ಭರತನು ಚಿತ್ರಕೂಟ ವನವನ್ನು ಪ್ರವೇಶಿಸಿದುದು. ವನವರ್ಣನವು. ರಾಮಾಶ್ರಮವನ್ನು ಹುಡುಕುತಿದ್ದುದು	೧೮೪
೯೪	ರಾಮನು ಅತ್ತಲಾಗಿ ಚಿತ್ರಕೂಟದಲ್ಲಿ ನಡೆಸುತ್ತಿದ್ದ ನಿತ್ಯಕಾರ್ಯಗಳು. ಅಯೋಧ್ಯೆಗಿಂತಲೂ ಚಿತ್ರಕೂಟವು ರಮಣೀಯವೆಂಬುದನ್ನು ನಿರೂಪಿಸಿದುದು.	೧೮೭
೯೫	ರಾಮನು ಮಂದಾಕಿನೀನದಿಯ ಅಂದವನ್ನು ವರ್ಣಿಸಿ ಸೀತೆಯನ್ನು ವಿನೋದಪಡಿಸಿದುದು.	೧೯೦
೯೬	ಸೀತಾರಾಮರಿಬ್ಬರೂ ವಿನೋದದಿಂದ ಕುಳಿತು ಮಾಂಸಾಹಾರವನ್ನು ತೆಗೆದುಕೊಳ್ಳುತ್ತಿರುವ ಕಾಲದಲ್ಲಿ ವನಜಂತುಗಳು ಭಯಪಟ್ಟು ಓಡುತ್ತಿರುವುದನ್ನು ನೋಡಿ, ಅದರ ಕಾರಣವನ್ನು ತಿಳಿದು ಬರುವುದಕ್ಕಾಗಿ ಲಕ್ಷ್ಮಣನನ್ನು ಕಳುಹಿಸಿದುದು. ಲಕ್ಷ್ಮಣನು ಒಂದು ಮರದಮೇಲೆ ಏರಿನಿಂತು, ಭರತನು ಸೇನಾಸಮೇತನಾಗಿ ಬರುವುದನ್ನು ಕಂಡು ಶಂಕಿಸಿದುದು.	೧೯೪
೯೭	ರಾಮನು ಲಕ್ಷ್ಮಣನ ಕೋಪವನ್ನು ಸಮಾಧಾನಪಡಿಸಿದುದು. ...	೧೯೭
೯೮	ಭರತನು ಪಾದಚಾರಿಯಾಗಿ ಹೊರಟು ರಾಮಾಶ್ರಮವನ್ನು ಹುಡುಕುತಿದ್ದುದು. ಹೊಗೆಯ ಗುರುತನ್ನು ನೋಡಿದಮೇಲೆ ಇತರ ಪರಿವಾರಗಳನ್ನೂ ಅಲ್ಲಿಯೇ ನಿಲ್ಲಿಸಿ, ಗುಹಶತ್ರುಘ್ನರೊಡನೆ ಮುಂದೆ ಬಂದುದು.	೨೦೨
೯೯	ಭರತನು ಹಿಂದೆ ನಿಲ್ಲಿಸಿದ್ದ ತನ್ನ ಮಾತೆಯರನ್ನು ಕರೆತರುವುದಕ್ಕಾಗಿ ವಸಿಷ್ಠನನ್ನು ಕಳುಹಿಸಿ ತಾನು ಗುಹಸುಮಂತ್ರರೊಡನೆ ಹೊರಟು ರಾಮನನ್ನು ಸೇರಿದುದು.	೨೦೫

ಸರ್ಗಸಂಖ್ಯೆ	ವಿಷಯಗಳು	ಪುಟಸಂಖ್ಯೆ
೧೦೦	ರಾಮನು ಭರತನನ್ನು ಕುಶಲಪ್ರಶ್ನೆಮಾಡಿ ತನ್ಮೂಲಕವಾಗಿ ಆತನಿಗೆ ರಾಜನೀತಿಗಳನ್ನುಪದೇಶಿಸಿದುದು.	೨೧೨
೧೦೧	ಭರತನು ರಾಮನಿಗೆ ದಶರಥನ ಮರಣವಾರ್ತೆಯನ್ನು ತಿಳಿಸಿದುದು ...	೨೩೭
೧೦೨	ರಾಮನ ಪ್ರಲಾಪವು. ಮಂದಾಕಿನಿಯಲ್ಲಿ ಜಲತರ್ಪಣವನ್ನು ನಡೆಸಿದುದು. ಅಲ್ಲಿಂದ ಆಶ್ರಮಕ್ಕೆ ಹಿಂತಿರುಗಿ ಬಂದು ಪುನಃ ಪ್ರಲಾಪಿಸಿದುದು. ಅಯೋಧ್ಯಾವಾಸಿಗಳಿಗೆ ರಾಮನೊಡನೆ ಸಮಾಗಮವು.	೨೩೯
೧೦೩	ರಾಮನು ತನ್ನ ಮಾತೃಜನವನ್ನೂ, ವಸಿಷ್ಠನನ್ನೂ, ಇತರ ಮಂತ್ರಿಗಳೇ ಮೊದಲಾದವರನ್ನೂ ನೋಡಿ ಮಾತಾಡಿಸಿದುದು. ...	೨೪೪
೧೦೪	ಭರತನು ರಾಜ್ಯವನ್ನು ಕೈಕೊಳ್ಳಬೇಕೆಂದು ರಾಮನನ್ನು ಪ್ರಾರ್ಥಿಸಿದುದು. ರಾಮನು ಸಮಾಧಾನವನ್ನು ಹೇಳಿದುದು. ...	೨೪೮
೧೦೫	ಭರತನು ರಾಮನನ್ನು ಪುನಃ ರಾಜ್ಯವನ್ನು ಕೈಕೊಳ್ಳಬೇಕೆಂದು ನಿರ್ಬಂಧಿಸಿದುದು. ರಾಮನು ತತ್ವಾರ್ಥಗಳನ್ನು ನಿರೂಪಿಸಿ ಸಮಾಧಾನಪಡಿಸಿದುದು.	೨೫೨
೧೦೬	ಭರತನು ರಾಮನನ್ನು ಪುನಃ ಪ್ರಾರ್ಥಿಸಿದುದು. ವಸಿಷ್ಠನೂ, ಕೌಸಲ್ಯಾದಿಗಳೂ, ಮಂತ್ರಿ ಮೊದಲಾದವರೂ ರಾಮನನ್ನು ಪ್ರಾರ್ಥಿಸಿದುದು.	೨೫೮
೧೦೭	ಭರತನು ದಶರಥನಲ್ಲಿ ದೋಷಾರೋಪಣಮಾಡಲು, ರಾಮನು ಅದನ್ನು ಖಂಡಿಸಿ ತಂದೆಯು ಧರ್ಮವನ್ನೇ ಆಚರಿಸಿದನೆಂದು ಉಪಪಾದಿಸಿದುದು.	೨೬೩
೧೦೮	ರಾಮನು ಭರತನನ್ನು ವಾದದಿಂದ ಮಾತಾಡದ ಹಾಗೆ ಮಾಡಿದುದನ್ನು ನೋಡಿ ಜಾಬಾಲಿಮುನಿಯು ನಾಸ್ತಿಕ್ಯವಾದದಿಂದ ರಾಮನ ಮನಸ್ಸನ್ನು ಹಿಂತಿರುಗಿಸುವುದಕ್ಕೆ ಪ್ರಯತ್ನಿಸಿದುದು. ...	೨೬೬
೧೦೯	ರಾಮನು ಜಾಬಾಲಿಯ ಮತವನ್ನು ನಿರಾಕರಿಸಿ, ವೈದಿಕಮತವನ್ನು ಸ್ಥಾಪಿಸಿದುದು.	೨೬೯
೧೧೦	ವಸಿಷ್ಠನು ರಾಮನಿಗೆ ಕೋಪಸಮಾಧಾನಮಾಡಿ, ಮನುವಂಶದ ರಾಜರ ಪೂರ್ವಾಚಾರವನ್ನು ನಿದರ್ಶಿಸಿ, ಜ್ಯೇಷ್ಠನೇ ರಾಜ್ಯಾರ್ಹನೆಂದು ಬೋಧಿಸಿ, ರಾಮನನ್ನು ಹಿಂತಿರುಗಿಸುವುದಕ್ಕೆ ಪ್ರಯತ್ನಿಸಿದುದು.	೨೭೫

ಸರ್ಗಸಂಖ್ಯೆ	ವಿಷಯಗಳು	ಪುಟಸಂಖ್ಯೆ
೧೧೧	ವಸಿಷ್ಠನು ಆಚಾರ್ಯನಾದ ತನ್ನ ಮಾತನ್ನಾದರೂ ಗೌರವಿಸಿ ರಾಮನನ್ನು ಅಯೋಧ್ಯೆಗೆ ಹಿಂತಿರುಗುವಂತೆ ನಿರ್ಬಂಧಿಸಿದುದು. ರಾಮನು ಆಚಾರ್ಯವಾಕ್ಯಕ್ಕಿಂತಲೂ ಪಿತೃವಾಕ್ಯವು ಮೇಲೆಂಬುದನ್ನು ನಿರೂಪಿಸಿದುದು. ಭರತನ ಸ್ಥಂಡಿಲಶಯನವು. ರಾಮನ ಸಮಾಧಾನವು.	೨೭೮
೧೧೨	ರಾಮನು ಭರತನನ್ನು ಸಮಾಧಾನಪಡಿಸಿ ಅಯೋಧ್ಯೆಗೆ ಪ್ರಯಾಣ ಮಾಡಿಸಿದುದು.	೨೮೫
೧೧೩	ಭರತನು ಅಯೋಧ್ಯೆಗೆ ಹೊರಟುದು.	೨೮೯
೧೧೪	ಅಯೋಧ್ಯೆಯ ದುಃಸ್ಥಿತಿಯನ್ನು ನೋಡಿ ಭರತನು ದುಃಖಿಸಿದುದು.	೨೯೨
೧೧೫	ಭರತನು ಅಯೋಧ್ಯೆಯನ್ನು ಬಿಟ್ಟು ಬಂದು ನಂದಿಗ್ರಾಮದಲ್ಲಿ ರಾಮಪಾದುಕೆಗಳನ್ನು ಮುಂದಿಟ್ಟುಕೊಂಡು ರಾಜ್ಯಪರಿಪಾಲನವನ್ನು ಮಾಡಿದುದು.	೨೯೫
೧೧೬	ರಾಕ್ಷಸಬಾಧೆಗಾಗಿ ಋಷಿಗಳು ಚಿತ್ರಕೂಟವನ್ನು ಬಿಟ್ಟು ಬೇರೆ ಆಶ್ರಮಗಳಿಗೆ ಹೊರಟುಹೋದುದು	೨೯೮
೧೧೭	ರಾಮನು ಅತ್ರಿಮುನಿಯ ಆಶ್ರಮವನ್ನು ಪ್ರವೇಶಿಸಿದುದು. ...	೩೦೨
೧೧೮	ಸೀತೆಯು ಅನಸೂಯೆಯಿಂದುಪದೇಶಿಸಲ್ಪಟ್ಟ ಪಾತಿವ್ರತ್ಯಧರ್ಮವನ್ನನುಮೋದಿಸಿ, ಆಕೆಗೆ ತನ್ನ ಸ್ವಯಂವರ ಕಥೆಯನ್ನು ಹೇಳಿದುದು.	೩೦೫
೧೧೯	ರಾಮನು ಆ ರಾತ್ರಿಯನ್ನು ಆ ಋಷ್ಯಾಶ್ರಮದಲ್ಲಿಯೇ ಕಳೆದು, ಪ್ರಾತಃಕಾಲದಲ್ಲಿಎದ್ದು, ಅಹ್ನಿಕಗಳನ್ನು ನಡೆಸಿ ದಂಡಕಾರಣ್ಯಕ್ಕೆ ಹೊರಟುದು.	೩೧೨

ಶ್ರೀಃ

ಶ್ರೀ ಸೀತಾಲಕ್ಷ್ಮಣಸಮೇತ ಶ್ರೀರಾಮಚಂದ್ರಪರಬ್ರಹ್ಮಣೇ ನಮಃ

ವಾಲ್ಮೀಕಿಮಹರ್ಷಿಪ್ರಣೀತ

ಶ್ರೀಮದ್ರಾಮಾಯಣವು

ಅಯೋಧ್ಯಾಕಾಂಡವು

ರಾಮಾದಿಗಳು ಭರದ್ವಾಜಾಶ್ರಮಕ್ಕೆ ಹೋದುದು.
ಭರದ್ವಾಜ ದರ್ಶನವು. ಭರದ್ವಾಜಮುನಿಯು
ಚಿತ್ರಕೂಟವನ್ನು ವರ್ಣಿಸಿ ಹೇಳಿದುದು.

ಸೀತಾರಾಮಲಕ್ಷ್ಮಣರು ಮೂವರೂ, ಆ ಮರದಡಿಯಲ್ಲಿಯೇ ಆ ರಾತ್ರಿಯನ್ನು ಕಳೆದು, ಚೆನ್ನಾಗಿ ಸೂರ್ಯೋದಯವಾದಮೇಲೆ ಅಲ್ಲಿಂದ ಹೊರಟು, ಮುಂದೆ ಒಂದು ದೊಡ್ಡ ಅರಣ್ಯವನ್ನು ಪ್ರವೇಶಿಸಿ, ಅಲ್ಲಿ ಚಿತ್ರವಿಚಿತ್ರಗಳಾದ ಅಪೂರ್ವಸನ್ನಿವೇಶಗಳನ್ನು ನೋಡುತ್ತ, ಗಂಗಾಯಮುನೆಗಳ ಸಂಗಮಸ್ಥಳವನ್ನು ಸೇರಿದರು. ಬಹಳ ದುರ್ಗಮವಲ್ಲದ ಸುಲಭವಾದ ದಾರಿಯನ್ನೇ ಹಿಡಿದು ನಿರಾಯಾಸವಾಗಿ ದಾರಿನಡೆದು, ಅಲ್ಲಲ್ಲಿ ಬಗೆಬಗೆಯ ವೃಕ್ಷಗಳನ್ನು ನೋಡಿ ಆಶ್ಚರ್ಯಪಡುತ್ತಿದ್ದರು. ಹೊತ್ತುತಿರುಗಿದಮೇಲೆ ರಾಮನು ಲಕ್ಷ್ಮಣನನ್ನು ನೋಡಿ, "ವತ್ಸ ಲಕ್ಷ್ಮಣಾ! ಈ ಪ್ರಯಾಗಕ್ಷೇತ್ರದ ಸುತ್ತಲೂ ಅಗ್ನಿದೇವತೆಯ ಜಯಧ್ವಜದಂತಿರುವ ಧೂಮವು ಮೇಲಕ್ಕೆದ್ದು, ಸುತ್ತಲೂ ವ್ಯಾಪಿಸಿರುವುದನ್ನು ನೋಡಿದೆಯಾ? ಆದುದರಿಂದ ಸಮೀಪದಲ್ಲಿಯೇ ಭರದ್ವಾಜಮಹರ್ಷಿಯು ನೆಲಸಿರಬಹುದೆಂದೆಣಿಸುವೆನು. ನಾವು ನಿಜವಾಗಿ ಈಗ ಗಂಗಾಯಮುನಾ ಸಂಗಮಸ್ಥಳಕ್ಕೆ ಬಂದುಬಿಟ್ಟೆವು. ಪ್ರವಾಹಗಳು ಒಂದೊಂದಕ್ಕೆ ಅಪ್ಪಳಿಸುವುದರಿಂದುಂಟಾದ ಮಹಾಧ್ವನಿಯು ಇಲ್ಲಿಗೇ ಕೇಳಿಸುತ್ತಿರುವುದಲ್ಲವೆ? ಕಾಡಿನಲ್ಲಿ ಬೆಳೆಯುವ ಫಲಮೂಲಾದಿಗಳಿಂದಲೂ, ಕಾಷ್ಠಗಳಿಂದಲೂ ಜೀವಿಸುವ ತಾಪಸರು,

ಅಲ್ಲಲ್ಲಿ ಮುರಿದು ಹಾಕಿದ ಕೊಂಬೆಗಳನ್ನು ನೋಡಿದೆಯಾ? ಇದೋ! ಇಲ್ಲಿ ನಾನಾ ವಿಧವಾದ ವೃಕ್ಷಗಳ ಸಮೂಹವು ಕಾಣುವುದು. ಇದೇ ಭರದ್ವಾಜಾ-ಶ್ರಮವೆಂದೆಣಿಸುವೆನು" ಎಂದನು. ಹಾಗೆಯೇ ಆ ರಾಮಲಕ್ಷ್ಮಣರಿಬ್ಬರೂ ಧನುರ್ಧಾರಿಗಳಾಗಿ ಉತ್ಸಾಹದಿಂದ ಮುಂದೆಹೋಗಿ ಸೂರ್ಯನು ತಿರುಗುವಷ್ಟರಲ್ಲಿ ಭರದ್ವಾಜಾಶ್ರಮದ ಸಮೀಪದಲ್ಲಿರುವ ವನಪ್ರದೇಶವನ್ನು ಸೇರಿದರು. ಆ ಆಶ್ರಮದ್ವಾರವನ್ನು ಪ್ರವೇಶಿಸುತ್ತಿರುವಾಗ ತಮ್ಮ ಅಪೂರ್ವಾಕಾರವನ್ನು ನೋಡಿ ಅಲ್ಲಿನ ಮೃಗಪಕ್ಷಿಗಳೆಲ್ಲವೂ ಬೆದರಿ ಚದರಿಹೋಗುತ್ತಿರಲು, ಮೆಲ್ಲಗೆ ಮುಂದೆ ನಡೆದು ಸ್ವಲ್ಪ ಹೊತ್ತಿನಲ್ಲಿಯೇ ರಾಮನು ಸೀತಾಲಕ್ಷ್ಮಣರೊಡನೆ ಭರದ್ವಾಜಮಹರ್ಷಿಯ ಸಮೀಪಕ್ಕೆ ಬಂದು, ಅವನ ದರ್ಶನಾಕಾಂಕ್ಷಿಯಾಗಿರುವಷ್ಟರಲ್ಲಿ ಸಾಯಂಕಾಲವಾಯಿತು. ಆ ಮಹರ್ಷಿಯ ಅಗ್ನಿಹೋತ್ರ ಕಾರ್ಯಗಳು ಮುಗಿಯುವುದನ್ನೇ ನಿರೀಕ್ಷಿಸುತ್ತ ಅವರೆಲ್ಲರೂ ದೂರದಲ್ಲಿಯೇ ನಿಂತಿದ್ದರು. ತೀವ್ರನಿಯಮವುಳ್ಳವನಾಗಿ, ಧ್ಯಾನಪರಾಯಣನಾಗಿ, ತಪೋಬಲದಿಂದ ಸಂಪಾದಿಸಿದ ಜ್ಞಾನದೃಷ್ಟಿಯುಳ್ಳವನಾಗಿರುವ ಮಹಾತ್ಮನಾದ ಆ ಭರದ್ವಾಜಮುನಿಯು, ಸಾಯಂಕಾಲದ ಹೋಮಕಾರ್ಯವನ್ನು ಮುಗಿಸಿಕೊಂಡು, ಶಿಷ್ಯಗಣದಿಂದ ಪರಿವೃತನಾಗಿ ಕುಳಿತಿರುವುದನ್ನು ನೋಡಿ, ರಾಮನು ಬದ್ಧಾಂಜಲಿಯಾಗಿ ಮುಂದೆಹೋಗಿ, ಸೀತಾಲಕ್ಷ್ಮಣರೊಡಗೂಡಿ ಆತನಿಗೆ ಸಾಷ್ಟಾಂಗಪ್ರಣಾಮವನ್ನು ಮಾಡಿದಮೇಲೆ, ಆ ಮಹರ್ಷಿಯನ್ನು ಕುರಿತು, "ಎಲೈ ಮಹಾತ್ಮನೆ! ನಾವಿಬ್ಬರೂ ದಶರಥನ ಮಕ್ಕಳು. ನಮಗೆ ರಾಮಲಕ್ಷ್ಮಣರೆಂದು ಹೆಸರು. ಮಂಗಳಸ್ವರೂಪಿಣಿಯಾದ ಈಕೆಯೇ ನನ್ನ ಹೆಂಡತಿಯು. ಇವಳಿಗೆ ಸೀತೆಯೆಂದು ಹೆಸರು. ಇವಳು ವಿದೇಹಾಧಿಪತಿಯಾದ ಜನಕರಾಜನ ಮಗಳು. ಇವಳು ಸುಶೀಲೆಯಾದುದರಿಂದ, ನಿರ್ಜನವಾದ ಈ ವನದಲ್ಲಿಯೂ ನನ್ನನ್ನು ಬಿಡಲಾರದೆ ಬಂದುಬಿಟ್ಟಳು. ಈ ನನ್ನ ತಮ್ಮನೂ ನನ್ನನ್ನು ಅಗಲಿರಲಾರದೆ ನನ್ನೊಡನೆ ಕಾಡಿಗೆ ಬಂದುಬಿಟ್ಟನು. ತಂದೆಯ ಆಜ್ಞಾನುಸಾರವಾಗಿಯೇ ನಾವು ತಪೋವನಕ್ಕೆ ಹೊರಟು ಬಂದಿರುವೆವು. ಪಿತೃವಾಕ್ಯಪರಿಪಾಲನಾರ್ಥವಾಗಿ ಕಾಡಿನಲ್ಲಿ ಫಲಮೂಲಗಳನ್ನು ತಿನ್ನುತ್ತ ಧರ್ಮನಿರತರಾಗಿರುವೆವು" ಎಂದು ತಮ್ಮ ವೃತ್ತಾಂತವನ್ನು ಆಮೂಲಾಗ್ರವಾಗಿ ತಿಳಿಸಿದನು. ಧರ್ಮಜ್ಞನಾದ ಆ ಋಷಿಯು, ಈ ಮಾತನ್ನು ಕೇಳಿ ಸಂತೋಷ

ದಿಂದ ಅವರ ಮಧುಪರ್ಕಕ್ಕಾಗಿ [1] ಎತ್ತಿನ ಮಾಂಸವನ್ನೂ, ಅವರ ಭೋಜನಕ್ಕಾಗಿ ಕಾಡಿನಲ್ಲಿ ಬೆಳೆದ ಫಲಮೂಲಾದಿಗಳಿಂದ ಸಿದ್ಧಪಡಿಸಲ್ಪಟ್ಟ ರಸವತ್ತಾದ ಅನ್ನರಾಶಿಯನ್ನೂ ತರಿಸಿಟ್ಟನು. ಅವರಿಗೆ ಮಲಗುವುದಕ್ಕೆ ಅನುಕೂಲವಾದ ಸ್ಥಳವನ್ನೂ ಕಲ್ಪಿಸಿಕೊಟ್ಟನು. ಆಮೇಲೆ ಆ ಮಹರ್ಷಿಯು, ಸುತ್ತಲೂ [2]ಅನೇಕ ಮೃಗಪಕ್ಷಿಗಳಿಂದಲೂ, ಋಷಿಗಳಿಂದಲೂ ಪರಿವೃತನಾಗಿ, ರಾಮನನ್ನು ಅನೇಕ ವಿಧದಲ್ಲಿ ಸತ್ಕರಿಸಿ, ಆತನಿಗೆ ಸುಖಾಗಮನವನ್ನು ಹೇಳಿದನು. ರಾಮನು ಆ ಸತ್ಕಾರಗಳೆಲ್ಲವನ್ನೂ ಸಂತೋಷದಿಂದ ಸ್ವೀಕರಿಸಿ, ಸುಖಾಸನದಲ್ಲಿ ಕುಳಿತುಕೊಂಡಮೇಲೆ, ಋಷಿಯು ಆತನನ್ನು ಕುರಿತು "ಎಲೈ ರಾಮನೆ! ನೀನು ಇಲ್ಲಿಗೆ ಬಂದುದರಿಂದ ಬಹುಕಾಲಕ್ಕೆ ನಿನ್ನ ದರ್ಶನವು ನನಗೆ ಲಭಿಸಿತು. ನಿನ್ನನ್ನು ನಿಷ್ಕಾರಣವಾಗಿ ಕಾಡಿಗೆ ಕಳುಹಿಸಿದ ವೃತ್ತಾಂತವೂ ನನಗೆ ತಿಳಿಯಿತು. ಮಹಾನದಿಗಳಾದ ಗಂಗಾಯಮುನೆಗಳು ಸಂಗಮಿಸುವ ಈ ಸ್ಥಳವು ಬಹಳ ಪವಿತ್ರವಾದುದು ಮತ್ತು ವಿವಿಕ್ತವಾಗಿಯೂ ರಮಣೀಯವಾಗಿಯೂ, ಇರುವುದು. ಇಲ್ಲಿಯೇ ಸುಖವಾಗಿದ್ದು ಕಾಲವನ್ನು ಕಳೆಯಬಹುದು." ಎಂದನು. ಇದನ್ನು ಕೇಳಿ ರಾಮನು ಆ ಮಹಾತ್ಮನನ್ನು ಕುರಿತು. "ಎಲೈ ಮಹರ್ಷಿಯೆ [3] ಈ ಸ್ಥಳವು ಪಟ್ಟಣಗಳಿಗೂ, ಗ್ರಾಮಗಳಿಗೂ ಬಹಳ

---

1 "ಗೋಮಧುಪರ್ಕಾರ್ಹೋವೇದಾಧ್ಯಾಯೀ ಆಚಾರ್ಯ ಋತ್ವಿಕ್ಸ್ನಾತಕೋವಾ ಧರ್ಮಯುಕ್ತ" ಎಂಬುದಾಗಿ, ಎತ್ತಿನ ಮಾಂಸವು ಮಧುಪರ್ಕಕ್ಕೆ ಅಂಗವೆಂದು ಸ್ಮೃತಿ ಪ್ರಮಾಣವು.

2 ಇಲ್ಲಿ "ಮೃಗಪಕ್ಷಿಭಿರಾಸೀನೋ ಮುನಿಭಿಶ್ಚ ಸಮಂತತಃ" ಎಂದು ಮೂಲವು. ಮಹರ್ಷಿಯ ಪ್ರಭಾವದಿಂದ ಅಲ್ಲಿನ ತಿರ್ಯಗ್ಜಂತುಗಳು ಕೂಡ, ಇತರ ತಾಪಸರಂತೆಯೇ ಆತನಲ್ಲಿ ವಿಶ್ವಾಸವಿಟ್ಟು ಆತನ ಸೇವೆಮಾಡುತ್ತ, ಮುಂದೆ ಕುಳಿತು ಉಪದೇಶವನ್ನು ಹೊಂದುತ್ತಿರುವುವೆಂದು ಗೋವಿಂದರಾಜೀಯ ವ್ಯಾಖ್ಯಾನವು. ಆ ಮಹರ್ಷಿಯ ಮಹಿಮೆಯಿಂದ ಅಲ್ಲಿನ ತಿರ್ಯಗ್ಜಂತುಗಳೂ ಕೂಡ, ರಾಮನನ್ನು ಪರಮಾತ್ಮನೆಂದೇ ತಿಳಿದು, ಇತರ ಋಷಿಗಳಂತೆ ತಾವೂ ಬಂದು ಆ ರಾಮನನ್ನು ಸೇವಿಸುತಿದ್ದುವೆಂದು ಮಹೇಶ್ವರತೀರ್ಥರ ವ್ಯಾಖ್ಯಾನವು.

3 ಇದಕ್ಕೆ "ಭಗವನ್ನಿತ ಆಸನ್ನೋ ಪೌರಜಾನಪದೋ ಜನಃ। ಸುದರ್ಶಮಿಹಮಾಂ ಪ್ರೇಕ್ಷ್ಯ ಮನ್ಯೇಹಮಿಮಮಾಶ್ರಮಮ್। ಆಗಮಿಷ್ಯತಿ ವೈದೇಹೀಂ ಮಾಂ ಚಾಪಿ ಪ್ರೇಕ್ಷಕೋ ಜನಃ। ಅನೇನ ಕಾರಣೇನಾಹಮಿಹವಾಸಂ ನ ರೋಚಯೇ। ಏಕಾಂತೇ ಪಶ್ಯ ಭಗವ-

ಸಮೀಪದಲ್ಲಿರುವುದರಿಂದ, ಸೀತೆಯನ್ನೂ, ನನ್ನನ್ನೂ ನೋಡುವುದಕ್ಕಾಗಿ ಅನೇಕ ಪುರಜನರು ಆಗಾಗ ಇಲ್ಲಿಗೆ ಬರುವರೆಂದು ತೋರುವುದು. ಆದುದರಿಂದ ನನಗೆ ಇಲ್ಲಿರುವುದಕ್ಕೆ ಇಷ್ಟವಿಲ್ಲ. ಜನಗಳ ದೃಷ್ಟಿಗೆ ಬೀಳದಂತೆ ಎಲ್ಲಿಯಾದರೂ ಏಕಾಂತಸ್ಥಳದಲ್ಲಿರಬೇಕೆಂದು ನನ್ನ ಉದ್ದೇಶವು. ಈ ಸೀತೆಯು ಯಾವಾಗಲೂ ಸುಖವನ್ನೇ ಅನುಭವಿಸುವುದಕ್ಕೆ ಅರ್ಹಳಾದುದರಿಂದ, ಅವಳು ಕಷ್ಟಪಡದೆ ವಿನೋದದಿಂದ ಕಾಲಹರಣಮಾಡುವುದಕ್ಕೆ ತಕ್ಕ ಉತ್ತಮವಾದ ಬೇರೊಂದು ಸ್ಥಳವನ್ನು ಹುಡುಕಬೇಕು. ಅಂತಹ ಉತ್ತಮವಾದ ಆಶ್ರಮಪ್ರದೇಶವನ್ನು ನೀನೇ ಆಲೋಚಿಸಿ ಹೇಳು" ಎಂದನು. ಇದನ್ನು ಕೇಳಿ ಆ ಭರದ್ವಾಜನು "ವತ್ಸಾ! ಇಲ್ಲಿಗೆ ಹತ್ತು ಹರದಾರಿಗಳ ದೂರದಲ್ಲಿ ಒಂದು ಬೆಟ್ಟವುಂಟು. ಅಲ್ಲಿ ನೀನು ವಾಸವಾಗಿರಬಹುದು. ಅದು ಅನೇಕ ಮಹರ್ಷಿಗಳಿಂದ ಸೇವಿತ

ನ್ನಾಶ್ರಮಸ್ಥಾನಮುತ್ತಮಂ। ರಮತೇ ಯತ್ರ ವೈದೇಹೀ ಸುಖಾರ್ಹಾ ಜನಕಾತ್ಮಜಾ" ಎಂದು ಮೂಲವು. ಇದರಲ್ಲಿ ಕೆಲವು ರಹಸ್ಯಾರ್ಥಗಳುಂಟು. (ಭಗವನ್) ಎಲೈ ಸರ್ವಜ್ಞನೆ! ನೀನು ನನ್ನ ನಿಜಸ್ವರೂಪವನ್ನು ಚೆನ್ನಾಗಿ ತಿಳಿದವನಾದರೂ, ರಾವಣವಧಾರ್ಥವಾಗಿ ಗೂಢವಾಗಿ ಅವತರಿಸಿರುವ ನನ್ನನ್ನು ಇಲ್ಲಿ ಪ್ರಕಟಿಸಿದೆಯಾದರೆ (ಪೌರಜಾನಪದೋಜನಃ) ಸಮಸ್ತಜನವೂ (ಮಾಂ) ನನ್ನನ್ನು (ಸುದರ್ಶಂ) ವಿಷ್ಣುವನ್ನಾಗಿಯೂ, "ವಿಷ್ಣುಂಚ ದೃಶ್ಯತೇತ್ವಗ್ರ್ಯಯಾ" ಎಂಬ ಶ್ರುತ್ಯನುಸಾರವಾಗಿ ಸುದರ್ಶನೆಂದರೆ ವಿಷ್ಣುವೆಂದರ್ಥವು. (ವೈದೇಹೀಂ) ಸೀತೆಯನ್ನು (ಮಾಂಚ) ಲಕ್ಷ್ಮೀದೇವಿಯನ್ನಾಗಿಯೂ ತಿಳಿದು, (ಇಹ ಆಗಮಿಷ್ಯತಿ) ನಮ್ಮನ್ನು ನೋಡುವುದಕ್ಕಾಗಿ ಇಲ್ಲಿಗೆ ಬಂದುಬಿಡುವರು. (ಅನೇನ ಕಾರಣೇನ) ಈ ಕಾರಣಕ್ಕಾಗಿಯೇ ನಾನು, (ಇಹವಾಸಂ ನ ರೋಚಯೇ) ಇಲ್ಲಿ ವಾಸವಾಗಿರುವುದಕ್ಕೆ ಇಷ್ಟಪಡುವುದಿಲ್ಲ. ಆದುದರಿಂದ (ಯತ್ರ) ಪರಮಾನಂದೈಕತಾನನಾದ ಯಾವ ನನ್ನಲ್ಲಿ, (ವೈದೇಹೀ) ಸೀತೆಯೂ ಕೂಡ, (ರಮತೇ) ಅನುರಾಗವಿಶಿಷ್ಟಳಾಗಿರುವಳೋ, ಎಂದರೆ, "ಯೋ ಮೃಗ್ಯತೇ ಹಸ್ತಗೃಹೀತಪದ್ಮಯಾ ಶ್ರಿಯೇತರೈರಂಗ ವಿಮೃಗ್ಯಮಾಣಯಾ" ಇತರರಿಂದ ಹುಡುಕಲ್ಪಡುವ ಶ್ರೀದೇವಿಯೂ ಕೂಡ ದೀಪದಂತೆ ಕೈಯಲ್ಲಿ ಕಮಲವನ್ನು ಧರಿಸಿದವಳಾಗಿ ಯಾವನನ್ನು ಹುಡುಕುವಳೋ ಅಂತಹ ಮಹಾಲಕ್ಷ್ಮಿಯು, ತಾನೇ ಸರ್ವಜನಾಶ್ರಯಣೀಯಳಾಗಿ, ಅನವರತವೂ ಮಹಾವಿಷ್ಣುವಿನ ಸಹವಾಸಸೌಖ್ಯವನ್ನು ಅನುಭವಿಸುತ್ತಿರುವಳಾಗಿದ್ದರೂ, ಈಗಲೇ ಅದನ್ನು ಅನುಭವಿಸಲಾರಂಭಿಸಿದವಳಂತೆ, ಎಡೆಬಿಡದೆ ಆನುರಾಗದಿಂದ ಯಾವನನ್ನು ಪ್ರೀತಿಸುವಳೋ, ಅಂತಹ ನಾನು, (ಆಶ್ರಮಸ್ಥಾನಂ) "ಆಶ್ರಿಯತ ಇತ್ಯಾಶ್ರಮಃ" ಎಂಬ ವ್ಯುತ್ಪತ್ತಿಯಿಂದ, ಆಶ್ರಮವೆಂದರೆ ಚರಾಚರಗಳಿಗೆ ಆಶ್ರಯವಾದ ಈ ಪ್ರಪಂಚವು. ಇದಕ್ಕೆ ಸ್ಥಾನವೆಂದರೆ ಆಧಾರಭೂತನು

ವಾಗಿರುವುದು. ಪರಿಶುದ್ಧವಾದುದು. ಅಲ್ಲಿ [1] ಗೋಲಾಂಗೂಲಗಳೂ, ಕರಡಿಗಳೂ ವಿಶೇಷವಾಗಿ ತುಂಬಿರುವುವು. ಅದಕ್ಕೆ ಚಿತ್ರಕೂಟವೆಂದು ಹೆಸರು. ಅದು ಕುಲಪರ್ವತವೆನಿಸಿಕೊಂಡ ಗಂಧಮಾದನಕ್ಕೆ ಸಮಾನವಾಗಿರುವುದು. ಮನುಷ್ಯನು ಒಂದಾವೃತ್ತಿ ಆ ಪರ್ವತಶಿಖರಗಳನ್ನು ಕಣ್ಣಿನಿಂದ ನೋಡಿದ ಮಾತ್ರದಲ್ಲಿಯೇ ಆತನ ಮನಸ್ಸಿನಲ್ಲಿ ಶಾಂತಿಯು ನೆಲೆಗೊಳ್ಳುವುದು. ಆತನ ಮನಸ್ಸು ಸತ್ಕಾರ್ಯಗಳಲ್ಲಿಯೇ ಪ್ರವರ್ತಿಸುವುದೇ ಹೊರತು ಪಾಪಕಾರ್ಯದಲ್ಲಿ ಪ್ರವರ್ತಿಸದು. ಎಷ್ಟೋಮಂದಿ ಋಷಿಗಳು ಅಲ್ಲಿ ನೂರಾರು ವರ್ಷಗಳವರೆಗೆ ಸುಖವಾಗಿ ತಪಸ್ಸನ್ನು ಮಾಡಿ, [2] ಕಪಾಲ ಶಿರಸ್ಸಿನೊಡನೆಯೇ ಸ್ವರ್ಗವನ್ನು ಪಡೆದಿರುವರು. ನಿರ್ಜನವಾದ ಆ ಪರ್ವತಪ್ರದೇಶವೇ ನಿನಗೆ ಅನುಕೂಲವಾದ ಸ್ಥಳವೆಂದು ನನಗೆ ತೋರುವುದು. ಅಥವಾ ಇಲ್ಲಿಯೇ ನೀನು ಸುಖವಾಗಿ ನನ್ನೊಡನೆ ನಿನ್ನ ವನವಾಸಕಾಲವನ್ನು ಕಳೆದುಹೋದರೂ ಹೋಗಬಹುದು" ಎಂದನು. ಆಮೇಲೆ ಮೂವರಿಗೂ ಯಥೋಚಿತವಾದ ಅತಿಥಿಸತ್ಕಾರಗಳನ್ನು ನಡೆಸಿ ಉಪಚರಿಸಿದನು. ಪ್ರಯಾಗೆಯಲ್ಲಿ ಅವರೆಲ್ಲರೂ ಋಷಿಯಮುಂದೆ ಸುಖಾಸೀನರಾಗಿಕುಳಿತು, ವಿನೋದವಾಗಿ ಮಾತನ್ನಾಡುತ್ತಿರುವಾಗಲೇ ರಾತ್ರಿಯಾಯಿತು. ಸುಖಾರ್ಹನಾದ ರಾಮನು ಮಾರ್ಗಕ್ರಮಣದಿಂದ ಬಹಳವಾಗಿ ಬಳಲಿದ್ದುದರಿಂದ, ರಮಣೀಯವಾದ ಆ ಭರದ್ವಾಜಾಶ್ರಮದಲ್ಲಿ ಸುಖವಾಗಿ ಮಲಗಿದನು. ಎಲ್ಲರೂ ಆ ರಾತ್ರಿಯನ್ನು ಅಲ್ಲಿಯೇ ಕಳೆದರು. ಬೆಳಗಾದ ಕೂಡಲೆ

ಮತ್ತು (ಉತ್ತಮ) ಸ್ವರೂಪಗುಣವಿಭವಾದಿಗಳಲ್ಲಿ ಇತರ ದೇವತೆಗಳಿಗಿಂತಲೂ ಮೇಲಾದವನು; ಇಂತಹ ನನ್ನನ್ನು ಅತಿಪ್ರಿಯನಾಗಿಯೂ, ಸರ್ವಜ್ಞನಾಗಿಯೂ ಇರುವ ನೀನೊಬ್ಬನೇ (ಏಕಾಂತೇ ಪಶ್ಯ) ರಹಸ್ಯವಾಗಿ ಧ್ಯಾನದೃಷ್ಟಿಯಿಂದ ನೋಡಿ ಅನುಭವಿಸು "ಗುಹ್ಯಾದ್ಗುಹ್ಯತಮಂ" ಎಂಬಂತೆ ರಹಸ್ಯವಾದ ನನ್ನ ಸ್ವರೂಪವನ್ನು ಬೇರೆಯವರಲ್ಲಿ ಪ್ರಕಟಿಸಬೇಡವೆಂದು ರಹಸ್ಯೋಪದೇಶವು (ಮಾಹೇಶ್ವರ ತೀರ್ಥವು).

1 ಇಲ್ಲಿ ತ್ರಿಕಾಲಜ್ಞನಾದ ಮಹರ್ಷಿಯು ಗೋಲಾಂಗೂಲಗಳನ್ನು ಹೇಳಿರುವುದರಿಂದ, ಆ ಜಾತಿಯ ಪ್ರಾಣಿಗಳೇ ಮುಂದೆ ರಾಮನಿಗೆ ಸಹಾಯಕರಾಗುವರೆಂಬ ಭವಿಷ್ಯದ್ವೃತ್ತಾಂತವನ್ನು ಸೂಚಿಸಿರುವುದಾಗಿ ಗ್ರಹಿಸಬೇಕು.

2 ಕಪಾಲಾಸನದಿಂದ ತಪಸ್ಸು ಮಾಡಿದವರು, ತಲೆಯಲ್ಲಿರುವ ಕೂದಲುಗಳನ್ನೂ, ಚರ್ಮವನ್ನೂ ನೀಗಿ ಉಳಿದ ಶಿರಃಕಪಾಲಮಾತ್ರದೊಡನೆ ಸ್ವರ್ಗವನ್ನು ಸೇರುವರೆಂದು ಪ್ರಸಿದ್ಧಿಯು.

ರಾಮನು ತೇಜಸ್ವಿಯಾದ ಆ ಮಹರ್ಷಿಯ ಬಳಿಗೆ ಬಂದು, ಅವನನ್ನು ಕುರಿತು "ಎಲೈ ಮಹಾತ್ಮನೆ! ಈ ರಾತ್ರಿಯನ್ನಂತೂ ನಾವು ಸುಖವಾಗಿ ನಿಮ್ಮ ಆಶ್ರಮದಲ್ಲಿಯೇ ಕಳೆದುಬಿಟ್ಟೆವು. ಇನ್ನು ನಮಗೆ ಮುಂದಿನ ಪ್ರಯಾಣಕ್ಕೆ ಅನುಮತಿಯನ್ನು ಕೊಡಬೇಕು" ಎಂದನು. ಆಗ ಮಹರ್ಷಿಯು ರಾಮನನ್ನು ಕುರಿತು "ನಾನು ಹೇಳಿದಂತೆ ಈಗ ನೀವು ಆ ಚಿತ್ರಕೂಟಕ್ಕೇ ಹೋಗಿರಿ! ಅದೇ ನಿಮಗೆ ಅನುಕೂಲವಾದ ಸ್ಥಳವೆಂದು ನನಗೆ ತೋರುವುದು. ಅಲ್ಲಿ ನಿಮ್ಮ ಆಹಾರಕ್ಕೆ ಬೇಕಾದ ಬಗೆಬಗೆಯ ಹಣ್ಣುಗಳು, ಗಡ್ಡೆಗೆಣಸುಗಳು, ಜೇನು ಮುಂತಾದ ಪದಾರ್ಥಗಳೆಲ್ಲವೂ ಹೇರಳವಾಗಿ ಸಿಕ್ಕುವುವು. ಇದರಮೇಲೆ ಅದು ಬಹಳ ಪವಿತ್ರವಾಗಿಯೂ, ರಮಣೀಯವಾಗಿಯೂ ಇರುವುದು. ಅಲ್ಲಿ ಅನೇಕ ಜಾತಿಯ ವೃಕ್ಷಗಳಿರುವುವು. ಕಿನ್ನರರು, ನಾಗರು ಮೊದಲಾದ ದೇವಜಾತಿಗಳಿಗಳಿಗೆಲ್ಲಾ ಅದು ನಿತ್ಯಾಶ್ರಯವಾಗಿರುವುದು. ಮತ್ತು ಅಲ್ಲಿ ನವಿಲುಗಳು ಇಂಪಾಗಿ ಕೂಗುತ್ತಿರುವುವು. ದೊಡ್ಡದೊಡ್ಡ ಕಾಡಾನೆಗಳು ಅಲ್ಲಿ ವಿಶೇಷವಾಗಿ ತುಂಬಿರುವುವು. ಆದುದರಿಂದ ನೀವು ಅಲ್ಲಿಗೇ ಹೋಗಿರಿ! ಅಲ್ಲಿಯೇ ನಿಮಗೆ ಸುಖವುಂಟು. ಪವಿತ್ರವಾಗಿಯೂ, ರಮಣೀಯವಾಗಿಯೂ, ಫಲಮೂಲ ಸಮೃದ್ಧಿಯುಳ್ಳದಾಗಿಯೂ ಇರುವ ಆ ಚಿತ್ರಕೂಟಪರ್ವತವೇ ವಾಸ ಯೋಗ್ಯವು! ಅಲ್ಲಿ ವಿಚಿತ್ರಗಳಾದ ಮೃಗಗಳೂ, ಕಾಡಾನೆಗಳ ಹಿಂಡುಗಳೂ ವಿಶೇಷವಾಗಿ ಸಂಚರಿಸುತ್ತಿರುವುದರಿಂದ ಅವುಗಳ ನೋಟವೇ ನಿಮ್ಮ ಮನಸ್ಸಿಗೆ ಎಷ್ಟೋ ಆನಂದವನ್ನುಂಟುಮಾಡುವುವು. ಅಲ್ಲಿ ಸಣ್ಣಸಣ್ಣ ಗಿರಿನದಿಗಳೂ, ಸಾನುಪ್ರದೇಶಗಳೂ, ಗುಹೆಗಳೂ, ಕಲ್ಲಿನ ಆವರಣಗಳೂ ಅನೇಕವಾಗಿರುವುವು. ಸೀತೆಯೊಡನೆ ಅಲ್ಲಲ್ಲಿ ಸಂಚರಿಸುತ್ತಾ ಅವುಗಳನ್ನು ನೋಡುತ್ತಿದ್ದರೆ, ನಿಮ್ಮ ಮನಸ್ಸಿಗೆ ಎಷ್ಟೋ ಉಲ್ಲಾಸವುಂಟಾಗುವುದು. ಟಿಟ್ಟಿಭ, ಕೋಗಿಲೆ, ಮುಂತಾದ ಪಕ್ಷಿಗಳ ಇಂಪಾದ ಧ್ವನಿಯಿಂದಲೂ, ವಿಚಿತ್ರಮೃಗಗಳಿಂದಲೂ, ಮದದಾನೆಗಳಿಂದಲೂ, ಕಿವಿಗಳಿಗೂ ಕಣ್ಣುಗಳಿಗೂ ಆನಂದವನ್ನುಂಟುಮಾಡುವ ಆ ಚಿತ್ರಕೂಟಪರ್ವತದಲ್ಲಿ ಸುಖವಾಗಿ ವಾಸಮಾಡಿರಿ" ಎಂದನು.

ಇದು ಐವತ್ತನಾಲ್ಕನೆಯ ಸರ್ಗವು.

ಚಿತ್ರಕೂಟಕ್ಕೆ ಪ್ರಯಾಣವು. ದೋಣಿಯಲ್ಲಿ ಯಮುನಾ ನದಿಯುನ್ನು ದಾಟಿ, ಆ ದಿನದ ಸಾಯಂಕಾಲವನ್ನು ಯಮುನಾವನದಲ್ಲಿಯೇ ಕಳೆದುದು.

ಶತ್ರುಸಂಹಾರಕರಾದ ಆ ರಾಜಕುಮಾರರಿಬ್ಬರೂ, ಆ ರಾತ್ರಿಯನ್ನು ಭರದ್ವಾಜಾಶ್ರಮದಲ್ಲಿಯೇ ಕಳೆದು, ಬೆಳಗಾದಮೇಲೆ ಮಹರ್ಷಿಗೆ ನಮಸ್ಕರಿಸಿ, ಚಿತ್ರಕೂಟಪರ್ವತದ ಕಡೆಗೆ ಪ್ರಯಾಣಸನ್ನದ್ಧರಾಗಿದ್ದರು. ಭರದ್ವಾಜ ಮಹರ್ಷಿಯು ಅವರಿಗೆ ಸ್ವಸ್ತ್ಯಯನಗಳನ್ನುಮಾಡಿ, ತಂದೆಯು ಮಕ್ಕಳನ್ನು ದಾರಿಕಳುಹಿಸುವಂತೆ ಅವರನ್ನು ತಾನೂ ಹಿಂಬಾಲಿಸಿ ಹೊರಟನು. ಹೀಗೆ ಹೋಗುತ್ತಿರುವಾಗ ಮಹಾತೇಜಸ್ವಿಯಾದ ಆ ಮಹರ್ಷಿಯು, ಸತ್ಯಪರಾಕ್ರಮಿ ಯಾದ ರಾಮನನ್ನು ಕುರಿತು, "ಎಲೆ ವತ್ಸನೆ! ನೀವು ಮೊದಲು ಗಂಗಾ ಯಮುನೆಗಳ ಸಂಗಮ ಸ್ಥಳವನ್ನು ಸೇರಿ, ಅಲ್ಲಿ ಸ್ವಲ್ಪ ಪಶ್ಚಿಮಾಭಿಮುಖವಾಗಿ ಪ್ರವಹಿಸುತ್ತಿರುವ ಯಮುನಾನದಿಯ ದಾರಿಯನ್ನೇ ಹಿಡಿದು ಹೋಗಿರಿ! ಆ ಯಮುನಾನದಿಯು ವೇಗವಾಗಿ ಹರಿಯುತ್ತಿರುವುದರಿಂದ, ಆ ಸ್ಥಳದಲ್ಲಿ, ಬಹುಕಾಲದಿಂದ ಜನಗಳು ಹೋಗಿಬಂದು ಬಳಕೆಯಾಗಿರುವ ಭಾಗವನ್ನೇ ನೋಡಿ, ಅಲ್ಲಿ ಬಲವಾದ ದೋಣಿಯನ್ನಿಟ್ಟುಕೊಂಡು, ಆ ನದಿಯನ್ನು ದಾಟ ಬೇಕು. ಅದನ್ನು ದಾಟಿದಮೇಲೆ ವಿಶೇಷವಾಗಿ ಹಸುರೆಲೆಗಳಿಂದ ತುಂಬಿದ ದೊಡ್ಡದಾದ ಒಂದು ಆಲದಮರವು ಕಾಣುವುದು, ಅದರ ಸುತ್ತಲೂ ಅನೇಕ ವೃಕ್ಷಗಳಿರುವುವು. ಅದು ಅನೇಕ ಸಿದ್ಧ ಚಾರಣಾದಿಗಳಿಂದ ಸೇವಿಸಲ್ಪಡುತ್ತಿರು ವುದು. ಅದಕ್ಕೆ "ಶ್ಯಾಮ" ವೆಂದು ಹೆಸರು. ಆ ವೃಕ್ಷವು ಮಹಾ ಮಹಿಮೆ ಯುಳ್ಳುದಾದುದರಿಂದ, ಸೀತೆಯು ಅದಕ್ಕೆ ಕೈಮುಗಿದು ತನ್ನ ಕೋರಿಕೆಗಳೆಲ್ಲವೂ ಈಡೇರುವಂತೆ ಪ್ರಾರ್ಥಿಸಿಕೊಳ್ಳಲಿ! ಒಂದುವೇಳೆ ಅಲ್ಲಿ ಹೋಗುವುದರೊಳಗಾಗಿ ನಿಮಗೆ ಆಯಾಸವಾದರೆ, ಸ್ವಲ್ಪಹೊತ್ತು ಅಲ್ಲಿಯೇ ವಿಶ್ರಮಿಸಿಕೊಂಡಿರಬಹುದು. ಸಾಧ್ಯವಾದರೆ ಮುಂದಕ್ಕೂ ಪ್ರಯಾಣಮಾಡಬಹುದು. ಅಲ್ಲಿಂದ ಮುಂದೆ ಒಂದು ಹರದಾರಿಯವರೆಗೆ ನೀವು ಪ್ರಯಾಣಮಾಡಿದರೆ, ಕಪ್ಪಾದ ಒಂದು ಅರಣ್ಯವು ಕಾಣುವುದು. ಅಲ್ಲಿ ಮುತ್ತುಗ, ಬದರಿ, ಮುಂತಾದ ಅನೇಕ ವೃಕ್ಷಗಳು ಬೆಳೆದಿರುವುವು. ಬಿದುರುಮೆಳೆಗಳು ದಟ್ಟವಾಗಿ ತುಂಬಿ ಅತಿ ಮನೋಹರವಾಗಿ ಕಾಣುವುವು. ಅದೇ ಚಿತ್ರಕೂಟಪರ್ವತಕ್ಕೆ ಹೋಗುವ

ದಾರಿಯು. ಆ ದಾರಿಯಲ್ಲಿಯೇ ನಾನು ಅನೇಕಾವರ್ತಿ ಚಿತ್ರಕೂಟಕ್ಕೆ ಹೋಗಿ ಬಂದಿರುವೆನು. ಇದೇ ಸುಖವಾದ ಮಾರ್ಗವು. ಕಲ್ಲುಮುಳ್ಳುಗಳಿಲ್ಲದುದರಿಂದ ನಡೆಯುವುದಕ್ಕೂ ಕಷ್ಟವಾಗಿ ತೋರದು. ಕಾಡುಗಿಚ್ಚು ಮುಂತಾದ ಅಪಾಯಗಳೊಂದೂ ಅಲ್ಲಿ ಸಂಭವಿಸವು" ಎಂದನು. ಹೀಗೆ ಆ ಭರದ್ವಾಜಮಹರ್ಷಿಯು ಚಿತ್ರಕೂಟದ ದಾರಿಯನ್ನು ತಿಳಿಸಿದಮೇಲೆ, ರಾಮನು ಆತನಿಗೆ ನಮಸ್ಕರಿಸಿ "ನಿಮ್ಮ ಆಜ್ಞೆಯಂತೆಯೇ ಆಗಲಿ?" ಎಂದು ಆತನ ಅನುಮತಿಯನ್ನು ಪಡೆದು, ಅವನನ್ನು ಹಿಂತಿರುಗಿಸಿದನು. ಭರದ್ವಾಜನು ಇತ್ತಲಾಗಿ ಆಶ್ರಮಕ್ಕೆ ಹಿಂತಿರುಗಿದೊಡನೆಯೇ, ಅತ್ತಲಾಗಿ ಅವರು ಪ್ರಯಾಣಮಾಡಿ ಹೋಗುತ್ತಿರುವಾಗ, ರಾಮನು ಲಕ್ಷ್ಮಣನನ್ನು ಕುರಿತು, "ವತ್ಸ ಲಕ್ಷ್ಮಣಾ! ಈ ಮಹರ್ಷಿಯ ಸಂಪೂರ್ಣವಾದ ಅಭಿಮಾನಕ್ಕೆ ಪಾತ್ರರಾದ ನಾವೇ ಪುಣ್ಯಶಾಲಿಗಳಲ್ಲವೆ?" ಎಂದನು. ಹೀಗೆ ರಾಮ ಲಕ್ಷ್ಮಣರಿಬ್ಬರೂ ಪರಸ್ಪರ ಸಲ್ಲಾಪಮಾಡುತ್ತಾ, ಸೀತೆಯನ್ನು ಮುಂದಿಟ್ಟುಕೊಂಡು ಯಮುನಾನದಿಯ ತೀರವನ್ನು ಸೇರಿದರು. ಆ ನದಿಯ ಸಮೀಪಕ್ಕೆ ಬಂದೊಡನೆ, ಬಹುವೇಗದಿಂದ ಪ್ರವಹಿಸುತ್ತಿರುವ ಅದನ್ನು ದಾಟುವುದಕ್ಕೆ ಉಪಾಯವೇನೆಂದು ಅವರಿಗೆ ಚಿಂತೆಯು ಹುಟ್ಟಿತು. ಆಮೇಲೆ ಆ ರಾಮಲಕ್ಷ್ಮಣರಿಬ್ಬರೂ ತಾವಾಗಿಯೇ ಹೊರಟು, ಕಾಡಿನಲ್ಲಿ ಅಲ್ಲಲ್ಲಿ ಬಿದ್ದಿದ್ದ ಕಾಷ್ಠಸಮೂಹಗಳನ್ನೂ, ಒಣಗಿದ ಬಿದಿರುತುಂಡುಗಳನ್ನೂ ಸಂಗ್ರಹಿಸಿ ತಂದು, ಉದ್ದವಾದ ಲಾಮಂಚದ ಬೇರುಗಳಿಂದ ಅವುಗಳನ್ನು ಸೇರಿಸಿಕಟ್ಟಿ, ಒಂದು ದೊಡ್ಡ ತೆಪ್ಪವನ್ನು ಮಾಡಿದರು. ಆಮೇಲೆ ಲಕ್ಷ್ಮಣನು ಕೆಲವು ನೀರಂಜಿಯಮರದ ಕೊಂಬೆಗಳನ್ನೂ, ನೇರಳೆಮರದ ಕೊಂಬೆಗಳನ್ನೂ ಕಡಿದುತಂದು, ಸೀತೆಗಾಗಿ ಸುಖವಾದ ಒಂದು ಆಸನವನ್ನು ಮಾಡಿಟ್ಟನು. ರಾಮನು ಅಲ್ಲಿ ಸಾಕ್ಷಾಲ್ಲಕ್ಷ್ಮೀದೇವಿಯಂತೆ ಎಣೆಯಿಲ್ಲದ ಸೌಂದರ್ಯವುಳ್ಳವಳಾಗಿ ಪ್ರಕಾಶಿಸುತ್ತಿರುವ ತನ್ನ ಪ್ರಿಯಪತ್ನಿಯಾದ ಸೀತೆಯು ಲಜ್ಜೆಯಿಂದ ತಲೆತಗ್ಗಿಸಿ ನಿಂತಿರುವುದನ್ನು ನೋಡಿ, ತಾನೇ ಕೈಹಿಡಿದು ಕರೆತಂದು ತೆಪ್ಪದಮೇಲೆ ಏರಿಸಿದನು. ಅವಳ ವಸ್ತ್ರಭೂಷಣಾದಿಗಳೆಲ್ಲವನ್ನೂ ತಂದು, ತಾನೇ ಆಕೆಯ ಪಕ್ಕದಲ್ಲಿರಿಸಿದನು. ಹಾಗೆಯೇ ತಮ್ಮ ಆಯುಧಗಳನ್ನೂ, ಗುದ್ದಲಿಯನ್ನೂ ಮೇಕೆಯ ಚರ್ಮದಿಂದ ಮಾಡಿದ ಪುಟ್ಟಿಯನ್ನೂ, ಆ ತೆಪ್ಪದಲ್ಲಿ ತಂದಿರಿಸಿದನು. ಮೊದಲು ಸೀತೆಯು ಆ ತೆಪ್ಪವನ್ನೇರುವಾಗ, ರಾಮಲಕ್ಷ್ಮಣರಿಬ್ಬರೂ ಅದನ್ನು

ಚಲಿಸದಂತೆ ಕೈಯಿಂದ ಬಲವಾಗಿ ಹಿಡಿದು ನಿಲ್ಲಿಸಿಕೊಂಡು, ಆಮೇಲೆ ತಾವೂ ಏರಿ, ನದಿಯನ್ನು ದಾಟಿಹೋಗುತ್ತಿದ್ದರು. ಸೀತೆಯು ನದಿಯ ಮಧ್ಯಕ್ಕೆ ಬಂದಾಗ, ಆ ನದಿಯನ್ನು ನೋಡಿ "ಎಲೆ ದೇವಿ ಯಮುನೆ! ನಿನಗೆ ಮಂಗಳ ವಾಗಲಿ! ಈಗ ನಿನ್ನನ್ನು ನಾನು ದಾಟಿಹೋಗುವ ಈ ಅಪರಾಧವನ್ನು ಕ್ಷಮಿಸು! ನನ್ನ ಪತಿಯು ವನವಾಸವ್ರತವನ್ನು ಮುಗಿಸಿಕೊಂಡು ಸುಖವಾಗಿ ಹಿಂತಿರುಗಿಬಂದಮೇಲೆ ನಿನ್ನ ಪ್ರೀತ್ಯರ್ಥವಾಗಿ ಸಾವಿರಾರು ಗೋದಾನಗಳನ್ನು ಮಾಡಿ ನಿನಗೆ ನೂರಾರುಘಟಗಳಲ್ಲಿ ಮದ್ಯವನ್ನರ್ಪಿಸಿ ಪೂಜಿಸುವೆನು. ರಾಮನು ಇಕ್ಷ್ವಾಕುವಂಶದ ರಾಜರಿಂದ ರಕ್ಷಿಸಲ್ಪಟ್ಟ ಅಯೋಧ್ಯಾಪುರಿಗೆ ಹಿಂತಿರುಗಿ ಸುಖ ವಾಗಿ ಬಂದು ಸೇರುವಂತೆ ಅನುಗ್ರಹಿಸು" ಎಂದು ಕೈಮುಗಿದು ಪ್ರಾರ್ಥಿಸಿದಳು. ಎಲ್ಲರೂ ದಕ್ಷಿಣತೀರಕ್ಕೆ ಬಂದು ಸೇರಿದರು. ಹೀಗೆ ಸೀತಾರಾಮಲಕ್ಷ್ಮಣರು ಮೂವರೂ ಬಹುವೇಗದಿಂದ ಪ್ರವಹಿಸುವುದಾಗಿಯೂ, ವಿಶೇಷವಾದ ಅಲೆಗಳು ಉಳ್ಳುದಾಗಿಯೂ, ಬಗೆಬಗೆಯ ತೀರವೃಕ್ಷಗಳಿಂದ ಕೂಡಿದುದಾಗಿಯೂ ಇರುವ ಆ ಯಮುನಾನದಿಯನ್ನು ಪ್ರಯತ್ನದಿಂದ ದಾಟಿಬಂದು, ದಕ್ಷಿಣತೀರದಲ್ಲಿಳಿದು, ಆ ತೆಪ್ಪವನ್ನು ಅಲ್ಲಿಯೇ ಬಿಟ್ಟು, ಅದರ ತೀರದಲ್ಲಿದ್ದ ವನಪ್ರದೇಶದ ಮಾರ್ಗವನ್ನು ಹಿಡಿದು ನಡೆದುಹೋಗುತ್ತಿದ್ದರು. ಮುಂದೆ ಹಸುರಾದ ಎಲೆಗಳಿಂದ ಕೂಡಿದ ಶ್ಯಾಮವೆಂಬ ಆಲದಮರವು ಕಾಣಿಸಿತು. ವೃಕ್ಷಸಮೀಪವನ್ನು ಸೇರಿದೊಡನೆ ಸೀತೆಯು "ಎಲೆ ಮಹಾವೃಕ್ಷವೆ! ನಿನಗೆ ವಂದಿಸುವೆನು. ನನ್ನ ಪತಿಯು ವನವಾಸ ವನ್ನು ಮುಗಿಸಿಕೊಂಡು ಕ್ಷೇಮದಿಂದ ಹಿಂತಿರುಗಿಬರುವಂತೆ ಅನುಗ್ರಹಿಸು! ನಾನೂ ಹಿಂತಿರುಗಿ ಬಂದು ಕೌಸಲ್ಯೆಯನ್ನೂ, ಸುಮಿತ್ರೆಯನ್ನೂ ನೋಡುವಂತೆ ಅನುಗ್ರಹಿಸು" ಎಂದು ಹೇಳುತ್ತಾ ಆ ವೃಕ್ಷವನ್ನು ಪ್ರದಕ್ಷಿಣಮಾಡಿದಳು. ಆಗ ರಾಮನು, ತನ್ನ ಶ್ರೇಯಸ್ಸಿಗಾಗಿ ಬಾರಿಬಾರಿಗೂ ಆ ವೃಕ್ಷವನ್ನು ಕುರಿತು ದೈನ್ಯದಿಂದ ಬೇಡುತ್ತಿರುವ ಸೀತೆಯನ್ನು ನೋಡಿ ಅವಳಿಗೆ ತನ್ನಲ್ಲಿರುವ ಅಸಾಧಾ ರಣವಾದ ಭಕ್ತಿವಿಶೇಷವನ್ನೂ, ವಿಧೇಯತೆಯನ್ನೂ ನೋಡಿ ಸಂತೋಷದಿಂದ ಹಿಗ್ಗುತ್ತಾ, ಸಮೀಪದಲ್ಲಿದ್ದ ಲಕ್ಷ್ಮಣನನ್ನು ಕುರಿತು "ವತ್ಸ ಲಕ್ಷ್ಮಣಾ! ಈ ಸೀತೆಯನ್ನು ಕರೆದುಕೊಂಡು ನೀನು ಮುಂದೆ ನಡೆ! ನಾನು ನಿಮ್ಮಿಬ್ಬರಿಗೂ ಬೆಂಗಾವಲಾಗಿ ನಿಮ್ಮ ಹಿಂದೆ ಬರುವೆನು. ಎಲೈ ಪುರುಷಶ್ರೇಷ್ಠನೆ! ರಾಜಕುಮಾರಿ ಯಾದ ಈಕೆಯು ಯಾವಯಾವ ಹಣ್ಣುಗಳನ್ನು ಕೇಳುವಳೋ, ಯಾವಯಾವ

ಪುಷ್ಪಗಳನ್ನು ಅಪೇಕ್ಷಿಸುವಳೋ ಅವುಗಳನ್ನು ಆಗಾಗಲೇ ತಂದಿಡು. ಇವಳ ಮನಸ್ಸಿಗೆ ಯಾವಯಾವ ಭಾಗದಲ್ಲಿ ತೃಪ್ತಿಯುಂಟಾಗಬಹುದೋ ಅವೆಲ್ಲವನ್ನೂ ಲೋಪವಿಲ್ಲದೆ ನಡೆಸು" ಎಂದನು. ಅದರಂತೆಯೇ ಲಕ್ಷ್ಮಣನು ಮುಂದೆಯೂ ರಾಮನು ಹಿಂದೆಯೂ ಬರುತ್ತಿರಲು, ಎರಡು ಗಂಡಾನೆಗಳ ನಡುವೆ ಹೋಗುತ್ತಿರುವ ಹೆಣ್ಣಾನೆಯಂತೆ ಅವರಿಬ್ಬರ ನಡುವೆ ಸೀತೆಯೂ ದಾರಿನಡೆಯುತ್ತಿದ್ದಳು. ಅಲ್ಲಿ ಸೀತೆಯು ಅಪೂರ್ವವಾದ ವೃಕ್ಷವನ್ನಾಗಲಿ, ಗಿಡಗಳನ್ನಾಗಲಿ, ಪುಷ್ಪಿತವಾದ ಲತೆಯನ್ನಾಗಲಿ, ನೋಡಿದಾಗಲೆಲ್ಲಾ, ಅವುಗಳ ವಿಷಯವನ್ನು ಕುರಿತು ರಾಮನನ್ನು ವಿಚಾರಿಸುತ್ತಿರುವಳು. ಹೀಗೆ ವಿಚಾರಿಸುತ್ತಿರುವಾಗಲೇ ಲಕ್ಷ್ಮಣನು ಆ ಸೀತೆಯ ಮನೋಭಿಪ್ರಾಯವನ್ನು ತಿಳಿದು ಅತ್ಯಾತುರದಿಂದ ಹೋಗಿ ಪುಷ್ಪ ಫಲಗಳನ್ನು ತಂದು ಅವಳ ಮುಂದಿಡುವನು. ಆ ಮೂವರೂ ಹೀಗೆ ಬಹು ದೂರದವರೆಗೆ ಆ ಯಮುನಾನದಿಯ ತೀರವನ್ನೇ ಹಿಡಿದು ಹೋಗುತ್ತಿದ್ದರು. ಆಗ ಸೀತೆಯು ಅಂದವಾದ ಮಳಲುದಿಣ್ಣೆಗಳಿಂದಲೂ, ಹಂಸಸಾರಸಾದಿಜಲಚರ ಪಕ್ಷಿಗಳಿಂದಲೂ, ತಿಳಿನೀರಿನಿಂದಲೂ ಅತಿಮನೋಹರವಾದ ಆ ನದಿಯನ್ನು ನೋಡಿ ಸಂತೋಷದಿಂದ ಮಾರ್ಗಾಯಾಸವನ್ನೂ ತಿಳಿಯದೆ ಹೋಗುತ್ತಿದ್ದಳು. ಹೀಗೆ ಒಂದು ಹರದಾರಿಯ ದೂರದವರೆಗೆ ನಡೆದುಹೋದಮೇಲೆ, ಅಣ್ಣ ತಮ್ಮಂದಿರಾದ ರಾಮಲಕ್ಷ್ಮಣರಿಬ್ಬರೂ ಅಲ್ಲಿ ಬೇಟೆಯಾಡಿ, ಶಾಸ್ತ್ರೋಚಿತವಾಗಿ ಆಹಾರಯೋಗ್ಯವಾದ ಕೆಲವು ಮೃಗಗಳನ್ನು ಹೊಡೆದು ಭೋಜನಮಾಡಿದರು. ಅವರು ಇಷ್ಟು ಕಷ್ಟದಶೆಯಲ್ಲಿದ್ದರೂ ಮನಸ್ಸಿನಲ್ಲಿ ಉತ್ಸಾಹಗುಂದದೆ, ಉಲ್ಲಾಸದಿಂದಲೇ ಅಲ್ಲಲ್ಲಿ ವಿಹರಿಸುತ್ತಾ ನವಿಲುಗಳ ಕೇಕಾಧ್ವನಿಗಳಿಂದಲೂ, ಕಾಡಾನೆಗಳಿಂದಲೂ, ಕಾಡುಕಪಿಗಳಿಂದಲೂ ಮನೋಹರವಾದ ಆ ವನಪ್ರದೇಶದಲ್ಲಿ ಸಂತೋಷದಿಂದ ಸಂಚರಿಸುತ್ತಿದ್ದರು. ಹಳ್ಳತಿಟ್ಟುಗಳಿಲ್ಲದೆ ಸಮವಾದ ಭೂಪ್ರದೇಶದಿಂದ ಕೂಡಿದ ಆ ನದೀತೀರದಲ್ಲಿ ಸೀತೆಗೆ ಅಭಿಮತವಾದ ಒಂದು ಸ್ಥಳವನ್ನು ನೋಡಿ ಅಲ್ಲಿಯೇ ವಾಸಸ್ಥಾನವನ್ನೂ ಮಾಡಿಕೊಂಡರು.

ಇದು ಐವತ್ತೈದನೆಯ ಸರ್ಗವು.

ರಾಮಾದಿಗಳು ಚಿತ್ರಕೂಟಪ್ರಾಂತದಲ್ಲಿ ವಾಲ್ಮೀಕ್ಯಾಶ್ರಮ ವನ್ನು ಸೇರಿದುದು. ವಾಲ್ಮೀಕಿದರ್ಶನವು. ಪರ್ಣಶಾಲೆ ಯನ್ನು ಕಟ್ಟಿಕೊಂಡು ಚಿರಕಾಲದವರೆಗೆ ಅಲ್ಲಿ ವಾಸಮಾಡುತ್ತಿದ್ದುದು.

ಆ ರಾತ್ರಿಯು ಕಳೆದು ಬೆಳಗಾದ ಕೂಡಲೆ, ರಾಮನೇ ಮೊದಲು ನಿದ್ರೆ ತಿಳಿದೆದ್ದು, ಅರ್ಧನಿದ್ರೆಯಲ್ಲಿ ಮಲಗಿದ್ದ ಲಕ್ಷ್ಮಣನನ್ನೂ ಮೆಲ್ಲಗೆ ಎಚ್ಚರ ಗೊಳಿಸಿ "ಎಲೆ ವತ್ಸನೆ! ಕಾಡಿನಲ್ಲಿ ಕಿವಿಗಿಂಪಾಗಿ ಕೂಗುತ್ತಿರುವ ಪಕ್ಷಿಗಳ ಧ್ವನಿಯನ್ನು ಕೇಳಿದೆಯಾ! ಬೆಳಗಾಯಿತು! ನಮ್ಮ ಪ್ರಯಾಣಕ್ಕೆ ಇದೇ ಸರಿ ಯಾದ ಕಾಲವು. ನಾವಿನ್ನು ಹೊರಡುವೆವು" ಎಂದನು. ಹೀಗೆ ಸಕಾಲದಲ್ಲಿ ರಾಮನಿಂದ ಎಚ್ಚರಿಸಲ್ಪಟ್ಟ ಲಕ್ಷ್ಮಣನು, ನಿದ್ರೆಯನ್ನೂ, ಬೇಸರವನ್ನೂ, ಮಾರ್ಗಾಯಾಸವನ್ನೂ ಎಣಿಸದೆ ಪ್ರಯಾಣಸನ್ನದ್ಧನಾದನು. ಆಮೇಲೆ ಅವರೆಲ್ಲರೂ ನದಿಯಲ್ಲಿ ಪ್ರಾತರಾಹ್ನಿಕಗಳನ್ನು ಮಾಡಿಕೊಂಡು, ಭರದ್ವಾಜ ಮಹರ್ಷಿಯು ಹೇಳಿದ ಮಾರ್ಗವನ್ನೇ ಹಿಡಿದು ಚಿತ್ರಕೂಟಕ್ಕೆ ಹೊರಟರು. ಹೀಗೆ ಸಕಾಲದಲ್ಲಿ ಎದ್ದು ಪ್ರಯಾಣಮಾಡುತ್ತಿರುವಾಗ, ರಾಮನು ಲಕ್ಷ್ಮಣ ನನ್ನೂ, ಕಮಲದಂತೆ ಕಣ್ಣುಳ್ಳ ತನ್ನ ಪ್ರಿಯಪತ್ನಿಯನ್ನೂ ನೋಡಿ "ಎಲೆ ಪ್ರಿಯೇ! ಅದೋ! ಅಲ್ಲಿ ನೋಡು! ಈಗ ಶಿಶಿರಋತುವು ಕಳೆದು ವಸಂತ ಕಾಲವು ಪ್ರಾಪ್ತವಾಗಿರುವುದರಿಂದ, ಮುತ್ತುಗದಮರಗಳೆಲ್ಲವೂ ಪುಷ್ಪಭರಿತ ಗಳಾಗಿ, ಜ್ವಲಿಸುವಂತೆ ಕೆಂಪಗೆ ಕಾಣುತ್ತಿರುವುವು. ಪುಷ್ಪಸಮೃದ್ಧಿಯಿಂದ ಇಲ್ಲಿನ ಅನೇಕ ವೃಕ್ಷಗಳು ಹೂದಂಡೆಯಿಂದ ಅಲಂಕರಿಸಲ್ಪಟ್ಟಿರುವಂತೆ ಕಾಣುವುವು. ಇದೋ! ಇತ್ತಲಾಗಿ ನೋಡು! ಅರಳಿದ ಹೂಗಳಿಂದ ತುಂಬಿದ ಭಲ್ಲಾತ ವೃಕ್ಷಗಳು ಹೇರಳವಾಗಿರುವುವು. ಈ ಸ್ಥಳವು ದುರ್ಗಮವಾದುದರಿಂದ ಮನುಷ್ಯರು ಯಾರೂ ಬಂದು ಇವುಗಳಲ್ಲಿ ಹಣ್ಣುಗಳನ್ನೂ, ಕಾಯಿಗಳನ್ನೂ, ಹೂವುಗಳನ್ನೂ ಅನುಭವಿಸುವದಕ್ಕಿಲ್ಲ. ಆದುದರಿಂದ ಆ ಹಣ್ಣುಗಳು ಮರದಲ್ಲಿಯೇ ತುಂಬಿ ಅವುಗಳ ಭಾರಕ್ಕೆ ಕೊಂಬೆಗಳೆಲ್ಲವೂ ಬಗ್ಗಿಹೋಗಿರುವುದನ್ನು ನೋಡಿದೆಯಾ? ಇಲ್ಲಿ ನಾವು ಸುಖವಾಗಿ ವಾಸಿಸುತ್ತಿರಬಹುದೆಂಬುದರಲ್ಲಿ ಸಂದೇಹವಿಲ್ಲ. ಲಕ್ಷ್ಮಣಾ! ಇಲ್ಲಿ ನೋಡು! ಒಂದೊಂದು ಮರದಲ್ಲಿಯೂ ಜೇನುಹುಳುಗಳು ಗೂಡನ್ನು ಕಟ್ಟಿ ಸಮೃದ್ಧವಾಗಿ ಜೇನನ್ನು ತುಂಬಿಟ್ಟಿರುವುವು. ಇವುಗಳಲ್ಲಿ ಒಂದೊಂದ

ರಲ್ಲಿಯೂ ಒಂದೊಂದು ಕೊಳಗದಷ್ಟು ಜೇನಿರುವುದರಲ್ಲಿ ಸಂದೇಹವಿಲ್ಲ. ಅದರ ಭಾರಕ್ಕಾಗಿ ಗೂಡು ಜೋಲುಬಿದ್ದಿರುವುದನ್ನು ನೋಡು. ಇತ್ತ ದಾತ್ಯೂಹ ಗಳೆಂಬ ಪಕ್ಷಿಗಳು ಕೂಗುತ್ತಿರುವುವು. ಅದನ್ನು ಕೇಳಿ ಪ್ರತಿಧ್ವನಿಗುಡುವಂತೆ ಅತ್ತಲಾಗಿ ನವಿಲುಗಳು ಕೂಗುತ್ತಿರುವುವು ಇದೋ! ಇದೇ ಚಿತ್ರಕೂಟವು. ಅಲ್ಲಲ್ಲಿ ಆನೆಗಳ ಹಿಂಡು ಸಂಚರಿಸುತ್ತಿರುವುವು. ಪಕ್ಷಿಗಳು ಗುಂಪುಗುಂಪಾಗಿ ಕೂಗುತ್ತಿರುವುವು. ಈ ಪರ್ವತದ ಶಿಖರವು ಎಷ್ಟು ಉನ್ನತವಾಗಿರುವುವು ನೋಡು. ವಿಶೇಷವಾಗಿ ವೃಕ್ಷಗಳಿಂದ ತುಂಬಿ ಸಮಭೂಮಿಯುಳ್ಳ ಒಂದಾನೊಂದು ಪ್ರದೇಶ ವನ್ನು ನೋಡಿ ಇಲ್ಲಿಯೇ ನಾವು ಆಶ್ರಮವನ್ನು ಮಾಡಿಕೊಂಡು ವಿನೋದದಿಂದ ಕಾಲವನ್ನು ಕಳೆಯುವುದು ಉತ್ತಮವು. ಇದರ ಮೇಲೆ ಇದು ಬಹಳ ಪವಿತ್ರವಾದ ಸ್ಥಳವೂ ಆಗಿರುವುದು" ಎಂದನು. ಹೀಗೆಯೇ ಪರಸ್ಪರ ಸಲ್ಲಾಪ ಗಳನ್ನು ಮಾಡುತ್ತಾ ಆ ರಾಮಲಕ್ಷ್ಮಣರಿಬ್ಬರೂ ಸೀತೆಯೊಡಗೂಡಿ ಕಾಲು ನಡೆಯಿಂದಲೇ ಬಹುದೂರಕ್ಕೆ ನಡೆದು, ಕೊನೆಗೆ ಚಿತ್ರಕೂಟಪರ್ವತವನ್ನು ಸೇರಿದರು. ಅನೇಕ ಪಕ್ಷಿ ಸಮೂಹಗಳಿಂದ ಕೂಡಿ, ವಿಶೇಷವಾದ ಫಲಮೂಲ ಸಮೃದ್ಧಿಯುಳ್ಳದಾಗಿ ನಿರ್ಮಲವಾದ ಮತ್ತು ರುಚಿಯಾದ ನೀರುಳ್ಳ ಗಿರಿನದಿ ಗಳಿಂದ ತುಂಬಿದ ಆ ಪರ್ವತವನ್ನು ಸೇರಿದೊಡನೆಯೇ ರಾಮನು ಲಕ್ಷ್ಮಣನನ್ನು ಕುರಿತು "ಎಲೆ ಸೌಮ್ಯನೆ! ನಿಜವಾಗಿಯೂ ಈ ಪರ್ವತವು ಬಹು ಮನೋಹರ ವಾಗಿರುವುದು. ಇಲ್ಲಿ ಫಲಮೂಲಗಳೆಲ್ಲವೂ ಸಮೃದ್ಧಿಯಾಗಿ ಸಿಕ್ಕುವುವು. ನಮ್ಮ ವಾಸಕ್ಕೆ ಇದೇ ಸುಖವಾದ ಸ್ಥಳವೆಂದು ನನಗೆ ತೋರಿರುವುದು. ಅನೇಕ ಮಹಾತ್ಮರಾದ ಮಹರ್ಷಿಗಳು ಇಲ್ಲಿ ವಾಸಮಾಡುತ್ತಿರುವರು" ಎಂದು ಹೇಳಿ ಒಬ್ಬರಿಗೊಬ್ಬರು ಸಲ್ಲಾಪಿಸುತ್ತ ಅಲ್ಲಿಯೇ ವಾಸಮಾಡುವುದೆಂದು ನಿಶ್ಚಯಿಸಿ ಕೊಂಡು, ಆ ಮೂವರೂ ಅಲ್ಲಿಂದ ವಾಲ್ಮೀಕ್ಯಾಶ್ರಮಕ್ಕೆ ಹೋಗಿ ಆ ಮಹರ್ಷಿಗೆ ಕೈಮುಗಿದು ನಮಸ್ಕರಿಸಿದರು. ಆಗ ವಾಲ್ಮೀಕಿಮುನಿಯು ಇವರ ಆಗಮನಕ್ಕಾಗಿ ಬಹಳ ಸಂತೋಷಗೊಂಡು, ಅವರನ್ನು ಯಥೋಚಿತವಾಗಿ ಪೂಜಿಸಿ, ಸುಖಾ ಗಮನವನ್ನು ಕೇಳಿ, ಆಸನವನ್ನು ಕೊಟ್ಟು ಕುಳ್ಳಿರಿಸಿದನು. ಆಗ ಮಹಾ ಬಾಹುವಾದ ರಾಮನು, ಆ ಮಹರ್ಷಿಗೆ ತನ್ನ ಮತ್ತು ಸೀತಾಲಕ್ಷ್ಮಣರ ಪೂರ್ವೋತ್ತರಗಳೆಲ್ಲವನ್ನೂ ತಿಳಿಸಿ ಅಭಿವಾದನ ಮಾಡಿದನು. ಆಮೇಲೆ ಲಕ್ಷ್ಮಣನನ್ನು ನೋಡಿ, "ಎಲೆ ವತ್ಸನೆ! ನೀನು ಈಗಲೇ ಹೋಗಿ ಗಟ್ಟಿಯಾದ

ಮರದ ತುಂಡುಗಳನ್ನು ಸಂಗ್ರಹಿಸಿಕೊಂಡು ಬಂದು, ಒಂದು ಗುಡಿಸಲನ್ನು ಮಾಡು. ಇಲ್ಲಿಯೇ ವಾಸಮಾಡಬೇಕೆಂದು ನನ್ನ ಮನಸ್ಸಿಗೆ ತೋರಿರುವುದು" ಎಂದನು. ಒಡನೆಯೇ ಲಕ್ಷ್ಮಣನು ನಾನಾವಿಧವಾದ ಮರಗಳನ್ನು ತಂದು, ಶೀಘ್ರದಲ್ಲಿ ಪರ್ಣಶಾಲೆಯನ್ನು ಸಿದ್ಧಪಡಿಸಿಟ್ಟನು. ಬಲವಾದ ಗೋಡೆಗಳುಳ್ಳದಾಗಿ ಮಳೆಗಾಳಿಗಳಿಗೆ ಅಲ್ಲಾಡದಂತೆ ಕಟ್ಟಲ್ಪಟ್ಟ ಆ ಪರ್ಣಶಾಲೆಯು ನೋಡುವುದಕ್ಕೆ ಬಹಳ ಅಂದವಾಗಿ ಕಾಣುತ್ತಿತ್ತು. ಅದನ್ನು ನೋಡಿ ರಾಮನು ಬಹಳ ಸಂತೋಷಪಟ್ಟು ತನಗೆ ಅನವರತವೂ ಪರಿಚರ್ಯೆಯನ್ನು ಮಾಡುತ್ತ ತನ್ನ ಆಜ್ಞೆಯನ್ನು ಬಹಳ ಎಚ್ಚರಿಕೆಯಿಂದ ಇದಿರುನೋಡುತ್ತಿರುವ ಲಕ್ಷ್ಮಣನನ್ನು ನೋಡಿ "ವತ್ಸ ಲಕ್ಷ್ಮಣಾ! ಉತ್ತಮವಾದ ಜಿಂಕೆಯ ಮಾಂಸವನ್ನು ತಂದು ಈ ಮನೆಗೆ ಶಾಂತಿಕರ್ಮಗಳನ್ನು ನಡೆಸಬೇಕು. ಈ ನಿವೇಶನದಲ್ಲಿ ನಾನಾ ದಿಕ್ಕುಗಳಲ್ಲಿಯೂ ಇರುವ ದೇವತೆಗಳ ಪ್ರೀತ್ಯರ್ಥವಾಗಿ ಗೃಹಪ್ರವೇಶಕ್ಕೆ ಮೊದಲು ವಾಸ್ತುಕರ್ಮಗಳನ್ನು ನಡೆಸಬೇಕು. ಆಮೇಲೆ ಇದರಲ್ಲಿ ವಾಸಮಾಡ ತಕ್ಕವರಿಗೆ ಶ್ರೇಯಸ್ಸುಂಟು. ಗೃಹವಾಸಿಗಳು ಚಿರಜೀವಗಳಾಗಿರಬೇಕಾದರೆ, ಮೊದಲು ಈ ಶಾಂತಿಕರ್ಮವನ್ನು ನಡಿಸಿಯೇ ತೀರಬೇಕು. ಈಗಲೇ ಒಂದು ಮೃಗವನ್ನು ಹೊಡೆದು ತರುವವನಾಗು. ಈ ಸಂದರ್ಭಗಳಲ್ಲಿ ಪ್ರಾಣಿವಧವನ್ನು ಮಾಡುವುದು ದೋಷವೆಂದೆಣಿಸಬೇಡ. ಧರ್ಮದೃಷ್ಟಿಯುಳ್ಳವರು ಶಾಸ್ತ್ರವಿಹಿತವಾದ ಕಾರ್ಯವನ್ನು ಮಾಡಿಯೇ ತೀರಬೇಕಲ್ಲವೆ!" ಎಂದನು. ಒಡನೆಯೇ ಲಕ್ಷ್ಮಣನು ಅಣ್ಣನ ಆಜ್ಞಾನುಸಾರವಾಗಿ ಅವೆಲ್ಲವನ್ನೂ ಲೋಪವಿಲ್ಲದೆ ನಡೆಸಿ, ರಾಮನನ್ನು ಕುರಿತು, "ಅಣ್ಣಾ! ಇದೋ! ಮೃಗಮಾಂಸವನ್ನು ಸಿದ್ಧಪಡಿಸಿರುವೆನು," ಎಂದನು, ರಾಮನು ಪುನಃ ಲಕ್ಷ್ಮಣನನ್ನು ಕುರಿತು, "ವತ್ಸನೆ! ಇದನ್ನು ಪಚನಮಾಡು! ಗೃಹದೇವತೆಗಳನ್ನು ಪೂಜಿಸುವೆವು! ಆ ಕಾರ್ಯಕ್ಕೆ ಇದೇ ಶುಭಮೂಹೂರ್ತವಾಗಿರುವುದು. ದಿವಸವೂ ಒಳ್ಳೆಯದಾಗಿರುವುದು" ಎಂದನು. ಲಕ್ಷ್ಮಣನು ಇದನ್ನು ಕೇಳಿದೊಡನೆ, ಶುದ್ಧವಾದ ಆ ಮೃಗ

---

1. ರಾಮನು ಚಿತ್ರಕೂಟಕ್ಕೆ ಹೋದ ಕಾಲದಲ್ಲಿ, ವಾಲ್ಮೀಕಿಯು ಆ ಪರ್ವತಪ್ರಾಂತದಲ್ಲಿಯೇ ಆಶ್ರಮವನ್ನು ಮಾಡಿಕೊಂಡಿರುತ್ತಿದ್ದನು. ಭರತನು ಅಲ್ಲಿಗೆ ಬಂದು ಹೋದ ಮೇಲೆ, ಆ ಮಹರ್ಷಿಯು ಈ ಆಶ್ರಮವನ್ನು ಬಿಟ್ಟು ತಪಸ್ಸಿಗಾಗಿ ತಮಸಾನದೀತೀರಕ್ಕೆ ಹೋಗಿ ಅಲ್ಲಿ ನೆಲೆಗೊಂಡನೆಂದು ಗ್ರಹಿಸಬೇಕು.

ಮಾಂಸವನ್ನು ಉರಿಯುತ್ತಿರುವ ಬೆಂಕಿಯಲ್ಲಿ ಬೇಯಿಸಿ, ಅದರ ರಕ್ತವೆಲ್ಲವೂ ಆರಿ ಚೆನ್ನಾಗಿ ಪಕ್ವವಾದ ಮೇಲೆ ರಾಮನನ್ನು ನೋಡಿ "ಎಲೈ ದೇವನೆ! ಇದೋ! ಕರೀಜಿಂಕೆಯ ಮಾಂಸವನ್ನು ಚೆನ್ನಾಗಿ ಬೇಯಿಸಿಟ್ಟಿರುವೆನು. ಇದು ಸರ್ವಾವಯವಗಳಿಂದ ಕೂಡಿ, ಮೃಗಾಕಾರದಿಂದಲೇ ಇರುವುದು. ಇನ್ನು ವಾಸ್ತುದೇವತೆಗಳನ್ನು ಪೂಜಿಸು. ಈ ಕಾರ್ಯಕ್ಕೆ ನೀನೇ ಸಮರ್ಥನು" ಎಂದನು. ಆಗ ರಾಮನು ನಿಯಮದಿಂದ ಸ್ನಾನಮಾಡಿ ಬಂದು, ಕಾಲೋಚಿತ ವಾದ ಮಂತ್ರಗಳೆಲ್ಲವನ್ನೂ ಜಪಿಸಿ, ಅದು ಮುಗಿಯುವವರೆಗೆ ನಡೆಸಬೇಕಾದ ಶಾಂತಿಕರ್ಮಗಳನ್ನೂ ನಡೆಸಿದನು. ಆಮೇಲೆ ವಾಸ್ತುದೇವತಾ ಸಮೂಹ ಗಳೆಲ್ಲವನ್ನೂ ಯಥೋಚಿತವಾಗಿ ಪೂಜಿಸಿ, ಶುದ್ಧನಾಗಿ ಆ ಮನೆಯನ್ನು ಪ್ರವೇಶಿಸಿದನು. ಮಹಾತೇಜಸ್ವಿಯಾದ ರಾಮನು ಇವೆಲ್ಲವನ್ನೂ ನಡೆಸಿ ಸಂತುಷ್ಟಚಿತ್ತನಾಗಿ, ವೈಶ್ವದೇವಬಲಿ, ರುದ್ರಬಲಿ, ವಿಷ್ಣುಬಲಿ, ಮೊದಲಾದ ಬಲಿಕರ್ಮಗಳನ್ನೂ ನಡೆಸಿದನು. ವಾಸ್ತುಶಾಂತಿಗಾಗಿ ಗ್ರಹಾರಿಷ್ಟಗಳನ್ನು ಶಮನ ಮಾಡತಕ್ಕ ಮಂಗಳಕರವಾದ ಪುಣ್ಯಾಹವಾಚನವನ್ನೂ, ಜಪಶಾಂತಿಗಳನ್ನೂ, ಕ್ರಮವಾಗಿ ಆಯಾ ಮಂತ್ರಗಳಿಂದಲೇ ನಡೆಸಿದನು. ಯಥಾ ವಿಧಿಯಾಗಿ ಪುನಃ ಸ್ನಾನಮಾಡಿ, ಸಮಸ್ತ ಪಾಪಶಾಂತ್ಯರ್ಥವಾಗಿ ಮಾಡಬೇಕಾದ ಬಲಿಕರ್ಮಗಳನ್ನೂ ಮಾಡಿದನು. ಆಮೇಲೆ ಆ ಮನೆಯಲ್ಲಿ ಆಶ್ರಮೋಚಿತವಾದ ಅಗ್ನಿವೇದಿಕೆ ಗಳನ್ನೂ, ದೇವತಾಗಾರಗಳನ್ನೂ, ಅಗ್ನಿಗೃಹಗಳನ್ನೂ ಸಂಗ್ರಹವಾಗಿ ಮಾಡಿ ಸಿಟ್ಟನು. ಆಗ ರಾಮಲಕ್ಷ್ಮಣರಿಬ್ಬರೂ ಸೀತಾಸಮೇತರಾಗಿ ಪುಷ್ಪಗಳಿಂದಲೂ, ಪಕ್ವವಾದ ಮಾಂಸಗಳಿಂದಲೂ, ಜಲತರ್ಪಣದಿಂದಲೂ, ಮಂತ್ರಜಪಗಳಿಂದಲೂ, ದರ್ಭೆ, ಸಮಿತ್ತು, ಮೊದಲಾದ ಪೂಜಾ ಸಾಮಗ್ರಿಗಳಿಂದಲೂ, ಯಥಾವಿಧಿ ಯಾಗಿ ಭೂತಗಳಿಗೆ ತೃಪ್ತಿಯನ್ನುಂಟುಮಾಡಿ, ಸುಂದರವಾದ ಆ ಪರ್ಣಶಾಲೆಯ ಬಾಗಿಲಿಗೆ ಬಂದರು. ಮರದೆಲೆಗಳಿಂದ ಚೆನ್ನಾಗಿ ಹೊದ್ದಿಸಲ್ಪಟ್ಟು, ಶಾಸ್ತ್ರೋಕ್ತ ವಾದ ಆಯಾ ದೇಶವಿಭಾಗಗಳೊಡಗೂಡಿ, ಅಂದವಾಗಿಯೂ, ಮಳೆಗಾಳಿಗಳಿಗೆ ತಡೆಯುವಂತೆ ದೃಢವಾಗಿಯೂ ಕಟ್ಟಲ್ಪಟ್ಟ ಆ ಪರ್ಣಶಾಲೆಯನ್ನು ದೇವತೆಗಳು ಸುಧರ್ಮ ಸಭೆಯನ್ನು ಪ್ರವೇಶಿಸುವಂತೆ ಸೀತಾಲಕ್ಷ್ಮಣರಿಬ್ಬರೂ ರಾಮನನ್ನು ಮುಂದಿಟ್ಟುಕೊಂಡು ಪ್ರವೇಶಿಸಿದರು. ಹೀಗೆ ಆ ಸೀತಾ ರಾಮಲಕ್ಷ್ಮಣರು ಮೂವರೂ, ಅನೇಕ ಮೃಗಪಕ್ಷಿಗಳಿಂದಲೂ, ವಿಚಿತ್ರವಾದ ಹೂಗೊಂಚಲು

ಗಳಿಂದ ತುಂಬಿದ ವೃಕ್ಷಗಳಿಂದಲೂ, ಆನೆಗಳ ಕೂಗಿನಿಂದಲೂ, ಇತರ ಮೃಗಗಳ ಧ್ವನಿಯಿಂದಲೂ ಮನೋಹರವಾದ ಆ ವನದಲ್ಲಿ ಜಿತೇಂದ್ರಿಯರಾಗಿ ಸುಖದಿಂದ ವಿಹರಿಸುತ್ತಿದ್ದರು. ಆಗ ರಾಮನು ಅತಿ ಮನೋಹರವಾದ ಪರ್ವತಪ್ರದೇಶಗಳಲ್ಲಿಯೂ, ನಿರ್ಮಲವಾದ ತೀರ್ಥವುಳ್ಳ ಅಲ್ಲಿನ ಮಾಲ್ಯವತೀನದಿಯಲ್ಲಿಯೂ, ಆಗಾಗ ವಿಹರಿಸುತ್ತ ಚಿತ್ರವಿಚಿತ್ರಗಳಾದ ಮೃಗಪಕ್ಷಿಗಳಿಂದ ಕೂಡಿದ ಆ ಪ್ರದೇಶವನ್ನು ನೋಡಿ ಸಂತೋಷಿಸುತ್ತಾ, ತಾನು ಪಟ್ಟಣವನ್ನು ಬಿಟ್ಟುಬಂದ ದುಃಖವನ್ನೂ ಮರೆತು ಸಂತೋಷದಿಂದಿರುತ್ತಿದ್ದನು.

ಇದು ಐವತ್ತಾರನೆಯ ಸರ್ಗವು.

ಇತ್ತಲಾಗಿ ಸುಮಂತ್ರನು ರಾಮನನ್ನು ಬಿಟ್ಟು ಅಯೋಧ್ಯೆಗೆ ಹೋದುದು. ಪುರಜನರ ದುಃಖವು, ದಶರಥನ ಶೋಕವು.

ಇತ್ತಲಾಗಿ ರಾಮನು ಗಂಗೆಯ ದಕ್ಷಿಣತೀರವನ್ನು ಸೇರಿ ಕಣ್ಮರೆಯಾದ ಮೇಲೆ, ಅತ್ತಲಾಗಿ ಗುಹನು ಬಹಳ ದುಃಖಪೀಡಿತನಾಗಿ, ಸುಮಂತ್ರನೊಡನೆ ಇದೇ ವಿಷಯವನ್ನು ಕುರಿತು ಸ್ವಲ್ಪ ಹೊತ್ತಿನವರೆಗೆ ಮಾತಾಡುತ್ತಿದ್ದು, ಆಮೇಲೆ ತನ್ನ ಮನೆಗೆ ಬಂದು ಸೇರಿದನು. ಇತ್ತಲಾಗಿ ರಾಮನು [1] ಭರದ್ವಾಜಾಶ್ರಮಕ್ಕೆ ಹೋಗಿ ಋಷಿಯನ್ನು ದರ್ಶನಮಾಡಿದುದನ್ನೂ, ಪ್ರಯಾಗದಲ್ಲಿ ಅವರೊಡನೆ ವಾಸಮಾಡುತ್ತಿದ್ದುದನ್ನೂ, ಅಲ್ಲಿಂದ ಅವರೆಲ್ಲರೂ ಚಿತ್ರಕೂಟಪರ್ವತದ ಸಮೀಪಕ್ಕೆ ಹೋದುದನ್ನೂ ಗುಹಸುಮಂತ್ರರಿಬ್ಬರೂ ಆಗಲೇ ಚಾರರಿಂದ ತಿಳಿದರು. ಅವರು ಇನ್ನೂ ಮುಂದೆ ಹೊರಟುಹೋದಮೇಲೆ

---

1 ಮೊದಲನೆಯ ದಿವಸದಲ್ಲಿ ಗಂಗೆಯನ್ನು ದಾಟಿ ಒಂದು ಮರದ ಕೆಳಗೆ ವಾಸಮಾಡುತ್ತಿದ್ದುದು. ಎರಡನೆಯ ದಿನದಲ್ಲಿ ಭರದ್ವಾಜಾಶ್ರಮವಾಸವು, ಮೂರನೆಯ ದಿನದಲ್ಲಿ ಯಮುನಾತೀರದಲ್ಲಿದ್ದುದು, ನಾಲ್ಕನೆಯ ದಿನದಲ್ಲಿ ಚಿತ್ರಕೂಟಗಮನವು, ಐದನೆಯ ದಿನದಲ್ಲಿ ಚಾರರು ಹಿಂತಿರುಗಿ ಬಂದು ವೃತ್ತಾಂತವನ್ನು ತಿಳಿಸಿದುದು, ಎಂದು ಅಲ್ಲಿನ ಕಾಲಕ್ರಮವನ್ನು ಗ್ರಹಿಸಬೇಕು.

ಸುಮಂತ್ರನು ರಥಕ್ಕೆ ಕುದುರೆಗಳನ್ನು ಕಟ್ಟಿಕೊಂಡು, ಗುಹನ ಅನುಮತಿಯನ್ನು ಪಡೆದು ದುಃಖದಿಂದ ಅಯೋಧ್ಯಾಪುರದ ಕಡೆಗೆ ಹೊರಟನು. ಇವನು ದಾರಿಯಲ್ಲಿ ಬರುತ್ತಿರುವಾಗ, ಅಲ್ಲಲ್ಲಿ ಸುವಾಸನೆಯುಳ್ಳ ವನಪ್ರದೇಶಗಳೂ, ನದಿಗಳೂ, ಸರೋವರಗಳೂ, ಗ್ರಾಮಗಳೂ, ನಗರಗಳೂ, ಕಣ್ಣಿಗೆ ಅತ್ಯಾನಂದವನ್ನುಂಟುಮಾಡುತ್ತಿರಲು, ಮಾರ್ಗಾಯಾಸವನ್ನೇ ತಿಳಿಯದೆ ಬಹುವೇಗದಿಂದ ಬರುತ್ತಿದ್ದನು. ಇವನು ಗುಹನನ್ನು ಬಿಟ್ಟು ಹೊರಟ ಮೂರನೆಯ ದಿವಸದ ಸಾಯಂಕಾಲದ ಹೊತ್ತಿಗೆ ಅಯೋಧ್ಯೆಯನ್ನು ಮುಟ್ಟಿದನು. ಅವನು ಅಲ್ಲಿಗೆ ಬಂದು ನೋಡಿದಾಗ ಆ ಅಯೋಧ್ಯೆಯ ದುಃಸ್ಥಿತಿಯನ್ನು ಹೇಳತಕ್ಕುದೇನು? ಅಲ್ಲಿ ಯಾವ ಪ್ರಾಣಿಗಳಲ್ಲಿಯಾದರೂ ಸಂತೋಷವೆಂಬುದೇ ಇರಲಿಲ್ಲ. ಆ ಪಟ್ಟಣವೆಲ್ಲವೂ ಬಹಳ ನಿಶ್ಶಬ್ದವಾಗಿದ್ದುದರಿಂದ, ಬಹುಕಾಲದಿಂದ ಹಾಳು ಬಿದ್ದಂತೆ ಕಾಣಿಸುತ್ತಿತ್ತು. ಈ ದುರವಸ್ಥೆಯನ್ನು ನೋಡಿದೊಡನೆಯೇ ಸುಮಂತ್ರನ ದುಃಖವು ಮತ್ತಷ್ಟು ಹೆಚ್ಚಿತು. ಹಾಗೆಯೇ ಸಂಕಟದಿಂದ ಏನೂ ತೋರದೆ, ಮನಸ್ಸಿನಲ್ಲಿ "ಆಃ! ಇದೇನು? ಈ ಪಟ್ಟಣವು ತನ್ನಲ್ಲಿರುವ ಆನೆ ಕುದುರೆಗಳೊಡನೆಯೂ, ಪ್ರಜೆಗಳೊಡನೆಯೂ, ರಾಜನೊಡನೆಯೂ ಕೂಡಿ, ರಾಮವಿರಹದಿಂದುಂಟಾದ ಶೋಕಾಗ್ನಿಯಿಂದ ಒಟ್ಟಿಗೆ ಬೆಂದೇಹೋಗಿರಬಹುದೇ?" ಎಂದು ಚಿಂತಿಸಿ ಕೊರಗುತ್ತಾ, ಹಿಂದುಮುಂದು ತೋರದೆ ಕುದುರೆಗಳನ್ನು ವೇಗವಾಗಿ ಓಡಿಸಿಕೊಂಡು ಪಟ್ಟಣದ ದ್ವಾರಪ್ರದೇಶವನ್ನು ಸೇರಿ ಒಳಕ್ಕೆ ಪ್ರವೇಶಿಸಿದನು. ಈ ರಥವನ್ನು ನೋಡಿದೊಡನೆಯೇ ಪುರವಾಸಿಗಳೆಲ್ಲರೂ ಸಾವಿರಲೆಕ್ಕದಿಂದ ಗುಂಪುಗೂಡಿ, ರಥವನ್ನು ಹಿಂಬಾಲಿಸಿ, ಓಡಿಬರುತ್ತಾ, ಸುಮಂತ್ರನನ್ನು ಕುರಿತು, "ಎಲೆ ಸೂತನೆ! ನಮ್ಮ ರಾಮನೆಲ್ಲಿ?" ಎಂದು ಕೇಳತೊಡಗಿದರು. ಆಗ ಸುಮಂತ್ರನು, ಅವರನ್ನು ಕುರಿತು, "ಎಲೈ ಪ್ರಜೆಗಳಿರಾ! ರಾಮನು ಗಂಗಾತೀರವನ್ನು ಸೇರಿದ ಮೇಲೆ, ನನ್ನನ್ನು ಹಿಂತಿರುಗಿ ಹೋಗುವಂತೆ ನಿರ್ಬಂಧಿಸಿದನು. ಅವನ ಅನುಜ್ಞೆಯನ್ನು ಪಡೆದು ನಾನು ಅಲ್ಲಿಂದ ಹಿಂತಿರುಗಿ ಬಂದುಬಿಟ್ಟೆನು" ಎಂದನು. ಇದನ್ನು ಕೇಳಿ ಅಲ್ಲಿದ್ದ ಜನರೆಲ್ಲರೂ ಆಶಾಭಂಗವನ್ನು ಹೊಂದಿ ದುಃಖಿತರಾಗಿ, ರಾಮನು ಸೀತಾಲಕ್ಷ್ಮಣರೊಡನೆ ಗಂಗೆಯನ್ನೂ ದಾಟಿ ಹೊರಟುಹೋಗಿರುವನೆಂದು ನಿರ್ಧರಿಸಿಕೊಂಡು ಕಣ್ಣೀರನ್ನು ಸುರಿಸುತ್ತಾ, "ಛೀ! ಇನ್ನು ಕೆಲಸ ಕೆಟ್ಟಿತು!" ಎಂದು ನಿರಾಶರಾಗಿ "ಹಾ!

ರಾಮಾ!" ಎಂದು ಗಟ್ಟಿಯಾಗಿ ಪ್ರಲಾಪಿಸುತಿದ್ದರು. ಅಲ್ಲಲ್ಲಿ ಜನರು ಗುಂಪು ಗುಂಪಾಗಿ ನಿಂತು, ಅಯ್ಯೋ ನಾವು ಕೆಟ್ಟೆವು! ಇನ್ನು ರಾಮನನ್ನು ನೋಡುವು ದೆಲ್ಲಿ? ಆತನನ್ನು ನೋಡದೆ ನಾವು ಬದುಕುವ ಬಗೆ ಹೇಗೆ? "ಇನ್ನು ಮೇಲೆ ದಾನಕಾಲಗಳಲ್ಲಿಯಾಗಲಿ, ಯಜ್ಞಕಾಲಗಳಲ್ಲಿಯಾಗಲಿ, ವಿವಾಹಕಾಲಗಳಲ್ಲಿ ಯಾಗಲಿ, ದೊಡ್ಡ ದೊಡ್ಡ ವಿನೋದಗೋಷ್ಠಿಗಳಲ್ಲಿಯಾಗಲಿ, ನಾವು ರಾಮನನ್ನು ನೋಡುವುದಕ್ಕಿಲ್ಲವಲ್ಲಾ! ರಾಮನನ್ನು ತೊರೆದುಬಿಟ್ಟ ಮೇಲೆ ಅಲ್ಲಿನ ಜನರು ಇನ್ನು ಯಾವ ಕಾರ್ಯವನ್ನು ತಾನೇ ಮಾಡಬಲ್ಲರು? ಇವರಿಗೆ ಇನ್ನು ಯಾವುದು ತಾನೇ ಪ್ರಿಯವಾಗಿರುವುದು? ಇನ್ನು ಇವರಿಗೆ ಸುಖ ವೆಲ್ಲಿಯದು? ರಾಮನು ಈ ನಗರವಾಸಿಗಳೆಲ್ಲರನ್ನೂ ಹೆತ್ತತಂದೆಯಂತೆ ಎಷ್ಟೋ ಪ್ರೇಮದಿಂದ ಪೋಷಿಸುತಿದ್ದನಲ್ಲಾ! [1]ಇನ್ನು ಈ ಜನಕ್ಕೆ ಗತಿಯೇನು? ಎಂದು ಪ್ರಲಾಪಿಸುತಿದ್ದರು. ಹಾಗೆಯೇ ಅಂಗಡಿಬೀದಿಯಲ್ಲಿ ಬರುತ್ತಿರುವಾಗ, ಪುರ ಸ್ತ್ರೀಯರೆಲ್ಲರೂ ತಮ್ಮ ತಮ್ಮ ಮನೆಯ ಗವಾಕ್ಷಗಳಲ್ಲಿ ಬಗ್ಗಿ, ಈ ಶೂನ್ಯ ರಥವನ್ನು ನೋಡುತ್ತ ನಾನಾವಿಧದಲ್ಲಿ ಗೋಳಾಡುತಿದ್ದರು. ಈ ಪ್ರಲಾಪ ಧ್ವನಿಗಳನ್ನು ಕೇಳಿ ಸುಮಂತ್ರನು ಲಜ್ಜೆಯಿಂದಲೂ, ದುಃಖದಿಂದಲೂ, ಅವರಿಗೆ ಮುಖವನ್ನು ತೋರಿಸಲಾರದೆ, ಮುಖಕ್ಕೆ ಮುಸುಕು ಹಾಕಿಕೊಂಡೇ ರಾಜಬೀದಿಯನ್ನು ದಾಟಿ ನೆಟ್ಟಗೆ ದಶರಥನಿದ್ದ ಅರಮನೆಯ ಹೊರಬಾಗಿಲಿಗೆ ಬಂದನು. ಅವನು ಬಾಗಿಲಲ್ಲಿ ರಥದಿಂದಿಳಿದು ಅತ್ಯಾತುರದಿಂದ ಒಳಗೆ ಪ್ರವೇಶಿಸಿ, ವಿಶೇಷವಾಗಿ ರಾಜಸಂಚಾರವಿಲ್ಲದುದರಿಂದ ಅಲ್ಲಲ್ಲಿ ಜನಸಮೂಹ ದಿಂದ ತುಂಬಿದ ಆ ಅರಮನೆಯ ಏಳು ತೊಟ್ಟಿಗಳನ್ನೂ ದಾಟಿಹೋದನು. ಅಲ್ಲಿದ್ದ ರಾಜಸ್ತ್ರೀಯರೆಲ್ಲರೂ ಉಪ್ಪರಿಗೆಗಳನ್ನೂ, ಗೋಪುರಗಳನ್ನೂ ಏರಿ, ಶೂನ್ಯರಥ

---

1 ಬೇರೆ ಯಾರಾದರೂ ದಾನಮಾಡುವಾಗ, ಅವರಿಗೆ ದೇಶಕಾಲಗಳನ್ನು ತಿಳಿಸಿ ಸತ್ಪಾತ್ರಗಳಿಗೆ ಕೊಡಿಸುವುದೂ, ಯಜ್ಞಕಾಲಗಳಲ್ಲಿ ನ್ಯಾಯಾರ್ಜಿತವಾದ ದ್ರವ್ಯದಿಂದಲೇ ಅದನ್ನು ಮಾಡಿಸಿ, ಅಲ್ಲಲ್ಲಿ ಸಂದೇಹಗಳನ್ನು ನಿವೃತ್ತಿಮಾಡಿ ಯಜ್ಞಗಳನ್ನು ಸಾಂಗವಾಗಿ ನಡೆಸುವುದೂ, ವಿವಾಹಾದಿಕಾಲಗಳಲ್ಲಿ ಉಭಯವರ್ಗದವರನ್ನೂ ಒಂದಾಗಿ ಸೇರಿಸಿ ದ್ರವ್ಯ ದಾನಾದಿಗಳಲ್ಲಿ ಅವರವರಿಗೆ ಉಂಟಾಗತಕ್ಕ ಅಸಮಾಧಾನಗಳನ್ನು ನೀಗಿಸಿ, ಆ ಕಾರ್ಯವು ನಿರ್ವಿಘ್ನವಾಗಿ ನಡೆಯುವಂತೆ ಮಾಡುವುದೂ, ಈ ರಾಮನ ಕೆಲಸವಾಗಿತ್ತೆಂದು ಭಾವವು. ಇದರಿಂದಲೇ ಇಂತಹ ಸಂದರ್ಭಗಳಲ್ಲಿ ರಾಮನು ತಪ್ಪದೆ ತಾನೇ ಬಂದು ಆಯಾ ಕಾರ್ಯ ಗಳನ್ನು ನಿರ್ವಹಿಸುತ್ತಿದ್ದನೆಂದು ಗ್ರಹಿಸಬೇಕು.

ದಿಂದ ಬರುವ ಸುಮಂತ್ರನನ್ನು ನೋಡಿ, ರಾಮನನ್ನು ಕಾಣದ ಸಂಕಟಕ್ಕಾಗಿ ಹಾಹಾಕಾರವನ್ನು ಮಾಡುತ್ತಾ, ತಮ್ಮ ವಿಸ್ತಾರವಾದ ಕಣ್ಣುಗಳಿಂದ ಧಾರೆ ಧಾರೆಯಾಗಿ ಕಣ್ಣೀರುಬಿಡುತ್ತ, ಅದರಿಂದ ಒಬ್ಬರನೊಬ್ಬರು ಚೆನ್ನಾಗಿಯೂ ನೋಡಲಾರದೆ, ಗಟ್ಟಿಯಾಗಿ ಗೋಳಿಡುವುದಕ್ಕಾರಂಭಿಸಿದರು. ಒಳಗಿದ್ದ ದಶರಥನು ಅರಮನೆಯ ನಾಲ್ಕುಕಡೆಗಳಿಂದಲೂ ಸ್ತ್ರೀಯರ ಪ್ರಲಾಪಧ್ವನಿಯು ಹೊರಡುತ್ತಿರುವುದನ್ನು ಕೇಳುತ್ತಿದ್ದನು. ಅಲ್ಲಿ ಸ್ತ್ರೀಯರು ತಮ್ಮೊಳಗೆ ಒಬ್ಬರಿಗೊಬ್ಬರು "ಇಲ್ಲಿಂದ ರಾಮನೊಡನೆ ಹೊರಟ ಸುಮಂತ್ರನು ಈಗ ರಾಮನನ್ನು ಬಿಟ್ಟು ತಾನೊಬ್ಬನೇ ಬಂದಿರುವನು. ದುಃಖಿತೆಯಾದ ಕೌಸಲ್ಯೆಗೆ ಈತನು ಈಗ ಏನುತ್ತರವನ್ನು ಕೊಡಬಲ್ಲನು? ರಾಮನಿಲ್ಲದೆ ನಮಗೇ ಬದುಕುವುದು ಕಷ್ಟವಾಗಿರುವುದಲ್ಲಾ! ಇನ್ನು [1] ಕೌಸಲ್ಯೆಯು ತನ್ನ ಮುದ್ದು ಮಗನನ್ನು ಬಿಟ್ಟು ಹೇಗೆ ಬದುಕಿರುವಳು? ಬಲಾತ್ಕಾರದಿಂದ ಪ್ರಾಣವನ್ನುಳಿಸಿಕೊಂಡಿರಬೇಕೆಂದರೂ ಅವಳಿಗೆ ಸಾಧ್ಯವಾಗದೆಂದು ತೋರುವುದು" ಎಂದು ಮೆಲ್ಲಗೆ ಮಾತಾಡಿಕೊಳ್ಳುತಿದ್ದರು. ಇವೆಲ್ಲವನ್ನೂ ಆ ಸುಮಂತ್ರನು ಕೇಳುತ್ತಾ, ವ್ಯಸನದಿಂದ ಬೆಂದುಹೋಗುವಹಾಗಿರುವ ಆ ಅರಮನೆಯನ್ನು ದುಃಖದಿಂದ ಪ್ರವೇಶಿಸಿ, ಅಲ್ಲಿ ಶುಭ್ರವರ್ಣವುಳ್ಳ ಒಂದಾನೊಂದು ಸಣ್ಣ ಮನೆಯಲ್ಲಿ ಪುತ್ರ ಶೋಕದಿಂದ ಕಂದಿ ದೈನ್ಯದಿಂದ ಕಳವಳಿಸುತ್ತಿರುವ ಮಹಾರಾಜನನ್ನು ನೋಡಿದನು. ಆತನ ಮುಂದೆ ನಿಂತು ನಮಸ್ಕಾರಮಾಡಿ ರಾಮನು ಹೇಳಿದ್ದ ಸಂದೇಶಗಳೆಲ್ಲವನ್ನೂ ಯಥೋಕ್ತವಾಗಿ ಅವನಿಗೆ ತಿಳಿಸಿದನು. ದಶರಥನು ಆ ಮಾತುಗಳೆಲ್ಲವನ್ನೂ ಮೌನದಿಂದಲೇ ಕೇಳುತ್ತ, ದುಃಖದಿಂದ ಬುದ್ಧಿಭ್ರಮವುಳ್ಳವನಾಗಿ ಸಂಕಟವನ್ನು ತಡೆಯಲಾರದೆ ಮೂರ್ಛೆಹೊಂದಿ ನೆಲದಮೇಲೆ ಬಿದ್ದನು. ಇದನ್ನು ನೋಡುತ್ತಿದ್ದ ಅಂತಃಪುರಸ್ತ್ರೀಯರೆಲ್ಲರೂ ಮಹಾವ್ಯಸನದಿಂದ ಮುಂದೆ ಬಂದು, ಎರಡು ತೋಳುಗಳನ್ನೂ ಮೇಲಕ್ಕೆತ್ತಿ "ಹೋ" ಎಂದು ಗಟ್ಟಿಯಾಗಿ ಅಳತೊಡಗಿದರು. ಆಗ ಕೌಸಲ್ಯೆಯು ಸುಮಿತ್ರೆಯೊಡಗೂಡಿ ಬಂದು ನೆಲದಮೇಲೆ

---

1 "ಮಗನು ಬಿಟ್ಟು ಹೋದಮೇಲೆಯೂ, ಬಲಾತ್ಕಾರದಿಂದ ಪ್ರಾಣಧಾರಣೆಯನ್ನು ಮಾಡಿಕೊಂಡಿರುವುದು ಬಹಳ ಅಸಾಧ್ಯಕಾರ್ಯವು. ಹೀಗೆ ದುಃಖಜೀವನವು ಕೌಸಲ್ಯೆಗೆ ಹೊರತು ಮತ್ತೊಬ್ಬರಿಗೆ ಸಾಧ್ಯವಲ್ಲವೆಂದೆಣಿಸಿರುವೆವು" ಎಂದು ಹೇಳಿದುದಾಗಿ ಮಹೇಶ್ವರತೀರ್ಥರ ವ್ಯಾಖ್ಯಾನವು.

ಬಿದ್ದ ರಾಜನನ್ನು ಮೇಲಕ್ಕೆತ್ತಿ, ಆತನನ್ನು ಕುರಿತು “ಎಲೈ ಆರ್ಯಪುತ್ರನೆ! ಇದೇನು? ಲೋಕದಲ್ಲಿ ಯಾರಿಂದಲೂ ಮಾಡಲಾಗದ ವನವಾಸವೆಂಬ ಕಷ್ಟ ಕಾರ್ಯಕ್ಕೆ ಪ್ರಯತ್ನಿಸಿ ಮಹಾಧೀರನೆನಿಸಿಕೊಂಡಿರುವ ನಮ್ಮ ರಾಮನು ಕಳುಹಿಸಿರುವ ಈ ದೂತನೊಡನೆಯೂ ನೀನು ಮಾತಾಡದಿರಬಹುದೇ? ಆತನು ವನವಾಸದಲ್ಲಿರುವಾಗ ಹೇಳಿ ಕಳುಹಿಸಿದ ಸಂದೇಶಗಳನ್ನು ಕೇಳಿಯೂ ನೀನು ಪ್ರತ್ಯುತ್ತರವನ್ನು ಕೊಡದೆ ಮೌನದಿಂದಿರಬಹುದೆ? ಮೊದಲಂತೂ ನೀನು ಅನ್ಯಾಯಕ್ಕೆ ಪ್ರವರ್ತಿಸಿ ರಾಮನನ್ನು ಕಾಡಿಗೆ ಕಳುಹಿಸಿಬಿಟ್ಟೆ! ಅದಕ್ಕಾಗಿ ಈಗ ನಾಚಿಕೆಪಟ್ಟು ಹೀಗೆ ದುಃಖಿಸುವುದರಿಂದ ಪ್ರಯೋಜನವೇನು? ಏನು! ಇದರಿಂದ ಮಾತಿಗೆ ತಪ್ಪದವನೆಂಬ ಖ್ಯಾತಿಯಾದರೂ ನಿನಗುಂಟಾಯಿತಲ್ಲವೆ? ಆ ಪುಣ್ಯವಾದರೂ ನಿನ್ನನ್ನು ರಕ್ಷಿಸಲಿ! ಈಗ ದುಃಖಿಸುವುದರಿಂದ ಪ್ರಯೋಜನವಿಲ್ಲ! ರಾಮನ ಕಡೆಯಿಂದ ಬಂದಿರುವ ಈ ಸುಮಂತ್ರನಿಗೆ ಮುಖಕೊಟ್ಟು ಮಾತುಗಳನ್ನಾಡು! ಒಂದುವೇಳೆ ನೀನು ರಾಮನಕಡೆಯವನಾದ ಇವನನ್ನು ಕೈಕೇಯಿಯ ಭಯಕ್ಕಾಗಿ ಮಾತಾಡಿಸದಿರಬಹುದು. ಅವಳಿಗಾಗಿ ನೀನು ಈಗ ಭಯಪಡಬೇಕಾದುದಿಲ್ಲ. ಕೈಕೇಯಿಯು ಈಗ ಇಲ್ಲಿಲ್ಲವಲ್ಲವೆ? ಅವಳು ಬರುವವರೆಗಾದರೂ ನೀನು ನಿರ್ಭಯವಾಗಿ ಮಾತಾಡಬಹುದು”? ಎಂದಳು. ಹೀಗೆ ಕೌಸಲ್ಯೆಯು ದುಃಖಾತಿಶಯದಿಂದ ಮೈಮರೆತು, ಮರ್ಯಾದೆಯನ್ನೂ ಮಿಾರಿ ರಾಜನೊಡನೆ ಈ ಮಾತುಗಳನ್ನಾಡುತ್ತಿರುವಾಗಲೇ ತಾನೂ ಸಂಕಟವನ್ನು ತಡೆಯಲಾರದೆ, ಗದ್ಗದಸ್ವರದಿಂದ ಮಾತುಗಳನ್ನು ಚೆನ್ನಾಗಿ ಮುಗಿಸದೆ, ಹಾಗೆಯೆ ಮೂರ್ಛೆಹೊಂದಿ ನೆಲದಮೇಲೆ ಬಿದ್ದಳು. ಹೀಗೆ ಪ್ರಲಾಪಿಸಿ ಮೂರ್ಛೆಬಿದ್ದ ಕೌಸಲ್ಯೆಯನ್ನೂ, ಬುದ್ಧಿಭ್ರಮದಿಂದ ಮೈಮರೆತಿರುವ ದಶರಥನನ್ನೂ ನೋಡಿ, ಅಲ್ಲಿದ್ದ ಇತರ ರಾಜಸ್ತ್ರೀಯರೂ ಗಟ್ಟಿಯಾಗಿ ರೋದಿಸತೊಡಗಿದರು. ಅಂತಃಪುರದಲ್ಲಿ ಹೊರಟ ಈ ದೊಡ್ಡ ರೋದನ ಧ್ವನಿಯನ್ನು ಕೇಳಿ ಆ ಪಟ್ಟಣದಲ್ಲಿದ್ದ ಸ್ತ್ರೀಬಾಲವೃದ್ಧರೂ ಅಳುವುದಕ್ಕಾರಂಭಿಸಿದರು. ಹೀಗೆ ಒಬ್ಬರ ದುಃಖವನ್ನು ನೋಡಿ ಮತ್ತೊಬ್ಬರಿಗೆ ಮೇಲೆಮೇಲೆ ಸಂಕಟವು ಹೆಚ್ಚುತ್ತಿರಲು, ಆ ಪಟ್ಟಣದ ನಾಲ್ಕು ಪ್ರದೇಶಗಳೂ ಕೇವಲ ಪ್ರಲಾಪಧ್ವನಿಯಿಂದಲೇ ತುಂಬಿ, ಹಿಂದೆ ರಾಮನ ವನಪ್ರಯಾಣಕಾಲದಲ್ಲಿ ಉಲ್ಲೋಲಕಲ್ಲೋಲವಾಗಿದ್ದಂತೆಯೇ ಆಗಲೂ ವ್ಯಾಕುಲವಾಗಿತ್ತು.

ಇಲ್ಲಿಗೆ ಐವತ್ತೇಳನೆಯ ಸರ್ಗವು.

---

*

ಸುಮಂತ್ರನು ರಾಮನನ್ನು ಬಿಟ್ಟು ಅಯೋಧ್ಯೆಗೆ ಹೋದುದು. ಪುರಜನರ ದುಃಖವು. ದಶರಥನ ಶೋಕವು.

ದಶರಥನು ಮೂರ್ಛೆತಿಳಿದೆದ್ದಮೇಲೆ ಪುನಃ ಇದಿರಿಗಿದ್ದ ಸುಮಂತ್ರನನ್ನು ನೋಡಿ, ರಾಮನ ವೃತ್ತಾಂತವನ್ನು ಕೇಳುವುದಕ್ಕಾಗಿ ಸಮೀಪಕ್ಕೆ ಕರೆದನು. ಆಗ ಸುಮಂತ್ರನು ಕೈಮುಗಿದು ರಾಜನ ಸಮೀಪದಲ್ಲಿ ಬಂದು ನಿಂತನು. ರಾಮನನ್ನೇ ಆಗಾಗ ನೆನೆಸಿಕೊಂಡು ದುಃಖಿಸುತ್ತಾ, ಆಗಲೇ ಹಿಡಿದು ತರಲ್ಪಟ್ಟ ಮತ್ತು ವ್ಯಾಧಿಗ್ರಸ್ತವಾದ ಮದ್ದಾನೆಯಂತೆ ಸಂಕಟದಿಂದ ಬೆಂದು, ಉದ್ದವಾಗಿ ನಿಟ್ಟುಸಿರನ್ನು ಬಿಟ್ಟು ಚಿಂತಿಸುತ್ತಿರುವ ವೃದ್ಧನಾದ ದಶರಥನನ್ನು ನೋಡುತ್ತಾ ಸುಮಂತ್ರನು ಮುಂದೆ ನಿಂತನು. ಆಗ ದಶರಥನು ಧೂಳಿನಿಂದ ಮಲಿನವಾದ ಮೈಯುಳ್ಳವನಾಗಿ ಕಣ್ಣೀರುಬಿಡುತ್ತಾ, ಮಹಾವಿಪತ್ತಿನಲ್ಲಿ ಸಿಕ್ಕಿದವನಂತೆ ದೈನ್ಯದಿಂದ ಮುಂದೆ ನಿಂತಿರುವ ಸುಮಂತ್ರನನ್ನು ನೋಡಿ, “ ಎಲೈ, ಸೂತನೆ! ಧರ್ಮಾತ್ಮನಾದ ನಮ್ಮ ರಾಮನು ಈಗ ಎಲ್ಲಿರುವನು? ಯಾವ ಮರದಕೆಳಗೆ ಮಲಗುವನು? ಹುಟ್ಟಿದುದು ಮೊದಲು ಸುಖದಲ್ಲಿಯೇ ಬೆಳೆದ ಆತನು ಈಗ ಭುಜಿಸತಕ್ಕ ಆಹಾರಪದಾರ್ಥಗಳಾವುವು? ಯಾವಾಗಲೂ ಸುಖವೆಂಬುದನ್ನೇ ಕಾಣದೆ ಸುಖಶಯ್ಯೆಯಲ್ಲಿಯೇ ಮಲಗತಕ್ಕ ಆ ರಾಮನು ದಿಕ್ಕಿಲ್ಲದವನಂತೆ ಬರೀ ನೆಲದಮೇಲೆ ಹೇಗೆ ಮಲಗಬಲ್ಲನು? ಯಾವನು ಸಂಚಾರಾರ್ಥವಾಗಿ ಹೊರಟಾಗ, ಕಾಲಾಳುಗಳೂ ಆನೆಗಳೂ ಹಿಂಬಾಲಿಸಿ ಹೊರಡುತಿದ್ದುವೋ, ಆ ರಾಮನು ನಿರ್ಜನವಾದ ವನದಲ್ಲಿ ಹೇಗೆ ವಾಸಮಾಡಬಲ್ಲನು? ಕಾಡಾನೆಗಳಿಂದಲೂ, ಕಾಡು ಮೃಗಗಳಿಂದಲೂ, ಕಾಳಸರ್ಪಗಳಿಂದಲೂ ತುಂಬಿದ ಕಾಡಿನಲ್ಲಿ ಸೀತೆಯೊಡನೆ ಆ ಸಣ್ಣಮಕ್ಕಳಿಬ್ಬರೂ ಹೇಗೆ ತಾನೇ ಕಾಲವನ್ನು ಕಳೆಯಬಲ್ಲರು? ಎಲೈ ಸುಮಂತ್ರನೆ! ಆ ಸೀತೆಯಾದರೋ ಬಹು ಸುಕುಮಾರವಾದ ಮೈಯುಳ್ಳವಳು! ಇಂತವಳಿಗೆ ಹೀಗೆ ಶೋಚನೀಯಾವಸ್ಥೆಯು ಬಂದೊದಗಿತು! ಆ ರಾಜಕುಮಾರರಿಬ್ಬರೂ ರಥವನ್ನು ಬಿಟ್ಟು, ಕಾಲುನಡೆಯಿಂದಲೇ ಕೋಮಲಾಂಗಿಯಾದ ಆ ಸೀತೆಯನ್ನೂ ನಡೆಸಿಕೊಂಡು, ಈಗ ತಾನೇ ಪ್ರಯಾಣಮಾಡಿದರು. ಎಲೆ ಸೂತನೆ! ನೀನೇ ಧನ್ಯನು! ಮಂದರಪರ್ವತವನ್ನು ಪ್ರವೇಶಿಸುವ ಅಶ್ವಿನೀ ದೇವತೆಗಳಂತೆ, ನನ್ನ ಮಕ್ಕಳು ಅರಣ್ಯಪ್ರವೇಶವನ್ನು ಮಾಡುವವರೆಗಾದರೂ

ಅವರನ್ನು ನೋಡುತ್ತಿರುವ ಭಾಗ್ಯವು ನಿನಗೆ ಲಭಿಸಿತಲ್ಲವೆ? ಅದೆಲ್ಲವೂ ಹೋಗಲಿ! ಅವರು ಕಾಡನ್ನು ಸೇರಿದಮೇಲೆ ರಾಮನು ನಿನ್ನೊಡನೆ ಹೇಳಿದು ದೇನು? ಲಕ್ಷ್ಮಣನೇನು ಹೇಳಿದನು? ಸೀತೆಯೇನು ಹೇಳಿದಳು? ಕಾಡಿನಲ್ಲಿ ರಾಮನು ಅಲ್ಲಲ್ಲಿ ಕುಳಿತುದನ್ನೂ, ಮಲಗಿದುದನ್ನೂ, ಊಟಮಾಡಿದುದನ್ನೂ ಯಥಾವತ್ತಾಗಿ ನನಗೆ ತಿಳಿಸು! ಯಯಾತಿಯು ಪೂರ್ವದಲ್ಲಿ ಸ್ವರ್ಗಭ್ರಷ್ಟನಾಗಿ ಕಷ್ಟದಲ್ಲಿ ಸಿಕ್ಕಿದ್ದರೂ, ಸಾಧುಜನಗಳ ಸಹವಾಸವೆಂಬ ಸ್ವಲ್ಪಸಂತೋಷ ದಿಂದಲೇ ಪ್ರಾಣಧಾರಣೆಯನ್ನು ಮಾಡಿಕೊಂಡಿದ್ದಂತೆ, ರಾಮನ ವಿಷಯವಾದ ಆ ಮಾತುಗಳನ್ನಾದರೂ ಕೇಳುತ್ತಾ, ನಾನೂ ಸ್ವಲ್ಪಕಾಲದವರೆಗೆ ಬದುಕಿರು ವೆನು" ಎಂದನು! ರಾಜನ ಈ ಮಾತುಗಳನ್ನು ಕೇಳಿ ಸುಮಂತ್ರನು ಪರಮ ದುಃಖಿತನಾಗಿ ಕಣ್ಣೀರಿನಿಂದ ಕುಗ್ಗಿದ ಸ್ವರವುಳ್ಳವನಾಗಿ, ದಶರಥನನ್ನು ಕುರಿತು, "ಎಲೇ, ಮಹಾರಾಜನೆ! ಧರ್ಮದಲ್ಲಿಯೇ ದೃಢಸಂಕಲ್ಪವುಳ್ಳ ಆ ರಾಮನು ನನ್ನನ್ನು ಬಿಟ್ಟು ಹೋಗುವಾಗ, ನಿನಗೆ ಬದ್ಧಾಂಜಲಿಯಾಗಿ, ತಲೆಯನ್ನು ತಗ್ಗಿಸಿ ಪ್ರಣಾಮಮಾಡಿ, ಕೆಲವು ಮಾತುಗಳನ್ನು ಹೇಳಿ ಕಳುಹಿಸಿರುವನು. ಆತನು ತನ್ನ ಮಾತಿನಿಂದ ಮೊದಲು ನಿನ್ನ ಪಾದಗಳನ್ನು ಹಿಡಿದು ನಮಸ್ಕರಿಸುವಂತೆ ಹೇಳಿ, ನಿನ್ನ ಕ್ಷೇಮಲಾಭವನ್ನು ವಿಚಾರಿಸಿರುವನು! ಹಾಗೆಯೇ ಅಂತಃಪುರಜನರಿಗೂ ಪ್ರಣಾಮಮಾಡಿ ಅವರೆಲ್ಲರ ಕ್ಷೇಮ ಲಾಭಗಳನ್ನೂ ವಿಚಾರಿಸುವಂತೆ ಹೇಳಿ ಕಳುಹಿಸಿರುವನು. ಮತ್ತು ಎಲೈ ಮಹಾರಾಜನೆ! ರಾಮನು ಆಗ ನನ್ನನ್ನು ನೋಡಿ "ಎಲೆ ಸೂತನೆ! ನನ್ನ ತಾಯಿಯಾದ ಕೌಸಲ್ಯೆಗೆ ನನ್ನ ಪ್ರಣಾಮವನ್ನು ತಿಳಿಸು! ಅವಳ ಕ್ಷೇಮ ವನ್ನು ವಿಚಾರಿಸಿದೆನೆಂದು ಹೇಳು! ಧರ್ಮವಿಷಯದಲ್ಲಿಯಾಗಲಿ ಪತಿಯ ವಿಷಯ ದಲ್ಲಿಯಾಗಲಿ ಪ್ರಮಾದರಹಿತಳಾಗಿ ನಡೆದುಕೊಳ್ಳುವಂತೆ ಆಕೆಗೆ ತಿಳಿಸು! ಮತ್ತು ಯಾವಾಗಲೂ ಧರ್ಮವನ್ನು ಬಿಡದೆ ಕಾಲಕಾಲಕ್ಕೆ ಸರಿಯಾಗಿ ಅಗ್ನಿ ಶಾಲೆಯ ಕೆಲಸಗಳನ್ನು ನಡೆಸುತ್ತಿರಬೇಕು. ಪತಿಯ ಪಾದವನ್ನೇ ಪರದೈವ ವೆಂದು ಭಾವಿಸಿ ಆತನನ್ನುಪಚರಿಸುತ್ತಿರಬೇಕು. ಜ್ಯೇಷ್ಠಪತ್ನಿಯೆಂಬ ಗರ್ವ ವನ್ನಾಗಲಿ, ಔದಾಸೀನ್ಯವನ್ನಾಗಲಿ ತೋರಿಸದೆ, ಇತರ ಮಾತೆಯರಲ್ಲಿ ಬಹು ಗೌರವದಿಂದ ನಡೆಯುತ್ತಿರಬೇಕು. ಕೈಕೇಯಿಯನ್ನು ಪತಿಯಾದ ದಶರಥನಿಗೆ ಪ್ರತಿನಿಧಿಯನ್ನಾಗಿ ಭಾವಿಸಿ ಹಾಗೆಯೇ ಅವಳಲ್ಲಿಯೂ ಮರ್ಯಾದೆಯಿಂದಿರಬೇಕು.

ಆಕೆಯ ಮಗನಾದ ಭರತನನ್ನು ರಾಜನಂತೆಯೇ ಗೌರವಿಸುತ್ತಿರಬೇಕು. ರಾಜನಾದವನು ವಯಸ್ಸಿನಲ್ಲಿ ಚಿಕ್ಕವನಾದರೂ ಭಾಗ್ಯದಲ್ಲಿ ದೊಡ್ಡವನು. ಈ ರಾಜಧರ್ಮಗಳನ್ನು ಚೆನ್ನಾಗಿ ಮನಸ್ಸಿನಲ್ಲಿಡು" ಎಂದು ನಾನು ಹೇಳಿದಂತೆ, ಆಕೆಗೆ ಹೇಳು. ನಾನು ಕ್ಷೇಮವನ್ನು ವಿಚಾರಿಸಿದುದಾಗಿ ಭರತನಿಗೂ ತಿಳಿಸು. ಆತನಿಗೆ ನನ್ನ ಮಾತಿನಿಂದ ಸಮಸ್ತಮಾತೆಯರನ್ನೂ ಒಂದೇ ವಿಧವಾಗಿ ನಿಷ್ಪಕ್ಷಪಾತವಾಗಿ ನ್ಯಾಯವನ್ನನುಸರಿಸಿ ನೋಡುವಂತೆ ಹೇಳು. ಇಕ್ಷ್ವಾಕುವಂಶಕ್ಕೆ ಪುರೋವೃದ್ಧಿಯನ್ನು ತರತಕ್ಕ ಮಹಾಬಾಹುವಾದ ಆ ಭರತನಿಗೆ ಇನ್ನೂ ಹೇಳಬೇಕಾದ ಒಂದು ಮುಖ್ಯವಾದ ಮಾತುಂಟು. "ನಿನಗೆ ಯೌವರಾಜ್ಯದ ಅಧಿಕಾರವು ಬಂದಿತೆಂಬುದಕ್ಕಾಗಿ, ಪ್ರಧಾನರಾಜನಾದ ತಂದೆಯನ್ನು ಅಲಕ್ಷ್ಯದಲ್ಲಿ ಕಾಣಬೇಡ! ಆತನನ್ನು ತಕ್ಕಂತೆ ಉಪಚರಿಸು! ರಾಜನಿಗೆ ವಯಸ್ಸೆಲ್ಲವೂ ಕಳೆದುಹೋಯಿತು. ಮುದುಕನಾದ ತಂದೆಯನ್ನು ನಿರ್ಬಂಧದಲ್ಲಿಡುವುದು ಉಚಿತವಲ್ಲ. ಆತನ ಆಜ್ಞೆಯನ್ನೇ ಮುಂದಿಟ್ಟುಕೊಂಡು ಯೌವರಾಜ್ಯವನ್ನು ನಡೆಸುತ್ತಾ ಬಹುಕಾಲದವರೆಗೆ ಭೋಗಗಳನ್ನು ಅನುಭವಿಸು" ಎಂದು ನಾನು ಹೇಳಿದುದಾಗಿ ಹೇಳು" ಎಂದು ಆತನು ಅನೇಕವಿಧದಲ್ಲಿ ಎಲ್ಲರಿಗೂ ಸಂದೇಶಗಳನ್ನು ಹೇಳಿಕಳುಹಿಸಿರುವನು. ರಾಮನಿಗೆ ಆಗಾಗ ತನ್ನ ತಾಯಿಯಾದ ಕೌಸಲ್ಯೆಯ ಸ್ಮರಣೆಯೇ ಹೆಚ್ಚಾಗಿರುವುದು. ಇಲ್ಲಿ ಆಕೆಯು ಯಾವಕಷ್ಟಕ್ಕೆ ಗುರಿಯಾಗುವಳೋ ಎಂದು ಅನವರತವೂ ತತ್ತರಿಸುತ್ತಿರುವನು. ಇದಕ್ಕಾಗಿಯೇ ಬಾರಿಬಾರಿಗೂ ನನ್ನನ್ನು ನೋಡಿ, ಭರತನನ್ನು ಕುರಿತು, "ಎಲೆ ವತ್ಸನೆ! ನಿನ್ನ ತಾಯಿಯಂತೆಯೇ ಭಾವಿಸಿ, ಪುತ್ರವತ್ಸಲೆಯಾದ ನನ್ನ ತಾಯಿಯನ್ನೂ ಪ್ರೀತಿಯಿಂದ ಪೋಷಿಸು" ಎಂದು ಸಾರಿ ಹೇಳಿಕಳುಹಿಸಿರುವನು. ಈ ಮಾತುಗಳನ್ನಾಡುವಾಗ ಆತನ ಕಣ್ಣುಗಳಿಂದ ಪಳಪಳನೆ ನೀರು ಸುರಿಯುತಿತ್ತು. ಮಹಾಯಶಸ್ವಿಯಾಗಿಯೂ, ಕಮಲದಳದಂತೆ ಕಣ್ಣುಳ್ಳವನಾಗಿಯೂ ಇರುವ ಆ ರಾಮನಿಗೆ, ಇತ್ತಲಾಗಿ ಪುತ್ರಪ್ರೇಮ ಪರವಶಳಾಗಿರುವ ಕೌಸಲ್ಯೆಯ ವಿಚಾರವೇ ಹೆಚ್ಚಾಗಿರುವುದು. ರಾಮನು ಹೀಗೆ ದುಃಖದಿಂದ ಇಲ್ಲಿಗೆ ಸಂದೇಶಗಳನ್ನು ಹೇಳುತ್ತಿರುವಾಗ, ಆತನ ಮನೋವ್ಯಾಕುಲತೆಯನ್ನು ನೋಡಿ ಲಕ್ಷ್ಮಣನಿಗೆ ಮಿತಿಮೀರಿದ ಕೋಪವುಂಟಾಯಿತು. ಆ ಕೋಪವನ್ನು ತಡೆಯಲಾರದೆ ಬಿಸಿಬಿಸಿಯಾಗಿ ನಿಟ್ಟುಸಿರನ್ನು ಬಿಡುತ್ತಾ ಅವನೂ ಕೆಲವು ಮಾತುಗಳನ್ನಾಡ

ತೊಡಗಿದನು. ರಾಮನ ಕಣ್ಣುಗಳಲ್ಲಿ ನೀರುಬಿದ್ದುದನ್ನು ನೋಡಿದೊಡನೆಯೇ ಲಕ್ಷ್ಮಣನಿಗೆ ಇನ್ನೂ ತಡೆಯಲಾರದಷ್ಟು ಕೋಪವುಂಟಾಯಿತು. ಆಗ ಅವನು ನಿಟ್ಟುಸಿರುಬಿಡುತ್ತ "ಆಹ! ಕೈಕೇಯಿಯ ಅಲ್ಪಬುದ್ಧಿಗೆ ಒಳಗಾದ ರಾಜನು ಯಾವ ಅಪರಾಧಕ್ಕಾಗಿ ರಾಜ್ಯಾರ್ಹನಾದ ಕುಮಾರನನ್ನು ಕಾಡಿಗೆ ಕಳುಹಿಸಿದನು? ಇದು ಕಾರ್ಯವಾಗಲಿ, ಅಕಾರ್ಯವಾಗಲಿ ನಾವಂತೂ ಇದರಿಂದ ಕಷ್ಟಕ್ಕೆ ಸಿಕ್ಕಬೇಕಾಯಿತು. ಪುತ್ರವಿವಾಸನವೆಂಬ ಈ ಮಹಾಘೋರ ಕೃತ್ಯವನ್ನು ರಾಜನು ಲೋಭದಿಂದ ಮಾಡಿದರೇನು? ಅಥವಾ ಕೊಟ್ಟಮಾತನ್ನು ನಡೆಸಬೇಕೆಂಬ ಸತ್ಯಸಂಧತೆಯಿಂದ ಮಾಡಿದರೇನು? ಹೇಗಿದ್ದರೂ ಈಗ ಮಾಡಿದ ಕೆಲಸವಂತೂ ಸರ್ವದಾ ದುಷ್ಕೃತ್ಯವು! ಆದುದಂತೂ ಆಯಿತು! ರಾಜ್ಯಾರ್ಹನಾದ [1] ಹಿರಿಯಮಗನನ್ನು ಕಾಡಿಗೆ ಕಳುಹಿಸುವುದಕ್ಕಿಂತಲೂ ಮಾತಿಗೆ ತಪ್ಪುವುದು ಅನುಚಿತವಾದ ಕೆಲಸವೆಂದು ನನಗೆ ತೋರಲಿಲ್ಲ. ತತ್ವವನ್ನು ವಿಚಾರಿಸಿ ನೋಡಿದರೆ ರಾಜನಾದವನಿಗೆ ಸಮಸ್ತ ವಿಷಯಗಳಲ್ಲಿಯೂ ಸ್ವಾತಂತ್ರ್ಯವುಂಟು. ಆತನು ಆಗಲೇ ಕೈಕೇಯಿಯ ಬಾಯಿಯನ್ನು ಅಡಗಿಸಿಬಿಡಬಹುದಾಗಿತ್ತು. ಇದನ್ನು ಆತನು ಇಷ್ಟಪಟ್ಟೇ ಮಾಡಿರುವನೇ ಹೊರತು, ಸತ್ಯಪರಿಪಾಲನವೆಂಬ ನಿರ್ಬಂಧಕ್ಕಾಗಿ ಮಾಡಿದುದಲ್ಲವೆಂದೇ ತೋರುವುದು. ಅಂತೂ ದೈವಪ್ರೇರಣೆಯು ಹೀಗಿರುವಾಗ ಯಾರೇನು ಮಾಡಬಲ್ಲರು? ರಾಮನನ್ನು ರಾಜ್ಯದಿಂದ ಹೊರಡಿಸುವುದಕ್ಕೆ ಆ ದುರ್ದೈವದ ಪ್ರೇರಣೆಯಲ್ಲದೆ ನನಗೆ ಬೇರೊಂದು ಕಾರಣವೂ ತೋರಲಿಲ್ಲ. ಹಾಗೆ ರಾಜನು ಮನಃಪೂರ್ವಕವಾಗಿಯೇ ಈ ಅಕಾರ್ಯದಲ್ಲಿ ಪ್ರವರ್ತಿಸಿದ್ದರೆ ಆತನ ವಿರಹಕ್ಕಾಗಿ ಹೀಗೆ ಪಶ್ಚಾತ್ತಾಪಪಟ್ಟು ಕೊರಗುವುದೇಕೆಂದು ಶಂಕೆಯುಂಟಾಗಬಹುದು. ರಾಜನಂತೂ ಹಿಂದುಮುಂದನ್ನಾಲೋಚಿಸದೆ ಅಲ್ಪಬುದ್ಧಿಯಿಂದ ಮೊದಲು ಈ ಕೆಲಸವನ್ನು ನಡೆಸಿಬಿಟ್ಟನು. ಅದಕ್ಕೆ ಫಲವಾಗಿ ಈಗ ಸಂಕಟವನ್ನು ಅನುಭವಿಸಬೇಕಾಯಿತು. ನಾನಾದರೋ ಆತನನ್ನು [2] ತಂದೆಯಂತೆಯೇ ಭಾವಿಸಿಲ್ಲ.

---

1 "ನ ತ್ವೇಕಪುತ್ರಂ ದದ್ಯಾನ್ನ ತ್ವೇವ ಜ್ಯೇಷ್ಠಪುತ್ರಂ" ಎಂಬ ಸ್ಮೃತಿವಾಕ್ಯವನ್ನು ದಶರಥನು ಗಮನಿಸಲಿಲ್ಲವೆಂದು ಭಾವವು.

2 "ಗುರೋರಪ್ಯವಲಿಪ್ತಸ್ಯ ಕಾರ್ಯಾಕಾರ್ಯಮಜಾನತಃ । ಉತ್ಪಥಂ ಪ್ರತಿಪನ್ನಸ್ಯ ಪರಿತ್ಯಾಗೋ ವಿಧೀಯತೇ ॥" ಎಂಬ ನೀತಿ ವಚನವನ್ನು ಮನಸ್ಸಿನಲ್ಲಿಟ್ಟು ಲಕ್ಷ್ಮಣನು ಹೀಗೆ ಹೇಳಿದುದಾಗಿ ಗ್ರಹಿಸಬೇಕು.

ಮಕ್ಕಳನ್ನು ಪಡೆದವರಿಗಿರಬೇಕಾದ ಒಂದು ಗುಣವಾದರೂ ಆತನಲ್ಲಿಲ್ಲವೆಂದೇ ನನಗೆ ತೋರಿರುವುದು. ನನಗೆ ಈ ರಾಮನು ಅಣ್ಣನು ಮಾತ್ರವೇ ಅಲ್ಲ. ಈತನೇ ನನಗೆ ತಂದೆಯು, ಈತನೇ ನನಗೆ ರಾಜನು. ಈತನೇ ನನಗೆ ಸಮಸ್ತ ವಿಧವಾದ ಬಂಧುವು. ಸಮಸ್ತ ಜನಗಳಿಗೂ ಪ್ರಿಯನಾಗಿ, ಸಮಸ್ತಲೋಕಕ್ಕೂ ಹಿತವನ್ನೇ ಕೋರುತ್ತಿರುವ ಈ ರಾಮನನ್ನು ತೊರೆದುಬಿಟ್ಟಮೇಲೆ, ಲೋಕದಲ್ಲಿ ಈ ದುಷ್ಕಾರ್ಯವನ್ನು ನೋಡಿ ಯಾರುತಾನೇ ಅವನಲ್ಲಿ ಅನುರಾಗವನ್ನು ತೋರಿಸುವರು? ಲೋಕಾಭಿರಾಮನೆನಿಸಿಕೊಂಡಿರುವ ಧಾರ್ಮಿಕನಾದ ರಾಮನನ್ನು ಕಾಡಿಗೆ ಹೊರಡಿಸುವುದರಿಂದ ಈ ಲೋಕಕ್ಕೇ ಅವನು ವಿರೋಧಿಯಾದನಲ್ಲವೆ? ಇನ್ನು ಅವನನ್ನು ರಾಜನೆಂದು ಯಾರುತಾನೇ ಕರೆಯುವರು?" ಎಂದನು. ಆಗ ಈ ಮಾತುಗಳೆಲ್ಲವನ್ನೂ ಕೇಳುತ್ತಿದ್ದ ಸೀತೆಯಾದರೋ ದುಃಖದಿಂದ ನಿಟ್ಟುಸಿರನ್ನು ಬಿಡುತ್ತ, ಭೂತಾವಿಷ್ಟಳಾದಂತೆ ಕದಲಿದ ಮನಸ್ಸುಳ್ಳವಳಾಗಿ, ಏನೊಂದೂ ತೋರದೆ ಸುಮ್ಮನಿದ್ದಳು. ಅಯ್ಯೋ! ಯಶಸ್ವಿನಿಯಾದ ಆ ರಾಜಕುಮಾರಿಯು ಹಿಂದೆ ಯಾವಾಗಲೂ ವ್ಯಸನವೆಂಬುದನ್ನೇ ಕಂಡವಳಲ್ಲ. ಈಗ ಈ ವ್ಯಸನವನ್ನು ತಡೆಯಲಾರದೆ ರೋದಿಸುವುದಕ್ಕಾರಂಭಿಸಿದಳು. ಯಾವುದೊಂದು ಮಾತನ್ನೂ ಆಡಲಿಲ್ಲ. ಕಂದಿದ ಮುಖದಿಂದ ತನ್ನ ಪತಿಯನ್ನು ನೋಡಿ ನೋಡಿ ದುಃಖಿಸುತ್ತಿದ್ದಳು. ನಾನು ಇತ್ತಲಾಗಿ ಹೊರಟು ಬರುವುದನ್ನು ನೋಡಿ ಇನ್ನೂ ಹೆಚ್ಚಾಗಿ ಕಣ್ಣೀರು ಸುರಿಸಲಾರಂಭಿಸಿದಳು. ಎಲೈ ಮಹಾರಾಜನೇ! ನಾನು ಹೊರಟು ಬರುವಾಗ ಅವರೆಲ್ಲರ ಸಂಕಟವನ್ನೂ ಏನೆಂದು ಹೇಳಲಿ? ಒಂದು ಕಡೆಯಲ್ಲಿ ರಾಮನು ಕಣ್ಣೀರನ್ನು ಬಿಡುತ್ತ ಕೈಮುಗಿದು ನಿಂತು, ನಿನಗೆ ಸಂದೇಶಗಳನ್ನು ಹೇಳುತ್ತಿದ್ದನು. ಲಕ್ಷ್ಮಣನು ಆತನ ದುಃಖೋಪಶಮನಾರ್ಥವಾಗಿ ಆತನನ್ನು ಉಪಚರಿಸುತಿದ್ದನು. ಅತ್ತಲಾಗಿ ಸೀತೆಯು ಬಹಳ ದೈನ್ಯದಿಂದ ಗೋಳಿಡುತ್ತ, ನನ್ನನ್ನೂ, ರಥವನ್ನೂ ನೋಡಿ ಸಂಕಟಪಡುತಿದ್ದಳು. ಈ ಸ್ಥಿತಿಯಲ್ಲಿಯೇ ನಾನು ಇತ್ತಲಾಗಿ ಹೊರಟು ಬಂದುಬಿಟ್ಟೆನು." ಎಂದನು.

ಇದು ಐವತ್ತೆಂಟನೆಯ ಸರ್ಗವು.

ಸುಮಂತ್ರನು ಅಯೋಧ್ಯೆಯಲ್ಲಿ ರಾಮ ವಿಯೋಗದಿಂದುಂಟಾದ ಮಹಾನರ್ಥಗಳನ್ನು ದಶರಥನಿಗೆ ತಿಳಿಸಿದುದು. ಅದನ್ನು ಕೇಳಿ ದಶರಥನು ಮೂರ್ಛಿತನಾದುದು.

[1] (ಮಂತ್ರಿಶ್ರೇಷ್ಠನಾದ ಸುಮಂತ್ರನು ಹೇಳಿದುದನ್ನು ಕೇಳಿ ದಶರಥನು ಪುನಃ ಪುನಃ ಆತನನ್ನು ಕುರಿತು ಮುಂದಿನ ವಿಷಯಗಳನ್ನು ತಿಳಿಸಬೇಕೆಂದು ನಿರ್ಬಂಧಿಸುತಿದ್ದನು. ಆಗ ಸುಮಂತ್ರನು ಕಣ್ಣೀರು ಸುರಿಸುತ್ತ ಅಲ್ಲಿ ನಡೆದ ಉಳಿದ ವೃತ್ತಾಂತಗಳನ್ನೂ ವಿಸ್ತಾರವಾಗಿ ಹೇಳಲಾರಂಭಿಸಿದನು. "ಎಲೆ ಮಹಾರಾಜನೆ! ವೀರರಾದ ನಿನ್ನ ಕುಮಾರರಿಬ್ಬರೂ ಜಡೆಯನ್ನು ಧರಿಸಿ, ನಾರುಮಡಿಯನ್ನುಟ್ಟು, ಗಂಗೆಯನ್ನು ದಾಟಿ ಪ್ರಯಾಣಾಭಿಮುಖರಾಗಿ ಹೊರಟರು. ಮುಂದೆ ಲಕ್ಷ್ಮಣನೂ ನಡುವೆ ಸೀತೆಯೂ, ಅವರಿಬ್ಬರಿಗೂ ಹಿಂದೆ ರಾಮನೂ ಒಬ್ಬರಿಗೊಬ್ಬರು ಬೆಂಬಲವಾಗಿ ದಾರಿನಡೆದು ಹೋಗುತ್ತಿದ್ದರು. ಅವರೆಲ್ಲರೂ ಅತ್ತಲಾಗಿ ಕಣ್ಮರೆಯಾಗಿ ಹೊರಟುಹೋದಮೇಲೆ ಆ ವ್ಯಸನವನ್ನು ತಡೆಯಲಾರದೆ ನಾನೂ ಹಿಂತಿರುಗಿಬಿಟ್ಟೆನು.) ಎಲೈ ರಾಜನೆ! ನನ್ನ ವ್ಯಸನವು ಹಾಗಿರಲಿ; ನನ್ನ ರಥದ ಕುದುರೆಗಳೂ ಕೂಡ ದಾರಿಯಲ್ಲಿ ನಡೆಯಲೊಲ್ಲದೆ ಹೋದುವು. ರಾಮನು ಅತ್ತಲಾಗಿ ಹೊರಟುಹೋದುದನ್ನು ನೋಡಿ ಕುದುರೆಗಳೂ ಕಣ್ಣಿನಲ್ಲಿ ಬಿಸಿಬಿಸಿಯಾಗಿ ನೀರನ್ನು ಬಿಡುತಿದ್ದುವು. ನಾನು ಅಲ್ಲಿಂದ ಹೊರಡುವಾಗ ಆ ರಾಜಕುಮಾರರಿಬ್ಬರಿಗೂ ಕೈಮುಗಿದು ರಥವನ್ನೇರಿ ಹಿಂತಿರುಗಿ, ತಡೆಯಲಾರದ ಆ ಮಹಾವ್ಯಸನವನ್ನೂ ತಡೆದುಕೊಂಡು, ರಾಮನು ಪುನಃ ಒಂದುವೇಳೆ ಸಹಾಯಕ್ಕಾಗಿ ನನ್ನನ್ನು ಕರೆಯುವನೋ ಎಂದು ವ್ಯರ್ಥವಾದ ಒಂದು ಆಶೋತ್ತರವನ್ನಿಟ್ಟುಕೊಂಡು [2] ಬಹು

---

1 ಇದು ಮೊದಲು ನಾಲ್ಕು ಶ್ಲೋಕಗಳು ಮಾತ್ರ, ಗೋವಿಂದರಾಜಾದಿ ವ್ಯಾಖ್ಯಾನಗಳಲ್ಲಿ ಕಾಣುವುದಿಲ್ಲ. ಹಾಗಿದ್ದರೂ ಅನೇಕ ಮಾತೃಕೆಗಳಲ್ಲಿ ಈ ಶ್ಲೋಕಗಳಿರುವುದರಿಂದ, ಅವುಗಳ ಅರ್ಥವನ್ನು ಕುಂಡಲೀಕರಣಚಿಹ್ನದಲ್ಲಿ ಸೇರಿಸಿದೆ.

2 ಇಲ್ಲಿ ಬಹುದಿನಗಳೆಂದರೆ ಮೂರೇದಿವಸಗಳೆಂದು ಕೆಲವರ ಮತವು. ಕ್ರಮವಾಗಿ ದಿನ ಸಂಖ್ಯೆಯನ್ನು ನೋಡಿದರೆ, ಮೊದಲು ಮರದಡಿಯಲ್ಲಿ ಮಲಗಿದ್ದುದೊಂದು ದಿನವು. ಭರದ್ವಾಜಾಶ್ರಮದಲ್ಲಿ ಎರಡನೆಯ ದಿನವನ್ನು ಕಳೆದು ಯಮುನಾತೀರದಲ್ಲಿ ಮೂರನೆಯ

ದಿವಸಗಳವರೆಗೆ ಗುಹನೊಡನೆ ಅಲ್ಲಿಯೇ ನಿಂತಿದ್ದೆನು. ಮಹಾರಾಜನೆ!

ದಿವಸವನ್ನು ಕಳೆದರು. ನಾಲ್ಕನೆಯ ದಿನದಲ್ಲಿ ಚಿತ್ರಕೂಟಪ್ರವೇಶವು. ಐದನೆಯ ದಿನದಲ್ಲಿ ರಾಮಾದಿಗಳನ್ನು ದೋಣಿಯಲ್ಲಿ ಗಂಗಾನದಿಯನ್ನು ದಾಟಿಸುವುದಕ್ಕಾಗಿ ಹೋದ ಗುಹನ ಕಡೆಯವರು ಹಿಂತಿರುಗಿ ಬಂದು ಆ ವೃತ್ತಾಂತವನ್ನು ತಿಳಿಸಿದುದು. ಆಮೇಲೆ ಆರನೆಯ ದಿನದಲ್ಲಿ ಸುಮಂತ್ರನು ಅಯೋಧ್ಯೆಗೆ ಹಿಂತಿರುಗಿದುದು; ಹೀಗೆ ಆರು ದಿನಗಳು ಕಳೆದುಹೋಗಿರುವುವೆಂದು ಗ್ರಹಿಸಬಹುದು. ಅಥವಾ ಎರಡನೆಯ ದಿವಸದಲ್ಲಿಯೇ ಭರದ್ವಾಜಾಶ್ರಮದಲ್ಲಿ ರಾಮನು ಚಿತ್ರಕೂಟಕ್ಕೆ ಹೋಗುವುದಾಗಿ ನಿಶ್ಚಯಿಸಿದುದರಿಂದ, ಅದನ್ನು ತಿಳಿದು ಚಾರರು ಮೂರನೆಯ ದಿವಸವೇ ಬಂದು ಸುಮಂತ್ರನಿಗೆ ತಿಳಿಸಲು, ಆ ಸುಮಂತ್ರನು ಅದಕ್ಕೆ ಮಾರನೆಯ ದಿವಸವೇ ಎಂದರೆ ನಾಲ್ಕನೆಯ ದಿನವೇ ಅಯೋಧ್ಯೆಗೆ ಹಿಂತಿರುಗಿದನೆಂದು ಗ್ರಹಿಸಿದಪಕ್ಷದಲ್ಲಿ ಅತನು ಗಂಗಾತೀರದಲ್ಲಿ ಮೂರು ದಿನಗಳಿದ್ದಂತೆ ಸಿದ್ಧಿಸುವುದು. ಆದುದರಿಂದ ಇಲ್ಲಿ ಬಹುದಿನಗಳೆಂದರೆ ಮೂರು ದಿನಗಳೆಂದು ಸಿದ್ಧವು. ಆದರೆ ಆ ಸುಮಂತ್ರನಿಗೆ ರಾಮವಿಯೋಗದಿಂದ ಒಂದೊಂದುದಿನವೂ ಕಲ್ಪಪ್ರಾಯವಾಗಿ ಬಹುದೀರ್ಘಕಾಲದಂತೆ ಕಂಡುಬಂದುದರಿಂದ ಇಲ್ಲಿ ಬಹುದಿವಸಗಳೆಂದು ಹೇಳಿದುದಾಗಿ ಗ್ರಹಿಸಬೇಕು. (ಗೋವಿಂದರಾಜೀಯವು)

ಮಹೇಶ್ವರತೀರ್ಥ ವ್ಯಾಖ್ಯಾನುಸಾರವಾಗಿ ಈ ದಿನಸಂಖ್ಯೆಯು ಬೇರೆ ವಿಧವಾಗಿ ನಿರೂಪಿಸಲ್ಪಟ್ಟಿರುವುದು. ಹೇಗೆಂದರೆ, ಸುಮಂತ್ರನು ಸೀತಾರಾಮಲಕ್ಷ್ಮಣರೊಡನೆ ಗಂಗಾತೀರವನ್ನು ಸೇರಿ, ಗುಹನೊಡನೆ ಕಲೆತಿದ್ದುದೊಂದು ದಿನವು; ರಾಮನು ಗಂಗೆಯನ್ನು ದಾಟಿದಮೇಲೆ, ಅಲ್ಲಿದ್ದ ಮರದ ಕೆಳಗಿದ್ದುದೊಂದು ದಿನವು; ರಾಮನು ಭರದ್ವಾಜಾಶ್ರಮವನ್ನು ಸೇರಿದ ದಿನದಲ್ಲಿಯೇ ಆ ಆಶ್ರಮದಿಂದ ಹಿಂತಿರುಗಿ ಬಂದನು. ಗುಹನ ಚಾರರು ಬಂದುದೊಂದು ದಿನವು; ಇವೆಲ್ಲವೂ ಸೇರಿ ಮೂರು ದಿನಗಳಾಗುವುವು. ಈ ಮೂರು ದಿನಗಳೇ ಇಲ್ಲಿ ಬಹುದಿನಗಳೆಂದು ಹೇಳಲ್ಪಟ್ಟಿರುವುವು. ರಾಮನು ಭರದ್ವಾಜಾಶ್ರಮವನ್ನು ಸೇರಿದ ಮಾರನೆಯ ದಿವಸದಲ್ಲಿ, ಚಾರರು ಅಲ್ಲಿಂದ ಬಂದು ಸುಮಂತ್ರನಿಗೆ ಅಲ್ಲಿನ ವೃತ್ತಾಂತಗಳನ್ನು ತಿಳಿಸಿದಮೇಲೆ, ಸುಮಂತ್ರನು ಆ ದಿನವೇ ಅಲ್ಲಿಂದ ಹೊರಟು ಮೂರನೆಯ ದಿನದ ಸಾಯಂಕಾಲಕ್ಕೆ ಸರಿಯಾಗಿ ಎಂದರೆ, ಹೊರಟ ದಿನವೂ ಸೇರಿ ಮೂರನೆಯ ದಿನದ ಸಾಯಂಕಾಲಕ್ಕೆ ಅಯೋಧ್ಯೆಯನ್ನು ಸೇರಿರುವನು. ಆದುದರಿಂದಲೇ "ತತಸ್ಸಾಯಾಹ್ನ ಸಮಯೇ ತೃತೀಯೇಽಹನಿ ಸಾರಥಿಃ। ಅಯೋಧ್ಯಾಂ ಸಮನುಪ್ರಾಪ್ಯ ನಿರಾನಂದಾಂ ದದರ್ಶ ಸಃ" ಎಂಬುದಾಗಿ ಅತನು ಮೂರನೆಯ ದಿನದಲ್ಲಿ ಅಯೋಧ್ಯೆಯನ್ನು ಸೇರಿದನೆಂದೇ ಹೇಳಲ್ಪಟ್ಟಿದೆ. ಆದುದರಿಂದ ಮೂರನೆಯ ದಿನವೆಂದರೆ ಶೃಂಗಿಬೇರಪುರದಿಂದ ಹೊರಟ ದಿನದೊಡನೆ ಸೇರಿ ಮೂರನೆಯ ದಿನಕ್ಕೆ ಅಯೋಧ್ಯೆಯನ್ನು ಸೇರಿದನೆಂದು ಗ್ರಹಿಸಬೇಕು. (ಮಹೇಶ್ವರತೀರ್ಥೀಯವು.)

ರಾಮನ ವ್ಯಸನದಿಂದ ಕಂದಿ ನಿನ್ನ ದೇಶದಲ್ಲಿರುವ [1] ಪುಷ್ಪಿತಗಳಾದ ವೃಕ್ಷಗಳೂ ಬಾಡಿಹೋಗಿರುವುವು. ಈ ಶೋಕಾಗ್ನಿಯಿಂದ ಬೆಂದು ನಮ್ಮ ದೇಶದಲ್ಲಿರುವ ಕೆರೆತೊರೆಗಳೆಲ್ಲವೂ ಕುದಿಯುತ್ತಿರುವುವು. ಕಾಡು ಮತ್ತು ತೋಟಗಳಲ್ಲಿರುವ [2] ಹಸುರೆಲೆಗಳೆಲ್ಲವೂ ಒಣಗಿ ಹೋಗಿರುವುವು. ಪ್ರಾಣಿಗಳೆಲ್ಲವೂ ಸಂಚಾರವಿಲ್ಲದೆ ಸ್ತಬ್ಧವಾಗಿರುವುವು. ಕ್ರೂರಮೃಗಗಳೂ ಕೂಡ ವ್ಯಸನಹೊಂದಿ ನಿಂತ ಕಡೆಯಲ್ಲಿಯೇ ನಿಂತಿರುವುವು. ವನಚರಗಳಾದ ಮೃಗಪಕ್ಷಿಗಳೆಲ್ಲವೂ ರಾಮವಿರಹದಿಂದುಂಟಾದ ವ್ಯಸನದಿಂದ ಶಕ್ತಿಗುಂದಿ ಸದ್ದುಮಾಡದಿರುವುವು. ತಾವರೆಕೊಳಗಳೆಲ್ಲವೂ ಕಲಕಿ ಅದರಲ್ಲಿರುವ ಕಮಲದಳಗಳು ಸುಕ್ಕಿಮುಳುಗಿಹೋಗಿರುವುವು. ಜಲಚರ ಪಕ್ಷಿಗಳೆಲ್ಲವೂ ದುಃಖದಿಂದ ಒಳಗೆಯೇ ಅಡಗಿಕೊಂಡಿರುವುವು. ನೀರಿನಲ್ಲಿಯಾಗಲಿ, ನೆಲದಲ್ಲಿಯಾಗಲಿ ಯಾವುದೊಂದು ಪುಷ್ಪಗಳಿಗೂ ಉಲ್ಲಾಸವೇ ಇಲ್ಲವು. ಅವುಗಳಿಗೆ ವಾಸನೆಯೂ ಇಲ್ಲವು. ಹಕ್ಕಿಗಳೆಲ್ಲವೂ ಗೂಡುಗಳಲ್ಲಿ ಅಡಗಿಕೊಂಡಿರುವುದರಿಂದ ಪುರೋದ್ಯಾನಗಳೆಲ್ಲವೂ ಕೇವಲ ಶೂನ್ಯಗಳಾಗಿರುವುವು. ವಿಹಾರೋದ್ಯಾನಗಳೊಂದಾದರೂ ಕಣ್ಣಿಗೆ ಅಂದವನ್ನೇ ಕೊಡುವುದಿಲ್ಲ. ನಾನು ಅಯೋಧ್ಯೆಗೆ ಪ್ರವೇಶಮಾಡಿ ಬಂದಾಗ ಒಬ್ಬರಾದರೂ ಆದರಿಸಲಿಲ್ಲ. ರಾಮನನ್ನು ಕಾಣದುದಕ್ಕಾಗಿ ಜನರೆಲ್ಲರೂ ಬಾರಿಬಾರಿಗೂ ನಿಟ್ಟುಸಿರನ್ನು ಬಿಡುತ್ತಿದ್ದರು. ರಾಮ ಶೂನ್ಯವಾದ ರಾಜರಥವನ್ನು ನೋಡಿ ಪ್ರತಿಯೊಬ್ಬರೂ ಬೀದಿಯಲ್ಲಿ ಕಣ್ಣೀರನ್ನು ಸುರಿಸುತ್ತಾ ಇದ್ದರು. ಪುರಸ್ತ್ರೀಯರೆಲ್ಲರೂ ಉಪ್ಪರಿಗೆಗಳನ್ನೂ ವಿಮಾನಗಳನ್ನೂ ಗೋಪುರಗಳನ್ನೂ

---

1 ಇದಕ್ಕೆ "ಅಪಿ ವೃಕ್ಷಾಃ ಪರಿಮ್ಲಾನಾಃ ಸಪುಷ್ಪಾಂಕುರಕೋರಕಾಃ" ಎಂದು ಮೂಲವು. ವೃಕ್ಷಗಳಿಗೆ ಕಾಲವಶದಿಂದ ಸಸ್ಯರೋಗಗಳು ಬಂದು, ಅವುಗಳಲ್ಲಿ ಒಂದೆರಡು ಭಾಗಗಳು ಮಾತ್ರ ನಿಸ್ಸಾರವಾಗಿ ಒಣಗಿ ಬೀಳುವುದುಂಟು. ಈಗ ರಾಮವಿರಹವ್ಯಸನದಿಂದಲಾದರೋ ಆ ಗಿಡಗಳೆಲ್ಲವೂ ತಮ್ಮ ತಮ್ಮ ಹೂಗಳು, ಮೊಳಕೆಗಳು, ಮೊಗ್ಗುಗಳು, ಮೊದಲಾದ ಸಮಸ್ತಾವಯವಗಳೊಡನೆ ಸಂಪೂರ್ಣವಾಗಿ ಕಂದಿ ಕೆಟ್ಟುಬಿದ್ದುವೆಂದು ಭಾವವು. ಇದರಿಂದ ವೃಕ್ಷಾವಯವಗಳಲ್ಲಿ ಕೂಡ ಕಠಿನ ಮೃದುಭಾಗಗಳೆಂಬ ಭೇದವಿಲ್ಲದೆ ಸಮಸ್ತಭಾಗವೂ ಕೆಟ್ಟುಹೋದುವೆಂದರ್ಥವು.

2 ಇಲ್ಲಿ ಕೆರೆಕಟ್ಟೆಗಳೆಂಬುದರಿಂದ ಗುರುಲಘುತ್ವತಾರತಮ್ಯವಿಲ್ಲದೆ ಸಮಸ್ತವೂ ದುಃಖಾಗ್ನಿಯಿಂದ ಕಾದುಹೋದುವೆಂದು ಭಾವವು ಮತ್ತು ಕಾಡುಗಳು, ತೋಟಗಳು, ಎಂಬಿವೆರಡನ್ನೂ ಹೇಳಿರುವುದರಿಂದ, ದೋಹದಾದಿಗಳೊಂದೂ ಇಲ್ಲದೆ ತಾನಾಗಿಯೇ ಬೆಳೆದು ಕಠಿನಾಕಾರಗಳಾದ ವೃಕ್ಷಗಳೂ, ಎಡೆಬಿಡದೆ ನೀರುಕಟ್ಟಿ ಬೆಳೆಸಿ ಕೋಮಲಾಕಾರವಾದ ಗಿಡಗಳೂ ಇವೆರಡೂ ಏಕರೂಪವಾಗಿಯೇ ಒಣಗಿದುವೆಂದರ್ಥವು.

ಏರಿನಿಂತು, ರಾಮನಿಲ್ಲದ ರಥವನ್ನು ನೋಡಿ ಹಾಹಾಕಾರದಿಂದ ಗಟ್ಟಿಯಾಗಿ ಅಳುವುದಕ್ಕಾರಂಭಿಸಿದರು. ಆ ಸ್ತ್ರೀಯರೆಲ್ಲರೂ ವಿಸ್ತರವಾಗಿಯೂ, ಶುದ್ಧ ವಾಗಿಯೂ ಇರುವ ತಮ್ಮ ಕಣ್ಣುಗಳಲ್ಲಿ ನೀರು ತುಂಬಿಕೊಂಡು, ದುಃಖಿತರಾಗಿ ಒಬ್ಬರನ್ನೊಬ್ಬರು ನೋಡುತ್ತಿದ್ದರು. ಈ ಅಯೋಧ್ಯೆಯಲ್ಲಿ ಯಾರನ್ನು ನೋಡಿದರೂ ರಾಮವಿರಹಕ್ಕಾಗಿ ದುಃಖಿಸುತ್ತಿದ್ದುದರಿಂದ, ಅವರಲ್ಲಿ ನಿನಗೆ ಶತ್ರುಗಳಾರು, ಮಿತ್ರರಾರು, ಉದಾಸೀನರಾರು, ಎಂಬೀ ಭೇದವೇ ನನಗೆ ತಿಳಿಯಲಿಲ್ಲ. ಅಲ್ಲಿದ್ದ ಮನುಷ್ಯರಲ್ಲಿ ಒಬ್ಬರಿಗಾದರೂ ಸಂತೋಷವಿರಲಿಲ್ಲ. ಆನೆ ಕುದುರೆಗಳೆಲ್ಲವೂ ದೈನ್ಯದಿಂದ ಕೊರಗುತಿದ್ದುವು. ಎಲ್ಲಿ ನೋಡಿದರೂ ರೋದನಧ್ವನಿಯೇ ಕೇಳಿಸುತ್ತಿರುವುದು. ಎಲ್ಲಿ ನೋಡಿದರೂ ಹಾಹಾಕಾರ ಧ್ವನಿಗಳೂ, ನಿಟ್ಟುಸಿರಿನ ಶಬ್ದಗಳೂ ತುಂಬಿರುವುವು. ರಾಮನ ಅಗಲಿಕೆಯಿಂದ ವ್ಯಾಕುಲವಾದ ಅಯೋಧ್ಯೆಯಲ್ಲಿ ಎಲ್ಲಿ ನೋಡಿದರೂ ಉಲ್ಲಾಸವೆಂಬುದೇ ಕಾಣುವುದಿಲ್ಲ. ಇದನ್ನು ನೋಡಿದರೆ ಪುತ್ರಹೀನಳಾದವಳು ಕೌಸಲ್ಯೆಯು ಮಾತ್ರವೇ ಅಲ್ಲ. ಮೊತ್ತಕ್ಕೆ ಈ ಅಯೋಧ್ಯಾ ನಗರಿಯೇ ಪುತ್ರಹೀನವಾಗಿ ದುಃಖಿಸುವಂತೆ ನನಗೆ ತೋರಿರುವುದು." ಎಂದನು. ಈ ಮಾತನ್ನು ಕೇಳಿ ದಶರಥನು ದುಃಖದಿಂದ ಕಣ್ಣೀರುಬಿಡುತ್ತ, ಗದ್ಗದ ಸ್ವರವುಳ್ಳವನಾಗಿ, "ಎಲೈ ಸುಮಂತ್ರನೆ! ನಾನೇನು [1] ಮಾಡಲಿ! ಪಾಪಕುಲದಲ್ಲಿ ಹುಟ್ಟಿ, ಪಾಪಬುದ್ಧಿಯುಳ್ಳ ಆ ಕೈಕೇಯಿಯಿಂದ ನಾನು ವಂಚಿತನಾಗಿ ಈ ಅಕಾರ್ಯ ವನ್ನು ಮಾಡಿಬಿಟ್ಟೆನು. ನಾನು ಮೊದಲೇ ಹಿರಿಯರಾದ ಮಂತ್ರಿಗಳೊಡನೆ ಕಲೆತು, ಈ ಕಾರ್ಯಾಲೋಚನೆಯನ್ನು ಮಾಡದೆ ಹೋದೆನು. ಅಥವಾ ನನ್ನ ಶ್ರೇಯಃಕಾಂಕ್ಷಿಗಳಾದ ಮಿತ್ರರೊಡನೆಯಾಗಲಿ ಅಧಿಕಾರಿಗಳೊಡನೆಯಾಗಲಿ, ಪರಿಜನರೊಡನೆಯಾಗಲಿ ಈ ಕಾರ್ಯವನ್ನು ಪರ್ಯಾಲೋಚಿಸದೆ ಅಜ್ಞಾನ

[1] ಇದುವರೆಗೂ ರಾಮನ ಸರ್ವಾತ್ಮತ್ವವನ್ನು ಕವಿಯು ವಸ್ತು ಧ್ವನಿಯಿಂದ ಸೂಚಿಸಿದುದಾಗಿ ತಿಳಿಯಬೇಕು. ದಶರಥನು ಕೇಳಿದ ಪ್ರಶ್ನೆಗೆ ಮಾತ್ರ ಸುಮಂತ್ರನು ಉತ್ತರವನ್ನು ಹೇಳಿ, ಅಷ್ಟರಲ್ಲಿಯೇ ನಿಲ್ಲದೆ, ರಾಜ್ಯದಲ್ಲಿಯೂ, ಮನುಷ್ಯಾದಿಗಳಲ್ಲಿಯೂ ಉಂಟಾದ ಕ್ಷೋಭವನ್ನು ವಿಶೇಷವಾಗಿ ವಿವರಿಸಿ ಹೇಳುತಿದ್ದುದನ್ನು ಕೇಳಿ, ದಶರಥನು ತಾನು ಮಾಡಿದ ಅಕೃತ್ಯವನ್ನು ತಿಳಿಸುವುದಕ್ಕಾಗಿಯೇ ಈ ಮಾತುಗಳನ್ನು ಸುಮಂತ್ರನು ಹೇಳಿರುವನೆಂದು ತಿಳಿದು, ತಾನು ಮಾಡಿದುದು ತಪ್ಪೆಂದು ಒಪ್ಪಿಕೊಳ್ಳುತ್ತ ಈ ಮುಂದಿನ ಉತ್ತರಗಳನ್ನು ಹೇಳುವನು.

ದಿಂದ ರಾಮನನ್ನು ಕಳುಹಿಸಿಬಿಟ್ಟೆನು. ಮುಖ್ಯವಾಗಿ ಸ್ತ್ರೀಮೋಹದಿಂದ ವಂಚಿತನಾಗಿ ಹಿಂದುಮುಂದನ್ನು ವಿಚಾರಿಸದೆ ಈ ಘೋರಕಾರ್ಯವನ್ನು ನಡೆಸಿಬಿಟ್ಟೆನು. ಎಲೆ ಸೂತನೆ! ದೈವಸಂಕಲ್ಪದಿಂದ ನಡೆಯಬೇಕಾದುದನ್ನು ಯಾರಿಂದ ತಾನೇ ತಪ್ಪಿಸುವುದಕ್ಕೆ ಸಾಧ್ಯವು? ಮಹಾಪಾಪಿಯಾದ ನನಗೆ ಈ ದೊಡ್ಡವ್ಯಸನವು ನಿಷ್ಕಾರಣವಾಗಿ ತನ್ನಷ್ಟಕ್ಕೆ ತಾನೇ ಸಂಭವಿಸಿತು. ಈ ವಿಪರೀತ ಕಾರ್ಯವೆಲ್ಲವೂ ನನ್ನ ವಂಶಹಾನಿಗೇ ಹೊರತು ಬೇರೆಯಲ್ಲವೆಂದೇ ನನಗೆ ತೋರಿರುವುದು. ಅದೆಲ್ಲವೂ ಹಾಗಿರಲಿ! ಎಲೈ ಸೂತನೆ! ನೀನು ನನ್ನಿಂದ ಹಿಂದೆ ಏನಾದರೂ ಉಪಕಾರವನ್ನು ಪಡೆದಿದ್ದರೆ, ಆ ಕೃತಜ್ಞತೆಯನ್ನಿಟ್ಟುಕೊಂಡು, ಈಗಲೇ ನನ್ನನ್ನು ರಾಮನಿರುವ ಸ್ಥಳಕ್ಕೆ ಕರೆದುಕೊಂಡು ಹೋಗಿ ಸೇರಿಸಿಬಿಡು! ಉತ್ಕ್ರಾಂತಿದಶೆಯಲ್ಲಿರುವ ನನ್ನ ಪ್ರಾಣಗಳೇ ಈಗ ನನ್ನನ್ನು ತ್ವರೆಪಡಿಸುತ್ತಿರುವುವು. ಈಗಲೂ ನನ್ನ ಆಜ್ಞೆಯು ನಡೆಯಬಹುದಾಗಿ ನಿನಗೆ ತೋರಿದ್ದರೆ, ರಾಮನನ್ನು ಹಿಂತಿರುಗಿಸಿ ಇಲ್ಲಿಗೆ ಕರೆದುಕೊಂಡು ಬಾ! ರಾಮನನ್ನು ಬಿಟ್ಟು ಇನ್ನು ನಿಮಿಷಮಾತ್ರವಾದರೂ ನಾನು ಬದುಕಿರಲಾರೆನು. ಒಂದುವೇಳೆ ಮಹಾಬಾಹುವಾದ ಆ ರಾಮನು ಇಷ್ಟರಲ್ಲಿ ಬಹುದೂರಕ್ಕೆ ಹೊರಟುಹೋಗಿರಬಹುದು. ಅವನನ್ನು ಹಿಂತಿರುಗಿಸಿ ಕರೆತರುವುದಕ್ಕಿಂತಲೂ, ನನ್ನನ್ನೇ ರಥದಮೇಲೇರಿಸಿ ಅಲ್ಲಿಗೆ ಕರೆದುಕೊಂಡು ಹೋಗಿ ರಾಮನಮುಂದೆ ಬಿಡು. ಮೊಲ್ಲೆಯ ಮೊಗ್ಗುಗಳಂತೆ ದುಂಡಾದ ಹಲ್ಲುಗಳುಳ್ಳ ಮಹಾಧನುಷ್ಮಂತನಾದ ಆ ರಾಮನು ಈಗ ಎಲ್ಲಿರುವನೋ? ಆತನನ್ನು ನೋಡುತ್ತಿದ್ದಿದ್ದರೆ ನನ್ನ ಜೀವವು ನನ್ನಲ್ಲಿ ನಿಲ್ಲುವುದೇ ಹೊರತು ಸೀತೆಯೊಡಗೂಡಿದ ಆತನನ್ನು ನೋಡದಿದ್ದರೆ ನನ್ನಪ್ರಾಣವೇ ನನ್ನಲ್ಲಿ ನಿಲ್ಲದು. ತಾವರೆಯಂತೆ ಕೆಂಪಾದ ಕಣ್ಣುಳ್ಳವನಾಗಿ ನೀಡಿದ ಭುಜವುಳ್ಳವನಾಗಿ, ರತ್ನಕುಂಡಲಗಳನ್ನು ಧರಿಸಿದವನಾಗಿರುವ ಆ ರಾಮನನ್ನು ನೋಡದಿದ್ದರೆ ನಾನು ಯಮಪುರಿಗೇ ಹೋಗಬೇಕಾಗುವುದು. ಅಯ್ಯೋ! ಎಲೆ ಸೂತನೆ! ಈ ದುರವಸ್ಥೆಯನ್ನು ನಾನು ಅನುಭವಿಸುತ್ತಿರುವಾಗಲೂ, ಇಕ್ಷ್ವಾಕುವಂಶವರ್ಧನನಾದ ರಾಮನನ್ನು ನೋಡದಿರುವೆನಲ್ಲಾ! ಇದಕ್ಕಿಂತಲೂ ಇನ್ನು ಕಷ್ಟವೇನುಂಟು? ಹಾ ರಾಮಾ! ಹಾ ಲಕ್ಷ್ಮಣಾ! ಹಾ ಸೀತೇ! ನಾನು ಇಲ್ಲಿ ಹೀಗೆ ಅನಾಥನಾಗಿ ದುಃಖದಿಂದ ಸಾಯುತ್ತಿರುವೆನೆಂಬ ವಿಷಯವು ನಿಮಗೆ ತಿಳಿಯುವುದಕ್ಕೂ ಅವಕಾಶವಿಲ್ಲದೇ

ಹೋಯಿತಲ್ಲಾ” ಎಂದು ಮಹಾವ್ಯಸನದಿಂದ ಬುದ್ಧಿಗೆಟ್ಟವನಾಗಿ, ನಾನಾ ವಿಧದಲ್ಲಿ ಪ್ರಲಾಪಿಸುತ್ತಾ, ಕೊನೆಗಾಣದ ದುಃಖಸಮುದ್ರದಲ್ಲಿ ಮುಳುಗಿ, ಸಮೀಪದಲ್ಲಿ ಕೌಸಲ್ಯೆಯನ್ನು ನೋಡಿ “ಎಲೆ ದೇವಿ! ನನಗಾದರೋ ಈಗ ಸಂಭವಿಸಿರುವ ಶೋಕವನ್ನು ಇಷ್ಟಿಷ್ಟೆಂದು ಹೇಳುವುದಕ್ಕೂ ಸಾಧ್ಯವಿಲ್ಲ. ಮಹಾಸಾಗರದಂತೆ ಇದಕ್ಕೆ ಪಾರವೇ ಇಲ್ಲದಿರುವುದು. ಇದೊಂದು ಮಹಾ ಸಮುದ್ರವೆಂಬುದರಲ್ಲಿ ಸಂದೇಹವೇ ಇಲ್ಲ. ರಾಮವಿರಹವೇ ಇದರ ವಿಸ್ತಾರವು. ಸೀತೆಯವಿಷಯವಾದ ದುಃಖವೇ ಅದರ ಪಾರದಂತಿರುವುದು. ನನ್ನ ನಿಟ್ಟು ಸಿರುಗಳೇ ಅಲೆಗಳಾಗಿಯೂ ಸುಳಿಗಳಾಗಿಯೂ ಇರುವುವು. ಈ ಕಣ್ಣೀರುಗಳೇ ಅದರ ನೊರೆಗಳು. ಈ ನನ್ನ ಬಾಹುವಿಕ್ಷೇಪಗಳೇ ಅದರಲ್ಲಿ ಸಂಚರಿಸತಕ್ಕ ಮೀನುಗಳು, ನನ್ನ ರೋದನಧ್ವನಿಯೇ ಅದರ ಮಹಾಘೋಷವು. ಈ ನನ್ನ ಬಿಚ್ಚಿದ ತಲೆಕೂದಲುಗಳೇ ಅದರ ಪಾಚಿಯು. ಕೈಕೇಯಿಯೇ ಇದರೊಳಗಿನ ಬಡಬಾಗ್ನಿಯು, ಆ ಕುಬ್ಜೆಯ ವಾಕ್ಯವೇ ಇದರೊಳಗಿನ ಮಹಾಕ್ರೂರವಾದ ಮೊಸಳೆಯು. ಈ ನನ್ನ ಕಣ್ಣೀರೆಂಬ ಅಲೆಗಳ ಹಾರಾಟಕ್ಕೆ ಆ ಮೊಸಳೆಯೇ ಮೂಲವು. ಕೈಕೇಯಿಗೆ ಕೊಟ್ಟವರಗಳೇ ಇದರ ಜಲವೃದ್ಧಿಯು. ರಾಮ ಪ್ರವಾಸನವೇ ಆ ಸಮುದ್ರದ ನೀಳವು. ಇಂತಹ ಶೋಕಸಮುದ್ರದಲ್ಲಿ ನಾನು ಮುಳುಗಿ ಹೋಗುತ್ತಿರುವೆನಲ್ಲಾ! ರಾಮನ ಸಹಾಯವಿಲ್ಲದೆ ಈ ಮಹಾ ಸಮುದ್ರವನ್ನು ದಾಟಲಾರೆನಲ್ಲಾ! ಏನುಮಾಡಲಿ! ಎಲೆ ಕೌಸಲ್ಯೆ! ಇಲ್ಲಿ ನಾನು ಲಕ್ಷ್ಮಣನೊಡಗೂಡಿದ ರಾಮನನ್ನು ನೋಡಬೇಕೆಂದು ಎಷ್ಟುಹಂಬಲಿ ಸಿದರೇನು? ನನಗೆ ಎಂದಿಗೂ ಅದು ದೊರೆಯಲಾರದು. ಇದಕ್ಕಿಂತ ನನಗೆ ಇನ್ನು ಆಗಬೇಕಾದ ಅಮಂಗಳವೇನಿರುವುದು” ಎಂದನು. ರಾಜನು ಹೀಗೆ ಕಿವಿ ಯಿಂದ ಕೇಳಿ ಸಹಿಸುವುದಕ್ಕಾಗದಂತೆ ಪ್ರಲಾಪಿಸುತ್ತಾ, ಹಾಗೆಯೇ ಪ್ರಜ್ಞೆ ತಪ್ಪಿ, ಹಾಸಿಗೆಯ ಮೇಲೆ ಒರಗಿದನು. ರಾಮನನ್ನು ಸ್ಮರಿಸಿಕೊಂಡಹಾಗೆಲ್ಲಾ ಆತನ ದುಃಖವು ಕ್ಷಣಕ್ಷಣಕ್ಕೂ ದ್ವಿಗುಣವಾಗಿ ಹೆಚ್ಚುತ್ತಿತ್ತು. ಹಾಗೆಯೇ ಮೂರ್ಛೆಬಿದ್ದ ದಶರಥನನ್ನು ನೋಡಿ, ಮೊದಲೇ ರಾಮನಲ್ಲಿ ಅಪಾಯಶಂಕೆ ಯಿಂದ ತತ್ತರಿಸುತ್ತಿರುವ ಕೌಸಲ್ಯೆಗೆ ಈಗ ಪತಿಯ ಗತಿಯೇನಾಗುವುದೋ ಎಂದು ಮತ್ತಷ್ಟು ಭಯವುಂಟಾಯಿತು.

ಇದು ಐವತ್ತೊಂಬತ್ತನೆಯ ಸರ್ಗವು.

ಸುಮಂತ್ರನಿಂದ ರಾಮನ ವೃತ್ತಾಂತವನ್ನು ತಿಳಿದು, ಕೌಸಲ್ಯೆಯು ಪ್ರಲಾಪಿಸಿದುದು. ಸುಮಂತ್ರನು ಅವಳನ್ನು ಸಮಾಧಾನಪಡಿಸಿದುದು

ಆಮೇಲೆ ಕೌಸಲ್ಯೆಯು, ಭೂತಮೆಟ್ಟಿದವಳಂತೆ ನಡುಗುತ್ತ, ಬಾರಿ ಬಾರಿಗೂ ಪ್ರಜ್ಞೆತಪ್ಪಿ ಭೂಮಿಯಲ್ಲಿ ಬೀಳುತ್ತಾ, ಮೆಲ್ಲಗೆ ಚೇತರಿಸಿಕೊಂಡು ಸುಮಂತ್ರನನ್ನು ನೋಡಿ, “ಎಲೆ, ಸೂತನೆ!” ಈಗಲೇ ನನ್ನನ್ನು ಸೀತಾರಾಮ ಲಕ್ಷ್ಮಣರಿರುವಸ್ಥಳಕ್ಕೆ ಕರೆದುಕೊಂಡು ಹೋಗು! ಅವರನ್ನು ಬಿಟ್ಟು ನಾನು ಕ್ಷಣ ಮಾತ್ರವೂ ಇರಲಾರೆನು! ನೀನು ತಂದಿರುವ ರಥವನ್ನು ಹಾಗೆಯೇ ಇತ್ತಲಾಗಿ ತಿರುಗಿಸು! ನನ್ನನ್ನೂ ದಂಡಕಾರಣ್ಯದಲ್ಲಿ ಬಿಟ್ಟುಬಾ! ಹಾಗಿಲ್ಲದಿದ್ದರೆ ಇತ್ತಲಾಗಿ ನಾನೂ ಯಮಪುರಿಗೇ ಹೋಗಬೇಕಾಗಿರುವುದು” ಎಂದಳು. ಧಾರೆ ಧಾರೆಯಾಗಿ ಕಣ್ಣೀರುಸುರಿಸಿ ಹೀಗೆ ಗದ್ಗದಸ್ವರದಿಂದ ಗೋಳಿಡುತ್ತಿರುವ ಆಕೆಯನ್ನು, ಸುಮಂತ್ರನು ವಿನಯದಿಂದ ಕೈಮುಗಿದು ಸಮಾಧಾನಪಡಿಸುತ್ತಾ, “ಎಲೆ ದೇವಿ, ಇದೇನು ಹೀಗೆ ದುಃಖಿಸುವೆ? ಈ ಮೋಹವನ್ನೂ, ಕಳವಳವನ್ನೂ ಬಿಡು. ದುಃಖಿಸಬೇಡ! ರಾಮನು ಕಾಡಿನಲ್ಲಿದ್ದರೂ ಆತನಿಗೆ ಯಾವುದೊಂದು ಕಷ್ಟವೂ ಇಲ್ಲವು. ಲಕ್ಷ್ಮಣನು ಧರ್ಮಜ್ಞನಾದುದರಿಂದ ರಾಮನ ಪಾದಶುಶ್ರೂಷೆ ಯನ್ನು ಮಾಡುತ್ತಿರುವನು. ಆ ಲಕ್ಷ್ಮಣನು ಧರ್ಮಜ್ಞನಾದುದರಿಂದ ರಾಮನ ಪಾದಶುಶ್ರೂಷೆಯೇ ತನಗೆ ಪರಲೋಕಸಾಧನೆಯೆಂದು ತಿಳಿದು, ಜಿತೇಂದ್ರಿಯನಾಗಿ ಎಡೆಬಿಡದೆ ಅದನ್ನು ನಡೆಸುತ್ತಿರುವನು. ನಿರ್ಜನವಾದ ವನದಲ್ಲಿಯೂ ಸೀತೆಯು ಮನೆಯಲ್ಲಿರುವಂತೆಯೇ ಸುಖದಿಂದಿರುವಳು. ವನವಾಸ ದುಃಖವೆಂಬುದು ಆಕೆಗೆ ಸ್ವಲ್ಪವಾದರೂ ಸಂಭವಿಸದು. ಆಕೆಯು ವನವಾಸ ವನ್ನನುಭವಿಸುವುದಕ್ಕೆ ಶಕ್ತಳೆಂದೇ ನನಗೆ ತೋರಿರುವುದು. ನಿರ್ಜನವಾದ ಆ ವನಪ್ರದೇಶಗಳಲ್ಲಿಯೂ ಕೂಡ, ಆ ಸೀತೆಯು ಉದ್ಯಾನವನದಲ್ಲಿರುವಂತೆಯೇ ವಿನೋದದಿಂದಿರುವಳು. ಪೂರ್ಣಚಂದ್ರನಿಗೆ ಸಮಾನವಾದ ಮುಖವುಳ್ಳ ಆಕೆಯು ರಾಮನಲ್ಲಿಯೇ ನಟ್ಟ ಮನಸ್ಸುಳ್ಳವಳಾಗಿರುವುದರಿಂದ ಜನಶೂನ್ಯವಾದ ಅಡವಿ ಯಲ್ಲಿಯೂ, ಮುಗ್ಧೆಯಾದ ಬಾಲಿಕೆಯಂತೆ ಕಷ್ಟವೆಂಬುದನ್ನೇ ತಿಳಿಯದೆ ಕ್ರೀಡಿಸುತ್ತಿರುವಳು. ಆಕೆಯ ಮನಸ್ಸೆಲ್ಲವೂ ಆತನಲ್ಲಿಯೇ ನಟ್ಟುಹೋಗಿರು ವುದು. ಆಕೆಯ ಪ್ರಾಣವೂ ಆತನಲ್ಲಿಯೇ ಅಡಗಿರುವುದು. ರಾಮನಿಲ್ಲದಿದ್ದರೆ

ಈ ಅಯೋಧ್ಯೆಯೂ ಆಕೆಗೆ ಅರಣ್ಯಪ್ರಾಯವಾಗುವುದು. ಅವರು ಪ್ರಯಾಣ ಮಾಡುತ್ತಿರುವಾಗ ದಾರಿಯಲ್ಲಿ ಸೀತೆಯು, ಅಲ್ಲಲ್ಲಿ ಕಾಣುವ ಗ್ರಾಮಗಳನ್ನೂ, ಪಟ್ಟಣಗಳನ್ನೂ, ನದೀಪ್ರವಾಹಗಳನ್ನೂ, ನಾನಾವಿಧ ವೃಕ್ಷಗಳನ್ನೂ ನೋಡಿ, ಅವುಗಳ ವಿಷಯವನ್ನು ಕುರಿತು ರಾಮನನ್ನಾಗಲಿ, ಲಕ್ಷ್ಮಣನನ್ನಾಗಲಿ ವಿಚಾರಿಸುತ್ತಿರುವಳು. ಅವರಿಂದ ಅವುಗಳಲ್ಲಿ ಒಂದೊಂದರ ಹೆಸರನ್ನೂ ಕೇಳಿ ತಿಳಿಯುತ್ತಿರುವಳು. ಮುಖ್ಯವಾಗಿ ಆಕೆಗೆ ಸ್ವಲ್ಪವೂ ಶ್ರಮತೋರದಂತೆ ರಾಮಲಕ್ಷ್ಮಣರಿಬ್ಬರೂ ಅವಳನ್ನು ವಿನೋದಪಡಿಸುತ್ತ ಕರೆದುಕೊಂಡು ಹೋಗುವರು, ಎಲೆ! ದೇವಿ! ಆದರೆ ನಾನು ಇತ್ತಲಾಗಿ ಹೊರಡುವುದಕ್ಕೆ ಸ್ವಲ್ಪಮೊದಲು, ಸೀತೆಯು [1] ಯಾವುದೋ ಒಂದು ಮಾತನ್ನು ಮಾತ್ರ

[1] ಇಲ್ಲಿ "ಇದಮೇವ ಸ್ಮರಾಮ್ಯಸ್ಯಾ ಸಹಸೈವೋಪಜಲ್ಪಿತಂ। ಕೈಕೇಯಿಮಾ ಸಂಶ್ರಿತಂ ವಾಕ್ಯಂ ನೇದಾನೀಂ ಪ್ರತಿಭಾತಿ ಮಾ। ಧ್ವಂಸಯಿತ್ವಾ ತು ತದ್ವಾಕ್ಯಂ ಪ್ರಮಾದಾತ್ಪರ್ಯುಪಸ್ಥಿತಂ। ಹ್ಲಾದನಂ ವಚನಂ ಸೂತೋ ದೇವ್ಯಾ ಮಧುರಮಬ್ರವೀತ್॥" ಎಂದು ಮೂಲವು, ಸುಮಂತ್ರನು ಕಾಡನ್ನು ಬಿಟ್ಟು ಅಯೋಧ್ಯೆಗೆ ಹಿಂತಿರುಗುವಾಗ, ಸೀತೆಯು ಕೈಕೇಯಿಯನ್ನುದ್ದೇಶಿಸಿ ಕ್ರೂರವಾಗಿ ಹೇಳಿದ ಒಂದು ವಾಕ್ಯವನ್ನು, ಕೌಸಲ್ಯೆಯ ಮನಸ್ಸಂತೋಷಾರ್ಥವಾಗಿ ಮೊದಲು ಹೇಳಬೇಕೆಂದೆಣಿಸಿ, ಆಮೇಲೆ ತನ್ನ ಮನಸ್ಸಿನಲ್ಲಿಯೇ ತಾನು ವೃದ್ಧರಾದ ಕೌಸಲ್ಯಾದಶರಥರು ಆ ಮಾತನ್ನು ಕೇಳಿದರೆ ಪ್ರಾಣಬಿಟ್ಟುಬಿಡುವರೆಂದು ಶಂಕಿಸಿ, ಅದನ್ನು ವ್ಯಕ್ತವಾಗಿ ಹೇಳದೆ ಮರೆಸಿಬಿಡುವನು" (ಇದಮೇವ ಸ್ಮರಾಮಿ) ಇಷ್ಟು ಮಾತ್ರವೇ ನನಗೆ ಸ್ಮರಣೆಯಲ್ಲಿರುವುದು (ಕೈಕೇಯಿಮಾಸಂಶ್ರಿತಂ) ಕೈಕೇಯಿಗೆ ಸಂಬಂಧಪಟ್ಟ (ಸಹಸೈವೋಪಜಲ್ಪಿತಂ) ಸೀತೆಯು ಥಟ್ಟನೆ ಹೇಳಿಬಿಟ್ಟ (ವಾಕ್ಯಂ) ವಾಕ್ಯವು. (ಮಾಪ್ರತಿ) ನನಗೆ (ನೇದಾನೀಂ ಭಾತಿ) ಈಗ ಸ್ಮರಣೆಗೆ ಬರಲಿಲ್ಲವು" ಎಂದು ಹೇಳಿ, (ಪ್ರಮಾದಾತ್ಪರ್ಯುಪಸ್ಥಿತಂ) ಪ್ರಮಾದವಶದಿಂದ ತನ್ನ ಬಾಯಿಯಲ್ಲಿ ಹೊರಟುಬಿಟ್ಟ (ತದ್ವಾಕ್ಯಂ) ಆ ಸೀತೆಯ ವಾಕ್ಯವನ್ನು, (ಧ್ವಂಸಯಿತ್ವಾ) ಮರೆಸಿಬಿಟ್ಟು, (ದೇವ್ಯಾಃ) ಆ ಕೌಸಲ್ಯೆಗೆ, (ಹ್ಲಾದನಂ) (ಸಂತೋಷಕರವಾಗಿಯೂ) ಮಧುರಂ, ಇಂಪಾಗಿಯೂ ಇರುವ, (ವಚನಂ) ಮಾತನ್ನು, (ಅಬ್ರವೀತ್) ಹೇಳಿದನು" ಎಂದರ್ಥವು. ಮೊದಲು ಸುಮಂತ್ರನು ಸೀತೆಯು ಕೈಕೇಯಿಯ ವಿಷಯವಾಗಿ ಒಂದೆರಡು ಮಾತುಗಳನ್ನು ಹೇಳಿದಳೆಂದು ಸೂಚಿಸಲಾರಂಭಿಸಿ, ಅದನ್ನು ಮರೆಸಿಬಿಟ್ಟಿರುವನು (ಸಹಸೈವೋಪಜಲ್ಪಿತಂ) "ಥಟ್ಟನೆ ಹೇಳಿಬಿಟ್ಟಳು" ಎಂದು ಹೇಳಿರುವುದರಿಂದ, ಆ ಕಾರಣದಿಂದಲೇ ತನಗೆ ಜ್ಞಾಪಕಕ್ಕೆ ಬರಲಿಲ್ಲವೆಂದೂ ಸೂಚಿಸಿದಂತಾಯಿತು. ಹೀಗಿದ್ದರೂ ಚೆನ್ನಾಗಿ ಜ್ಞಾಪಿಸಿಕೊಂಡು ಹೇಳುವಂತೆ ಅವರು ಪುನಃ ನನ್ನನ್ನು ನಿರ್ಬಂಧಿಸುವರೆಂಬ ಶಂಕೆಯಿಂದ (ಇದಮೇವ ಸ್ಮರಾಮಿ) ಇಷ್ಟು ಮಾತ್ರವೇ ತನಗೆ ಜ್ಞಾಪಕದಲ್ಲಿರುವುದೆಂದು ಹೇಳಿದನು. ಇದರಮೇಲೆ

ಹೇಳಿದುದಾಗಿ ನನಗೆ ಈಗಲೂ ಜ್ಞಾಪಕದಲ್ಲಿರುವುದು. ಆಕೆಯು ಎಂದಿಗೂ ಹಾಗೆ ಹೇಳತಕ್ಕವಳಲ್ಲದಿದ್ದರೂ ಕೈಕೇಯಿಯ ವಿಷಯವಾಗಿ ತಟ್ಟನೆ ಅದೊಂದು ಮಾತನ್ನು ಮಾತ್ರ ಹೇಳಿಬಿಟ್ಟಳು. ಏನು ಹೇಳಿದಳೆಂದು ಈಗ ಚೆನ್ನಾಗಿ

(ಪ್ರಮಾದಾತ್ಪರ್ಯುಪಸ್ಥಿತಂ ತದ್ವಾಕ್ಯಂ ಧ್ವಂಸಯಿತ್ವಾ) ತನ್ನ ಬಾಯಿಯಿಂದ ಆಕಸ್ಮಿಕ ವಾಗಿ ತನಗೂ ತಿಳಿಯದ ಆ ಮಾತುಗಳು ಹೊರಟುಬರುತ್ತಿರುವುದನ್ನು ಕಂಡು, ಅವು ಗಳನ್ನು ಅಷ್ಟರಲ್ಲಿಯೇ ಮರೆಸಿಟ್ಟು (ಹ್ಲಾದನಂ) ಅವರ ಮನಸ್ಸಿಗೆ ಆಪ್ಯಾಯನಕರವಾದ ಬೇರೆ ಮಾತುಗಳನ್ನಾಡಿದನೆಂದು ಭಾವವು. ಆದರೆ ಇಲ್ಲಿ ಸೀತೆಯು ಕೈಕೇಯಿಯ ವಿಷಯ ವಾಗಿ ಹೇಳಿದ ಮಾತುಗಳನ್ನು ಕೇಳಿದರೆ, ಕೌಸಲ್ಯೆಗೆ ಮತ್ತಷ್ಟು ಸಂಕಟವು ಹೆಚ್ಚುವು ದೆಂಬುದೇನೋ ಸಹಜವು. ಅದನ್ನು ಸುಮಂತ್ರನು ಮರೆಸಿದುದೂ ನ್ಯಾಯವಾಗಿಯೇ ಇರಬಹುದು. ಆದರೆ ಆ ಮಾತುಗಳಾವುವು? ಅದು ಈ ವಿಧವಾದುದೆಂದು ತಿಳಿಯುವ ಬಗೆ ಹೇಗೆ? ಅದನ್ನು ತಿಳಿಯುವುದಕ್ಕೆ ಬೇರೆ ಪ್ರಮಾಣವೇನು? ಎಂದು ಶಂಕೆಗೆ ಕಾರಣ ವಾಗುವುದು. ಸಂದರ್ಭವಶದಿಂದ, ಆ ಮಾತನ್ನು ಇಲ್ಲಿ ಮರೆಸಿಟ್ಟರೂ, ಸರ್ವಜ್ಞನಾದ ವಾಲ್ಮೀಕಿಗೆ ನಿಜತತ್ವವು ಚೆನ್ನಾಗಿ ತಿಳಿಯದೇ ಇರದು. ಅದನ್ನು ಬೇರೊಂದು ಸಂದರ್ಭ ವಿಶೇಷದಲ್ಲಿಯಾದರೂ ಸ್ಪಷ್ಟಪಡಿಸದಿದ್ದರೆ ಆತನ ಸರ್ವಜ್ಞತ್ವದಲ್ಲಿಯೇ ಶಂಕೆಯುಂಟಾಗುವ ದಲ್ಲವೆ! ಆ ಮಾತುಗಳು ಯಾವ ಸಂದರ್ಭಗಳಲ್ಲಿಯೂ ಅನಿರ್ವಾಚ್ಯವಾಗಿಯೇ ಇದ್ದ ಪಕ್ಷದಲ್ಲಿ ಅದನ್ನು ಋಷಿಯೂ ಸೂಚಿಸುತ್ತಲೇ ಇರಲಿಲ್ಲವು. ಆದುದರಿಂದ ಈ ವಿಷಯವು ಬೇರೊಂದು ಕಡೆಯಾದರೂ ವ್ಯಕ್ತವಾಗಿ ಹೇಳಲ್ಪಟ್ಟಿರಬೇಕೆಂಬುದೇ ಸಿದ್ಧವು. ಆದಕ್ಕಾ ಗಿಯೇ ಇಲ್ಲಿ ಸೂಕ್ಷ್ಮವಾಗಿ ಹೇಳಿ, ಅಷ್ಟಕ್ಕೆ ಬಿಟ್ಟುಬಿಟ್ಟಿರುವನು. ಅದು ಯಾವ ಸಂದರ್ಭವೆಂಬುದನ್ನು ತಿಳಿಯಬೇಕಲ್ಲವೆ! ಯುದ್ಧಕಾಂಡದಲ್ಲಿ ಸೀತೆಯ ವಿಷಯವನ್ನು ಹೇಳುವಾಗ "ವಿಜಗರ್ಹೇಽತ್ರ ಕೈಕೇಯೀಂ ಕ್ರೋಶಂತೀ ಕುರರೀ ಯಥಾ |" ಕುರರಿಯಂತೆ ಕೂಗಿಡುತ್ತ ಸೀತೆಯು ಈ ವಿಷಯದಲ್ಲಿ ಕೈಕೇಯಿಯನ್ನು ನಿಂದಿಸಿದಳು—ಎಂದಾರಂಭಿಸಿ, "ಸಕಾಮಾ ಭವ ಕೈಕೇಯಿ ಹತೋಽಯಂ ಕುಲನಂದನಃ" ವಂಶಕ್ಕೆ ಆನಂದವರ್ಧಕ ನಾದ ಈ ರಾಮನನ್ನು ಸಂಪೂರ್ಣವಾಗಿ ಕೆಡಿಸಿಬಿಟ್ಟೆ! ಇನ್ನು ನಿನ್ನ ಕೋರಿಕೆಯು ಕೈಗೂಡಿತು! ಎಂದು ಹೇಳಿದುದಾಗಿ ತಿಳಿಸಲ್ಪಟ್ಟಿರುವುದು. ರಾಮನನ್ನು ಕಾಡಿಗೆ ಕಳುಹಿಸಿಬಿಟ್ಟಮಾತ್ರಕ್ಕೆ ಕೈಕೇಯಿಯ ಕೋರಿಕೆಯು ಹೇಗೆ ಈಡೇರಿದಂತಾಯಿತು! ಎಂದರೆ, ರಾಮನನ್ನು ಊರುಬಿಟ್ಟು ಹೊರಡಿಸಿದರೆ ಆತನನ್ನು ಕ್ಷಣಕಾಲವೂ ಆಗಲಿರಲಾರದೆ ಸೀತೆಯೂ ಕಾಡಿಗೆ ಹೊರಡಬೇಕಾಗುವುದು. ಲೋಕೋತ್ತರ ಸೌಂದರ್ಯವುಳ್ಳ ಸೀತೆಯನ್ನು ಕಾಡಿನಲ್ಲಿ ಯಾರಾದರೂ ರಾಕ್ಷಸರು ಅಪಹರಿಸಿಕೊಂಡು ಹೋಗಬಹುದು. ಇದರಿಂದ ಪತ್ನೀ ವಿಯೋಗವನ್ನು ಸಹಿಸಲಾರದೆ ರಾಮನೂ ತಾನಾಗಿಯೇ ಪ್ರಾಣತ್ಯಾಗವನ್ನು ಮಾಡಿಕೊಳ್ಳು ವನು. ಆಗ ರಾಜ್ಯವು ತನ್ನ ಮಗನಿಗೇ ಸ್ಥಿರಪಡುವುದು. ರಾಮನನ್ನು ನಿಶ್ಶೇಷವಾಗಿ ನಾಶಮಾಡದಿದ್ದರೆ ಆತನ ಗುಣಕ್ಕೆ ಪರವಶರಾಗಿರುವ ಪ್ರಜೆಗಳು, ಅವನು ಹಿಂತಿರುಗಿ

ಹೇಳಿದ ಆ ಮಾತನ್ನು ಇಲ್ಲಿ ವ್ಯಕ್ತವಾಗಿ ಹೇಳಿಬಿಟ್ಟರೆ ವೃದ್ಧರಾದ ಕೌಸಲ್ಯಾ ದಶರಥರು ತಮ್ಮ ಪ್ರಾಣದಲ್ಲಿಯೇ ಸಂಪೂರ್ಣವಾದ ನಿರಾಶೆಯನ್ನು ಹೊಂದಿ ಬಿಡುವರೆಂದು ತಿಳಿದು, ಅದನ್ನು ಹಾಗೆಯೇ ಮರೆಸಿಬಿಟ್ಟನು. ಆಮೇಲೆ ಸ್ಮರಣೆಗೆ ಬರಲಿಲ್ಲ" ಎಂದು ಆ ಸುಮಂತ್ರನು ಸೀತೆಯು ಪ್ರಮಾದವಶದಿಂದ

ಬಂದಮೇಲೆಯಾದರೂ ಅವನಿಗೆ ವಶರಾಗಿ, ಭರತನನ್ನು ಉದಾಸೀನಮಾಡುವರು. ಆಗ ಇಷ್ಟು ಪ್ರಯತ್ನಪಟ್ಟು ರಾಜ್ಯವನ್ನು ಸಂಪಾದಿಸಿದುದೂ ವಿಫಲವಾಗುವುದು" ಎಂಬ ಬಹುದೂರದೃಷ್ಟಿಯಿಂದಲೇ ಕೈಕೇಯಿಯು ರಾಮನಿಗೆ ಅರಣ್ಯವಾಸವನ್ನು ನಿಯಮಿಸಿರುವ ಳೆಂದೂ, ಹಾಗೆಯೇ ಅದೆಲ್ಲವೂ ಕ್ರಮವಾಗಿ ಕೈಗೂಡಿ ಬಂದು ಅವಳ ಉದ್ದೇಶವು ಕೊನೆ ಸಾಗಿತೆಂದೂ ಸೀತೆಯ ಅಭಿಪ್ರಾಯವು. ಆದುದರಿಂದಲೇ "ಸಕಾಮಾ ಭವ ಕೈಕೇಯಿ ಹತೋಽಯಂ ಕುಲನಂದನಃ" ಎಂದು ಸೀತೆಯು ಹೇಳಿರುವಳು. ಈ ಅಭಿ ಪ್ರಾಯವನ್ನೇ ಅನುಸರಿಸಿ, ರಾಮನೂ ಅರಣ್ಯಕಾಂಡದಲ್ಲಿ "ಕಚ್ಚಿತ್ಸಕಾಮಾ ಕೈಕೇಯೀ ಸುಖಿತಾ ಸಾ ಭವಿಷ್ಯತಿ । ಯಾ ನ ತುಷ್ಯತಿ ರಾಜ್ಯೇನ ಪುತ್ರಾರ್ಥೇ ದೀರ್ಘದರ್ಶಿನೀ ॥ ತನ್ನ ಮಗನ ವಿಷಯದಲ್ಲಿ ಬಹುದೂರ ದೃಷ್ಟಿಯುಳ್ಳವಳಾದುದರಿಂದಲೇ, ಕೈಕೇಯಿಯು ಮಗನಿಗೆ ರಾಜ್ಯವು ಲಭಿಸಿದಮಾತ್ರಕ್ಕೆ ತೃಪ್ತಿಪಡದೆ ನನ್ನನ್ನು ಕಾಡಿಗೆ ಕಳುಹಿಸಿದಳು. ಈಗ ಲಾದರೂ ಅವಳು ಕೃತಾರ್ಥಳಾಗಿರಬಹುದೆ" ಎಂಬುದಾಗಿ ರಾಜ್ಯಪ್ರಾಪ್ತಿಮಾತ್ರದಲ್ಲಿ ತೃಪ್ತಿ ಹೊಂದದೆ ತನ್ನ ವಿನಾಶವನ್ನೂ ಕೋರಿದಳೆಂದು ಹೇಳಿರುವನು. ಹಾಗೆಯೇ ಮತ್ತೊಂದು ಕಡೆಯಲ್ಲಿ ರಾಮನು "ಯದಭಿಷೇಕಮಸ್ಮಾಸು ಪ್ರಿಯಂವರವೃತಂ ಜಯಾತ್ । ಕೈಕೇಯ್ಯಾ-ಸ್ತತ್ಸುಸಂವೃತ್ತಂ ಕ್ಷಿಪ್ರಮದ್ಯೈವ ಲಕ್ಷ್ಮಣ" ಕೈಕೇಯಿಯು ನನ್ನ ವಿಷಯದಲ್ಲಿ ಅಭಿಪ್ರಾಯ ಪಟ್ಟುದು, ಅವಳಿಗೆ ಪ್ರಿಯವಾದುದು, ಅವಳು ವರರೂಪವಾಗಿ ಬೇಡಿದುದು, ಇವೆಲ್ಲವೂ ನಿರ್ವಿಘ್ನವಾಗಿ ಬಹು ಶೀಘ್ರದಲ್ಲಿಯೇ ಅವಳಿಗೆ ಕೈಗೂಡಿತು." ಎಂದು ತನ್ನ ವಿನಾಶವನ್ನು ಕೋರಿಯೇ ಕೈಕೇಯಿಯು ತನ್ನನ್ನು ಕಾಡಿಗೆ ಕಳುಹಿಸುವಂತೆ ವರವನ್ನು ಕೇಳಿರುವಳೆಂಬ ಅಭಿಪ್ರಾಯವನ್ನು ತೋರಿಸಿರುವನು. ಈ ಅಭಿಪ್ರಾಯವೇ ಸೀತೆಗೂ ಉಂಟಾಗಿರುವು ದೆಂದು ಇದರ ಹಿಂದಿನ ಸರ್ಗದ ಕೊನೆಯಲ್ಲಿ ಸುಮಂತ್ರನೂ ಸೂಚಿಸಿರುವನು. ಹೇಗೆಂದರೆ: "ಜಾನಕೀ ತು ಮಹಾರಾಜ ನಿಃಶ್ವಸಂತೀ ಮನಸ್ವಿನೀ । ಭೂತೋಪಹತಚಿತ್ತೇವ ವಿಷ್ಠಿತಾ ವಿಸ್ಮಿತಾ ಸ್ಥಿತಾ ॥ ಅದೃಷ್ಟಪೂರ್ವವ್ಯಸನಾ ರಾಜಪುತ್ರೀ ಯಶಸ್ವಿನೀ । ತೇನ ದುಃಖೇನ ರುದತೀ ನೈವ ಮಾಂ ಕಿಂಚಿದಬ್ರವೀತ್ ॥ ಉದ್ವೀಕ್ಷಮಾಣಾ ಭರ್ತಾರಂ ಮುಖೇನ ಪರಿಶುಷ್ಯತಾ । ಮುಮೋಚ ಸಹಸಾ ಬಾಷ್ಪಂ ಮಾಂ ಪ್ರಯಾಂತಮುದೀಕ್ಷ್ಯ ಸಾ ॥" ಎಲೈ ಮಹಾರಾಜನೆ! ತಪಸ್ವಿನಿಯಾದ ಆ ಸೀತೆಯು ನಿಟ್ಟುಸಿರನ್ನು ಬಿಡುತ್ತ, ಗ್ರಹಾವಿಷ್ಟಳಾದವ ಳಂತೆ ಸ್ತಬ್ಧಳಾಗಿದ್ದಳು. ರಾಜಪುತ್ರಿಯಾದ ಆಕೆಯು ಇದುವರೆಗೆ ಎಂದಿಗೂ ವ್ಯಸನ ವೆಂಬುದನ್ನೇ ಕಂಡವಳಲ್ಲ. ಈಗಲಾದರೋ ಮಹಾಸಂಕಟದಿಂದ ಗೋಳಿಡುತ್ತ, ನನ್ನನ್ನು

ಕೌಸಲ್ಯೆಯ ಮನಸ್ಸಿಗೆ ಸಮಾಧಾನಕರವಾದ ಮಾತುಗಳನ್ನೇ ಆಡಬೇಕೆಂದೆಣಿಸಿ ಪುನಃ ಕೌಸಲ್ಯೆಯನ್ನು ಕುರಿತು “ ಸೀತೆಯು ಬಹುದೂರದವರೆಗೆ ಕಾಲುನಡೆಯಿಂದಲೇ ಪ್ರಯಾಣಮಾಡಿದರೂ, ಎಷ್ಟೇ ಬಿರುಗಾಳಿಯು ಬೀಸುತ್ತಿದ್ದರೂ, ಹುಲಿ ಕರಡಿಗಳು ಮೊದಲಾದ ಎಷ್ಟೇ ಕ್ರೂರಮೃಗಗಳು ಕಣ್ಣಿಗೆ ಬಿದ್ದರೂ, ಎಷ್ಟೇ ಬಿಸಿಲು ಕಾಯುತ್ತಿದ್ದರೂ ಚಂದ್ರಕಿರಣದಂತೆ ನೇತ್ರಾನಂದಕರವಾದ ಆಕೆಯ ದೇಹಕಾಂತಿಯು ಸ್ವಲ್ಪವಾದರೂ ಕುಂದುವುದಿಲ್ಲ. ಅರಳಿದ ಕಮಲದಂತೆಯೂ, ಪೂರ್ಣಚಂದ್ರನಂತೆಯೂ ಪ್ರಕಾಶಿಸುತ್ತಿರುವ ಆಕೆಯ ಮುಖವು ಸ್ವಲ್ಪವಾದರೂ, ಕಳೆಗುಂದುವುದಿಲ್ಲ. ಸ್ವಾಭಾವಿಕವಾಗಿಯೇ ಅರಗಿನ ರಸದಿಂದ ಲೇಪಿಸಲ್ಪಟ್ಟಂತೆ ಕೆಂಪಾಗಿರುವ ಆಕೆಯ ಪಾದಗಳು, ಈಗ ರಾಜಯೋಗ್ಯವಾದ ಅಲಂಕಾರ ಸಂಸ್ಕಾರಗಳೊಂದೂ ಇಲ್ಲದಿದ್ದರೂ, ತಮ್ಮ ನಿಜಸೌಂದರ್ಯವನ್ನು ಬಿಡದೆ ಕಮಲಗಳಂತೆಯೇ ಶೋಭಿಸುತ್ತಿರುವುವು. [2] ಆ ಸೀತೆಯು ಕಾಡಿನಲ್ಲಿ ನಡೆಯುತ್ತಿರುವಾಗಲೂ, ಆಭರಣಗಳಲ್ಲಿ ಆಸೆಯನ್ನು ಬಿಡದೆ, ಕಾಲಂದುಗೆ ಮೊದಲಾದುವುಗಳನ್ನು ಧರಿಸಿ, ಅವುಗಳಿಂದ ಘಲಘಲ ಧ್ವನಿಯುಂಟಾಗುವಂತೆ ಜಗ್ಗಿಸುತ್ತ ವಿಲಾಸದಿಂದಲೇ ನಡೆಯುವಳು. ರಾಮನ ಭುಜಗಳನ್ನವಲಂಬಿಸಿ ವಿಲಾಸದಿಂದ ನಡೆಯುತ್ತಿರುವ ಆಕೆಯು, ಕಾಡಿನಲ್ಲಿ ಆನೆಗಳು, ಹುಲಿಗಳು, ಸಿಂಹಗಳು ಮೊದಲಾದ ಎಷ್ಟೇ ಕ್ರೂರಮೃಗಗಳು ಇದಿರಿಗೆ ಬಂದರೂ,

---

ನೋಡಿ, ಯಾವುದೊಂದು ಮಾತನ್ನೂ ಆಡಲಿಲ್ಲ. ಬಾಡಿದ ಮುಖದಿಂದ ಪತಿಯಾದ ರಾಮನನ್ನು ನೋಡಿ, ಇತ್ತಲಾಗಿ ಪ್ರಯಾಣಸನ್ನದ್ಧನಾದ ನನ್ನನ್ನೂ ನೋಡಿ, ಇದ್ದಕ್ಕಿದ್ದ ಹಾಗೆ ಕಣ್ಣೀರನ್ನು ಸುರಿಸಲಾರಂಭಿಸಿದಳು” ಎಂದು ಹೇಳಿರುವನು. ಇಲ್ಲಿ ರೋದಿಸುವಿಕೆ, ಮಾತಾಡದಿರುವಿಕೆ, ಮುಖಶೋಷಣದಿಂದ ಪತಿಯನ್ನು ನೋಡಿದುದು, ಆಗಾಗ ಸುಮಂತ್ರನನ್ನು ನೋಡಿದುದು, ಕಣ್ಣೀರು ಸುರಿಸಿದುದು ಇವೆಲ್ಲವೂ ಸೀತೆಯಲ್ಲಿ ಉಂಟಾಗಬೇಕಾದರೆ, ಹಿಂದೆ ಹೇಳಿದ ಅಭಿಪ್ರಾಯವೇ ಆಕೆಯ ಮನಸ್ಸಿಗೆ ಬಂದಿರಬೇಕೆಂದು ಸ್ಪಷ್ಟವಾಗಿ ಊಹಿಸಬೇಕಾಗಿದೆ. ಇದರ ಹಿಂದಿನ ಸರ್ಗದಲ್ಲಿ ಸೀತೆಯು ಪ್ರಮಾದವಶದಿಂದ ಹೇಳಿದ ಮಾತೆಂಬುದಕ್ಕಾಗಿ ಹೇಳತೊಡಗಿದ ಆ ಮಾತನ್ನು ವ್ಯಾಜಾಂತರದಿಂದ ಮರೆಸಿದನೆಂದು ಗ್ರಹಿಸಬೇಕು.

2 ಸೀತೆಯು ರಾಮನನ್ನು ಹಿಂಬಾಲಿಸಿ ಹೋಗಬೇಕೆಂಬ ಆತುರದಿಂದ, ದಾರಿ ನಡೆಯುವಾಗ ತೊಡರಿಕೊಳ್ಳುವ ಆಭರಣಗಳನ್ನು ತೆಗೆದು ಬರುತ್ತಿದ್ದರೂ, ಹಿಂದಿನ ವಿಲಾಸವನ್ನು ಬಿಡದೆ ಅವುಗಳ ಘುಲಘುಲಧ್ವನಿಯನ್ನೂ ತೋರಿಸುತ್ತಾ ಹೋಗುವಂತೆ ಕುಲುಕು ನಡೆಯಿಂದಲೇ ಹೋಗುತ್ತಿದ್ದಳೆಂದು ಅರ್ಥಾಂತರವು.

*

ಅವುಗಳನ್ನು ನೋಡಿ ಸ್ವಲ್ಪವಾದರೂ ಅಂಜುವುದಿಲ್ಲ. ಎಲೆ, ಕೌಸಲ್ಯೆ! ಆದುದರಿಂದ ಅವರ ವಿಷಯವಾಗಿ ನೀನು ಸ್ವಲ್ಪವೂ ಚಿಂತಿಸಬೇಕಾದುದಿಲ್ಲ. ನಿಮಗಾಗಿ ಅವರೂ ದುಃಖಿಸುವುದಿಲ್ಲ. ರಾಜನಿಗಾಗಿಯೂ ನೀನು ಚಿಂತಿಸಬೇಕಾದುದಿಲ್ಲ. ಪಿತೃವಚನಪಾಲನರೂಪವಾದ ಈ ರಾಮನ ಚರಿತ್ರವು ಲೋಕದಲ್ಲಿ ಆಚಂದ್ರಾರ್ಕಸ್ಥಾಯಿಯಾಗಿ ಎಲ್ಲರಿಗೂ ಶಾಶ್ವತವಾದ ಕೀರ್ತಿಯನ್ನು ತರುವುದು. ಆದುದರಿಂದ ಇಲ್ಲಿ ಒಬ್ಬರಿಗಾಗಿ ಒಬ್ಬರು ದುಃಖಿಸಬೇಕಾದುದೇ ಇಲ್ಲವು. ಅವರು ಅಲ್ಲಿ ಕಷ್ಟವೆಂಬುದನ್ನೇ ಎಣಿಸದೆ ಸಂತುಷ್ಟಚಿತ್ತರಾಗಿ ಮಹರ್ಷಿಗಳ ಮಾರ್ಗವನ್ನನುಸರಿಸಿ ಫಲಮೂಲಾದಿಗಳನ್ನು ತಿನ್ನುತ್ತಾ ಪಿತೃವಚನಪರಿಪಾಲನವೆಂಬ ಸರ್ವೋತ್ತಮವಾದ ವ್ರತವನ್ನು ನಡೆಸುತ್ತಿರುವರು' ಎಂದನು. ಹೀಗೆ ಸುಮಂತ್ರನು ಕಾಲೋಚಿತವಾದ ಮಾತುಗಳಿಂದ ಕೌಸಲ್ಯೆಯನ್ನು ಅನೇಕವಿಧದಲ್ಲಿ ಸಮಾಧಾನಮಾಡಿ ತಡೆದರೂ, ಪುತ್ರಶೋಕದಿಂದ ಕಂದಿದ ಆಕೆಯು ಸಂಕಟವನ್ನು ತಡೆಯಲಾರದೆ, ಅಪ್ಪಾ! ಮಗೂ!! ರಾಮಾ!!!" ಎಂದು ಎಡೆಬಿಡದೆ ಪ್ರಲಾಪಿಸುತ್ತಲೇ ಇದ್ದಳು!

ಇದು ಅರವತ್ತನೆಯ ಸರ್ಗವು.

ಕೌಸಲ್ಯೆಯು, ರಾಮನನ್ನು ಕಾಡಿಗೆ ಕಳುಹಿಸಿದುದಕ್ಕಾಗಿ ದಶರಥನನ್ನು ಆಕ್ಷೇಪಿಸಿ ಪ್ರಲಾಪಿಸಿದುದು. ಅದನ್ನು ಕೇಳಿ ರಾಜನು ಮೂರ್ಛಿತನಾದುದು.

ಧಾರ್ಮಿಕನಾಗಿಯೂ ಲೋಕರಂಜಕನಾಗಿಯೂ ಇರುವ ರಾಮನು ಕಾಡಿಗೆ ಹೋದುದನ್ನೇ ಆಗಾಗ ಸ್ಮರಿಸಿಕೊಂಡು ಕೌಸಲ್ಯೆಯು ಬಹು ದೀನಸ್ವರದಿಂದ ಗೋಳಿಡುತ್ತ, ಪತಿಯಾದ ದಶರಥನನ್ನು ನೋಡಿ, "ಎಲೈ ಆರ್ಯನೆ! ಮೂರು ಲೋಕಗಳಲ್ಲಿಯೂ ನಿನ್ನ ಕೀರ್ತಿಯು ಪ್ರಸಿದ್ಧಿಹೊಂದಿರುವುದೆಂಬುದರಲ್ಲಿ ಸಂದೇಹವಿಲ್ಲ. ನೀನು ದಯಾಳುವೆಂದೂ, ಉದಾರಿಯೆಂದೂ, ಲೋಕವೆಲ್ಲವೂ ನಿನ್ನನ್ನು ಕೊಂಡಾಡುತ್ತಿರುವುದು. ಹೀಗೆ ಮಹಾಯಶಸ್ವಿಯಾದ ನೀನು ಬಹುಕಾಲದಿಂದ ರಾಜಭೋಗದಲ್ಲಿಯೇ ಸುಖವಾಗಿ ಬಳೆದ ಆ ಮಕ್ಕಳನ್ನು ಸೀತೆಯೊಡನೆ ಕಾಡಿಗೆ ಕಳುಹಿಸಿದೆಯಲ್ಲವೆ? ಅವರು ಈಗ ನಿರ್ಜನವಾದ ಕಾಡಿನಲ್ಲಿ ಸಂಚರಿಸುತ್ತಿರಬೇಕೆಂದರೆ ಆ ಕಷ್ಟವನ್ನು ಹೇಗೆತಾನೇ ಸಹಿಸಬಲ್ಲರು? ಸೀತೆಯಾದರೋ

ಇನ್ನೂ ಚಿಕ್ಕವಯಸ್ಸಿನವಳು. ಬಹು ಕೋಮಲವಾದ ಮೈಯುಳ್ಳವಳು. ಹುಟ್ಟಿದುದು ಮೊದಲು ಸುಖದಲ್ಲಿಯೇ ಬಳೆದವಳು. ಆಕೆಯು ಈಗ ಕಾಡಿನಲ್ಲಿ ಯಾರಿಂದಲೂ ಸಹಿಸಲಾರದ ಬಿಸಿಲು ಮಳೆ ಗಾಳಿಯನ್ನು ಹೇಗೆ ತಾನೇ ತಡೆಯ ಬಲ್ಲಳು? ತೊವ್ವೆ, ಕಿಚ್ಚಡಿ, ಮೊದಲಾದ ವಿಧವಿಧವಾದ ವ್ಯಂಜನಗಳಿಂದ ಕೂಡಿದ ಮೃಷ್ಟಾನ್ನವನ್ನೇ ಯಾವಾಗಲೂ ಭುಜಿಸುತ್ತಿದ್ದ ಆ ವಿಶಾಲಾಕ್ಷಿಯು, ಈಗ ಕಾಡಿನಲ್ಲಿ ಗಡ್ಡೆಗೆಣಸುಗಳನ್ನು ತಿಂದು ಕಾಲವನ್ನು ಕಳೆಯಬೇಕೆಂದರೆ ಹೇಗೆತಾನೇ ಸಾಧ್ಯವು? ಸುಶೀಲೆಯಾದ ಆ ಸೀತೆಯು ಅನವರತವೂ ಮಂಗಳ ಕರಗಳಾದ ಗಾನಧ್ವನಿಗಳನ್ನೂ, ವಾದ್ಯಧ್ವನಿಗಳನ್ನೂ, ಕೇಳಿ ವಿನೋದಿಸು ತ್ತಿದ್ದವಳಲ್ಲವೆ? ಈಗ ಕಾಡಿನಲ್ಲಿ ಮಾಂಸಾಹಾರಿಗಳಾದ ಕ್ರೂರಮೃಗಗಳು ಕರ್ಣಕಠೋರವಾಗಿ ಕೂಗುತ್ತಿರುವ ಗರ್ಜನೆಗಳನ್ನು ಕೇಳಿ ಹೇಗೆತಾನೇ ಸಹಿಸುವಳು? ಇಂದ್ರಧ್ವಜದಂತೆ ಲೋಕಾಭ್ಯುದಯಹೇತುವಾಗಿರುವ ಮಹಾಭುಜನಾದ ರಾಮನು, ಪರಿಘದಂತೆ ಕಠಿನವಾದ ತನ್ನ ತೋಳುಗಳನ್ನೇ ತಲೆದಿಂಬಾಗಿಟ್ಟುಕೊಂಡು ಕಾಡಿನಲ್ಲಿ ಎಲ್ಲಿ ಮಲಗುವನೋ? ತಾವರೆಯೆಸಳಿನಂತೆ ಲೋಕಮೋಹಕವಾದ ವರ್ಣವುಳ್ಳುದಾಗಿಯೂ, ಅಂದವಾದ ಮುಂಗುರುಳುಗಳು ಉಳ್ಳುದಾಗಿಯೂ, ಕಮಲದ ವಾಸನೆಯುಳ್ಳ ವಿಶ್ವಾಸಗಳಿಂದ ಲೋಕಾ ಹ್ಲಾದಕವಾಗಿಯೂ, ಕಮಲದಳದಂತೆ ವಿಸ್ತಾರವಾದ ಕಣ್ಣುಗಳುಳ್ಳು ದಾಗಿಯೂ ಇರುವ ರಾಮನ ಮುಖವನ್ನು ಇನ್ನು ನಾನೆಂದಿಗೆ ನೋಡುವೆನು? ಆ ರಾಮನನ್ನು ಕಣ್ಣೆದಿರಿಗೆ ಕಾಣದಿದ್ದಾಗಲೂ ನನ್ನ ಈ ಹೃದಯವು ಸಹಸ್ರ ಭಾಗವಾಗಿ ಒಡೆದುಹೋಗಿರುವುದನ್ನು ನೋಡಿದರೆ ಇದು ವಜ್ರದಿಂದಲೇ ನಿರ್ಮಿಸಲ್ಪಟ್ಟಿರುವುದೆಂದು ಎಣಿಸಬೇಕಾಗಿದೆ. ಇದರಲ್ಲಿ ಸಂದೇಹವಿಲ್ಲ. ಎಲೈ ವಲ್ಲಭನೆ! ಸುಖಾರ್ಹರಾದ ಮತ್ತು ನನಗೆ ಪ್ರಿಯಬಂಧುಗಳಾದ ಆ ಸೀತಾರಾಮ ಲಕ್ಷ್ಮಣರು ಮೂವರನ್ನೂ ನೀನು ಅನಾದರಿಸಿ ಪಟ್ಟಣದಿಂದ ಹೊರಡಿಸಿ ಕಾಡಿಗಟ್ಟಿದೆಯಲ್ಲಾ! ಹೀಗೆ ನೀನು ಮಾಡಿದುದು ಬಹಳ ಘಾತುಕಕೃತ್ಯವಲ್ಲವೆ? 1 ರಾಮನು ಈ ಹದಿನಾಲ್ಕುವರುಷಗಳನ್ನೂ ಕಾಡಿನಲ್ಲಿಯೇ ಕಳೆದು ಆಮೇಲೆ

---

1 ರಾಮನು ಒಂದುವೇಳೆ ಹದಿನೈದನೆಯ ವರ್ಷದಲ್ಲಿ ಹಿಂತಿರುಗಿ ಇಲ್ಲಿಗೆ ಬಂದರೂ, ಈ ರಾಜ್ಯಕೋಶಾದಿಗಳು ಭರತನಿಂದ ಅನುಭವಿಸಲ್ಪಟ್ಟುದಾದುದರಿಂದ, ಅವುಗಳನ್ನು ಬಿಟ್ಟುಬಿಡುವನೇ ಹೊರತು ಅಂಗೀಕರಿಸಲಾರನೆಂದೂ ಅರ್ಥಾಂತರವು.

ಹಿಂದಿರುಗಿ ಅಯೋಧ್ಯೆಗೆ ಬಂದರೂ, ಆತನಿಗೆ ರಾಜ್ಯವು ಸಿಕ್ಕುವುದೆಂದು ನನಗೆ ತೋರಲಿಲ್ಲ. ಹದಿನಾಲ್ಕುವರ್ಷಗಳವರೆಗೆ ಯಥೇಚ್ಛವಾಗಿ ರಾಜ್ಯಸುಖವನ್ನನು ಭವಿಸಿ ರುಚಿಯನ್ನು ಕಂಡ ಭರತನು, ಕೈಗೆ ಸಿಕ್ಕಿರುವ ರಾಜ್ಯವನ್ನೂ ಬೊಕ್ಕಸವನ್ನೂ ಹಿಂತಿರುಗಿ ಕೊಟ್ಟುಬಿಡುವನೆ? ಎಂದಿಗೂ ಕೊಡಲಾರನು. ಲೋಕದಲ್ಲಿ ಕೆಲವು ಬ್ರಾಹ್ಮಣರು ಶ್ರಾದ್ಧಕಾರ್ಯಗಳನ್ನು ಮಾಡುವಾಗ ನಿಮಂತ್ರಣಕ್ಕೆ ಶ್ರೋತ್ರಿಯರಾದ ಇತರ ಬ್ರಾಹ್ಮಣರನೇಕರು ಸಿಕ್ಕಬಹು ದಾಗಿದ್ದರೂ ತಾವು ಕೊಡತಕ್ಕ ಭೋಜನದಕ್ಷಿಣಾದಿಗಳು ತಮ್ಮ ಕಡೆಯವರಿಗೇ ಸೇರಬೇಕೆಂಬ ದುರುದ್ದೇಶದಿಂದ, ಸತ್ಪಾತ್ರಗಳನ್ನು ಬಿಟ್ಟು ತಮ್ಮ ಬಂಧು ಗಳನ್ನೇ ನಿಮಂತ್ರಣಕ್ಕಿರಿಸುವರು. ಈ ಮುಖ್ಯಭೋಜನವು ನಡೆದುಹೋದ ಮೇಲೆ ಇತರ ಬ್ರಾಹ್ಮಣೋತ್ತಮರನ್ನು ಕರೆದು ಇಷ್ಟಪಙ್ಕ್ತಿಗೆ ನಿಯಮಿಸು ವರು. ಆದರೆ, ಗುಣವಂತರಾಗಿಯೂ, ವಿದ್ವಾಂಸರಾಗಿಯೂ ದೇವಸಮಾನ ರಾಗಿಯೂ, ಇರುವ ಬ್ರಾಹ್ಮಣೋತ್ತಮರು ಮೊದಲು ತಮ್ಮನ್ನು ಬಿಟ್ಟು ಅಪಾತ್ರಗಳಿಗೆ ಶ್ರಾದ್ಧಭೋಜನವನ್ನು ಮಾಡಿಸಿದ ಕಡೆಗಳಲ್ಲಿ ಇಷ್ಟಪಙ್ಕ್ತಿ ಭೋಜನಗಳಿಗೆ ಎಂದಿಗೂ ಸಮ್ಮತಿಸಲಾರರು. ಅಲ್ಲಿ ತಮಗೆ ಅಮೃತವೇ ಸಿಕ್ಕಿದರೂ ಆದರಿಸಲಾರರು. ಮೊದಲು ಶ್ರಾದ್ಧಭೋಜನವನ್ನು ಮಾಡಿದವರೂ ತಮ್ಮಂತೆ ಜಾತಿಯಲ್ಲಿ ಬ್ರಾಹ್ಮಣರೇ ಆಗಿದ್ದರೂ, ಪ್ರಾಜ್ಞರಾದವರು ಆ ಅನ್ನ ಶೇಷವನ್ನು ಭುಜಿಸುವುದಕ್ಕೆ ಸಮ್ಮತಿಸರು. ಎತ್ತುಗಳಿಗೆ ಕೊಂಬುಗಳನ್ನು ಕಡಿದು ಹಾಕಿದರೆ ಅವು ಹೇಗೆ ಸಹಿಸಲಾರವೋ, ಹಾಗೆ, ಮೊದಲು ತಮ್ಮನ್ನು ಬಿಟ್ಟುದೇ ತಮಗೊಂದು ದೊಡ್ಡ ಅವಮಾನವೆಂದೆಣಿಸುವರು. (ಲೋಕದಲ್ಲಿ ಇತರ ಪಶು ಗಳು ಮೇದ ಗರಿಕೆಯನ್ನು ಎತ್ತುಗಳು ಹೇಗೆ ಮೇಯಲಾರವೊ ಹಾಗೆ ಉತ್ತಮ ಬ್ರಾಹ್ಮಣರಾದವರು ಭುಕ್ತಶೇಷವಾದುದನ್ನು ಎಂದಿಗೂ ಭುಜಿಸಲಾರರು) ಹೀಗೆಯೇ, ತನಗಿಂತಲೂ ಕನಿಷ್ಠನಾದ ಭರತನು ಅದುವರೆಗೂ ಅನುಭವಿಸಿ ಭುಕ್ತ ಶೇಷವಾದ ರಾಜ್ಯವನ್ನು ಗುಣಗಳಲ್ಲಿಯೂ, ವಯಸ್ಸಿನಲ್ಲಿಯೂ ಹಿರಿಯನಾದ ರಾಮನು ಹೇಗೆ ತಾನೇ ನಿರಾಕರಿಸದಿರುವನು? ಕ್ರೂರಸ್ವಭಾವವುಳ್ಳ ಹುಲಿಯೂ ಕೂಡ ಇತರ ಮೃಗಗಳು ತಿಂದುಳಿಸಿದ ಆಹಾರವನ್ನು ತಿನ್ನುವುದಕ್ಕಿಷ್ಟ ಪಡಲಾರದು. ಹೀಗಿರುವಾಗ ಪುರುಷಶ್ರೇಷ್ಠನಾದ ರಾಮನು ಇತರರು ಅನುಭವಿಸಿ ಬಿಟ್ಟುದನ್ನು ಹೇಗೆತಾನೇ ಆದರಿಸುವನು? ಹವಿಸ್ಸು ಆಜ್ಯ

ಗಳು, ಪುರೋಡಾಶಗಳು, ದರ್ಭೆಗಳು, ಯೂಪಸ್ತಂಭಗಳು, ಇವೇ ಮೊದಲಾದ ಯಜ್ಞಸಾಮಗ್ರಿಗಳನ್ನು ಒಂದು ಯಾಗದಲ್ಲಿ ಉಪಯೋಗಿಸಿಬಿಟ್ಟಮೇಲೆ, ಅವು ಮತ್ತೊಂದು ಯಾಗಕ್ಕೆ ಉಪಯೋಗಪಡುವುವೆ! ಹಾಗೆಯೇ ರಾಮನಿಗೆ ನೀನು ಪುನಃ ಈ ರಾಜ್ಯವನ್ನು ಒಪ್ಪಿಸಿದರೂ ಸಾರವನ್ನು ಹೀರಿಬಿಟ್ಟ ಮದ್ಯ ದಂತೆಯೂ, ಇತರರಿಂದ ಸೋಮಪಾನಮಾಡಲ್ಪಟ್ಟ ಯಜ್ಞದಂತೆಯೂ, ಈ ರಾಜ್ಯವು ಆತನಿಗೆ ಎಂದಿಗೂ ರುಚಿಸಲಾರದು. ರಾಮನು ಇಲ್ಲಿಂದ ಭಯ ಪಟ್ಟು ಹೋದವನಲ್ಲ. ಆತನು ಕೋಪಿಸಿದ್ದರೆ ಮಾತ್ರ ಈ ತಿರಸ್ಕಾರವನ್ನು ಎಂದಿಗೂ ಅನುಭವಿಸುತ್ತಿರಲಿಲ್ಲ. ಆತನಿಗೆ ಕೋಪವುಂಟಾದರೆ ತನ್ನ ತೀಕ್ಷ್ಣ ವಾದ ಬಾಣಗಳಿಂದ ಮಂದರಪರ್ವತವನ್ನಾದರೂ ಭೇದಿಸಬಲ್ಲನು. ಎಲೆ ರಾಜನೆ! ನಿನ್ನಲ್ಲಿ ತಂದೆಯೆಂಬ ಗೌರವವನ್ನಿಟ್ಟು ಈಗಲೂ ನಿನ್ನನ್ನು ಕೊಲ್ಲದೇ ಬಿಟ್ಟಿರುವನೆಂದು ತಿಳಿ! ಆತನಿಗೆ ಕೋಪವುಂಟಾದರೆ ಮಾತ್ರ ಈ ತ್ರೈ ಲೋಕ್ಯವೂ ಇದಿರಾಗಿ ನಿಲ್ಲಲಾರದು. ಸೂರ್ಯಚಂದ್ರಾದಿ ಗ್ರಹಗಳೊಡನೆಯೂ ಅಶ್ವಿನ್ಯಾದಿನಕ್ಷತ್ರಗಳೊಡನೆಯೂ ಕೂಡಿದ ಈ ಆಕಾಶವನ್ನೂ ಕೂಡ ಆತನು ತನ್ನ ಬಾಣಗಳಿಂದ ಪುಡಿಪುಡಿಮಾಡಿ ಕೆಳಕ್ಕೆ ಉದಿರಿಸಿ ಬಿಡಬಲ್ಲನು. ಸ್ವರ್ಗವನ್ನಾ ದರೂ ಭೇದಿಸಬಲ್ಲನು. ನೀನು ತಂದೆಯಾದುದರಿಂದ ನಿನ್ನಲ್ಲಿ ಮಾತ್ರ ಗೌರವ ವನ್ನಿರಿಸಿ ನಿನ್ನನ್ನು ಮೀರಲಾರದಿರುವನು. ಆತನಿಗೆ ಕೋಪವುಂಟಾದರೆ ಸೂರಾರು ಪರ್ವತಗಳಿಂದ ಕೂಡಿದ ಈ ಭೂಮಂಡಲವನ್ನಾದರೂ ತಲೆಕೆಳ ಗಾಗಿ ಮಾಡಿಬಿಡಬಲ್ಲನು. ತಂದೆಯೆಂಬ ಗೌರವದಿಂದಲೇ ನಿನ್ನ ಆಜ್ಞೆಗೆ ಬದ್ಧ ನಾಗಿ ನಿಂತಿರುವನು. ಹುಲಿಯು ತನ್ನ ಬಾಲವನ್ನು ಮುಟ್ಟಿದರೂ ಹೇಗೆ ಸಹಿಸ ಲಾರದೋ, ಹಾಗೆ ರಾಮನು ಸ್ವಲ್ಪವಾದ ಅವಮಾನವನ್ನು ಸಹಿಸುವನೆ? ಮೂರುಲೋಕಗಳೂ ಒಟ್ಟುಗೂಡಿ ಬಂದು ಯುದ್ಧಕ್ಕೆನಿಂತು ಆತನನ್ನಿದಿರಿಸಿ ದರೂ ಅಂಜತಕ್ಕವನಲ್ಲ. ಆತನು ಪೌರುಷವಿಲ್ಲದುದಕ್ಕಾಗಿ ಹೀಗೆ ಸುಮ್ಮನಿರುವ ನೆಂದು ತಿಳಿಯಬೇಡ! ಅವನು ಧರ್ಮಾತ್ಮನಾದುದರಿಂದ, ಅಧರ್ಮದಲ್ಲಿ ಪ್ರವರ್ತಿಸುವ ಈ ಲೋಕಕ್ಕೆ ಧರ್ಮಮಾರ್ಗವನ್ನು ತೋರಿಸಿಕೊಡುವುದಕ್ಕಾಗಿ, ಧರ್ಮವನ್ನೇ ಅನುಸರಿಸಿ ಕಾಡಿಗೆ ಹೊರಟುಹೋದನು. ಎಲೈ ಮಹಾರಾಜನೆ! ಮಹಾವೀರ್ಯನಾಗಿಯೂ, ಮಹಾಬಾಹುವಾಗಿಯೂ ಇರುವ ಆ ರಾಮನು ಸಾಮಾನ್ಯನೆಂದು ತಿಳಿಯಬೇಡ! ಮಹಾಪ್ರಳಯವು ಪಂಚಮಹಾಭೂತ

ಗಳನ್ನೂ ಹೆದರಿಸುವಂತೆ ಆತನು ಚಿನ್ನದ ಹಿಡಿಗಳುಳ್ಳ ಅಮೋಘವಾದ ತನ್ನ ಬಾಣಗಳಿಂದ ಸಪ್ತಸಮುದ್ರಗಳನ್ನೂ ನಿಮಿಷಮಾತ್ರದಲ್ಲಿ ತೋಷಿಸಿಬಿಡಬಲ್ಲನು. ಹೀಗೆ ಮಿತಿಯಿಲ್ಲದ ಪರಾಕ್ರಮವುಳ್ಳವನಾಗಿ, ಸಿಂಹಬಲವುಳ್ಳವನಾಗಿ, ವೃಷಭದಂತೆ ವಿಸ್ತಾರವಾದ ಕಣ್ಣುಳ್ಳವನಾಗಿ, ಪುರುಷಶ್ರೇಷ್ಠನೆನಿಸಿಕೊಂಡಿರುವ ಆ ರಾಮನು ನಿನಗಾಗಿಯೇ ಈ ಅವಸ್ಥೆಯನ್ನು ಅನುಭವಿಸುತ್ತಿರುವನು. ಮೀನು ತನ್ನ ಮರಿಯನ್ನೇ ಕೊಲ್ಲುವಂತೆ ನೀನೇ ಆತನನ್ನು ಕೆಡಿಸಿದೆ. ಧರ್ಮಪರಾಯಣನಾದ ಪುತ್ರನನ್ನು ನೀನೇ ಕಾಡಿಗೆ ಕಳುಹಿಸಿದೆ! ಬ್ರಾಹ್ಮಣರಿಂದ ಆಚರಿಸಲ್ಪಟ್ಟ ಶಾಸ್ತ್ರವಿಹಿತವಾದ ಸನಾತನಧರ್ಮವನ್ನು ನೀನು ಬಲ್ಲವನಾಗಿದ್ದರೆ, ಹೀಗೆ ಮಾಡುತ್ತಿದ್ದೆಯಾ? ಎಂದಿಗೂ ನೀನು ಈ ದುರ್ಮಾರ್ಗಕ್ಕೆ ಪ್ರವರ್ತಿಸುತ್ತಿರಲಿಲ್ಲ. ಎಲೆ ಆರ್ಯನೆ! [1] ಸ್ತ್ರೀಯರಿಗೆ ಪತಿಯೇ ಪರದೈವವು. ಅವರಿಗೆ ಆತನೇ ಮುಖ್ಯಗತಿಯು, ಮಗನು ಎರಡನೆಯದು. ಮೂರನೆಯದು ಜ್ಞಾತಿಗಳು. ಇವರನ್ನು ಬಿಟ್ಟರೆ ಸ್ವಾತಂತ್ರ್ಯರೂಪವಾದ ನಾಲ್ಕನೆಯ ಗತಿಯು ಅವರಿಗೆ ಈ ಲೋಕದಲ್ಲಿ ಇಲ್ಲವೇ ಇಲ್ಲವು. ಈಗ ನನ್ನ ಪಾಲಿಗೆ ನೀನಂತೂ ಇಲ್ಲದೇ ಹೋದೆ! ಹೊಟ್ಟೆಯಲ್ಲಿ ಹುಟ್ಟಿದ ಮಗನೂ ಕಾಡಿಗೆ ಹೊರಟುಹೋದನು. ನನ್ನ ಬಂಧುವರ್ಗವು ದೂರದೇಶದಲ್ಲಿರುವುದರಿಂದ ನನ್ನ ಭಾಗಕ್ಕೆ ಅವರೂ ಇಲ್ಲವು. ಪತಿಯಾದ ನಿನ್ನನ್ನು ಬಿಟ್ಟು ನಾನು ಸ್ವತಂತ್ರಿಸಿ ಕಾಡಿಗೆ ಹೋಗುವುದಕ್ಕೂ ಇಲ್ಲ. ಸಮಸ್ತವಿಧದಲ್ಲಿಯೂ ನನ್ನನ್ನು ಸಂಪೂರ್ಣವಾಗಿ ಕೆಡಿಸಿಬಿಟ್ಟೆ. ಹೀಗೆ ನಿನ್ನಿಂದ ಕೆಟ್ಟವಳು ನಾನೊಬ್ಬಳೇ ಅಲ್ಲ! ನಿನ್ನಿಂದ ಈ ರಾಜ್ಯವೇ ಕೆಟ್ಟಿತು! ನಿನಗಧೀನವಾದ ಇತರ ರಾಷ್ಟ್ರಗಳೂ ಕೆಟ್ಟವು! ನೀನೂ ಕೆಟ್ಟೆ, ನಿನ್ನ ಮಂತ್ರಿಗಳನ್ನೂ ಕೆಡಿಸಿದೆ! ನನ್ನ ಮಗನನ್ನೂ ಕೆಡಿಸಿದೆ! ಪುರಜನರನ್ನೂ ಕೆಡಿಸಿದೆ! ಮಹಾರಾಜನೆ! ನಮ್ಮ ಪಾಡು ಹೇಗಾದರೇನು? ಮುಖ್ಯವಾಗಿ ನಿನ್ನ ಮುದ್ದು ಮಗನಾದ ಭರತನೂ, ನಿನ್ನ ಮೋಹದ ಹೆಂಡತಿಯಾದ ಕೈಕೇಯಿಯೂ ಸಂತೋಷದಿಂದಿರುವರಲ್ಲವೆ? ಇದಕ್ಕಿಂತ ನಿನಗೆ ಆಗಬೇಕಾದುದೇನು?" ಎಂದಳು. ಹೀಗೆ ಅತಿ ಕ್ರೂರವಾಗಿಯೂ, ಮರ್ಮೋದ್ಘಾಟಕವಾಗಿಯೂ ಇರುವ ಕೌಸಲ್ಯೆಯ ಮಾತನ್ನು ಕೇಳಿ ದಶರಥನು ದುಃಖದಿಂದ ಹಾಗೆಯೇ ಮೂರ್ಛೆ

---

1 "ಪಿತಾ ರಕ್ಷತಿ ಕೌಮಾರೇ ಭರ್ತಾ ರಕ್ಷತಿ ಯೌವನೇ! ವಾರ್ಧಕೇ ತನಯೋ ರಕ್ಷೇನ್ನ ಸ್ತ್ರೀ ಸ್ವಾತಂತ್ರ್ಯಮರ್ಹತಿ ಎಂಬ ನೀತಿ ವಚನವನ್ನು ಇಲ್ಲಿ ಅನುಸಂಧಿಸಬೇಕು.

ಬಿದ್ದನು. ಸ್ವಲ್ಪಹೊತ್ತಿನಮೇಲೆ ಚೇತರಿಸಿಕೊಳ್ಳಲು, ತನಗುಂಟಾದ ಈ ವ್ಯಸನಕ್ಕೆ ಕಾರಣವಾದ ತನ್ನ ಮೊದಲಿನ ದುಷ್ಕೃತ್ಯವು ಆತನ ಸ್ಮರಣೆಗೆ ಬಂದಿತು. ಅದನ್ನು ನೆನಸಿಕೊಂಡು ಮತ್ತಷ್ಟು ದುಃಖಿತನಾಗಿದ್ದನು.

ಇದು ಅರುವತ್ತೊಂದನೆಯ ಅಧ್ಯಾಯವು.

ಮೂರ್ಛೆಹೊಂದಿದ ರಾಜನನ್ನು ಕೌಸಲ್ಯೆಯು ಸಮಾಧಾನಪಡಿಸಿದುದು.
ಕೌಸಲ್ಯೆಯು ತಾನು ಕ್ರೂರವಾಕ್ಯಗಳನ್ನಾಡಿದುದಕ್ಕಾಗಿ
ದಶರಥನ ಮನ್ನಣೆಯನ್ನು ಕೇಳಿದುದು.

ಹೀಗೆ ಕೋಪಗೊಂಡ ಕೌಸಲ್ಯೆಯು ಹೇಳಿದ ಕ್ರೂರವಾಕ್ಯಗಳನ್ನು ಕೇಳಿ ರಾಜನು ಪರಮದುಃಖಿತನಾಗಿ, ಏನೂತೋರದೆ ಚಿಂತಿಸುತಿದ್ದು ಹಾಗೆಯೇ ಕಲಕಿದ ಇಂದ್ರಿಯವುಳ್ಳವನಾಗಿ ಪುನಃ ಪ್ರಜ್ಞೆತಪ್ಪಿದನು. ಬಹುಕಾಲದಮೇಲೆ ಚೇತರಿಸಿಕೊಂಡು ಬಿಸಿಬಿಸಿಯಾದ ನಿಟ್ಟುಸಿರನ್ನು ಬಿಟ್ಟು, ಪಕ್ಕದಲ್ಲಿ ನಿಂತಿದ್ದ ಕೌಸಲ್ಯೆಯನ್ನು ಕಣ್ಣಿಟ್ಟು ನೋಡಿದನು. ಆತನಿಗೆ ಮೇಲೆಮೇಲೆ ವಿಧವಿಧವಾದ ಮನೋವಿಕಾರಗಳುಂಟಾಗಿ, ಈ ನಡುವೆ ತಾನು ಬಹುಕಾಲದ ಹಿಂದೆ ಮಾಡಿದ ದುಷ್ಕಾರ್ಯವೊಂದು ನೆನಪಿಗೆ ಬಂದಿತು. ಶಬ್ದವನ್ನೇ ಗುರಿಹಿಡಿದು ಬಾಣಪ್ರಯೋಗವನ್ನು ಮಾಡತಕ್ಕ ಶಸ್ತ್ರಚಾತುರ್ಯವುಳ್ಳ ತಾನು, ಪೂರ್ವದಲ್ಲಿ ಅಜ್ಞಾನದಿಂದ ಮಾಡಿದ ಆ ಮಹಾ ಘೋರಕೃತ್ಯವು ನೆನಪಿಗೆ ಬಂದಮೇಲೆ, ಆತನ ವ್ಯಸನವು ಮತ್ತಷ್ಟು ಹೆಚ್ಚಿತು. ಆ ಮಹಾ ದುಃಖದಿಂದಲೂ ರಾಮವಿಷಯಕವಾದ ಚಿಂತೆಯಿಂದಲೂ ಬುದ್ಧಿಗೆಟ್ಟವನಾಗಿ, ಒಳಗೊಳಗೆ ಈ ಶೋಕಾಗ್ನಿಗಳಿಂದ ಬೇಯುತ್ತಿದ್ದನು. ಕೊನೆಗೆ ಪಕ್ಕದಲ್ಲಿ ನಿಂತಿದ್ದ ಕೌಸಲ್ಯೆಯನ್ನು ನೋಡಿ ನಡುಗುತ್ತಾ ಕೈಮುಗಿದು, ತಲೆಯನ್ನು ತಗ್ಗಿಸಿಕೊಂಡು, ಅವಳ ಮನ್ನಣೆಯನ್ನು ಬೇಡುವುದಕ್ಕಾಗಿ “ಎಲೆ, ಕೌಸಲ್ಯೆ! ನನ್ನ ತಪ್ಪನ್ನು ಮನ್ನಿಸಬೇಕೆಂದು ಬೇಡುವೆನು. ಇದೋ ಕೈಮುಗಿದು ಪ್ರಾರ್ಥಿಸುವೆನು. ಶತ್ರುಗಳಿಗೂ ನೀನು ಕೇಡನ್ನು ಬಯಸುವವಳಲ್ಲ. ಸಮಸ್ತ ಜನರಲ್ಲಿಯೂ ಬಹಳ ದಯೆಯನ್ನು ತೋರಿಸತಕ್ಕವಳು. ಪತಿವ್ರತಾಧರ್ಮವನ್ನು ನೀನು ಚೆನ್ನಾಗಿ ಬಲ್ಲವಳು. ಲೋಕದಲ್ಲಿ ಗಂಡನು ಗುಣ

ವಂತನಾಗಿದ್ದರೂ, ಅಥವಾ ಗುಣಹೀನನಾಗಿದ್ದರೂ, ಸ್ತ್ರೀಯರಿಗೆ ಆತನೇ ಪ್ರತ್ಯಕ್ಷ ದೈವವಲ್ಲವೆ? ಅದರಲ್ಲಿಯೂ ಧರ್ಮವನ್ನು ಚೆನ್ನಾಗಿ ಪರಾಮರ್ಶಿಸತಕ್ಕ ನಿನ್ನಂತಹ ಕುಲಸ್ತ್ರೀಯರಿಗೆ ಈ ವಿಷಯವನ್ನು ಹೇಳಿ ತಿಳಿಸಬೇಕಾದುದೇನು? ಯಾವಾಗಲೂ ಧರ್ಮರತೆಯಾಗಿ, ಲೋಕದ ನ್ಯೂನಾತಿರೇಕಗಳೆಲ್ಲವನ್ನೂ ಚೆನ್ನಾಗಿ ತಿಳಿದ ನೀನೂ, ಹೀಗೆ ಮೊದಲೇ ದುಃಖಿತನಾದ ನನ್ನನ್ನು ಈ ಕ್ರೂರ ವಾಕ್ಯಗಳಿಂದ ತಿರಸ್ಕರಿಸಬಹುದೆ? ಎಷ್ಟೇ ದುಃಖದಲ್ಲಿದ್ದರೂ ನಿನ್ನಂತಹ ಪತಿವ್ರತೆಯರು ಗಂಡನೊಡನೆ ಈ ವಿಧವಾದ ಅಪ್ರಿಯವಾಕ್ಯಗಳನ್ನಾಡುವುದು ಉಚಿತವಲ್ಲ" ಎಂದನು. ಹೀಗೆ ದೈನ್ಯದಿಂದ ಬೇಡುತ್ತಿರುವ ರಾಜನ ಮಾತನ್ನು ಕೇಳಿ, ದೋಣಿಗಳಿಂದ ನೀರು ಸುರಿಯುವಂತೆ ಆಕೆಯ ಕಣ್ಣಿನಿಂದ ಪಳಪಳನೆ ಬಾಷ್ಪಧಾರೆಯು ಸುರಿಯಿತು. ಆಗ ಆಕೆಯು ಬಹಳವಾಗಿ ರೋದಿಸುತ್ತಾ, ತನ್ನ ಕೈಗಳೆರಡನ್ನೂ ಕಮಲದಮೊಗ್ಗಿನಂತೆ ಜೋಡಿಸಿ ತಲೆಯಮೇಲಿಟ್ಟುಕೊಂಡು, ಧರ್ಮಭಯದಿಂದ ಕೂಡಿದವಳಾಗಿ, ಅತ್ಯಾತುರದಿಂದ ಮಾತುಗಳು ತಡವರಿಸುತ್ತಿರಲು "ಎಲೆ, ಆರ್ಯನೆ! ಪ್ರಸನ್ನನಾಗು. ನಿನಗೆ ಸಾಷ್ಟಾಂಗಪ್ರಣಾಮಮಾಡಿ ಪ್ರಾರ್ಥಿಸುವೆನು. ನೀನು ನನ್ನನ್ನು ದೈನ್ಯದಿಂದ ಯಾಚಿಸಿದ ಮೇಲೆ ನನ್ನ ಬಾಳೇತಕ್ಕೆ? ಇಂತಹ ಮಹಾ ಪಾಪಕ್ಕೆ ನನ್ನನ್ನು ಒಳಗಾಗಿಸಿ ನೀನು ನನ್ನನ್ನು ಕೆಡಿಸಿಬಿಡಬೇಡ. ನಾನು ನಿನಗೆ ದಾಸಿಯಂತಲ್ಲವೆ? ಯಾವ ವಿಧದಲ್ಲಿಯೂ ನೀನು ನನ್ನನ್ನು ಶಿಕ್ಷಿಸುವುದಕ್ಕೆ ಬಾಧ್ಯನಾಗಿರುವೆ! ಶ್ಲಾಘ್ಯಗುಣವುಳ್ಳ ಮತ್ತು ಬುದ್ಧಿಶಾಲಿಯಾದ ಪತಿಯು ತನ್ನಲ್ಲಿ ಯಾಚಿಸುವ ಹಾಗೆ ಯಾವ ಸ್ತ್ರೀಯು ಮಾಡುವಳೋ. ಆಕೆಯು ಹೆಂಗುಸೆನಿಸಿಕೊಳ್ಳುವಳೆ? ಇಂತವರು ಇಹಪರ ಲೋಕಗಳೆರಡಕ್ಕೂ ಬಹಿಷ್ಕೃತರಾದಂತೆಯೇ ಎಣಿಸಬೇಕು. ಎಲೈ ಮಹಾ ವೀರನೆ! ಧರ್ಮಜ್ಞನಾದ ನಿನ್ನ ಧರ್ಮಸಂಕಲ್ಪವನ್ನು ನಾನು ಬಲ್ಲೆನು. ನೀನು ಸತ್ಯವಾದಿಯೆಂಬುದನ್ನೂ ಬಲ್ಲೆನು. ಆದರೆ ಪುತ್ರಶೋಕವೆಂಬುದು ನನಗೆ ಯುಕ್ತಾಯುಕ್ತ ವಿವೇಚನೆಯಿಲ್ಲದಂತೆ ಮಾಡಿತು. ಆ ಸಂಕಟದಿಂದ ಹಿಂದುಮುಂದುನೋಡದೆ ನಾನು ಏನೋ ಹೇಳಿಬಿಟ್ಟೆನು. ಲೋಕದಲ್ಲಿ ದುಃಖವೆಂಬುದು ಮೊದಲು ಧೈರ್ಯವನ್ನು ಕೆಡಿಸುವುದು. ಆ ದುಃಖದಿಂದಲೇ ವಿವೇಕವೂ ಕೆಡುವುದು. ದುಃಖವು ಸಮಸ್ತವನ್ನೂ ಕೆಡಿಸುವುದು. ಮನುಷ್ಯನಿಗೆ ದುಃಖಕ್ಕಿಂತಲೂ ಬೇರೆ ಶತ್ರುವಾದವನು ಒಂದುವೇಳೆ ಕೈಯಿಂದ ಹೊಡೆದರೂ

ಸಹಿಸಬಹುದು. ಈ ದುಃಖದ ಪೆಟ್ಟನ್ನು ಮಾತ್ರ ಎಷ್ಟೇ ಅಲ್ಪವಾಗಿದ್ದರೂ ಸಹಿಸುವುದು ಕಷ್ಟವು. (ಎಲೈ, ವೀರನೆ, ಅಜ್ಞಾನಿಗಳಾದ ನಮ್ಮಂತವರ ವಿಷಯವು ಹಾಗಿರಲಿ! ವಿಶೇಷ ಧರ್ಮಗಳನ್ನು ತಿಳಿದವರಾಗಿ, ವೇದಶಾಸ್ತ್ರಗಳೆಲ್ಲವನ್ನೂ ನಿಸ್ಸಂದೇಹವಾಗಿ ತಿಳಿದಿರತಕ್ಕ ಯತಿಗಳೂ ಕೂಡ ಮನಸ್ಸಿನಲ್ಲಿ ದುಃಖವು ನಾಟಿದಾಗ ವಿವೇಕ ಶೂನ್ಯರಾಗುವರು. ಇನ್ನು ನನ್ನ ಪಾಡೇನು?) ಎಲೈ ಮಹಾರಾಜನೇ. ರಾಮನ ವನವಾಸದಲ್ಲಿ ಈಗ [1] ಐದು ದಿನಗಳು

---

[1] ಇಲ್ಲಿನ ದಿನಸಂಖ್ಯೆಯಲ್ಲಿ ಕೆಲವು ವಿಚಾರಗಳುಂಟು. ತಮಸಾತೀರದಲ್ಲಿ ಮೊದಲನೆಯ ರಾತ್ರಿ, ಗಂಗಾತೀರದಲ್ಲಿ ಎರಡನೆಯದು, ಮರದಡಿಯಲ್ಲಿ ಮೂರನೆಯದು, ಪ್ರಯಾಗದಲ್ಲಿ ನಾಲ್ಕನೆಯದು, ಯಮುನಾತೀರದಲ್ಲಿ ಐದನೆಯದು, ಹೀಗೆ ಐದು ರಾತ್ರಿಗಳು ಕಳೆದಮೇಲೆ ಸುಮಂತ್ರನು ಆರನೆಯ ದಿನದಲ್ಲಿ ರಾಮನ ಚಿತ್ರಕೂಟ ಪ್ರಯಾಣವನ್ನು ತಿಳಿದು, ಅಲ್ಲಿಂದ ಹೊರಟು ಅಂದೇ ಸಾಯಂಕಾಲಕ್ಕೆ ಅಯೋಧ್ಯೆಯನ್ನು ಸೇರಿರುವನು. ಆದುದರಿಂದಲೇ ಇಲ್ಲಿಗೆ ಐದು ರಾತ್ರಿಗಳೆಂದು ಎಣಿಸಲ್ಪಟ್ಟಿರುವುದೆಂದು ಕೆಲವರು ಅಭಿಪ್ರಾಯಪಡುವರು. ಈ ವಿಷಯದಲ್ಲಿ ಬೇರೆ ಕೆಲವರ ಮತವೇನೆಂದರೆ, ಗಂಗೆಯನ್ನು ದಾಟುವವರೆಗೂ ವನವಾಸವೆಂದು ಹೇಳುವುದಕ್ಕಿಲ್ಲವಾದುದರಿಂದ, ಅದನ್ನು ದಾಟಿದಮೇಲೆ, ಕ್ರಮವಾಗಿ ವೃಕ್ಷಮೂಲದಲ್ಲಿಯೂ ಭರದ್ವಾಜಾಶ್ರಮದಲ್ಲಿಯೂ, ಯಮುನಾತೀರದಲ್ಲಿಯೂ, ಚಿತ್ರಕೂಟದಲ್ಲಿಯೂ ಒಂದೊಂದು ರಾತ್ರಿಯಂತೆ ನಾಲ್ಕುರಾತ್ರಿಗಳು ಕಳೆದಿರುವುವು. ಆ ನಾಲ್ಕನೆಯ ರಾತ್ರಿಯಲ್ಲಿಯೇ ಸುಮಂತ್ರನು ಅಲ್ಲಿಂದ ಹಿಂತಿರುಗಿರುವನು. ಐದನೆಯ ರಾತ್ರಿಯಲ್ಲಿ ಕೌಸಲ್ಯೆಯು ಅವನೊಡನೆ ಕಲೆತು ಮಾತಾಡುತ್ತಿರುವಾಗ "ಪಂಚರಾತ್ರೋಽದ್ಯ ಗಣ್ಯತೇ" ಈಗ ಐದನೆಯ ರಾತ್ರಿಯಾಗಿರುವುದೆಂದು ಹೇಳಿದುದಾಗಿ ಗ್ರಹಿಸುವರು. ಗೋವಿಂದರಾಜೀಯ ವ್ಯಾಖ್ಯಾನಾನುಸಾರವಾಗಿ ಇದರ ವ್ಯವಸ್ಥೆಯು ಹೇಗೆಂದರೆ:— ಹಿಂದೆ ೫೪ನೆಯ ಸರ್ಗದಲ್ಲಿ "ಭರದ್ವಾಜಾಭಿಗಮನಂ ಪ್ರಯಾಗೇ ಚ ಸಹಾಸನಂ। ಆಗಿರೇರ್ಗಮನಂ ತೇಷಾಂ ತತ್ರಸ್ಥೈರಭಿಲಕ್ಷಿತಂ॥" ಸೀತಾರಾಮಲಕ್ಷ್ಮಣರು ಭರದ್ವಾಜಾಶ್ರಮಕ್ಕೆ ಹೋದುದನ್ನೂ, ಪ್ರಯಾಗೆಯಲ್ಲಿ ಆ ಭರದ್ವಾಜಮಹರ್ಷಿಯೊಡನೆ ಸೇರಿದ್ದುದನ್ನೂ, ಚಿತ್ರಕೂಟಕ್ಕೆ ಪ್ರಯಾಣಮಾಡಿದುದನ್ನೂ ಗುಹ ಸುಮಂತರಿಬ್ಬರೂ ಅಲ್ಲಿಯೇ ಇದ್ದು ಚಾರನ ಮೂಲಕವಾಗಿ ತಿಳಿದುಕೊಂಡರು ಎಂದು ಹೇಳಲ್ಪಟ್ಟಿರುವುದಲ್ಲವೆ? ರಾಮನು ಅಯೋಧ್ಯೆಯನ್ನು ಬಿಟ್ಟು ಹೊರಟ ಆರನೆಯ ದಿನದಲ್ಲಿ ಚಿತ್ರಕೂಟವನ್ನು ಸೇರಿರುವನು. ಅಲ್ಲಿಂದ ಗುಹನ ಚಾರರು ಏಳನೆಯ ದಿನದಲ್ಲಿಯೋ ಅಥವಾ ಎಂಟನೆಯ ದಿನದಲ್ಲಿಯೋ ಹಿಂತಿರುಗಿ ಶೃಂಗಿಬೇರಪುರಕ್ಕೆ ಬಂದು ಸುಮಂತ್ರನಿಗೆ ರಾಮನ ವೃತ್ತಾಂತವನ್ನು ತಿಳಿಸಿರುವರು. ಸುಮಂತ್ರನು ಆಮೇಲೆ ಅಲ್ಲಿಂದ ಹೊರಟು, "ತತಸ್ಸಾಯಾಹ್ನ ಸಮಯೇ ತೃತೀಯೇಽಹನಿ ಸಾರಥಿಃ। ಅಯೋಧ್ಯಾಂ ಸಮನುಪ್ರಾಪ್ಯ"

ಮಾತ್ರವೇ ಕಳೆದುವು. ದುಃಖದಿಂದ ಬುದ್ಧಿಗೆಟ್ಟಿರುವ ನನಗಾದರೋ ಆ ಐದು ದಿನಗಳೇ ಐದು ವರುಷಗಳಂತೆ ತೋರಿರುವುದು. ಆ ರಾಮನನ್ನು ನೆನಿಸಿಕೊಂಡ ಮಾತ್ರಕ್ಕೆ ನನ್ನ ಮನಸ್ಸಿನಲ್ಲಿ ನದೀವೇಗದಿಂದ ಸಮುದ್ರವು ಉಕ್ಕುವಂತೆ ಸಂಕಟವು ಉಕ್ಕುತ್ತಿರುವುದು." ಎಂದಳು. ಹೀಗೆ ಕೌಸಲ್ಯೆಯು ಹೇಳುತ್ತಿರುವ ಅಪ್ರಿಯವಾಕ್ಯಗಳನ್ನು ದಶರಥನು ಕೇಳುತ್ತಿರುವಾಗಲೇ, ಬಿಸಿಲಿನ ವೇಗವು

ಎಂದು ಹೇಳಲ್ಪಟ್ಟಿರುವುದರಿಂದ, ತಾನು ಹೊರಟ ಮೂರನೆಯ ದಿನದ ಸಾಯಂಕಾಲಕ್ಕೆ ಅಯೋಧ್ಯೆಗೆ ಸೇರಿರುವನು. ಇವೆಲ್ಲವನ್ನೂ ಕೂಡಿಸಿದರೆ ಇದುವರೆಗೆ ಹತ್ತು ದಿನಗಳು ಕಳೆದುಹೋದಂತಾಗುವುದು. ಹೀಗಿರುವಾಗ ಐದು ರಾತ್ರಿಗಳೆಂದು ಹೇಳುವುದು ಹೇಗೆ? ಎಂದು ಶಂಕೆಯುಂಟಾಗುವುದು ಇದಕ್ಕೆ ಸಮಾಧಾನವೇನೆಂದರೆ:—"ಆಗಿರೇರ್ಗಮನಂ" ಎಂಬುದಕ್ಕೆ ಚಿತ್ರಕೂಟಪರ್ವತಕ್ಕೆ ಪ್ರಯಾಣಮಾಡುವವರೆಗೂ ಎಂದು ಅರ್ಥವನ್ನು ಮಾಡದೆ, ಚಿತ್ರಕೂಟಪರ್ವತಕ್ಕೆ ಪ್ರಯಾಣಸನ್ನದ್ಧರಾಗುವವರೆಗೂ ನಡೆದ ವೃತ್ತಾಂತಗಳೆಲ್ಲವನ್ನೂ ಗುಹನ ಚಾರರು ಸುಮಂತ್ರನಿಗೆ ಬಂದು ತಿಳಿಸಿದುವಾಗಿ ಗ್ರಹಿಸಬೇಕು. ರಾಮನು ಚಿತ್ರಕೂಟಕ್ಕೆ ಹೋಗುವುದಾಗಿ ಭರದ್ವಾಜಾಶ್ರಮದಲ್ಲಿಯೇ ನಿಶ್ಚಯಿಸಿದುದನ್ನು ತಿಳಿದು, ಆಗಲೇ ಚಾರರು ಅಲ್ಲಿಂದ ಹಿಂತಿರುಗಿ ಸುಮಂತ್ರನ ಬಳಿಗೆ ಬಂದು ಆ ವಿಷಯವನ್ನು ತಿಳಿಸಿರುವರು. "ತತಸ್ಸಾಯಾಹ್ನಸಮಯೇ ತೃ ತೀ ಯೇ ऽ ಹ ನಿ ಸಾ ರ ಥಿಃ" ಎಂಬಲ್ಲಿ "ತೃತೀಯೇಽಹನಿ" ಎಂಬುದಕ್ಕೂ ಮೂರನೆಯ ದಿನವೆಂದು ಗ್ರಹಿಸಕೂಡದು. ಆ ದಿನದ ಮೂರನೆಯ ಭಾಗವಾದ ಸಾಯಂಕಾಲ ಸಮಯದಲ್ಲಿ ಎಂದು ಅರ್ಥಮಾಡಬೇಕು. ಮತ್ತು ಸುಮಂತ್ರನು ಶೃಂಗಿಬೇರಪುರದಲ್ಲಿ "ದಿವಸಾನ್ ಬಹೂನ್" ಬಹು ದಿವಸಗಳಿದ್ದನೆಂಬುದಕ್ಕೆ ಮೂರು ದಿನಗಳನ್ನು ಮಾತ್ರವೇ ಗ್ರಹಿಸಬೇಕು. ಈ ಮೂರು ದಿನಗಳೊಡನೆ ತಮಸಾನದೀತೀರದಲ್ಲಿದ್ದ ದಿನವೊಂದನ್ನೂ ಸೇರಿಸಿಕೊಂಡರೆ ಆತನು ಅಯೋಧ್ಯೆಯನ್ನು ಬಿಟ್ಟು ನಾಲ್ಕು ದಿನಗಳಾಗುವುವು. ನಾಲ್ಕನೆಯ ದಿನದಲ್ಲಿ ರಾಮನು ಭರದ್ವಾಜಾಶ್ರಮವನ್ನು ಸೇರಿದುದರಿಂದ, ಗುಹನ ಚಾರರು ಅಲ್ಲಿ ರಾಮನ ವೃತ್ತಾಂತವನ್ನು ತಿಳಿದು ಬಂದು ಮಾರನೆಯದಿನವೇ ಸುಮಂತ್ರನಿಗೆ ಅದನ್ನು ತಿಳಿಸಿರುವರು. ಆ ದಿನವೇ ಸುಮಂತ್ರನು ಅಲ್ಲಿಂದ ಹಿಂತಿರುಗಿ, ಆ ದಿನದ ಎಂದರೆ ಐದನೆಯ ದಿನದ ಸಾಯಂಕಾಲಕ್ಕೆ ಸರಿಯಾಗಿ ಬಹುವೇಗದಿಂದ ಅಯೋಧ್ಯೆಗೆ ಬಂದುಬಿಟ್ಟಿರುವನು. ಆ ದಿನ ರಾತ್ರಿಯಲ್ಲಿ ಕೌಸಲ್ಯೆಯೊಡನೆ ಮಾತಾಡತೊಡಗಿದುದರಿಂದ ಅವಳು "ಪಂಚರಾತ್ರೋಽದ್ಯ ಗಣ್ಯತೇ" ಈಗ ಐದನೆಯರಾತ್ರಿಯು ನಡೆಯುತ್ತಿರುವುದು ಎಂದು ಹೇಳಿದುದಾಗಿ ಗ್ರಹಿಸಬೇಕು. (ಇದು ಗೋವಿಂದರಾಜೀಯವು.)

ಇಲ್ಲಿ ಮಹೇಶ್ವರತೀರ್ಥರ ಅಭಿಪ್ರಾಯವೇನೆಂದರೆ, ರಾಮನು ಆರನೆಯ ದಿನದಲ್ಲಿ ಚಿತ್ರಕೂಟವನ್ನು ಸೇರಿದನಲ್ಲವೆ? ಸುಮಂತ್ರನೂ ಆ ದಿನವೇ ಇತ್ತಲಾಗಿ ಅಯೋಧ್ಯೆಯನ್ನು

ಕ್ರಮಕ್ರಮವಾಗಿ ತಗ್ಗುತ್ತಬಂದು, ಅಸ್ತಮಯಸಮಯವಾಯಿತು. ರಾತ್ರಿಯೂ ಸಂಭವಿಸಿತು. ಕೌಸಲ್ಯಾದೇವಿಯ ಸಾಂತ್ವವಾಕ್ಯಗಳಿಂದ ದಶರಥನು ಸಮಾಧಾನಪಡಿಸಲ್ಪಡುತಿದ್ದರೂ, ದುಃಖಪೀಡಿತನಾಗಿಯೇ ಇದ್ದು, ಬಳಲಿಕೆಯಿಂದ ಹಾಗೆಯೇ ಮೈಮರೆತು ನಿದ್ರಿತನಾದನು.

ಇದು ಅರವತ್ತೆರಡನೆಯ ಸರ್ಗವು.

ದಶರಥನು ಪೂರ್ವದಲ್ಲಿ ಸರಯೂತೀರದಲ್ಲಿ ಒಬ್ಬ ಋಷಿ ಕುಮಾರನನ್ನು ತಾನು ಕೊಂದ ವೃತ್ತಾಂತವನ್ನು ಕೌಸಲ್ಯೆಗೆ ಹೇಳಿದುದು.

ಮನಸ್ಸಂಕಟದಿಂದ ದಶರಥನಿಗೆ ಚೆನ್ನಾಗಿ ಮೈಮರೆತು ನಿದ್ರೆಯೂ ಬರಲಿಲ್ಲ. ಒಂದು ಮುಹೂರ್ತಕಾಲದೊಳಗಾಗಿಯೇ ಪುನಃ ಎಚ್ಚರಗೊಂಡು ಕೇವಲ ಚಿಂತಾಪರನಾಗಿಯೇ ಇದ್ದನು. ರಾಕ್ಷಸರ ಕುಲದಲ್ಲಿ ಹುಟ್ಟಿದ ರಾಹುವು ಸೂರ್ಯನನ್ನು ಆವರಿಸುವಂತೆ, ರಾಮಲಕ್ಷ್ಮಣರ ಅಗಲಿಕೆಯಿಂದುಟಾದ ಮಹಾದುಃಖವು ಆತನನ್ನು ಸಂಪೂರ್ಣವಾಗಿ ಆವರಿಸಿಕೊಂಡಿತು. ರಾಮನು

ಸೇರಬೇಕು. ಹೇಗೆಂದರೆ, ರಾಮನು ಅಯೋಧ್ಯೆಯನ್ನು ಬಿಟ್ಟು ನಾಲ್ಕನೆಯ ದಿನಕ್ಕೆ ಭರದ್ವಾಜಾಶ್ರಮವನ್ನು ಸೇರಿರುವನು. ಆ ದಿನವೇ ಚಾರರು ರಾಮನ ವೃತ್ತಾಂತವನ್ನು ತಿಳಿದು ಬಂದು ಸುಮಂತ್ರನಿಗೆ ತಿಳಿಸಲು, ಆ ದಿನವೇ ಸುಮಂತ್ರನೂ ಅಲ್ಲಿಂದ ಹೊರಟು, “ಸಾಯಾಹ್ನಸಮಯೇ ತೃತೀಯೇಽಹನಿ” ಹೊರಟದಿನದೊಡನೆ ಸೇರಿ ಮೂರನೆಯ ದಿನದ ಸಾಯಂಕಾಲಕ್ಕೆ ಎಂದರೆ ಆರನೆಯ ದಿನದ ಸಾಯಂಕಾಲಕ್ಕೆ ಅಯೋಧ್ಯೆಯನ್ನು ಸೇರಿರುವನು. ಇದಕ್ಕೆ ಮೊದಲೇ ಐದು ರಾತ್ರಿಗಳು ಕಳೆದುಹೋಗಿರುವುದರಿಂದ “ಪಂಚ ರಾತ್ರೋऽದ್ಯ ಗಣ್ಯತೇ” ಎಂಬ ಕೌಸಲ್ಯೆಯ ವಾಕ್ಯಕ್ಕೆ ಐದು ರಾತ್ರೆಗಳು ಕಳೆದುಹೋದು ವೆಂದರ್ಥವು (ಮಹೇಶ್ವರತೀರ್ಥರು). ಇಲ್ಲಿ ಮುಖ್ಯವಾಗಿ ಗ್ರಹಿಸಬೇಕಾದ ಸಾರಾಂಶವೇನೆಂದರೆ, “ತತಸ್ಸಾಯಾಹ್ನಸಮಯೇ ತೃತೀಯೇ” ಎಂಬ ವಾಕ್ಯದಲ್ಲಿ. “ತೃತೀಯೇಽಹನಿ” ಎಂಬುದಕ್ಕೆ ಆ ದಿನದ ಮೂರನೆಯ ಭಾಗವೆಂದು ಗೋವಿಂದರಾಜರೂ, ಮೂರನೆಯ ದಿನವೆಂದು ಮಹೇಶ್ವರತೀರ್ಥರೂ ವ್ಯಾಖ್ಯಾನಭೇದಗಳನ್ನು ಮಾಡಿರುವರೆಂದು ತಿಳಿಯಬೇಕು.

ಸೀತಾಸಮೇತನಾಗಿ ಕಾಡಿಗೆ ಹೋದುದನ್ನು ನೆನಿಸಿಕೊಂಡಹಾಗೆಲ್ಲಾ ದುಃಖ ದಿಂದ ತತ್ತಳಿಸುತ್ತಾ, ತಾನು ಪೂರ್ವದಲ್ಲಿ ಮಾಡಿದ ದುಷ್ಕೃತ್ಯವನ್ನು ಸ್ಮರಿಸಿಕೊಂಡು ಪಶ್ಚಾತ್ತಾಪಪಡುತ್ತಾ, ಆಗಲೇ ಕೋಪಸಮಾಧಾನವನ್ನು ಹೊಂದಿ ಪ್ರಸನ್ನದೃಷ್ಟಿಗಳಿಂದ ತನ್ನನ್ನು ನೋಡುತ್ತಿರುವ ಕೌಸಲ್ಯೆಯನ್ನು ಕುರಿತು ಆ ವೃತ್ತಾಂತಗಳನ್ನಾಡತೊಡಗಿದನು. ರಾಮನು ಪಟ್ಟಣವನ್ನು ಬಿಟ್ಟುಹೊರಟು ಐದುದಿನಗಳು ಕಳೆದು ಆರನೆಯರಾತ್ರಿಯು ನಡೆಯುತ್ತಿದ್ದರೂ, ದಶರಥನು ಮೇಲೆಮೇಲೆ ಉಕ್ಕಿಬರುವ ಸಂಕಟದಿಂದ ತನ್ನ ದುಷ್ಕೃತ್ಯಕ್ಕಾಗಿ ತಾನೇ ಕೊರಗುತ್ತಿದ್ದು, ಅರ್ಧರಾತ್ರಿಯಲ್ಲಿ ಎದ್ದು ಕುಳಿತು, ಪುತ್ರಶೋಕ ದಿಂದ ಬೆಂದವನಾಗಿ, ತನ್ನಂತೆಯೇ ಕೊರಗುತ್ತಿರುವ ಕೌಸಲ್ಯೆಯನ್ನು ನೋಡಿ “ಎಲೆ ಮಂಗಳಾಂಗಿ! ಲೋಕದಲ್ಲಿ ಮನುಷ್ಯನು ಇತರರಿಗೆ ಹಿತವನ್ನಾಗಲಿ, ಅಹಿತವನ್ನಾಗಲಿ ಯಾವುದನ್ನು ನಡೆಸುವನೋ ಅಂತಹ ಪುಣ್ಯ ಪಾಪ ಕಾರ್ಯಗಳಿಗೆ ಅನುರೂಪವಾದ ಫಲವನ್ನೇ ತಾನೂ ಅನುಭವಿಸುವನು. ಯಾರಾದರೇನು? ತಾವು ಇತರರ ವಿಷಯದಲ್ಲಿ ನಡೆಸಿದ ಕಾರ್ಯಗಳಿಗೆ ತಕ್ಕ ಫಲವನ್ನು ಎಂದಾದರೂ ತಾವು ಅನುಭವಿಸಿಯೇ ತೀರಬೇಕು. ಕಾರ್ಯಗಳ ನ್ನಾರಂಭಿಸುವ ಕಾಲಗಳಲ್ಲಿ ಅವುಗಳಿಂದುಂಟಾಗುವ ಫಲಗಳ ಗುರುಲಘುತ್ವ ಗಳನ್ನೂ, ಗುಣದೋಷಗಳನ್ನೂ ಆಲೋಚಿಸದೆ, ಯಾವನು ಕಾರ್ಯಗಳನ್ನು ನಡೆಸಿಬಿಡುವನೋ ಆತನೇ ಅಜ್ಞನೆನಿಸುವನು. ನಿಷ್ಫಲವಾಗಿಯಾಗಲಿ, ಅಲ್ಪ ಫಲವುಳ್ಳದಾಗಿಯಾಗಲಿ ಇರುವ ಒಂದು ಕಾರ್ಯಕ್ಕೆ ಮಹಾಪ್ರಯತ್ನವನ್ನು ಮಾಡುವವನೇ ಬುದ್ಧಿಹೀನನು. ಸ್ವಲ್ಪ ಪ್ರಯತ್ನದಿಂದ ಬಹುಫಲವನ್ನುಂಟು ಮಾಡತಕ್ಕ ಕಾರ್ಯಗಳನ್ನು ನಡೆಸುವವನೇ ಬುದ್ಧಿಶಾಲಿಯು. ಯಾವನು ಬಣ್ಣ ವಿಲ್ಲದ ಸಣ್ಣ ಹೂಗಳುಳ್ಳ ಮಾವಿನಮರವನ್ನು ಕಡಿದು, ಮುತ್ತುಗದ ಮರ ದಲ್ಲಿರುವ ಪುಷ್ಪಗಳ ಅಂದವನ್ನೂ ವಿಸ್ತಾರವನ್ನೂ ನೋಡಿ ಮೋಸಹೋಗಿ, ಅದರಿಂದ ಉತ್ತಮವಾದ ದೊಡ್ಡ ಫಲಗಳನ್ನು ಪಡೆಯಬಹುದೆಂಬ ಭ್ರಾಂತಿ ಯಿಂದ ಅವುಗಳನ್ನು ಬೆಳೆಸುವನೋ, ಅಂತವನು ಫಲಪ್ರಾಪ್ತಿಯ ಕಾಲದಲ್ಲಿ ಆಶಾಭಂಗವನ್ನು ಹೊಂದಿ ಕೊರಗಬೇಕಾಗುವುದು. ಆದುದರಿಂದ ಯಾವನು ಫಲಸ್ವರೂಪವನ್ನು ಚೆನ್ನಾಗಿ ಆಲೋಚಿಸದೆ ಕಾರ್ಯಗಳನ್ನಾರಂಭಿಸುವನೋ, ಆತನು ಫಲಕಾಲದಲ್ಲಿ ಪಶ್ಚಾತ್ತಾಪಪಟ್ಟು ಸಂಕಟಪಡಬೇಕೆಂಬುದರಲ್ಲಿ

ಸಂದೇಹವೇ ಇಲ್ಲ. ಎಲೆ, ದೇವಿ! ನಾನೂ ಈಗ ಅದರಂತೆಯೇ ಮಾವಿನ ಮರವನ್ನು ಕಡಿದು ಮುತ್ತುಗದ ಮರವನ್ನು ಬೆಳೆಸಿದವನಂತೆ ಮೊದಲು ಅಜ್ಞಾನದಿಂದ ರಾಮನನ್ನು ತೊರೆದುಬಿಟ್ಟೆನು. ಈಗ ಫಲಕಾಲದಲ್ಲಿ ದುಃಖಿಸಬೇಕಾಗಿ ಬಂದೊದಗಿತು. ಮುತ್ತುಗದ ಹೂವನ್ನು ನೋಡಿ ಮರುಳಾದವರಂತೆ ಕೈಕೇಯಿಯ ಮಾತಿಗೆ ಮರುಳಾಗಿ ಈಗ ಈ ಕಷ್ಟದಲ್ಲಿ ಕೊರಗುವೆನು. ನನ್ನ ದುರ್ಬುದ್ಧಿಯೇ ನನ್ನನ್ನು ಕೆಡಿಸಿತು. ಎಲೆ, ಪ್ರಿಯೆ! ಈಗ ಪಶ್ಚಾತ್ತಾಪಪಟ್ಟು ಫಲವೇನು? ಮುಖ್ಯವಾಗಿ ಈಗ ನಾನು ಅನುಭವಿಸುತ್ತಿರುವ ದುಃಖಕ್ಕೆ ಮುಖ್ಯ ಕಾರಣವೊಂದುಂಟು. ಅದನ್ನೂ ತಿಳಿಸುವೆನು, ಕೇಳು. ನಾನು ಕುಮಾರವಯಸ್ಸಿನಲ್ಲಿದ್ದಾಗಲೇ ನನಗೆ ಶಬ್ದವೇದಿಯೆಂಬ ಖ್ಯಾತಿಯುಂಟಾಯಿತು. ಆಗ ಧನುರ್ಧಾರಿಯಾಗಿ ಹೊರಟು ಯಾವುದೋ ಒಂದು ಶಬ್ದವನ್ನು ಕೇಳಿ ಅದನ್ನು ಗುರಿಯಿಟ್ಟು ಹೊಡೆದು ಒಂದು ಮಹಾ ಪಾಪಕಾರ್ಯವನ್ನು ಮಾಡಿಬಿಟ್ಟೆನು. ಸ್ವಯಂಕೃತವಾದ ಆ ಅಪರಾಧಕ್ಕೆ ತಕ್ಕ ಫಲವನ್ನು ಈಗ ಅನುಭವಿಸುತ್ತಿರುವೆನು. ಕರ್ಮಫಲವನ್ನು ಲೋಕಾಂತರದಲ್ಲಿಯೋ ಅಥವಾ ಜನ್ಮಾಂತರದಲ್ಲಿಯೋ ಅನುಭವಿಸುವುದುಂಟು. ನನಗಾದರೋ ಮಕ್ಕಳು ಅಜ್ಞಾನದಿಂದ ವಿಷವನ್ನು ಭಕ್ಷಿಸಿದಂತೆಯೂ, ಉತ್ತಮ ಫಲವನ್ನು ಪಡೆಯಬೇಕೆಂಬ ಆಶೋತ್ತರದಿಂದ ಮುತ್ತುಗದ ಮರವನ್ನು ಬೆಳೆಸಿದಂತೆಯೂ, ಶಬ್ದವೇದಿಯೆಂಬ ಖ್ಯಾತಿಗೆ ಆಸೆಪಟ್ಟು ಹಿಂದು ಮುಂದು ನೋಡದೆ ಅಜ್ಞಾನದಿಂದ ಮಹಾ ಘೋರಕೃತ್ಯವನ್ನು ಮಾಡಿದುದಕ್ಕೆ ತಕ್ಕ ಫಲವು ಈ ಜನ್ಮದಲ್ಲಿಯೇ ಅನುಭವಕ್ಕೆ ಬಂದಿತು. ಎಲೈ ದೇವಿ! ಆಗ ನಿನಗೆ ಇನ್ನೂ ಮದುವೆಯಾಗಿರಲಿಲ್ಲ. ನನ್ನ ತಂದೆಯೂ ಜೀವಿಸಿದ್ದನು. ಒಂದಾನೊಂದು ಕಾಲದಲ್ಲಿ ಕಾಮಮದಗಳನ್ನು ಹೆಚ್ಚಿಸತಕ್ಕ ವರ್ಷಕಾಲವು ಪ್ರಾಪ್ತವಾಯಿತು. ಭೂಮಿಯ ಮೇಲಿನ ನೀರೆಲ್ಲವನ್ನೂ ಹೀರಿ ಕಿರಣಗಳಿಂದ ಲೋಕವನ್ನು ದಹಿಸುವ ಸೂರ್ಯನು, ಪ್ರೇತಗಳಿಗೆ ವಾಸಸ್ಥಾನವಾಗಿ ಭಯಂಕರವಾದ ದಕ್ಷಿಣ ದಿಕ್ಕಿಗೆ ಹೋಗಿ ಸೇರಿದ್ದನು. ವರ್ಷಕಾಲವಾದುದರಿಂದ ನೆಲದಮೇಲಿನ ಉಷ್ಣವೆಲ್ಲವೂ ಆರಿ, ಆಕಾಶದಲ್ಲಿ ತಂಪಾದ ಮೇಘ ಪರಂಪರೆಗಳು ಕಾಣುತಿದ್ದುವು. ಕಪ್ಪೆಗಳೂ, ಚಾತಕಪಕ್ಷಿಗಳೂ, ನವಿಲುಗಳೂ ಉಲ್ಲಾಸಗೊಂಡಿದ್ದುವು. ಹಕ್ಕಿಗಳೆಲ್ಲವೂ ಸ್ನಾನಮಾಡಿ ಬಂದಂತೆ, ಮಳೆಯಲ್ಲಿ ನನೆದ ಗರಿಗಳುಳ್ಳವಾಗಿ, ಮಳೆಗಾಳಿಗಳಿಂದ ಬಲವಾಗಿ ತೂಗಾಡು

ತ್ತಿರುವ ಗಿಡಗಳ ಗೂಡುಗಳಲ್ಲಿ ಅಡಗಿಕೊಂಡಿದ್ದುವು. ನಿರಂತರವೂ ಸುರಿಯು ತ್ತಿರುವ ಮಳೆಯ ನೀರಿನಿಂದ ಬೆಟ್ಟಗಳೆಲ್ಲವೂ ನೆನೆದು, ಅಲೆಯಾಡದ ಸಮುದ್ರದಂತೆ ಜಲಮಯವಾಗಿ ಕಾಣುತ್ತಿದ್ದುವು. ಅಲ್ಲಲ್ಲಿ ಬೆಟ್ಟದ ಮೇಲೆ ಹರಿದು ಬರುವ ಧಾತುಮಿಶ್ರವಾದ ನೀರಿನಿಂದ ಕಲೆತು, ಜಲಪ್ರವಾಹಗಳೆಲ್ಲವೂ ಬಿಳುಪು, ಕೆಂಪು, ಮುಂತಾದ ವಿಚಿತ್ರ ವರ್ಣಗಳಿಂದ ಕೂಡಿ, ಅಲ್ಲಲ್ಲಿ ಕಾಡುಗಿಚ್ಚುಗಳಿಂದ ಬೆಂದು ಬೂದಿಯಾಗಿರುವ ಗಿಡಭಸ್ಮರಾಶಿಯಿಂದ ಕಲೆತು ಸರ್ಪಗಳಂತೆ ವಕ್ರಗತಿಯಿಂದ ಹರಿಯುತ್ತಿದ್ದುವು. ಅನಂತರವೂ ಮಳೆಯು ಸುರಿಯುತ್ತಿತ್ತು. ಹೀಗೆ ಸುಖಾಸ್ಪದವಾದ ಆ ಮಳೆಗಾಲದಲ್ಲಿಯೂ ನಾನು ಧನುರ್ಬಾಣಗಳನ್ನು ಹಿಡಿದು ರಥಾರೂಢನಾಗಿ ಬೇಟೆಯಾಡಬೇಕೆಂದು ನಿಶ್ಚಯಿಸಿ, ಸರಯೂನದಿಯ ತೀರಕ್ಕೆ ಹೋದೆನು. ಇಂತಹ ದುರ್ವ್ಯಸನಗಳಲ್ಲಿ ಇಂದ್ರಿಯಗಳನ್ನು ತಡೆದಿಡುವಷ್ಟು ಮನೋದಾರ್ಢ್ಯವಿಲ್ಲದ ನಾನು, ರಾತ್ರಿಕಾಲ ಗಳಲ್ಲಿಯೂ ಬೇಟೆಯಾಡುತ್ತಾ, ಆ ನದಿಯಲ್ಲಿ ನೀರು ಕುಡಿಯುವುದಕ್ಕಾಗಿ ಇಳಿದು ಬಂದ ಕಾರ್ಕೋಡಗಳನ್ನೂ, ಆನೆಗಳನ್ನೂ ಇತರ ದುಷ್ಟ ಮೃಗಗಳನ್ನೂ ಕೊಲ್ಲಬೇಕೆಂದಪೇಕ್ಷಿಸಿ, ಆ ತೀರ ಪ್ರದೇಶದಲ್ಲಿಯೇ ಶಸ್ತ್ರಧಾರಿಯಾಗಿ ಸಂಚರಿಸು ತ್ತಿದ್ದೆನು. ಆ ರಾತ್ರಿಯಲ್ಲಿ ಒಂದಾನೊಂದು ವಿವಿಕ್ತವಾದ ಸ್ಥಳದಲ್ಲಿ ಧನುಸ್ಸನ್ನು ಹಿಡಿದು ಸಿದ್ಧವಾಗಿ ನಿಂತು ನದೀತೀರಕ್ಕೆ ಬಂದ ಒಂದಾನೊಂದು ಕಾಡಾನೆ ಯನ್ನೂ, ಹಾಗೆಯೇ ಅಲ್ಲಿಗೆ ಬಂದ ಕೆಲವು ಕ್ರೂರಮೃಗಗಳನ್ನೂ ಕೊಂದು ಹಾಕಿದೆನು. ಸುತ್ತಲೂ ಗಾಢಾಂಧಕಾರವು ಕವಿದಿದ್ದುದರಿಂದ ಕಣ್ಣಿಗೆ ಯಾವ ವಸ್ತುಗಳೂ ಗೋಚರಿಸದಿದ್ದರೂ, ನಾನು ಶಬ್ದವನ್ನೇ ಗುರಿಹಿಡಿದು ಆ ಮೃಗ ಗಳೆಲ್ಲವನ್ನೂ ಕೊಲ್ಲುತ್ತಿದ್ದೆನು. ಈ ನಡುವೆ ಆ ನದಿಯಲ್ಲಿ ನೀರನ್ನು ಮೊಗೆಯುವ ಒಂದು ಧ್ವನಿಯು ನನ್ನ ಕಿವಿಗೆ ಬಿದ್ದಿತು. ಮಹಾಂಧಕಾರದಲ್ಲಿ ಆ ಧ್ವನಿಯು ಎಲ್ಲಿಂದ ಹೊರಟಿತೆಂಬುದನ್ನು ತಿಳಿಯುವುದು ಅಸಾಧ್ಯವಾಗಿದ್ದುದ ರಿಂದ ಅದನ್ನು ನಾನು ಒಂದು ಕಾಡಾನೆಯ ಶಬ್ದವೆಂದೆಣಿಸಿದೆನು. ಒಡನೆಯೇ ಸರ್ಪದಂತೆ ಮಹಾ ಕ್ರೂರವಾಗಿ ಜ್ವಲಿಸುತ್ತಿರುವ ಒಂದಾನೊಂದು ಬಾಣವನ್ನು ತೆಗೆದು, ಆ ಶಬ್ದವನ್ನೇ ಗುರಿಹಿಡಿದು ಆ ಕಡೆಗೆ ಬಾಣವನ್ನು ಬಿಟ್ಟೆನು. ತೀಕ್ಷ್ಣವಾದ ಆ ಬಾಣವನ್ನು ಬಿಟ್ಟೊಡನೆಯೇ ಆ ಕಡೆಯಿಂದ "ಹಾ!" ಎಂದು ಯಾವನೋ ಒಬ್ಬ ತಪಸಿಯು ಕೂಗಿಕೊಳ್ಳುವಂತೆ ಒಂದು ಧ್ವನಿಯು

ನನ್ನ ಕಿವಿಗೆ ಕೇಳಿಸಿತು. ಒಬ್ಬ ತಪಸ್ವಿಯು ಮರ್ಮಸ್ಥಾನದಲ್ಲಿ ಗಾಯಪಟ್ಟು ಬಿದ್ದಿರಬಹುದೆಂದೂ ತೋರಿತು. ಇದಾದ ಉತ್ತರಕ್ಷಣದಲ್ಲಿಯೇ ಮನುಷ್ಯನೊಬ್ಬನು ಬಹು ದೀನಧ್ವನಿಯಿಂದ ಪ್ರಲಾಪಿಸುತ್ತ, "ಅಯ್ಯೋ! ತಪಸ್ವಿಯಾದ ನಮ್ಮಂತವರಲ್ಲಿಯೂ ಹೀಗೆ ಶಸ್ತ್ರವು ಬೀಳುವುದೆಂದರೇನು! ಈ ರಾತ್ರಿಯಲ್ಲಿ ನೀರು ಮೊಗೆಯುವುದಕ್ಕಾಗಿ ವಿವಿಕ್ತವಾದ ಈ ನದಿಗೆ ಬಂದೆನು. ಯಾವನೋ ಬಾಣದಿಂದ ಹೊಡೆದುಬಿಟ್ಟನಲ್ಲಾ! ನಾನು ಯಾರಲ್ಲಿ ಯಾವ ಅಪರಾಧವನ್ನು ಮಾಡಿರುವೆನು? ಮನೋವಾಕ್ಕಾಯಗಳೆಂಬ ತ್ರಿಕರಣಗಳಿಂದಲೂ ಇದುವರೆಗೆ ನಾನು ಯಾರನ್ನೂ ಹಿಂಸಿಸಿದವನಲ್ಲ! ಕಾಡಿನಲ್ಲಿ ಸಿಕ್ಕಿದುದನ್ನು ತಿಂದು ಬದುಕುತ್ತಿರುವ ಋಷಿಯಾದ ನನಗೆ ಇಂತಹ ಮಹಾ ವಿಪತ್ತೆಂದರೇನು? ನಮ್ಮಂಥವರಿಗೆ ಹೀಗೆ ಶಸ್ತ್ರದಿಂದ ಕೊಲೆಯೆಂಬುದುಂಟೇ? ಅಯ್ಯೋ! ಜಡೆಯನ್ನು ಧರಿಸಿ, ನಾರುಮಡಿಯನ್ನುಟ್ಟು, ನನ್ನಪಾಡಿಗೆ ನಾನು ತಿರುಗುತಿದ್ದರೆ, ನನ್ನನ್ನು ಕೊಲ್ಲಬೇಕೆಂದು ಉದ್ದೇಶಿಸಿ ಬಂದವನಾವನೋ ತಿಳಿಯಲಿಲ್ಲವಲ್ಲಾ? ನಾನು ಯಾರಿಗೆ ಏನಪಕಾರವನ್ನು ಮಾಡಿರುವೆನು? ನನ್ನನ್ನು ಕೊಂದು ಯಾರಿಗೇನು ಪ್ರಯೋಜನವು? ಈ ನಿಷ್ಫಲವಾದ ಕಾರ್ಯಕ್ಕೆ ಯಾವನು ಪ್ರಯತ್ನಿಸಿದನೋ ತಿಳಿಯಲಿಲ್ಲವಲ್ಲಾ! ಇದರಿಂದ ಕೇವಲ ಅನರ್ಥಗಳೇ ಹೊರತು ಬೇರೊಂದೂ ಇಲ್ಲವು. ಗುರುದಾರ ಪರಿಗ್ರಹದಂತಿರುವ ಈ ಅಕಾರ್ಯವು ಯಾರಿಗೆ ತಾನೇ ಉಚಿತವೆಂದು ತೋರಿರಬಹುದು? ನನ್ನ ಸಾವಿಗಾಗಿ ನಾನು ಸ್ವಲ್ಪವೂ ಚಿಂತಿಸುವುದಿಲ್ಲ. ಮುಖ್ಯವಾಗಿ ನನ್ನ ತಾಯಿ ತಂದೆಗಳಿಗೆ ದಿಕ್ಕಿಲ್ಲದೇ ಹೋಯಿತೆಂಬ ಚಿಂತೆಯೇ ನನಗೆ ಬಹಳವಾಗಿರುವುದು. ಅವರಿಗಾಗಿಯೇ ನಾನು ಕೊರಗುತ್ತಿರುವೆನು. ವೃದ್ಧರಾದ ಆ ದಂಪತಿಗಳನ್ನು ನಾನು ಸ್ವಲ್ಪವೂ ಶ್ರಮಪಡಿಸದೆ ಉಪಚರಿಸುತ್ತಾ ಬಹುಕಾಲದಿಂದ ಕಾಪಾಡುತಿದ್ದೆನು. ನಾನು ಸತ್ತಮೇಲೆ ಅವರ ಗತಿಯೇನು? ಅವರಿಬ್ಬರೂ ಪರಮ ವೃದ್ಧರು. ಈಗ ಈ ಒಂದು ಬಾಣದಿಂದಲೇ ನಾವು ಮೂವರೂ ಹತರಾದಂತೆ ಎಣಿಸಬೇಕಾಗಿದೆ. ವಿವೇಕಶೂನ್ಯನಾದ ಯಾವನು ಈ ಘೋರಕೃತ್ಯವನ್ನು ನಡೆಸಿದನೋ ತಿಳಿಯಲಿಲ್ಲವಲ್ಲಾ!" ಎಂದು ಪ್ರಲಾಪಿಸುತ್ತಿದ್ದುದನ್ನು ಕೇಳಿದೆನು. ಈ ದೀನಧ್ವನಿಯನ್ನು ಕೇಳಿದಮೇಲೆಯೇ ನನಗೆ ಧರ್ಮದಮೇಲೆ ದೃಷ್ಟಿಯು ಹೋಯಿತು. ಮನಸ್ಸಿನಲ್ಲಿ ಸಂಕಟವುಂಟಾಯಿತು. ಹಾಗೆಯೇ ಭೀತಿಯಿಂದ

ನಡುಗುತ್ತಿರುವ ನನ್ನ ಕೈಯಲ್ಲಿದ್ದ ಧನುರ್ಬಾಣಗಳೆರಡೂ ಜಾರಿ ಬಿದ್ದು ಹೋದುವು. ಅರ್ಧರಾತ್ರಿಯಲ್ಲಿ ಅರಣ್ಯಮಧ್ಯದಿಂದ ಹೊರಟ ಬಹುವಿಧವಾದ ಆ ಪ್ರಲಾಪಗಳನ್ನು ಕೇಳಿದಹಾಗೆಲ್ಲಾ ನನ್ನ ಮನಸ್ಸಿನಲ್ಲಿ ದುಃಖವು ಹೆಚ್ಚುತಿತ್ತು. ಹಾಗೆಯೇ ಬುದ್ಧಿಭ್ರಮವುಂಟಾಯಿತು. ಪ್ರಜ್ಞೆತಪ್ಪಿದವನಂತೆ ಸ್ತಬ್ಧನಾಗಿದ್ದೆನು. ಕೊನೆಗೆ ದುಃಖದಿಂದ ಶಕ್ತಿಗುಂದಿದವನಾಗಿ, ಆ ದೀನಧ್ವನಿಯು ಹೊರಟ ಸ್ಥಳವನ್ನೇ ಹುಡುಕಿಕೊಂಡು ಬಂದೆನು. ಅಲ್ಲಿ ಒಂದು ನದಿಯ ತೀರದಲ್ಲಿ ತಾಪಸಕುಮಾರನೊಬ್ಬನು ಬಾಣದಿಂದ ಹೊಡೆಯಲ್ಪಟ್ಟು ಪ್ರಾಣಸಂಕಟದಿಂದ ನರಳುತ್ತಿರುವುದನ್ನು ನೋಡಿದೆನು. ಆತನ ಜಡೆಗಳೆಲ್ಲವೂ ಬಿಚ್ಚಿಹೋಗಿದ್ದುವು. ಪಕ್ಕದಲ್ಲಿ ಆತನು ಹಿಡಿದಿದ್ದ ಜಲಕುಂಭಗಳು ಉರುಳಿ ಬಿದ್ದಿದ್ದುವು. ಆತನ ಮೈಯೆಲ್ಲವೂ ರಕ್ತಮಯವಾಗಿ ನೆಲದ ಮಣ್ಣಿನಿಂದ ಮಲಿನವಾಗಿತ್ತು. ಬಾಣವು ಮೈಯಲ್ಲಿ ನಾಟಿಕೊಂಡಿರಲು, ನೆಲದಮೇಲೆ ಬಿದ್ದು ಸಂಕಟದಿಂದ ತತ್ತಳಿಸುತ್ತಿದ್ದನು. ನಾನು ಆತನ ಸಮೀಪದಲ್ಲಿ ಹೋಗಿ ನಿಂತೊಡನೆಯೇ, ಆತನು ನನ್ನನ್ನು ತನ್ನ ತೇಜಸ್ಸಿನಿಂದಲೇ ಸುಟ್ಟು ಬಿಡುವಂತೆ ಕಣ್ಣಿಟ್ಟು ನೋಡಿದನು. ಮೊದಲೇ ಭಯದಿಂದ ತತ್ತಳಿಸುತ್ತಿರುವ ನನ್ನನ್ನು ನೋಡಿ ಆತನು “ಎಲೆ ರಾಜನೆ! ಯಾವ ವಿಚಾರಕ್ಕೂ ಹೋಗದೆ ಕಾಡಿನಲ್ಲಿ ಜೀವಿಸುತ್ತಿರುವ ನಾನು ನಿನಗೆ ಮಾಡಿದ ಅಪರಾಧವೇನು? ತಂದೆತಾಯಿಗಳಿಗೆ ಕುಡಿಯುವ ನೀರನ್ನು ತೆಗೆದುಕೊಂಡು ಹೋಗುವುದಕ್ಕಾಗಿ ನಾನು ಇಲ್ಲಿಗೆ ಬಂದರೆ ನೀನು ನನ್ನ ಮೇಲೆ ಬಾಣವನ್ನು ಪ್ರಯೋಗಿಸಬಹುದೆ? ಈಗ ನೀನು ನನ್ನೊಬ್ಬನನ್ನೇ ಕೊಂದೆಯೆಂದೆಣಿಸಬೇಡ! ನನ್ನೊಡನೆ ಕಣ್ಣು ಕಾಣದ ವೃದ್ಧರಾಗಿರುವ ನಮ್ಮ ತಾಯಿತಂದೆಗಳನ್ನೂ ನೀನು ಕೊಂದಂತಾಯಿತಲ್ಲಾ! ದೇಹದಲ್ಲಿ ಬಲವಿಲ್ಲದೆ, ಕುರುಡರಾಗಿ, ನನ್ನನ್ನೇ ನಂಬಿಕೊಂಡಿದ್ದ ಆ ತಾಯಿತಂದೆಗಳನ್ನು ಇನ್ನು ಕಾಪಾಡುವವರಾರು? ಅವರ ಬಾಯಾರಿಕೆಯನ್ನು ತೀರಿಸುವವರಾರು? ನಾನು ಹೋಗಿ ನೀರನ್ನು ತಂದುಕೊಡುವೆನೆಂದು ಅವರು ಇನ್ನೂ ಆಶೋತ್ತರವನ್ನಿಟ್ಟುಕೊಂಡಿರುವರಲ್ಲಾ? ನಾನು ಬರುವೆನೆಂದು ಆ ಬಾಯಾರಿಕೆಯನ್ನು ಇನ್ನೆಷ್ಟುಹೊತ್ತಿನವರೆಗೆ ತಾನೇ ಅವರು ತಡೆಯಬಲ್ಲರು? ಲೋಕದಲ್ಲಿ ಎಷ್ಟು ಶಾಸ್ತ್ರಗಳನ್ನೋದಿದರೇನು? ಎಷ್ಟು ತಪಸ್ಸುಗಳನ್ನು ಮಾಡಿದರೇನು? ಯಾವುದರಿಂದಲೂ ಫಲವಿಲ್ಲವೆಂದೇ ತೋರುವುದು. ನಾನು ಇಲ್ಲಿ ನೆಲದ ಮೇಲೆ ಬಿದ್ದು ಅರ್ಧಪ್ರಾಣದಿಂದ ನರಳುತ್ತಿರು

ವುದನ್ನು ತಂದೆಯು ತಿಳಿಯನಲ್ಲಾ! ಅಥವಾ ಆತನಿಗೆ ತಿಳಿದೂ ಪ್ರಯೋಜನ ವೇನು? ಕಾಲಿಲ್ಲದ ಆ ವೃದ್ಧನು ಏನು ಮಾಡಬಲ್ಲನು? ಒಂದು ಮರವನ್ನು ಶಸ್ತ್ರದಿಂದ ಕಡಿಯುವಾಗ ಸಜಾತೀಯವಾದ ಮತ್ತೊಂದು ಮರವು ಏನು ಮಾಡಬಲ್ಲುದು? ಹಾಗೆ ಆತನು ಈಗ ನನಗೆ ಏನು ಸಹಾಯವನ್ನು ಮಾಡ ಬಲ್ಲನು? ಎಲೆ ರಾಜನೆ! ನೀನೇ ಹೋಗಿ ನನ್ನ ತಂದೆಗೆ ಈ ವಿಷಯವನ್ನು ತಿಳಿಸು! ನಿನಗೆ ಯಾವುದೊಂದು ಅಪಾಯವೂ ಉಂಟಾಗಲಾರದು. ಹಾಗಿಲ್ಲದಿದ್ದರೆ ಕಾಡುಗಿಚ್ಚು ಕಾಡನ್ನು ಸುಡುವಂತೆ ಆತನು ನಿನ್ನನ್ನು ದಹಿಸಿಬಿಡುವನು. ನಮ್ಮ ತಂದೆಯ ಆಶ್ರಮವು ಬಹುದೂರವೆಂದೆಣಿಸಬೇಡ. ಒಂದೇ ನಡೆಯಿಂದ ಆ ಆಶ್ರಮವನ್ನು ಸೇರಬಹುದು. ನೀನೇ ಹೋಗಿ ಆತನನ್ನು ಸಮಾಧಾನ ಪಡಿಸು. ನಿಜಸ್ಥಿತಿಯನ್ನು ನೀನೇ ಹೋಗಿ ತಿಳಿಸಿದರೆ ಆತನು ಕೋಪಿಸ ಲಾರನು. ಆತನು ಶಪಿಸುವನೆಂದೂ ನೀನು ಅಂಜಬೇಡ. ರಾಜನೆ! ಮೊದಲು ಈ ನನ್ನ ದೇಹದಲ್ಲಿ ನಾಟಿಕೊಂಡಿರುವ ಬಾಣವನ್ನು ತೆಗೆದುಬಿಡು. ನಾನು ನೋವನ್ನು ಸಹಿಸಲಾರೆನು. ಮರ್ಮಸ್ಥಾನದಲ್ಲಿ ಸೇರಿಕೊಂಡು ಇದು ನನ್ನನ್ನು ಬಹಳ ಸಂಕಟಪಡಿಸುತ್ತಿರುವುದು. ಮರಳಿನಿಂದ ಕಟ್ಟಿದ ದಡವನ್ನು ನದೀಪ್ರವಾಹ ವೇಗವು ಹೇಗೆ ಬಹುಸುಲಭವಾಗಿ ಭೇದಿಸಿಕೊಂಡು ಹೋಗುವುದೋ, ಹಾಗೆ ಈ ಬಾಣವು ನನ್ನ ದೇಹದಲ್ಲಿ ಮರ್ಮಸ್ಥಾನವನ್ನು ಹಿಡಿದು ಬಹುದೂರದವರೆಗೆ ಹೋಗಿ ನಾಟಿಕೊಂಡಿರುವುದು. ಆದುದರಿಂದ ಈ ಬಾಣವನ್ನು ಈಗಲೇ ಕಿತ್ತು ನನ್ನ ನೋವನ್ನು ತಪ್ಪಿಸು" ಎಂದನು. ಆಗ ನಾನು ಮಾಡಬೇಕಾದುದೇನು? ಬಾಣವನ್ನು ಕಿತ್ತರೆ ಒಡನೆಯೇ ಆತನು ಸಾಯುವನು. ಕೀಳದಿದ್ದರೆ ನೋವನ್ನು ತಡೆಯಲಾರದೆ ಸಂಕಟಪಡುವನು. ಆದುದರಿಂದ ನನಗೆ ಏನೊಂದು ನಿಶ್ಚಯವೂ ತೋರಲಿಲ್ಲ. ಹಿಂದುಮುಂದು ನೋಡುತ್ತಾ, ಸುಮ್ಮನೆ ಚಿಂತಿಸುತಿದ್ದೆನು. ಹೀಗೆ ದುಃಖದಿಂದಲೂ, ದೈನ್ಯದಿಂದಲೂ, ತತ್ತಳಿಸುತ್ತಿರುವ ನನ್ನನ್ನು ನೋಡಿ, ಆ ಋಷಿಕುಮಾರನು ಸಂಕಟದಿಂದ ಮಾತಾಡುವುದಕ್ಕೂ ಶಕ್ತಿಯಿಲ್ಲದೆ, ಸಮೀಪಕ್ಕೆ ಕರೆದು, ಉತ್ಕ್ರಮಣಾವಸ್ಥೆಯಿಂದ ಹೊರಳುತ್ತಾ, ಬಹುಪ್ರಯತ್ನದಿಂದ ಒಂದಾನೊಂದು ಮಾತನ್ನು ಹೇಳಿದನು "ಎಲೆ ರಾಜನೆ! ನಾನು ಸಾಯುವೆನೆಂಬ ದುಃಖವು ನನಗೆ ಸ್ವಲ್ಪವೂ ಇಲ್ಲ. ಸ್ಥಿರಮನಸ್ಸಿನಿಂದ ಧೈರ್ಯವನ್ನು ತಂದು ಕೊಂಡಿರುವೆನು. ಇದರಿಂದ ನಿನಗೆ ಬ್ರಹ್ಮಹತ್ಯೆಯುಂಟಾಗುವುದೆಂಬ ಭಯವನ್ನೂ

ಬಿಡು. ನಾನು ಬ್ರಾಹ್ಮಣನಲ್ಲ. ಶೂದ್ರಸ್ತ್ರೀಯಲ್ಲಿ ವೈಶ್ಯಬೀಜಕ್ಕೆ ಹುಟ್ಟಿದವನು. ನೀನು ಶಂಕೆಯಿಲ್ಲದೆ ಬಾಣವನ್ನು ಕಿತ್ತು ನನ್ನ ನೋವನ್ನು ತಪ್ಪಿಸು" ಎಂದನು. ಹೀಗೆ ಬಾಣದಿಂದ ಮರ್ಮಸ್ಥಾನದಲ್ಲಿ ಹೊಡೆಯಲ್ಪಟ್ಟು ಸಂಕಟದಿಂದ ಹೊರಳುತ್ತ, ಆಗಾಗ ಪ್ರಜ್ಞೆತಪ್ಪಿ ನಿಶ್ಚೇಷ್ಟನಾಗಿ ನಡುಗುತ್ತ, ವೇದನೆಯನ್ನು ತಡೆಯಲಾರದೆ ದೇಹವೆಲ್ಲವನ್ನೂ ಉಡುಗಿಸಿಕೊಂಡು ಮಲಗಿದ್ದ ಆತನ ಮೈಯಿಂದ ನಾನು ಬಾಣವನ್ನು ಕಿತ್ತುಬಿಟ್ಟೆನು. ಆ ಕ್ಷಣವೇ ಆ ತಾಪಸಕುಮಾರನು ಒಂದಾವರ್ತಿ ನನ್ನನ್ನು ಕಣ್ಣು ಬಿಟ್ಟುನೋಡಿ ಪ್ರಾಣವನ್ನು ಬಿಟ್ಟನು. ನೀರಿನಿಂದ ನೆನೆದ ಮೈಯುಳ್ಳವನಾಗಿ, ಮರ್ಮಸ್ಥಾನದಲ್ಲಿ ಭೇದಿಸಲ್ಪಟ್ಟು, ಮೇಲುಸಿರನ್ನು ಬಿಡುತ್ತ, ಸರಯೂನದಿಯ ತೀರದಲ್ಲಿ ಮಲಗಿದ್ದ ಆ ಋಷಿಕುಮಾರನನ್ನು ನೆನೆಸಿ ಕೊಂಡು ಈಗಲೂ ನನಗೆ ಸಹಿಸಲಾರದ ದುಃಖವುಂಟಾಗುವುದು" ಎಂದನು.

ಇದು ಅರುವತ್ತುಮೂರನೆಯ ಸರ್ಗವು.

ದಶರಥನ ಮರಣವು

ದಶರಥನು ಹೀಗೆ ಆ ತಾಪಸಕುಮಾರನಿಗೆ ಸಂಭವಿಸಿದ ಆಕಸ್ಮಿಕವಾದ ವಧವನ್ನು ಕುರಿತು ದುಃಖಿಸುತ್ತಾ, ನಡುನಡುಗಿ ರಾಮನನ್ನೂ ನೆನೆಸಿಕೊಂಡು ಅಳುತ್ತಾ, ಪುನಃ ಕೌಸಲ್ಯೆಯನ್ನು ಕುರಿತು, "ಎಲೆ, ದೇವಿ! ನಾನು ಅಜ್ಞಾನ ದಿಂದ ಆ ಮಹಾಪಾಪಕೃತ್ಯವನ್ನು ಮಾಡಿದ ಮೇಲೆ, ಕದಲಿದ ಮನಸುಳ್ಳವ ನಾಗಿ ಒಬ್ಬನೇ ಏಕಾಕಿಯಾಗಿ ಆಲೋಚಿಸುತಿದ್ದೆನು. ಹೇಗೆಮಾಡಿದರೆ ಉಚಿತ ವೆಂದು ಮನಸ್ಸಿನಲ್ಲಿ ನಾನಾವಿಧವಾಗಿ ಚಿಂತಿಸುತಿದ್ದೆನು. ಕೊನೆಗೆ ಅಲ್ಲಿದ್ದ ಜಲಕುಂಭವನ್ನು ತೆಗೆದು, ಅದರಲ್ಲಿ ನೀರುತುಂಬಿಕೊಂಡು, ಆ ತಾಪಸಕುಮಾ ರನು ಹೇಳಿದ್ದ ದಾರಿಯನ್ನೇ ಹಿಡಿದು ವೃದ್ಧದಂಪತಿಗಳಿದ್ದ ಆಶ್ರಮಕ್ಕೆ ಹೋದೆನು. ಅಲ್ಲಿ ಕೇವಲ ದುರ್ಬಲರಾಗಿ ಕಣ್ಣು ಕಾಣದವರಾಗಿ, ಸಂಚಾರಶಕ್ತಿಯಿಲ್ಲದೆ ರೆಕ್ಕೆಗಳಿಲ್ಲದ ಹಕ್ಕಿಯಂತೆ ಕುಳಿತಿರುವ ಆ ವೃದ್ಧರನ್ನು ಕಂಡೆನು. ನಾನು ಹೋಗುವುದಕ್ಕೆ ಮೊದಲೇ, ಅವರಿಬ್ಬರೂ ತಮ್ಮ ಮಗನ ಪ್ರತ್ಯಾಗಮನವನ್ನೇ ನಿರೀಕ್ಷಿಸುತ್ತಾ, ಅವನ ವಿಷಯವಾದ ಮಾತುಗಳನ್ನೇ ಆಡುತಿದ್ದರು. ನಡೆಯು

ವುದಕ್ಕೂ ಕಾಲಿಲ್ಲದೆ, ತಮಗಿದ್ದ ಆ ಒಬ್ಬ ಮಗನಲ್ಲಿಯೇ ತಮ್ಮ ಜೀವದಾಶೆಯನ್ನಿಟ್ಟು, ಆತನನ್ನೇ ನಿರೀಕ್ಷಿಸುತ್ತಿದ್ದ ಆ ವೃದ್ಧದಂಪತಿಗಳು ನನ್ನಿಂದ ಆ ಆಸೆಯನ್ನೂ ಬಿಟ್ಟುಬಿಡಬೇಕಾಯಿತಲ್ಲವೆ. ಯಾವ ಪ್ರಯತ್ನವೂ ಸಾಗದೆ ದಿಕ್ಕಿಲ್ಲದವರಂತೆ ಕುಳಿತಿರುವ ಆ ದಂಪತಿಗಳನ್ನು ನೋಡಿದೊಡನೆಯೇ ನನಗೆ ಮಿತಿಮೀರಿದ ಸಂಕಟವುಂಟಾಯಿತು. ಆ ತಾಪಸಕುಮಾರನ ಸಾವನ್ನು ನೋಡಿ, ಮೊದಲೇ ದುಃಖದಿಂದ ಇಳಿದು ಹೋಗಿದ್ದ ನನಗೆ, ಕುರುಡರಾದ ಈ ತಂದೆತಾಯಿಗಳನ್ನು ನೋಡಿದ ಮೇಲೆ ಆ ದುಃಖವು ಮತ್ತಷ್ಟು ಹೆಚ್ಚಿತು. ಭಯದಿಂದ ನಡುಗುತ್ತ ಅವರಿದ್ದ ಆಶ್ರಮದೊಳಕ್ಕೆ ಪ್ರವೇಶಿಸಿದೆನು. ನನ್ನ ಹಜ್ಜೆಯ ಧ್ವನಿಯನ್ನು ಕೇಳಿದೊಡನೆಯೇ ಆ ವೃದ್ಧತಾಪಸನು ಅತ್ಯಾತುರದಿಂದ "ಎಲೆ, ವತ್ಸನೆ! ಇದೇನು![1] ಇಷ್ಟು ವಿಳಂಬಮಾಡಿದೆ? ದಾಹದಿಂದ ಗಂಟಲೊಣಗುತ್ತಿರುವುದಲ್ಲಾ! ಬೇಗ ನೀರನ್ನು ತಂದುಕೊಂಡು! ಇಷ್ಟು ಹೊತ್ತಿನವರೆಗೆ ನೀನು ನೀರಿನಲ್ಲಿ ಅಲೆದಾಡುವುದುಂಟೆ? ಅಲ್ಲಿ ನೀನು ಇದುವರೆಗೆ ನಿಲ್ಲುವುದಕ್ಕೆ ಕಾರಣವೇನು! ನೀನು ಇಷ್ಟು ವಿಳಂಬಮಾಡಿದುದನ್ನು ನೋಡಿ ನಿನ್ನ ತಾಯಿಯು ನೀನು ಯಾವ ಅಪಾಯಕ್ಕೆ ಸಿಕ್ಕಿಬಿದ್ದೆಯೋ ಎಂದು ತತ್ತಳಿಸುತ್ತಿರುವಳು. ಅಪ್ಪಾಮಗು! ಬೇಗಹೋಗಿ ಆಕೆಯನ್ನು ನೋಡು! ನಮ್ಮಲ್ಲಿ ನಿನಗೆ ಯಾವ ಕೋಪವಿದ್ದರೂ ಬಿಟ್ಟುಬಿಡು! ನಾನಾಗಲಿ, ನಿನ್ನ ತಾಯಿಯಾಗಲಿ, ನಿನ್ನ ವಿಷಯದಲ್ಲಿ ಯಾವ ವಿಧವಾದ ಆಗ್ರಹವನ್ನು ಮಾಡಿದ್ದರೂ ಅದನ್ನು ಮನಸ್ಸಿನಲ್ಲಿಡಬೇಡ! ತಪಸ್ವಿಯಾದವನು ಮನಸ್ಸಿನಲ್ಲಿ ಕೋಪವನ್ನಿಡಬಾರದಲ್ಲವೆ? ದಿಕ್ಕಿಲ್ಲದ ನಮಗೆ ನೀನೇ ದಿಕ್ಕಾಗಿರುವೆ? ಕಣ್ಣಿಲ್ಲದ ನಮಗೆ ನೀನೇ ಕಣ್ಣಿನಂತಿರುವೆ! ನಮ್ಮಿಬ್ಬರ ಪ್ರಾಣಗಳೂ ನಿನ್ನೊಬ್ಬನ ಕೈಯಲ್ಲಿರುವುದು! ಹೀಗಿದ್ದರೂ ನೀನು ನಮಗೆ ಪ್ರತ್ಯುತ್ತರವನ್ನು ಕೊಡದಿರುವೆಯಲ್ಲಾ?" ಎಂದನು. ಆಗ ನಾನು ಆತನಿಗೆ ಯಾವ ಉತ್ತರವನ್ನು ಹೇಳಲಿ! ಮಾತಾಡುವುದಕ್ಕಾರಂಭಿಸಿದರೆ ಅಕ್ಷರಗಳು ತಡವರಿಸುತಿದ್ದುವು. ಅಂಜಿಕೆಯಿಂದ ಮೈಯೆಲ್ಲವೂ ನಡುಗಲಾರಂಭಿಸಿತು. ಬಾಯಿಂದ ಅಕ್ಷರಗಳು ಸ್ಫುಟವಾಗಿ ಹೊರಡುತ್ತಿರಲಿಲ್ಲ.

---

1 ಇಲ್ಲಿ "ಯಸ್ನಿಮಿತ್ತಮಿದಂ ತಾತ" ಎಂದೂ "ಯಸ್ನದತ್ತಮಿದಂ ತಾತ" ಎಂದೂ ಎರಡು ಪಾಠಗಳುಂಟು. ಎರಡನೆಯ ಪಾಠದಲ್ಲಿ "ಅಪ್ಪಾ! ನೀನು ಇದುವರೆಗೆ ನೀರನ್ನು ತರದಿದ್ದುದರಿಂದ ಅಲ್ಲಿ ಆಡುತ್ತಿದ್ದ ಹಾಗಿದೆ" ಎಂದು ಅರ್ಥವು.

ಆ ಅವಸ್ಥೆಯಲ್ಲಿಯೂ ಪ್ರಯತ್ನಪಟ್ಟು, ಮನಸ್ಸಿನಲ್ಲಿ ಭಯವಿದ್ದರೂ ಧೈರ್ಯ ಗೊಂಡವನಂತೆ ಅವ್ಯಕ್ತವಾದ ಮಾತುಗಳಿಂದ ಅವರಿಗೇ ಉತ್ತರವನ್ನು ಹೇಳ ಲಾರಂಭಿಸಿದೆನು. ಆಗ ಊಹಾಪೋಹಾತ್ಮಕವಾದ ಮನಸ್ಸಿನ ಕಾರ್ಯದಿಂದಲೂ, ಇಂದ್ರಿಯನಿಗ್ರಹ ರೂಪವಾದ ವ್ಯಾಪಾರಗಳಿಂದಲೂ ಮಾತನ್ನು ಸ್ವಾಧೀನ ಪಡಿಸಿಕೊಂಡು, ಆ ದಂಪತಿಗಳಿಗೆ ಪುತ್ರವಿರಹವೆಂಬ ದೊಡ್ಡ ಅಪಮೃತ್ಯು ವನ್ನು ತರತಕ್ಕ ಮಾತುಗಳನ್ನು ಹೇಳತೊಡಗಿದೆನು. “ಎಲೈ, ತಪೋಧನನೆ! ನಾನು ಮಹಾತ್ಮನಾದ ನಿನ್ನ ಮಗನಲ್ಲ! ನಾನು ಕ್ಷತ್ರಿಯನು! ದಶರಥ ನೆಂದು ನನಗೆ ಹೆಸರು! ಸಜ್ಜನನಿಂದಿತವಾದ ಒಂದು ಮಹಾದುಃಖಕಾರ್ಯ ವನ್ನು ನಡೆಸಿಬಿಟ್ಟೆನು. ನಾನು ಧನುರ್ಧಾರಿಯಾಗಿ ಸರಯೂನದಿಯ ತೀರದಲ್ಲಿ ಸಂಚರಿಸುತ್ತಿದ್ದೆನು. ದುಷ್ಟಮೃಗಗಳನ್ನು ಕೊಲ್ಲಬೇಕೆಂದು ಬೇಟೆ ಯಾಡುವುದಕ್ಕಾರಂಭಿಸಿ ಅಲ್ಲಲ್ಲಿ ಸಿಕ್ಕಿದ ಕಾಡಾನೆಗಳೇ ಮೊದಲಾದ ಕ್ರೂರ ಜಂತುಗಳನ್ನು ಕೊಲ್ಲುತಿದ್ದೆನು. ಇಷ್ಟರಲ್ಲಿ ಆ ನದಿಯಲ್ಲಿ ನೀರನ್ನು ಮೊಗೆ ಯುವ ಶಬ್ದವು ನನ್ನ ಕಿವಿಗೆ ಬಿದ್ದಿತು. ಆನೆಯೆಂಬ ಭ್ರಾಂತಿಯಿಂದ ಅದರ ಕಡೆಗೆ ಬಾಣವನ್ನು ಬಿಟ್ಟೆನು. ಆಗ ಮನುಷ್ಯರು ಕೂಗುವಂತೆ ಒಂದು ಹಾಹಾಕಾರ ಧ್ವನಿಯು ಕೇಳಿಸಿತು. ಒಡನೆಯೇ ಬೆಜ್ಜರಬಿದ್ದು ನದೀತೀರಕ್ಕೆ ಓಡಿ ಹೋದೆನು. ಅಲ್ಲಿ ಬಾಣದಿಂದ ನಾಟಲ್ಪಟ್ಟ ಎದೆಯುಳ್ಳವನಾಗಿ ನೆಲದ ಮೇಲೆ ಮಲಗಿರುವ ತಾಪಸನೊಬ್ಬನನ್ನು ಕಂಡೆನು. ಎಲೈ! ಪೂಜ್ಯನೆ! ಆನೆಯನ್ನು ಹೊಡೆಯಬೇಕೆಂದು ಶಬ್ದವನ್ನು ಗುರಿಹಿಡಿದು ನಾನು ಬಿಟ್ಟ ಬಾಣವು ನಿನ್ನ ಮಗನಿಗೆ ತಗುಲಿ ಆತನು ಸತ್ತುಹೋದನು. ನಾನು ಅಲ್ಲಿ ಹೋಗಿ ನೋಡುವಾಗ ನಿನ್ನ ಮಗನು ಅರ್ಧಪ್ರಾಣದಿಂದ ನರಳುತ್ತಾ ಮರ್ಮ ಸ್ಥಾನದಲ್ಲಿ ನಾಟಿಕೊಂಡಿರುವ ಆ ಬಾಣವನ್ನು ಕಿತ್ತುಬಿಡೆಂದು ನನಗೆ ಹೇಳಿ ದನು. ಆತನ ಮಾತಿನಮೇಲೆ ನಾನು ಬಾಣವನ್ನು ಕಿತ್ತೊಡನೆಯೇ ಆತನು ಸ್ವರ್ಗಸ್ಥನಾದನು. ಪ್ರಾಣೋತ್ಕ್ರಮಣ ಕಾಲದಲ್ಲಿಯೂ ಕೂಡ ಆತನು ತಂದೆ ತಾಯಿಗಳಾದ ನೀವಿಬ್ಬರೂ ಕುರುಡರಾಗಿ ದಿಕ್ಕಿಲ್ಲದೆ ಕಷ್ಟಪಡುವಿರೆಂಬ ಚಿಂತೆ ಯಿಂದ ಗೋಳಿಡುತ್ತಿದ್ದನು. ಎಲೈ, ಮಹರ್ಷಿಯೆ! ನಿನ್ನ ಮಗನನ್ನು ಅಜ್ಞಾನ ದಿಂದ ನಾನೇ ಕೊಂದೆನು. ಈ ಪ್ರಮಾದ ಕಾರ್ಯವಂತೂ ನಡೆದುಹೋಯಿತು. ಇದರ ಮೇಲೆ ಮುಂದೆ ನಡೆಸಬೇಕಾದ ಶಾಪವನ್ನೋ ನನಗೆ ಕರುಣಿಸಿಬಿಡಿ,”

ಎಂದೆನು. ಹೀಗೆ ಕ್ರೂರವಾಕ್ಯವನ್ನು ಹೇಳುತ್ತಿರುವ ನನ್ನ ಮಾತನ್ನು ಕೇಳಿ ಆ ತಪಸ್ವಿಯು ಪುತ್ರವ್ಯಸನವನ್ನು ತಡೆದಿಟ್ಟುಕೊಳ್ಳಲಾರದೆ ಸಂಕಟದಿಂದ ತತ್ತ್ರಳಿಸುತಿದ್ದನು. ಆತನ ಕಣ್ಣಿನಲ್ಲಿ ಬಾಷ್ಪಪ್ರವಾಹವು ಸುರಿಯುತಿತ್ತು. ದುಃಖದಿಂದ ಕಂದಿ ಉದ್ದವಾಗಿ ನಿಟ್ಟುಸಿರನ್ನು ಬಿಡುತ್ತಿದ್ದನು. ಆತನ ಮುಂದೆ ನಾನು ಕೈಮುಗಿದೇ ನಿಂತಿದ್ದೆನು. ಮಹಾತೇಜಸ್ವಿಯಾದ ಆ ಮುನಿಯು ನನ್ನನ್ನು ಕುರಿತು "ಎಲೈ ರಾಜನೆ! ನೀನು ನಡೆಸಿದ ಈ ಘೋರ ಕೃತ್ಯವನ್ನು ನೀನಾಗಿಯೇ ಬಂದು ನಿನ್ನ ಬಾಯಿಯಿಂದಲೇ ಹೇಳದೆ ಉದಾಸೀನನಾಗಿ ಹೊರಟುಹೋಗಿದ್ದ ಪಕ್ಷದಲ್ಲಿ ನಿನ್ನ ತಲೆಯು ಆ ಕ್ಷಣವೇ ಶತಸಹಸ್ರಭಾಗವಾಗಿ ಒಡೆದುಹೋಗುತ್ತಿತ್ತು. ನಾನು ಆಗ ಶಾಪವನ್ನು ಕೊಡುವುದಕ್ಕೆ ಸ್ವಲ್ಪವೂ ತಡೆಯುತ್ತಿರಲಿಲ್ಲ. ಕ್ಷತ್ರಿಯನಾದವನು ವಾನಪ್ರಸ್ಥನನ್ನು ಕೊಂದುದೇ ಆದರೆ ಆತನಿಗೆ ಸ್ಥಾನಭ್ರಂಶವೆಂಬುದು ತಾನಾಗಿಯೇ ಸಂಭವಿಸುವುದು. ಅದರಲ್ಲಿಯೂ ಮುಖ್ಯವಾಗಿ ಇಂತಹ ಅಪರಾಧವನ್ನು ಜ್ಞಾನಪೂರ್ವಕವಾಗಿ ನಡೆಸಿದರೆ, ದೇವೇಂದ್ರನಾದರೂ ಪದವಿಯಿಂದ ಜಾರಿಬೀಳುವನು. ಮತ್ತೆ ತಪಸ್ಸಿನಲ್ಲಿರತಕ್ಕ ಒಬ್ಬ ಋಷಿಯಮೇಲೆ ಜ್ಞಾನಪೂರ್ವಕವಾಗಿ ಶಸ್ತ್ರಪ್ರಯೋಗವನ್ನು ಮಾಡಿದವನ ತಲೆಯು ಆ ಕ್ಷಣವೇ ಏಳುಭಾಗವಾಗಿ ಸೀಳಿಹೋಗುವುದು. ಬ್ರಹ್ಮವಾದಿಯಾದ ಅಂತಹ ತಪಸ್ವಿಯಲ್ಲಿ ನೀನು ಈ ಮಹಾಪರಾಧವನ್ನು ಅಜ್ಞಾನದಿಂದ ನಡೆಸಿಬಿಟ್ಟೆಯಾದುದರಿಂದ, ಈಗಲೂ ನೀನು ಬದುಕಿರುವುದಕ್ಕೆ ಕಾರಣವಾಯಿತು. ನೀನು ಜ್ಞಾನಪೂರ್ವಕವಾಗಿ ಈ ಕೆಲಸವನ್ನು ನಡೆಸಿದ್ದ ಪಕ್ಷದಲ್ಲಿ, ಇಷ್ಟರೊಳಗೆ ಇಕ್ಷ್ವಾಕುವಂಶವೇ ನಿರ್ನಾಮವಾಗಿ ಅಳಿಸಿಹೋಗುತಿತ್ತು. ಆಗ ನಿನ್ನ ಪಾಡನ್ನು ಹೇಳತಕ್ಕುದೇನು? ಎಲೈ ರಾಜನೆ! ಅದು ಹಾಗಿರಲಿ. ಈಗ ನಮ್ಮಿಬ್ಬರನ್ನೂ ಆ ಪ್ರದೇಶಕ್ಕೆ ತೆಗೆದುಕೊಂಡು ಹೋಗಿಬಿಡು! ಆತನ ದೇಹವನ್ನಾದರೂ ಕೊನೆಯಸಾರಿ ನೋಡಿ ಬಂದು ಬಿಡುವೆವು. ರಕ್ತದಿಂದ ತೊಯ್ದ ಮೈಯುಳ್ಳವನಾಗಿ, ಕದಲಿದ ನಾರುಮಡಿಯುಳ್ಳವನಾಗಿ ಪ್ರಜ್ಞೆ ಇಲ್ಲದೆ ಮೃತ್ಯುದೇವತೆಯ ಕೈಯಲ್ಲಿ ಬಿದ್ದಿರುವ ನನ್ನ ಪುತ್ರನಿರುವ ಸ್ಥಳಕ್ಕೆ ನಮ್ಮನ್ನು ಕರೆದುಕೊಂಡು ಹೋಗಿಬಿಡು" ಎಂದನು. ಆಗ ಪರಮ ದುಃಖಿತರಾದ ಆ ದಂಪತಿಗಳನ್ನು ತಾಪಸನು ಸತ್ತುಬಿದ್ದಿದ್ದ ಸ್ಥಳಕ್ಕೆ ನಾನೊಬ್ಬನೇ ಕೊಂಡುಹೋಗಿ ಆತನ ದೇಹವನ್ನು ಅವರಿಬ್ಬರ ಕೈಯಿಂದಲೂ ಮುಟ್ಟಿಸಿದೆನು.

ದುಃಖಿತರಾದ ಆ ತಂದೆತಾಯಿಗಳಿಬ್ಬರೂ ಮಗನ ದೇಹವನ್ನು ಕೈಯಿಂದ ಸವರಿ ಆತನ ಮೈಮೇಲೆ ಬಿದ್ದು ಗೋಳಿಡುತ್ತಿದ್ದರು. ಆಗ ತಂದೆಯು ಮೃತಪುತ್ರನ ಮುಂದೆ ಕುಳಿತು "ಅಯ್ಯೋ ಮಗನೇ! ಇನ್ನೂ ನಮಗೇಕೆ ನಮಸ್ಕಾರ ಮಾಡುವುದಿಲ್ಲ? ಹಿಂದಿನಂತೆ ನನಗೆ ಪ್ರತ್ಯುತ್ತರವನ್ನು ಏಕೆ ಕೊಡುವುದಿಲ್ಲ? ಏಕೆ ನೀನು ಹೀಗೆ ನೆಲದಮೇಲೆ ಮಲಗಿರುವೆ? ನಮ್ಮ ಮೇಲೆ ನಿನಗೆ ಏನಾದರೂ ಕೋಪವುಂಟೆ? ಒಂದುವೇಳೆ ನಾನು ನಿನಗೆ ಪ್ರಿಯನಲ್ಲದಿದ್ದರೂ ನಿನ್ನ ತಾಯಿಯನ್ನಾದರೂ ಕಣ್ಣೆಟ್ಟು ನೋಡಬಾರದೆ? ಎಲೈ ಧರ್ಮಜ್ಞನೆ! ಇನ್ನೂ ನೀನು ನಿನ್ನ ತೋಳುಗಳಿಂದ ಏಕೆ ನಮ್ಮನ್ನು ಆಲಿಂಗಿಸುವುದಿಲ್ಲ? ನೀನು ನಮ್ಮೊಡನೆ ಯಾವಾಗಲೂ ಪ್ರಿಯವಾಕ್ಯಗಳನ್ನು ನುಡಿಯುತಿದ್ದವನಲ್ಲವೆ? ಈಗ ನೀನೇಕೆ ಮಾತಾಡುವುದಿಲ್ಲ? ಕರ್ಣಾನಂದಕರವಾಗಿರುವಂತೆ ಶಾಸ್ತ್ರಗಳನ್ನೂ ಪುರಾಣಗಳನ್ನೂ ನೀನು ಆಗಾಗ ಓದುತ್ತಿರುವುದನ್ನು ಕೇಳಿ ನಾನು ಎಷ್ಟೋ ಆನಂದಿಸುತಿದ್ದೆನು. ಇನ್ನು ಮೇಲೆ ನಾನು ಯಾರ ಬಾಯಿಯಿಂದ ಅವುಗಳನ್ನು ಕೇಳಲಿ? 1 ಸಂಧ್ಯೋಪಾಸನೆಯನ್ನು ಮಾಡಿ, ಅಗ್ನಿಹೋತ್ರ ಕಾರ್ಯಗಳನ್ನು ಮುಗಿಸಿಕೊಂಡು ಸಮೀಪದಲ್ಲಿ ಕುಳಿತು ನನ್ನನ್ನು ಇನ್ನು ಮೇಲೆ ಉಪಚರಿಸುವರಾರು? ಅದರಲ್ಲಿಯೂ ಮುಖ್ಯವಾಗಿ ಪುತ್ರಶೋಕದಿಂದ ಪೀಡಿತನಾಗಿ ನನ್ನನ್ನು ಈಗ ಸಮಾಧಾನಗೊಳಿಸುವರಾರು? ಕಾಡಿನಲ್ಲಿ ಗೆಡ್ಡೆ ಗೆಣಸುಗಳನ್ನು ಸಂಗ್ರಹಿಸಿ ತಂದು ಅತಿಥಿಗಳನ್ನು ಆದರಿಸುವಂತೆ ನನಗೆ ಇನ್ನು ಮೇಲೆ ಪ್ರೀತಿಯಿಂದ ಆದರಿಸಿ ಭೋಜನವನ್ನಿಡುವವರಾರು? ಈಗ ನಾನು ಕರ್ಮಾನುಷ್ಠಾನಗಳನ್ನು ಮಾಡುವುದಕ್ಕೂ ಶಕ್ತನಲ್ಲ! ಕಾಡಿನಲ್ಲಿ ಧಾನ್ಯಗಳನ್ನು ಆಯ್ದು ತರುವುದಕ್ಕೂ ನನಗೆ ಸಾಧ್ಯವಿಲ್ಲ; ಅನಾಥನಾಗಿ ದಿಕ್ಕಿಲ್ಲದೆ ಸಂಕಟಪಡುವ ನನಗೆ ಇನ್ನು ಸಹಾಯಕರಾರು? ವೃದ್ಧಳಾಗಿ ಕಣ್ಣುಕಾಣದೆ

1 ಇಲ್ಲಿ ಸಂಧ್ಯೋಪಾಸನೆಯೆಂದರೆ ತಂತ್ರೋಕ್ತವಾದ ಸಂಧ್ಯಾನಮಸ್ಕಾರಮಾತ್ರವೆಂದು ಗ್ರಹಿಸಬೇಕು. ಅಗ್ನಿಹೋತ್ರವೆಂದರೆ ಹೋಮವು "ವೈಶ್ಯನಿಗೆ ಶೂದ್ರಸ್ತ್ರೀಯಲ್ಲಿ ಹುಟ್ಟಿದವನು ಕರಣನೆನಿಸುವನು. ಇಂತವನಿಗೆ ಹೋಮಾಧಿಕಾರವುಂಟೆ?" ಎಂದು ಶಂಕೆಯುಂಟಾಗಬಹುದಲ್ಲವೆ? ಅದರ ಸಮಾಧಾನವೆಂದರೆ; "ನಮಸ್ಕಾರೇಣ ಮಂತ್ರೇಣ ಪಂಚಯಜ್ಞಾನ್ ಸಮಾಪಯೇತ್" ಎಂಬುವಾಗಿ, ಕೇವಲ ಚತುರ್ಥವರ್ಣದವರಿಗೂ ಪಂಚಯಜ್ಞಾಧಿಕಾರವುಂಟೆಂದು ಒಂದು ಸ್ಮೃತಿಪ್ರಮಾಣವಿರುವಾಗ ಅದಕ್ಕಿಂತಲೂ ಉತ್ತಮಜನ್ಮವುಳ್ಳವರಿಗೆ ಹೇಳಬೇಕಾದುದೇ ಇಲ್ಲವು.

ದುಃಖಿಸುತ್ತಿರುವ ನಿನ್ನ ತಾಯಿಯನ್ನು ಇನ್ನು ನಾನು ಹೇಗೆ ಭರಿಸಲಿ! ಪುತ್ರವಿರಹದಿಂದ ಸುತ್ತಿರುವ ಆಕೆಯ ಸಂಕಟವನ್ನು ನಾನು ಹೇಗೆ ನೋಡಿ ಸಹಿಸಲಿ? ಎಲೈ ಮಗನೆ! ನಿಲ್ಲು! ನನ್ನ ಕಡೆಗೆ ತಿರುಗು! ನನ್ನನ್ನು ಬಿಟ್ಟು ಯಮಪುರಿಗೆ ಹೋಗುವುದುಚಿತವೆ? ನಾಳೆ ನಾವು ಮೂವರೂ ಒಟ್ಟಿಗೆ ಸೇರಿ ಯಮಾಲಯವನ್ನು ಪ್ರವೇಶಿಸುವೆವು. ಕಾಡಿನಲ್ಲಿ ದಿಕ್ಕಿಲ್ಲದೆ ಪುತ್ರ ಶೋಕದಿಂದ ಕೊರಗುತ್ತಿರುವ ನಾವು ಇನ್ನು ಮೇಲೆ ನಿನ್ನನ್ನು ಬಿಟ್ಟು ಈ ಭೂಮಿಯಲ್ಲಿರಲಾರೆವು. ಅಥವಾ ನಾನೇ ಮೊದಲು ಯಮನಬಳಿಗೆ ಹೋಗಿ ಆತನನ್ನು ಕುರಿತು, "ಎಲೈ ರಾಜನೇ! ಪ್ರಸನ್ನನಾಗು. ನಿನ್ನಲ್ಲಿ ನನ್ನದೊಂದು ವಿಜ್ಞಾಪನೆಯುಂಟು. ನನ್ನ ಈ ಮಗನು ನಮ್ಮಿಬ್ಬರಿಗೂ ದಿಕ್ಕಾಗಿರುವನು. ಆತನನ್ನು ನಮ್ಮ ವಶಕ್ಕೆ ಹಿಂತಿರುಗಿ ಕೊಟ್ಟುಬಿಡು!" ಎಂದು ವಿನಯದಿಂದ ಪ್ರಾರ್ಥಿಸಿಕೊಳ್ಳುವೆನು. ಮಹಾ ಯಶಸ್ವಿಯಾಗಿ ಲೋಕ ಪಾಲಕನಾಗಿ ಧರ್ಮಾತ್ಮನೆನಿಸಿಕೊಂಡಿರುವ ಆ ಯಮನು ನನಗೆ ಇದೊಂದು ಅಭಯ ದಕ್ಷಿಣೆಯನ್ನು ಕೊಡದೆ ಇರಲಾರನು. ಆತನು ನನ್ನ ಮಾತನ್ನು ಲಾಲಿಸಿ ನಿನ್ನನ್ನು ಹಿಂತಿರುಗಿ ಕೊಟ್ಟೇಬಿಡುವನು. ಎಲೆ ವತ್ಸನೆ! ನೀನು ಹುಟ್ಟಿದುದು ಮೊದಲು ಪಾಪಕೃತ್ಯವನ್ನೇ ಕಂಡವನಲ್ಲ. ಪಾಪಿಯಾದ ಕ್ಷತ್ರಿಯನೊಬ್ಬನು ನಿನ್ನನ್ನು ಕೊಂದನು. ಅಥವಾ ನೀನು ಹಿಂದೆ ಅಜ್ಞಾನದಿಂದ ಯಾವುದಾದರೂ ಪಾಪಮಾಡಿದ್ದರೂ ಈ ಶಸ್ತ್ರಹತಿಯಿಂದ ನಿನ್ನ ಆ ಪಾಪವು ಹೋಗಲಿ! ಆ ಸತ್ಯದಿಂದಲಾದರೂ ನೀನು ರಣನಿಹಿತರಾದ ವೀರರಿಗೆ ಯೋಗ್ಯವಾದ ಲೋಕಗಳನ್ನು ಪಡೆದು ಸುಖಿಸುತ್ತಿರು! ಯುದ್ಧದಲ್ಲಿ ಹಿಂತಿರುಗದೇ ಪ್ರಾಣವನ್ನು ಬಿಟ್ಟ ಶೂರರಿಗೆ ಯಾವ ಸದ್ಗತಿಯುಂಟಾಗುವುದೋ ಆ ಸದ್ಗತಿಯು ನಿನಗೂ ಉಂಟಾಗಲಿ! ಸಗರನೂ, ಶೈಬ್ಯನೂ, ದಿಲೀಪನೂ, ಜನಮೇಜಯನೂ, ನಹುಷನೂ, ದುಂಧುಮಾರನೂ ಯಾವ ಯಾವ ಸದ್ಗತಿಗಳನ್ನು ಪಡೆದಿರುವರೋ ಆ ಸದ್ಗತಿಯು ನಿನಗೂ ಉಂಟಾಗಲಿ! ಸಮಸ್ತ ಸಾಧುಜನಗಳೂ ಪಡೆಯತಕ್ಕ ಗತಿಯು ನಿನಗೂ ಉಂಟಾಗಲಿ! ವೇದಾಧ್ಯಯನದಿಂದಲೂ, ತಪಸ್ಸಿನಿಂದಲೂ ಉಂಟಾಗತಕ್ಕ ಸದ್ಗತಿಗಳೆಲ್ಲವೂ ನಿನಗುಂಟಾಗಲಿ! ಭೂದಾನಮಾಡಿದವನಿಗೂ, ಆಹಿತಾಗ್ನಿಗಳಿಗೂ, ಏಕಪತ್ನೀವ್ರತದವನಿಗೂ ಯಾವ ಗತಿಯು ಸಿದ್ಧಿಸುವದೋ ಆ ಗತಿಯು ನಿನಗೂ ಸಿದ್ಧಿಸಲಿ! ಸಹಸ್ರ ಗೋದಾನಗಳನ್ನು ಮಾಡಿದವರು

ಯಾವ ಸದ್ಗತಿಯನ್ನು ಪಡೆಯುವರೋ ಆ ಸದ್ಗತಿಯನ್ನು ನೀನೂ ಹೊಂದು. ಗುರು ಶುಶ್ರೂಷೆ ಮಾಡಿದ ಪುಣ್ಯಶಾಲಿಗಳಿಗೂ, ಮಹಾ ಪ್ರಸ್ಥಾನಾದಿಗಳಿಂದ ಲಾಗಲಿ, ಗಂಗಾ ಯಮುನಾ ಸಂಗಮಾದಿ ಸ್ಥಳಗಳಲ್ಲಿಯಾಗಲಿ, ಅಗ್ನಿಯಲ್ಲಿ ಯಾಗಲಿ ಸಂಕಲ್ಪಪೂರ್ವಕವಾಗಿ ದೇಹತ್ಯಾಗವನ್ನು ಮಾಡಿದವರಿಗೆ ಯಾವ ಸದ್ಗತಿಯುಂಟಾಗುವುದೋ ಆ ಸದ್ಗತಿಯು ನಿನಗೂ ಉಂಟಾಗಲಿ! ತಪೋ ನಿಷ್ಠರಾದ ನಮ್ಮ ಕುಲದಲ್ಲಿ ಹುಟ್ಟಿದವರಾರೂ ದುರ್ಗತಿಯನ್ನು ಹೊಂದಲಾರರು. ನನ್ನ ಮುದ್ದುಮಗನಾದ ನಿನ್ನನ್ನು ಕೊಂದ ಪಾಪಿಯು ಮಾತ್ರವೇ ದುರ್ಗತಿ ಯನ್ನು ಹೊಂದುವನು." ಎಂದು ಹೇಳಿ ಆ ವೃದ್ಧಮುನಿಯೂ ಎಡೆಬಿಡದೆ ಪ್ರಲಾಪಿಸುತ್ತಿದ್ದನು. ಆಮೇಲೆ ಪುತ್ರನಿಗೆ ಅಪರ ಕ್ರಿಯೆಗಳನ್ನು ಮಾಡ ಲಾರಂಭಿಸಿದನು. ಒಡನೆಯೇ ಆ ತಾಪಸಕುಮಾರನಿಗೆ ಆತನ ಪುಣ್ಯ ಕರ್ಮದ ಬಲದಿಂದ ದಿವ್ಯರೂಪವುಂಟಾಯಿತು. ಆಗಲೇ ಸಿದ್ಧವಾಗಿ ಬಂದ ಒಂದು ದಿವ್ಯ ರಥವನ್ನೇರಿ ಇಂದ್ರನೊಡಗೂಡಿ ಸ್ವರ್ಗಕ್ಕೆ ಹೊರಡಲು ಸಿದ್ಧನಾದನು. ಆಗ ಆ ಮುನಿಕುಮಾರನೂ ಇಂದ್ರನೂ ಸ್ವಲ್ಪ ಕಾಲದ ವರೆಗೆ ವೃದ್ಧ ದಂಪತಿಗಳನ್ನು ಸಮಾಧಾನಪಡಿಸುತ್ತಿದ್ದರು. ಆಗ ತಾಪಸಕುಮಾರನು ತನ್ನ ತಂದೆ ತಾಯಿ ಗಳನ್ನು ನೋಡಿ, "ಎಲೈ ಆರ್ಯನೆ! ನಾನು ನಿಮ್ಮ ಶುಶ್ರೂಷೆಯನ್ನು ತಪ್ಪದೆ ನಡೆಸುತ್ತ ಬಂದ ಪುಣ್ಯ ವಿಶೇಷದಿಂದಲೇ ನಿರಾಮಯವಾದ ಈ ಪದವಿಯನ್ನು ಪಡೆದೆನು. ನೀವೂ ಶೀಘ್ರದಲ್ಲಿಯೇ ನಾನಿರತಕ್ಕ ಸ್ಥಳಕ್ಕೆ ಬರುವಿರಿ!" ಎಂದನು. ಆಮೇಲೆ ಜಿತೇಂದ್ರಿಯನಾದ ಆ ತಾಪಸಪುತ್ರನು ಆ ದಿವ್ಯ ವಿಮಾನದಿಂದಲೇ ಸ್ವರ್ಗವನ್ನು ಸೇರಿಬಿಟ್ಟನು. ಇತ್ತಲಾಗಿ ಆ ವೃದ್ಧತಾಪಸನೂ ಪತ್ನಿಯೊಡನೆ ಪುತ್ರನಿಗೆ ಜಲತರ್ಪಣಾದಿಗಳನ್ನು ಮಾಡಿ, ಪಕ್ಕದಲ್ಲಿ ಬದ್ಧಾಂಜಲಿ ಯಾಗಿ ನಿಂತಿದ್ದ ನನ್ನನ್ನು ನೋಡಿ, "ಎಲೆ ರಾಜನೆ! ನೀನು ಈಗಲೇ ಕೊಂದು ಬಿಡು, ಸತ್ತಹೊರತು ಈ ನನ್ನ ಸಂಕಟವು ಅಡಗುವುದಿಲ್ಲ. "ಸಾಯುವುದರಲ್ಲಿ ಸಂಕಟವಿಲ್ಲವೆ?" ಎಂದು ನೀನು ಕೇಳಬಹುದು. ಏಕಪುತ್ರನಾಗಿದ್ದ ಆತನನ್ನು ಕಳೆದುಕೊಂಡು ಬದುಕಿರುವುದಕ್ಕಿಂತಲೂ ಮರಣವೇ ಮೇಲು! ನಮಗಿದ್ದ ಆ ಒಬ್ಬ ಮಗನನ್ನು ನೀನು ಬಾಣದಿಂದ ಕೊಂದುಬಿಟ್ಟೆ. ಅದನ್ನು ನೋಡಿ ಸಹಿಸು ವುದಕ್ಕಿಂತಲೂ ಲೋಕದಲ್ಲಿ ಬೇರೆ ಸಂಕಟವೇನುಂಟು? ಶುದ್ಧಾತ್ಮನಾದ ನನ್ನ ಮಗನನ್ನು ನೀನು ಅಜ್ಞಾನವಶದಿಂದ ಸಂಹರಿಸಿದೆಯಾದ ಕಾರಣ ನಿನ್ನನ್ನು

ಮನ್ನಿಸಬೇಕಾಗಿದೆ. ಈ ಕೆಲಸವನ್ನು ಮಾತ್ರ ನೀನು ಜ್ಞಾನಪೂರ್ವಕ ವಾಗಿಯೇ ನಡೆಸಿದ್ದರೆ, ಆ ಕ್ಷಣವೇ ನಾನು ನನ್ನ ತಪಃಪ್ರಭಾವದಿಂದ ನಿನ್ನನ್ನು ಸುಟ್ಟು ಭಸ್ಮಮಾಡುತ್ತಿದ್ದೆನು. ಈಗಲೂ ನನ್ನ ಸಂಕಟವನ್ನಾರಿಸಿಕೊಳ್ಳು ವುದಕ್ಕಾಗಿ ನಿನಗೊಂದು ಕ್ರೂರವಾದ ಶಾಪವನ್ನು ಕೊಡದೆ ಬಿಡಲಾರೆನು. ನನಗೆ ಈ ಅಂತ್ಯಕಾಲದಲ್ಲಿ ಪುತ್ರವಿಯೋಗವನ್ನುಂಟುಮಾಡಿ, ಅದರಿಂದ ಮರಣಾಂತವಾದ ದುಃಖವನ್ನು ತಂದಿಟ್ಟೆಯಲ್ಲವೆ? ನೀನೂ ಹೀಗೆಯೇ ಪುತ್ರಶೋಕದಿಂದಲೇ ಮರಣವನ್ನು ಹೊಂದುವೆ! ಆದರೆ ಎಲೈ ರಾಜನೆ! ನೀನು ಋಷಿಪುತ್ರನನ್ನು ಏನೋ ಅಜ್ಞಾನವಶದಿಂದ ಕೊಂದುಬಿಟ್ಟೆ! ಆದುದರಿಂದ, ಅದರಿಂದುಂಟಾಗಬೇಕಾದ ಬ್ರಹ್ಮಹತ್ಯಾಪಾತಕಕ್ಕೆ ಸಮಾನವಾದ ಪಾಪವು ನಿನಗೆ ಸಂಭವಿಸದಿರಲಿ! ಮತ್ತು ನೀನು ಈಗ ನನಗೆ ಪ್ರಾಣಾಂತಕರ ವಾದ ಈ ಘೋರಸ್ಥಿತಿಯನ್ನುಂಟುಮಾಡಿರುವೆಯಾದುದರಿಂದ, ದಕ್ಷಿಣೆಯನ್ನು ಕೊಟ್ಟವನು ಆ ದಕ್ಷಿಣೆಗೆ ತಕ್ಕ ಫಲವನ್ನು ಪಡೆಯುವಂತೆ, ನೀನೂ ಈ ಜನ್ಮ ದಲ್ಲಿಯೇ ನನ್ನಂತೆ ಮಹಾ ವಿಪತ್ತನ್ನು ಹೊಂದುವೆ," ಎಂದು ಶಪಿಸಿರುವನು. ಹೀಗೆ ನನಗೆ ಶಾಪವನ್ನು ಕೊಟ್ಟಮೇಲೆ ಆ ದಂಪತಿಗಳಿಬ್ಬರೂ ಬಹು ದೈನ್ಯದಿಂದ ಕಲ್ಲುಕರಗುವಂತೆ ಪ್ರಲಾಪಿಸುತಿದ್ದು, ಕೊನೆಗೆ ತಮ್ಮಿಬ್ಬರ ದೇಹವನ್ನೂ ಒಂದಾಗಿ ಸೇರಿಸಿ ಕಟ್ಟಿಕೊಂಡು ಚಿತೆಯನ್ನೇರಿ ಸ್ವರ್ಗವನ್ನು ಹೊಂದಿದರು. ಎಲೆ ದೇವಿ! ಈಗ ನನಗೆ ಸಂಭವಿಸಿರುವ ಮರಣಾಂತವಾದ ಈ ಪುತ್ರಶೋಕಕ್ಕೆ ಇದೇ ಕಾರಣವು. ಬಾಲ್ಯದಲ್ಲಿ ಶಬ್ದದಲ್ಲಿ ಶಬ್ದವೇಧಿಯೆಂಬ ಖ್ಯಾತಿಯಿಂದ ನಾನು ಗರ್ವಪಟ್ಟು ನಡೆಸಿದ ಕೃತ್ಯವು ಈಗ ಸ್ಮರಣೆಗೆ ಬಂದಿದೆ. ಅಪಥ್ಯ ಪದಾರ್ಥ ಗಳೊಡನೆ ಅನ್ನವನ್ನು ತಿಂದವನಿಗೆ ಆಗಲೇ ವ್ಯಾಧಿಯು ಬಂದು ಆವರಿಸಿಕೊಳ್ಳು ವಂತೆ, ನಾನು ನಡೆಸಿದ ಪಾಪಕಾರ್ಯಕ್ಕೆ ಈಗ ದುಃಖರೂಪವಾದ ಫಲವು ಪ್ರಾಪ್ತ ವಾಯಿತು. ನಾನು ಈ ಪುತ್ರಶೋಕದಿಂದಲೇ ಪ್ರಾಣವನ್ನೂ ಬಿಡಬೇಕಾಗಿ ಸಂಭವಿಸಿದೆ. ಮಹಾತ್ಮನಾದ ಆ ಋಷಿಯ ಶಾಪವೂ ಈಗಲೇ ಸಿದ್ಧಿಸುವಕಾಲ ವೆಂದು ತೋರಿದೆ. ಎಲೆ ಪ್ರಿಯೆ! ನನ್ನ ಕಣ್ಣುಗಳಲ್ಲಿ ದೃಷ್ಟಿಪಾಟವವೂ ತಪ್ಪಿ ಹೋಯಿತು. ನಿನ್ನನ್ನು ನಾನು ನೋಡಲಾರೆನು. ನನ್ನನ್ನು ನಿನ್ನ ಕೈಯಿಂದ ಲಾದರೂ ಚೆನ್ನಾಗಿ ಮುಟ್ಟಿಸವರಿ ನನಗೆ ಆಪ್ಯಾಯನವನ್ನುಂಟು ಮಾಡು ವೆಯಾ?" ಎಂದು ಹೇಳಿ, ಬಾರಿಬಾರಿಗೂ ಪ್ರಲಾಪಿಸುತ್ತ, ಹಾಗೆಯೇ ಬೆಚ್ಚಿ

ಬಿದ್ದಂತೆ ನಡುಗುತ್ತ, “ಎಲೆ ದೇವಿ! ರಾಮ ವಿಷಯದಲ್ಲಿ ನಾನು ಮಾಡಿದ ಮಹಾಪರಾಧವು ಪಾಪಿಯಾದ ನನಗೆ ಉಚಿತವಾಗಿಯೇ ಇರುವುದು. ಅಯ್ಯೋ! ಮಹಾತ್ಮನಾದ ಆ ರಾಮನ ಸದ್ಗುಣವನ್ನೇನೆಂದು ಹೇಳಲಿ! ಅವನು ನನ್ನ ಮಾತಿಗೆ ಸ್ವಲ್ಪವಾದರೂ ಹಿಂತೆಗೆಯದೆ, ಒಂದು ಪ್ರತಿವಾಕ್ಯವನ್ನಾದರೂ ಆಡದೆ, ಆ ಕ್ಷಣವೇ ಕಾಡಿಗೆ ಹೊರಟನಲ್ಲವೆ? ಇಂತಹ ಮಹಾಮಹಿಮೆಯು ಆ ಮಹಾತ್ಮನಿಗೊಬ್ಬನಿಗೇ ಹೊರತು ಬೇರೊಬ್ಬರಿಗೂ ಸಲ್ಲದು. ಹೊಟ್ಟೆಯಲ್ಲಿ ಹುಟ್ಟಿದ ಮಗನು ಎಷ್ಟೇ ದುರ್ಮಾರ್ಗಗತನಾಗಿದ್ದರೂ ಕಾಡಿಗೆ ಕಳುಹಿಸು ವವರುಂಟೆ? ವಿವೇಕಿಯಾದವನೊಬ್ಬನೂ ಹಾಗೆ ಮಾಡಲಾರನು. ಅಥವಾ ತಂದೆಯು, ಒಂದುವೇಳೆ ಕೋಪದಿಂದ ಕಾಡಿಗೆ ಹೋಗೆಂದು ಹೇಳಿದ ಮಾತ್ರಕ್ಕೆ ಲೋಕದಲ್ಲಿ ಯಾವ ಮಕ್ಕಳು ತಾನೇ ಕೋಪಿಸದೆ ಆ ಮಾತನ್ನು ಗೌರವಿಸುವರು! ರಾಮನು ಈಗಲೇ ಬಂದು ನನ್ನನ್ನು ತನ್ನ ಕೈಯಿಂದ ಮುಟ್ಟಿದರೆ, ಅಥವಾ ಅವನು ಬಂದು ನನ್ನ ಮುಂದೆ ನಿಂತರೆ ನನ್ನ ಪ್ರಾಣವು ನಿಲ್ಲುವುದೇ ಹೊರತು ಅದಿಲ್ಲದಿದ್ದರೆ ನಾನು ಬದುಕಿರಲಾರೆನು. ಯಮಲೋಕವನ್ನು ಸೇರಿದ ಮೇಲೆ ಮನುಷ್ಯರು ತಮ್ಮ ಬಂಧುಗಳನ್ನು ನೋಡುವ ಸಂಭವವಿಲ್ಲವಲ್ಲವೆ? ಆದುದರಿಂದ ಈ ಪ್ರಾಣವಿರುವಾಗಲೇ ರಾಮನನ್ನು ನೋಡಬೇಕೆಂದಿರುವೆನು. ಎಲೆ ಕೌಸಲ್ಯೆ! ನೀನು ಕಣ್ಣೆದಿರಿಗಿರುವಾಗಲೂ ನಾನು ನಿನ್ನನ್ನು ನೋಡಲಾರೆನು. ನನಗ ಸ್ಮರಣೆಯೂ ತಪ್ಪುತ್ತ ಬಂದಿರುವುದು. ಇದೋ ಇಲ್ಲಿ ಯಮದೂತರು ಬಂದು ನನ್ನನ್ನು ತ್ವರೆಪಡಿಸುತ್ತಿರುವರು. ಎಲೆ ದೇವಿ! ಅದೆಲ್ಲವೂ ಹೇಗಾದರೂ ಹೋಗಲಿ. ಇದೊಂದಕ್ಕೂ ನಾನಂಜುವವನಲ್ಲ! ಈ ಪ್ರಾಣವು ಹೋಗುವ ಕಾಲದಲ್ಲಿಯೂ ಧರ್ಮಜ್ಞನಾದ, ಮತ್ತು ಸತ್ಯಪರಾಕ್ರಮಿಯಾದ ಆ ರಾಮನನ್ನು ನೋಡದಿರುವೆನಲ್ಲವೆ? ಇದಕ್ಕಿಂತಲೂ ಇನ್ನು ನನಗೆ ದುಃಖವೇನಿರುವುದು. ರಾಮನು ಸಂಕಲ್ಪಿಸಿದ ಕಾರ್ಯಕ್ಕೆ ಯಾರೂ ಅಡ್ಡಿಮಾಡಲಾರರು. ಅಂತಹ ರಾಮನ ಅಗಲಿಕೆಯಿಂದುಂಟಾದ ದುಃಖವು ಈಗೀಗ ನನ್ನ ಪ್ರಾಣಗಳನ್ನೇ ಸುಡುತ್ತಿರುವುದು. ಅಲ್ಪಜಲವುಳ್ಳ ಕೊಳವನ್ನು ಸೂರ್ಯನ ಬಿಸಿಲು ನಿಶ್ಶೇಷ ವಾಗಿ ಹೀರಿಬಿಡುವಂತೆ ನಿಸ್ಸಾರವಾದ ನನ್ನ ಪ್ರಾಣವನ್ನು ಶೋಕಾಗ್ನಿಯು ಹೀರುತ್ತಿರುವುದು. ಅಯ್ಯೋ! ಪುನಃ ಹಿಂತಿರುಗಿ ಬಂದ ರಾಮನನ್ನು ನೋಡುವ ಭಾಗ್ಯವೂ ನನಗಿಲ್ಲದೇ ಹೋಗುವುದಲ್ಲಾ! ಈ ಹದಿನಾಲ್ಕು

ವರ್ಷಗಳು ಕಳೆದುಹೋದಮೇಲೆ ಹದಿನೈದನೆಯ ವರ್ಷದಲ್ಲಿ ಕಾಡಿನಿಂದ ಹಿಂತಿರುಗಿ ಬಂದ ರಾಮನ ಕುಂಡಲಾಲಂಕೃತವಾದ ಮುಖವನ್ನು ಯಾರು ನೋಡುವರೋ, ಅವರನ್ನು [1] ದೇವಾಂಶ ಪುರುಷರೆಂದೇ ಹೇಳಬೇಕೇ ಹೊರತು ಮನುಷ್ಯರೆಂದೆಣಿಸಲಾರೆನು. ಕಮಲದಂತೆ ಕಣ್ಣುಗಳೂ, ಅಂದವಾದ ಹುಬ್ಬುಗಳೂ, ಅತಿಮನೋಹರವಾದ ದವಡೆಯ ಹಲ್ಲುಗಳೂ ಎಸಳಾದ ಮೂಗೂ, ಶೋಭಿಸುತ್ತಿರಲು, ಚಂದ್ರಬಿಂಬಕ್ಕೆ ಸಮಾನವಾದ ಆತನ ಮುಖವನ್ನು ನೋಡುವವರೇ ಪರಮಭಾಗ್ಯಶಾಲಿಗಳು. ಶರತ್ಕಾಲದ ಚಂದ್ರನಿಗೂ, ಅರಳಿದ ಕಮಲಕ್ಕೂ ಸಮಾನವಾಗಿ, ಸುಗಂಧವನ್ನು ಸೂಸುತ್ತಿರುವ ಆ ನನ್ನ ರಾಮನ ಮುದ್ದು ಮುಖವನ್ನು ನೋಡುವವರೇ ಪುಣ್ಯಾತ್ಮರು. ವನವಾಸವನ್ನು ತೀರಿಸಿಕೊಂಡು ಹಿಂತಿರುಗಿ ಅಯೋಧ್ಯೆಗೆ ಬಂದಮೇಲೆ ಮೌಢ್ಯದೆಶೆಯು ಕಳೆದು ಉಚ್ಚಸ್ಥಿತಿಯಲ್ಲಿರುವ ಶುಕ್ರನಂತೆ ಪ್ರಕಾಶಿಸುವ ಆ ರಾಮನನ್ನು ನೋಡುವವರೇ ಪರಮ ಸುಖಿಗಳು. ಅಯ್ಯೋ! ನನಗೆ ಆ ಭಾಗ್ಯವಿಲ್ಲದೇ ಹೋಗುವುದಲ್ಲಾ! ಇನ್ನೇನು ಮಾಡಲಿ! ಎಲೆ ಕೌಸಲ್ಯೆ! ಇನ್ನು ಮುಗಿಯಿತು. ನನ್ನ ಮನಸ್ಸಿಗೆ ಮಹಾಂಧಕಾರವು ಆವರಿಸಿ ಹೋಯಿತು. ನನ್ನ ಇಂದ್ರಿಯಗಳಲ್ಲಿ ಕ್ರಮ ಕ್ರಮವಾಗಿ ಪಾಟವವೂ ತಪ್ಪುತ್ತಬಂದಿರುವುದರಿಂದ, ಶಬ್ದಸ್ಪರ್ಶರಸಾದಿಗಳೊಂದೂ ನನಗೆ ತಿಳಿಯುವುದೇ ಇಲ್ಲ. ದೀಪದಲ್ಲಿ ಎಣ್ಣೆಯು ಮುಗಿದು ಹೋದಮೇಲೆ ಅದರ ಜ್ವಾಲೆಯು ತಾನಾಗಿಯೇ ನಂದಿಹೋಗುವುದಲ್ಲವೆ? ಅದರಂತೆಯೇ ಈಗ ನನಗೆ ಮೊದಲೇ ದೇಹವು ಶಿಥಿಲವಾಗಿರುವುದು ಅದರ ಮೇಲೆ ಸಹಿಸಲಾರದ ದುಃಖವು ಬಂದೊದಗಿ ಮನಸ್ಸೂ ಕೆಟ್ಟಿತು. ಅದಕ್ಕೆ ಸಂಬಂಧಪಟ್ಟ ಇಂದ್ರಿಯಗಳಲ್ಲಿಯೂ ಶಕ್ತಿಯು ಅಡಗಿಹೋಗುತ್ತಿರುವುದು. ಪ್ರವಾಹವು ತನ್ನ ದಡವನ್ನೇ ಕೊಚ್ಚಿಸುವಂತೆ, ನನ್ನ ಹೃದಯದಲ್ಲಿ ಉಂಟಾದ ಈ ಪುತ್ರಶೋಕವೇ ಅನಾಥನಾಗಿ ಪ್ರಜ್ಞೆ ತಪ್ಪಿರುವ ನನ್ನನ್ನು ಕೊಲ್ಲುತ್ತಿರುವುದು. ಹಾ! ರಾಮಾ! ಹಾ! ಮಹಾ ಬಾಹೂ! ನನ್ನ ಸಂಕಟವನ್ನು ಬಿಡಿಸಬಾರದೇ? ನೀನು ತಂದೆಯಲ್ಲಿ ಎಷ್ಟೋ ವಿಶ್ವಾಸವುಳ್ಳವನಲ್ಲವೆ? ಹಾ! ನಾಥಾ! ಹಾ! ಕಂದಾ! ಅಯ್ಯೋ! ಈಗ ನೀನೆಲ್ಲಿರುವೆ! ಅಯ್ಯೋ! ಕೌಸಲ್ಯೆ! ಅಯ್ಯೋ! ಸುಮಿತ್ರೆ!

---

1 ಇಲ್ಲಿ ರಾಮನ ಮುಖವನ್ನು ನೋಡುತ್ತಿರುವವರೇ ದೇವತೆಗಳಂತೆ ನಿತ್ಯ ಯೌವನವುಳ್ಳವರೆಂದು ದಶರಥನು ತನ್ನ ಸ್ವಾನುಭವವನ್ನು ಹೇಳಿರುವನೆಂದು ಗ್ರಹಿಸಬೇಕು.

ಇನ್ನು ನಿಮಗೇನು ಗತಿ? ಎಲೆ ಘಾತುಕಿ! ಎಲೆ ಕೈಕೇಯಿ! ನೀನೇ ನನಗೆ ಮೃತ್ಯುವಾದೆಯಲ್ಲಾ! ನೀನೇ ನಮ್ಮ ಕುಲಕ್ಕೆ ಕಳಂಕಪ್ರಾಯಳಾದೆಯಲ್ಲಾ! ಅಯ್ಯೋ! ರಾಮಾ! ಲಕ್ಷ್ಮಣಾ! ಸೀತೇ!” ಎಂದು ದಶರಥನು ಗಟ್ಟಿಯಾಗಿ ಗೋಳಿಡುತ್ತಾ, ಇತರರು ಕಿವಿಯಿಂದ ಕೇಳಿ ಸಹಿಸಲಾರದಂತೆ ಆ ಸುಮಿತ್ರಾ ಕೌಸಲ್ಯೆಯರ ಮುಂದೆ ಬಹುದೈನ್ಯದಿಂದ ಕೂಗಿಕೊಂಡು ಹಾಗೆಯೇ ಜೀವವನ್ನು ಬಿಟ್ಟನು. ಹೀಗೆ ದಶರಥನು ಅರ್ಧರಾತ್ರಿ ಸಮಯದಲ್ಲಿ ತನ್ನ ಮಗನನ್ನು ತೊರೆದ ಸಂಕಟವನ್ನು ಸಹಿಸಲಾರದೆ ಆ ಮಧ್ಯರಾತ್ರಿಯು ಕಳೆದ ಉತ್ತರ ಕ್ಷಣದಲ್ಲಿಯೇ ಇಹಲೋಕವನ್ನು ಬಿಟ್ಟನು.

ಇದು ಅರುವತ್ತನಾಲ್ಕನೆಯ ಸರ್ಗವು.

ದಶರಥನ ಮರಣಕ್ಕಾಗಿ ರಾಜಪತ್ನಿಯರ ಪ್ರಲಾಪವು

ಆ ರಾತ್ರಿಯು ಕಳೆದು ಮಾರನೆಯದಿನದ ಪ್ರಾತಃಕಾಲದಲ್ಲಿ ಎಂದಿನಂತೆ ವಂದಿ ಜನಗಳು ಬಂದು ಅಂತಃಪುರದ್ವಾರದಲ್ಲಿ ನಿಂತರು. ಹಾಗೆಯೇ ವಂಶಾವಳಿಯನ್ನು ಹೇಳತಕ್ಕ ಸೂತರೂ, ಮಂಗಳ ಪಾಠಕರೂ, ಗಾಂಧರ್ವವಿದ್ಯೆಯಲ್ಲಿ ನಿಪುಣರಾದ ಗಾಯಕರೂ ಅಲ್ಲಿಗೆ ಬಂದು ಸೇರಿದರು. ಅವರಲ್ಲಿ ಒಬ್ಬೊಬ್ಬರೂ ತಮ್ಮ ತಮ್ಮ ಕುಲವಿದ್ಯೆಗಳಲ್ಲಿ ಸಂಪೂರ್ಣವಾದ ಅನುಭವವುಳ್ಳವರಾದುದರಿಂದ, ತಮ್ಮ ತಮ್ಮ ಪದ್ಧತಿಯಂತೆ ಬೇರೆ ಬೇರೆಯಾಗಿ ಪ್ರಾಭಾತಿಕ ಸ್ತುತಿಗಳಿಂದ ಸುಪ್ರಭಾತವನ್ನು ಹೇಳತೊಡಗಿದರು. ಹೀಗೆ ಆಶೀರ್ವಾದ ವಚನಗಳೊಡನೆ ರಾಜನನ್ನು ಸ್ತುತಿಸುತ್ತಿದ್ದ ಆ ವಂದಿ ಜನಗಳ ಧ್ವನಿಯು ಆ ಅರಮನೆ ಎಲ್ಲವನ್ನೂ ವ್ಯಾಪಿಸಿತು. ಹೀಗೆ ಆ ಸ್ತುತಿಪಾಠಕರೆಲ್ಲರೂ ಹೊಗಳುತ್ತಿರುವಾಗ, ಹಸ್ತವಾದ್ಯಗಳನ್ನು ನುಡಿಸತಕ್ಕವರು ದಶರಥನ ಪೂರ್ವಚರಿತ್ರಗಳೆಲ್ಲವನ್ನೂ ಹೇಳಿ ಕೊಂಡಾಡುತ್ತಾ, ತಮ್ಮ ವಾದ್ಯಗಳನ್ನು ನುಡಿಸುತ್ತಿದ್ದರು. ಈ ಶಬ್ದವನ್ನು ಕೇಳಿ ಹಕ್ಕಿಗಳೆಲ್ಲವೂ ಮೊದಲೇ ಎಚ್ಚರಗೊಂಡು ಗಿಡಗಳ ಮೇಲೆಯೂ ಪಂಜರಗಳಲ್ಲಿಯೂ, ಗೋಪುರದ ಗೂಡುಗಳಲ್ಲಿಯೂ ಸೇರಿ ಕೂಗು

ತ್ತಿದ್ದುವು. ಬ್ರಾಹ್ಮಣಾಶೀರ್ವಾದಗಳೂ ಉಪಕ್ರಮಿಸಲ್ಪಟ್ಟುವು. ವೀಣಾ ಧ್ವನಿಗಳೂ ಆರಂಭಿಸಲ್ಪಟ್ಟುವು. ದಶರಥನ ಅರಮನೆಯಲ್ಲಿದ್ದ ಆಸ್ಥಾನಕವಿಗಳೆಲ್ಲರೂ ಆತನ ವಿಷಯವಾಗಿ ರಚಿಸಲ್ಪಟ್ಟ ಪ್ರಬಂಧಗಳನ್ನು ಓದುತ್ತಿದ್ದರು. ಹೀಗೆ ಆ ಅರಮನೆಯಲ್ಲಿ ಅಪರಿಮಿತವಾದ ಕೋಲಾಹಲವುಂಟಾಗಿ, ರಾಜಾಸ್ಥಾನವೆಲ್ಲವನ್ನೂ ತುಂಬಿತು. ಮತ್ತೊಂದುಕಡೆಯಲ್ಲಿ ಶುದ್ಧಾಚಾರವುಳ್ಳವರಾಗಿಯೂ, ಕಾಲೋಚಿತವಾದ ಪರಿಚರ್ಯಗಳನ್ನು ಮಾಡುವುದರಲ್ಲಿ ಸಮರ್ಥರಾಗಿಯೂ, ಇರುವ ನಪುಂಸಕರೂ ಸ್ತ್ರೀಯರೂ ಅಂತಃಪುರ ದ್ವಾರದಲ್ಲಿ ನಿಂತು, ಎಂದಿನಂತೆ ರಾಜಾಜ್ಞೆಯನ್ನು ನಿರೀಕ್ಷಿಸುತ್ತ ಕಾದಿದ್ದರು. ಸ್ನಾನವಿಧಿಗಳನ್ನು ಚೆನ್ನಾಗಿ ತಿಳಿದವರಾದ ಭೃತ್ಯರು ಸಕಾಲಕ್ಕೆ ಸರಿಯಾಗಿ ವಿಧಿಯನ್ನನುಸರಿಸಿ ಸುವರ್ಣಕುಂಭಗಳಲ್ಲಿ ರಾಜನ ಸ್ನಾನಾರ್ಥವಾಗಿ ಗಂಗೋದಕವನ್ನು ತಂದು ನಿಂತಿದ್ದರು. ಕುಮಾರವಯಸ್ಸುಳ್ಳ ಮತ್ತೆ ಕೆಲವು ಸ್ತ್ರೀಯರು ಎಣ್ಣೆ ಮೊದಲಾದ ಮಂಗಳಾನುಲೇಪನಗಳನ್ನು ಹಿಡಿದು ನಿಂತಿದ್ದರು. ಮತ್ತೆ ಕೆಲವರು ಪ್ರಾತಃಕಾಲದಲ್ಲಿ ರಾಜದರ್ಶನಕ್ಕಾಗಿ ಬೇಕಾದ ಗೋವು, ಕನ್ನಡಿ ಮುಂತಾದ ವಸ್ತುಗಳನ್ನು ಸಿದ್ಧಪಡಿಸಿದರು. ಹಲ್ಲುಜ್ಜಿದ ಮೇಲೆ ಬಾಯಿಯ ಶುದ್ಧಿಗಾಗಿ ಪ್ರಾತಃಕಾಲದಲ್ಲಿ ಅಗಿದುಗುಳಬೇಕಾದ ಪದಾರ್ಥಗಳನ್ನು ತಂದು ಕೆಲವರು ನಿಂತಿದ್ದರು. ಮತ್ತೆ ಕೆಲವು ಕನ್ನೆಯರು ರಾಜನ ಅಲಂಕಾರಕ್ಕೆ ಬೇಕಾದ ವಸ್ತ್ರಾಭರಣಾದಿಗಳನ್ನು ಹಿಡಿದು ನಿಂತಿದ್ದರು. ಸರ್ವಲಕ್ಷಣಸಂಪನ್ನವಾದ ಆ ವಸ್ತು ಸಮೂಹದಿಂದ ಅರಮನೆಯ ಬಾಗಿಲು ಅತ್ಯಂತ ಕಾಂತಿಯುಕ್ತವಾಗಿ ಪ್ರಕಾಶಿಸುತ್ತಿತ್ತು. ರಾಜನಿಗೆ ಪ್ರಾತಃಕಾಲದಲ್ಲಿ ಮಂಗಳಾರ್ಥವಾಗಿ ತಂದಿಡತಕ್ಕ ವಸ್ತುಗಳೆಲ್ಲವೂ ಆಯಾ ಲಕ್ಷಣಗಳೊಡನೆ ಶಾಸ್ತ್ರೋಕ್ತವಾಗಿ ತಂದಿಡಲ್ಪಟ್ಟಿದ್ದುವು. ಸಮಸ್ತವಸ್ತುಗಳೂ ಅವುಗಳ ಸ್ವರೂಪಕ್ಕೆ ತಕ್ಕಂತೆ ಪರಿಷ್ಕರಿಸಲ್ಪಟ್ಟುದಾಗಿ, ಗುಣವುಳ್ಳುದಾಗಿ ಪ್ರಕಾಶಿಸುತಿದ್ದುವು. ಅಲ್ಲಿದ್ದ ಪರಿಜನರೆಲ್ಲರೂ ರಾಜನನ್ನು ಎಚ್ಚರಗೊಳಿಸುವುದಕ್ಕಾಗಿ ಸೂರ್ಯೋದಯವಾಗುವವರೆಗೂ ತಡೆಯಲಾರದೆ ಆತುರಗೊಂಡಿದ್ದರು. ಹೀಗಿರುವಾಗ ಸೂರ್ಯೋದಯವಾದ ಮೇಲೆಯೂ ರಾಜನು ಎದ್ದು ಹೊರಗೆ ಬಾರದಿರುವುದನ್ನು ನೋಡಿ ಅಲ್ಲಿದ್ದವರೆಲ್ಲರಿಗೂ ಶಂಕೆಯುಂಟಾಯಿತು. ಇಷ್ಟರಲ್ಲಿ ಕೆಲವು ಅಂತಃಪುರಸ್ತ್ರೀಯರು ರಾಜನು ಮಲಗಿದ್ದ ಹಾಸಿಗೆಯ ಬಳಿಗೆ ಬಂದು, ರಾಜನನ್ನು ತಟ್ಟಿ ಮೃದುವಾಕ್ಯಗಳಿಂದ ಎಬ್ಬಿಸಲಾರಂಭಿಸಿದರು.

ಕಾಲೋಚಿತವಾಗಿ ಆ ಸ್ತ್ರೀಯರು ವಿನಯದಿಂದಲೂ ಯುಕ್ತಿವಾಕ್ಯಗಳಿಂದಲೂ, ಮಾತಾಡಿಸುತ್ತ ಅನೇಕ ವಿಧದಲ್ಲಿ ಆತನನ್ನು ಎಚ್ಚರಗೊಳಿಸುತ್ತಿದ್ದರೂ, ಆತನಿಂದ ಯಾವ ಪ್ರತ್ಯುತ್ತರವನ್ನೂ ಪಡೆಯಲಿಲ್ಲ. ಸಮೀಪದಲ್ಲಿ ಕುಳಿತು ನೋಡುತ್ತಿದ್ದರೂ ಆತನಲ್ಲಿ ನಿದ್ರೆಯ ಲಕ್ಷಣಗಳೊಂದೂ ಕಾಣಲಿಲ್ಲ. ಆಮೇಲೆ ಆ ಸ್ತ್ರೀಯರೂ ಶಂಕಿತರಾಗಿ, ನಿದ್ರಾವಸ್ಥೆಯಲ್ಲಿರಬೇಕಾದ ಲಕ್ಷಣವನ್ನು ಚೆನ್ನಾಗಿ ಬಲ್ಲವರಾಗಿದ್ದುದರಿಂದ, ಆ ಲಕ್ಷಣವನ್ನು ಪರೀಕ್ಷಿಸುವುದಕ್ಕಾರಂಭಿಸಿದರು. ಆತನಲ್ಲಿ ಕೈಕಾಲುಗಳ ಚಲನೆಯಾಗಲಿ, ಉಛ್ವಾಸನಿಶ್ವಾಸಗಳಾಗಲಿ, ಇತರ ಯಾವ ಚೇಷ್ಟೆಗಳಾಗಲಿ ಕಂಡುಬರಲಿಲ್ಲ. ಆಗ ಆ ಸ್ತ್ರೀಯರೆಲ್ಲರೂ ಬೆಜ್ಜರ ಬಿದ್ದರು. ರಾಜನು ಬದುಕಿರುವನೋ ಇಲ್ಲವೋ ಎಂಬ ಶಂಕೆಯು ಆಗಲೇ ಅವರ ಮನಸ್ಸಿನಲ್ಲಿ ಅಂಕುರಿಸಿತು. ಅವರ ಮೈಯೆಲ್ಲವೂ ನಡುಗಲಾರಂಭಿಸಿತು. ಪ್ರವಾಹಕ್ಕೆ ಇದಿರಾಗಿ ನಿಂತಿರುವ ಜೊಂಡು ಹುಲ್ಲಿನಂತೆ ಅವರವರ ದೇಹವೂ ಗಡಗಡನೆ ನಡುಗುತ್ತಿತ್ತು. ಅವರಲ್ಲಿ ಕೆಲವರು ಧೈರ್ಯ ತಂದುಕೊಂಡು ರಾಜನ ದೇಹವನ್ನು ಇನ್ನೂ ಚೆನ್ನಾಗಿ ಪರೀಕ್ಷಿಸಿ ನೋಡಿದ ಮೇಲೆ, ಮೊದಲು ಎಣಿಸಿದಂತೆಯೇ ನಿಜವಾಗಿರಬಹುದೆಂದೂ ತೋರಿತು. ಕೌಸಲ್ಯಾ ಸುಮಿತ್ರೆಯರಿಬ್ಬರೂ ಅತ್ತಲಾಗಿ ಪುತ್ರಶೋಕದಿಂದ ಬಹಳ ಬಳಲಿದ್ದುದರಿಂದ ದೇಹದ ಮೇಲೆ ಪ್ರಜ್ಞೆಯಿಲ್ಲದೆ ಸತ್ತವರಂತೆ ಒಂದು ಕಡೆಯಲ್ಲಿ ಮಲಗಿಬಿಟ್ಟಿದ್ದರು. ಬಹಳ ಹೊತ್ತಿನವರೆಗೆ ಅವರಿಗೆ ಎಚ್ಚರವೇ ಆಗಲಿಲ್ಲ. ಅವರಲ್ಲಿ ಕೌಸಲ್ಯೆಯು ಬಣ್ಣಗುಂದಿ ಬಾಡಿದ ಮುಖವುಳ್ಳವಳಾಗಿ, ವ್ಯಸನದಿಂದ ಬೆಂದು ಕೃಶಳಾಗಿ ಉತ್ಪಾತಸೂಚಕವಾದ ಧೂಮಕೇತುವಿನಿಂದ ಮುಚ್ಚಲ್ಪಟ್ಟ ನಕ್ಷತ್ರದಂತೆ ಕಾಣುತ್ತಿದ್ದಳು. ಇತ್ತಲಾಗಿ ಮೃತನಾದ ದಶರಥನು ಕಾಂತಿಹೀನನಾಗಿ ಮಲಗಿದ್ದುದು ಹಾಗಿರಲಿ! ಅವನಿಗಿಂತಲೂ ಕೌಸಲ್ಯೆಯೂ ಅವಳಿಗಿಂತ ಹೆಚ್ಚಾಗಿ ಸುಮಿತ್ರೆಯೂ ಕಾಂತಿಹೀನರಾಗಿ ಕಣ್ಣೀರಿನಿಂದ ಕದಲಿದ ಮುಖವುಳ್ಳವರಾಗಿ ಇದ್ದರು. ಹೀಗೆ ಶಕ್ತಿಗುಂದಿ ಮಲಗಿದ್ದ ಕೌಸಲ್ಯಾ ಸುಮಿತ್ರೆಯರನ್ನೂ, ಇತ್ತಲಾಗಿ ಮೃತನಾಗಿರುವ ದಶರಥನನ್ನೂ ನೋಡಿ, ಅಂತಃಪುರಸ್ತ್ರೀಯರೆಲ್ಲರೂ ಗೋಳಾಡಲಾರಂಭಿಸಿದರು. ಆ ಸ್ತ್ರೀಯರೆಲ್ಲರೂ ಕಾಡಿನಲ್ಲಿ ಸಲಗನನ್ನು ಕಳೆದುಕೊಂಡ ಹೆಣ್ಣಾನೆಗಳ ಹಿಂಡಿನಂತೆ, ಉಚ್ಚಸ್ವರದಿಂದ ಒಬ್ಬರನ್ನೊಬ್ಬರು ನೋಡಿ ಪ್ರಲಾಪಿಸುತ್ತಿರಲು, ಇವರ ದೊಡ್ಡ ಆಕ್ರಂದನ ಧ್ವನಿಯನ್ನು ಕೇಳಿ ಕೌಸಲ್ಯಾ ಸುಮಿತ್ರೆಯರಿಗೆ

ಎಚ್ಚರವುಂಟಾಗಿ, ಅವರಿಬ್ಬರೂ ಬೆಚ್ಚರಗೊಂಡು ಮುಂದೆ ಬಂದು ರಾಜನನ್ನು ಮುಟ್ಟಿ ನೋಡಿ, ಆತನು ಮೃತನಾದನೆಂದು ತಿಳಿದು "ಹಾ ನಾಥಾ" ಎಂದು ಕೂಗಿಡುತ್ತಾ ಮೂರ್ಛೆ ಹೊಂದಿ ನೆಲದ ಮೇಲೆ ಬಿದ್ದರು. ಆಗ ಕೌಸಲ್ಯೆಯು ಅರ್ಧ ಪ್ರಾಣದಿಂದ ನರಳುವಂತೆ ನೆಲದ ಮೇಲೆ ಬಿದ್ದು ಹೊರಳುತ್ತ, ಆಕಾಶ ದಿಂದ ಜಾರಿಬಿದ್ದು ಮಣ್ಣಿನಿಂದ ಮಲಿನವಾದ ನಕ್ಷತ್ರದಂತೆ ಕಾಣುತ್ತಿದ್ದಳು. ದಶರಥನ ದೇಹದಲ್ಲಿ ಉಷ್ಣಾದಿಗುಣಗಳೆಲ್ಲವೂ ಕೆಟ್ಟು ಆತನು ಸತ್ತುಬಿದ್ದಿರು ವುದನ್ನು ನೋಡಿ, ಆಕೆಯು ಮೂರ್ಛೆಹೊಂದಿ ಬಿದ್ದಾಗ, ಶಸ್ತ್ರಹತನಾಗಿ ನೆಲದ ಮೇಲೆ ಸತ್ತುಬಿದ್ದಿರುವ ಹೆಣ್ಣಾನೆಯಂತೆ ಕಾಣುತ್ತಿದ್ದಳು. ಈ ಅತ್ಯಹಿತ ಗಳನ್ನು ನೋಡಿ ಕೈಕೇಯಿಯೇ ಮೊದಲಾದ ಇತರ ರಾಜ ಸ್ತ್ರೀಯರೆಲ್ಲರೂ ದುಃಖದಿಂದ ಗೋಳಿಡುತ್ತಾ, ಪ್ರಜ್ಞೆತಪ್ಪಿ ಬಿದ್ದರು. ಹೀಗೆ ಅಂತಃಪುರಸ್ತ್ರೀಯ ರೆಲ್ಲರೂ ಉಚ್ಚಸ್ವರದಿಂದ ಆಕ್ರಂದಿಸುತ್ತಿರಲು, ಆ ಆಕ್ರೋಶ ಧ್ವನಿಗಳೆಲ್ಲವೂ ಒಟ್ಟುಗೂಡಿ ಆ ಅರಮನೆಯಲ್ಲಿ ದೊಡ್ಡ ಪ್ರತಿಧ್ವನಿಯನ್ನುಂಟುಮಾಡಿತು. ರಾಜಾಸ್ಥಾನವೆಲ್ಲವೂ ಕೇವಲ ಪ್ರಲಾಪಧ್ವನಿಯಿಂದಲೇ ತುಂಬಿಹೋಯಿತು. ಆಗ ಆ ಅರಮನೆಯ ದುಃಸ್ಥಿತಿಯನ್ನು ಹೇಳತಕ್ಕುದೇನು ? ಮೊದಲು ಎಷ್ಟೋ ಉತ್ಸಾಹದಿಂದ ಅಲ್ಲಿಗಲ್ಲಿಗೆ ಸಂಚರಿಸುತ್ತಿದ್ದ ಜನಸಮೂಹದಿಂದ ನಿಬಿಡವಾಗಿದ್ದ ಆ ರಾಜಾಸ್ಥಾನದಲ್ಲಿ, ದಶರಥನ ಮರಣವಾರ್ತೆಯನ್ನು ಕೇಳಿದೊಡನೆಯೇ ಎಲ್ಲರೂ ಬೆಚ್ಚಿಬಿದ್ದು ತತ್ತಳಿಸುತ್ತ ಅಲ್ಲಲ್ಲಿ ಸ್ತಬ್ಧರಾಗಿ ನಿಂತಿದ್ದರು. ನಾಲ್ಕು ಕಡೆಗಳಿಂದಲೂ ರೋದನಧ್ವನಿಗಳು ಹೊರಡುತಿದ್ದುವು. ಬಂಧುವರ್ಗಗಳೆಲ್ಲವೂ ವ್ಯಸನದಿಂದ ತತ್ತಳಿಸುತ್ತಿದ್ದುವು. ಸಂತೋಷಚಿಹ್ನವೆಂಬುದು ಸ್ವಲ್ಪವೂ ಇರಲಿಲ್ಲ. ಯಾರನ್ನು ನೋಡಿದರೂ ದೈನ್ಯದಿಂದ ಕಳೆಗುಂದಿದವರಾಗಿದ್ದರು. ಯಶಸ್ವಿಯಾದ ದಶರಥನು ಮೃತಿಹೊಂದಿದುದನ್ನು ತಿಳಿದೊಡನೆಯೇ, ಆತನ ಪತ್ನಿಯರೆಲ್ಲರೂ ಅವನ ಹಾಸಿಗೆಯನ್ನು ಸುತ್ತಿ ಕುಳಿತು, ಒಬ್ಬರನ್ನೊಬ್ಬರು ಕಟ್ಟಿಕೊಂಡು ದಿಕ್ಕಿಲ್ಲದವರಂತೆ ದೀನಧ್ವನಿಯಿಂದ ಗೋಳಿಡುತ್ತಿದ್ದರು.

ಇದು ಅರುವತ್ತೈದನೆಯ ಸರ್ಗವು.

ಕೌಸಲ್ಯೆಯ ಪ್ರಲಾಪವು. ದಶರಥನ ದೇಹವನ್ನು ತೈಲ ದ್ರೋಣಿಯಲ್ಲಿಟ್ಟುದು, ರಾಜಸ್ತ್ರೀಯರ ದುಃಖವು. ಪುರಸಂಕ್ಷೋಭವು

ಆರಿದ ಬೆಂಕಿಯಂತೆಯೂ, ನೀರಿಲ್ಲದ ಸಮುದ್ರದಂತೆಯೂ, ಕಾಂತಿಯಿಲ್ಲದ ಸೂರ್ಯನಂತೆಯೂ ಸತ್ತುಬಿದ್ದಿರುವ ದಶರಥನನ್ನು ನೋಡಿ, ಕೌಸಲ್ಯೆಯು ಕಣ್ಣೀರು ತುಂಬಿಕೊಂಡು ಸಂಕಟದಿಂದ ಕುಗ್ಗಿದವಳಾಗಿ, ದಶರಥನ ತಲೆಯನ್ನು ತನ್ನ ತೊಡೆಯ ಮೇಲಿರಿಸಿಕೊಂಡು, ಕೈಕೇಯಿಯನ್ನು ನೋಡಿ "ಎಲೆ ಕೈಕೇಯಿ! ನಿನ್ನ ಕೋರಿಕೆಯು ಕೈಗೂಡಿತೇ? ಇನ್ನು ನೀನೇ ನಿಷ್ಕಂಟಕವಾಗಿ ರಾಜ್ಯವಾಳು. ಒಂದೇ ಹಟದಿಂದ ನಿನ್ನ ಪ್ರತಿಜ್ಞೆಯನ್ನು ಸಾಧಿಸಿದೆ! ಇನ್ನು ನಿನಗೆ ರಾಜನ ತೊಂದರೆಯೂ ತಪ್ಪಿತು. ಎಲೆ ಘಾತುಕಿ! ಎಲೆ ದುಷ್ಟೆ! ರಾಜನೂ ಸತ್ತನು! ರಾಮನೂ ಕಾಡುಪಾಲಾಗಿ ಹೊರಟು ಹೋದನಲ್ಲವೆ! ನಿಷ್ಕಂಟಕವಾದ ರಾಜ್ಯವನ್ನು ನೀನೊಬ್ಬಳೇ ನೆಮ್ಮದಿಯಿಂದ ಅನುಭವಿಸಬಹುದು. ನನ್ನ ಮಗನೂ ನನ್ನನ್ನು ತೊರೆದು ಕಾಡಿಗೆ ಹೋದನು. ನನ್ನ ಗಂಡನೂ ಸ್ವರ್ಗಸ್ಥನಾದನು. ಕಾಡುದಾರಿಯಲ್ಲಿ ಸಂಗಡಿಗರನ್ನು ತಪ್ಪಿಸಿಕೊಂಡು ಬಂದವರಂತೆ ದಿಕ್ಕುಗೆಟ್ಟ ನಾನು ಇನ್ನು ಹೇಗೆ ತಾನೇ ಬದುಕಿರಬಲ್ಲೆನು? ಧರ್ಮಭ್ರಷ್ಟಳಾದ ನೀನೊಬ್ಬಳು ಹೊರತು ಲೋಕದಲ್ಲಿ ಬೇರೆ ಯಾವ ಸ್ತ್ರೀಯು ತಾನೇ ತನಗೆ ಪರದೈವದಂತಿರುವ ಪತಿಯನ್ನು ಬಿಟ್ಟು ಬದುಕಬೇಕೆಂದು ಅಪೇಕ್ಷಿಸುವಳು? ಪರಮಲೋಭಿಯಾದವನು ಹಣದಾಸೆಯಿಂದ ಮುಂದೆ ಸಂಭವಿಸಬಹುದಾದ ದೋಷಗಳನ್ನೂ ತಿಳಿಯದೆ ವಿಷಮಿಶ್ರವಾದ ಪಾಕವನ್ನು ಭುಜಿಸುವನಲ್ಲವೆ? ಹಾಗೆಯೇ ಆ ಗೂನಿಯ ಮಾತಿಗಾಗಿ ನೀನು ರಘುಕುಲವನ್ನೇ ಕೆಡಿಸಿಬಿಟ್ಟೆಯಲ್ಲಾ! ಎಲೆ ದುಷ್ಟೆ! ನಿನ್ನ ಮಾತಿಗಾಗಿ ಮಾಡಬಾರದ ಕಾರ್ಯಕ್ಕೆ ಪ್ರಯತ್ನಿಸಿದ ಈ ದಶರಥನು, ರಾಮನನ್ನು ಆತನ ಪತ್ನಿಯೊಡನೆ ಕಾಡಿಗೆ ಕಳುಹಿಸಿದ ವಿಷಯವನ್ನು ಜನಕನು ಕೇಳಿದರೆ, ನನ್ನಂತೆಯೇ ಆತನೂ ಪರಿತಪಿಸುವನಲ್ಲಾ! ಅಯ್ಯೊ! [1] ನನ್ನ ಹೊಟ್ಟೆಯಲ್ಲಿ ಹುಟ್ಟಿದ ಮುದ್ದು

---

[1] ಅಲ್ಲಿ "ಸಮಾಮನಾಥಾಂ ವಿಧವಾಂ ನಾದ್ಯ ಚಾನಾತಿಧಾರ್ಮಿಕಃ! ರಾಮಃ ಕಮಲಪತ್ರಾಕ್ಷೋ ಜೀವನ್ನಾಶಮಿತೋ ಗತಃ" ಎಂಬ ಮೂಲಾನುಸಾರವಾದ ಅರ್ಥವು ಮೇಲೆ ಸೂಚಿಸಲ್ಪಟ್ಟಿರುವುದು. "ಜೀವನಾಶಮಿತೋ ಗತಃ" ಎಂಬ ಪಾಠಾಂತರವೂ ಉಂಟು. ಆ

ಮಗನಾದ ರಾಮನು ಈಗ ಬದುಕಿದ್ದರೂ ನನ್ನ ಭಾಗಕ್ಕೆ ಆತನು ಸತ್ತಂತೆಯೇ ಮಾಡಿದೆಯಲ್ಲವೆ? ಇಲ್ಲಿ ಗಂಡನನ್ನು ಕಳೆದುಕೊಂಡು ದಿಕ್ಕಿಲ್ಲದೆ ಸಂಕಟಪಡುತ್ತಿರುವ ನನ್ನ ದುರವಸ್ಥೆಯನ್ನು ಆತನು ತಿಳಿಯನಲ್ಲಾ ! ಧಾರ್ಮಿಕನಾಗಿಯೂ ಕಮಲದಳದಂತೆ ಕಣ್ಣುಳ್ಳವನಾಗಿಯೂ ಇರುವ ಆ ರಾಮನು, ಈಗ ನನ್ನ ಭಾಗಕ್ಕೆ ಇಲ್ಲದೆಯೇಹೋದನು ! ಹುಟ್ಟಿದುದು ಮೊದಲು ದುಃಖವೆಂಬುದನ್ನೇ ಕಂಡರಿಯದ ವಿದೇಹರಾಜನ ಮಗಳಾದ ಆ ಸೀತೆಯು ಈಗ ಅರಣ್ಯದಲ್ಲಿ ಎಷ್ಟು ಭಯದಿಂದ ತತ್ತಳಿಸುವಳೋ ? ಆಕೆಯು ರಾತ್ರಿಯಲ್ಲಿ ಕರ್ಣಕಠೋರವಾಗಿ ಕೂಗುತ್ತಿರುವ ಮೃಗಗಳ ಗರ್ಜನೆಗಳನ್ನೂ, ಪಕ್ಷಿಗಳ ಕೂಗುಗಳನ್ನೂ ಕೇಳಿ ಹೇಗೆತಾನೇ ಭಯಪಡದಿರುವಳು ? ಆಕೆಯು ಇವುಗಳಿಗೆ ಭಯಪಟ್ಟಾಗ ತಟ್ಟನೆ ಬಂದು ರಾಮನನ್ನು ಕಟ್ಟಿಕೊಳ್ಳುವಳು ! ಇದರಲ್ಲಿ ಸಂದೇಹವಿಲ್ಲ. ವೃದ್ಧನಾಗಿ ಈ ಸೀತೆಯೊಬ್ಬಳಲ್ಲಿಯೇ ಸಂತಾನದ ಆಸೆಯನ್ನು ಇರಿಸಿಕೊಂಡಿದ್ದ ಜನಕ ರಾಜನು ಈಗ ಸೀತೆಗೆ ಉಂಟಾಗಿರುವ ದುರವಸ್ಥೆಯನ್ನು ಕೇಳಿದರೆ ವ್ಯಸನವನ್ನು ತಡೆಯಲಾರದೆ ಪ್ರಾಣವನ್ನೇ ಬಿಟ್ಟುಬಿಡುವನು. ಇನ್ನು ದುಃಖಿಸಿ ಪ್ರಯೋಜನ ವೇನು? ನಾನು ಈಗ ಪತಿಯ ಶರೀರವನ್ನೇ ಅಪ್ಪಿಕೊಂಡು ಅಗ್ನಿ ಪ್ರವೇಶವನ್ನು ಮಾಡಿಬಿಡುವೆನು. ನನ್ನ ಪಾತಿವ್ರತ್ಯವನ್ನಾದರೂ ಕಾಪಾಡಿಕೊಳ್ಳುವೆನು" ಎಂದು ನಾನಾ ವಿಧದಲ್ಲಿ ಪ್ರಲಾಪಿಸುತ್ತಿದ್ದಳು. ಆಗ [1] ರಾಜ್ಯವ್ಯವಹಾರಗಳನ್ನು ಚೆನ್ನಾಗಿ ಬಲ್ಲ ಮಂತ್ರಿಗಳು ಕೌಸಲ್ಯೆಯ ಸಮೀಪಕ್ಕೆ ಬಂದು, ಅಲ್ಲಿ ಪತಿಯ ದೇಹವನ್ನು ಬಲವಾಗಿ ಅಪ್ಪಿಕೊಂಡು ಪ್ರಲಾಪಿಸುತ್ತಿರುವ ಆಕೆಯನ್ನು ಸಮಾಧಾನಪಡಿಸಿದರು. ಆಮೇಲೆ ಆ ಮಂತ್ರಿಗಳೆಲ್ಲರೂ ಕಲೆತು ಆಲೋಚಿಸಿ, ದಶರಥನ ದೇಹವನ್ನು ಎಣ್ಣೆಯ ಕೊಪ್ಪರಿಗೆಯಲ್ಲಿ ಇಡುವಂತೆ ಆಜ್ಞಾಪಿಸಿ, ನಡೆಯಬೇಕಾದ ಮುಂದಿನ ಕೆಲಸವನ್ನು ನೋಡುತ್ತಿದ್ದರು. ಆ ಮಂತ್ರಿಗಳು ಸಮಸ್ತ ಧರ್ಮಗಳನ್ನೂ ತಿಳಿದವರಾದುದರಿಂದ, ಪುತ್ರನಿಲ್ಲದೆ ಆ ದಶರಥನಿಗೆ

ಪಾಠದಲ್ಲಿ "ಧಾರ್ಮಿಕನಾದ ರಾಮನು ಇಲ್ಲಿಲ್ಲದುದರಿಂದ ಈಗ ಇಲ್ಲಿ ನಡೆದ ರಾಜನ ಈ ಸಾವನ್ನೂ, ನಾನು ವಿಧವೆಯಾಗಿ ದಿಕ್ಕಿಲ್ಲದಿರುವುದನ್ನೂ ಅವನು ಕಾಣನು" ಎಂದು ಅರ್ಥಾಂತರವನ್ನು ಹೇಳಿಕೊಳ್ಳಬೇಕು.

[1] ಇಲ್ಲಿ "ವ್ಯಾವಹಾರಿಕಾಃ" ಎಂಬುದಕ್ಕೆ ಅಂತಃಪುರಾಧ್ಯಕ್ಷರಾದ ಸ್ತ್ರೀಯರೆಂದು ಮಹೇಶ್ವರತೀರ್ಥ ವ್ಯಾಖ್ಯಾನವು.

*

ಅಪರ ಸಂಸ್ಕಾರಗಳನ್ನು ನಡೆಸಬಾರದೆಂದೆಣಿಸಿ, ಆತನ ದೇಹವು ಕೆಡದಂತೆ ಅನೇಕ ಸಂಸ್ಕಾರಗಳನ್ನು ಮಾಡಿ ರಕ್ಷಿಸಿಟ್ಟರು. ಹೀಗೆ ತೈಲದ್ರೋಣಿಯಲ್ಲಿಟ್ಟ ದಶರಥನ ದೇಹವನ್ನು ನೋಡಿ, ಅಲ್ಲಿದ್ದ ಅಂತಃಪುರ ಸ್ತ್ರೀಯರಿಗೆ ದುಃಖವು ಪುನಃ ಮರುಕೊಳಿಸಲು ಪ್ರಲಾಪಿಸತೊಡಗಿದರು. ಅವರೆಲ್ಲರೂ ಬಹಳ ದುಃಖಿತರಾಗಿ ಕೈಗಳನ್ನೆತ್ತಿ ಕಣ್ಣೀರು ತುಂಬಿಕೊಂಡೇ ಕರ್ಣಕಠೋರವಾಗಿರುವಂತೆ "ಹಾ ಮಹಾರಾಜನೆ! ಸತ್ಯಸಂಧನಾಗಿಯೂ, ಪ್ರಿಯವಾದಿಯಾಗಿಯೂ ಇರುವ ರಾಮನಂತೂ ನಮ್ಮನ್ನು ಮೊದಲೇ ತೊರೆದು ಹೋದನು. ಅನಾಥರಾದ ನಮ್ಮನ್ನು ನೀನೂ ಬಿಟ್ಟು ಹೋಗಬಹುದೆ? ನೀವಿಬ್ಬರೂ ನಮ್ಮನ್ನು ಬಿಟ್ಟುಹೋದಮೇಲೆ ನಮಗೆ ಇನ್ನು ಗತಿಯಾರು? ದುಷ್ಟೆಯಾಗಿಯೂ, ಪತಿಘಾತುಕಿಯಾಗಿಯೂ ಇರುವ ಈ ಕೈಕೇಯಿಯ ಕೈಕೆಳಗೆ ಸಿಕ್ಕಿಕೊಂಡು ನಾವು ಬದುಕುವ ಬಗೆ ಹೇಗೆ? ನಿನಗೂ ಪ್ರಭುವಾದ ಆ ರಾಮನಂತೂ ರಾಜ್ಯಲಕ್ಷ್ಮಿಯನ್ನು ಬಿಟ್ಟು ಕಾಡಿಗೆ ಹೊರಟು ಹೋದನು. ನಮ್ಮೆಲ್ಲರಿಗೂ ಒಂದೇ ದಿಕ್ಕಾಗಿಯೂ ಶ್ರೀಮಂತನಾಗಿಯೂ ಇರುವ ಆ ರಾಮನೇ ನಮ್ಮನ್ನು ಬಿಟ್ಟು ಹೋದಮೇಲೆ ನಾವು ಇನ್ನು ಹೇಗೆ ಬದುಕಬಲ್ಲೆವು. ನಿಮ್ಮಿಬ್ಬರ ಅಗಲಿಕೆಯಿಂದ ಮೊದಲೇ ಶಕ್ತಿಗುಂದಿದ ನಾವು ಇತ್ತಲಾಗಿ ರಾಜ್ಯಾಧಿಕಾರಮದದಿಂದ ಕೊಬ್ಬಿ ತಿರಸ್ಕಾರವಾಕ್ಯಗಳನ್ನಾಡುವ ಆ ಕೈಕೇಯಿಯ ಮಾತುಗಳನ್ನು ಕೇಳಿ ಹೇಗೆ ಸಹಿಸಿಕೊಂಡಿರಬಲ್ಲೆವು? ಅಯ್ಯೋ! ಆ ಕೈಕೇಯಿಯು ಪತಿಯನ್ನೇ ಕೊಂದ ಪರಮ ಪಾಪಿನಿಯಲ್ಲವೆ? ಮುದ್ದುಮಗನಾದ ರಾಮನನ್ನೂ, ಬಲಾಢ್ಯನಾದ ಲಕ್ಷ್ಮಣನನ್ನೂ ಸುಕುಮಾರಿಯಾದ ಸೀತೆಯನ್ನೂ, ಕಾಡಿಗೆ ಕಳುಹಿಸಿದ ಆ ಮಹಾ ಪಾಪಿನಿಯು ಇನ್ನು ಯಾರನ್ನು ತಾನೇ ತೊರೆದುಬಿಡುವುದಕ್ಕೆ ಹಿಂಜರಿಯುವಳು?" ಎಂದು ಪ್ರಲಾಪಿಸುತ್ತಿದ್ದರು. ಹೀಗೆ ಅಂತಃಪುರದಲ್ಲಿದ್ದ ಸ್ತ್ರೀಯರೆಲ್ಲರೂ ದುಃಖದಿಂದ ಕಣ್ಣೀರುಬಿಡುತ್ತ ನೆಲದ ಮೇಲೆ ಬಿದ್ದು ಹೊರಳಾಡುತ್ತಿರಲು, ಚಂದ್ರನಿಲ್ಲದ ರಾತ್ರಿಯಂತೆಯೂ, ಗಂಡನಿಲ್ಲದ ಹೆಂಗಸಿನಂತೆಯೂ, ದಶರಥನಿಲ್ಲದ ಆ ಅಯೋಧ್ಯೆಯು ಕೇವಲ ಕಾಂತಿಹೀನವಾಗಿತ್ತು. ಅಲ್ಲಿ ಪ್ರತಿಯೊಬ್ಬರೂ ಕಣ್ಣೀರುಬಿಡುತ್ತಿದ್ದರು. ಹೆಂಗಸರೆಲ್ಲರೂ ಹಾಹಾಕಾರವನ್ನು ಮಾಡುತ್ತಿದ್ದರು. ಆ ಪಟ್ಟಣದ ಪ್ರತಿಯೊಂದು ಮನೆಯೂ ಸಂಮಾರ್ಜನಾದಿ ಸಂಸ್ಕಾರಗಳೊಂದೂ ಇಲ್ಲದೆ ಇದ್ದುದರಿಂದ, ಹಾಳುಬಿದ್ದ ನಿವೇಶನಗಳಂತೆ ಕಾಣು

ತ್ತಿದ್ದುವು. ರಾಮನ ವನಪ್ರಯಾಣಕಾಲದಲ್ಲಿದ್ದಂತೆಯೇ ಪಟ್ಟಣವೆಲ್ಲವೂ ವ್ಯಾಕುಲವಾಗಿತ್ತು. ಹೀಗೆ ರಾಜನು ಪುತ್ರಶೋಕದಿಂದ ಸ್ವರ್ಗಸ್ಥನಾಗಲು ರಾಜಭಾರ್ಯೆಯರೆಲ್ಲರೂ ಪತಿವಿಯೋಗದಿಂದ ನೆಲದಮೇಲೆ ಉರುಳಿ ಗೋಳಿಡುತ್ತಿರಲು ದುಃಖವನ್ನು ನೋಡಿ ಸಹಿಸಲಾರದವನಂತೆ ಸೂರ್ಯನೂ ಕಾಂತಿಹೀನನಾಗಿ ಅಸ್ತಮಿಸಿದನು. ರಾತ್ರಿಯೂ ಸಮೀಪಿಸಿತು! ಸುತ್ತಲೂ ಕತ್ತಲೆಯೂ ಆವರಿಸಿತು. ರಾಜನ ಬಂಧುಮಿತ್ರರೆಲ್ಲರೂ ಪುತ್ರನಿಲ್ಲದೆ ದಶರಥನಿಗೆ ಅಪರ ಸಂಸ್ಕಾರಗಳನ್ನು ಮಾಡಕೂಡದೆಂದು ನಿಶ್ಚಯಿಸಿ, ಆ ಮೃತದೇಹವನ್ನು ತೈಲದ್ರೋಣಿಯಲ್ಲಿಯೇ ಇರಿಸಿದ್ದರು. ಸೂರ್ಯಕಾಂತಿಯಿಲ್ಲದ ಆಕಾಶದಂತೆಯೂ ನಕ್ಷತ್ರಗಳಿಲ್ಲದ ರಾತ್ರಿಯಂತೆಯೂ ಮಹಾತ್ಮನಾದ ದಶರಥನಿಲ್ಲದ ಆ ರಾತ್ರಿಯು ಕೇವಲ ಕಾಂತಿಹೀನವಾಗಿತ್ತು. ಆ ಪಟ್ಟಣದ ರಾಜಮಾರ್ಗಗಳಲ್ಲಿಯೂ, ಚತುಷ್ಪಥಗಳಲ್ಲಿಯೂ ಜನರು ಗುಂಪುಗೂಡಿ ಕಣ್ಣೀರನ್ನು ಬಿಟ್ಟು ಅಳುತಿದ್ದರು. ಆ ಪಟ್ಟಣದ ಆಬಾಲವೃದ್ಧರೂ ಅಲ್ಲಲ್ಲಿ ಗುಂಪುಗುಂಪಾಗಿ ನಿಂತು ಕೈಕೇಯಿಯನ್ನು ಬಾಯಿಗೆ ಬಂದ ಹಾಗೆ ಬೈಯ್ಯುತ್ತಿದ್ದರು. ಆ ಪಟ್ಟಣದಲ್ಲಿ ಪ್ರತಿಯೊಬ್ಬರೂ ದುಃಖದಿಂದ ಕೊರಗುತ್ತಿದ್ದರು. ಯಾರ ಮನಸ್ಸಿನಲ್ಲಿಯೂ ಸಂತೋಷವಿರಲಿಲ್ಲ.

ಇದು ಅರುವತ್ತಾರನೆಯ ಸರ್ಗವು.

ರಾಜ್ಯವು ಅರಾಜಕವಾಗಿರುವುದರಿಂದ ಉಂಟಾಗಬಹುದಾದ ದೋಷಗಳನ್ನು ತಿಳಿಸಿ ಮಾರ್ಕಂಡೇಯಾದಿಗಳು ವಸಿಷ್ಠರನ್ನು ಪ್ರಾರ್ಥಿಸಿದುದು.

ಅಯೋಧ್ಯಾವಾಸಿಗಳೆಲ್ಲರೂ ದುಃಖದಿಂದ ಗೋಳಿಡುತ್ತ ಸಂತೋಷಶೂನ್ಯರಾಗಿ ಕಣ್ಣೀರುಬಿಟ್ಟು ಗದ್ಗದಸ್ವರದಿಂದ ಕೂಗಿಡುತ್ತಿರಲು, ಆ ರಾತ್ರಿಯು ಅವರಿಗೆ ಬಹುದೀರ್ಘಕಾಲದಂತೆ ಕಂಡು ಹೇಗೋ ಕಳೆಯಿತು. ರಾತ್ರಿಯು ಕಳೆದು ಸೂರ್ಯೋದಯವಾದಕೂಡಲೆ, ಅಭಿಷೇಕಕಾರ್ಯಗಳನ್ನು ನಡೆಸತಕ್ಕ ಬ್ರಾಹ್ಮಣರೆಲ್ಲರೂ ಒಟ್ಟಾಗಿ ಸಭೆಗೂಡಿದರು. ಮಾರ್ಕಂಡೇಯನೂ, ಮೌದ್ಗಲ್ಯನೂ, ವಾಮದೇವನೂ, ಕಾಶ್ಯಪನೂ, ಕಾತ್ಯಾಯನನೂ,

ಗೌತಮನೂ, ಮಹಾಯಶಸ್ವಿಯಾದ ಜಾಬಾಲಿ ಮುಂತಾದ ಇನ್ನೂ ಅನೇಕ ಬ್ರಾಹ್ಮಣೋತ್ತಮರೂ ಮಂತ್ರಿಗಳೊಡನೆ ಕಲೆತು, ಒಟ್ಟಾಗಿಸೇರಿ ಬಂದು, ರಾಜಪುರೋಹಿತನಾದ ವಸಿಷ್ಠನ ಮುಂದೆ ನಿಂತು ಬೇರೆಬೇರೆಯಾಗಿ ತಮತಮಗ ತೋರಿದಂತೆ ಮಾತುಗಳನ್ನು ಆಡತೊಡಗಿದರು. "ಎಲೈ ಮಹಾತ್ಮನೇ! ನಮ್ಮ ದಶರಥರಾಜನಂತೂ ಪುತ್ರಶೋಕದಿಂದ ಸ್ವರ್ಗಸ್ಥನಾದನು. ಆ ದುಃಖ ದಲ್ಲಿ ಈ ಒಂದು ರಾತ್ರಿಯನ್ನು ಕಳೆಯುವುದೇ ನೂರಾರು ವರುಷಗಳನ್ನು ಕಳೆಯುವಷ್ಟು ಕಷ್ಟವಾಯಿತು, ಇತ್ತಲಾಗಿ ಮಹಾರಾಜನೂ ಸ್ವರ್ಗಸ್ಥನಾದು ದಲ್ಲದೆ, ಅತ್ತಲಾಗಿ ರಾಮನೂ ಅರಣ್ಯಕ್ಕೆ ಹೊರಟುಹೋದನು. ತೇಜಸ್ವಿಯಾದ ಲಕ್ಷ್ಮಣನೂ ರಾಮನನ್ನೇ ಹಿಂಬಾಲಿಸಿ ಕಾಡುಪಾಲಾಗಿ ಹೊರಟುಹೋಗಿರು ವನು. ಶತ್ರುನಾಶಕರಾದ ಭರತಶತ್ರುಘ್ನರೂ ಕೇಕಯ ದೇಶದಲ್ಲಿ ಸೇರಿ ಮಾವನ ಮನೆಯಲ್ಲಿರುವರು. ಈಗ ಇಕ್ಷ್ವಾಕುವಂಶದಲ್ಲಿ ಹುಟ್ಟಿದ ಯಾವನಾದರೂ ಒಬ್ಬನನ್ನು ರಾಜ್ಯಾಧಿಪತಿಯನ್ನಾಗಿ ಮಾಡಿಡಬೇಕು. ರಾಜನಿಲ್ಲದ ರಾಜ್ಯಕ್ಕೆ ಎಂದಾದರೂ ನಾಶವು ತಪ್ಪದು. ರಾಜ್ಯವು ಅರಾಜಕವಾಗಿದ್ದ ಪಕ್ಷದಲ್ಲಿ ಮೇಘವೂ ಕ್ರಮವಾಗಿ ವರ್ಷಿಸಲಾರದು. ಕಾಲಕಾಲಕ್ಕೆ ಸರಿಯಾಗಿ ಸುವೃಷ್ಟಿಯೂ ಬೀಳದು. ಅರಾಜಕವಾದ ರಾಜ್ಯದಲ್ಲಿ ಜನರು ಬೀಜಗಳನ್ನೇ ಬಿತ್ತಲಾರರು. ಅರಾಜಕವಾದಮೇಲೆ ತಂದೆಗೆ ಮಕ್ಕಳು ವಿಧೇಯರಾಗಿರರು. ಗಂಡನಿಗೆ ಹೆಂಡತಿಯೂ ವಿಧೇಯಳಾಗಿರುವುದಿಲ್ಲ. ಅರಾಜಕವಾದ ರಾಜ್ಯದಲ್ಲಿ ಧನಸಮೃದ್ಧಿಯೂ ಕೆಡುವುದು. ಅವರವರು ತಮ್ಮ ಹೆಂಡಿರುಮಕ್ಕಳನ್ನು ಕಾಪಾಡಿಕೊಳ್ಳುವುದೇ ಅಸಾಧ್ಯವಾಗುವುದು. ಒಬ್ಬರಿಗೊಬ್ಬರು ಪರಸ್ಪರ ಬಾಂಧವ್ಯವನ್ನೂ ನೋಡುವುದಿಲ್ಲ. ಶಾಸ್ತ್ರೋಕ್ತವಾಗಿ ಕೈಹಿಡಿಯತಕ್ಕ ಕನ್ಯೆಯರೂ ಸಿಕ್ಕುವುದಿಲ್ಲ. ರಾಜ್ಯಕ್ಕೆ ರಾಜನಿಲ್ಲದಿದ್ದರೆ ಕ್ರಯವಿಕ್ರಯರೂಪ ವಾದ ವ್ಯವಹಾರಗಳಲ್ಲಿ ಯಾರೊಬ್ಬರೂ ಸತ್ಯದಿಂದ ನಡೆದುಕೊಳ್ಳಲಾರರು. ಇನ್ನೂ ಅನೇಕವಿಧವಾದ ಅನರ್ಥಗಳಿಗೆ ಕಾರಣವಾಗುವುದು. ಅರಾಜಕವಾದ ರಾಜ್ಯದಲ್ಲಿ ಜನಗಳಿಗೆ ಉತ್ಸಾಹವೆಂಬುದು ಸ್ವಲ್ಪವಾದರೂ ಇಲ್ಲದಿರುವುದರಿಂದ, ಸಭೆ ಮುಂತಾದ ವಿನೋದಗೋಷ್ಠಿಗಳೊಂದೂ ನಡೆಯುವುದಿಲ್ಲ. ಕಳ್ಳರ ಭಯಕ್ಕಾಗಿ ಯಾರೊಬ್ಬರೂ ಉತ್ಕೃಷ್ಟವಾದ ತೋಟಗಳನ್ನಾಗಲಿ, ಉತ್ತಮ ವಾದ ಮನೆಗಳನ್ನಾಗಲಿ, ಮಾಡಿಸಿಡುವುದಿಲ್ಲ. ಬ್ರಾಹ್ಮಣರು ದುಷ್ಟರ ಭಯ

ಕ್ಕಾಗಿ ತಮ್ಮ ತಮ್ಮ ಯಜ್ಞಾದಿಕಾರ್ಯಗಳನ್ನೂ ಕ್ರಮವಾಗಿ ನಡೆಸಲಾರರು. ವೇದಾಧ್ಯಯನಪರರಾದವರೂ, ವ್ರತನಿಷ್ಠರಾದವರೂ, ಅರಾಜಕವಾದ ರಾಜ್ಯದಲ್ಲಿ ನಿಶ್ಚಿಂತರಾಗಿ ತಮ್ಮ ಕೃತ್ಯಗಳನ್ನು ನಡೆಸಲಾರರು. ಯಜ್ಞಶೀಲರಾದವರು ಕಳ್ಳರ ಭಯದಿಂದ ತಮ್ಮ ತಮ್ಮ ಯಜ್ಞಗಳಿಗೆ ಬೇಕಾದ ದ್ರವ್ಯಸಂಭಾರಗಳನ್ನು ಸಂಗ್ರಹಿಸಿಡುವುದಕ್ಕೂ ಹೆದರಿ, ಶಾಸ್ತ್ರೋಕ್ತವಾದ ಭೂರಿದಕ್ಷಿಣೆಗಳನ್ನೇ ಬಿಟ್ಟು ಕಾರ್ಯಗಳನ್ನು ನಡೆಸಿಬಿಡುವರು. ಅರಾಜಕವಾದ ದೇಶದಲ್ಲಿ ಯಾವುದೊಂದು ಉತ್ಸವಗಳೂ ನಡೆಯವು! ಆಯಾ ಉತ್ಸವಗಳಿಗೆ ಪ್ರೋತ್ಸಾಹಕರೂ ಇರುವುದಿಲ್ಲ. ಉತ್ಸವದ ಕೊಂಡಾಟಕ್ಕಾಗಿ ನಟನರ್ತಕಾದಿಗಳಿಗೆ ಪಾರಿತೋಷಕವನ್ನು ಕೊಡತಕ್ಕವರೂ ಇರುವುದಿಲ್ಲ. ಕಳ್ಳರ ಭಯಕ್ಕಾಗಿ ಯಾತ್ರಾರ್ಥಿಗಳು ತಮ್ಮ ಯಾತ್ರೆಗಳನ್ನೂ ನಿಲ್ಲಿಸಿಬಿಡುವರು. ರಾಜನಿಲ್ಲದ ದೇಶದಲ್ಲಿ ದಾಯಭಾಗಗಳೇ ಮೊದಲಾದ ವ್ಯವಹಾರಗಳಾಗಲಿ, ಕ್ರಯವಿಕ್ರಯಾದಿ ರೂಪವಾದ ವ್ಯಾಪಾರಗಳಾಗಲಿ ಕ್ರಮವಾಗಿ ನಡೆಯದೆ, ಅದರಿಂದ ಜೀವನ ಮಾಡುತಿದ್ದ ಜನರಿಗೆ ಜೀವನವೇ ಕಷ್ಟವಾಗುವುದು. ಮತ್ತು ಇತಿಹಾಸ ಪುರಾಣಾದಿಗಳನ್ನು ಹೇಳಿ ಜೀವಿಸತಕ್ಕ ಪೌರಾಣಿಕರಿಗೂ ತಕ್ಕಷ್ಟು ಪಾರಿತೋಷಕವನ್ನು ಕೊಟ್ಟು ಪ್ರೋತ್ಸಾಹಿಸತಕ್ಕ ಪ್ರಭುಗಳಿಲ್ಲದೇ ಹೋಗುವುದರಿಂದ, ದೇಶದಲ್ಲಿ ಪುಣ್ಯಕಥಾಶ್ರವಣವೆಂಬುದೇ ನಿಂತುಹೋಗುವುದು. ಅರಾಜಕವಾದ ರಾಜ್ಯದಲ್ಲಿ ಸ್ತ್ರೀಯರು ಸರ್ವಾಲಂಕಾರಭೂಷಿತರಾಗಿ ಉದ್ಯಾನವನಗಳಲ್ಲಿ ತಮ್ಮ ತಮ್ಮ ನಾಯಕರೊಡನೆ ವಿನೋದದಿಂದ ವಿಹರಿಸುವುದೂ ಕಷ್ಟವಾಗುವುದು. ರಾಜನಿಲ್ಲದ ರಾಜ್ಯದಲ್ಲಿ ದುಷ್ಟರ ಭಯಕ್ಕಾಗಿ ಕಾಮುಕರಾದವರು ತಮ್ಮ ಪತ್ನಿಯರೊಡಗೂಡಿ ವಾಹನಾರೂಢರಾಗಿ ಹೊರಟು, ವನಗಳಲ್ಲಿ ಕ್ರೀಡಿಸುತ್ತಿರುವುದಕ್ಕೂ ಅಂಜುವರು. ಅರಾಜಕವಾದ ರಾಜ್ಯದಲ್ಲಿ ಕೃಷಿಗೋರಕ್ಷಣಾದಿಗಳಿಂದ ಜೀವಿಸತಕ್ಕ ಧನವಂತರಾದ ವೈಶ್ಯರು ಕೂಡ ಕಳ್ಳರ ಭಯಕ್ಕಾಗಿ ರಾತ್ರಿಯಲ್ಲಿ ಬಾಗಿಲನ್ನು ತೆರೆಯದೆ, ಸುಖವಾಗಿ ನಿದ್ರೆಯನ್ನೂ ಮಾಡದೆ, ಕಳವಳಿಸುತ್ತಿರುವರು. ರಾಜನಿಲ್ಲದ ರಾಜ್ಯದಲ್ಲಿ ಎಂದಿನಂತೆ ಅರುವತ್ತುವರುಷದ ಆನೆಗಳು ರಾಜಬೀದಿಗಳಲ್ಲಿ ಘಂಟಾಧ್ವನಿಯನ್ನು ಮಾಡುತ್ತ, ಪ್ರಶಸ್ತವಾದ ಕೊಂಬುಗಳುಳ್ಳದಾಗಿ ಸಂತೋಷದಿಂದ ತಿರುಗುತ್ತಿರುವುದಕ್ಕೂ ಅವಕಾಶವಿಲ್ಲದೇ ಹೋತ್ರಪೂರ್ವಕವಾದ ಅಸ್ತ್ರಗಳನ್ನೂ ಅಭ್ಯಾಸಮಾಡುವಾಗ, ಎಡೆಬಿಡದೆ ಬಾಣಪ್ರಯೋಗಮಾಡುವ

ಧನುಷ್ಟಂಕಾರಗಳೂ ನಿಂತುಹೋಗುವುವು. ಅರಾಜಕವಾದ ರಾಜ್ಯವಲ್ಲಿ ದೂರಕ್ಕೆ ವಿಕ್ರಯಿಸಿ ಲಾಭವನ್ನು ಸಂಪಾದಿಸತಕ್ಕ ವರ್ತಕರು ಮಾರ್ಗಗಳಲ್ಲಿ ಅಪಾಯವಿಲ್ಲದೆ ಹಿಂತಿರುಗಿಬರುವುದೇ ಕಷ್ಟವಾಗುವುದು. ಅರಾಜಕವಾದ ರಾಜ್ಯದಲ್ಲಿ ಜಿತೇಂದ್ರಿಯನಾಗಿ, ಏಕಾಕಿಯಾಗಿ ದೇಶಸಂಚಾರವನ್ನು ಮಾಡುತ್ತಿದ್ದ ಯತಿಯೂ ಕೂಡ, ಮನಸ್ಸಿನಲ್ಲಿ ಪರಮಾತ್ಮ ಧ್ಯಾನವನ್ನು ಮಾಡುತ್ತ, ಹೊತ್ತು ಮುಳುಗಿದ ಕಡೆಯಲ್ಲಿ ಮನೆಮಾಡಿಕೊಂಡು ಸುಖವಾಗಿರಲಾರನು. ಅರಾಜಕವಾದ ದೇಶದಲ್ಲಿ ಯೋಗಕ್ಷೇಮಗಳೂ ಸರಿಯಾಗಿ ನಡೆಯವು. ಅರಾಜಕವಾದ ರಾಜ್ಯದಲ್ಲಿ ತಕ್ಕ ನಿಯಾಮಕರಿಲ್ಲದುದರಿಂದ, ಸೈನ್ಯಗಳು ಶತ್ರುಗಳಿಗೆ ಧೈರ್ಯದಿಂದ ಎದೆಗೊಟ್ಟು ನಿಲ್ಲಲಾರವು. ಅರಾಜಕವಾದ ರಾಜ್ಯದಲ್ಲಿ ಜನರು ಕಳ್ಳರ ಭಯಕ್ಕಾಗಿ ಎಂದಿನಂತೆ ಚೆನ್ನಾಗಿ ಅಲಂಕರಿಸಿಕೊಂಡು, ಕುದುರೆಗಳನ್ನೂ, ರಥಗಳನ್ನೂ ಏರಿ, ನಿರ್ಭಯವಾಗಿ ಸಂಚರಿಸಲಾರರು. ಅರಾಜಕವಾದ ರಾಜ್ಯದಲ್ಲಿ ದುಷ್ಟರ ಭಯಕ್ಕಾಗಿ ಶಾಸ್ತ್ರಜ್ಞರಾದ ಪಂಡಿತರು ಋಷ್ಯಾಶ್ರಮಗಳಲ್ಲಿಯೂ, ತೋಟಗಳಲ್ಲಿಯೂ, ಸಭೆಸೇರಿ, ನೆಮ್ಮದಿಯಿಂದ ಶಾಸ್ತ್ರಾರ್ಥಗಳನ್ನು ಉಪನ್ಯಸಿಸಲಾರರು. ಅರಾಜಕವಾದ ರಾಜ್ಯದಲ್ಲಿ ಜನಗಳು ವಿಘ್ನಭಯಕ್ಕಾಗಿ ದೇವತಾಪೂಜೆಗಳಿಗೆ ಬೇಕಾದ ಪುಷ್ಪಮಾಲಿಕೆಗಳನ್ನಾಗಲಿ ಭಕ್ಷ್ಯಗಳನ್ನಾಗಲಿ, ದಕ್ಷಿಣೆಗಳನ್ನಾಗಲಿ, ಸಿದ್ಧಪಡಿಸಿಡುವುದಕ್ಕೂ ಹಿಂತೆಗೆಯುವರು. ಅರಾಜಕವಾದ ದೇಶದಲ್ಲಿ ರಾಜಕುಮಾರರು ಅಗರುಚಂದನಾದಿಗಳನ್ನು ಲೇಪಿಸಿಕೊಂಡು, ವಸಂತಕಾಲದ ವೃಕ್ಷಗಳಂತೆ ಕಣ್ಣಿಗೆ ಆಹ್ಲಾದವನ್ನುಂಟುಮಾಡುವುದಿಲ್ಲ. ಅರಾಜಕವಾದ ರಾಜ್ಯವು ನೀರಿಲ್ಲದ ನದಿಯಂತೆಯೂ ಹುಲ್ಲಿಲ್ಲದ ಕಾಡಿನಂತೆಯೂ, ಕಾವರಿಲ್ಲದ ದನಗಳ ಮಂದೆಯಂತೆಯೂ ಪ್ರಕಾಶಿಸದು. ರಥಕ್ಕೆ ಧ್ವಜವೂ ಅಗ್ನಿಗೆ ಧೂಮವೂ, ಜ್ಞಾಪಕಚಿಹ್ನವಾಗಿರುವಂತೆ, ರಾಜ್ಯಕ್ಕೆ ರಾಜನೇ ಪ್ರಕಾಶಕವಾದ ಚಿಹ್ನವು. ಹೀಗೆ ನಮ್ಮೆಲ್ಲರಿಗೂ ಧ್ವಜಪ್ರಕಾಶಕನಾದ ರಾಜನು ನಮ್ಮನ್ನು ಬಿಟ್ಟು ಸ್ವರ್ಗಕ್ಕೆ ಹೊರಟುಹೋದನು. ಅರಾಜಕವಾದ ರಾಜ್ಯದಲ್ಲಿ ಯಾರಿಗೂ ತಮ್ಮ ತಮ್ಮ ಸ್ವತ್ತುಗಳು ತಮ್ಮದೆಂದು ಹೇಳುವುದೇ ಕಷ್ಟವಾಗುವುದು. [1] ಮೀನುಗಳಂತೆ ಮನುಷ್ಯರೂ ಒಬ್ಬರನ್ನೊ

[1] ಇಲ್ಲಿ "ಯೇ ಹಿ ಸಂಭಿನ್ನಮರ್ಯಾದಾ ನಾಸ್ತಿಕಾಶ್ಛಿನ್ನಸಂಶಯಾಃ । ತೇಽಪಿ ಭಾವಾಯ ಕಲ್ಪಂತೇ ರಾಜದಂಡನಿಪೀಡಿತಾಃ ॥" ಎಂದು ಮೂಲವು. ಇದಕ್ಕೆ "ಶಾಸ್ತ್ರ

ಬ್ಬರು ಪೀಡಿಸಿ ತಿಂದುಬಿಡುವರು. ಸ್ವಾಭಾವಿಕವಾಗಿಯೇ ತಮ್ಮ ತಮ್ಮ ವರ್ಣಾಶ್ರಮಧರ್ಮಗಳನ್ನು ಬಿಟ್ಟು ಮರ್ಯಾದೆಯನ್ನು ಮೀರಿ ನಡೆಯತಕ್ಕ ನಾಸ್ತಿಕ ಬುದ್ಧಿಯುಳ್ಳವರೆಲ್ಲರೂ ಈಗ ರಾಜದಂಡದ ಭಯವಿಲ್ಲದಿರುವುದರಿಂದ, ತಮ್ಮ ತಮ್ಮ ದುಷ್ಕಾರ್ಯಗಳಲ್ಲಿ ನಿಶ್ಶಂಕೆಯಿಂದ ಪ್ರವರ್ತಿಸುವರು. ರಾಜ್ಯಕ್ಕೆ ರಾಜನೊಬ್ಬನಿದ್ದ ಪಕ್ಷದಲ್ಲಿ ರಾಜದಂಡಭಯಕ್ಕಾಗಿಯಾದರೂ ಅವರು ತಮ್ಮ ದುಸ್ಸ್ವಭಾವವನ್ನು ಬಿಟ್ಟು ಸತ್ಕಾರ್ಯದಲ್ಲಿ ಪ್ರವರ್ತಿಸುವರು. ದೇಹಕ್ಕೆ ದೃಷ್ಟಿಯು ಹೇಗೆ ಹಿತಸಾಧನವಾಗಿರುವುದೋ ಹಾಗೆ ರಾಷ್ಟ್ರಕ್ಕೆ ರಾಜನೇ ಕಣ್ಣು. ರಾಜನೇ ಸತ್ಕುಲದಲ್ಲಿ ಹುಟ್ಟಿದವರ ಕುಲಾಚಾರಗಳನ್ನು ಕಾಪಾಡಿಸ ಬೇಕು. ರಾಜನೇ ಸತ್ಯಸ್ವರೂಪನು. ಆತನೇ ಧರ್ಮವು. ಆತನೇ ತಂದೆಯು. ಆತನೇ ತಾಯಿಯು. ರಾಜನೇ ಪ್ರಜೆಗಳಿಗೆ ಹಿತವನ್ನುಂಟುಮಾಡತಕ್ಕವನು. ಅಷ್ಟದಿಕ್ಪಾಲಕರಲ್ಲಿಯೂ ಕೂಡ ಯಮನು ದಂಡಿಸುವುದಕ್ಕೆ ಮಾತ್ರ ಸಮರ್ಥನು. ಕುಬೇರನು ದಾನಮಾಡುವುದಕ್ಕೆ ಮಾತ್ರ ಶಕ್ತನು. ಇಂದ್ರನು ಪ್ರಜೆಗಳನ್ನು ಸುಖವಾಗಿ ಪಾಲಿಸುವುದಕ್ಕೆ ಮಾತ್ರವೇ ಬಲ್ಲನು. ವರುಣನು ಸದಾಚಾರಗಳನ್ನು ನಿರ್ಣಯಿಸುವುದಕ್ಕೆ ಮಾತ್ರವೇ ಶಕ್ತನು. ರಾಜನಲ್ಲಿ ಯಾದರೋ ಈ ಸಮಸ್ತಶಕ್ತಿಗಳೂ ಒಂದಾಗಿ ಕಲೆತಿರುವುವು. ದುಷ್ಟರನ್ನು ದಂಡಿಸುವುದಕ್ಕೂ ದರಿದ್ರರಿಗೆ ದಾನಮಾಡುವುದಕ್ಕೂ ಪ್ರಜೆಗಳನ್ನು ಸುಖ ದಿಂದ ರಕ್ಷಿಸುವುದಕ್ಕೂ ಜನರಿಗೆ ಯುಕ್ತಾಯುಕ್ತಗಳನ್ನು ತಿಳಿಸುವುದಕ್ಕೂ ರಾಜನೊಬ್ಬನಿದ್ದೇ ಇರಬೇಕು. ಇಂತಹ ರಾಜನಿಲ್ಲದಿರುವುದರಿಂದ ಲೋಕದಲ್ಲಿ ದೊಡ್ಡ ಮಹಾಂಧಕಾರವು ಮುತ್ತಿದಂತೆ ಯಾವುದೊಂದೂ ತಿಳಿಯದು. ಎಲೈ ಬ್ರಾಹ್ಮಣೋತ್ತಮನೆ! ಮಹಾರಾಜನು ಬದುಕಿರುವಾಗಲೂ ಕೂಡ ನಾವು ಸಮುದ್ರವು ಮೇರೆಯನ್ನು ಮೀರದಂತೆ ನಿನ್ನ ಮಾತಿಗೆ ಕಟ್ಟುಬಿದ್ದಿದ್ದೆವು. ಆತನು ಗತಿಸಿಹೋದಮೇಲೆ ನೀನಿಲ್ಲದೆ ನಮಗೆ ಬೇರೆ ನಿಯಾಮಕರಾರು? ಈಗ ಈ ರಾಜ್ಯಕ್ಕೆ ಒಬ್ಬ ರಾಜನನ್ನು ತಂದಿಡಬೇಕಾದುದೇ ನಮ್ಮ ಮೊದಲನೆಯ ಕೆಲಸವು. ರಾಜನಿಲ್ಲದ ರಾಜ್ಯವು ಅರಣ್ಯಪ್ರಾಯವಾಗುವುದು. ಇದೆಲ್ಲವನ್ನೂ

ಮರ್ಯಾದೆಯನ್ನತಿಕ್ರಮಿಸಿದಾಗ ಮೊದಲು ರಾಜದಂಡದಿಂದ ದಂಡಿಸಲ್ಪಡುತಿದ್ದ ನಾಸ್ತಿಕರೂ ಕೂಡ ಈಗ ಆ ರಾಜದಂಡದ ಭಯವಿಲ್ಲದುದಕ್ಕಾಗಿ ಧಾರಾಳವಾಗಿ ತಮ್ಮ ದುಷ್ಕಾರ್ಯ ಗಳಲ್ಲಿ ಪ್ರವರ್ತಿಸುವರೆಂಬುದೇ ಗೋವಿಂದರಾಜೀಯ ವ್ಯಾಖ್ಯಾನವು.

ನೀನು ಚೆನ್ನಾಗಿ ಪರ್ಯಾಲೋಚಿಸಿ ಇಕ್ಷ್ವಾಕುವಂಶದಲ್ಲಿ ಹುಟ್ಟಿದ ರಾಜಕುಮಾರನೊಬ್ಬನನ್ನು ಈಗಲೇ ಕರೆತಂದು ಪಟ್ಟಾಭಿಷೇಕವನ್ನು ನಡೆಸು" ಎಂದರು.

ಇಲ್ಲಿಗೆ ಅರುವತ್ತೇಳನೆಯ ಸರ್ಗವು.

ವಸಿಷ್ಠನು ಭರತನನ್ನು ಕರೆತರುವುದಕ್ಕಾಗಿ ಕೇಕಯ ನಗರಕ್ಕೆ ದೂತರನ್ನು ಕಳುಹಿಸಿದುದು.

ಅವರ ಮಾತನ್ನು ಕೇಳಿ ವಸಿಷ್ಠನು ಅಲ್ಲಿದ್ದ ಬ್ರಾಹ್ಮಣೋತ್ತಮರನ್ನೂ ಮಿತ್ರರನ್ನೂ, ಮಂತ್ರಿಗಳನ್ನೂ ಕುರಿತು, "ಎಲೈ ಪೂಜ್ಯರೆ! ಈಗ ಭರತನು ತಮ್ಮನಾದ ಶತ್ರುಘ್ನನೊಡನೆ ತನ್ನ ಸೋದರದ ಮಾವನಾದ ಕೇಕಯ ರಾಜನ ಪಟ್ಟಣದಲ್ಲಿ ರಾಜಭೋಗಗಳನ್ನು ಅನುಭವಿಸಿಕೊಂಡು ಸುಖವಾಗಿರುವನು. ಆತನನ್ನು ಕರೆತರುವುದಕ್ಕಾಗಿ ಉತ್ತಮವಾದ ಕುದುರೆಗಳ ಮೇಲೆ ದೂತರನ್ನು ಕಳುಹಿಸುವ ಪ್ರಯತ್ನವನ್ನು ಮಾಡಿರಿ! ಅವರು ಬೇಗನೆ ಹೋಗಿ ವೀರರಾದ ಅಣ್ಣತಮ್ಮಂದಿರಿಬ್ಬರನ್ನೂ ಇಲ್ಲಿಗೆ ಕರೆತರಲಿ! ನಾವು ಈಗ ಇಲ್ಲಿ ವಿಚಾರಿಸಬೇಕಾದುದೇನೂ ಇಲ್ಲವು. ದಶರಥನು ಮೊದಲೇ ಭರತನಿಗೆ ರಾಜ್ಯವನ್ನು ಕೊಡುವುದಾಗಿ ಮಾತುಕೊಟ್ಟಿದ್ದನಲ್ಲವೆ?" ಎಂದನು. ಅದನ್ನು ಕೇಳಿ ಮಂತ್ರಿ ಮೊದಲಾದವರೆಲ್ಲರೂ ಹಾಗೆಯೇ ಆಗಲೆಂದು ಒಪ್ಪಿದರು. ಆಗ ವಸಿಷ್ಠನು ಸಿದ್ಧಾರ್ಥ,[1] ವಿಜಯ, ಜಯಂತ, ಅಶೋಕ, ನಂದರೆಂಬ ಪ್ರಧಾನದೂತರನ್ನು ಕರೆದು "ಎಲೈ ದೂತರೆ! ನೀವೆಲ್ಲರೂ ಕೇಳಿರಿ? ಈಗ ನೀವು ಮಾಡಬೇಕಾದ ಅವಶ್ಯಕಾರ್ಯವೊಂದುಂಟು. ನಿಮ್ಮ ಮನಸ್ಸಿನಲ್ಲಿರುವ ದುಃಖವನ್ನು ಬಿಟ್ಟು, ವೇಗವುಳ್ಳ ಕುದುರೆಗಳನ್ನೇರಿ ರಾಜಗೃಹವೆಂಬ ಕೇಕೆಯರಾಜನ ಪಟ್ಟಣಕ್ಕೆ ಹೋಗಬೇಕು. ಅಲ್ಲಿ ಭರತನನ್ನು ನೋಡಿ ನನ್ನ ಮಾತಿನಿಂದ ಆತನಿಗೆ ಈ ವಿಷಯಗಳನ್ನು ತಿಳಿಸಿರಿ? "ಎಲೆ ವತ್ಸನೆ? ಮಂತ್ರಿ ಪುರೋಹಿತಾದಿಗಳೆಲ್ಲರೂ

---

[1] ಇಲ್ಲಿ ಸಿದ್ಧಾರ್ಥಾದಿಗಳೆಲ್ಲರೂ ಮಂತ್ರಿಗಳಲ್ಲ. ಸಿದ್ಧಾರ್ಥಾದಿ ಮುಖ್ಯಮಂತ್ರಿಗಳ ಹೆಸರಿನಿಂದಲೇ ಕರೆಯಲ್ಪಡುವ ಬೇರೆ ಕೆಲವು ಪ್ರಧಾನ ದೂತರು. ಅಲ್ಲಿನ ಮಂತ್ರಿಗಳಲ್ಲಿ ನಂದನನೆಂಬವನೊಬ್ಬನೂ ಇಲ್ಲವು. ದೂತರಲ್ಲಿ ಸೇರಿದ ನಂದನನೆಂಬವನ ಹೆಸರನ್ನು ಕೂಡಿಸಿ ಹೇಳಿರುವುದರಿಂದಲೇ ಇತರ ಸಿದ್ಧಾರ್ಥಾದಿಗಳೂ ದೂತರೆಂದು ಸ್ಪಷ್ಟಪಡುವುದು.

ಇಲ್ಲಿ ನಿನ್ನ ಕ್ಷೇಮವನ್ನು ವಿಚಾರಿಸುವರು. ನೀನು ಈಗಲೇ ಅಯೋಧ್ಯೆಗೆ ಹೊರಟು ಬರಬೇಕು. ಅತ್ಯವಶ್ಯವಾದ ಒಂದು ಕಾರ್ಯಕ್ಕೆ ಕಾಲವು ಮಿಂಚಿಹೋಗುತ್ತಿರುವುದು. ಆ ಕಾರ್ಯವು ನಿನ್ನಿಂದಲೇ ನಡೆಯಬೇಕಾದುದರಿಂದ ಈಗಲೇ ಹೊರಟು ಬಂದುಬಿಡು." ಎಂದು ನಾನು ಹೇಳಿದುದಾಗಿ ಹೇಳಿರಿ? ಎಲೈ ದೂತರೆ! ಅಲ್ಲಿ ನೀವು ಭರತನಿಗೆ ರಾಮನ ವನವಾಸವನ್ನಾಗಲಿ, ದಶರಥನ ಮರಣವನ್ನಾಗಲಿ ಸ್ವಲ್ಪಮಟ್ಟಿಗಾದರೂ ಸೂಚಿಸಕೂಡದು! ರಘುವಂಶಕ್ಕೆ ಸಂಭವಿಸಿರುವ ಈ ಮಹಾನರ್ಥದಲ್ಲಿ ಯಾವುದೊಂದನ್ನೂ ತಿಳಿಸಬೇಡಿರಿ! ನೀವು ಬಹು ಸಂತೋಷದಿಂದ ಹೊರಟುಬಂದಂತೆಯೇ ನಟಿಸುವುದಕ್ಕಾಗಿ, ಅಲ್ಲಿ ಕೇಕಯ ರಾಜನಿಗೂ, ಭರತನಿಗೂ ತಕ್ಕಂತೆ ರತ್ನಾಭರಣಗಳನ್ನೂ, ಪಟ್ಟೆಮಡಿಗಳನ್ನೂ ಕಾಣಿಕೆಯಾಗಿ ಕೆಗೆದುಕೊಂಡು ಹೋಗಿರಿ?" ಎಂದನು. ಒಡನೆಯೇ ಅರಮನೆಯಿಂದ ಅವರಿಗೆ ದಾರಿಯ ವೆಚ್ಚಕ್ಕೆ ತಕ್ಕಷ್ಟು ದ್ರವ್ಯವನ್ನು ತೆಗೆಸಿಕೊಡಲು, ಅವರೆಲ್ಲರೂ ತಮ್ಮ ತಮ್ಮ ಮನೆಗೆ ಹೋಗಿ ಪ್ರಯಾಣಸನ್ನದ್ಧರಾಗಿ ಹೊರಟು ಬಂದು, ಉತ್ತಮವಾದ ಕುದುರೆಗಳನ್ನೇರಿ ಹೊರಡುವುದಕ್ಕೆ ಸಿದ್ಧರಾದರು. ಪ್ರಯಾಣಕ್ಕೆ ಬೇಕಾದ ಇತರ ಸನ್ನಾಹಗಳೆಲ್ಲವನ್ನೂ ಸಿದ್ಧಪಡಿಸಿಕೊಂಡಮೇಲೆ, ವಸಿಷ್ಠನ ಅನುಮತಿಯನ್ನು ಪಡೆದು ವೇಗದಿಂದ ಹೊರಟರು. ಅಯೋಧ್ಯೆಯನ್ನು ಬಿಟ್ಟಮೇಲೆ [1] ಪಶ್ಚಿಮಾಭಿಮುಖವಾಗಿ ಹೊರಟು ಅಪರಕಾಲವೆಂಬ ಬೆಟ್ಟದ ಕೊನೆ ಮುಟ್ಟುವವರೆಗೂ ಪ್ರಯಾಣಮಾಡಿ, ಅಲ್ಲಿಂದ ಮುಂದೆ ಪ್ರಲಂಬವೆಂಬ ಬೆಟ್ಟದ ಉತ್ತರ ದಿಕ್ಕಿನ ಮಾರ್ಗವಾಗಿ ಹೋದರು. ಇವುಗಳ ನಡುವೆ ಇದ್ದ ಮಾಲಿನಿಯೆಂಬ ನದಿಯನ್ನು ದಾಟಿದರು. ಅಲ್ಲಿಂದ ಹಸ್ತಿನಾಪುರಕ್ಕೆ ಹೋಗಿ, ಅಲ್ಲಿ ಗಂಗೆಯನ್ನು ದಾಟಿ, ಅದಕ್ಕೆ ಮುಂದೆ ಪಶ್ಚಿಮಾಭಿಮುಖವಾಗಿ ಹೊರಟು,

---

[1] ಅಯೋಧ್ಯೆಗೆ ಪಶ್ಚಿಮಕ್ಕೆ ಅಪರತಾಲಪರ್ವತವು ದಕ್ಷಿಣೋತ್ತರವಾಗಿ ವ್ಯಾಪಿಸಿರುವುದು. ಅದಕ್ಕೆ ಪಶ್ಚಿಮವಾಗಿ ಪ್ರಲಂಬಪರ್ವತವು ದಕ್ಷಿಣೋತ್ತರವಾಗಿ ಸ್ವಲ್ಪದೂರ ವ್ಯಾಪಿಸಿ, ಆಮೇಲೆ ಪೂರ್ವಪಶ್ಚಿಮವಾಗಿ ಹಬ್ಬಿರುವುದು. ದೂತರು ಅಯೋಧ್ಯೆಯಿಂದ ಪಶ್ಚಿಮ ಭಾಗದ ಕಡೆಗಾಗಿ ಹೋಗಿ, ಅದಕ್ಕೂ ಅದರ ಪಶ್ಚಿಮಕ್ಕಿರುವ ಪ್ರಲಂಬಪರ್ವತಕ್ಕೂ ನಡುವೆ, ಮಾಲಿನಿ ತೀರ ಮಾರ್ಗವಾಗಿ ಪೂರ್ವಾಭಿಮುಖವಾಗಿ ನಡೆದು ಆ ಮೇಲೆ ಪ್ರಲಂಬಪರ್ವತವು ಪೂರ್ವ ಪಶ್ಚಿಮವಾಗಿ ತಿರುಗುವ ಕಡೆಯಲ್ಲಿ ಪಶ್ಚಿಮಕ್ಕೆ ತಿರುಗಿ, ಆ ಪ್ರಲಂಬದ ಉತ್ತರಭಾಗದಲ್ಲಿಯೇ ಹೋಗುತ್ತಿದ್ದರೆಂದು ತಿಳಿಯಬೇಕು.

ಕುರುಜಾಂಗಲವೆಂಬ ದೇಶದ ನಡುವಿನಿಂದ, ಪಾಂಚಾಲದೇಶವನ್ನು ಸೇರಿದರು. ಅಲ್ಲಿ ಜಲಪೂರ್ಣದ ಸರೋವರಗಳನ್ನೂ, ಸ್ವಚ್ಛವಾದ ನೀರಿನಿಂದ ಕೂಡಿದ ನದಿಗಳನ್ನೂ ನೋಡುತಿದ್ದರೂ, ಕಾರ್ಯಾತುರದಿಂದ ಬಹುವೇಗವಾಗಿಯೇ ಪ್ರಯಾಣ ಮಾಡಿದರು. ಅಲ್ಲಿಂದ ಮುಂದೆ ಹೋಗಿ ನಿರ್ಮಲವಾದ ನೀರಿನಿಂದಲೂ ನಾನಾ ವಿಧವಾದ ಪಕ್ಷಿಗಳ ಧ್ವನಿಗಳಿಂದಲೂ, ಅತಿ ಮನೋಹರವಾಗಿದ್ದ ಶರದಂಡಾನದಿಯನ್ನೂ, ಅಲ್ಲಿ ಸ್ನಾನಪಾನಗಳನ್ನು ಮಾಡುತ್ತಿರುವ ಬಹು ಜನ ಸಮೂಹವನ್ನೂ ನೋಡಿ ಸಂತೋಷಪಡುತ್ತ, ಅಲ್ಲಿಯೂ ನಿಲ್ಲದೆ ವೇಗದಿಂದ ಮುಂದೆ ಹೊರಟರು. ಸ್ವಲ್ಪ ದೂರ ಹೋದ ಮೇಲೆ ಅದರ ಪಶ್ಚಿಮ ತೀರದಲ್ಲಿ ಅನೇಕ ದೇವತೆಗಳಿಗೆ ನಿತ್ಯಾಶ್ರಯವಾದ ಸತ್ಯೋಪಯಾಚನವೆಂಬ ಒಂದು ಪುಣ್ಯವೃಕ್ಷದ ಅಡಿಯನ್ನು ಸೇರಿದರು. ಕೋರಿದವರ ಕೋರಿಕೆಗಳೆಲ್ಲವನ್ನೂ ಈಡೇರಿಸಿಕೊಡ ತಕ್ಕ ಮಹಾ ಮಹಿಮೆಯುಳ್ಳ ಪೂಜ್ಯವಾದ ಆ ವೃಕ್ಷಕ್ಕೆ ನಮಸ್ಕರಿಸಿ ಅಲ್ಲಿಂದ ಮುಂದೆ ಕುಕುಲಿಂಗಸ ನಗರಿಯನ್ನು ಪ್ರವೇಶಿಸಿದರು. ಆಮೇಲೆ ಅಭಿಕಾಲವೆಂಬ ಗ್ರಾಮವನ್ನು ಸೇರಿ ಅದರ ಪಕ್ಕದಲ್ಲಿ ಬೋಧಿಭವನವೆಂಬ ಪರ್ವತದಿಂದ ಹುಟ್ಟಿ ಬರುವ ಇಕ್ಷುಮತಿಯೆಂಬ ಪುಣ್ಯನದಿಯನ್ನು ದಾಟಿದರು. ಆ ನದೀತೀರದ ಗ್ರಾಮಗಳೆಲ್ಲವೂ ದಶರಥನ ವಂಶದವರಿಂದಲೇ ಪಿತೃಪಿತಾಮಹ ಪರಂಪರೆಯಾಗಿ ಅನುಭವಿಸಲ್ಪಡುತ್ತಿರುವುವು. ಆ ನದೀತೀರದಲ್ಲಿ ಬೊಗಸೆನೀರನ್ನು ಮಾತ್ರವೇ ಆಹಾರವಾಗಿ ತೆಗೆದುಕೊಂಡು, ಜಿತೇಂದ್ರಿಯರಾಗಿ ತಪಸ್ಸುಮಾಡುತಿದ್ದ ವೇದ ಪಾರಂಗತರಾದ ಅನೇಕ ಬ್ರಾಹ್ಮಣರನ್ನು ದರ್ಶನಮಾಡಿ, ಬಾಹ್ಲೀಕದೇಶದ ನಡುವೆ ಹೊರಟು ಸುದಾಮವೆಂಬ ಪರ್ವತವನ್ನು ಸೇರಿದರು. ಆ ಬೆಟ್ಟದಲ್ಲಿ ವಿಷ್ಣು ಪಾದಾಂಕಿತವಾದ ಒಂದು ಪುಣ್ಯನದಿಯನ್ನೂ, ಅದರ ಪಕ್ಕದಲ್ಲಿ ಪ್ರವಹಿಸುತ್ತಿದ್ದ ವಿಪಾಶಾನದಿಯನ್ನೂ, ಆ ನದೀತೀರದಲ್ಲಿದ್ದ ಪ್ರಸಿದ್ಧವಾದ ಶಾಲ್ಮಲೀ ವೃಕ್ಷವನ್ನೂ ಕಂಡರು. ಹೀಗೆಯೇ ಅನೇಕ ನದಿಗಳನ್ನೂ, ಬಾವಿಗಳನ್ನೂ, ಕೆರೆಗಳನ್ನೂ, ಸರೋವರಗಳನ್ನೂ, ಮತ್ತು ದಾರಿಯಲ್ಲಿ ಹುಲಿ, ಆನೆ, ಜಿಂಕೆ, ಸಿಂಹಗಳೇ ಮೊದಲಾದ ಮೃಗಗಳನ್ನೂ ನೋಡುತ್ತ, ರಾಜಾಜ್ಞೆಗೆ ಬದ್ಧರಾಗಿ ಬಹುದೂರ ಪ್ರಯಾಣವನ್ನು ಶೀಘ್ರಕಾಲದಲ್ಲಿಯೇ ಮುಗಿಸಿಕೊಂಡು ಹೋದರು. ಹೀಗೆ ಬಹುದೂರ ಪ್ರಯಾಣಮಾಡಿದುದರಿಂದ ಕುದುರೆಗಳು ಬಹಳವಾಗಿ ಬಳಲಿರುವುದನ್ನು ನೋಡಿ, ಸಮೀಪವಾದ ಮತ್ತೊಂದು ದಾರಿಯನ್ನು ಹಿಡಿದು, ಗಿರಿ

ವ್ರಜವೆಂಬ ಕೇಕಯರಾಜನ ಪಟ್ಟಣಕ್ಕೆ ಬಂದು ಸೇರಿದರು. ಭರತನನ್ನು ಶೀಘ್ರದಿಂದ ಕರೆತಂದು, ಆತನಿಂದ ತಮ್ಮ ರಾಜನಾದ ದಶರಥನಿಗೆ ಅಪರ ಸಂಸ್ಕಾರಗಳನ್ನು ಮಾಡಿಸಿ, ಆ ದಶರಥನಿಗೆ ಪುಣ್ಯಲೋಕ ಪ್ರಾಪ್ತಿಯನ್ನುಂಟು ಮಾಡಬೇಕೆಂಬ ಸ್ವಾಮಿಭಕ್ತಿಯಿಂದಲೂ, ಇಕ್ಷ್ವಾಕುವಂಶವನ್ನು ಮುಂದಕ್ಕೆ ತರಬೇಕೆಂಬ ಮಮತೆಯಿಂದಲೂ, ದಿಕ್ಕಿಲ್ಲದೆ ಕೊರಗುತ್ತಿರುವ ರಾಜಕುಲ ದವರನ್ನು ರಕ್ಷಿಸಬೇಕೆಂಬ ಮಮತೆಯಿಂದಲೂ, ಆ ದೂತರು ಸ್ವಲ್ಪವಾದರೂ ಅನಾದರವನ್ನು ತೋರಿಸದೆ, ಹೊತ್ತು ಮುಳುಗಿದರೂ ತಮ್ಮ ಪ್ರಯಾಣವನ್ನು ಬಿಡದೆ, ರಾತ್ರಿಯಾದ ಮೇಲೆ ಆ ಪಟ್ಟಣವನ್ನು ಸೇರಿದರು.

ಇದು ಅರುವತ್ತೆಂಟನೆಯ ಸರ್ಗವು.

ಇತ್ತಲಾಗಿ ಕೇಕಯನಗರದಲ್ಲಿ ಭರತನು ತಾನು ಕಂಡ ದುಸ್ಸ್ವಪ್ನಗಳನ್ನು ತನ್ನ ಮಿತ್ರರಿಗೆ ಹೇಳಿದುದು.

ದೂತರು ಗಿರಿವ್ರಜಪುರವನ್ನು ಸೇರಿದ ರಾತ್ರಿಯಲ್ಲಿಯೇ ಭರತನು ಅನೇಕ ದುಸ್ಸ್ವಪ್ನಗಳನ್ನು ಕಂಡನು. ಆ ರಾತ್ರಿಯು ಕಳೆದು ಬೆಳಗಾದಮೇಲೆ ತಾನು ಕಂಡ ದುಸ್ಸ್ವಪ್ನಗಳನ್ನು ನೆನೆಸಿಕೊಂಡು, [1] ಪ್ರಭಾತಕಾಲಗಳಲ್ಲಿ ಕಂಡ ಆ ದುಸ್ಸ್ವಪ್ನಗಳು ಶೀಘ್ರದಲ್ಲಿಯೇ ತಮ್ಮ ದುಷ್ಫಲಗಳನ್ನು ತೋರಿಸುವುವೆಂಬ ಭಯದಿಂದ ತತ್ತಳಿಸುತಿದ್ದನು. ಹೀಗೆ ಭಯದಿಂದ ಕೊರಗುತ್ತಿರುವ ಆ ಭರತನನ್ನು ನೋಡಿ, ಆತನ ಪ್ರಿಯಮಿತ್ರರೆಲ್ಲರೂ ಆತನ ಶಂಕೆಯನ್ನು ತಪ್ಪಿಸುವುದಕ್ಕಾಗಿ ಸುತ್ತಲೂ ಗುಂಪುಗೂಡಿ ಬಗೆಬಗೆಯಾದ ಪ್ರಿಯಕಥೆಗಳನ್ನು ಹೇಳುತ್ತ ವಿನೋದ ಪಡಿಸುತ್ತಿದ್ದರು. ಆತನ ದುಃಖೋಪಶಮನಾರ್ಥವಾಗಿ ಕೆಲವರು ವೀಣಾದಿ ವಾದ್ಯಗಳನ್ನು ನುಡಿಸುತಿದ್ದರು. ಮತ್ತೆ ಕೆಲವರು ವಿನೋದಕರಗಳಾದ ನಾಟಕ ಗಳನ್ನಾಡಿಸುತಿದ್ದರು. ಕೆಲವರು ನರ್ತನಗಳನ್ನು ಮಾಡುತಿದ್ದರು. ಇನ್ನುಕೆಲವರು

---

1 "ಗೋವಿಸರ್ಜನವೇಳಾಯಾಂ ಸದ್ಯಸ್ಸ್ವಪ್ನಫಲಂ ಭವೇತ್" ಎಂಬ ಸ್ವಪ್ನ ಶಾಸ್ತ್ರಾನುಸಾರವಾಗಿ ಬೆಳಗಿನ ಜಾವದಲ್ಲಿ ಕಂಡ ಸ್ವಪ್ನವು ಶೀಘ್ರದಲ್ಲಿಯೇ ಫಲವನ್ನು ತೋರಿಸುವುದು.

ಪರಿಹಾಸಕರವಾದ ಮಾತುಗಳನ್ನಾಡುತಿದ್ದರು. ಹೀಗೆ ತನ್ನ ಮಿತ್ರರೆಲ್ಲರೂ ಸಭೆಗೂಡಿ ಪ್ರಿಯವಾಕ್ಯಗಳನ್ನೂ, ಹಾಸ್ಯದ ಮಾತುಗಳನ್ನೂ ಆಡುತಿದ್ದರೂ ಭರತನಿಗೆ ಯಾವುದೊಂದೂ ರುಚಿಸಲಿಲ್ಲ. ಆತನು ಮನಸ್ಸಿನಲ್ಲಿ ಕೊರಗುತ್ತಲೇ ಇದ್ದನು. ಆಗ ಮಿತ್ರಮಂಡಲಿಯಿಂದ ಪರಿವೃತನಾದ ಭರತನನ್ನು ನೋಡಿ ಆತನಿಗೆ ಅಂತರಂಗಸಖನಾದವನೊಬ್ಬನು "ಎಲೈ ಮಿತ್ರನೆ! ನಿನ್ನ ಪ್ರಿಯ ಮಿತ್ರರೆಲ್ಲರೂ ಅನೇಕ ವಿಧದಲ್ಲಿ ನಿನ್ನನ್ನು ವಿನೋದಗೊಳಿಸುತಿದ್ದರೂ ನೀನು ಸಂತೋಷಿಸದಿರುವೆಯಲ್ಲವೆ? ಇದಕ್ಕೆ ಕಾರಣವೇನು?" ಎಂದನು. ಅವನನ್ನು ನೋಡಿ ಭರತನು "ಎಲೈ ಪ್ರಿಯನೆ! ನನಗೆ ಈಗ ಈ ಮನಃಕಾಲುಷ್ಯ ಉಂಟಾಗುವುದಕ್ಕೆ ಕಾರಣವನ್ನು ಹೇಳುವೆನು ಕೇಳು. ನಿನ್ನೆ ರಾತ್ರಿಯಲ್ಲಿ ನನ್ನ ತಂದೆಯು ತಲೆಯನ್ನು ಕೆದರಿಕೊಂಡು ಮಲಿನದೇಹದಿಂದ ಕೂಡಿ ಪರ್ವತ ಶಿಖರ ದಿಂದ ಗಂಜಲದ ಮಡುವಿನಲ್ಲಿ ಉರುಳಿಬೀಳುವ ಹಾಗೆ ಸ್ವಪ್ನವನ್ನು ಕಂಡೆನು, ಮತ್ತು ಆತನು ಆ ಮಡುವಿನಲ್ಲಿಯೇ ಬಹಳ ಹೊತ್ತಿನವರೆಗೆ ತೇಲಾಡುತಿದ್ದ ಹಾಗೂ, ಆತನು ಬೊಗಸೆಯಲ್ಲಿ ಎಣ್ಣೆಯನ್ನು ತುಂಬಿಕೊಂಡು ಕುಡಿಯುವ ಹಾಗೂ, ಆಗಾಗ ವಿಕಾರವಾಗಿ ನಗುತ್ತ ಎಳ್ಳನ್ನವನ್ನು ತಿಂದು, ತಲೆಯನ್ನು ತಗ್ಗಿಸಿ, ಮೈಗೆಲ್ಲಾ ಎಣ್ಣೆಯನ್ನು ಸವರಿಕೊಂಡಿರುವ ಹಾಗೂ, ಆಗಾಗ ಆ ಎಣ್ಣೆಯಲ್ಲಿಯೇ ಆತನು ಮುಳುಗಿ ಏಳುತ್ತಿದ್ದಹಾಗೂ ಕಂಡೆನು. ಮತ್ತು ನಾನು ಆ ಸ್ವಪ್ನದಲ್ಲಿ ಸಮುದ್ರವು ಒಣಗಿಹೋದಹಾಗೂ ಚಂದ್ರನು ನೆಲದಮೇಲೆ ಬಿದ್ದಿದ್ದಹಾಗೂ, ಪ್ರಪಂಚವೆಲ್ಲವೂ ಅಂಧಕಾರದಿಂದ ಮುಚ್ಚಿ ಯಾವುದೊಂದೂ ಕಣ್ಣಿಗೆ ಬೀಳದಹಾಗೂ ಕಂಡೆನು. ನಮ್ಮ ಮಹಾರಾಜನ ಪಟ್ಟದಾನೆಯ ಕೊಂಬುಗಳೆರಡೂ ಪುಡಿಪುಡಿಯಾಗಿ ಉದುರಿಬೀಳುತಿದ್ದುವು. ಉರಿಯುತಿದ್ದ ಬೆಂಕಿಯು ಇದ್ದಕಿದ್ದಹಾಗೆ ನಂದಿಹೋಯಿತು. ಭೂಮಿಯು ಕೆಳಕೆಳಗೆ ಇಳಿದು ಹೋಗುವಂತೆಯೂ, ಮರಗಳೆಲ್ಲವೂ ಒಣಗಿಹೋದಂತೆಯೂ, ಬೆಟ್ಟಗಳೆಲ್ಲವೂ ಉರಿದು ಭಸ್ಮವಾಗಿ ಹೊಗೆಯಾಡುತ್ತಿರುವಂತೆಯೂ ತೋರಿತು. ರಾಜನಾದ ನನ್ನ ತಂದೆಯು ಕರೀಬಟ್ಟೆಯನ್ನುಟ್ಟು, ಕಬ್ಬಿಣದ ಪೀಠದಲ್ಲಿ ಕುಳಿತಿರುವುದನ್ನು ನೋಡಿ, ಕಪ್ಪು ಮತ್ತು ಹಳದಿಯ ಮೈಬಣ್ಣವುಳ್ಳ ಕೆಲವು ಸ್ತ್ರೀಯರು ಅಟ್ಟಹಾಸದಿಂದ ಹಾಸ್ಯಮಾಡಿ ನಗುತಿದ್ದರು. ಧರ್ಮಾತ್ಮನಾದ ನನ್ನ ತಂದೆಯು ರಕ್ತವರ್ಣವುಳ್ಳ ಪುಷ್ಪಮಾಲಿಕೆಯನ್ನೂ, ಕೆಂಪುಗಂಧವನ್ನೂ ಧರಿಸಿ, ಕತ್ತೆಯಿಂದ

ಕಟ್ಟಲ್ಪಟ್ಟ ರಥವನ್ನೇರಿ ದಕ್ಷಿಣಾಭಿಮುಖವಾಗಿ ಓಡಿಕೊಂಡು ಹೋಗುತ್ತಿದ್ದನು. ಕೆಂಪುಬಟ್ಟೆಯನ್ನುಟ್ಟ ವಿಕೃತಾಕಾರವುಳ್ಳ ರಾಕ್ಷಸ ಸ್ತ್ರೀಯೊಬ್ಬಳು ರಾಜನನ್ನು ನೋಡಿ ನಗುತ್ತ ಆತನನ್ನು ಕೈಹಿಡಿದೆಳೆಯುತ್ತಿದ್ದಳು. ಇಂತಹ ಭಯಂಕರವಾದ ದುಸ್ಸ್ವಪ್ನಗಳನ್ನು ನಾನು ನಿನ್ನೆಯ ರಾತ್ರಿಯಲ್ಲಿ ಕಂಡೆನು. ಮಹಾಘೋರ ವಾದ ಈ ದುಸ್ಸ್ವಪ್ನದ ಸ್ಥಿತಿಯನ್ನು ನೋಡಿದರೆ, ನನಗೋ, ರಾಮನಿಗೋ, ರಾಜನಾದ ದಶರಥನಿಗೋ ಅಥವಾ ಲಕ್ಷ್ಮಣನಿಗೋ ಮರಣವುಂಟಾಗುವುದರಲ್ಲಿ ಸಂದೇಹವಿಲ್ಲ. ಸ್ವಪ್ನದಲ್ಲಿ ಯಾವ ಮನುಷ್ಯನು ಕತ್ತೆಯಿಂದೆಳೆಯಲ್ಪಡುವ ರಥದಲ್ಲಿ ಕುಳಿತು ಹೋಗುವಹಾಗೆ ಕಾಣುವೆವೋ ಆತನ ಹೊಗೆಯು ಸ್ವಲ್ಪ ಕಾಲದೊಳಗಾಗಿಯೇ ಚಿತೆಯಲ್ಲಿ ಹೊರಡುವುದನ್ನೂ ಕಾಣುವೆವು. ಇದಕ್ಕಾ ಗಿಯೇ ನಾನು ಈಗ ಬಹಳ ಚಿಂತಾಕ್ರಾಂತನಾಗಿರುವೆನು. ನಿಮ್ಮ ಉಪಚಾರ ಗಳೊಂದೂ ನನಗೆ ಆಪ್ಯಾಯಕಗಳಾಗಿಲ್ಲವು. ದುಃಖದಿಂದ ನನ್ನ ಗಂಟಲೊಣಗಿ ಹೋಗುವಂತಿರುವುದು. ಮನಸ್ಸಿನಲ್ಲಿ ಸ್ವಲ್ಪವಾದರೂ ಉಲ್ಲಾಸವಿಲ್ಲ. ನಿಜವಾಗಿ ಭಯಕ್ಕೆ ಕಂಠದಿಂದ ಸ್ವರವೇ ಹೊರಡುವುದಿಲ್ಲ. ದೇಹಕಾಂತಿಯೂ ಕಂದಿ ಹೋಯಿತು. ನನ್ನ ಅವಸ್ಥೆಯೇ ನನಗೆ ಅಸಹ್ಯಕರವಾಗಿರುವಂತೆ ತೋರಿರು ವುದು. ಇದರ ಕಾರಣವೇನೆಂದು ನನಗೇ ತಿಳಿಯಲಿಲ್ಲ. ಹೀಗೆ ಆಕಸ್ಮಿಕವಾಗಿ ಕಂಡುಬಂದ ಬಗೆಬಗೆಯಾದ ದುಸ್ಸ್ವಪ್ನಗಳನ್ನು ನೋಡಿದುದು ಮೊದಲು, ನನ್ನ ಮನಸ್ಸಿನಲ್ಲಿ ಅಪಾರವಾದ ಭಯವು ನಾಟಿಹೋಗಿರುವುದು. ಯಾವ ಯಾವ ಉಪಾಯಗಳಿಂದಲೂ ಅದು ತಗ್ಗುವಹಾಗಿಲ್ಲ. ರಾಜನಾದ ನಮ್ಮ ತಂದೆಯ ಸ್ಥಿತಿಯನ್ನು ನೆನೆಸಿಕೊಂಡ ಹಾಗೆಲ್ಲಾ ನನ್ನ ಮನಸ್ಸಿನ ಭೀತಿಯು ಬೇರೂರಿದಂತೆ ಬಿಟ್ಟುಹೋಗದಿರುವುದು" ಎಂದನು.

ಇದು ಅರುವತ್ತೊಂಬತ್ತನೆಯ ಸರ್ಗವು.

ಭರತನು ಅಯೋಧ್ಯೆಗೆ ಪ್ರಯಾಣಮಾಡಿ ಬಂದುದು.

ಅತ್ತಲಾಗಿ ಭರತನು ಹೀಗೆ ತನ್ನ ದುಸ್ಸ್ವಪ್ನ ವೃತ್ತಾಂತಗಳನ್ನು ಹೇಳಿ ಮುಗಿಸುತ್ತಿರುವಾಗಲೇ, ಬಳಲಿದ ಕುದುರೆಗಳುಳ್ಳ ದೂತರು ರಾಜದ್ವಾರಕ್ಕೆ ಬಂದಿಳಿದರು. ಶತ್ರುಗಳಿಂದ ದಾಟುವುದಕ್ಕಸಾಧ್ಯವಾದ ಅಗಳುಳ್ಳ, ಅತಿ

ರಮ್ಯವಾದ ಆ ರಾಜಗೃಹಪುರಿಯನ್ನು ಅವರು ಬಂದು ಮುಟ್ಟಿದೊಡನೆಯೇ, ಕೇಕಯರಾಜನೂ ಆತನ ಪುತ್ರನೂ ಬಂದು ಅವರನ್ನು ಮನ್ನಿಸಿ ಕರೆದುಕೊಂಡು ಹೋದರು. ಅವರು ರಾಜನ ಮನ್ನಣೆಯನ್ನು ಪ್ರೀತಿಯಿಂದ ಸ್ವೀಕರಿಸಿ, ಪಾದಗಳಿಗೆ ವಿನಯದಿಂದ ನಮಸ್ಕರಿಸಿ, ಭರತನಿದ್ದಕಡೆಗೆ ಬಂದು ಆತನನ್ನು ಕುರಿತು, "ರಾಜಪುತ್ರನೆ! ಕುಲಪುರೋಹಿತನಾದ ವಸಿಷ್ಠನೂ ಇತರ ಮಂತ್ರಿಗಳೂ ನಿನ್ನ ಕ್ಷೇಮಲಾಭಗಳನ್ನು ವಿಚಾರಿಸಿರುವರು. ನೀನು ಶೀಘ್ರದಲ್ಲಿಯೇ ಅಯೋಧ್ಯೆಗೆ ಹೊರಡಬೇಕು. ನಿನ್ನಿಂದ ನಡೆಯಬೇಕಾದ ಅವಶ್ಯಕಾರ್ಯವೊಂದುಂಟು. ಕಾಲವು ಮಿಂಚಿಹೋಗುತ್ತಿರುವುದು. ಇದೋ! ಕೇಕಯರಾಜನಿಗೆ ಕಾಣಿಕೆಯಾಗಿ ಬೆಲೆಯುಳ್ಳ ವಸ್ತ್ರಾಭರಣಗಳನ್ನು ತಂದಿರುವೆವು. ಇವುಗಳನ್ನು ನಿನ್ನ ಅಜ್ಜನಾದ ಕೇಕಯರಾಜನಿಗೂ ಸಲ್ಲಿಸು! ಎಲೈ ರಾಜಕುಮಾರನೆ! ನಿನ್ನ ಅಜ್ಜನಾದ ಕೇಕಯರಾಜನಿಗಾಗಿ ತಂದಿರತಕ್ಕ ವಸ್ತ್ರಭೂಷಣಾದಿಗಳನ್ನು ನೋಡು. ಇವು ಇಪ್ಪತ್ತುಕೋಟಿ ದ್ರವ್ಯಗಳ ಬೆಲೆಯುಳ್ಳವುಗಳಾಗಿರುವುವು" ಎಂದರು. ಭರತನು ಅವರಲ್ಲಿ ಮಿತ್ರವಾತ್ಸಲ್ಯವನ್ನು ತೋರಿಸುತ್ತ, ಅವೆಲ್ಲವನ್ನೂ ಪ್ರೀತಿಯಿಂದ ಸ್ವೀಕರಿಸಿ, ಅಜ್ಜನಾದ ಕೇಕಯರಾಜನಿಗೂ, ಮಾವನಾದ ಯುಧಾಜಿತ್ತಿಗೂ ಸಲ್ಲಿಸಿ, ದೂತರಿಗೆ ಬೇಕಾದ ಪದಾರ್ಥಗಳನ್ನು ಕೊಡಿಸಿ ಅವರನ್ನುಪಚರಿಸಿ "ಎಲೈ ದೂತರೆ! ನಮ್ಮ ತಂದೆಯಾದ ದಶರಥರಾಜನು ಕ್ಷೇಮದಿಂದಿರುವನೆ? ರಾಮನು ಕ್ಷೇಮದಿಂದಿರುವನೆ? ಮಹಾತ್ಮನಾದ ಲಕ್ಷ್ಮಣನು ಸೌಖ್ಯದಿಂದಿರುವನೆ? ಪೂಜ್ಯಳಾಗಿ, ಧರ್ಮಪರಾಯಣೆಯಾಗಿ ಸಮಸ್ತ ಧರ್ಮಗಳನ್ನೂ ಬಲ್ಲವಳಾಗಿ, ಗುಣಗ್ರಾಹಿಣಿಯಾದ ಕೌಸಲ್ಯೆಯು ಆರೋಗ್ಯದಿಂದಿರುವಳೆ? ವೀರರಾದ ಲಕ್ಷ್ಮಣಶತ್ರುಘ್ನರಿಂದ ವೀರಮಾತೆಯೆನಿಸಿ ಧರ್ಮಜ್ಞಳಾಗಿರುವ ಸುಮಿತ್ರೆಯು ಆರೋಗ್ಯದಿಂದಿರುವಳೆ? [1] ಸ್ವಪ್ರಯೋಜನಪರಳಾಗಿ, ಯಾವಾಗಲೂ ಚಂಡಿಹಿಡಿಯುವ ಕೋಪಸ್ವಭಾವವುಳ್ಳವಳಾಗಿ, ತಾನೇ ಪ್ರಾಜ್ಞಳೆಂಬ ಗರ್ವದಿಂದುಬ್ಬಿದ ನನ್ನ

---

[1] ಭರತನು ಮೊದಲೇ ಕೈಕೇಯಿಯನ್ನು ಹೀಗೆ ನಿಂದಿಸುವುದನ್ನು ನೋಡಿದರೆ, ತನಗುಂಟಾದ ದುಸ್ಸ್ವಪ್ನಗಳನ್ನೂ, ಆಕಸ್ಮಿಕವಾದ ದೂತಾಗಮನವನ್ನೂ ಭಾವಿಸಿ ಆ ಕೈಕೇಯಿಯಿಂದ ಅಯೋಧ್ಯೆಯಲ್ಲಿ ಏನೋ ಅನರ್ಥಗಳುಂಟಾಗಿರಬಹುದೆಂದು ತಾನೇ ಊಹಿಸಿಕೊಂಡಿರುವುದಾಗಿ ತಿಳಿಯಬೇಕು.

ತಾಯಿಯಾದ ಕೈಕೇಯಿಯು ಕ್ಷೇಮದಿಂದಿರುವಳೆ! ಅವಳು ಇಲ್ಲಿಗೆ ನಿಮ್ಮ ಮೂಲಕವಾಗಿ ಏನಾದರೂ ಹೇಳಿಕಳುಹಿಸಿರುವಳೆ?" ಎಂದನು. ಅದಕ್ಕಾ ದೂತರು ವಿನಯದಿಂದ ಭರತನನ್ನು ನೋಡಿ "ಎಲೈ ರಾಜಪುತ್ರನೆ! ನೀನು ಯಾರ ಯಾರ ಕ್ಷೇಮವನ್ನು ಕೋರುವೆಯೋ ಅವರೆಲ್ಲರೂ ಕುಶಲದಿಂದಿರುವರು. [1] ಪದ್ಮಹಸ್ತೆಯಾದ ಲಕ್ಷ್ಮಿಯು ನಿನ್ನನ್ನು ವರಿಸಲಿ! ರಥವನ್ನು ಸಿದ್ಧಪಡಿಸು? ಹೊರಡಬೇಕು?" ಎಂದರು. ಆಗ ಭರತನು ಆ ದೂತರನ್ನು ಕುರಿತು "ನಾನು ಈಗಲೇ ನೀವು ಬಂದು ತ್ವರೆಪಡಿಸುವುದಾಗಿ ಕೇಕಯರಾಜನಿಗೆ ತಿಳಿಸಿ, ಅವನ ಅನುಮತಿಯನ್ನು ಪಡೆದು ಬರುವೆನು" ಎಂದು ಹೇಳಿ, ಕೇಕಯರಾಜನ ಬಳಿಗೆ ಬಂದನು. ಆತನನ್ನು ನೋಡಿ "ಎಲೆ ತಾತನೆ! ನನ್ನ ತಂದೆಯ ಕಡೆಯಿಂದ ದೂತರು ಬಂದು ನನ್ನನ್ನು ಕರೆಯುತ್ತಿರುವರು. ನಾನು ಹೋಗಿಬರುವೆನು. ಪುನಃ ನೀವು ಯಾವಾಗ ನನ್ನನ್ನು ಬರಬೇಕೆಂದು ಅಪೇಕ್ಷಿಸುವಿರೋ ಆಗ ನಾನು ಇತ್ತಲಾಗಿ ಹೊರಟುಬರುವೆನು. ನೀವು ನನ್ನನ್ನು ಮನಸ್ಸಿನಲ್ಲಿ ಸ್ಮರಿಸಿದ ಮಾತ್ರಕ್ಕೇ ಆಗ ನಾನು ಇಲ್ಲಿ ಸಿದ್ಧನಾಗಿರುವೆನು" ಎಂದನು. ಆಗ ಕೈಕಯ ರಾಜನು ಭರತನ ಮಾತುಗಳನ್ನು ಲಾಲಿಸಿ, ಪುತ್ರವಾತ್ಸಲ್ಯದಿಂದ ಆತನ ತಲೆ ಯನ್ನಾಘ್ರಾಣಿಸಿ, ಪ್ರೀತಿಯುಕ್ತವಾದ ಮಾತುಗಳಿಂದ "ಎಲೈ ಪ್ರಿಯವತ್ಸನೆ! ನೀನು ಹೋಗಿ ಬಾ! ನಿನ್ನಿಂದ ನಮ್ಮ ಕೈಕೇಯಿಯು ಸುಪುತ್ರವತಿಯೆಂಬ ಖ್ಯಾತಿಯನ್ನು ಪಡೆದಳಲ್ಲವೆ? ನಿನ್ನ ತಾಯಿಗೂ ನಿನ್ನ ತಂದೆಗೂ ನಮ್ಮ ಕ್ಷೇಮ ವನ್ನು ತಿಳಿಸು. ಪುರೋಹಿತನಾದ ವಸಿಷ್ಠನಿಗೂ ಇನ್ನೂ ಇತರ ಬ್ರಾಹ್ಮಣೋತ್ತ ಮರಿಗೂ ನಮ್ಮ ಕ್ಷೇಮವನ್ನು ತಿಳಿಸು. ಮಹಾಧನುರ್ಧಾರಿಗಳಾಗಿರುವ ರಾಮ ಲಕ್ಷ್ಮಣರೆಂಬ ಆ ಅಣ್ಣ ತಮ್ಮಂದಿರಿಬ್ಬರಿಗೂ ನಾವು ಕ್ಷೇಮವನ್ನು ವಿಚಾರಿಸಿದು ದಾಗಿ ಹೇಳು" ಎಂದನು. ಹೀಗೆ ಹೇಳಿ ಕೇಕಯರಾಜನು ಆ ಭರತನಿಗೆ ಸತ್ಕಾರ ಪೂರ್ವಕವಾಗಿ ಅನೇಕವಾದ ಉತ್ತಮ ಗಜಗಳನ್ನೂ, ಚಿತ್ರಕಂಬಳಗಳನ್ನೂ, ವಿಚಿತ್ರವಾದ ಅಜಿನಗಳನ್ನೂ ವಿಶೇಷಧನರಾಶಿಯನ್ನೂ ಕೊಟ್ಟನು ಮತ್ತು ಆತನನ್ನು ಅನೇಕ ವಿಧದಲ್ಲಿ ಸತ್ಕರಿಸಿ, ಆತನಿಗೆ ಕಂಠಾಭರಣಯೋಗ್ಯವಾದ

1 ಇದರಲ್ಲಿ "ರಾಜ್ಯಲಕ್ಷ್ಮಿಯು ನಿನ್ನನ್ನು ಹೊಂದುವ"ಳೆಂದು ದೂತರ ಅಭಿಪ್ರಾಯವು. ತನ್ನ ಶ್ರೇಯಃಪ್ರಾರ್ಥನಾರೂಪವಾಗಿ ಆ ದೂತರು ಈ ಮಾತನ್ನು ಹೇಳಿದುದಾಗಿ ಭರತನ ಭಾವವು.

ಎರಡು ಸಾವಿರ ಸಂಖ್ಯೆಯುಳ್ಳ ಚಿನ್ನದ ವರಹಗಳನ್ನೂ, ಒಂದು ಸಾವಿರದ ಆರುನೂರು ಕುದುರೆಗಳನ್ನೂ ಕೊಟ್ಟನು. ಮತ್ತು ತಮ್ಮ ಪ್ರಭುವಿಗಾಗಿ ತಮ್ಮ ಪ್ರಾಣವನ್ನೇ ಬಿಡುವಷ್ಟು ಸ್ವಾಮಿಭಕ್ತಿಯುಳ್ಳ ಅನೇಕ ಪರಿಜನರನ್ನೂ, ಆತನ ಸಂಗಡ ಕಳುಹಿಸಿಕೊಟ್ಟನು. ಅವರೆಲ್ಲರೂ ಬಹಳ ಗುಣಾಢ್ಯರಾಗಿಯೂ ನಂಬಿಕೆಯುಳ್ಳವರಾಗಿಯೂ ಇದ್ದರು. ಆತನ ಮಾವನಾದ ಯುಧಾಜಿತ್ತು ಕೂಡ, ಭರತನಿಗೆ ಇರಾವಂತ ಮತ್ತು ಇಂದ್ರಶಿರವೆಂಬ ಪರ್ವತಗಳಲ್ಲಿ ಹುಟ್ಟಿ ದುವುಗಳಾಗಿಯೂ, ಅಂದವಾದ ಆಕಾರವುಳ್ಳವುಗಳಾಗಿಯೂ ಇರುವ ಅನೇಕ ಗಜಸೈನ್ಯವನ್ನು ಕೊಟ್ಟನು. ಮತ್ತು ಬಹು ವೇಗಶಾಲಿಗಳಾಗಿಯೂ ಕಾರ್ಯ ಸಮರ್ಥಿಗಳಾಗಿಯೂ ಇರುವ ಖರಸಮೂಹಗಳನ್ನೂ ಇನ್ನೂ ಅನೇಕ ಧನರಾಶಿ ಯನ್ನೂ ಕೊಟ್ಟನು. ಮತ್ತು ಅಂತಃಪುರದಲ್ಲಿ ಬಹುಕಾಲದಿಂದ ಪೋಷಿಸಲ್ಪಟ್ಟು, ಹುಲಿಗಳಂತೆ ಮಹಾವೀರ್ಯವುಳ್ಳವುಗಳಾಗಿ, ಶಸ್ತ್ರದಂತಿರುವ ಕೋರೆಹಲ್ಲು ಗಳಿಂದ ಕೂಡಿದ ದೊಡ್ಡ ದೊಡ್ಡ ನಾಯಿಗಳನ್ನೂ ಉಡುಗೊರೆಯಾಗಿ ಕೊಟ್ಟನು. ಹೀಗೆ ಅಜ್ಜನಾದ ಕೇಕಯರಾಜನೂ, ಮಾವನಾದ ಯುಧಾಜಿತ್ತೂ ತನಗಾಗಿ ತಂದುಕೊಟ್ಟ ಈ ವಸ್ತುಸಮೂಹಗಳೆಲ್ಲವನ್ನೂ ನೋಡಿ, ಭರತನು ಪ್ರಯಾಣದ ಆತುರದಿಂದ ಅವೊಂದನ್ನೂ ಅಕ್ಕರೆಯಿಂದ ಆದರಿಸಿ ಸಂತೋಷಿಸಲಿಲ್ಲ. ಹಿಂದಿನ ರಾತ್ರಿಯಲ್ಲಿ ತಾನು ಘೋರವಾದ ದುಸ್ಸ್ವಪ್ನಗಳನ್ನು ಕಂಡುದೂ, ಈಗ ದೂತರು ಬಂದು ತ್ವರೆಪಡಿಸಿದುದೂ, ಆತನಿಗೆ ಮನಸ್ಸಿನಲ್ಲಿ ಒಂದು ದೊಡ್ಡ ಶಂಕೆಯನ್ನುಂಟುಮಾಡಿತ್ತು. ಹೀಗೆ ಚಿಂತೆಯಿಂದ ತನ್ನ ಅರಮನೆಯನ್ನು ಬಿಟ್ಟು ಹೊರಟು, ಗಜತುರಗಪದಾತಿಗಳಿಂದ ತುಂಬಿದ ದೊಡ್ಡ ರಾಜಬೀದಿಗೆ ಬಂದನು. ಅಲ್ಲಿಂದ [1] ಆ ದಾರಿಯನ್ನು ಹಿಡಿದು ಅಂತಃಪುರಕ್ಕೆ ಬಂದು ಒಳಗೆ ಪ್ರವೇಶಿಸಿದನು. ಅಲ್ಲಿಯೂ ಶತ್ರುಘ್ನನೊಡಗೂಡಿ ಕೇಕಯರಾಜನಿಗೂ ಯುಧಾಜಿತ್ತಿಗೂ ನಮಸ್ಕರಿಸಿ, ಅವರ ಅನುಮತಿಯನ್ನು ಪಡೆದು ರಥವನ್ನೇರಿ ಪ್ರಯಾಣಮಾಡಿದನು. ಹೀಗೆ ಭರತನು ಪ್ರಯಾಣಮಾಡುತ್ತಿರುವಾಗ,

---

[1] ಇದರಿಂದ ಭರತನಿಗುಂಟಾದ ದುಸ್ಸ್ವಪ್ನಗಳನ್ನೂ, ದೂತಾಗಮನವನ್ನೂ ಕೇಳಿ ಕೇಕಯನೂ, ಯುಧಾಜಿತ್ತೂ, ಭರತನ ಮನೆಗೆ ತಾವೇ ಬಂದು ಕಾಣಿಕೆಗಳನ್ನು ಕೊಟ್ಟ ರೆಂದೂ ಆಮೇಲೆ ಭರತನು ಅವರೆಲ್ಲರೊಡನೆಯೂ ತನ್ನ ಮನೆಯನ್ನು ಬಿಟ್ಟುಹೊರಟು, ಮಾತಾಮಹಿ ಮೊದಲಾದವರನ್ನು ನೋಡುವುದಕ್ಕಾಗಿ ಬಂದನೆಂದೂ ಗ್ರಹಿಸಬೇಕು.

ಅಂದವಾದ ಚಕ್ರಗಳುಳ್ಳ ಅನೇಕ ರಥಗಳು, ಒಂಟೆಗಳು, ಎತ್ತುಗಳು, ಕುದುರೆಗಳು, ಹೇಸರಗತ್ತೆಗಳು, ಮೊದಲಾದುವುಗಳನ್ನು ಸಾಗಿಸಿಕೊಂಡು, ಪರಿಜನರೆಲ್ಲರೂ ಆತನನ್ನು ಹಿಂಬಾಲಿಸಿ ಬರುತ್ತಿದ್ದರು. ಹೀಗೆ ಭರತನು ಕೇಕಯರಾಜನ ಸೈನ್ಯದಿಂದ ರಕ್ಷಿಸಲ್ಪಟ್ಟವನಾಗಿ, ಶತ್ರುಘ್ನನೊಡಗೂಡಿ ತನಗೆ ಸಮಾನವಾದ ಇತರ ಮಂತ್ರಿಗಳನ್ನೂ ಸಂಗಡ ಕರೆದುಕೊಂಡು, ಇಂದ್ರಲೋಕವನ್ನು ಬಿಟ್ಟು ಹೊರಟ ಸಿದ್ಧನಂತೆ ಬರುತಿದ್ದನು.

ಇದು ಎಪ್ಪತ್ತನೆಯ ಸರ್ಗವು.

ಭರತನು ಅಯೋಧ್ಯೆಯಲ್ಲಿ ತಂದೆಯ ಮನೆಗೆ ಪ್ರವೇಶಿಸಿದುದು

ಹೀಗೆ ರಘುವಂಶವರ್ಧನನಾಗಿಯೂ, ಶ್ರೀಮಂತನಾಗಿಯೂ ಇರುವ ಭರತನು, ಆ ರಾಜಗೃಹವೆಂಬ ಪಟ್ಟಣದ ಪೂರ್ವದಿಕ್ಕಿನ ಬಾಗಿಲಿನಿಂದ ಹೊರಟು ಬರುತ್ತ, ಸುದಾಮಾನದಿಯನ್ನು ನೋಡಿ ಸಂತೋಷದಿಂದ ಆ ಪುಣ್ಯನದಿಗೆ ನಮಸ್ಕರಿಸಿ, ಅದನ್ನು ದಾಟಿ, ಅಲ್ಲಿಂದ ಮುಂದೆ ಹೊರಟು ವಿಸ್ತಾರವಾದ ಹ್ಲಾದಿನಿಯೆಂಬ ನದಿಯ ಬಳಿಗೆ ಬಂದನು. ಆ ನದಿಯನ್ನು ಏಲಾಧಾನವೆಂಬ ಗ್ರಾಮದ ಸಮೀಪದಲ್ಲಿ ದಾಟಿ, ಮುಂದಿದ್ದ ಅಪರಪರ್ಪಟವೆಂಬ ಗ್ರಾಮದಲ್ಲಿ ಸ್ವಲ್ಪ ಹೊತ್ತಿನವರೆಗೆ ಮಾರ್ಗಾಯಾಸವನ್ನು ಕಳೆದು, ತನ್ನ ಪ್ರವಾಹವೇಗದಿಂದ ಕಲ್ಲುಗಳನ್ನೂ ಎಳೆದುಕೊಂಡು ಹೋಗುವ ಸ್ವಭಾವವುಳ್ಳ ಶಿಲಾವಹೆಯೆಂಬ ನದಿಯನ್ನು ದಾಟಿ, ಅದರ ಆಗ್ನೇಯದಿಕ್ಕಿನಲ್ಲಿರುವ ಶಲ್ಯಕರ್ತನವೆಂಬ ಗ್ರಾಮವನ್ನು ಸೇರಿದನು. ಸತ್ಯಸಂಧನಾಗಿಯೂ ಶುದ್ಧಾತ್ಮನಾಗಿಯೂ ಶ್ರೀಮಂತನಾಗಿಯೂ ಇರುವ ಭರತನು ಆ ನದಿಯನ್ನೂ, ಗ್ರಾಮವನ್ನೂ ನೋಡುತ್ತ, ಆ ಗ್ರಾಮವಾಸಿಗಳಿಗೆ ಸಂಭವಿಸುತ್ತಿದ್ದ ಕೆಲವು ಈತಿಬಾಧೆಗಳನ್ನು ತಪ್ಪಿಸಿ ಮುಂದೆ ಹೊರಟು, ದೊಡ್ಡ ದೊಡ್ಡ ಅನೇಕ ಪರ್ವತಗಳನ್ನು ದಾಟಿ, ಚೈತ್ರರಥವೆಂಬ ವನವನ್ನು ನೋಡಬೇಕೆಂಬ ಕುತೂಹಲದಿಂದ ಅಲ್ಲಿಗೆ ಬಂದನು. ಅಲ್ಲಿಂದ ಮುಂದೆ ಸರಸ್ವತೀನದಿಯನ್ನೂ, ಗಂಗೆಯೆಂಬ ಹೆಸರುಳ್ಳ ಪಶ್ಚಿಮ ಸಮುದ್ರಗಾಮಿನಿಯಾದ ಮತ್ತೊಂದು ನದಿಯನ್ನೂ ನೋಡಿ, ಅವೆರಡರ ಸಂಗಮ

*

ಸ್ಥಳವನ್ನು ಸೇರಿ, ಅಲ್ಲಿಂದ ಮುಂದೆ ಹೊರಟು, ವೀರಮತ್ಸ್ಯದೇಶದ ಉತ್ತರ ದಿಕ್ಕಿನಲ್ಲಿರುವ ಭಾರುಂಡವೆಂಬ ವನವನ್ನು ಪ್ರವೇಶಿಸಿದನು. ಅಲ್ಲಿಂದ ಮುಂದೆ ಬಂದಾಗ ಅಲ್ಲಿ ಬಹುವೇಗದಿಂದ ಪ್ರವಹಿಸುತ್ತ, ಅನೇಕ ಪರ್ವತಗಳಿಂದ ಸುತ್ತಲ್ಪಟ್ಟು ನೇತ್ರಾನಂದಕರವಾದ ಕುಳಿಂಗಾನದಿಯನ್ನು ನೋಡಿ, ಆ ಸ್ಥಳದಲ್ಲಿಯೇ ಅದನ್ನು ದಾಟುವುದು ಅಸಾಧ್ಯವೆಂದು ತೋರಿಬಂದುದರಿಂದ, ಆ ನದಿಯು ಯಮುನೆಯೊಡನೆ ಸೇರತಕ್ಕ ಸಂಗಮ ಸ್ಥಳದಲ್ಲಿ ಅದನ್ನು ದಾಟಿ, ಬಿಸಿಲಿನ ತಾಪಕ್ಕಾಗಿ ಬಹಳ ಬಳಲಿದ ತನ್ನ ಸೈನ್ಯಕ್ಕೆ ತೀರಪ್ರದೇಶದಲ್ಲಿ ಸ್ವಲ್ಪ ವಿಶ್ರಾಂತಿಯನ್ನು ಕೊಟ್ಟನು. ಆ ಸಂಗಮಸ್ಥಳದಲ್ಲಿ, ಆನೆ, ಕುದುರೆ ಮೊದಲಾದ ಮೃಗಗಳನ್ನೆಲ್ಲಾ ನೀರಿಗೆ ಬಿಟ್ಟು, ಕುದುರೆಗಳ ಬಳಲಿಕೆಯನ್ನಾರಿಸಿ, ತಾನೂ ಸ್ನಾನಮಾಡಿ ನೀರನ್ನು ಕುಡಿದು, ಮುಂದೆ ಬಹುದೂರದವರೆಗೆ ನೀರು ಸಿಕ್ಕುವುದು ಕಷ್ಟವೆಂದು ತೋರಿದುದರಿಂದ ಅಲ್ಲಿಂದಲೇ ಸ್ವಲ್ಪ ನೀರನ್ನು ಸಂಗ್ರಹಿಸಿಟ್ಟುಕೊಂಡು ಹೊರಟನು. ಶುಭಾಚಾರವುಳ್ಳ ಆ ರಾಜಪುತ್ರನು ಭದ್ರಲಕ್ಷಣವುಳ್ಳ ಆನೆಯನ್ನೇರಿ, ವಾಯುವು ವಿಸ್ತಾರವಾದ ಆಕಾಶವನ್ನು ದಾಟುವ ಹಾಗೆ ವಿಶೇಷ ಜನಸಂಚಾರವಿಲ್ಲದ ಆ ಮಹಾರಣ್ಯವನ್ನು ವೇಗದಿಂದ ಬಹು ಸುಲಭವಾಗಿ ದಾಟಿದನು. ಮುಂದೆ ಆತನು ಅಂಶುಧಾನವೆಂಬ ಪಟ್ಟಣದ ಸಮೀಪಕ್ಕೆ ಹೋದನು. ಅಲ್ಲಿ ಮಹಾನದಿಯಾದ ಗಂಗೆಯನ್ನು ದಾಟುವುದು ಅಸಾಧ್ಯವೆಂದು ತೋರಿಬಂದುದರಿಂದ, ಈ ಗಂಗಾತರಣಕ್ಕೆ ಅನುಕೂಲವೆಂದು ಪ್ರಸಿದ್ಧವಾದ ಪ್ರಾಗ್ವಟವೆಂಬ ಪಟ್ಟಣಕ್ಕೆ ಬಂದು, ಅಲ್ಲಿ ಗಂಗೆಯನ್ನು ದಾಟಿ ಮುಂದೆ ಹೊರಟು, ಕುಟಿಕೋಷ್ಠಿಕೆಯೆಂಬ ನದಿಯ ಬಳಿಗೆ ಬಂದನು. ಸಮಸ್ತ ಸೈನ್ಯಗಳೊಡನೆ ಆ ನದಿಯನ್ನೂ ದಾಟಿ, ಧರ್ಮವರ್ಧನವೆಂಬ ಗ್ರಾಮಕ್ಕೆ ಬಂದು, ಅಲ್ಲಿಂದ ತೋರಣವೆಂಬ ಊರಿಗೆ ಹೋಗಿ, ಅದಕ್ಕೆ ದಕ್ಷಿಣದಲ್ಲಿರುವ ಜಂಬೂಪ್ರಸ್ಥವೆಂಬ ಗ್ರಾಮವನ್ನೂ, ಅಲ್ಲಿಂದ ಮುಂದೆ ವರೂಥವೆಂಬ ಗ್ರಾಮವನ್ನೂ ದಾಟಿಬಂದನು. ಮುಂದೆ ಅತಿ ಮನೋಹರವಾದ ಒಂದು ವನಪ್ರದೇಶದಲ್ಲಿ ಸ್ವಲ್ಪ ಹೊತ್ತಿನ ವರೆಗೆ ಇಳಿದಿದ್ದು ಅಲ್ಲಿಂದ ಪೂರ್ವಾಭಿಮುಖವಾಗಿ ಹೊರಟು, ಉಜ್ಜಿಹಾನವೆಂಬ ಪಟ್ಟಣದ ಉದ್ಯಾನವನವನ್ನು ಸೇರಿದನು. ಆ ವನದಲ್ಲಿ ಕಡವದ ಮರಗಳೇ ಹೆಚ್ಚಾಗಿ ತುಂಬಿರಲು, ಆ ಗಿಡಗಳನ್ನು ನೋಡುತ್ತ, ಸ್ವಲ್ಪ ಹೊತ್ತು ಸಂತೋಷದಿಂದಿದ್ದು, ವೇಗ

ವತ್ತಾದ ಕುದುರೆಗಳನ್ನು ರಥಕ್ಕೆ ಕಟ್ಟಿಕೊಂಡು ಮುಂದೆ ಹೊರಟನು. ಆ ಉಜ್ಜಿಹಾನಾಪುರಿಯನ್ನು ಕಳೆದಮೇಲೆ ಮುಂದಿರತಕ್ಕ ಪ್ರಾಂತಗಳೆಲ್ಲವೂ ತಮ್ಮ ದೇಶಕ್ಕೆ ಸೇರಿದವುಗಳಾಗಿದ್ದುದರಿಂದ, ಸೈನಿಕರಿಗೆ ನಿರ್ಭಯವಾಗಿ ಮೆಲ್ಲಗೆ ಬರ ಬಹುದೆಂದು ಹೇಳಿ ತಾನು ಮಾತ್ರ ರಥವನ್ನು ವೇಗವಾಗಿ ನಡೆಸಿಕೊಂಡು ಅತ್ಯಾತುರದಿಂದ ಹೊರಟನು. ಮುಂದೆ[1] ಸರ್ವತೀರ್ಥವೆಂಬ ಊರಿನಲ್ಲಿ ಒಂದು ರಾತ್ರಿಯಿದ್ದು, ಅಲ್ಲಿಂದ ಹೊರಟು ಉತ್ತಾನಿಕಾನದಿಯನ್ನೂ ಇನ್ನೂ ಕೆಲವು ನದಿಗಳನ್ನೂ ದಾಟಿಹೋದನು. ಪರ್ವತಪ್ರದೇಶಗಳಲ್ಲಿ ಹುಟ್ಟಿ ಕಾಡುಬೆಟ್ಟ ಗಳಲ್ಲಿ ನಡೆದು ಪರಿಚಯವುಳ್ಳ ಕುದುರೆಗಳಿಂದಲೇ ಆ ವನಪ್ರದೇಶಗಳನ್ನು ದಾಟಿ, ಮುಂದೆ[1] ಹಸ್ತಿಪೃಷ್ಠಕವೆಂಬ ಗ್ರಾಮದ ಬಳಿಗೆ ಬಂದು, ಅಡ್ಡಲಾಗಿದ್ದ ಕುಟಿಕಾನದಿಯನ್ನು ದಾಟಿ, ಅಲ್ಲಿಂದ ಮುಂದೆ ಲೋಹಿತ್ಯವೆಂಬ ಪಟ್ಟಣವನ್ನು ಸೇರಿ, ಅದರ ಪಕ್ಕದಲ್ಲಿ ಕಪೀರೆಯೆಂಬ ಮತ್ತೊಂದು ನದಿಯನ್ನು ದಾಟಿ ಹೋದನು. ಹಾಗೆಯೇ ಮುಂದೆ ಏಕಸಾಲವೆಂಬ ಗ್ರಾಮಕ್ಕೆ ಹೋಗಿ ಅಲ್ಲಿ ಸ್ಥಾಣುಮತೀನದಿಯನ್ನು ದರ್ಶನಮಾಡಿದನು. ಅಷ್ಟರೊಳಗಾಗಿ ಕುದುರೆಗಳು ಬಹಳ ಬಳಲಿರುವುದನ್ನು ನೋಡಿ, ಕಳಿಂಗನಗರದ ಸಮೀಪದಲ್ಲಿರುವ ಸಾಲ ವನದಲ್ಲಿ ಸ್ವಲ್ಪಕಾಲದವರೆಗೆ ದಣಿವಾರಿಸಿಕೊಂಡು, ಆಗಲೇ ಅಲ್ಲಿಂದ ಹೊರಟನು. ಆ ರಾತ್ರಿಯಲ್ಲಿಯೇ ಸಾಲವನವನ್ನು ಕಳೆದು ಅರುಣೋದಯ ಕಾಲಕ್ಕೆ ಸರಿಯಾಗಿ ಅಯೋಧ್ಯಾನಗರದ ಉಪ್ಪರಿಗೆಗಳು ಕಣ್ಣಿಗೆ ಕಾಣುವಷ್ಟು ದೂರದ ವರೆಗೆ ಬಂದುಬಿಟ್ಟನು. ಪುರುಷಶ್ರೇಷ್ಠನಾದ ಆ ಭರತನು ಮಾವನ ಮನೆ ಯನ್ನು ಬಿಟ್ಟು ಹೊರಟು ಏಳು ದಿವಸಗಳಾಗಿದ್ದುವು. ಎಡೆಬಿಡದೆ ಹೀಗೆ ಪ್ರಯಾಣ ಮಾಡಿ ಎಂಟನೆಯ ದಿವಸದಲ್ಲಿ ಮನುನಿರ್ಮಿತವಾದ ಅಯೋಧ್ಯಾನಗರವನ್ನು ಕಂಡು, ಸಾರಥಿಯನ್ನು ಕುರಿತು ಸಂತೋಷದಿಂದ "ಎಲೆ ಸೂತನೆ! ಅನೇಕ ಪುಣ್ಯೋದ್ಯಾನಗಳಿಂದ ಕೂಡಿ ಸಾರವುಳ್ಳ ಕ್ಷೇತ್ರಗಳಿಂದ ಅತಿಮನೋಹರವಾದ ಅಯೋಧ್ಯಾನಗರವು ಅದೋ ಅಲ್ಲಿ ಕಾಣುತ್ತಿರುವುದು ನೋಡು! ಈ ಪುರದಲ್ಲಿ ಅನೇಕ ಯಾಗಗಳನ್ನು ಮಾಡಿದವರೂ ಶಮದಮಾದಿಗುಣಗಳುಳ್ಳವರೂ, ವೇದ

---

1 ಇಲ್ಲಿ ಸರ್ವತೀರ್ಥವೆಂಬುದಕ್ಕೆ ಸರ್ಪತೀರ್ಥವೆಂದೂ ಪಾಠಾಂತರವುಂಟು. ಹಸ್ತಿ ಪೃಷ್ಠಕವೆಂದು ಒಂದು ಗ್ರಾಮದ ಹೆಸರು. ಅಥವಾ ಆನೆಯ ಹೆಗಲನ್ನೇರಿ ಕುಟಿಕಾನದಿ ಯನ್ನು ದಾಟಿದರೆಂದು ಮಹೇಶ್ವರತೀರ್ಥರ ವ್ಯಾಖ್ಯಾನವು.

ಪಾರಂಗತರೂ ಹೇರಳವಾಗಿ ತುಂಬಿರುವರು. ಇನ್ನೂ ಧನಿಕರಾದ ಅನೇಕ ಬ್ರಾಹ್ಮಣೋತ್ತಮರಿರುವರು. ಈ ನಮ್ಮ ಅಯೋಧ್ಯೆಯು ಪರಂಪರೆಯಾಗಿ ರಾಜರ್ಷಿಗಳಿಂದಲೇ ಪರಿಪಾಲಿತವಾದುದು. ಆದರೆ ಈ ಅಯೋಧ್ಯೆಯ ಸ್ಥಿತಿಯು ಮೊದಲಿನಂತೆ ಕಾಣುವುದಿಲ್ಲ. ಜನಗಳಲ್ಲಿ ಮೊದಲಿದ್ದಷ್ಟು ಉತ್ಸಾಹವಿರುವಂತೆ ತೋರಲಿಲ್ಲ. ಮೊದಲು ಇಷ್ಟು ದೂರದಲ್ಲಿರುವಾಗಲೇ ಆ ಪುರವಾಸಿಗಳ ಕೋಲಾಹಲ ಧ್ವನಿಯು ಒಟ್ಟಾಗಿ ಸೇರಿ, ಸುತ್ತಲೂ ವ್ಯಾಪಿಸಿ ಬಹುದೂರಕ್ಕೆ ಕೇಳಿಸುತ್ತಿತ್ತು. ಈಗ ಆ ಶಬ್ದವೇ ಇಲ್ಲ! ಹೀಗೆ ನಿಶ್ಶಬ್ದವಾಗಿರುವಂತೆ ತೋರುವುದಕ್ಕೆ ಕಾರಣವೇನೋ ತಿಳಿಯಲಿಲ್ಲ! ಪೂರ್ವದಲ್ಲಿ ಅನೇಕ ಜನರು [1] ಸಾಯಂಕಾಲದ ಹೊತ್ತಿನಲ್ಲಿ ಊರ ಹೊರಗಿನ ಈ ಉದ್ಯಾನಗಳಿಗೆ ಬಂದು, ಇಲ್ಲಿ ಬಹುಹೊತ್ತಿನವರೆಗೆ ವಿನೋದದಿಂದ ವಿಹರಿಸುತ್ತಿದ್ದು, ಕತ್ತಲೆಯು ಆರಂಭಿಸಿ ದೊಡನೆಯೇ ತಮ್ಮ ಆಟಪಾಟಗಳನ್ನು ಬಿಟ್ಟು ಆತುರದಿಂದ ಊರಿನ ಕಡೆಗೆ ಹೊರಡುತ್ತಿರುವರು. ನೋಡುವುದಕ್ಕೆ ಅವರ ಸಂಭ್ರಮವು ಎಷ್ಟೋ ಆನಂದಕರ ವಾಗಿತ್ತು. ಈಗ ಅದೊಂದನ್ನೂ ಕಾಣೆನು. ಆಗ ನಗುತ್ತಿದ್ದ ಉದ್ಯಾನವನ ಗಳೆಲ್ಲವೂ ಈಗ ಅಳುವಂತೆ ಕಾಣುವುವು. ಎಲೈ ಸೂತನೆ! ಇವೆಲ್ಲವನ್ನೂ ನೋಡಿದರೆ ನಮ್ಮ ಅಯೋಧ್ಯಾಪಟ್ಟಣವೇ ಅರಣ್ಯಪ್ರಾಯವಾಗಿ ಹೋಗಿರಬಹು ದೆಂದೆಣಿಸಬೇಕಾಗಿದೆ. ಮೊದಲಿನಂತೆ ನಮ್ಮ ಊರಿನಲ್ಲಿ ಪ್ರಮುಖರಾದ ಪುರುಷರು ರಥಗಳನ್ನೂ, ಆನೆಗಳನ್ನೂ, ಕುದುರೆಗಳನ್ನೂ ಏರಿ ಪಟ್ಟಣದಿಂದ ಹೊರಕ್ಕೆ ಹೋಗುವುದಾಗಲಿ ಪಟ್ಟಣಕ್ಕೆ ಬರುವುದಾಗಲಿ ಯಾವುದೊಂದೂ ಕಾಣುವುದಿಲ್ಲ. ಪೂರ್ವದಲ್ಲಿ ತೋಟಗಳೆಲ್ಲವೂ ಪುಷ್ಪಫಲಭರಿತವಾಗಿ, ಮಕರಂದಪಾನಮಾಡಿ ಕೊಬ್ಬಿದ ಗಿಳಿ, ಕೋಗಿಲೆ, ಮೊದಲಾದ ಹಕ್ಕಿಗಳಿಂದ ನಗುವಂತೆ ಕಾಣುತ್ತಿದ್ದುವು. ಈ ತೋಟಗಳೆಲ್ಲವೂ ಕ್ರೀಡೆಗಾಗಿ ಬರತಕ್ಕ ಜನರ ಮನಸ್ಸಿಗೆ ಸಮಸ್ತ ವಿಧದಲ್ಲಿಯೂ ಎಷ್ಟೋ ಸಂತೋಷವನ್ನುಂಟುಮಾಡುತ್ತಿದ್ದುವು. ಅಂತಹ ಉಪ ವನಗಳೆಲ್ಲವೂ ಈಗ ಸ್ವಲ್ಪವೂ ಉಲ್ಲಾಸವಿಲ್ಲದೆ ಅಳುವಂತೆ ಕಾಣುವುವು. ದಾರಿ ಯಲ್ಲಿರುವ ಸಾಲುಮರಗಳೆಲ್ಲವೂ, ಬಣ್ಣಗುಂದಿರುವುವು. ಮದಿಸಿದ ಮೃಗ

---

[1] ಇಲ್ಲಿ "ಪೂರ್ವದಲ್ಲಿ ಕೆಲವು ಕಾಮುಕರು ಸಂಜೆಯಾದ ಕೂಡಲೆ, ರಾತ್ರಿಕಾಲಗಳಲ್ಲಿ ಈ ತೋಟಗಳಿಗೆ ಬಂದು ಕ್ರೀಡಿಸುತ್ತಿದ್ದು. ಬೆಳಗಾದಮೇಲೆ ಅತ್ಯಾತುರದಿಂದ ಮನೆಯ ಕಡೆಗೆ ಹೋಗುತ್ತಿದ್ದರು." ಎಂದು ಗೋವಿಂದರಾಜರ ಅರ್ಥವು.

ಗಳಾಗಲಿ, ಪಕ್ಷಿಗಳಾಗಲಿ ಯಾವುದೊಂದರ ಧ್ವನಿಯೂ ಕೇಳಿಸುವುದಿಲ್ಲ. ಕರ್ಣಾನಂದಕರವಾಗಿ ಕೂಗುತ್ತಿದ್ದ ಹಕ್ಕಿಗಳೆಲ್ಲವೂ ಸದ್ದುಮಾಡದಿರುವುವು. ಎಲೈ ಸೂತನೆ! ಪೂರ್ವದಲ್ಲಿ ಈ ಸ್ಥಳಕ್ಕೆ ಬಂದಾಗಲೇ ಆ ಅಯೋಧ್ಯಾಪಟ್ಟಣದಲ್ಲಿ ಧೂಪಹಾಕಿದ ಅಗುರುಚಂದನಗಳ ಸುವಾಸನೆಯು ಎಷ್ಟೋ ಆನಂದಕರವಾಗಿರುತ್ತಿತ್ತು. ಈಗ ಆ ಸುವಾಸನೆಯುಳ್ಳ ಗಾಳಿಯೂ ಆ ಕಡೆಯಿಂದ ಬಾರದಿರುವುದಕ್ಕೇನು ಕಾರಣವೋ ತಿಳಿಯಲಿಲ್ಲ. ಭೇರಿ, ಮದ್ದಳೆ, ವೀಣೆ ಮುಂತಾದ ವಾದ್ಯಗಳನ್ನು ವಾದಿಸುವಾಗ, ಎಡೆಬಿಡದೆ ಗಂಭೀರವಾಗಿ ಹೊರಟು ಬರುತ್ತಿದ್ದ ಶಬ್ದಗಳೂ ಈಗ ಕೇಳಿಸುವುದೇ ಇಲ್ಲವಲ್ಲಾ! ಇದಕ್ಕೆ ಕಾರಣವೇನು! ಅನಿಷ್ಟ ಸೂಚಕಗಳಾಗಿ, ಬಹು ಕ್ರೂರಗಳಾಗಿ, ನೋಡುವಾಗಲೇ ಮಹಾಭಯವನ್ನುಂಟುಮಾಡತಕ್ಕ ಅನೇಕ ದುಶ್ಶಕುನಗಳು ಕಾಣುತ್ತಿರುವುವು. ಇದರಿಂದ ನನ್ನ ಮನಸ್ಸಿಗೆ ಬಹಳ ಚಿಂತೆಯುಂಟಾಗಿರುವುದು. ಎಲೆ, ಸೂತನೆ! ಈ ದುಃಖವುಂಟಾಗುವುದಕ್ಕೆ ಎಷ್ಟೆಷ್ಟು ಊಹಿಸಿ ನೋಡಿದರೂ ಕಾರಣವೇ ತಿಳಿಯಲಿಲ್ಲ. ಹೀಗಿದ್ದರೂ ನನ್ನ ಮನಸ್ಸು ತತ್ತಳಿಸುತ್ತಿರುವುದು." ಎಂದು ಹೇಳುತ್ತಾ, ಉತ್ಸಾಹಹೀನನಾಗಿ, ಕದಲಿದ ಮನಸ್ಸುಳ್ಳವನಾಗಿ, ಭಯದಿಂದ ಕೂಡಿದ ಇಂದ್ರಿಯಗಳುಳ್ಳವನಾಗಿ, ಇಕ್ಷ್ವಾಕುರಾಜರಿಂದ ಸುರಕ್ಷಿತವಾಗಿ ಪರಿಪಾಲಿಸಲ್ಪಟ್ಟ ಅಯೋಧ್ಯಾಪುರಕ್ಕೆ ಅತ್ಯಾತುರದಿಂದ ಪ್ರವೇಶಿಸಿದನು. ಎಡೆಬಿಡದೆ ಬಹುದೂರ ಪ್ರಯಾಣಮಾಡಿದುದರಿಂದ ಆತನ ಕುದುರೆಗಳೆಲ್ಲವೂ ಬಹಳವಾಗಿ ಬಳಲಿದ್ದುವು. ಹಾಗಿದ್ದರೂ ಅವುಗಳನ್ನು ವೇಗದಿಂದಲೇ ನಡೆಸುತ್ತಾ, [1] ವೈಜಯಂತವೆಂಬ ಹೆಸರುಳ್ಳ ಹೊರಬಾಗಿಲಿನ ಮಾರ್ಗದಿಂದ ಪಟ್ಟಣದೊಳಕ್ಕೆ ಪ್ರವೇಶಿಸಿದನು. ಆಗ ಅಲ್ಲಿದ್ದ ದ್ವಾರಪಾಲಕರು ತಟ್ಟನೆ ಇದಿರೆದ್ದು, "ವಿಜಯೀಭವ" ಎಂದು ಹೇಳುತ್ತಾ ಆತನನ್ನು ಹಿಂಬಾಲಿಸಿಬರುತ್ತಿರಲು, ಭರತನು ಕದಲಿದ ಮನಸ್ಸಿನಿಂದ ತತ್ತಳಿಸುತ್ತಾ, ತನ್ನನ್ನು ಹಿಂಬಾಲಿಸಿಬರುತಿದ್ದ ಆ ದ್ವಾರಪಾಲಕರನ್ನು ಉಪಚಾರವಾಕ್ಯಗಳಿಂದ ಹಿಂತಿರುಗಿಸಿ, ತನಗೆ ಪ್ರಿಯನಾದ ಅಶ್ವಪತಿಯ ಸಾರಥಿಯನ್ನು

---

1 ಇಲ್ಲಿ "ದ್ವಾರೇಣ ವೈಜಯಂತೇನ ಪ್ರಾವಿಶಚ್ಛ್ರಾಂತವಾಹನಃ |" ಎಂದು ಮೂಲವು. ಇದರಲ್ಲಿರುವ "ರೇ" ಎಂಬ ವರ್ಣವು ಗಾಯತ್ರಿಯ ಆರನೆಯ ಅಕ್ಷರವಾದ "ರೇ" ಎಂಬ ವರ್ಣವೆಂದು ಗ್ರಹಿಸಬೇಕು. ಇದರಿಂದ ಇಲ್ಲಿಗೆ ಐದು ಸಹಸ್ರ ಗ್ರಂಥಗಳು ಮುಗಿದು ಆರನೆಯ ಸಹಸ್ರವು ಆರಂಭಿಸಲ್ಪಡುವುದಾಗಿ ತಿಳಿಯಬೇಕು.

ನೋಡಿ "ಎಲೆ ಭದ್ರನೆ! ನಿಷ್ಕಾರಣವಾಗಿ ವಸಿಷ್ಠನು ನನ್ನನ್ನು ಇಷ್ಟು ಆತುರದಿಂದ ಕರೆಸಿದುದೇಕೆ? ಏನೋ ಅನರ್ಥವು ಸಂಭವಿಸಿರಬಹುದೆಂದು ನನ್ನ ಮನಸ್ಸಿಗೆ ಒಂದು ಶಂಕೆಯುಂಟಾಗಿದೆ! ನನ್ನ ಸ್ವಭಾವವೇ ವಿಪರೀತವಾಗಿ ಪರಿಣಮಿಸಿರುವಂತೆ ತೋರಿದೆ. ಪೂರ್ವಕಾಲದಲ್ಲಿ ರಾಜ್ಯಾಧಿಪತಿಗಳಿಗೆ ಯಾವು ದಾದರೂ ಒಂದು ಮಹಾವಿಪತ್ತು ಸಂಭವಿಸುವಾಗ, ದೇಶದಲ್ಲಿ ಯಾವಯಾವ ದುರ್ನಿಮಿತ್ತಗಳು ಕಾಣುವುವೆಂದು ನಮ್ಮ ಹಿರಿಯರು ಹೇಳುತ್ತಿದ್ದರೋ, ಅಂತಹ ಸೂಚನೆಗಳೆಲ್ಲವೂ ಈಗ ನಮಗೆ ಕಾಣುತ್ತಿರುವುವು. ಎಲೆ ಸೂತನೆ! ಇದೋ ಇಲ್ಲಿ ನೋಡು! ಗೃಹಸ್ಥರ ಮನೆಗಳು ಸಮ್ಮಾರ್ಜನಾದಿ ಸಂಸ್ಕಾರಗಳೊಂದೂ ಇಲ್ಲದೆ ನೋಡುವುದಕ್ಕೆ ಅಸಹ್ಯವಾಗಿರುವುವು. ಒಬ್ಬರಾದರೂ ಬಾಗಿಲುಗಳನ್ನು ಮುಚ್ಚಿಲ್ಲವು. ಎಲ್ಲಿ ನೋಡಿದರೂ ಕಣ್ಣಿಗೆ ಅಂದವನ್ನು ಕೊಡುವುದಿಲ್ಲ. ಈ ಪಟ್ಟಣದಲ್ಲಿ ಯಾರೊಬ್ಬರೂ ಬಲಿಕಾರ್ಯಗಳನ್ನು ನಡೆಸಿದಂತೆ ಕಾಣಿಸಲಿಲ್ಲ. ಯಾವ ಕಡೆಯಿಂದಲೂ ಧೂಪವಾಸನೆಗಳೇ ಹೊರಡುವುದಿಲ್ಲ. ಕುಟುಂಬಗಳೊಬ್ಬ ರಾದರೂ ಊಟಮಾಡಿದಂತೆ ತೋರಲಿಲ್ಲ. ಯಾರ ಮುಖದಲ್ಲಿಯೂ ಕಳೆಯಿಲ್ಲ. ಗೃಹಸ್ಥರ ಮನೆಗಳೆಲ್ಲವೂ ಎಂದಿನಂತೆ ಅಲಂಕರಿಸಲ್ಪಡದೆ ಕಾಂತಿಹೀನವಾಗಿ ರುವುವು. ದೇವಾಲಯದ ಬಾಗಿಲಿಗೂ ಪುಷ್ಪಮಾಲಿಕಾದ್ಯಲಂಕಾರಗಳನ್ನು ಮಾಡದೆ ಹಾಳುಬಿಟ್ಟಿರುವರು. ಅದರ ಅಂಗಳಗಳನ್ನು ಚೆನ್ನಾಗಿ ಗುಡಿಸಿ ಸಾರಿಸದೆ ಹಾಗೆಯೇ ಬಿಟ್ಟಿರುವರು. ಈ ಪಟ್ಟಣದ ಸ್ಥಿತಿಯು ಮೊದಲಿ ನಂತಿಲ್ಲವು. ನನಗೇನೋ ಕೇವಲ ಶೂನ್ಯಪ್ರದೇಶದಂತೆ ಕಾಣುತ್ತಿರುವುದು. ದೇವತಾರ್ಚನಾದಿಕಾರ್ಯಗಳೊಂದೂ ನಡೆಯುವಂತೆ ಕಾಣಲಿಲ್ಲ. ಇದುವರೆಗೆ ಒಂದು ಯಜ್ಞಧ್ವನಿಯಾದರೂ ನನ್ನ ಕಿವಿಗೆ ಬೀಳಲಿಲ್ಲ. ಹೂವಿನಂಗಡಿಯಲ್ಲಿ ಅಂದವಾದ ಒಂದು ಪುಷ್ಪಹಾರವಾದರೂ ಕಾಣುವುದಿಲ್ಲ. ಇದೋ! ಈ ಅಂಗಡಿ ಗಳಲ್ಲಿರುವ ವರ್ತಕರೂ ಕೂಡ ಮನಸ್ಸಿನಲ್ಲಿ ಸ್ವಲ್ಪವೂ ಉತ್ಸಾಹವಿಲ್ಲದೆ ಚಿಂತೆಯಿಂದ ಕೊರಗುತ್ತ ಕ್ರಯವಿಕ್ರಯಾದಿ ವ್ಯಾಪಾರಗಳನ್ನೂ ಬಿಟ್ಟು ಕುಳಿತಿರುವರು. ಮೊದಲಿನಂತೆ ಎಲ್ಲಿಯೂ ಉತ್ಸಾಹವೇ ಕಾಣುವುದಿಲ್ಲ. ಮನುಷ್ಯರ ಸ್ಥಿತಿ ಹಾಗಿರಲಿ! ಇದೋ ಇಲ್ಲಿ ನೋಡು! ದೇವಾಲಯಗಳಲ್ಲಿಯೂ, ಚೌಕಗಳಲ್ಲಿಯೂ ವಾಸವಾಗಿರತಕ್ಕ ಪಕ್ಷಿಸಮೂಹವೂ ಕೂಡ ಹಾಗೆಯೇ ದುಃಖದಿಂದ ಕೊರಗುವಂತೆ ತೋರುವುದು. ಪಟ್ಟಣದಲ್ಲಿರುವ ಸ್ತ್ರೀಪುರುಷ

ರೆಲ್ಲರೂ ಸ್ನಾನಮಾಡದೆ ಮಲಿನದೇಹವುಳ್ಳವರಾಗಿ ಕಣ್ಣುಗಳಲ್ಲಿ ನೀರುಬಿಡುತ್ತಾ ದೈನ್ಯದಿಂದ ತತ್ತಳಿಸುತ್ತಿರುವಂತೆ ತೋರುವುದು" ಎಂದನು. ಹೀಗೆ ಭರತನು ಅಯೋಧ್ಯೆಯಲ್ಲಿ ಹೋಗುತ್ತಿರುವಾಗ ಅಲ್ಲಿಯೂ ಅನೇಕ ದುಶ್ಶಕುನಗಳನ್ನು ಕಂಡು, ಮೇಲೆ ಮೇಲೆ ದುಃಖದಿಂದ ತತ್ತರಪಡುತ್ತ, ಆ ವಿಷಯಗಳೆಲ್ಲವನ್ನೂ ಆಗಾಗ ಸಾರಥಿಗೆ ತಿಳಿಸುತ್ತಾ, ನೆಟ್ಟಗೆ ತನ್ನ ತಂದೆಯಾದ ದಶರಥ ಮಹಾರಾಜನ ಅರಮನೆಗೆ ಹೋದನು. ಅಮರಾವತಿಯಂತೆ ಪ್ರಕಾಶಿಸುತ್ತಿದ್ದ ಅಯೋಧ್ಯೆಯಲ್ಲಿ, ಹೋಗುತ್ತಿರುವಾಗ ಚೌಕಗಳಲ್ಲಿಯಾಗಲಿ, ರಾಜಬೀದಿಗಳಲ್ಲಿಯಾಗಲಿ, ಮನೆಗಳಲ್ಲಿಯಾಗಲಿ, ಜನಸಂಚಾರವಿಲ್ಲದೆ ಕೇವಲ ಶೂನ್ಯಪ್ರದೇಶದಂತೆ ಕಾಣುತಿತ್ತು. ಮನೆಯ ಬಾಗಿಲುಗಳೆಲ್ಲವೂ ಕೆಂದೂಳಿಯಿಂದ ಮುಚ್ಚಿಹೋಗಿ ಮಲಿನವಾಗಿದ್ದುವು. ಈ ಸ್ಥಿತಿಯನ್ನು ನೋಡಿ ಆ ಭರತನು ದುಃಖದಲ್ಲಿ ಮುಳುಗಿದವನಾಗಿ, ತಾನು ಅಯೋಧ್ಯೆಯಲ್ಲಿ ಹಿಂದೆ ಎಂದೂ ಕಾಣದ ಅವಲಕ್ಷಣಗಳೆಲ್ಲವನ್ನೂ ಕಂಡು ತಲೆಯನ್ನು ತಗ್ಗಿಸಿಕೊಂಡು, ಕುಗ್ಗಿದ ಮನಸ್ಸುಳ್ಳವನಾಗಿ, ಮನಸ್ಸಿನಲ್ಲಿ ಸ್ವಲ್ಪವಾದರೂ ಉತ್ಸಾಹವಿಲ್ಲದೆ ತಂದೆಯ ಅರಮನೆಯೊಳಕ್ಕೆ ಪ್ರವೇಶಿಸಿದನು.

ಇದು ಎಪ್ಪತ್ತೊಂದನೆಯ ಸರ್ಗವು.

ಕೈಕೇಯಿಯು ಭರತನಿಗೆ ದಶರಥನ ಮರಣವನ್ನೂ ರಾಮನ ವನಪ್ರಯಾಣವನ್ನೂ ತಿಳಿಸಿ, ರಾಜ್ಯಾಧಿಕಾರವನ್ನು ವಹಿಸಿಕೊಳ್ಳುವಹಾಗೆ ಹೇಳಿದುದು.

ಭರತನು ತಂದೆಯ ಅರಮನೆಯನ್ನು ಪ್ರವೇಶಿಸಿ ಅಲ್ಲಿ ತಂದೆಯನ್ನು ಕಾಣದೆ ಅಲ್ಲಿಂದ ತಟ್ಟನೆ ಹಿಂತಿರುಗಿ ತಾಯಿಯಾದ ಕೈಕೇಯಿಯ ಅಂತಃಪುರಕ್ಕೆ ಬಂದನು. ಆಗ ಕೈಕೇಯಿಯು ಇದುವರೆಗೂ ತನ್ನ ಮುದ್ದುಮಗನಾದ ಭರತನು ಕಣ್ಮರೆಯಾಗಿ ದೇಶಾಂತರಗತನಾಗಿದ್ದು ಹಿಂತಿರುಗಿ ಬಂದುದನ್ನು ನೋಡಿ, ತಟ್ಟನೆ ತಾನು ಕುಳಿತಿದ್ದ ಸುವರ್ಣಪೀಠದಿಂದೆದ್ದು, ಅತ್ಯಾತುರದಿಂದ ಇದಿರುಗೊಂಡು ಬಂದಳು. ಆಗ ಭರತನು ಕಾಂತಿಹೀನವಾದ ಆ ಅಂತಃಪುರಪ್ರದೇಶವನ್ನು

ಸುತ್ತಲೂ ನೋಡಿ, ಚಿಂತಾಕುಲನಾಗಿದ್ದರೂ ವಿನಯದಿಂದ ಮುಂದೆ ಹೋಗಿ ತಾಯಿಯ ಪಾದವನ್ನು ಹಿಡಿದು ಸಾಷ್ಟಾಂಗಪ್ರಣಾಮವನ್ನು ಮಾಡಿದನು. ಕೈಕೇಯಿಯು ಪರಮಸಂತೋಷದಿಂದ ಆತನ ತಲೆಯನ್ನಾಘ್ರಾಣಿಸಿ ಪ್ರೇಮದಿಂದ ಆತನನ್ನಪ್ಪಿಕೊಂಡು, ತೊಡೆಯಮೇಲೆ ಕುಳ್ಳಿರಿಸಿ, ಕುಶಲಪ್ರಶ್ನವನ್ನು ಮಾಡ ಲಾರಂಭಿಸಿದಳು. "ಎಲೆ ವತ್ಸನೆ! ನೀನು ಮಾವನ ಮನೆಯನ್ನು ಬಿಟ್ಟು ಹೊರಟು ಎಷ್ಟು ದಿನಗಳಾಗಿರಬಹುದು? ರಥದಲ್ಲಿ ಬಹುವೇಗದಿಂದ ಬಂದಿರುವ ಹಾಗಿದೆ? ನಿನಗೆ ಮಾರ್ಗದಲ್ಲಿ ಬಹಳ ಆಯಾಸವಾಗಿರಲಾರದೆ? ನಿನ್ನ ಅಜ್ಜನಾದ ಕೇಕಯರಾಜನೂ, ನಿನ್ನ ಸೋದರಮಾವನಾದ ಯುಧಾಜಿತ್ತೂ ಕ್ಷೇಮದಲ್ಲಿರು ವರೆ? ನೀನು ಇದುವರೆಗೂ ಸೌಖ್ಯದಿಂದಿದ್ದೆಯಾ? ನನಗೆ ಅಲ್ಲಿನ ವಿಶೇಷಗಳೆಲ್ಲ ವನ್ನೂ ವಿಸ್ತಾರವಾಗಿ ತಿಳಿಸು" ಎಂದಳು. ಇದನ್ನು ಕೇಳಿ ಭರತನು "ಅಮ್ಮಾ! ನಾನು ತಾತನ ಮನೆಯನ್ನು ಬಿಟ್ಟು ಈಗ ಏಳು ದಿನಗಳಾದುವು. ನಿನ್ನ ತಂದೆಯು ಕ್ಷೇಮದಲ್ಲಿರುವನು. ಮಾವನೂ ಕ್ಷೇಮದಲ್ಲಿರುವನು. ನಾನು ಹೊರಟು ಬರುವಾಗ ನನಗಾಗಿ ತಾತನು ಕೊಟ್ಟ ಧನರಾಶಿಗಳೂ, ರತ್ನಗಳೂ ಅಪರಿಮಿತ ವಾಗಿರುವುವು. ಅವೆಲ್ಲವನ್ನೂ ಹೊರಿಸಿಕೊಂಡು ಬರುತಿದ್ದಾಗ, ನಮ್ಮ ವಾಹನಾದಿಗಳು ಮಾರ್ಗದಲ್ಲಿ ಬಹಳ ಆಯಾಸಪಟ್ಟುದನ್ನು ನೋಡಿ ಆ ನನ್ನ ಪರಿವಾರಗಳೆಲ್ಲವನ್ನೂ ಮಾರ್ಗದಲ್ಲಿ ವಿಶ್ರಾಂತಿ ತೆಗೆದುಕೊಂಡು ಸಾವಕಾಶವಾಗಿ ಹೊರಟುಬರುವಂತೆ ನಿಯಮಿಸಿ, ನಾನು ಆತುರದಿಂದ ಮೊದಲು ಹೊರಟು ಬಂದುಬಿಟ್ಟೆನು. ಇಲ್ಲಿಂದ ನನ್ನನ್ನು ಕರೆಯುವುದಕ್ಕಾಗಿ ಬಂದ ದೂತರು ಬಹಳ ಆತುರಪಡಿಸಿದುದರಿಂದ ನಾನು ಅವೆಲ್ಲವನ್ನೂ ಬಿಟ್ಟು ಹೊರಟು ಬರಬೇಕಾಯಿತು. ಅಮ್ಮಾ! ಅದೆಲ್ಲವೂ ಹೋಗಲಿ! ಈಗ ನಿನ್ನನ್ನು ನಾನು ಮುಖ್ಯವಾಗಿ ಒಂದು ಮಾತನ್ನು ಕೇಳಬೇಕೆಂದಿರುವೆನು! ಮೊದಲು ಅದಕ್ಕೆ ಪ್ರತ್ಯುತ್ತರವನ್ನು ಕೊಡು! ಈಗ ನೀನು ಮಲಗತಕ್ಕ ಚಿನ್ನದ ಮಂಚವು ಎಂದಿನಂತೆ ತಂದೆಯಿಲ್ಲದುದರಿಂದ ಹಾಳುಬಿದ್ದಂತೆ ಕಾಣುತ್ತಿರುವುದಲ್ಲಾ! ಹಿಂದೆ ಯಾವಾಗಲೂ ಹೀಗಿದ್ದುದನ್ನು ನಾನು ಕಂಡವನಲ್ಲ. ಇದಲ್ಲದೆ ನಮ್ಮ ತಂದೆಯ ಕಡೆಯ ಜನರೊಬ್ಬರಾದರೂ ಮೊದಲಿನಂತೆ ಉತ್ಸಾಹವುಳ್ಳವರಾಗಿ ತೋರಲಿಲ್ಲ! ತಂದೆಯು ಯಾವಾಗಲೂ ನಿನ್ನ ಅಂತಃಪುರವನ್ನು ಬಿಟ್ಟು ಹೋದವನಲ್ಲ. ಆತನು ಇಲ್ಲಿರಬಹುದೆಂದೇ ಎಣಿಸಿ ಮೊದಲು ಆತನನ್ನು

ನೋಡಬೇಕೆಂದು ಇಲ್ಲಿಗೆ ಬಂದೆನು. ಇಲ್ಲಿಯೂ ಆತನನ್ನು ಕಾಣಲಿಲ್ಲವಲ್ಲಾ! ಮೊದಲು ನಾನು ಹೋಗಿ ತಂದೆಯ ಪಾದಗಳಿಗೆ ನಮಸ್ಕರಿಸಿ ಬರಬೇಕೆಂದಿರುವೆನು. ಈಗ ಅವನೆಲ್ಲಿರುವನು ಹೇಳು? ಒಂದುವೇಳೆ ಆತನು ನಮ್ಮ ದೊಡ್ಡಮ್ಮನಾದ ಕೌಸಲ್ಯೆಯ ಅಂತಃಪುರಕ್ಕೆ ಹೋಗಿರಬಹುದೇ"? ಎಂದನು. ಆಗ ಕೈಕೇಯಿಯು ಇದುವರೆಗೆ ತಾನು ನಡೆಸಿದ ತಂತ್ರಗಳೆಲ್ಲವೂ ಭರತನಿಗೆ ಬಹು ಪ್ರಿಯವಾಗಿರುವುದೆಂದೂ, ಅದನ್ನು ಕೇಳಿ ಆತನು ಎಷ್ಟೋ ಸಂತೋಷಪಡುವನೆಂದೂ ಮನಸ್ಸಿನಲ್ಲಿಯೇ ಹಿಗ್ಗುತ್ತ, ಕರ್ಣಕಠೋರವಾದ ಮಾತುಗಳನ್ನು ಹೇಳಲಾರಂಭಿಸಿದಳು. ಇಲ್ಲಿನ ನಿಜಸ್ಥಿತಿಯೊಂದನ್ನೂ ತಿಳಿಯದೆ ತಂದೆಯನ್ನು ನೋಡಬೇಕೆಂದು ಆತುರಪಡುತ್ತಿರುವ ಆ ಭರತನ ಸ್ವಭಾವವನ್ನು ತಿಳಿಯದೆ ತನ್ನಂತೆಯೇ ಆತನೂ ರಾಜ್ಯಲೋಭಕ್ಕೆ ಒಳಗಾಗಿರುವನೆಂದೆಣಿಸಿ, ಆತನನ್ನು ಕುರಿತು "ಎಲೆ ವತ್ಸನೆ! ಈ ಪ್ರಪಂಚದಲ್ಲಿ ಹುಟ್ಟಿದ ಸಮಸ್ತ ಪ್ರಾಣಿಗಳಿಗೂ ಅವಶ್ಯವಾಗಿ ಯಾವ ಗತಿಯುಂಟಾಗಬೇಕೋ ನಿನ್ನ ತಂದೆಗೂ ಅದೇ ಗತಿಯುಂಟಾಯಿತು. ಇದಕ್ಕಾಗಿ ಉಳಿದವರು ಚಿಂತಿಸಿ ಫಲವಿಲ್ಲವೆಂಬುದನ್ನು ಸರ್ವಜ್ಞನಾದ ನಿನಗೆ ನಾನು ತಿಳಿಸಬೇಕಾದುದೇ ಇಲ್ಲವಲ್ಲವೆ? ರಾಜನಾದರೋ ಮಹಾತ್ಮನು. ಮಹಾತೇಜಸ್ವಿಯು. ಅನೇಕ ಯಾಗಗಳನ್ನು ಮಾಡಿದವನು. ಸತ್ಪುರುಷರಿಗೆ ಆತನೇ ಒಂದು ದಿಕ್ಕಾಗಿದ್ದನು. ಆತನಿಗೆ ಅವನ ಪುಣ್ಯಕರ್ಮಾನುಸಾರವಾದ ಸದ್ಗತಿಯುಂಟಾಗುವುದರಲ್ಲಿ ಸಂದೇಹವೇನಿರುವುದು?" ಎಂದಳು. ಇದನ್ನು ಕೇಳಿದೊಡನೆಯೇ ಭರತನಿಗೆ ಪ್ರಜ್ಞೆ ತಪ್ಪಿತು. ಧರ್ಮಾತ್ಮನಾಗಿಯೂ, ಕುಲೀನನಾಗಿಯೂ, ಪರಿಶುದ್ಧ ಸ್ವಭಾವವುಳ್ಳವನಾಗಿಯೂ ಇದ್ದ ಆ ಭರತನು ಸಂಕಟವನ್ನು ತಡೆಯಲಾರದೆ "ಅಯ್ಯೋ ಕೆಟ್ಟೆನು!" ಎಂದು ಉಚ್ಚಸ್ವರದಿಂದ ಕೂಗಿಡುತ್ತ ನೆಲದಮೇಲೆ ಬಿದ್ದುಬಿಟ್ಟನು. ಎರಡು ತೋಳುಗಳನ್ನೂ ನೀಡಿ ಅರ್ಧಪ್ರಾಣದಲ್ಲಿ ನರಳುಪವರಂತೆ ಸಂಕಟವನ್ನು ತಡೆಯಲಾರದೆ ನೆಲದ ಮೇಲೆ ಹೊರಳುತಿದ್ದನು. ಹೀಗೆ ಮಹಾತೇಜಸ್ವಿಯಾದ ಆ ಭರತನಿಗೆ ಪಿತೃಮರಣದಿಂದುಂಟಾದ ಮಹಾದುಃಖವು ಬಲವಾಗಿ ಆವರಿಸಿಕೊಂಡಿತು. ಪ್ರಜ್ಞೆ ತಪ್ಪಿತು. ಹುಚ್ಚುಹಿಡಿದಂತಾಯಿತು. ಆಗ ಆತನು "ಅಯ್ಯೋ! ರಾತ್ರಿಯಲ್ಲಿ ಶರತ್ಕಾಲದ ಚಂದ್ರನಿಂದ ಪ್ರಕಾಶಿಸುತ್ತಿರುವ ಆಕಾಶಪ್ರದೇಶದಂತೆ, ಹಿಂದೆ ಯಾವಾಗಲೂ ಈ ಹಾಸಿಗೆಯು ನಮ್ಮ ತಂದೆಯಿಂದ

ಅಲಂಕರಿಸಲ್ಪಡುತಿತ್ತಲ್ಲವೆ? ಈಗ ಆತನಿಲ್ಲದುದರಿಂದ, ಚಂದ್ರನಿಲ್ಲದ ರಾತ್ರಿಯಂತೆಯೂ, ನೀರಿಲ್ಲದ ಮಹಾಸಮುದ್ರದಂತೆಯೂ, ಈ ಪ್ರದೇಶವೆಲ್ಲವೂ ಕಳೆಗುಂದಿ ಶೂನ್ಯವಾಗಿರುವುದಲ್ಲಾ" ಎಂದು ಪ್ರಲಾಪಿಸಿದನು. ಕಣ್ಣಿನಲ್ಲಿ ಧಾರೆಯಾಗಿ ನೀರು ಸುರಿಯುತಿತ್ತು. ದುಃಖದಿಂದ ಆತನ ಕಂಠಸ್ವರವು ಕುಗ್ಗಿಹೋಯಿತು. ತಾನು ಹೊದೆದಿದ್ದ ಬಟ್ಟೆಯಿಂದ ಮುಖವನ್ನು ಮರೆಸಿಕೊಂಡು ಅಳುವುದಕ್ಕಾರಂಭಿಸಿದನು. ಹೀಗೆ ದೇವತೆಗಳಿಗೆ ಸಮಾನವಾದ ದಿವ್ಯತೇಜಸ್ಸುಳ್ಳ ತನ್ನ ಮಗನಾದ ಭರತನು ಕೊಡಲಿಯಿಂದ ಕಡಿದು ಹಾಕಿದ ಮರದ ತುಂಡಿನಂತೆ ನೆಲದ ಮೇಲೆ ಬಿದ್ದು ವ್ಯಸನದಿಂದ ಗೋಳಿಡುತ್ತಿರುವುದನ್ನು ಕೈಕೇಯಿಯು ನೋಡಿದಳು. ಮದ್ದಾನೆಯಂತೆ ನೇತ್ರಾನಂದಕರವಾಗಿಯೂ, ಚಂದ್ರ ಸೂರ್ಯರಂತೆ ಮಹಾತೇಜಸ್ವಿಯಾಗಿಯೂ ಇದ್ದ ಆತನನ್ನು ನೋಡಿ ಕೈಕೇಯಿಯು 'ಎಲೆ ವತ್ಸನೇ! ಏಳೇಳು! ಹೀಗೆ ನೆಲದ ಮೇಲೆ ಮಲಗುವುದುಂಟೇ! ನೀನು ಮಹಾಯಶಸ್ವಿಯಾದ ರಾಜಕುಮಾರನಲ್ಲವೆ! ಸತ್ಪುರುಷರಗೋಷ್ಠಿಗೂ ವಿಶೇಷಮಾನ್ಯರಾದ ನಿನ್ನಂತವರು ಈ ವಿಷಯಗಳಿಗಾಗಿ ಹೀಗೆ ದುಃಖಿಸಬಹುದೆ! ನಿನ್ನ ಬುದ್ಧಿಯಾದರೋ ಯಜ್ಞದಾನಾದಿ ಸತ್ಕಾರ್ಯಗಳಲ್ಲಿ ವಿಶೇಷವಾದ ಅನುಭವವುಳ್ಳದು. ಸದಾಚಾರದಲ್ಲಿಯೇ ಪ್ರವರ್ತಿಸತಕ್ಕದು. ವೇದವಾಕ್ಯಗಳೆಲ್ಲವನ್ನೂ ಚೆನ್ನಾಗಿ ಅಧಿಕರಿಸಿರತಕ್ಕದು. ಸೂರ್ಯಮಂಡಲದಲ್ಲಿ ಕಾಂತಿಯು ಪ್ರಕಾಶಿಸುವಂತೆ, ನಿನ್ನ ಬುದ್ಧಿಯಲ್ಲಿ ಶಾಸ್ತ್ರಜ್ಞಾನ ಲೋಕಾನುಭವಗಳೆಲ್ಲವೂ ಎಡೆಬಿಡದೆ ತುಂಬಿರುವುವು. ಇಂತಹ ನೀನು ಹೀಗೆ ದುಃಖಿಸಬಹುದೆ?" ಎಂದಳು. ಇದನ್ನು ಕೇಳುತ್ತಿದ್ದರೂ ಭರತನು ತನ್ನ ಪ್ರಲಾಪವನ್ನು ಬಿಡದೆ ಬಹುಕಾಲದವರೆಗೆ ಗೋಳಿಡುತಿದ್ದು, ನೆಲದಮೇಲೆ ಬಿದ್ದು ಹೊರಳುತ್ತ, ಮೇಲೆ ಮೇಲೆ ದುಃಖದಿಂದ ಪೀಡಿತನಾಗಿ ತಾಯಿಯನ್ನು ಕುರಿತು, ಅಮ್ಮಾ! ರಾಜನು ಈಗ ನನ್ನನ್ನು ಕರೆಕಳುಹಿಸಿದನಲ್ಲವೆ! ದೂತರು ನನ್ನನ್ನು ಅಷ್ಟು ಆತುರದಿಂದ ಕರೆದುದನ್ನು ನೋಡಿ ನನಗೆ ಮನಸ್ಸಿನಲ್ಲಿ ನಾನಾ ವಿಧವಾದ ಆಲೋಚನೆಯುಂಟಾಯಿತು. ರಾಮನಿಗೆ ಯುವರಾಜ ಪಟ್ಟವನ್ನು ಕಟ್ಟುವುದಕ್ಕಾಗಿಯೋ, ಅಥವಾ ಯಾವುದೋ ಒಂದು ಯಜ್ಞವನ್ನು ಮಾಡುವುದಕ್ಕಾಗಿಯೋ ನಮ್ಮ ತಂದೆಯು ಉದ್ದೇಶಿಸಿರಬಹುದೆಂದು ತಿಳಿದು, ನಾನು ಎಷ್ಟೋ ಸಂತೋಷದಿಂದ ಹೊರಟು ಬಂದೆನು. ಆಯ್ಯೋ! ಇಲ್ಲಿ ನೋಡಿದರೆ ಅದೆಲ್ಲವೂ ವಿಪರೀತವಾಗಿ

ಪರಿಣಮಿಸಿತಲ್ಲಾ? ನನ್ನ ಎದೆಯು ದುಃಖದಿಂದ ಒಡೆದು ಹೋಗುವ ಹಾಗಿರುವುದು! ಪುತ್ರವತ್ಸಲನಾಗಿ ಎಷ್ಟೋ ಪ್ರೇಮದಿಂದ ಕಾಪಾಡುತಿದ್ದ ನಮ್ಮ ತಂದೆಯನ್ನು ನೋಡುವುದಕ್ಕಿಲ್ಲದೆ ಹೋಯಿತಲ್ಲಾ! ಅಮ್ಮಾ! ಹೀಗೆ ತಂದೆಯು ಆಕಸ್ಮಿಕವಾಗಿ ಸಾಯುವುದಕ್ಕೆ ಕಾರಣವೇನು? ಆತನನ್ನು ಕೊಲ್ಲುವುದಕ್ಕೆ ಬಂದೊದಗಿದ ಮಹಾಕ್ರೂರವಾದ ವ್ಯಾಧಿ ಯಾವುದು? ಅಯ್ಯೋ! ರಾಮ ಲಕ್ಷ್ಮಣರಿಬ್ಬರೇ ಧನ್ಯರು! ತಂದೆಯು ಸಾಯುವಾಗ ಸಮೀಪದಲ್ಲಿದ್ದು, ಆತನನ್ನುಪಚರಿಸಿ, ಆತನು ಸತ್ತಮೇಲೆ ಅಪರ ಸಂಸ್ಕಾರಗಳನ್ನು ಮಾಡತಕ್ಕ ಆ ಭಾಗ್ಯವೂ ನನಗಿಲ್ಲದೇ ಹೋಯಿತಲ್ಲಾ! ನಾನು ಎಷ್ಟೋ ಆತುರದಿಂದ ಆತನನ್ನು ನೋಡುವುದಕ್ಕಾಗಿ ಇಲ್ಲಿಗೆ ಬಂದಿರುವ ಅಂಶವು ಆತನಿಗೆ ತಿಳಿಯದೆ ಹೋಯಿತಲ್ಲಾ! ಯಶಸ್ವಿಯಾದ ಆ ನನ್ನ ತಂದೆಯು ತನ್ನನ್ನು ಕಂಡೊಡನೆಯೇ ಎಷ್ಟೋ ಆತುರದಿಂದ ಬಂದು ಪ್ರೇಮದಿಂದ ತಲೆಯನ್ನಾಘ್ರಾಣಿಸುತ್ತಿದ್ದನು. ಸುಖವಾದ ಆತನ ಹಸ್ತಸ್ಪರ್ಶವು ಇನ್ನು ನನಗೆ ಲಭಿಸುವುದೆಲ್ಲಿ? ನನ್ನ ಮೈ ಮೇಲೆ ಬಿದ್ದ ಧೂಳನ್ನು ತಾನೇ ಬಂದು ತನ್ನ ಕೈಯಿಂದ ಒರಸುತ್ತಿದ್ದನಲ್ಲಾ! ಅಂತಹ ಮೃದುವಾದ ಹಸ್ತಸ್ಪರ್ಶದ ಸುಖವನ್ನು ನಾನು ಇನ್ನೆಲ್ಲಿ ಕಾಣುವೆನು? ಅಮ್ಮಾ! ಆದುದಾಯಿತು ಮೊದಲು ನನಗೆ ರಾಮನನ್ನು ತೋರಿಸು? ಯಾವನು ನನಗೆ ಒಡಹುಟ್ಟಿದವನಾಗಿದ್ದರೂ ತಂದೆಯಂತೆಯೂ ಸರ್ವವಿಧ ಬಂಧುವಿನಂತೆಯೂ ಇರುವನೋ, ಯಾವನಿಗೆ ನಾನು ದಾಸಾನುದಾಸನೆಂಬ ಭಾವವನ್ನಿಟ್ಟುಗೊಂಡಿರುವೆನೋ, ಆ ರಾಮನಿಗಾದರೂ ನಾನು ಬಂದಿರುವ ವಿಷಯವನ್ನು ಈಗಲೇ ತಿಳಿಸು! ಧರ್ಮವನ್ನು ಪರ್ಯಾಲೋಚಿಸಿ ನೋಡಿದರೆ ಜ್ಯೇಷ್ಠಭ್ರಾತೃವೇ ತಂದೆಯಂತಲ್ಲವೆ? ನಾನು ಮೊದಲು ಹೋಗಿ ತಂದೆಗೆ ನಮಸ್ಕಾರಮಾಡಬೇಕೆಂಬ ಆತುರದಿಂದ ಬಂದೆನು. ಈಗ ನನಗೆ ತಂದೆ ಯಂತಿರುವ ಅಣ್ಣನಾದ ರಾಮನ ಪಾದಗಳನ್ನಾದರೂ ಹಿಡಿದು ನನ್ನ ಉದ್ದೇಶ ವನ್ನು ಈಡೇರಿಸಿಕೊಳ್ಳುವೆನು. ತಂದೆಯು ಹೋದಮೇಲೆ ಆತನೇ ನನಗೆ ಗತಿಯು. ಧರ್ಮಜ್ಞನಾಗಿ, ಧರ್ಮನಿರತನಾಗಿ, ಸತ್ಯಪರಾಕ್ರಮವುಳ್ಳ ಪೂಜ್ಯ ನಾದ ನಮ್ಮ ತಂದೆಯು ಸಾಯುವಾಗ ಏನು ಹೇಳಿದನು? ಆತನ ಕೊನೆಯ ಬುದ್ಧಿವಾದಗಳನ್ನು ಕೇಳಬೇಕೆಂದು ನನಗೆ ಬಹಳ ಕುತೂಹಲವಿರುವುದು. ಅದನ್ನಾದರೂ ತಿಳಿಸು” ಎಂದನು. ಇದನ್ನು ಕೇಳಿ ಕೈಕೇಯಿಯು, ನಡೆದುದನ್ನು

ನಡೆದಹಾಗೆಯೇ ತಿಳಿಸುವುದಾಗಿ ಭಾವಿಸಿಕೊಂಡು ಭರತನನ್ನು ಕುರಿತು, ವತ್ಸನೆ! ನಿನ್ನ ತಂದೆಯು ಪರಲೋಕಪ್ರಯಾಣಕ್ಕೆ ಮೊದಲು [1] ಹಾ ರಾಮಾ! ಹಾ ಸೀತೇ!!! ಹಾ ಲಕ್ಷ್ಮಣಾ!!! ಎಂದು ಗೋಳಿಡುತ್ತ ಪ್ರಾಣವನ್ನು ಬಿಟ್ಟನು. ಇವೇ ಆತನು ಹೇಳಿದ ಕೊನೆಯ ವಾಕ್ಯಗಳು! ಮದ್ದಾನೆಯು ಹಗ್ಗಗಳಿಂದ ಕಟ್ಟಿ ಎಳೆಯಲ್ಪಡುವಂತೆ ಕಾಲಧರ್ಮದಿಂದ ಆತನು ಎಳೆಯಲ್ಪಟ್ಟು ಉತ್ತಮ ಗತಿಯನ್ನು ಹೊಂದಿದನು. ಮತ್ತು ಆತನು ತನ್ನ ಮರಣಕಾಲದಲ್ಲಿ ಹೇಳಿದ ಇನ್ನು ಕೆಲವು ಮಾತುಗಳೇನೆಂದರೆ "ಸೀತಾ ಲಕ್ಷ್ಮಣರೊಡನೆ ಅಯೋಧ್ಯೆಗೆ ಹಿಂತಿರುಗಿಬಂದ ಮಹಾಬಾಹುವಾದ ರಾಮನನ್ನು ಪುನಃ ನೋಡತಕ್ಕವರೇ ಧನ್ಯರಲ್ಲವೇ ಎಂದು ಹೇಳುತ್ತ ಪ್ರಾಣವನ್ನು ಬಿಟ್ಟನು" ಎಂದಳು. ರಾಮನು ಪಟ್ಟಣದಲ್ಲಿಲ್ಲವೆಂಬ ಈ ಎರಡನೆಯ ದುಃಖವಾರ್ತೆಯನ್ನೂ ಕೇಳಿದಮೇಲೆ ಭರತನು, ಮಹಾವ್ಯಸನದಿಂದ ಕಂದಿದ ಮುಖವುಳ್ಳವನಾಗಿ ಪುನಃ ತಾಯಿಯನ್ನು ಕುರಿತು ಅಮ್ಮಾ! ಇದೇನು ಹೀಗೆ ಹೇಳುವೆ! ಧರ್ಮಾತ್ಮನಾಗಿ ಕೌಸಲ್ಯಾನಂದವರ್ಧಕನಾದ ರಾಮನು ಸೀತಾಲಕ್ಷ್ಮಣರೊಡನೆ ಎಲ್ಲಿಗೆ ಹೋಗಿರುವನು?" ಎಂದನು. ಅದಕ್ಕಾ ಕೈಕೇಯಿಯು ತಾನು ಮುಂದೆ ಹೇಳುವ ಮಾತುಗಳಾದರೂ ಭರತನಿಗೆ ಸಂತೋಷವನ್ನುಂಟುಮಾಡಬಹುದೆಂದೆಣಿಸಿ, ನಿಜಸ್ಥಿತಿಯನ್ನು ಆತನಿಗೆ ತಿಳಿಸಲಾರಂಭಿಸಿ "ಎಲೈ ಪುತ್ರನೆ! ರಾಜಪುತ್ರನಾದ ರಾಮನು ನಾರುಮಡಿಯನ್ನುಟ್ಟು ಸೀತಾಲಕ್ಷ್ಮಣರೊಡನೆ ದಂಡಕಾರಣ್ಯಕ್ಕೆ ಹೊರಟುಹೋದನು" ಎಂದಳು. ಇದನ್ನು ಕೇಳಿ ಭರತನು, "ತನ್ನ ಇಕ್ಷ್ವಾಕುವಂಶದವರಿಗೆ ಸದಾಚಾರಸಂಪನ್ನರೆಂಬ ಕೀರ್ತಿಯು ಯಾವಾಗಲೂ ತಪ್ಪಿದುದಲ್ಲ. ರಾಮನು ಕಾಡಿಗೆ ಹೊರಟುಹೋಗುವಷ್ಟು ಮಹಾಪರಾಧವನ್ನು ಮಾಡಿರುವನೆ?" ಎಂದು ಶಂಕಿಸುತ್ತ ಪುನಃ ತಾಯಿಯನ್ನು ಕುರಿತು ಭಯದಿಂದ "ಅಮ್ಮಾ! ರಾಮನು ಕಾಡಿಗೆ ಹೋಗುವಷ್ಟು ಮಾಡಿದ ತಪ್ಪೇನು? ಆತನು ಯಾವನಾದರೂ ಬ್ರಾಹ್ಮಣನ ಸ್ವತ್ತನ್ನು ಅಪಹರಿಸಲಿಲ್ಲವಷ್ಟೆ? ಅಥವಾ ಧನಿಕನನ್ನಾಗಲಿ, ದರಿದ್ರನನ್ನಾಗಲಿ ನಿರಪರಾಧಿಯಾದ ಯಾವನನ್ನಾಗಲಿ

---

1 ಇಲ್ಲಿ ಕೈಕೇಯಿಯು ಭರತನಿಗೆ ತಂದೆಯಲ್ಲಿರುವ ಪ್ರೇಮವನ್ನು ತಪ್ಪಿಸುವುದಕ್ಕಾಗಿ, "ನಿನ್ನ ತಂದೆಯು ಪ್ರಾಣಬಿಡುವಾಗಲೂ ರಾಮಾದಿಗಳನ್ನೇ ಸ್ಮರಿಸಿಕೊಂಡನೇ ಹೊರತು ನಿನ್ನನ್ನು ಒಂದಾವರ್ತಿಯಾದರೂ ನೆನೆಸಿಕೊಳ್ಳಲಿಲ್ಲ" ವೆಂದು ಹೇಳಿದುದಾಗಿ ಗ್ರಹಿಸಬೇಕು.

ಹಿಂಸಿಸಲಿಲ್ಲವಷ್ಟೆ? ಅಥವಾ ಆತನು ಪರಸ್ತ್ರೀಯರನ್ನು ಅಪೇಕ್ಷಿಸುವ ದುಸ್ಸ್ವಭಾವವುಳ್ಳವನಂತೆಯೂ ಕಾಣಲಿಲ್ಲ. ಆದರೂ ಶ್ರೋತ್ರಿಯರನ್ನು ಕೊಂದ ಮಹಾಪಾಪಿಯಂತೆ ಆತನು ಕಾಡಿಗೆ ಕಳುಹಿಸಲ್ಪಡುವುದಕ್ಕೆ ಕಾರಣವೇನು?" ಎಂದನು. ಇದನ್ನು ಕೇಳಿ ಚಪಲಸ್ವಭಾವವುಳ್ಳ ಕೈಕೇಯಿಯು ಸ್ತ್ರೀಸ್ವಭಾವಕ್ಕೆ ತಕ್ಕಂತೆ ತಾನು ನಡೆಸಿದ ತಂತ್ರಗಳೆಲ್ಲವೂ ಪರಮಶ್ಲಾಘ್ಯಗಳಾಗಿರಬಹುದೆಂದೆಣಿಸಿ, ಸಂತೋಷದಿಂದ, ಮಹಾತ್ಮನಾದ ಆ ಭರತನನ್ನು ನೋಡಿ, "ಎಲೆ ವತ್ಸನೆ, ರಾಮನು ಯಾವ ಬ್ರಾಹ್ಮಣನ ಧನವನ್ನೂ ಅಪಹರಿಸಲಿಲ್ಲ. ನಿರಪರಾಧಿಗಳಾದ ಯಾರೊಬ್ಬರನ್ನೂ ಆತನು ಹಿಂಸಿಸಿದವನಲ್ಲ. ಪರಸ್ತ್ರೀಯರೆಂದರೆ ಆತನು ಕಣ್ಣೆತ್ತಿಯೂ ನೋಡತಕ್ಕವನಲ್ಲ. ಆತನಲ್ಲಿ ಯಾವುದೊಂದು ದುರ್ಗುಣವೂ ಗೋಚರಿಸುವುದಿಲ್ಲ. ಆದರೆ ಇಲ್ಲಿ ನಡೆದ ರೀತಿಯೇ ಬೇರೆ! ನಿಜಸ್ಥಿತಿಯನ್ನು ತಿಳಿಸುವೆನು ಕೇಳು? ನಿನ್ನ ತಂದೆಯಾದ ದಶರಥನು ರಾಮನಿಗೆ ಯುವರಾಜಪಟ್ಟವನ್ನು ಕಟ್ಟಬೇಕೆಂದು ಸನ್ನಾಹಮಾಡುತ್ತಿದ್ದನು. ಇದನ್ನು ನಾನು ಕೇಳಿದೊಡನೆಯೇ, ನಿನಗೆ ಪಟ್ಟವನ್ನು ಕಟ್ಟಬೇಕೆಂದೂ, ರಾಮನನ್ನು ಕಾಡಿಗೆ ಹೊರಡಿಸಬೇಕೆಂದೂ ನಿನ್ನ ತಂದೆಯನ್ನು ನಿರ್ಬಂಧಿಸಿದೆನು. ನಿನ್ನತಂದೆಯು ಸತ್ಯಕ್ಕೆ ಕಟ್ಟುಬಿದ್ದು ನನ್ನ ಮಾತಿನಂತೆಯೇ ಒಪ್ಪಿ ರಾಮನನ್ನು ಕಾಡಿಗೆ ಕಳುಹಿಸಿಬಿಟ್ಟನು. ಆ ರಾಮನೊಡನೆ ಸೀತಾಲಕ್ಷ್ಮಣರೂ ಕಾಡಿಗೆ ಹೊರಟುಹೋದರು. ಇತ್ತಲಾಗಿ, ದಶರಥನು, ತನ್ನ ಪ್ರಿಯಪುತ್ರನಾದ ರಾಮನನ್ನು ಕಾಣದ ಸಂಕಟಕ್ಕಾಗಿ, ಆ ವ್ಯಸನದಿಂದಲೇ ಪ್ರಾಣವನ್ನು ಬಿಟ್ಟನು. ಎಲೆ ವತ್ಸನೆ! ನೀನು ರಾಜಧರ್ಮಗಳೆಲ್ಲವನ್ನೂ ಚೆನ್ನಾಗಿ ಬಲ್ಲವನು. ಇನ್ನು ನೀನೇ ಇಲ್ಲಿ ರಾಜನಾಗಿರಬಹುದು! ನೆಮ್ಮದಿಯಿಂದ ರಾಜ್ಯಸುಖವನ್ನನುಭವಿಸಬಹುದು! ನಿನಗಾಗಿಯೇ ನಾನು ಇಷ್ಟು ತಂತ್ರಗಳನ್ನು ನಡೆಸಬೇಕಾಯಿತು. ಎಲೈ ಪುತ್ರನೆ! ಇನ್ನು ತಂದೆಯು ಸತ್ತನೆಂಬ ದುಃಖವನ್ನು ಬಿಟ್ಟುಬಿಡು! ಮನಸ್ಸಿನ ಚಿಂತೆಯನ್ನೂ ಬಿಟ್ಟುಬಿಡು. ಧೈರ್ಯವನ್ನವಲಂಬಿಸು. ಇನ್ನು ಈ ರಾಜ್ಯವೆಲ್ಲವೂ ನಿನ್ನ ಕೈಗೆ ಸೇರಿತು. ಇದಕ್ಕೆ ಬೇರೊಬ್ಬರ ಉಪದ್ರವವಿಲ್ಲ. ಈಗ ಶಾಸ್ತ್ರಜ್ಞರಾದ ವಸಿಷ್ಠಾದಿಬ್ರಾಹ್ಮಣರೊಡನೆ ಕೂಡಿ, ನಿನ್ನ ತಂದೆಗೆ ಮಾಡಬೇಕಾದ ಅಪರಸಂಸ್ಕಾರಗಳನ್ನು ಶಾಸ್ತ್ರೋಕ್ತವಾಗಿ ಶೀಘ್ರದಲ್ಲಿಯೇ ಮುಗಿಸಿಬಿಟ್ಟು, ಪಟ್ಟಾಭಿಷೇಕವನ್ನು ನಡೆಸಿಕೊಳ್ಳುವವನಾಗು!" ಎಂದಳು.

ಇದು ಎಪ್ಪತ್ತೆರಡನೆಯ ಸರ್ಗವು.

ಭರತನು ಕೈಕೇಯಿಯನ್ನು ನಿಂದಿಸಿದುದು

ಭರತನು ತಂದೆಯ ಮರಣವಾರ್ತೆಯನ್ನೂ, ತನ್ನ ಅಣ್ಣ ತಮ್ಮಂದಿರು ಕಾಡಿಗೆ ಹೋದುದನ್ನೂ ಕೇಳಿ ವ್ಯಸನದಿಂದ ಕೊರಗುತ್ತ, "ಅಯ್ಯೋ! ತಂದೆಯನ್ನು ತೊರೆದು, ದಿಕ್ಕುಗೆಟ್ಟ ನನಗೆ ಇನ್ನು ರಾಜ್ಯ ಸುಖವೇಕೆ? ಎಲೆ ಕ್ರೂರಳೆ? ಕೈಹಿಡಿದ ಗಂಡನನ್ನು ಮೃತ್ಯುವಿಗೊಪ್ಪಿಸಿದುದಲ್ಲದೆ, ಲೋಕೋತ್ತರ ಗುಣವುಳ್ಳ ರಾಮನನ್ನೂ ತಾಪಸನಂತೆ ಕಾಡುಪಾಲಾಗಿ ಮಾಡಿಬಿಟ್ಟೆಯಲ್ಲಾ! ಉರಿಯುವ ಹುಣ್ಣಿಗೆ ಉಪ್ಪುಹಾಕಿದಂತೆ ದುಃಖದ ಮೇಲೆ ದುಃಖವನ್ನು ತಂದಿಟ್ಟಿಯಲ್ಲವೆ? ನಮ್ಮ ಕುಲವನ್ನು ಕೆಡಿಸುವುದಕ್ಕಾಗಿಯೇ ಕಾಳರಾತ್ರಿಯಂತೆ ನೀನು ಬಂದು ಸೇರಿದೆ! ಉರಿಯುವ ಕೆಂಡವನ್ನಪ್ಪಿಕೊಳ್ಳುವಂತೆ ನನ್ನ ತಂದೆಯು ನಿನ್ನನ್ನು ಅಜ್ಞಾನದಿಂದ ಪತ್ನಿಯೆಂದು ಭಾವಿಸಿ ಲಾಲಿಸುತ್ತಿದ್ದನು. ಎಲೆ ಪಾಪಿನಿ! ನಮ್ಮ ರಾಜನನ್ನು ಕೊಲ್ಲುವುದಕ್ಕೆ ನೀನೇ ಮೃತ್ಯುಸ್ವರೂಪಳಾದೆ! ಎಲೆ ಕುಲಘಾತುಕಿ! ಅಜ್ಞಾನದಿಂದ ನಮ್ಮ ವಂಶಕ್ಕೆ ಸುಖವೇ ಇಲ್ಲದಂತೆ ಮಾಡಿದೆಯಾ! ನನ್ನ ತಂದೆಯಾದರೋ ಬಹಳ ಸತ್ಯಸಂಧನು. ಮಹಾಯಶಸ್ವಿಯು. ಅಂತವನು ನಿನ್ನನ್ನು ಕೈಹಿಡಿದುದರಿಂದಲೇ ಇಂತಹ ಮಹಾ ಘೋರವಾದ ವ್ಯಸನಕ್ಕೆ ಗುರಿಯಾಗಿ ಕೊನೆಗೆ ಅದರಿಂದಲೇ ಪ್ರಾಣವನ್ನೂ ಬಿಡಬೇಕಾಯಿತು. ಧರ್ಮವತ್ಸಲನಾಗಿ ಮಹಾರಾಜನೆನಿಸಿಕೊಂಡ ನನ್ನ ತಂದೆಯನ್ನು ಹೀಗೆ ನೀನು ಅನ್ಯಾಯವಾಗಿ ಕೊಲ್ಲಬಹುದೆ? ಎಲೆ ಪಾಪಿನಿ! ನೀನು ರಾಮನನ್ನೇಕೆ ಕಾಡಿಗೆ ಕಳುಹಿಸಬೇಕಾಗಿತ್ತು? ಅವನನ್ನು ಕಾಡಿನಲ್ಲಿರಿಸಿದುದರಿಂದ ನಿನಗೆ ಬಂದ ಭಾಗ್ಯವೇನು? ನೀನು ನನಗೆ ತಾಯಿಯೆನಿಸಿಕೊಂಡಿದ್ದು ಕೌಸಲ್ಯಾ ಸುಮಿತ್ರೆಯರಿಬ್ಬರನ್ನೂ ಪುತ್ರ ಶೋಕದಿಂದ ಕೊರಗುವ ಹಾಗೆ ಮಾಡಿದೆಯಲ್ಲಾ! ನಿನ್ನಿಂದ ಅವರು ಪ್ರಾಣವನ್ನೇ ಕಳೆದುಕೊಳ್ಳತಕ್ಕ ಸಂಭವವು ಬಂದೊದಗಿತೆಂದು ನನಗೆ ತೋರಿರುವುದು. ಒಂದು ವೇಳೆ ಅವರು ಬದುಕಿದ್ದರೂ ನಿನ್ನ ಕೈಕೆಳಗೆ ಸಿಕ್ಕಿಕೊಂಡು ಜೀವಿಸುವುದು ಅವರಿಗೆ ಹೇಗೆ ತಾನೇ ಸಾಧ್ಯವು? ಪೂಜ್ಯನಾದ ರಾಮನು ಧರ್ಮಸ್ವರೂಪದಂತಿರುವನು, ಗುರುಜನಗಳಲ್ಲಿ ಹೇಗೆ ನಡೆದುಕೊಳ್ಳಬೇಕೆಂಬ ಮರ್ಯಾದೆಯನ್ನು ಆತನು ಚೆನ್ನಾಗಿ ಬಲ್ಲನು. ಅವನು ಹೆತ್ತ ತಾಯಿಯಾದ ಕೌಸಲ್ಯೆಯಲ್ಲಿ ಹೇಗೆ ನಡೆದುಕೊಳ್ಳುತ್ತಿದ್ದವನಲ್ಲವೆ? ಬಹುದೂರದಷ್ಟಿಯುಳ್ಳ ನನ್ನ ದೊಡ್ಡಮ್ಮನಾದ ಕೌಸಲ್ಯೆಯೂ

ಹಾಗೆಯೇ ನಿನ್ನಲ್ಲಿ ಒಡಹುಟ್ಟಿದವಳಂತೆ ಪ್ರೇಮವನ್ನು ತೋರಿಸುತಿದ್ದಳಲ್ಲವೆ? ಇವೆರಡನ್ನೂ ನೀನು ಚೆನ್ನಾಗಿ ಪರ್ಯಾಲೋಚಿಸಬೇಡವೆ? ನಿನಗೆ ಆಕೆಯಲ್ಲಿ ಯಾಗಲಿ, ರಾಮನಲ್ಲಿಯಾಗಲಿ ದ್ವೇಷವಿರುವುದಕ್ಕೆ ಕಾರಣವೇ ಇಲ್ಲವಲ್ಲಾ! ಎಲೆ ಪಾಪಿನಿ! ಅಂತಹ ಧಾರ್ಮಿಕಳಾದ ಕೌಸಲ್ಯೆಗೆ ಮಗನಾಗಿ ಮಹಾಧೀಮಂತ ನೆನಿಸಿಕೊಂಡ ರಾಮನನ್ನು ಕಾಡಿಗೆ ಕಳುಹಿಸಿದೆಯಾ? ಆತನಿಗೆ ನಾರುಮಡಿ ಯನ್ನುಡಿಸಿದೆಯಾ? ಎಲೆ ಕ್ರೂರೆ! ಇಷ್ಟು ಮಾಡಿದ ಮೇಲೆಯೂ ನಿನಗೆ ದುಃಖ ವುಂಟಾಗಲಿಲ್ಲವೆ? ಆ ರಾಮನಾದರೋ ಎಂದಿಗೂ ಪಾಪಕಾರ್ಯಕ್ಕೆ ಹೋದವನಲ್ಲ! ಬಹಳ ಧೀಮಂತನು! ಮಹಾಶೂರನು! ಯಶಸ್ವಿಯು! ಅಂತವನಿಗೆ ನಾರುಮಡಿ ಯನ್ನುಡಿಸಿ ಕಾಡಿಗೆ ಕಳುಹಿಸುವುದಕ್ಕೆ ಈಗ ಬಂದೊದಗಿದ ಕಾರಣವೇನು? ಎಲೆ ಮೂಢಳೆ! ರಾಜ್ಯದಲ್ಲಿ ದುರಾಶೆಯುಳ್ಳ ನಿನಗೆ ನಾನಾದರೂ ರಾಮನ ವಿಷಯದಲ್ಲಿ ಹೇಗೆ ನಡೆದುಕೊಳ್ಳುತ್ತಿರುವೆನೆಂದು ತಿಳಿಯದೆಹೋಯಿತೆ? ರಾಮು ರಾಜ್ಯಕ್ಕಾಗಿ ಇಷ್ಟು ಮಹಾನರ್ಥಗಳನ್ನೂ ತಂದಿಟ್ಟೆಯಲ್ಲಾ! ಪುರುಷ ಶ್ರೇಷ್ಠರಾದ ರಾಮಲಕ್ಷ್ಮಣರಿಬ್ಬರನ್ನೂ ಬಿಟ್ಟು ನಾನು ಯಾವ ಶಕ್ತಿಯಿಂದ ರಾಜ್ಯವನ್ನು ನಡೆಸಲಿ? ಅವರಿಬ್ಬರೂ ಇಲ್ಲದಮೇಲೆ ನನಗೆ ಬೇರೆ ಬಲವೇನು? ನನ್ನ ವಿಷಯವು ಹಾಗಿರಲಿ? ಮಹಾ ಬಲಾಢ್ಯನಾಗಿ, ಧರ್ಮಾತ್ಮನಾಗಿ, ಮಹಾ ರಾಜನೆನಿಸಿಕೊಂಡ ನಮ್ಮ ತಂದೆಯೂ ಕೂಡ,[1] ಮೇರು ಪರ್ವತವು ತನ್ನ ರಕ್ಷಣೆಗಾಗಿ ತನ್ನ ಅರಣ್ಯವನ್ನೇ ನಂಬಿಕೊಂಡಿದ್ದಂತೆ, ಬಲವಂತನಾದ ರಾಮನನ್ನೇ ನಂಬಿಕೊಂಡು, ಆತನ ಬಲದಿಂದಲೇ ರಾಜ್ಯವನ್ನು ನಡೆಸುತ್ತಿದ್ದನು. ಸಮರ್ಥ ವಾದ ಮಹಾವೃಷಭದ ಮೇಲೆ ಹೊರಿಸತಕ್ಕ ದೊಡ್ಡ ಭಾರವನ್ನು ಎಳಗರುವಿನ ಮೇಲೆ ಹೊರಿಸಿದಂತೆ, ನನ್ನ ಮೇಲೆ ಈ ರಾಜ್ಯಭಾರವನ್ನು ಹೊರಿಸಿದರೆ ಯಾವ ಶಕ್ತಿಯಿಂದ ಅದನ್ನು ನಾನು ತಡೆಯಲಿ? ಒಂದು ವೇಳೆ ನಾನು ರಾಜವಂಶದಲ್ಲಿ ಹುಟ್ಟಿರುವುದರಿಂದ, ಸಾಮಾದ್ಯುಪಾಯಗಳಿಂದಾಗಲಿ, ಗ್ರಹಣಧಾರಣಾದಿ ಗಳಾದ ಅಷ್ಟಾಂಗಗಳುಳ್ಳ ಸ್ವಬುದ್ಧಿಬಲದಿಂದಾಗಲಿ, ರಾಜ್ಯವನ್ನು ಪಾಲಿಸು ವುದಕ್ಕೆ ಶಕ್ತನಾಗಿದ್ದರೂ, ದುರಾಶೆಯಿಂದ ಇಷ್ಟು ಮಹಾನರ್ಥಗಳನ್ನು ತಂದಿಟ್ಟ

---

[1] ಮೇರುಪರ್ವತದಲ್ಲಿ ಅನೇಕ ಘೋರಾರಣ್ಯಗಳಿರುವುದರಿಂದ, ಅದು ಇತರರಿಗೆ ದುಷ್ಪ್ರವೇಶವಾಗಿರುವಂತೆ, ರಾಮನೂ ದಶರಥನಿಗೆ ಒಂದು ದೊಡ್ಡ ಬೆಂಬಲವಾಗಿ ರಕ್ಷಕ ನಾಗಿದ್ದನೆಂದು ಭಾವವು.

ನಿನ್ನನ್ನು ಮಾತ್ರ ನಾನು ಎಂದಿಗೂ ಸುಖದಲ್ಲಿರಿಸಲಾರೆನು! ರಾಮನು ಮಾತ್ರ ತನ್ನ ಹೆತ್ತ ತಾಯಿಯಂತೆ ನಿನ್ನನ್ನು ಗೌರವಿಸದಿದ್ದ ಪಕ್ಷದಲ್ಲಿ, ಮಹಾ ಪಾಪಿನಿಯಾದ ನಿನ್ನನ್ನು ಈಗಲೇ ತೊರೆದುಬಿಡುತ್ತಿದ್ದೆನು. ಆತನು ಗೌರವ ವನ್ನಿಟ್ಟಿರುವುದರಿಂದಲೇ ನಾನೂ ನಿನ್ನನ್ನು ಸುಮ್ಮನೆ ಬಿಟ್ಟಿರುವೆನೆಂದು ತಿಳಿ! ಆತನ ಕೋಪಕ್ಕೆ ಹೆದರಿಯೇ ನಾನು ಉದಾಸೀನನಾಗಿರುವೆನು. ಎಲೆ ಪಾಪಿನಿ! ಈ ಬುದ್ಧಿಯು ನಿನಗೆ ಹೇಗೆ ಹುಟ್ಟಿತು? ನಿನ್ನಲ್ಲಿ ಸಜ್ಜನರ ನಡತೆಯು ಸ್ವಲ್ಪ ವಾದರೂಬೇಡವೆ? ನಮ್ಮ ವಂಶಕ್ಕೇ ನಿಂದ್ಯವಾದ ಈ ದುರ್ಬುದ್ಧಿಯು ನಿನಗೇಕೆ ಹುಟ್ಟಿತು? ನಮ್ಮ ವಂಶದಲ್ಲಿ ಜ್ಯೇಷ್ಠಪುತ್ರನಿಗೆ ರಾಜ್ಯಾಭಿಷೇಕಮಾಡುವುದೇ ಕುಲಕ್ರಮಾಗತವಾಗಿ ಬಂದ ಸಂಪ್ರದಾಯವೆಂಬುದನ್ನು ನೀನು ತಿಳಿಯೆಯಾ? ಒಡಹುಟ್ಟಿದವರೆಲ್ಲರೂ ಅಣ್ಣನಿಗೆ ವಿಧೇಯರಾಗಿ ನಡೆದುಕೊಳ್ಳುತಿದ್ದರೆಂಬುದನ್ನು ನೀನರಿಯೆಯಾ? ಆ ರಾಜಧರ್ಮವೆಲ್ಲವನ್ನೂ ನೀನು ತಿಳಿದವಳಾಗಿದ್ದರೆ ನಿನಗೇಕೆ ಈ ದುರ್ಬುದ್ಧಿಯು ಹುಟ್ಟುತ್ತಿತ್ತು? ಎಲೆ ಘಾತುಕಿ! ನಿನಗೆ ಈ ರಾಜಧರ್ಮ ಗಳೊಂದೂ ತಿಳಿದಂತೆ ನನಗೆ ತೋರಲಿಲ್ಲ! ರಾಜಧರ್ಮದ ರೀತಿಯು ಹೇಗೆಂಬುದೇ ನಿನಗೆ ತಿಳಿಯದು! ಇದು ನಮ್ಮ ವಂಶಕ್ಕೆ ಮಾತ್ರವೇ ಅಲ್ಲ! ಈ ವೃತ್ತಿಯು ಸಮಸ್ತರಾಜವಂಶಕ್ಕೂ ವಿಹಿತವಾಗಿರುವುದು. ಅದರಲ್ಲಿಯೂ ಲೋಕವಿಖ್ಯಾತ ವಾದ ನಮ್ಮ ಇಕ್ಷ್ವಾಕುವಂಶಕ್ಕೆ ಈ ಧರ್ಮವು ವಿಶೇಷಾದರಣೀಯವೆಂಬುದನ್ನು ಹೇಳತಕ್ಕುದೇನು? ಈ ನಮ್ಮ ಇಕ್ಷ್ವಾಕುವಂಶದವರು ಧರ್ಮವೇ ತಮಗೆ ರಕ್ಷೆಯೆಂದು ನಂಬಿರತಕ್ಕವರಲ್ಲವೆ? ಕುಲಕ್ರಮಾಗತವಾದ ಆಚಾರಸಂಪ್ರದಾಯ ಗಳನ್ನು ಯಾವಾಗಲೂ ಬಿಟ್ಟುನಡೆಯತಕ್ಕವರಲ್ಲ. ಅಂತವರಿಗೆ ಈ ನಡತೆಯ ವಿಷಯದಲ್ಲಿದ್ದ ಹೆಮ್ಮೆಯನ್ನು ಈಗ ನೀನು ಮುರಿದುಹಾಕಿಬಿಟ್ಟೆಯಲ್ಲ! ನಮ್ಮ ಇಕ್ಷ್ವಾಕುವಂಶವು ಹಾಗಿರಲಿ! ನಿನ್ನ ವಂಶದ ಪೂರ್ವರಾಜರ ಪದ್ಧತಿಯನ್ನಾದರೂ ನೀನು ನೋಡಬೇಡವೆ! ಅವರೂ[1] ಹಿರಿಯ ಮಗನಿಗೆ ಪಟ್ಟವನ್ನು ಕಟ್ಟುತಿದ್ದ ರೆಂಬ ಕುಲಸಂಪ್ರದಾಯವನ್ನು ನೀನು ತಿಳಿಯೆಯಾ? ಅಂತಹ ಮಹನೀಯರ ವಂಶದಲ್ಲಿ ಹುಟ್ಟಿಯೂ ನಿನಗೆ ಈ ವಿಪರೀತಬುದ್ಧಿಯುಂಟಾಗಬಹುದೆ?" ಎಲೆ ಪಾಪಬುದ್ಧಿಯುಳ್ಳವಳೆ! ನನ್ನ ಕೈಸಾಗುವವರೆಗೂ ನಿನ್ನ ಕೋರಿಕೆಯೊಂದಾ

[1] ಇಲ್ಲಿ "ಜ್ಯೇಷ್ಠ ಏವ ತು ಗೃಹ್ಣೀಯಾತ್ ಪಿತ್ರ್ಯಂ ಧನಮಶೇಷತಃ | ಶೇಷಾಸ್ತ ಮನುಜೀವೇಯುಃ" ಎಂಬ ಮನುಸ್ಮೃತಿ ವಾಕ್ಯಪ್ರಮಾಣವನ್ನು ಅನುಸಂಧಿಸಿಕೊಳ್ಳಬೇಕು.

ದರೂ ಕೈಗೂಡುವುದೆಂಬ ಆಸೆಯನ್ನು ಬಿಟ್ಟುಬಿಡು! ನೀನೇ ಈಗ ನನಗೆ ಪ್ರಾಣಾಂತರವಾದ ವ್ಯಸನವನ್ನು ತಂದಿಟ್ಟಿರುವೆ! ಇದಕ್ಕಾಗಿ ನಾನು ನಿನ್ನ ಇಷ್ಟದಂತೆ ನಡೆಯದಿರುವುದು ಮಾತ್ರವಲ್ಲ! ಒಂದೊಂದು ಭಾಗದಲ್ಲಿಯೂ ನಿನ್ನ ಇಷ್ಟಕ್ಕೆ ವಿರೋಧವಾಗಿಯೇ ನಡೆಸಿ, ನಿನಗೆ ಅನಿಷ್ಟವನ್ನೇ ತಂದಿಡಬೇಕೆಂದು ಸಂಕಲ್ಪಿಸಿಬಿಟ್ಟಿರುವೆನು! ಇದೋ! ಈಗಲೇ ನಾನು ಸರ್ವಲೋಕಪ್ರಿಯನೆನಿಸಿ ಕೊಂಡಿರುವ ಅಣ್ಣನಾದ ರಾಮನನ್ನು ಕಾಡಿನಿಂದ ಹಿಂತಿರುಗಿಸಿ ಕರೆತರುವೆನು! ನಿನಗೆ ಅಪ್ರಿಯವನ್ನುಂಟುಮಾಡುವುದಕ್ಕಾಗಿಯೇ ನಾನು ಮೊದಲು ಆತನಲ್ಲಿಗೆ ಹೋಗುವೆನು. ಮಹಾತೇಜಸ್ವಿಯಾದ ಆತನನ್ನೇ ಪಟ್ಟದಲ್ಲಿರಿಸುವೆನು! ಆತನಿಗೆ ನಾನು ಕೇವಲ ದಾಸಾನುದಾಸನಾಗಿ ಅವನು ಹೇಳಿದ ಕೆಲಸಗಳನ್ನು ಮಾಡು ತ್ತಿರುವೆನು. ಇದು ನಿಜವು! ಆಗಲೇ ನನ್ನ ಮನಸ್ಸು ನೆಮ್ಮದಿಯಿಂದಿರುವುದು" ಎಂದನು. ಮಹಾತ್ಮನಾದ ಭರತನು, ಹೀಗೆ ದುಃಖಕರವಾದ ಮಾತುಗಳಿಂದ ಆ ಕೈಕೇಯಿಯನ್ನು ಕೊರಗಿಸುತ್ತ, ತಾನೂ ಮಹಾವ್ಯಸನದಿಂದ ಕೊರಗುತ್ತ ಪರ್ವತಗುಹೆಯಲ್ಲಿ ಅಡಗಿ ಕೂಗುತ್ತಿರುವ ಸಿಂಹದಂತೆ ಆಗಾಗ ಕೋಪದಿಂದ ಗರ್ಜಿಸುತ್ತಿದ್ದನು.

ಇದು ಎಪ್ಪತ್ತಮೂರನೆಯ ಸರ್ಗವು.

ಭರತನು ಕೋಪಾವೇಶದಿಂದ ಕೈಕೇಯಿಯನ್ನು ಬಹು ಕ್ರೂರವಾಗಿ ನಿಂದಿಸಿ, ಕೊನೆಗೆ ಮೂರ್ಛೆಬಿದ್ದುದು.

ಹೀಗೆ ಭರತನು ತನ್ನ ತಾಯಿಯನ್ನು ಮೊದಮೊದಲು ಮರ್ಮೋದ್ಘಾಟಕ ವಾದ ಮೃದುವಾಕ್ಯಗಳಿಂದ ನಿಂದಿಸುತ್ತಿದ್ದನು. ಕೊನೆಕೊನೆಗೆ ಆ ಕೋಪವು ಮಿತಿಮೀರಿತು. ಆಗ ಆಕೆಯನ್ನು ನೋಡಿ, "ಎಲೆ ಕ್ರೂರೆ! ಎಲೆ ದುಷ್ಟೆ! ನೀನು ಧರ್ಮದಲ್ಲಿ ಸ್ವಲ್ಪವಾದರೂ ದೃಷ್ಟಿಯನ್ನಿಡಬೇಡವೆ? ನೀನೂ ನಿನ್ನ ತಾಯಿಯಂತೆ ರಾಜ್ಯಭ್ರಷ್ಟಳಾಗಬೇಕಾದುದೇ ನ್ಯಾಯವು. ನಿನ್ನ ಭಾಗಕ್ಕೆ ನಾನು ಸತ್ತಂತೆಯೇ ತಿಳಿದು ಗೋಳಿಡುತ್ತಿರು! ಎಲೆ ಪಾಪಿನಿ! ನೀನು ನಮ್ಮ ಮಹಾರಾಜನಿಗೆ ಮರಣವನ್ನೂ, ರಾಮನಿಗೆ ವನವಾಸವನ್ನೂ ಏಕಕಾಲದಲ್ಲಿಯೇ ತಂದಿಟ್ಟೆಯಲ್ಲಾ! ರಾಜನಾಗಲಿ, ಅಥವಾ ಪರಮಧಾರ್ಮಿಕನಾದ ರಾಮನಾಗಲಿ

ನಿನಗೆ ಮಾಡಿದ ಅನ್ಯಾಯವೇನು? ನಿನ್ನ ಚರಿತ್ರೆಯನ್ನಾಗಲಿ ಗುಣಗಳನ್ನಾಗಲಿ ಅವರು ದೂಷಿಸಿದುದೇನು? ನಮ್ಮ ಕುಲವನ್ನು ಕೆಡಿಸಿದುದರಿಂದ ನೀನು ಭ್ರೂಣ ಹತ್ಯಾಪಾತಕಕ್ಕೊಳಗಾದೆಯಲ್ಲಾ! ಎಲೆ ಕೈಕೇಯಿ! ನಿನಗೆ ನರಕವೇ ಗತಿ! ಎಂದಿಗೂ ನೀನು ಪತಿ ಸಾಲೋಕ್ಯವನ್ನು ಹೊಂದಲಾರೆ! ಅಯ್ಯೋ! ಈ ಭಯಂಕರವಾದ ಕಾರ್ಯಕ್ಕೆ ಪ್ರವರ್ತಿಸಿ, ರಾಮನನ್ನು ಕಾಡಿಗೆ ಕಳುಹಿಸಿ, ಮಹಾಪಾಪಕ್ಕೆ ಗುರಿಯಾದೆಯಲ್ಲಾ! ನನಗೆ ರಾಜ್ಯವನ್ನು ಕೊಡಿಸಬೇಕೆಂದು ಸರ್ವಲೋಕಪ್ರಿಯನಾದ ಆ ರಾಮನನ್ನು ನೀನು ಕಾಡಿಗೆ ಕಳುಹಿಸಿದೆಯಾ? ಇದರಿಂದ ನನಗೆ ನೀನು ಉಪಕಾರಮಾಡಬೇಕೆಂದೆಣಿಸಿದೆಯಾ? ಈ ವ್ಯಾಜ್ಯ ದಿಂದ ಒಂದೆರಡನರ್ಥಗಳೇ ಅಲ್ಲ! ನಿನ್ನಿಂದ ನನ್ನ ತಂದೆಯೂ ಸಾಯಬೇಕಾ ಯಿತು! ಅತ್ತಲಾಗಿ ರಾಮನೂ ದೇಶಭ್ರಷ್ಟನಾಗಿ ಹೋಗಬೇಕಾಯಿತು ನಾನು ಈ ಲೋಕದಲ್ಲಿ ಮಹಾಪವಾದಕ್ಕೆ ಗುರಿಯಾಗಬೇಕಾಯಿತು. ನಿನಗೇಕೆ ಹೀಗೆ ದುರಾಶೆಯು ಹುಟ್ಟಿತು! ಪತಿಯನ್ನು ಕೊಂದ ಮಹಾಪಾಪಿನಿಯಾದ ನೀನು ನನ್ನೊಡನೆ ಸಂಭಾಷಿಸುವುದಕ್ಕೂ ಅರ್ಹಳಲ್ಲ! ಇನ್ನು ಮೇಲೆ ನೀನು ನನ್ನನ್ನು ಮಾತಾಡಿಸಬೇಡ! ಕೌಸಲ್ಯೆಯೂ, ಸುಮಿತ್ರೆಯೂ, ಇನ್ನೂ ನನ್ನ ಇತರ ಮಾತೆಯರೆಲ್ಲರೂ, ಕುಲಘಾತುಕಿಯಾದ ನಿನಗಾಗಿ ಮಹಾವ್ಯಸನಕ್ಕೆ ಗುರಿಯಾಗಬೇಕಾಯಿತಲ್ಲವೆ? ನಿನ್ನನ್ನು ಆ ಅಶ್ವಪತಿಗೆ ಮಗಳೆಂದೇ ಹೇಳಬಾರದು! ಆತನು ಮಹಾಧೀಮಂತನು! ಧರ್ಮ ಸ್ವರೂಪನು! ಆತನ ಹೊಟ್ಟೆಯಲ್ಲಿ ನೀನು ಹುಟ್ಟಿರಲೇಬಾರದು. ಅವನ ವಂಶವನ್ನು ಕೆಡಿಸುವುದಕ್ಕಾಗಿ ರಾಕ್ಷಸಸ್ವರೂಪಿಣಿಯಾಗಿಯೇ ನೀನು ಹುಟ್ಟಿರುವೆ! ಯಾವಾಗಲೂ ಸತ್ಯಪರಾಯಣನಾಗಿ ಧಾರ್ಮಿಕನೆನಿಸಿಕೊಂಡ ರಾಮನನ್ನು ಕಾಡುಪಾಲು ಮಾಡಿದೆ! ನಿನಗೆ ಪಾಪಕಾರ್ಯವೇ ಪ್ರಧಾನ ವೆಂದು ನನಗೆ ತೋರಿರುವುದು! ನಿನ್ನ ಪಾಪಕಾರ್ಯದ ಫಲಕ್ಕೆ ನಾನೂ ಭಾಗಿ ಯಾಗಬೇಕಾಗಿ ಬಂದೊದಗಿತಲ್ಲಾ! ಇತ್ತಲಾಗಿ ತಂದೆಯನ್ನೂ ಕಳೆದು ಕೊಂಡೆನು. ಅತ್ತಲಾಗಿ ನನ್ನ ಅಣ್ಣ ತಮ್ಮಂದಿರೂ ನನ್ನನ್ನು ತೊರೆದುಬಿಟ್ಟರು. ನಾನೂ ಈ ಲೋಕಕ್ಕೆ ವಿರೋಧಿಯಾದೆನು. ಈ ಅನರ್ಥಗಳೆಲ್ಲವೂ ನಿನ್ನಿಂದಲೇ ನನಗೆ ಬಂದೊದಗಿತು! ಪಾಪವೆಂಬುದನ್ನೇ ಕಂಡರಿಯದೆ, ಯಾವಾಗಲೂ ಧರ್ಮ ದಲ್ಲಿಯೇ ನಿರತಳಾದ ಆ ಕೌಸಲ್ಯೆಗೆ ನೀನು ಇಷ್ಟು ದುಃಖವನ್ನು ತಂದಿಟ್ಟ

ಮೇಲೆ, ನಿನಗೆ ಯಾವ ಪುಣ್ಯಲೋಕವುಂಟು? ನಿನಗೆ ನರಕವೇ ಗತಿಯಲ್ಲದೆ ಬೇರೆಯಿಲ್ಲ. ನಿನ್ನ ಈ ದುಷ್ಕೃತ್ಯಕ್ಕೆ ಈಗ ಸಿದ್ಧವಾಗಿರುವ ನರಕಗಳೂ ಕೂಡ ಸಾಲದೆಂದೇ ತೋರುವುದು? ಎಲೆ ಕ್ರೂರೆ! ಕೌಸಲ್ಯೆಯ ಮಗನಾದ ಆ ರಾಮನು ಶುದ್ಧ ಸ್ವಭಾವವುಳ್ಳವನೆಂದೂ, ಬಂಧುಗಳಿಗೆಲ್ಲಾ ಆತನೇ ಮುಖ್ಯಾಶ್ರಯನೆಂದೂ, ಜ್ಯೇಷ್ಠನಾದ ಆತನು ನನಗೆ ತಂದೆಗೆ ಸಮಾನನೆಂದೂ ತಿಳಿಯಲಿಲ್ಲವೆ? ಅಂತಹ ಮಹನೀಯನನ್ನು ನನಗೆ ದ್ವೇಷಿಯೆಂದು ಯೋಚಿಸಿದೆಯಾ? [1] ಪುತ್ರನಾದವನು ತಾಯಿಯ ಮುಖ, ಕಂಠ, ಮೊದಲಾದ ಅಂಗಗಳಿಂದಲೂ ಕಣ್ಣು, ಮೂಗು, ಮೊದಲಾದ ಉಪಾಂಗಗಳಿಂದಲೂ ಹುಟ್ಟುವನು. ತಾಯಿಯ ಅಂಗಾಂಗಗಳ ತೇಜಸ್ಸೂ ಮಗನೊಡನೆ ಸೇರಿ ಬರುವುವು. ಅನುರಾಗಾಶ್ರಯವಾದ ಹೃದಯದಿಂದಲೂ ಅವನು ಹುಟ್ಟಿಬರುವನು. ಆದುದರಿಂದ ತಾಯಿಗೆ ಮಗನೇ ಎಲ್ಲಕ್ಕಿಂತಲೂ ಪ್ರಿಯತಮನೆನಿಸಿಕೊಳ್ಳುವನಲ್ಲವೆ? ಇತರ ಬಂಧುಗಳು ರಕ್ತಸಂಬಂಧ ಮಾತ್ರದಿಂದ ಪ್ರಿಯರೆನಿಸಿಕೊಂಡಿದ್ದರೂ, ಮಗನಂತೆ ಪ್ರಿಯತಮರಾಗುವರೆ? ಬಂಧುಗಳಲ್ಲಿ ಪುತ್ರನೆಂಬುವನೇ ಕೇವಲ ಪ್ರಿಯತಮನು. ತಾಯಿಯು ಆತನನ್ನು ಸಾಮಾನ್ಯವಾದ ಇತರ ಬಂಧುವಿನಂತೆ ಎಣಿಸಕೂಡದು. ಪೂರ್ವದಲ್ಲಿ ಒಂದಾನೊಂದು ಕಾಲದಲ್ಲಿ, ದೇವತೆಗಳಿಗೂ ಪೂಜ್ಯವಾಗಿ ಸಕಲ ಧರ್ಮಗಳನ್ನೂ ತಿಳಿದ ಕಾಮಧೇನುವು, ಭೂಮಿಯಲ್ಲಿ ನೇಗಿಲನ್ನು ಹೊತ್ತು ನೆಲವನ್ನುತ್ತು ಬಹಳವಾಗಿ ಆಯಾಸಪಟ್ಟು ಬಳಲಿ ಮೂರ್ಛೆಬಿದ್ದಿದ್ದ ತನ್ನ ವಂಶದ ಹೋರಿಗಳೆರಡನ್ನು ಕಂಡಿತು. ಬೆಳಗಿನಿಂದ ಮಧ್ಯಾಹ್ನದವರೆಗೂ ನೆಲವನ್ನುತ್ತು ಬಳಲಿ ಬಿದ್ದಿರುವ ಅವುಗಳ ದುಸ್ಥಿತಿಯನ್ನು ಕಂಡಾಗ, ಆ ಕಾಮಧೇನುವಿನ ಮನಸ್ಸಿನಲ್ಲಿ ಮರುಕಹುಟ್ಟಿತು. ಆ ದುಃಖದಿಂದಲೇ ಅದು ಕಣ್ಣೀರು ಬಿಡುತ್ತಾ ರೋದಿಸುತ್ತಿತ್ತು. ಆ ಸಮಯಕ್ಕೆ ಸರಿಯಾಗಿ ಮಹಾತ್ಮನಾದ ದೇವೇಂದ್ರನು

---

[1] ಇಲ್ಲಿ "ಅಂಗಾದಂಗಾತ್ಸಂಭವಸಿ ಹೃದಯಾದಧಿಜಾಯಸೇ। ಆತ್ಮಾ ವೈ ಪುತ್ರನಾಮಾಸಿ" ಇತ್ಯಾದಿ ಶ್ರುತಿಪ್ರಮಾಣಗಳನ್ನು ಅನುಸಂಧಿಸಿಕೊಳ್ಳಬೇಕು. ಮತ್ತು ಅಂಗಪ್ರತ್ಯಂಗಜತ್ವವೆಂದರೆ, ಸರ್ವಾಂಗ ಸಂಬಂಧವಾದ ತೇಜಸ್ಸಿನಿಂದಲೂ ಹುಟ್ಟಿದುದೆಂದರ್ಥವು. "ಯದೇತದ್ರೇತಸ್ತತ್ಸರ್ವೇಭ್ಯೋಽಂಗೇಭ್ಯಸ್ತೇಜಸ್ಸಂಭೂತಂ" ಎಂದು ಶ್ರುತಿ ಪ್ರಮಾಣವು. ಸ್ತ್ರೀಯರಿಗಾದರೋ ಶೋಣಿತವೇ ರೇತಸ್ಸೆನಿಸುವುದು. "ಹೃದಯಾಚ್ಚ" ಎಂದು ಮೂಲದಲ್ಲಿರುವುದರಿಂದ, ಪ್ರತ್ಯಗಾತ್ಮಸ್ಥಾನವಾದ ಹೃದಯಪುಂಡರೀಕದಿಂದಲೂ ಪುತ್ರೋತ್ಪತ್ತಿಯಾಗುವುದೆಂದು ಪ್ರಮಾಣವು.

ವಿಮಾನಚಾರಿಯಾಗಿ ಕೆಳಗಡೆಯಲ್ಲಿ ಅಕಸ್ಮಾತ್ತಾಗಿ ಹೋಗುತ್ತಿರಲು, ಆ ಕಾಮಧೇನುವಿನ ಕಣ್ಣೀರಿನ ಹನಿಗಳು ಇಂದ್ರನ ಮೈಮೇಲೆ ಬಿದ್ದುವು. ವಾಸನೆಯಿಂದ ಘುಮಘುಮಿಸುತ್ತಿರುವ ಬಿಸಿಯಾದ ಜಲಬಿಂದುಗಳು ತನ್ನ ಮೈಮೇಲೆ ಬಿದ್ದುದನ್ನು ನೋಡಿ ಇಂದ್ರನು ದಿವ್ಯಧೇನುವು ರೋದನಮಾಡುವುದರಿಂದಲೇ ಈ ಕಣ್ಣೀರು ಸುರಿದಿರಬಹುದೆಂದು ನಿಶ್ಚಯಿಸಿ, ನಾಲ್ಕು ಕಡೆಗೂ ಕಣ್ಣಿಟ್ಟು ನೋಡಿದನು. ಆಗ ಆಕಾಶದಲ್ಲಿ ಕಾಮಧೇನುವು ಬಹಳ ದುಃಖದಿಂದ ದೀನಧ್ವನಿಯನ್ನು ಮಾಡುತ್ತಾ ಅಳುತ್ತಿರುವುದನ್ನು ಕಂಡನು. ಯಶಸ್ವಿನಿಯಾದ ಕಾಮಧೇನುವು ಮಹಾವ್ಯಸನದಿಂದ ಬೆಂದು ಗೋಳಿಡುತ್ತಿರುವುದನ್ನು ನೋಡಿ ಕೈಮುಗಿದು "ಎಲೈ ಪುಣ್ಯಧೇನುವೆ! ನಿನಗೆ ನಮ್ಮ ಕಡೆಯ ದೇವತೆಗಳಿಂದ ಯಾವಾಗಲೂ ಬಾಧೆಯುಂಟಾಗಲಾರದಲ್ಲವೆ? ಹಾಗಿದ್ದರೂ ಈ ನಿನ್ನ ದುಃಖಕ್ಕೆ ಕಾರಣವೇನು? ಸಮಸ್ತ ಭೂತಗಳಿಗೂ ಹಿತವನ್ನುಂಟುಮಾಡತಕ್ಕ ನೀನೇ ದುಃಖಿಸಬಹುದೆ?" ಎಂದನು. ದೇವೇಂದ್ರನ ಈ ಮಾತುಗಳನ್ನು ಕೇಳಿ ಕಾಮಧೇನುವು ಗಂಭೀರಧ್ವನಿಯಿಂದ ಆತನನ್ನು ಕುರಿತು "ಎಲೆ ದೇವೇಂದ್ರನೆ! ಬಿಟ್ಟಿತು! ಬಿಟ್ಟಿತು! ನಿಮ್ಮ ಕಡೆಯವರಿಂದ ನನಗೆ ಭಯವೆಂದರೇನು? ಅದನ್ನು ಬಾಯಿಯಿಂದಲೂ ಹೇಳಬಾರದು. ನಿಮ್ಮಲ್ಲಿ ಯಾರೂ ನನ್ನನ್ನು ಹಿಂಸಿಸಲಿಲ್ಲ. ಈಗ ನನ್ನ ದುಃಖಕ್ಕೆ ಕಾರಣವೇ ಬೇರೆ! ಅದೋ! ಅಲ್ಲಿ ನೋಡು! ಭೂಮಿಯ ಮೇಲೆ ನನ್ನ ವಂಶದ ಎರಡು ಹೋರಿಗರುಗಳು ಕಷ್ಟಕ್ಕೆ ಸಿಕ್ಕಿ ಬಿದ್ದಿರುವುದನ್ನು ನೋಡಿ ನನಗೆ ಸಂಕಟವಾಯಿತು. ಆ ಕರುಗಳೆರಡೂ ಬಿಸಿಲಿನಲ್ಲಿ ಬಳಲಿ ಕಂದಿ ಕೃಶವಾಗಿರುವುವು. ಹೀಗಿದ್ದರೂ ಬಿಡದೆ ಕರ್ಷಕನೊಬ್ಬನು ಅವುಗಳನ್ನು ಹಿಂಸಿಸಿ ನೇಗಿಲನ್ನು ಕಟ್ಟಿ ಎಳೆಸುತ್ತಿದ್ದುದರಿಂದ ಅವು ಮೂರ್ಛೆ ಬಿದ್ದುವು. ಅವುಗಳ ಕಷ್ಟವನ್ನು ನೋಡಿ ನಾನು, ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳೆಂಬ ವಾತ್ಸಲ್ಯದಿಂದ ಹೀಗೆ ಸಂಕಟಪಡುತ್ತಿರುವೆನು. ಅವು ಭಾರವನ್ನೆಳೆಯುತಿದ್ದರೆ ನಾನು ಅದನ್ನು ನೋಡಿ ಸಹಿಸಲಾರೆನು. ಲೋಕದಲ್ಲಿ ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳಿಗಿಂತಲೂ ಪ್ರಿಯವಾದುದು ಬೇರೊಂದೂ ಇಲ್ಲವು' ಎಂದಿತು. ಇದನ್ನು ಕೇಳಿ ದೇವೇಂದ್ರನು ಮನಸ್ಸಿನಲ್ಲಿ 'ಅಹಾ! ಈ ಕಾಮಧೇನುವಿಗಾದರೋ ಈ ಪ್ರಪಂಚವೆಲ್ಲವೂ ತುಂಬಿಹೋಗುವಷ್ಟು ಅನೇಕ ಸಹಸ್ರ ಸಂಖ್ಯೆಯುಳ್ಳ ಮಕ್ಕಳು ಹುಟ್ಟಿರುವರು. ಹೀಗಿದ್ದರೂ ಈ ಎರಡು

ಕರುಗಳು ಕಷ್ಟಪಡುತಿದ್ದ ಮಾತ್ರಕ್ಕೆ ಈ ಧೇನುವು ಇಷ್ಟು ಸಂಕಟಪಡುತ್ತಿರುವುದಲ್ಲವೆ? ಇದನ್ನು ನೋಡಿದರೆ ಲೋಕದಲ್ಲಿ ಮಕ್ಕಳಿಗಿಂತ ಮೇಲಾದ ಪ್ರಿಯವಸ್ತುವು ಬೇರೊಂದು ಇಲ್ಲವೆಂದೇ ತೋರುವುದು" ಎಂದು ನಿಶ್ಚಯಿಸಿಕೊಂಡನು. ಎಲೆ ನಿರ್ದಯಳೆ! ಎಣೆಯಿಲ್ಲದ ನಡತೆಯುಳ್ಳವಳಾಗಿ, ಸದ್ಗುಣಭರಿತಳಾಗಿ, ಆಶ್ರಿತರ ಕೋರಿಕೆಗಳನ್ನೆಲ್ಲಾ ಆಗಾಗಲೇ ಕೈಗೂಡಿಸತಕ್ಕ ಮಹಾ ಮಹಿಮೆಯುಳ್ಳವಳಾಗಿ, ದಿವ್ಯ ಲಕ್ಷಣಗಳಿಂದ ಕೂಡಿದ ಆ ಕಾಮಧೇನುವೂ ಕೂಡ, ಸ್ತ್ರೀಪುರುಷರಿಗೆ ಸ್ವಾಭಾವಿಕವಾದ ಮೈಥುನ ವ್ಯಾಪಾರ ಪರಂಪರೆಯಿಂದ ಲೋಕಸಂಗ್ರಹವನ್ನು ಮಾಡಬೇಕೆಂಬುದಕ್ಕಾಗಿ ಅನೇಕ ಪುತ್ರರನ್ನು ಪಡೆದಿದ್ದರೂ, ಆ ಎರಡು ಮಕ್ಕಳಿಗಾಗಿ ಎಷ್ಟು ಸಂಕಟಪಟ್ಟಳು! ನೋಡಿದೆಯಾ? ಹೀಗಿರುವಾಗ ರಾಮನೊಬ್ಬನನ್ನು ಪುತ್ರನನ್ನಾಗಿ ಪಡೆದು, ಆತನಲ್ಲಿಯೇ ತನ್ನ ಆಸೆಯೆಲ್ಲವನ್ನೂ ಇಟ್ಟುಕೊಂಡಿರತಕ್ಕ ಕೌಸಲ್ಯೆಯು ಆ ಒಬ್ಬ ಮಗನನ್ನೂ ಅಗಲಿಬಿಟ್ಟ ಮೇಲೆ ಅವಳ ದುಃಖಕ್ಕೆ ಪಾರವುಂಟೆ? ಆ ಕೌಸಲ್ಯೆಯು ಬಹುಕಾಲದವರೆಗೆ ಮಕ್ಕಳಿಲ್ಲದೆ ಕೊನೆಗಾಲಕ್ಕೆ ಆ ಒಬ್ಬ ಮಗನನ್ನು ಪಡೆದಳು. ಆಕೆಯು ಮಹಾ ಪತಿವ್ರತೆಯು. ಅಂತವಳಿಗೆ ನೀನು ಪುತ್ರವಿರಹವೆಂಬ ಈ ಮಹಾ ವಿಪತ್ತು ತಂದಿಟ್ಟೆಯಲ್ಲವೆ? ಇದರಿಂದ ನೀನು ಈ ಲೋಕದಲ್ಲಿಯೇ ಅಲ್ಲದೆ, ಸತ್ತು ಪರಲೋಕಕ್ಕೆ ಹೋದ ಮೇಲೆಯೂ ದುಃಖವನ್ನನುಭವಿಸದಿರಲಾರೆ! ಇದು ನಿಜವು. ಎಲೆ ಕೈಕೇಯಿ? ನಾನಾದರೋ ಈಗ ಅಣ್ಣನಾದ ರಾಮನನ್ನೂ, ತಂದೆಯಾದ ದಶರಥನನ್ನೂ, ಯಾವ ಯಾವ ರೀತಿಯಲ್ಲಿ ಪೂಜಿಸಬೇಕೋ ಆ ರೀತಿಯಲ್ಲಿ ಪೂಜಿಸಿ, ಈಗ ನಿನ್ನಿಂದ ಅಳಿಸಿಹೋದ ಕೀರ್ತಿಯನ್ನು ಸಂಪಾದಿಸಿಕೊಳ್ಳುವೆನು. ಇದರಲ್ಲಿ ಸಂದೇಹವಿಲ್ಲ. ಈಗಲೇ ನಾನು ರಾಮನಿರುವ ಕಾಡಿಗೆ ಹೋಗಿ ಮಹಾ ಬಲಾಢ್ಯನಾದ ಆತನನ್ನು ನಾನೇ ಕರೆತಂದು, ಕೌಸಲ್ಯೆಯ ವಶಕೊಪ್ಪಿಸಿ, ತಾಪಸಯೋಗ್ಯವಾದ ಅರಣ್ಯಕ್ಕೆ ನಾನು ಹಿಂತಿರುಗಿ ಹೋಗುವೆನು. ಆತನಿಗೆ ಪ್ರತಿಯಾಗಿ ನಾನೇ ಕಾಡಿನಲ್ಲಿರುವೆನು. ಎಲೆ ಪಾಪಬುದ್ಧಿಯುಳ್ಳವಳೆ! ನೀನು ಮಾಡಿದ ಈ ಮಹಾ ಪಾಪ ಕೃತ್ಯವನ್ನು ನಾನು ಎಂದಿಗೂ ತಡೆಯಲಾರೆನು. ರಾಮನ ಅಗಲಿಕೆಗಾಗಿ ಈ ಪರಿಜನರೆಲ್ಲರೂ ಕಣ್ಣೀರುಬಿಟ್ಟು ಅಳುತ್ತಿದ್ದರೆ ಅದನ್ನು ನೋಡಿ ನಾನು ಎಂದಿಗೂ ಸಹಿಸಲಾರೆನು. ಎಲೆ ದುಷ್ಟೆ! ಈ ಕಾರ್ಯವು ನಿನಗಿಷ್ಟವಿಲ್ಲದ ಪಕ್ಷದಲ್ಲಿ, ನೀನು ಬೆಂಕಿ

ಯಲ್ಲಿ ಬಿದ್ದಾದರೂ ಪ್ರಾಣವನ್ನು ಬಿಡು! ದೇಶಭ್ರಷ್ಟಳಾಗಿ ದಂಡಕಾರಣ್ಯ ಕ್ಕಾದರೂ ಹೋಗಿರು! ಕೊರಳಿಗೆ ನೇಣನ್ನಾದರೂ ಹಾಕಿಕೊಂಡು ಪ್ರಾಣವನ್ನು ಬಿಡು! ಇದನ್ನು ಬಿಟ್ಟರೆ ನಿನಗೆ ಬೇರೆ ಗತಿಯಿಲ್ಲವು. ನಾನಾದರೋ ಸತ್ಯ ಪರಾಕ್ರಮನಾದ ಆ ರಾಮನಿಗೇ ರಾಜ್ಯವನ್ನೊಪ್ಪಿಸಿ, ಈ ಲೋಕಾಪವಾದವನ್ನು ತಪ್ಪಿಸಿಕೊಂಡು, ನಿರ್ದೋಷಿಯೆನಿಸಿ ಕೃತಾರ್ಥನಾಗುವೆನು" ಎಂದು ಹೇಳಿ, ಭರತನು ಕಾಡಿನಲ್ಲಿ ಅಂಕುಶಾದ್ಯಾಯುಧಗಳಿಂದ ಪೀಡಿಸಲ್ಪಟ್ಟು ಕೋಪದಿಂದ ಕೂಗಿಡುವ ಮದ್ದಾನೆಯಂತೆ ಬಹು ಕ್ರುದ್ಧನಾಗಿ, ಹಾವಿನಂತೆ ಉದ್ದವಾಗಿ ನಿಟ್ಟುಸಿರನ್ನು ಬಿಡುತ್ತ ಹಾಗೆಯೇ ಮೂರ್ಛೆಹೋಗಿ ನೆಲದ ಮೇಲೆ ಬಿದ್ದನು. ಇಷ್ಟರಲ್ಲೇ ರಾಜಕುಮಾರನಾದ ಭರತನ ಕಣ್ಣುಗಳೆರಡೂ ಕೆಂಡದಂತೆ ಕೆಂಪಾದುವು. ಬಟ್ಟೆಗಳೆಲ್ಲವೂ ಸಡಿಲಿದವು. ಆತನ ಮೈ ಮೇಲಿದ್ದ ಸರ್ವಾಭರಣ ಗಳೂ ಅಲ್ಲಲ್ಲಿ ಚದರಿ ಬಿದ್ದಿರಲು, ಉತ್ಸವಾಂತದಲ್ಲಿ ಕೆಳಗೆ ಬಿದ್ದ ಇಂದ್ರಧ್ವಜ ದಂತೆ ನೆಲದ ಮೇಲೆ ಬಿದ್ದಿದ್ದನು.

ಇಲ್ಲಿಗೆ ಎಪ್ಪತ್ತನಾಲ್ಕನೆಯ ಸರ್ಗವು.

ಭರತ ಶತ್ರುಘ್ನರಿಬ್ಬರೂ ಕೌಸಲ್ಯೆಯಬಳಿಗೆ ಹೋದುದು. ಭರತನು ಕೌಸಲ್ಯೆಯೊಡನೆ ರಾಮನನ್ನು ಕರೆತರುವುದಾಗಿ ಶಪಥಮಾಡಿದುದು.

ವೀರ್ಯವಂತನಾದ ಭರತನು ಬಹಳ ಹೊತ್ತಿನಮೇಲೆ ಚೇತರಿಸಿಕೊಂಡು, ಕಣ್ಣೀರುಬಿಡುತ್ತ ಬಹುದೈನ್ಯದಿಂದ ತಾಯಿಯಾದ ಕೈಕೇಯಿಯನ್ನು ನೋಡಿ ತಾನು ಬಂದ ವೃತ್ತಾಂತವನ್ನು ನೋಡುವುದಕ್ಕಾಗಿ ಮೊದಲೇ ಅಲ್ಲಿಗೆ ಬಂದು ನಿಂತಿದ್ದ ಮಂತ್ರಿಗಳ ನಡುವೆ ಆಕೆಯನ್ನು ನಿಂದಿಸುತಿದ್ದನು. ಕೊನೆಗೆ ಅವರೆಲ್ಲರೂ ಕೇಳುತ್ತಿರುವಹಾಗೆಯೇ "ನಾನು ಎಂದಿಗೂ ರಾಜ್ಯವನ್ನು ಅಪೇಕ್ಷಿಸಿದವನಲ್ಲ! ನಾನು ಇದಕ್ಕಾಗಿ ಈ ನನ್ನ ತಾಯಿಯೊಡನೆ ತಂತ್ರವನ್ನೂ ಆಲೋಚಿಸಿದವನಲ್ಲ! ನನ್ನ ತಂದೆಯಾದ ದಶರಥರಾಜನು ನನಗೆ ಅಭಿಷೇಕವನ್ನು ಮಾಡುವುದಾಗಿ ಸಂಕಲ್ಪಿಸಿದ ಅಂಶವೂ ನನಗೆ ಸ್ವಲ್ಪಮಾತ್ರವೂ ತಿಳಿಯದು. ನಾನು ಎಲ್ಲಿಯೋ ದೂರದೇಶದಲ್ಲಿ ಈ ಶತ್ರುಘ್ನನೊಡನೆ ವಾಸಮಾಡುತ್ತಿದ್ದೆನು. ಮಹಾತ್ಮನಾದ ರಾಮನು ವನವಾಸಕ್ಕಾಗಿ ಹೊರಟುಹೋದ ವಿಷಯವೂ ನನಗೆ ತಿಳಿಯದು.

ಆ ರಾಮನೊಡನೆ ಸೀತಾಲಕ್ಷ್ಮಣರಿಬ್ಬರೂ ಯಾವ ಕಾರಣಕ್ಕಾಗಿ ಹೋದರೆಂಬ ಅಂಶವನ್ನೂ ನಾನು ಕಾಣೆನು ” ಎಂದು ಗಟ್ಟಿಯಾಗಿ ಕೂಗಿ ರೋದನಮಾಡಲಾರಂಭಿಸಿದನು. ಈ ಶಬ್ದವು ಕೌಸಲ್ಯೆಯ ಅಂತಃಪುರಕ್ಕೆ ಮುಟ್ಟಿತು. ಇದನ್ನು ಕೇಳಿದೊಡನೆಯೇ ಕೌಸಲ್ಯೆಯು ಸಮೀಪದಲ್ಲಿದ್ದ ಸುಮಿತ್ರೆಯನ್ನು ನೋಡಿ, “ ಎಲೆಸುಮಿತ್ರೆ ! ಅದೋ ಅಲ್ಲಿ ಕೇಳಿದೆಯಾ ! ಭರತನ ಧ್ವನಿಯಾಗುತ್ತಿರುವುದು. ಕ್ರೂರೆಯಾದ ಆ ಕೈಕೇಯಿಯ ಮಗನು ಮಾವನ ಮನೆಯಿಂದ ಹಿಂತಿರುಗಿ ಬಂದಿರುವಂತೆ ತೋರುತ್ತಿದೆ. ಆದರೆ ಭರತನು ಬಹಳ [1] ದೂರದೃಷ್ಟಿಯಿಂದ ಆಲೋಚಿಸತಕ್ಕವನು. ಕೈಕೇಯಿಯ ಮಾರ್ಗವು ಆತನಿಗೆ ಎಂದಿಗೂ ಸರಿಬೀಳದು. ಆದುದರಿಂದ ಈಗಲೇ ಆತನನ್ನು ನೋಡಬೇಕೆಂದು ನನಗೆ ಬಹಳ ಕುತೂಹಲವಿರುವುದು ” ಎಂದು ಹೇಳುತ್ತ, ವ್ಯಸನದಿಂದ ಬಣ್ಣಗುಂದಿ ಕಂದಿ ಕೃಶಳಾಗಿದ್ದ ಆಕೆಯು, ಆಗಲೇ ಸುಮಿತ್ರೆಯೊಡಗೂಡಿ ಭರತನಿದ್ದ ಕಡೆಗೆ ಹೊರಟು ಬರುತ್ತಿದ್ದಳು. ಇವಳಿಗಾದರೋ ದುಃಖದಿಂದ ದೇಹದಮೇಲೆ ಪ್ರಜ್ಞೆ ಇಲ್ಲದಂತಾಗಿ ಮೈಯೆಲ್ಲವೂ ನಡುಗುತಿತ್ತು ! ಇಷ್ಟರೊಳಗಾಗಿ ಭರತನೂ ಶತ್ರುಘ್ನನೊಡಗೂಡಿ ಕೌಸಲ್ಯೆಯ ಅಂತಃಪುರದ ಕಡೆಗೆ ಹೊರಟು ಬರುತ್ತಿದ್ದನು. ಹೀಗೆ ಭರತಶತ್ರುಘ್ನರಿಬ್ಬರೂ ಕೌಸಲ್ಯೆಯ ಅಂತಃಪುರವನ್ನು ಪ್ರವೇಶಿಸುವುದರೊಳಗಾಗಿ, ಇದಿರಾಗಿ ಬರುತ್ತಿದ್ದ ಆಕೆಯನ್ನು ಕಂಡರು. ಇವರು ಒಬ್ಬರಿಗೊಬ್ಬರು ಸಂಧಿಸಿ ನೋಡಿದಮೇಲೆ ಅವರೆಲ್ಲರಿಗೂ ಮೊದಲಿದ್ದ ದುಃಖವು ಮರುಕೊಳಿಸಿ ಮಹಾಸಂಕಟವುಂಟಾಯಿತು. ಆಗ ದುಃಖದಿಂದ ಮೈಮರೆತು ಕೆಳಗೆಬಿದ್ದು ಗೋಳಿಡುತ್ತಿರುವ ಪೂಜ್ಯೆಯಾದ ಕೌಸಲ್ಯೆಯನ್ನು ಭರತ ಶತ್ರುಘ್ನರಿಬ್ಬರೂ ನೋಡಿ ತಾವೂ ದುಃಖಾತಿಶಯದಿಂದ ಪ್ರಲಾಪಿಸುತ್ತಾ ಆಕೆಯನ್ನು ಎತ್ತಿ ಸಮಾಧಾನಪಡಿಸಿದರು. ಆಗ ಕೌಸಲ್ಯೆಯು ವ್ಯಸನವನ್ನು ತಡೆಯಲಾರದೆ ಭರತನನ್ನು ನೋಡಿ “ ಎಲೈ ಭರತನೆ! ರಾಜ್ಯದ ಮೇಲಿನ ಲೋಭದಿಂದ ತತ್ತಳಿಸುತ್ತಿದ್ದ ನಿನ್ನ ಕೋರಿಕೆಯು ಕೈಗೂಡಿತೆ? ಇನ್ನು ನಿಷ್ಕಂಟಕವಾದ ರಾಜ್ಯವನ್ನು ಕೈಸೇರಿಸಿಕೊಂಡು ನೀನೇ ಯಥೇಷ್ಟವಾಗಿ ಅನುಭವಿಸಬಹುದು! ನಿನ್ನ ತಾಯಿಯಾದ ಕೈಕೇಯಿಯು ಎಷ್ಟೋ ತಂತ್ರವನ್ನು ಮಾಡಿ ಇಷ್ಟು

---

1 ಇಲ್ಲಿ “ ದೀರ್ಘದರ್ಶಿವತ್ ” ಎಂದು ಮೂಲವು. ಇದರಿಂದ ಭರತನಿಗೆ ವಿವಾಸನವು ಸಮ್ಮತವಿಲ್ಲವೆಂದು ಕೌಸಲ್ಯೆಯು ಮೊದಲೇ ತಿಳಿದುಕೊಂಡಿದ್ದುದಾಗಿ ಸೂಚಿತವಾಗುವುದು.

ಬೇಗನೆ ನಿನಗೆ ರಾಜ್ಯವನ್ನು ಕೊಡಿಸಿ ಕೊಟ್ಟಿರುವಳು. ಅದು ಹೇಗಾದರೂ ಹೋಗಲಿ! ಅದಕ್ಕಾಗಿ ನಾನು ಚಿಂತಿಸುವುದಿಲ್ಲ. ನನ್ನ ಮಗನಿಗೆ ನಾರುಮಡಿಯನ್ನುಡಿಸಿ ಕಾಡಿಗೆ ಕಳುಹಿಸಿದಳಲ್ಲವೆ? ಇದರಿಂದ ಆಕೆಗೆ ಲಾಭವೇನು? ಹಾ! ಕ್ರೂರ ದೃಷ್ಟಿಯುಳ್ಳ ಆ ಕೈಕೇಯಿಯು ರಾಮನನ್ನು ಕಾಡಿಗೆ ಕಳುಹಿಸದೆಯೇ ನಿನಗೆ ರಾಜ್ಯವನ್ನು ಕೊಡಿಸಬಾರದಾಗಿತ್ತೆ? ಇನ್ನು ಆಕೆಯ ಅಧಿಕಾರಕ್ಕೆ ತಡೆಯೇ ಇಲ್ಲವು. ಇನ್ನು ಆಕೆಯು ನನ್ನನ್ನೂ ಊರುಬಿಟ್ಟು ಹೊರಡಿಸದೇ ಬಿಡಳು. ಮಹಾ ಯಶಸ್ವಿಯಾಗಿ ಬಂಗಾರದಂತೆ ಮೈಬಣ್ಣವುಳ್ಳ ಆ ರಾಮನಿರತಕ್ಕ ಸ್ಥಳಕ್ಕೆ ನನ್ನನ್ನೂ ಕಳುಹಿಸದೆ ಬಿಡಳು! ಅಥವಾ ಅವಳು ನನ್ನನ್ನೂ ಕಳುಹಿಸುವುದೇನು? ನಾನೇ ಸುಮಿತ್ರೆಯೊಡಗೂಡಿ ರಾಮನಿರುವಕಡೆಗೆ ಹೋಗಿ ಸುಖವಾಗಿರುವೆನು. ದಶರಥನ [1] ಅಗ್ನಿಹೋತ್ರವನ್ನೂ ಆತನ ದೇಹವನ್ನೂ ತೆಗೆಸಿಕೊಂಡು ಆತನಿರುವ ಸ್ಥಳಕ್ಕೆ ನಾನೇ ಹೋಗುವೆನು. ಎಲೈ ಭರತನೇ! ನೀನಾದರೂ ಪುರುಷಶ್ರೇಷ್ಠನಾದ ನನ್ನ ಮಗನು ತಪಸ್ಸುಮಾಡುತ್ತಿರುವ ಸ್ಥಳಕ್ಕೆ ನನ್ನನ್ನು ಕರೆದುಕೊಂಡು ಹೋಗಿಬಿಡಲಾರೆಯಾ? ನಿನಗಂತೂ ಈಗ ವಿಶೇಷವಾದ ಧನಧಾನ್ಯ ಸಮೃದ್ಧಿಯಿಂದ ಕೂಡಿ ಗಜತುರಗ ಪದಾತಿಗಳಿಂದ ಪೂರ್ಣವಾದ ವಿಸ್ತಾರವಾದ ಕೋಸಲ ರಾಜ್ಯವೆಲ್ಲವೂ ಕೈಸೇರಿರುವುದು. ನಿನಗಾಗಿ ಈ ರಾಜ್ಯವನ್ನು ಆ ಕೈಕೇಯಿಯು ಎಷ್ಟೋ ಕಷ್ಟಪಟ್ಟು ಕೊಡಿಸಿರುವಳು. ನಮಗೆ ಈ ಕೋರಿಕೆಯನ್ನಾದರೂ ಈಡೇರಿಸಿಕೊಡು?" ಎಂದಳು. ಹೀಗೆ ಕೌಸಲ್ಯೆಯು ಬಹು ಕ್ರೂರ ವಾಕ್ಯಗಳನ್ನಾಡಿ ತನ್ನನ್ನು ದೂರುತ್ತಿರಲು, ನಿರಪರಾಧಿಯಾದ ಭರತನು ಆ ಮಾತುಗಳನ್ನು ಕೇಳಿ, ವ್ರಣದಲ್ಲಿ ಸೂಜಿಯಿಟ್ಟಂತೆ ಮರ್ಮಭೇದಕವಾದ ಆ ವಾಕ್ಯಗಳಿಂದ ಬಹಳ ನೊಂದವನಾಗಿ, ಹಾಗೆಯೇ ಬೆಜ್ಜರಬಿದ್ದು, ಆ ಕೌಸಲ್ಯೆಯ ಕಾಲುಗಳ ಮೇಲೆ ಬಿದ್ದನು. ಬಹಳ ಹೊತ್ತಿನ ವರೆಗೆ ಮೈಮೇಲೆ ಪ್ರಜ್ಞೆಯಿಲ್ಲದಿದ್ದು, ಆಮೇಲೆ ಚೇತರಿಸಿಕೊಂಡು,

---

[1] ಅಗ್ನಿಹೋತ್ರವು ಜ್ಯೇಷ್ಠಭಾರ್ಯೆಗೇ ಅಧೀನವಾಗಿರುವುದರಿಂದಲೂ, ದಶರಥನು ಭರತನಿಂದ ತನಗೆ ಸಂಸ್ಕಾರಗಳು ನಡೆಯಕೂಡದೆಂದು ನಿಷೇಧಿಸಿದ್ದುದರಿಂದಲೂ, ಆ ಅಗ್ನಿಹೋತ್ರವನ್ನು ರಾಮನಿರುವ ಸ್ಥಳಕ್ಕೆ ಸಾಗಿಸಿಕೊಂಡು ಹೋಗುವಂತೆ ಕೌಸಲ್ಯೆಯೇ ಆಜ್ಞಾಪಿಸಿರುವಳು. ಇದರಿಂದ ಕೌಸಲ್ಯೆಯು "ಭರತನಿಗೆ ಕೈಕೇಯಿಯು ನಡೆಸಿದ ಪಾಪ ಕೃತ್ಯಗಳ ಸಂಬಂಧವಿರುವುದರಿಂದ ಆತನಿಗೆ ಸಂಸ್ಕಾರಾಧಿಕಾರವಿಲ್ಲ"ವೆಂದೂ ಸೂಚಿಸಿದಂತೆ ಗ್ರಹಿಸಬೇಕು.

ನಾನಾ ವಿಧವಾಗಿ ಪ್ರಲಾಪಿಸುತ್ತಿದ್ದನು. ತನ್ನ ಮುಂದೆ ನಿಂತು ದುಃಖದಿಂದ ಗೋಳಿಡುತ್ತಿರುವ ಕೌಸಲ್ಯೆಗೆ ಕೈಜೋಡಿಸಿ "ಅಮ್ಮಾ! ನಿರಪರಾಧಿಯಾಗಿ ಇಲ್ಲಿ ನಡೆದ ಯಾವುದೊಂದಂಶವನ್ನೂ ತಿಳಿಯದ ನನ್ನನ್ನು ಏಕೆ ನಿಷ್ಕಾರಣವಾಗಿ ನಿಂದಿಸುವೆ? ನನಗೆ ನಿನ್ನ ಮಗನಾದ ರಾಮನಲ್ಲಿರುವ ಪ್ರೇಮಾತಿಶಯವನ್ನು ನೀನು ಕಾಣೆಯಾ? ಆತನಲ್ಲಿ ನಾನು ದೃಢವಾದ ಭಕ್ತಿಯುಳ್ಳವನೆಂಬುದು ನಿನಗೆ ತಿಳಿಯದೆ? ಎಲೆ ಮಾತೆ! ಹೆಚ್ಚಾಗಿ ಹೇಳಿದುದರಿಂದೇನು? ಆಜ್ಞೆಯಿಟ್ಟು ಹೇಳುವೆನು ಕೇಳು. [1] ಯಾವನು ರಾಮನನ್ನು ಕಾಡಿಗೆ ಕಳುಹಿಸುವುದಾಗಿ ಉದ್ದೇಶಿಸಿದನೋ ಅವನಿಗೆ, [2] ಗುರುಮುಖವಾಗಿ ಶಾಸ್ತ್ರಾಭ್ಯಾಸವನ್ನು ಮಾಡಿ ಸಂಪಾದಿಸಿದ ಜ್ಞಾನವೆಲ್ಲವೂ ಯಾವಾಗಲೂ ಕಾರ್ಯಕಾರಿಯಾಗದೆ ಹೋಗಲಿ! ಸತ್ಯಸಂಧನಾಗಿ, ಸತ್ಪುರುಷರಿಗೆಲ್ಲಾ ಮೇಲಾದ ಆ ರಾಮನ ವನಪ್ರಯಾಣಕ್ಕೆ ಯಾವನು ಅಪೇಕ್ಷಿಸಿದನೋ, ಅಂತಹ ಮಹಾಪಾಪಿಯು, ಪಾಪಿಗಳಿಗೆ ಸೇವಾ ವೃತ್ತಿಯನ್ನು ಮಾಡಿದವನಂತೆಯೂ,[3] ಸೂರ್ಯನಿಗಿದಿರಾಗಿ ಮಲಮೂತ್ರ ವಿಸರ್ಜನೆಗಳನ್ನು ಮಾಡಿದವನಂತೆಯೂ, ನಿದ್ರೆಮಾಡುತ್ತಿರುವ ಗೋವನ್ನು ಕಾಲಿನಿಂದ ನೂಕಿದವನಂತೆಯೂ ಆಗಲಿ! [4] ಯಾವನು ರಾಮನನ್ನು ಕಾಡಿಗೆ

---

[1] ಇದು ಮೊದಲಾಗಿ ಭರತನು ತನ್ನ ಮೇಲೆ ಕೌಸಲ್ಯೆಯು ಹೊರಿಸಿದ ಅಪವಾದ ವನ್ನು ಪರಿಹರಿಸಿಕೊಳ್ಳುವುದಕ್ಕಾಗಿ ಶಪಥ ವಾಕ್ಯಗಳಿಂದ ಆಣೆಯಿಟ್ಟುಕೊಳ್ಳುವನು. ಈ ಶಪಥ ವಾಕ್ಯಗಳೆಲ್ಲವೂ ಲೋಕ ಸಾಮಾನ್ಯವಾಗಿ ಹೇಳಲ್ಪಟ್ಟಿದ್ದರೂ ಇವುಗಳನ್ನು ಭರತನು ತನಗೆ ಸಂಬಂಧಿಸಿದಂತೆ ಹೇಳಿದುದಾಗಿಯೇ ಗ್ರಹಿಸಬೇಕು. ಈ ವಾಕ್ಯಗಳಿಂದ ವಾಲ್ಮೀಕಿಯು ಲೋಕಕ್ಕೆ ಧರ್ಮವಿಶೇಷಗಳನ್ನು ತಿಳಿಸುವುದಾಗಿಯೂ ಗ್ರಹಿಸಬೇಕು.

[2] ಇದರಿಂದ ಸತ್ಪುರುಷರಲ್ಲಿ ಅಪರಾಧಪಟ್ಟವನಿಗೆ ಶ್ರಮಪಟ್ಟು ಸಂಪಾದಿಸಿದ ಶಾಸ್ತ್ರ ಜ್ಞಾನವು ನಶಿಸುವುದೆಂದು ಸಿದ್ಧವಾಗುವುದು.

[3] ನೀಚಸೇವೆಯನ್ನು ಮಾಡುವುದೂ, ಸೂರ್ಯನಿಗಿದಿರಾಗಿ ಕುಳಿತು ಮಲಮೂತ್ರ ವಿಸರ್ಜನೆಯನ್ನು ಮಾಡುವುದೂ, ನಿದ್ರಿಸುತ್ತಿರುವ ಗೋವನ್ನು ಕಾಲಿಂದ ಮುಟ್ಟುವುದೂ ಮಹಾ ದೋಷವೆಂದು ಸೂಚಿತವಾಗುವುದು. ನಿದ್ರಿಸುತ್ತಿರುವ ಹಸುವನ್ನು ಕಾಲಿಂದ ನೂಕ ಬಾರದೆಂಬುದರಿಂದ, ತನ್ನನ್ನು ತಿವಿಯುವುದಕ್ಕಾಗಿ ಬರುತ್ತಿರುವ ಗೋವನ್ನು ನಿಗ್ರಹಿಸಿದರೂ ದೋಷವಿಲ್ಲವೆಂದು ಸೂಚಿತವಾಗುವುದು.

[4] ಇದರಿಂದ ಕೆಲಸಕ್ಕೆ ತಕ್ಕಕೂಲಿಯನ್ನು ಕೊಡದಿರುವುದು ಮಹಾದೋಷವೆಂದು ಸೂಚಿತವಾಗುವುದು.

ಕಳುಹಿಸುವುದಕ್ಕೆ ಆಲೋಚನೆ ಕೊಟ್ಟನೋ ಅವನಿಗೆ, ಕೆಲಸಗಾರರಿಂದ ಅನೇಕ ಕಷ್ಟಕಾರ್ಯಗಳನ್ನು ಮಾಡಿಸಿಕೊಂಡು ಅವರಿಗೆ ತಕ್ಕ ಪ್ರತಿಫಲವನ್ನು ಕೊಡದೆ ಕಳುಹಿಸಿದ ಮಹಾ ಪಾಪಿಗಳಿಗುಂಟಾಗತಕ್ಕ ಗತಿಯುಂಟಾಗಲಿ! ಯಾವನು ರಾಮನನ್ನು ಕಾಡಿಗೆ ಕಳುಹಿಸುವುದಕ್ಕೆ ಸಮ್ಮತಿಸಿದನೋ, ಅವನಿಗೆ ದೇಶದ ಪ್ರಜೆಗಳೆಲ್ಲರನ್ನೂ ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳಂತೆ ಬಹು ಪ್ರೇಮದಿಂದ ಪೋಷಿಸುತ್ತಿದ್ದ ರಾಜನಿಗೆ ದ್ರೋಹವನ್ನು ಬಯಸಿದ [1] ಮಹಾ ಪಾಪಿಗುಂಟಾಗತಕ್ಕ ಗತಿಯುಂಟಾಗಲಿ! [2] ಯಾವನು ರಾಮನನ್ನು ಕಾಡಿಗೆ ಹೋಗಲು ಸಮ್ಮತಿಸಿದನೋ, ಅವನಿಗೆ ರಾಜ್ಯದ ಬೆಳೆಯಲ್ಲಿ ಆರನೆಯ ಭಾಗವನ್ನು ರಾಜಾದಾಯರೂಪವಾಗಿ ತೆಗೆದುಕೊಂಡೂ ಪ್ರಜೆಗಳನ್ನು ಧರ್ಮದಿಂದ ಪಾಲಿಸದ ರಾಜನಿಗುಂಟಾಗತಕ್ಕ ಮಹಾ ಪಾತಕವುಂಟಾಗಲಿ! [3] ಯಾವನು ರಾಮನನ್ನು ಕಾಡಿಗೆ ಕಳುಹಿಸಲು ಸಮ್ಮತಿಸಿದನೋ ಅವನಿಗೆ, ಯಾಗದಲ್ಲಿ ವ್ರತೋಪವಾಸನಿಷ್ಠರಾದ ಋತ್ವಿಕ್ಕುಗಳಿಗೆ ಯಾಗದಕ್ಷಿಣೆಯನ್ನು ಕೊಡುವುದಾಗಿ ವಾಗ್ದಾನಮಾಡಿ ಆಮೇಲೆ ಇಲ್ಲವೆಂದು ಹೇಳುವ ಮಹಾಪಾಪಿಗುಂಟಾಗತಕ್ಕ ಗತಿಯುಂಟಾಗಲಿ! [4] ಯಾವನು ರಾಮನನ್ನು ಕಾಡಿಗಟ್ಟು

---

[1] ಇದರಿಂದ ರಾಜದ್ರೋಹ ಮಹಾದೋಷವೆಂದು ಸಿದ್ಧವಾಗುವುದು.

[2] ಇದರಿಂದ ರಾಜನು ರೈತರಿಂದ ತೆರಿಗೆಯನ್ನು ತೆಗೆಯುವಾಗ, ಅವರವರ ಬೆಳೆಯಲ್ಲಿ ಆರನೆಯ ಭಾಗವನ್ನು ಮಾತ್ರ ತೆಗದುಕೊಳ್ಳಬೇಕೇ ಹೊರತು ಅದಕ್ಕಿಂತ ಹೆಚ್ಚಾಗಿ ತೆಗೆಯಬಾರದೆಂದೂ, ಈ ವಿಧಿಯನ್ನನುಸರಿಸಿ ರಾಜ್ಯಭಾರವನ್ನು ನಡೆಸುವ ದೊರೆಯು ದೋಷಿಯಾಗಲಾರನೆಂದೂ ಸೂಚಿತವು.

[3] ಇದರಿಂದ, ಒಬ್ಬರಿಗೆ ಒಂದು ವಸ್ತುವನ್ನು ಕೊಡುವುದಾಗಿ ಮೊದಲು ವಾಗ್ದಾನ ಮಾಡಿಬಿಟ್ಟು ಆ ಮೇಲೆ, ಕೊನೆಗೆ ಇಲ್ಲವೆಂದು ಆಶಾಭಂಗವನ್ನು ಮಾಡುವುದು ದೋಷವೆಂದೂ, ಅದರಲ್ಲಿಯೂ ವ್ರತೋಪವಾಸಶೀಲರಿಗೆ ಮಾತುಕೊಟ್ಟು ತಪ್ಪುವುದರಿಂದ ಇನ್ನೂ ಹೆಚ್ಚು ದೋಷವೆಂದೂ, ಯಾಗಗಳಲ್ಲಿ ಶ್ರೋತ್ರಿಯರಿಗೆ ಯಾಗ ದಕ್ಷಿಣೆಯನ್ನು ಕೊಡುವುದಾಗಿ ಒಪ್ಪಿ, ಆಮೇಲೆ ಇಲ್ಲವೆಂದು ಹೇಳುವುದು ಅದಕ್ಕಿಂತಲೂ ಮಹಾದೋಷವೆಂದೂ ಗ್ರಹಿಸಬೇಕು. ಒಂದುವೇಳೆ ತನಗಿಲ್ಲದುದರಿಂದ ತಾನು ಇತರರಿಗೆ ವಾಗ್ದಾನಮಾಡಿದುದನ್ನು ಕೊಡಲಾರದಿದ್ದರೂ ದೋಷಕ್ಕೆ ಭಾಗಿಯಾಗುವುದುಂಟು. ಹೀಗಿರುವಲ್ಲಿ ಇದ್ದೂ ಕೊಡಲಾರನೆಂದು ಹೇಳುವವನ ದೋಷಕ್ಕೆ ಮಿತಿಯೇ ಇಲ್ಲವೆಂದು ಭಾವವು.

[4] ಇದರಿಂದ ಯುದ್ಧದಲ್ಲಿ ಭಯಪಟ್ಟೋಡುವುದು, ಮಹಾದೋಷವೆಂದು ಸೂಚಿತವು.

ವುದಕ್ಕೆ ಪ್ರಯತ್ನಿಸಿದನೊ, ಅವನು ರಥಗಜತುರಗಾದಿಗಳಿಂದ ತುಂಬಿ, ವೀರ ಭಟರಿಂದ ಪರಿವೃತವಾದ ಯುದ್ಧರಂಗದಲ್ಲಿ ನಿಂತು ಯುದ್ಧಮಾಡುತ್ತಿರುವಾಗ, ಶತ್ರುಗಳಿಗೆ ಹೆದರಿ ವೀರಧರ್ಮವನ್ನು ತೊರೆದು ರಣರಂಗವನ್ನು ಬಿಟ್ಟು ಪಲಾಯಿತನಾಗುವ ಹೇಡಿಯುಂತಾಗಲಿ! 1 ಯಾವನು ರಾಮನ ವನಪ್ರಯಾಣಕ್ಕೆ ಸಮ್ಮತಿಸಿದನೋ ಅವನು ಬುದ್ಧಿವಂತನಾದ ಆಚಾರ್ಯರಿಂದ ಪರಲೋಕ ಸಾಧನಾರ್ಥವಾಗಿ ಉಪದೇಶಿಸಲ್ಪಟ್ಟ ವೇದಾಂತಾದಿಶಾಸ್ತ್ರರಹಸ್ಯಗಳೆಲ್ಲವನ್ನೂ ಮರೆತವನಾಗಲಿ! ಯಾವನು ರಾಮನ ವನಪ್ರಯಾಣಕ್ಕೆ ಸಮ್ಮತಿಸಿದನೋ ಆ ಮಹಾಪಾಪಿಯು, 2 ವಿಸ್ತಾರವಾದ ಭುಜದ ಕಟ್ಟುಳ್ಳವನಾಗಿಯೂ, ಸೂರ್ಯಚಂದ್ರರಂತೆ ಮಹಾತೇಜಸ್ವಿಯಾಗಿಯೂ ಇರುವ ರಾಮನು ಸಿಂಹಾಸನದಮೇಲೆ ಕುಳಿತು ಅಭಿಷಿಕ್ತನಾಗುವಾಗ ಆತನನ್ನು ನೋಡುವ ಭಾಗ್ಯವಿಲ್ಲದವನಾಗಿರಲಿ! 3 ರಾಮನ ವನಪ್ರಯಾಣಕ್ಕೆ ಸಮ್ಮತಿಸಿದವನಾವನೋ ಆತನು, ಪಾಯಸ, ಎಳ್ಳುಂಡೆ, ಮೇಕೆಯ ಮಾಂಸ ತಾಯಂದ ಪದಾರ್ಥಗಳನ್ನು, ದೇವತೆಗಳಿಗೂ, ಪಿತೃಗಳಿಗೂ, ಅತಿಥಿಗಳಿಗೂ ನಿವೇದನಮಾಡದೆ ಕುಕ್ಷಿಂಭರಿಯಾಗಿ, ನಿರ್ಘೃಣನಾಗಿ ತಾನೇ ತಿಂದವನಾಗಲಿ! ರಾಮನ ವನಪ್ರಯಾಣಕ್ಕೆ ಉದ್ದೇಶಿಸಿದವನು, ಗುರುಜನಗಳನ್ನು ಅವಮಾನಪಡಿಸಿದ ಪಾಪಿಯಾಗಲಿ! 4 ಅವನು ಗೋವುಗಳನ್ನು ಕಾಲಿನಿಂದ ನೂಕಿದವನಾಗಲಿ! ತನ್ನ ಗುರುಜನಗಳನ್ನು ತನ್ನ ಬಾಯಿಯಿಂದಲೇ ಬೈದವನಾಗಲಿ! ರಾಮನ ವನಪ್ರಯಾಣಕ್ಕೆ

---

1 ಇದರಿಂದ ತಾನು ಆಚಾರ್ಯಾನುಗ್ರಹದಿಂದ ಬಂದ ರಹಸ್ಯೋಪದೇಶಗಳನ್ನು ಮರೆತುಬಿಡುವುದೂ ಒಂದು ಮಹಾ ಪಾತಕವೆಂದು ಸ್ಪಷ್ಟವಾಗುವುದು.

2 ಇದರಿಂದ ರಾಮರಾಜ್ಯದಲ್ಲಿ ಪಾಪಿಗಳಿಗೆ ರಾಮದರ್ಶನವಾಗಲಾರದೆಂದು ಸೂಚಿತವಾಗುವುದು.

3 ದೇವತೆಗಳಿಗೂ, ಪಿತೃಗಳಿಗೂ, ಅತಿಥಿಗಳಿಗೂ ನಿವೇದಿಸದೆ, ತಾನೇ ಭಕ್ಷಿಸುವುದೂ, ಹಿರಿಯರನ್ನು ಅಪಮಾನಪಡಿಸುವುದೂ ಮಹಾದೋಷವೆಂದು ಇದರಿಂದ ಸೂಚಿತವು.

4 ಇದರಿಂದ ಗೋವುಗಳನ್ನು ಕಾಲಿಂದ ಮುಟ್ಟಬಾರದೆಂದೂ, ಇತರರು ತಮ್ಮ ಗುರುಜನಗಳನ್ನು ದೂಷಿಸುತ್ತಿರುವಾಗ ಅದನ್ನು ಕೇಳುತ್ತಿರುವುದೇ ದೋಷವೆಂದೂ, ತಾನೇ ತನ್ನ ಗುರುಹಿರಿಯರನ್ನು ನಿಂದಿಸುವುದು ಇನ್ನೂ ಮಹಾ ದೋಷವೆಂದೂ ನಂಬಿದ ಮಿತ್ರರಿಗೆ ದ್ರೋಹವನ್ನೆಣಿಸಬಾರದೆಂದೂ ಸೂಚಿತವು.

ಅನುಮತಿಸಿದವನು ನಂಬಿದ ಮಿತ್ರರಿಗೆ ಮೋಸಮಾಡಿದ ಮಿತ್ರದ್ರೋಹಿಯಾಗಲಿ! [1] ರಾಮನ ವನಪ್ರಯಾಣಕ್ಕೆ ಅನುಮತಿಸಿದವನಾವನೊ, ಅವನು ತನ್ನಲ್ಲಿ ನಂಬಿಕೆಯಿಂದ ಸ್ನೇಹಿತನೊಬ್ಬನು ಬಂದು ಹೇಳಿಕೊಂಡ ಪ್ಪಾಪವಾದವನ್ನು ಹೊರಕ್ಕೆಬಿಟ್ಟ ಮಹಾಪಾಪಿಯಾಗಲಿ! [2] ರಾಮನ ವನಪ್ರಯಾಣಕ್ಕೆ ಸಮ್ಮತಿಸಿದವನಾವನೋ ಅವನು, ಪರರಿಗೆ ಯಾವುದೊಂದುಪಕಾರವನ್ನು ಮಾಡದೆ, ಇತರರು ತನಗೆ ಮಾಡಿದ ಉಪಕಾರವನ್ನು ಮನಸ್ಸಿನಲ್ಲಿಯೂ ಎಣಿಸದ ಮಹಾಪಾಪಿಯಾಗಿ ಲೋಕದಲ್ಲಿ ಸಮಸ್ತಸಜ್ಜನರಿಂದಲೂ ಹೊರಗಾಗಿಸಲ್ಪಟ್ಟವನಾದರೂ, ನಾಚಿಕೆಯಿಲ್ಲದೆ ತಿರುಗುತ್ತಿರುವ ಭಂಡನಾಗಿರಲಿ! ಕೊರಲಿಗೆ ನೇಣು ಹಾಕಿಕೊಂಡು ದುರ್ಮರಣದಿಂದ ಆತ್ಮಹತ್ಯವನ್ನು ಮಾಡಿಕೊಂಡ ಮಹಾಪಾಪಿಯಾಗಿರಲಿ! ಪಾಪಕಾರ್ಯಗಳನ್ನು ಮಾಡಿಯೂ ಅದಕ್ಕೆ ಸ್ವಲ್ಪವಾದರೂ ಸಿಗ್ಗುಪಡದೆ, ಪಾಪಕ್ಕೆ ತಕ್ಕ ಪ್ರಾಯಶ್ಚಿತ್ತವನ್ನೂ ಮಾಡಿಕೊಳ್ಳದೆ, ತಿರುಗುವ ನಾಚಿಕೆಗೇಡಿಯಾಗಿರಲಿ! [3] ರಾಮನ ವನಪ್ರಯಾಣಕ್ಕೆ ಸಮ್ಮತಿಸಿದವನಾವನೋ ಅವನು, ತನ್ನ ಮನೆಯಲ್ಲಿ ಅನೇಕವಾಗಿ ಹೆಂಡಿರುಮಕ್ಕಳೂ, ಭೃತ್ಯವರ್ಗವೂ ತುಂಬಿದ್ದರೂ, ಅವರೆಲ್ಲರನ್ನೂ ವಂಚಿಸಿ ತಾನೊಬ್ಬನೇ

---

[1] ಇದರಿಂದ ಯಾರಾದರೂ ಒಬ್ಬರು ಬಂದು, ನಂಬಿಕೆಯಿಂದ ತನ್ನೊಡನೆ ರಹಸವಾಗಿ ತಮ್ಮ ದೋಷಗಳನ್ನು ಹೇಳಿಕೊಂಡಿದ್ದರೆ, ಅದನ್ನು ಹೊರಕ್ಕೆ ಬಿಡುವುದೂ ಮಿತ್ರದ್ರೋಹದಂತೆಯೇ ಮಹಾ ಪಾಪವೆಂದು ಸೂಚಿತವಾಗುವುದು.

[2] ಇದರಿಂದ, "ತನಗೆ ಸಾಧ್ಯವಾದ ಉಪಕಾರವನ್ನು ಎಂದಿಗೂ ಮಾಡದಿರಬಾರದು. ಇತರರು ತನಗೆ ಮಾಡಿದ ಉಪಕಾರವನ್ನು ಮರೆಯಲೂ ಬಾರದು. ನೇಣುಹಾಕಿಕೊಳುವುದೇ ಮೊದಲಾದ ದುರ್ಮರಣಗಳಿಂದ ಆತ್ಮಹತ್ಯೆ ಮಾಡಿಕೊಳ್ಳುವುದು ಮಹಾ ಪಾಪಕರವು. ಅಜ್ಞಾನದಿಂದ ಪಾಪವನ್ನು ಮಾಡಿದರೂ ಅದಕ್ಕೆ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳದಿರಬಾರದು, ನಾಚಿಕೆಗೇಡಿಯಾಗಿರಬಾರದು, ಅನೇಕ ಜನಗಳ ದ್ವೇಷಕ್ಕೆ ಗುರಿಯಾಗಬಾರದು," ಎಂಬ ನೀತಿವಿಶೇಷಗಳೆಲ್ಲವೂ ಸೂಚಿತವಾಗುವುವು.

[3] ಇದರಿಂದ ಬೇರೊಬ್ಬರು ಇದಿರಿಗಿದ್ದು ನೋಡುತ್ತಿರುವಾಗ, ಅವರಿಗಿಕ್ಕದೆ ಭೋಜ್ಯವಸ್ತುಗಳನ್ನು ತಾನೊಬ್ಬನೇ ಅನುಭವಿಸುವುದು ದೋಷವೆಂದೂ, ಅದರಲ್ಲಿಯೂ ತನ್ನ ಹೆಂಡಿರುಮಕ್ಕಳು ಮೊದಲಾದವರು ಇದಿರಿಗಿದ್ದು ನೋಡುತ್ತಿರುವಾಗ ಹಾಗೆ ಮಾಡುವುದು ಇನ್ನೂ ಮಹಾ ದೋಷವೆಂದೂ ಸೂಚಿತವಾಗುವುದು.

ಮೃಷ್ಟಾನ್ನವನ್ನು ಭುಜಿಸತಕ್ಕ ಹೊಟ್ಟೆಹೊರಕನಾಗಿರಲಿ!" [1] ರಾಮನ ವನಪ್ರಯಾಣಕ್ಕೆ ಸಮ್ಮತಿಸಿದವನಾವನೋ ಆತನು ಅನುರೂಪರಾದ ಭಾರ್ಯೆಯಿಲ್ಲದೆ, ಅಗ್ನಿಹೋತ್ರಾದಿಧರ್ಮಕಾರ್ಯಗಳನ್ನೂ ಅನುಷ್ಠಿಸದೆ ಸಂತಾನವೂ ಇಲ್ಲದೆ, ಉಭಯಲೋಕಭ್ರಷ್ಟನಾಗಿ ಸಾಯಲಿ! ರಾಮನ ವನಪ್ರಯಾಣಕ್ಕೆ ಸಮ್ಮತಿಸಿದವನಾವನೋ ಆತನು ಅಲ್ಪಾಯುಸ್ಸುಳ್ಳವನಾಗಿ, ಬದುಕಿರುವವರೆಗೂ ದುಃಖದಿಂದಲೇ ನರಳಿ ಮಕ್ಕಳಿಲ್ಲದೆ ಸಾಯಲಿ! [2] ರಾಮನ ವನಪ್ರಯಾಣಕ್ಕೆ ಸಮ್ಮತಿಸಿದವನಾವನೋ ಅವನಿಗೆ ರಾಜನನ್ನಾಗಲಿ, ಸ್ತ್ರೀಯರನ್ನಾಗಲಿ, ಮಕ್ಕಳನ್ನಾಗಲಿ, ಮುದುಕನನ್ನಾಗಲಿ ಕೊಂದ ಮಹಾಪಾತಕವುಂಟಾಗಲಿ! ಆತನು ತನ್ನನ್ನೇ ನಂಬಿ ಬದುಕುತಿದ್ದ ಭೃತ್ಯರನ್ನು ಪೋಷಿಸದೆ ತೊರೆದುಬಿಟ್ಟ ಪಾಪಿಯಾಗಿರಲಿ! [3] ರಾಮನ ವನಪ್ರಯಾಣಕ್ಕೆ ಅನುಮತಿಸಿದವನಾವನೋ ಆತನು, ಅರಗು, ಮದ್ಯಮಾಂಸಗಳು, ಲೋಹಗಳು, ವಿಷ, ಇವೇ ಮೊದಲಾದ ನಿಷಿದ್ಧವಸ್ತುಗಳನ್ನು ಮಾರಿ, ಕುಟುಂಬ ಭರಣವನ್ನು ಮಾಡತಕ್ಕವನಾಗಲಿ! [4] ರಾಮನ ವನಪ್ರಯಾಣಕ್ಕೆ ಸಮ್ಮತಿಸಿದವನಾವನೋ

---

1 ಈ ಮುಂದಿನ ವಾಕ್ಯಗಳಿಂದ ಸಜ್ಜನರಿಗೆ ಕೇಡನ್ನು ಬಯಸಿದವರಿಗೆ ಉತ್ತಮ ಭಾರ್ಯೆಯರು ಲಭಿಸುವುದಿಲ್ಲವೆಂದೂ, ಆತನಿಗೆ ಅಗ್ನಿಹೋತ್ರಾದಿ ಧರ್ಮಕಾರ್ಯಗಳೂ ನಿಷ್ಫಲವಾಗುವುವೆಂದೂ, ಅವನಿಗೆ ಸತ್ಸಂತಾನವೂ ಉಂಟಾಗಲಾರದೆಂದೂ, ಆತನು ಉಭಯಲೋಕ ಭ್ರಷ್ಟನಾಗುವನೆಂದೂ, ಅಲ್ಪಾಯುವಾಗುವನೆಂದೂ, ಯಾವಾಗಲೂ ದುಃಖಭಾಗಿಯಾಗಿರುವನೆಂದೂ ಸೂಚಿತವಾಗುವುದು.

2 ಇದರಿಂದ ರಾಜನನ್ನಾಗಲಿ, ಸ್ತ್ರೀಯರನ್ನಾಗಲಿ, ಬಾಲಕರನ್ನಾಗಲಿ, ಮುದುಕರನ್ನಾಗಲಿ ಕೊಲ್ಲುವುದು ಎಲ್ಲಾ ಕೊಲೆಗಳಿಗಿಂತಲೂ ಕ್ರೂರವಾದ ಮಹಾದೋಷವೆಂದೂ, ತನ್ನಲ್ಲಿ ಜೀವನಕ್ಕೆ ಸೇರಿಕೊಂಡಿರುವ ಭೃತ್ಯರನ್ನು ಪೋಷಿಸದಿರುವುದು ಮಹಾ ಪಾತಕವೆಂದೂ ಸೂಚಿತವಾಗುವುದು.

3 ಇದರಿಂದ, " ಲಾಕ್ಷಾಲವಣ ಮಾಂಸಾನಿ ವರ್ಜನೀಯಾನಿ ವಿಕ್ರಯೇ " ಇತ್ಯಾದಿ ಸ್ಮೃತಿವಾಕ್ಯಾನುಸಾರವಾಗಿ, ಅರಗು, ಉಪ್ಪು, ಮದ್ಯಮಾಂಸ, ಮೊದಲಾದುವುಗಳನ್ನು ವಿಕ್ರಯಿಸಿ ಜೀವನ ಮಾಡುವುದು ಮಹಾ ದೋಷವೆಂದು ಸೂಚಿತವಾಗುವುದು.

4 ಇದರಿಂದ ಯುದ್ಧದಲ್ಲಿ ಹೆದರಿ ಹಿಂತಿರುಗಿ ಹೋಗುವುದು ಮಹಾ ದೋಷವೆಂದೂ, ಹಾಗೆ ಹಿಂತಿರುಗಿ ಓಡಿದವನು ಬದುಕಿದರೂ ಕೊಲ್ಲಲ್ಪಟ್ಟರೂ ಮರಣ ಹೊಂದಿದವನಂತೆಯೇ ಆಗುವನೆಂದೂ ಊಹಿಸಬೇಕು.

ಆತನು, ಭಯಂಕರವಾದ ಯುದ್ಧದಲ್ಲಿ ಹೆದರಿ ಓಡಿಹೋಗುತ್ತಿರುವಾಗ ಬಲಾತ್ಕಾರದಿಂದ ಹಿಡಿದುತಂದು ಕೊಲ್ಲಲ್ಪಟ್ಟವನ ದುರ್ಗತಿಗೆ ಗುರಿಯಾಗಲಿ! [1] ಯಾವನು ರಾಮನ ವನಪ್ರಯಾಣಕ್ಕೆ ಸಮ್ಮತಿಸಿದನೋ ಆತನು ದಾರಿದ್ರ್ಯ ದಶೆಯಿಂದ ಕೈಯಲ್ಲಿ ಕಪಾಲವನ್ನು ಹಿಡಿದು, ನಾರುಬಟ್ಟೆಯನ್ನುಟ್ಟು ಹುಚ್ಚ ನಂತೆ ಊರೂರು ತಿರುಗಿ ಭಿಕ್ಷೆ ಬೇಡಿ ಬದುಕುವವನ ಬಾಳಿಗೀಡಾಗಲಿ! [2] ರಾಮನ ವನಪ್ರಯಾಣಕ್ಕೆ ಅನುಮತಿಸಿದವನಾವನೋ ಅವನು, ಯಾವಾ ಗಲೂ ಮದ್ಯಪಾಯಿಯಾಗಿ, ಜಾರನಾಗಿ, ಜೂಜುಗಾರನಾಗಿ ಕಾಮಕ್ರೋಧ ಗಳಿಗೊಳಗಾಗಿ ತಿರುಗುತ್ತಿರುವವನಂತಾಗಲಿ! ರಾಮನ ವನಪ್ರಯಾಣಕ್ಕೆ ಅನುಮತಿಸಿದವನಾವನೋ ಆತನು ಯಾವಾಗಲೂ ಧರ್ಮದಲ್ಲಿ ಮನಸ್ಸಿಡದೆ ಅಧರ್ಮವನ್ನೇ ಆಚರಿಸತಕ್ಕವನಾಗಲಿ! [3] ಅಂತವನ ದ್ರವ್ಯವೆಲ್ಲವೂ ಅಪಾತ್ರಕ್ಕೇ ವಿನಿಯೋಗವಾಗಲಿ! [4] ರಾಮನ ವನಪ್ರಯಾಣಕ್ಕೆ ಅನುಮತಿಸಿದವನ ಬಹು ಕಾಲದಿಂದ ಕಷ್ಟಪಟ್ಟು ಸಂಪಾದಿಸಿದ ದ್ರವ್ಯಗಳೆಲ್ಲವೂ ಕಳ್ಳರ ಪಾಲಾಗಲಿ! [5] ರಾಮನ ವನಪ್ರಯಾಣಕ್ಕೆ ಅನುಮತಿಸಿದವನಾವನೋ ಅವನು, ಉದಯಾ ಸ್ತಮಯಕಾಲಗಳಲ್ಲಿ ನಿದ್ರೆಮಾಡುತ್ತಿರುವವನ ಪಾಪಕ್ಕೆ ಗುರಿಯಾಗಲಿ! [6] ಯಾವನು ರಾಮನ ವನಪ್ರಯಾಣಕ್ಕೆ ಅನುಮತಿಸಿದನೋ ಅವನಿಗೆ, ಇತರರ

---

[1] ಇದರಿಂದ ಕಪಾಲವನ್ನು ಹಿಡಿದು ನಾರುಬಟ್ಟೆಯನ್ನುಟ್ಟು ಭಿಕ್ಷಾಟನಮಾಡಿ ಜೀವಿಸು ವುದು ದೋಷವೆಂದು ಸೂಚಿತವಾಗುವುದು. ಇದರಿಂದ ಕಾಪಾಲಿಕ ಮತವು ಮಹಾನಿಂದ್ಯ ವೆಂದೂ ಸೂಚಿಸಲ್ಪಟ್ಟಿರುವುದಾಗಿ ಗೋವಿಂದರಾಜೀಯ ವ್ಯಾಖ್ಯಾನವು.

[2] ಇದರಿಂದ ಕಾಮಕ್ರೋಧಗಳಿಗೆ ವಶನಾಗಿ, ಸ್ತ್ರೀದ್ಯೂತಮೃಗಯಾದಿ ವ್ಯಸನಗಳಲ್ಲಿ ಬೀಳುವುದು ಮಹಾ ದೋಷವೆಂದು ಸೂಚಿತವಾಗುವುದು.

[3] ಇದರಿಂದ ಅಪಾತ್ರಗಳಿಗೆ ಅಲ್ಪ ಸ್ವಲ್ಪ ದಾನ ಮಾಡಿದರೂ ದೋಷಿಯಾಗುವ ನೆಂದೂ, ಅಂತವರಿಗೆ ವಿಶೇಷವಾಗಿ ದಾನಮಾಡುವುದರಿಂದ ಮಹಾ ದೋಷವೆಂದೂ ಸೂಚಿಸಲ್ಪಡುವುದು.

[4] ಸತ್ಪುರುಷರಿಗೆ ಕೇಡುಮಾಡಿದವನ ಸ್ವತ್ತೆಲ್ಲವೂ ಕಳ್ಳರ ಪಾಲಾಗುವುದೆಂದು ಇದ ರಿಂದ ಸೂಚಿತವಾಗಿದೆ.

[5] ಸಂಧ್ಯಾ ಕಾಲಗಳಲ್ಲಿ ನಿದ್ರಿಸುವುದು ಮಹಾದೋಷವು.

[6] ಇತರರ ಮನೆಗೆ ಬೆಂಕಿಯಿಡುವುದು, ಗುರುದಾರಪರಿಗ್ರಹ. ಮಿತ್ರದ್ರೋಹ ಇವು ಮೂರೂ ಮಹಾಪಾತಕಗಳೆನಿಸುವುವು. ಸತ್ಪುರುಷರಿಗೆ ಕೇಡನ್ನುಂಟುಮಾಡುವುದರಿಂದಲೂ ಅಂತಹ ಪಾತಕವೇ ಸಂಭವಿಸುವುದೆಂದು ಸೂಚಿತವಾಗುವುದು.

ಮನೆಗೆ ಬೆಂಕಿಯಿಟ್ಟವನಿಗೂ, ಆಚಾರ್ಯಪತ್ನಿಯನ್ನು ಪರಿಗ್ರಹಿಸಿದವನಿಗೂ ಮಿತ್ರದ್ರೋಹಿಯಾದವನಿಗೂ ಸಂಭವಿಸತಕ್ಕ ಮಹಾಪಾತಕವುಂಟಾಗಲಿ! [1]ರಾಮನ ವನಪ್ರಯಾಣಕ್ಕೆ ಸಮ್ಮತಿಸಿದವನಾವನೋ ಅವನು, ದೇವತೆಗಳಿಗೂ, ಪಿತೃಗಳಿಗೂ ತಂದೆ ತಾಯಿಗಳಿಗೂ ತಕ್ಕ ಸತ್ಕಾರಗಳನ್ನು ಮಾಡದವನ ಮಹಾ ಪಾಪಕ್ಕೆ ಗುರಿಯಾಗಲಿ! [2] ಯಾವನು ರಾಮನ ವನಪ್ರಯಾಣಕ್ಕೆ ಅನುಮತಿಸಿ ದನೋ ಅವನು, ಸಜ್ಜನರ ಗೋಷ್ಠಿಗೂ ಅರ್ಹನಲ್ಲದೆ, ಸಜ್ಜನರ ಕೀರ್ತಿಗೂ ಪಾತ್ರನಲ್ಲದೆ, ಸತ್ಕಾರ್ಯಗಳಿಗೂ ಹೊರಗಾಗಿ ಹೋಗಲಿ! [3] ದೀರ್ಘಬಾಹು ವಾಗಿಯೂ, ವಿಶಾಲೋರಸ್ಕನಾಗಿಯೂ ಇರುವ ರಾಮನ ವನಪ್ರಯಾಣಕ್ಕೆ ಅನುಮತಿಸಿದವನಾವನೋ ಅವನು, ಮಾತೃಶುಶ್ರೂಷೆಯನ್ನು ಬಿಟ್ಟುದರಿಂದ ಸಂಭವಿಸಬಹುದಾದ ಅಧರ್ಮಕ್ಕೆ ಪಾತ್ರನಾಗಿರಲಿ! [4] ಯಾವನು ರಾಮನ ವನಪ್ರಯಾಣಕ್ಕೆ ಕಾರಣನೋ ಅವನು, ಬಹುಕುಟುಂಬಿಯಾಗಿ, ದರಿದ್ರನಾಗಿ, ಯಾವಾಗಲೂ ರೋಗಪೀಡಿತನಾಗಿ ತನ್ನ ಜೀವನ ಕಾಲವೆಲ್ಲಾ ಕಷ್ಟಪಡುತ್ತಿ ರಲಿ! [5]ರಾಮನ ವನಪ್ರಯಾಣಕ್ಕೆ ಅನುಮತಿಸಿದವನಾವನೋ ಅವನು

---

1 ಇವುಗಳಿಂದ, ದೇವತೆಗಳಿಗೆ ನಿತ್ಯವೂ ಅಗ್ನಿಹೋತ್ರಾದಿಕಾರ್ಯಗಳಿಂದ ಪೂಜೆ ಮಾಡಬೇಕೆಂದೂ, ಪಿತೃದೇವತೆಗಳಿಗೆ ಗ್ರಹಣಸಮಯಗಳಲ್ಲಿಯೂ, ಅವರವರ ಮರಣ ತಿಥಿಗಳಲ್ಲಿಯೂ ಶ್ರಾದ್ಧಾದಿಗಳನ್ನಿಡಬೇಕೆಂದೂ, ಬದುಕಿರುವ ತಾಯಿತಂದೆಗಳಿಗೆ ಶುಶ್ರೂಷೆ ಯನ್ನು ಮಾಡಬೇಕೆಂದೂ, ಇವುಗಳನ್ನು ನಡೆಸದಿರುವುದು ಮಹಾಪಾತಕವೆಂದೂ ಸೂಚಿತ ವಾಗುವುದು.

2 ಇದರಿಂದ "ಸತ್ಪುರುಷ ಸಹವಾಸವನ್ನು ಬಿಡಬಾರದು. ಸತ್ಪುರುಷರ ನಿಂದೆಗೊಳ ಗಾಗಬಾರದು. ಸತ್ಪುರುಷರು ಹೋದದಾರಿಯನ್ನನುಸರಿಸದಿರಬಾರದು" ಎಂಬ ಮೂರು ನೀತಿಗಳೂ ವ್ಯಕ್ತವಾಗುವುವು.

3 ಇದರಿಂದ ಮಾತೃಶುಶ್ರೂಷೆಯನ್ನು ಮಾಡದಿರುವುದು ಮಹಾದೋಷವೆಂದು ಸೂಚಿತವಾಗುವುದು.

4 ಸತ್ಪುರುಷರಿಗೆ ಕೇಡನ್ನು ಬಯಸಿದವನು ಕೇವಲ ದರಿದ್ರನಾಗುವುದಲ್ಲದೆ, ಅದರ ಮೇಲೆ ಬಹುಕುಟುಂಬಿಯಾಗಿ, ಭಿಕ್ಷಾಟನಾದಿಗಳಿಗೂ ಅವಕಾಶವಿಲ್ಲದಂತೆ ಸದಾ ರೋಗ ಪೀಡಿತನಾಗಿ ಕಷ್ಟಪಡಬೇಕಾಗುವುದೆಂದು ಇದರಿಂದ ಸೂಚಿತವು.

5 ಇದರಿಂದ ತಮ್ಮಲ್ಲಿಗೆ ಬಂದು ದೈನ್ಯದಿಂದ ಯಾಚಿಸಿದವರಿಗೆ ತಾತ್ಕಾಲಿಕವಾದ ಆಪ್ಯಾಯನಕ್ಕಾಗಿ ಆಶೆಯನ್ನು ತೋರಿಸಿ, ಕೊನೆಗೆ ಆಶಾಭಂಗವನ್ನುಂಟುಮಾಡುವುದು ಮಹಾದೋಷವೆಂದು ಸೂಚಿತವಾಗಿದೆ.

ತನ್ನಲ್ಲಿ ಕಾರ್ಯಾರ್ಥಿಗಳಾಗಿ ಬಂದು ತನ್ನನ್ನೇ ಕಣ್ಣೆತ್ತಿನೋಡಿ ನಿರೀಕ್ಷಿಸುತ್ತ, ದೈನ್ಯದಿಂದ ಆಗಾಗ ತನ್ನನ್ನು ಬೇಡಿ, ತನ್ನಲ್ಲಿಯೇ ಆಶೋತ್ತರವನ್ನು ಇಟ್ಟು ಕೊಂಡಿರುವವರಿಗೆ ಬಹುಕಾಲದಮೇಲೆ ಆಶಾಭಂಗವನ್ನು ಮಾಡುವವನ ದುರ್ಗತಿಗೀಡಾಗಲಿ! [1]ರಾಮನ ವನಪ್ರಯಾಣಕ್ಕೆ ಅನುಮತಿಸಿದವನಾವನೋ ಅವನು ಯಾವಾಗಲೂ ಕಪಟಿಯಾಗಿ, ಕ್ರೂರನಾಗಿ, ಅಶುದ್ಧನಾಗಿ, ಅಧರ್ಮ ಪರಾಯಣನಾಗಿ, ರಾಜಭಯದಿಂದ ತಲೆತಪ್ಪಿಸಿಕೊಂಡು ತಿರುಗುವವನಾಗಿರಲಿ! [2]ಯಾವನು ರಾಮನ ವನಪ್ರಯಾಣಕ್ಕೆ ಉದ್ದೇಶಿಸಿದನೋ ಅವನು, ಋತು ಸ್ನಾತೆಯಾಗಿ ಋತುಕಾಲನಿಯಮವನ್ನನುಸರಿಸಿ ತನ್ನಲ್ಲಿಗೆ ಬಂದ ಪತಿವ್ರತೆ ಯಾದ ಪತ್ನಿಯನ್ನು ತಿರಸ್ಕರಿಸಿದ ದುಷ್ಟಾತ್ಮನಂತಾಗಲಿ! [3]ಯಾವನು ರಾಮನ ವನಪ್ರಯಾಣಕ್ಕೆ ಕಾರಣನೋ ಅವನು, ಧರ್ಮದಲ್ಲಿ ದೃಷ್ಟಿಯಿಡದೆ ಕೈಹಿಡಿದ ಹೆಂಡತಿಯನ್ನು ಬಿಟ್ಟು ಪರಸ್ತ್ರೀಯರನ್ನು ಹುಡುಕಿಕೊಂಡು ಹೋಗುವ ಮಹಾಪಾಪಿಯಂತಾಗಲಿ! [4]ಯಾವನು ರಾಮನ ವನಪ್ರಯಾಣಕ್ಕೆ ಉದ್ದೇಶಿಸಿದನೋ ಅವನು, ಸಂತಾನವನ್ನು ಕಳೆದುಕೊಂಡ ಬ್ರಾಹ್ಮಣನಿಗುಂ ಟಾಗತಕ್ಕ ಪಾಪವನ್ನು ಹೊಂದಲಿ! [5]ಯಾವನು ರಾಮನನ್ನು ಕಾಡಿಗೆ ಕಳುಹಿಸುವುದಕ್ಕೆ ಕಾರಣಭೂತನೋ ಅವನು ಕುಡಿಯುವ ನೀರನ್ನು ಕೆಡಿಸುವ

---

[1] ಇದರಿಂದ ರಾಜವಿರುದ್ಧಗಳಾದ ಕಾರ್ಯಗಳನ್ನು ಮಾಡಬಾರದೆಂದೂ, ಸತ್ಪುರುಷ ರನ್ನು ಬಾಧಿಸುವುದರಿಂದ, ಅಧಾರ್ಮಿಕತ್ವ, ಕಾಠಿನ್ಯ, ಕಾಪಟ್ಯ, ಅಶುಚಿತ್ವ, ಮುಂತಾದ ದುರ್ಗುಣಗಳೆಲ್ಲವೂ ಬರುವುವೆಂದೂ ಸೂಚಿತವು.

[2] ಇದರಿಂದ ಪತಿವ್ರತೆಯರಾದ ತಮ್ಮ ಪತ್ನಿಯರು ಋತುಸ್ನಾನವನ್ನು ಮಾಡಿ, ಆ ಸ್ನಾನದಿನದಲ್ಲಿ ಮೋಹಗೊಂಡು ಬಂದಾಗ, ಅವರನ್ನು ತಿರಸ್ಕರಿಸುವುದು ಮಹಾಪಾತಕ ವೆಂದು ಸೂಚಿತವಾಗುವುದು.

[3] ಪರಸ್ತ್ರೀ ಸಮಾಗಮವೇ ಪಾಪವು. ಅದರಲ್ಲಿಯೂ ತನ್ನ ಕೈಹಿಡಿದ ಹೆಂಡತಿಯಿರು ವಾಗಲೂ ಅವಳನ್ನು ಬಿಟ್ಟು ಪರಸ್ತ್ರೀಯರನ್ನಪೇಕ್ಷಿಸುವುದು ಮಹಾದೋಷವೆಂದು ಸೂಚಿತ ವಾಗಿದೆ.

[4] ಇದರಿಂದ ತಮ್ಮ ತಮ್ಮ ಭಾರ್ಯೆಯರಲ್ಲಿ ಸಂತಾನವನ್ನು ಪಡೆದಹೊರತು ಪಿತೃ ಋಣವು ತೀರಲಾರದೆಂದೂ, ಈ ಕಾರಣದಿಂದ ಪುತ್ರವತಿಯಾದ ಭಾರ್ಯೆಯನ್ನು ತೊರೆದು ಬಿಡುವುದು ಮಹಾದೋಷವೆಂದೂ ಸೂಚಿತವಾಗುವುದು.

[5] ಕುಡಿಯುವ ನೀರನ್ನು ಕೆಡಿಸುವುದು, ಇತರರಿಗೆ ವಿಷಹಾಕುವುದು, ಅವೆರಡೂ ಮಹಾಪಾತಕಗಳೆಂದು ಇದರಿಂದ ಸೂಚಿತವು.

ವನಿಗೂ, ಆಹಾರಪದಾರ್ಥದಲ್ಲಿ ವಿಷವನ್ನು ಕಲಸಿಕೊಟ್ಟವನಿಗೂ ಉಂಟಾಗ ತಕ್ಕ ಮಹಾಪಾಪಕ್ಕೆ ಗುರಿಯಾಗಲಿ! [1]ರಾಮನ ವನಪ್ರಯಾಣಕ್ಕೆ ಯಾವನು ಕಾರಣಭೂತನೋ ಅವನು ನಷ್ಟೇಂದ್ರಿಯನಾಗಿ, ಬ್ರಾಹ್ಮಣನಿಗೆ ಮಾಡಬೇಕೆಂದಿರುವ ಸತ್ಕಾರವನ್ನು ತಪ್ಪಿಸಿದ ಪಾಪಕ್ಕೀಡಾಗಲಿ! ಮತ್ತು ಅವನು, ಕರು ಹಾಕಿದ ಹಸುವನ್ನು ಹತ್ತು ದಿನಗಳೊಳಗಾಗಿ ಹಾಲುಕರೆದು ಕುಡಿದವನ ಮಹಾಪಾತಕಕ್ಕೆ ಈಡಾಗಲಿ! [2]ಯಾವನು ರಾಮನ ವನಪ್ರಯಾಣಕ್ಕೆ ಕಾರಣಭೂತನೋ ಅವನು ತನ್ನ ಮನೆಯಲ್ಲಿ, ಜಲಸಮೃದ್ಧಿಯಿರುವಾಗಲೂ ದಾಹಪಟ್ಟು ಬಂದವನಿಗೆ ನೀರನ್ನು ಕೊಡದೆ ವಂಚಿಸಿದವನ ಪಾಪಕ್ಕೆ ಗುರಿಯಾಗಲಿ! [3]ರಾಮನ ವನಪ್ರಯಾಣಕ್ಕೆ ಕಾರಣಭೂತನಾವನೋ ಅವನು, ಇಬ್ಬರ ವಿವಾದದಲ್ಲಿ ಪಕ್ಷಪಾತದಿಂದ ತನಗೆ ತಿಳಿದ ನ್ಯಾಯವನ್ನು ಹೇಳದೆ ಮರೆಸಿಟ್ಟುಕೊಂಡು ನೋಡುತ್ತಿರುವವನ ಪಾಪಕ್ಕೆ ಗುರಿಯಾಗಲಿ' ಎಂದು ಭರತನು ಪತಿಪುತ್ರಹೀನೆಯಾಗಿ ದುಃಖಿಸುತ್ತಿರುವ ಕೌಸಲ್ಯೆಗೆ ನಂಬಿಕೆಯನ್ನುಂಟುಮಾಡುವುದಕ್ಕಾಗಿ, ಹೀಗೆ ಆಣೆಯಿಟ್ಟುಕೊಳ್ಳುತ್ತಿರುವಾಗಲೇ ಪ್ರಜ್ಞೆತಪ್ಪಿಬಿದ್ದನು. ಈ ಅವಸ್ಥೆಯಲ್ಲಿರುವ ಭರತನನ್ನು ನೋಡಿ ಕೌಸಲ್ಯೆಯು "ವತ್ಸನೆ! ಈ ನಿನ್ನ ಶಪಥವಾಕ್ಯಗಳನ್ನು ಕೇಳಿ ನನ್ನ ಪ್ರಾಣಗಳು ಉಕ್ಕಿ ಬರುವಹಾಗೆ ತತ್ತಳಿಸುತ್ತಿರುವುವು. (ರಾಮವಿರಹದಿಂದ ಹೊರಕ್ಕೆ ಹೊರಟು ಬರುತ್ತಿರುವ ನನ್ನ ಪ್ರಾಣಗಳನ್ನು ನಿನ್ನ ಈ ಶಪಥವಾಕ್ಯಗಳು ತಡೆದಿಟ್ಟು ಸಮಾಧಾನ ಮಾಡುವಂತಿರುವುವು). ಎಲೈ ಪುತ್ರನೆ! ಈ ನಿನ್ನ ಮನಸ್ಸು

---

[1]ಇದರಿಂದ ಹಸುಗಳು ಈದ ಹತ್ತು ದಿನಗಳವರೆಗೆ ಅವುಗಳ ಹಾಲನ್ನು ಕರೆಯಬಾರದೆಂದೂ, ಆ ಹಾಲನ್ನು ಕುಡಿಯಲೂ ಬಾರದೆಂದೂ ಸೂಚಿತವಾಗುವುದು.

[2]ದಾಹಗೊಂಡವನಿಗೆ ಹೇಗಾದರೂ ಪ್ರಯತ್ನಪಟ್ಟು ನೀರನ್ನು ತಂದಿಡಬೇಕೆಂದೂ, ಅಂತವರನ್ನು ವಂಚಿಸಿದರೆ ಮಹಾದೋಷವೆಂದೂ ಸೂಚಿತವಾಗುವುದು.

[3]ಇಲ್ಲಿ ಇಬ್ಬರಿಗೆ ವಿವಾದವುಂಟಾದಾಗ, ಒಬ್ಬನಲ್ಲಿ ಪಕ್ಷಪಾತದಿಂದ ಆತನಿಗೆ ಜಯೋಪಾಯವನ್ನು ಹೇಳುವುದು ಪಾಪವೆಂದು ಗೋವಿಂದರಾಜೀಯ ವ್ಯಾಖ್ಯಾನದ ಅಭಿಪ್ರಾಯವು. ಇಬ್ಬರ ವಿವಾದದಲ್ಲಿ ಅದರ ಮರ್ಮವನ್ನು ತಿಳಿದು ಆ ವಿವಾದವನ್ನು ತೀರಿಸತಕ್ಕ ಶಕ್ತಿಯುಳ್ಳವನು. ಪಕ್ಷಪಾತಬುದ್ಧಿಯಿಂದ ಏನೂ ಹೇಳದೆ ಉದಾಸೀನನಾಗಿ ನೋಡುತಿದ್ದರೆ ಅದೂ ಮಹಾದೋಷವೆಂದು ಮಹೇಶ್ವರತೀರ್ಥರ ಅಭಿಪ್ರಾಯವು.

*

ಜ್ಯೇಷ್ಠಾನುವರ್ತನವೆಂಬ ಧರ್ಮವನ್ನು ಅಗಲದಿರುವುದೇ ನನ್ನ ಭಾಗ್ಯವೆಂದೆ ಣಿಸುವೆನು. ಲಕ್ಷ್ಮಣನಂತೆಯೇ ನೀನೂ ಸತ್ಯಪ್ರತಿಜ್ಞನಾಗಿ ಅಣ್ಣನನ್ನು ಅನುವರ್ತಿಸತಕ್ಕವನೆಂದೇ ಎಣಿಸುವೆನು. ಈ ಧರ್ಮದಿಂದ ಸತ್ಪುರುಷರು ಹೊಂದತಕ್ಕ ಪುಣ್ಯಲೋಕಗಳೆಲ್ಲವೂ ನಿನಗೆ ಲಭಿಸುವುದರಲ್ಲಿ ಸಂದೇಹವಿಲ್ಲ" ಎಂದು ಹೇಳಿ, ಆ ಭರತನನ್ನು ಕರೆದು, ತೊಡೆಯಮೇಲೆ ಕುಳ್ಳಿರಿಸಿಕೊಂಡು, ಭ್ರಾತೃವತ್ಸಲನಾದ ಆತನನ್ನು ಪ್ರೇಮದಿಂದಪ್ಪಿಕೊಂಡು ದುಃಖದಿಂದ ರೋದಿ ಸುತಿದ್ದಳು. ಹಾಗೆಯೇ ಭರತನೂ ಅನೇಕ ಶಪಥಮಾಡಿ ಪ್ರಲಾಪಿಸುತ್ತ, ದುಃಖದಲ್ಲಿ ಮುಳುಗಿರಲು, ಆ ಮಹಾತ್ಮನಿಗೆ ಆಗಾಗ ಪ್ರಜ್ಞೆತಪ್ಪುತಿದ್ದುದ ರಿಂದಲೂ, ದುಃಖಾತಿಶಯದಿಂದಲೂ ಮನಸ್ಸು ಸ್ತಿಮಿತವಾಗಿಲ್ಲದೆ ಕದಲಿ ಹೋಯಿತು. ಹೀಗೆ ಆತನು ಬುದ್ಧಿಗೆಟ್ಟು ಹುಚ್ಚನಂತೆ ಪ್ರಲಾಪಿಸುತ್ತಾ, ಆಗಾಗ ಮೂರ್ಛೆಬಿದ್ದೇಳುತ್ತ, ಬಿಸಿಬಿಸಿಯಾಗಿ ನಿಟ್ಟುಸಿರನ್ನು ಬಿಡುತ್ತ, ಬಹು ಕಷ್ಟದಿಂದಲೇ ಆ ರಾತ್ರಿಯನ್ನು ಕಳೆದನು.

ಇದು ಎಪ್ಪತ್ತೈದನೆಯ ಸರ್ಗವು.

ಭರತನು ದಶರಥನಿಗೆ ಅಪರ ಸಂಸ್ಕಾರಗಳನ್ನು ನಡೆಸಿದುದು.

ಹೀಗೆ ದುಃಖದಿಂದ ಬೆಂದು ಕೊರಗುತ್ತಿರುವ ಕೈಕೇಯಿಯ ಪುತ್ರನಾದ ಭರತನನ್ನು ನೋಡಿ, ವಾಗ್ಮಿಯಾದ ವಸಿಷ್ಠಮಹರ್ಷಿಯು "ಎಲೈ ಮಹಾ ಯಶಸ್ವಿಯಾದ ರಾಜಕುಮಾರನೆ! ಇನ್ನು ದುಃಖಿಸಿದುದು ಸಾಕು! ನಿನ್ನ ಶ್ರೇಯಸ್ಸಿಗಾಗಿ ತಂದೆಯಾದ ದಶರಥರಾಜನನ್ನು ಪರಲೋಕಕ್ಕೆ ಕಳುಹಿಸುವ ಪ್ರಯತ್ನವನ್ನು ಮಾಡು!" ಎಂದನು. ಈ ವಸಿಷ್ಠನ ಮಾತನ್ನು ಕೇಳಿ ಭರತನು ಮನಸ್ಸಿಗೆ ಸಮಾಧಾನವನ್ನು ತಂದುಕೊಂಡು, ಅಲ್ಲಿ ನಡೆಸಬೇಕಾದ ಪ್ರೇತಕಾರ್ಯಗಳನ್ನು ಮಾಡುವುದಕ್ಕೆ ಆಗಲೇ ಉಪಕ್ರಮಿಸಿದನು. ಎಣ್ಣೆ ಕೊಪ್ಪ ರಿಗೆಯಲ್ಲಿದ್ದ ದಶರಥನ ದೇಹವನ್ನು ಹೊರಕ್ಕೆ ತೆಗೆದು ಆ ಎಣ್ಣೆಯನ್ನು ಹೋಗ ಲಾಡಿಸುವುದಕ್ಕಾಗಿ ಮೊದಲು ನೆಲದ ಮೇಲೆ ಮಲಗಿಸಿಟ್ಟರು. ಆ ದೇಹವು ಎಣ್ಣೆಯಲ್ಲಿ ಬಹಳ ಹೊತ್ತಿನವರೆಗೆ ತೊಯ್ದಿದ್ದುದರಿಂದ, ಅದರ ಬಣ್ಣವೆಲ್ಲವೂ

ಅರಿಸಿನದಂತೆ ಹೊಂಬಣ್ಣಕ್ಕೆ ತಿರುಗಿತ್ತು. ಆಗಲೂ ದಶರಥನು ನಿದ್ರೆಮಾಡುತ್ತಿರುವಂತೆಯೇ ಕಾಣುತ್ತಿದ್ದನು. ಆ ದೇಹದ ಎಣ್ಣೆಯೆಲ್ಲವನ್ನೂ ಒರೆಸಿದ ಮೇಲೆ ಅದನ್ನು ರತ್ನಭೂಷಿತವಾದ ಹಾಸಿಗೆಯ ಮೇಲೆ ಮಲಗಿಸಿಟ್ಟರು. ಆ ದೇಹವನ್ನು ನೋಡಿ ಭರತನು ಬಹು ದುಃಖದಿಂದ ಪುನಃ ಪ್ರಲಾಪಿಸತೊಡಗಿದನು. "ಹಾ ರಾಜನೆ! ನಾನು ಇಲ್ಲಿಂದ ಬಿಟ್ಟು ಹೋದ ಸ್ವಲ್ಪಕಾಲದೊಳಗಾಗಿ ನಾನು ಬರುವಷ್ಟರಲ್ಲಿ ಏನು ಕೆಲಸವನ್ನು ಮಾಡಿಬಿಟ್ಟೆ! ಎಂತಹ ಮಹಾನರ್ಥಗಳನ್ನು ತಂದಿಟ್ಟೆ! ಧರ್ಮಜ್ಞನಾದ ರಾಮನನ್ನೂ, ಬಲಾಢ್ಯನಾದ ಲಕ್ಷ್ಮಣನನ್ನೂ ಊರುಬಿಟ್ಟು ಹೊರಡಿಸಿದುದಲ್ಲದೆ, ದುಃಖಿತರಾದ ಬಂಧುವರ್ಗಗಳೆಲ್ಲವನ್ನೂ ದಿಕ್ಕಿಲ್ಲದ ಹಾಗೆ ಬಿಟ್ಟು ನೀನೂ ಹೊರಟುಹೋದೆಯಲ್ಲವೆ? ಈಗ ನೀನೆಲ್ಲಿಗೆ ಹೋಗುವೆ? ಸಮಸ್ತ ಜನಕ್ಕೂ ಹಿತವನ್ನೇ ಬಯಸತಕ್ಕ ಪುರುಷಸಿಂಹನಾದ ರಾಮನೂ ಬಿಟ್ಟು ಹೋದ ಮೇಲೆ ಈ ಜನರನ್ನು ಕಾಪಾಡುವರಾರು? ಈ ಪಟ್ಟಣವನ್ನು ನೀನೂ ಬಿಟ್ಟು ಹೋದ ಮೇಲೆ ಯೋಗಕ್ಷೇಮವನ್ನು ನೋಡತಕ್ಕವರಾರು? ನೀನೂ ಸ್ವರ್ಗಲೋಕವನ್ನು ಸೇರಿ, ರಾಮನೂ ಕಾಡಿಗೆ ಹೋದ ಮೇಲೆ ಪ್ರಜೆಗಳ ಕ್ಷೇಮಲಾಭವನ್ನು ವಿಚಾರಿಸತಕ್ಕವರಾರು? ನೀನಿಲ್ಲದುದರಿಂದ ಈ ಭೂಮಿಯು ವಿಧವೆಯಂತೆ ಲಕ್ಷಣಹೀನಳಾಗಿರುವಳು. ಚಂದ್ರನಿಲ್ಲದ ರಾತ್ರಿಯಂತೆ ಈ ಅಯೋಧ್ಯಾನಗರಿಯೂ ಕೇವಲ ಕಾಂತಿಶೂನ್ಯವಾಗಿರುವುದು" ಹೀಗೆಂದು ಹೇಳಿ ಭರತನು ಬಹು ದೈನ್ಯದಿಂದ ಪ್ರಲಾಪಿಸುತ್ತಿರಲು, ವಸಿಷ್ಠನು ಪುನಃ ಆ ಭರತನನ್ನು ನೋಡಿ, "ಎಲೈ ಮಹಾಬಾಹುವಾದ ಭರತನೆ! ಹೀಗೆ ಸುಮ್ಮನೆ ದುಃಖದಿಂದ ಕಾಲವನ್ನು ಕಳೆಯಬೇಡ! ತಂದೆಗೆ ನಡೆಸಬೇಕಾದ ಪ್ರೇತಕಾರ್ಯಗಳನ್ನು ಕ್ರಮವಾಗಿ ನಡೆಸಿ ಮುಗಿಸು" ಎಂದನು. ಇದನ್ನು ಕೇಳಿ ಭರತನು ವಸಿಷ್ಠನ ಮಾತನ್ನು ಗೌರವಿಸಿ, ಋತ್ವಿಕ್ಕುಗಳನ್ನೂ, ಪುರೋಹಿತರನ್ನೂ, ಆಚಾರ್ಯರನ್ನೂ, ತಾನೇ ತ್ವರೆಪಡಿಸುತ್ತಿದ್ದನು. ಅಗ್ನಿಶಾಲೆಯಿಂದ ದಶರಥನ ಗಾರ್ಹಪತ್ಯಾದ್ಯಗ್ನಿಗಳನ್ನು ಋತ್ವಿಕ್ಕುಗಳೂ, ಯಾಜಕರೂ ಸೇರಿ ಹೊರಕ್ಕೆ ಸಾಗಿಸಿ ತಂದಿಟ್ಟರು. ರಾಜನ ದೇಹವನ್ನು ಪಲ್ಲಕ್ಕಿಯಲ್ಲಿಟ್ಟು ಆತನ ಪರಿಚಾರಕರೆಲ್ಲರೂ ಕಣ್ಣೀರು ಬಿಡುತ್ತ ದುಃಖದಿಂದ ಮೈಮರೆತು ಎತ್ತಿಕೊಂಡು ಬಂದರು. ಈ ಮೃತದೇಹವನ್ನು ತೆಗೆದುಕೊಂಡು ಹೋಗುತ್ತಿದ್ದ ದಾರಿಯಲ್ಲಿ, ಪುರವಾಸಿಗಳೆಲ್ಲರೂ ಮುಂದೆ ಸುವರ್ಣವನ್ನೂ,

ನಾಣ್ಯಗಳನ್ನೂ ನಾನಾ ವಿಧವಾದ ವಸ್ತ್ರಗಳನ್ನೂ ಎರಚುತ್ತಾ ಹೋದರು. ಅಗರು ಚಂದನ, ಗುಗ್ಗುಳ, ಸರಳ, ಪದ್ಮಕ, ಮುಂತಾದ ಗಂಧದ ಪುಡಿಗಳಿಂದ ದಾರಿಯಲ್ಲಿ ಕೆಲವರು ಧೂಪಗಳನ್ನಿಡುತ್ತ ಹೋಗುತ್ತಿದ್ದರು. ಆಮೇಲೆ ಋತ್ವಿಕ್ಕು ಗಳು ದಶರಥನ ದೇಹವನ್ನು ಚಿತೆಯ ಮೇಲೆ ಏರಿಸಿಟ್ಟರು. ಪುರೋಹಿತರು ಭರತನ ಕೈಯಿಂದ ಚಿತೆಗೆ ಬೆಂಕಿಯನ್ನಿಡಿಸಿ, ಅಪರ ಮಂತ್ರಗಳನ್ನು ಜಪಿಸು ತ್ತಿದ್ದರು. ಸಾಮಗಾನವನ್ನು ಮಾಡತಕ್ಕ ಋತ್ವಿಕ್ಕುಗಳು ಶಾಸ್ತ್ರೋಕ್ತವಾಗಿ ಸಾಮಗಾನ ಮಾಡುತ್ತಿದ್ದರು. ದಶರಥನ ಪತ್ನಿಯರೆಲ್ಲರೂ ತಮ್ಮ ತಮ್ಮ ಸ್ಥಿತಿಗೆ ತಕ್ಕಂತೆ ಪಲ್ಲಕ್ಕಿಗಳನ್ನೂ ಇತರ ವಾಹನಗಳನ್ನೂ ಏರಿ ವೃದ್ಧರಾದ ಪರಿಚಾರಕರಿಂದ ಪರಿವೃತರಾಗಿ ಪಟ್ಟಣದಿಂದ ಹೊರಟು ಬರುತ್ತಿದ್ದರು. ಚಯನ ಸಂಸ್ಕಾರವು ನಡೆದಮೇಲೆ, ಋತ್ವಿಕ್ಕುಗಳೂ, ರಾಜಸ್ತ್ರೀಯರೂ ಆ ದಶರಥನ ದೇಹವನ್ನು ಪ್ರದಕ್ಷಿಣವಾಗಿಯೂ ಅಪ್ರದಕ್ಷಿಣವಾಗಿಯೂ ಸುತ್ತಿಬಂದರು. ಕೌಸಲ್ಯೆಯೇ ಮೊದಲಾದ ಸ್ತ್ರೀಯರೆಲ್ಲರೂ ವ್ಯಸನದಿಂದ ಬೆಂದು ಉಚ್ಚಸ್ವರ ದಿಂದ ಅಳುತ್ತಿದ್ದರು. ಹೀಗೆ ಗಟ್ಟಿಯಾಗಿ ಗೋಳಿಡುತ್ತಿರುವ ಸಾವಿರಾರು ಮಂದಿ ಸ್ತ್ರೀಯರ ಪ್ರಲಾಪಧ್ವನಿಯು, ಕ್ರೌಂಚ ಪಕ್ಷಿಗಳ ಕೂಗಿನಂತೆ ಬಹು ದೀನವಾಗಿ ಕೇಳಿಸುತ್ತಿತ್ತು. ಆ ಸ್ತ್ರೀಯರೆಲ್ಲರೂ ವ್ಯಸನದಿಂದ ಮೈಮರೆತು ಬಾರಿಬಾರಿಗೂ ಪ್ರಲಾಪಿಸುತ್ತ, ತಮ್ಮ ತಮ್ಮ ವಾಹನಗಳನ್ನೇರಿ ಸರಯೂನದಿಯ ತೀರದಲ್ಲಿ ಬಂದಿಳಿದರು. ಅಲ್ಲಿ ಆ ರಾಜಸ್ತ್ರೀಯರೂ, ಮಂತ್ರಿ ಪುರೋಹಿತಾದಿಗಳೂ ಭರತ ನೊಡನೆ ಸೇರಿ ಜಲತರ್ಪಣವನ್ನು ಮಾಡಿ, ದುಃಖದಿಂದ ಕಣ್ಣೀರುಬಿಡುತ್ತ ಹಿಂತಿರುಗಿ ಬಂದು ಪುರಪ್ರವೇಶವನ್ನು ಮಾಡಿದರು. ಆ ದುಃಖದಿಂದಲೇ ನೆಲದ ಮೇಲೆ ಬಹುಕಷ್ಟದಿಂದ [1]ಹತ್ತು ದಿವಸಗಳ ಶೌಚವನ್ನು ಕಳೆದರು.

ಇದು ಎಪ್ಪತ್ತಾರನೆಯ ಸರ್ಗವು.

---

[1]"ಷೋಡಶಾಹೇನ ಭೂಪಾಲಾಃ" ಎಂಬಂತೆ, ಕ್ಷತ್ರಿಯರಿಗೆ ಹದಿನಾರು ದಿನಗಳ ವರೆಗೆ ಅಶೌಚವುಂಟು. ಇಲ್ಲಿ ಹತ್ತು ದಿನಗಳು ಮಾತ್ರವೇ ಕಾಣಿಸಲ್ಪಟ್ಟಿರುವುವಲ್ಲವೆ? ಇದಕ್ಕೆ ಸಮಾಧಾನವೇನೆಂದರೆ :– "ಕ್ಷತ್ರಿಯಸ್ತು ದಶಾಹೇನ ಸ್ವಕರ್ಮನಿರತಶ್ಶುಚಿಃ" ಸ್ವಕರ್ಮ ಗಳನ್ನು ಸರಿಯಾಗಿ ನಡೆಸುತ್ತಿರುವ ಕ್ಷತ್ರಿಯನು ಹತ್ತು ದಿನಗಳಲ್ಲಿಯೇ ಶುದ್ಧನಾಗುವನು"

ಭರತನು ಹನ್ನೆರಡನೆಯ ದಿನದ ಶ್ರಾದ್ಧವನ್ನು ನಡೆಸಿದುದು. ಭರತ ಶತ್ರುಘ್ನರಿಬ್ಬರೂ ತಂದೆಯನ್ನು ನೆನೆಸಿಕೊಂಡು ಎಡೆಬಿಡದೆ ದುಃಖಿಸುತ್ತಿರಲು, ವಸಿಷ್ಠಾದಿಗಳು ಅವರನ್ನು ಸಮಾಧಾನಪಡಿಸಿದುದು.

ಹತ್ತು ದಿನಗಳು ಕಳೆದಮೇಲೆ ಭರತನು ಪುಣ್ಯಾಹವಾಚನಾದಿಗಳನ್ನು ಮಾಡಿಸಿ, ಅಶೌಚವನ್ನು ನಿವೃತ್ತಿಮಾಡಿಕೊಂಡು, ಹನ್ನೊಂದನೆಯ ದಿವಸದಲ್ಲಿ ನಡೆಸಬೇಕಾದ ಕಾರ್ಯಗಳನ್ನೂ ಮುಗಿಸಿದನು. ತಂದೆಗೆ ಪರಲೋಕ ಕ್ರಿಯೆಗಳನ್ನು ಮಾಡುವಾಗ ಅನೇಕ ಬ್ರಾಹ್ಮಣರಿಗೆ ರತ್ನರಾಶಿಗಳನ್ನೂ, ಧನರಾಶಿಯನ್ನೂ, ಅನ್ನವಸ್ತ್ರಾದಿಗಳನ್ನೂ, ಇನ್ನೂ ಬೇರೆ ಬೇರೆ ಉತ್ತಮವಸ್ತುಗಳನ್ನೂ, ಬಿಳೀ ಮೇಕೆಗಳನ್ನೂ, ಬೆಳ್ಳಿಯ ಗಟ್ಟಿಗಳನ್ನೂ, ಗೋವುಗಳನ್ನೂ ದಾನ ಮಾಡಿದನು. ಕೆಲವರಿಗೆ ದಾಸದಾಸೀಜನರನ್ನೂ ವಾಹನಗಳನ್ನೂ ಕೊಟ್ಟನು. ಕೆಲವರಿಗೆ ಗೃಹದಾನವನ್ನು ಮಾಡಿದನು. ಹೀಗೆ ಆ ಭರತನು ಅವರವರಿಗೆ ಮನಸ್ತೃಪ್ತಿಯಾಗುವಂತೆ ದಾನಮಾಡಿ, [1] ಹದಿಮೂರನೆಯ ದಿನದ ಪ್ರಾತಃಕಾಲದಲ್ಲಿ ಅಸ್ಥಿಸಂಚಯನಾರ್ಥವಾಗಿ ದಹನಸ್ಥಲಕ್ಕೆ ಬಂದು, ಅಲ್ಲಿ ಪುನಃ ತಂದೆಯನ್ನು ಸ್ಮರಿಸಿಕೊಂಡು ಉಚ್ಚಸ್ವರದಿಂದ ಅಳುವುದಕ್ಕಾರಂಭಿಸಿದನು. ಆಗ ಆತನು ತಂದೆಯನ್ನು ದಹನಮಾಡಿದ ಚಿತೆಯ ಬಳಿಯಲ್ಲಿ ನಿಂತು "ಹಾ! ಜನಕನೆ! ನೀನು ಪರಲೋಕ ಪ್ರಯಾಣಮಾಡುವುದಕ್ಕೆ ಮೊದಲು ನನ್ನನ್ನು ಯಾರ ಕೈಗೆ ಒಪ್ಪಿಸಿಹೋಗಬೇಕಾಗಿತ್ತೋ, ಅಂತಹ ನನ್ನ ಅಣ್ಣನಾದ

ಎಂಬ ವಿಶೇಷ ಶಾಸ್ತ್ರದಿಂದ ಇಲ್ಲಿ ಹತ್ತು ದಿನಗಳೇ ಹೇಳಲ್ಪಟ್ಟಿರುವುದಾಗಿ ಗ್ರಹಿಸಬೇಕು. ಮತ್ತು ಇಲ್ಲಿ ಪ್ರೇತದೊಡನೆ ಅಗ್ನಿಯನ್ನು ಸಾಗಿಸುವುದು, ಪ್ರೇತವನ್ನು ಚಿತೆಯಲ್ಲಿ ಏರಿಸುವುದು, ಮಂತ್ರ ಪೂರ್ವಕವಾಗಿ ಅಗ್ನಿಯನ್ನಿಡುವುದು, ಪ್ರದಕ್ಷಿಣಮಾಡುವುದು, ಉದಕದಾನವನ್ನು ಮಾಡುವುದು, ಹತ್ತು ದಿನಗಳವರೆಗೆ ಅಶೌಚದಲ್ಲಿದ್ದು ನೆಲದಲ್ಲಿ ಮಲಗುವುದು, ಇವು ಮಾತ್ರವೇ ದೇಶಭೇದದಿಂದಲೂ, ಕಾಲಭೇದದಿಂದಲೂ ಸೂತ್ರಭೇದದಿಂದಲೂ ಸಾಮಾನ್ಯವಾಗಿ ಎಲ್ಲರೂ ನಡೆಸಬೇಕಾದ ಔರ್ಧ್ವದೈಹಿಕ ವಿಶೇಷಗಳಾಗಿ ಹೇಳಲ್ಪಟ್ಟಿರುವುವು. ಅಥವಾ ಈ ಪ್ರಧಾನ ಕೃತ್ಯಗಳನ್ನು ಹೇಳಿದುದರಿಂದ ಇತರ ಕಾರ್ಯಗಳನ್ನೂ ಹಾಗೆಯೇ ಗ್ರಹಿಸಿಕೊಳ್ಳಬೇಕೆಂದು ತಿಳಿಯಬೇಕು.

[1] ಸೂತ್ರಾಂತರ ಪ್ರಕಾರವಾಗಿ ಹದಿಮೂರನೆಯ ದಿನದಲ್ಲಿಯೂ ಅಸ್ಥಿಸಂಚಯನವುಂಟು. "ದ್ವಿತೀಯೇಹ್ನಿ ಯುಗ್ಮದಿವಸೇಷ್ವರ್ಧಮಾಸಾನ್ ಮಾಸಾನೃತೂನ್ ಸಂವತ್ಸರಂ ವಾ ಸಂಚಯನಂ" ಎಂದು ಬೋಧಾಯನ ಸೂತ್ರವಿದೆ.

ರಾಮನೂ ಕಾಡುಪಾಲಾಗಿ ಹೋದನು. ಹೀಗೆ ನನ್ನನ್ನು ದಿಕ್ಕಿಲ್ಲದ ಹಾಗೆ ಮಾಡಿ ನೀನೂ ಬಿಟ್ಟು ಹೋಗಬಹುದೆ? ಅನಾಥೆಯಾದ ಕೌಸಲ್ಯೆಗೆ ಮುಖ್ಯ ಗತಿಯಾಗಿದ್ದ ರಾಮನನ್ನು ಕಾಡಿಗೆ ಕಳುಹಿಸಿಬಿಟ್ಟೆಯಲ್ಲಾ! ದಿಕ್ಕಿಲ್ಲದ ಆ ಕೌಸಲ್ಯೆಗೆ ಇನ್ನಾರು ಗತಿ? ನೀನೂ ಅವಳನ್ನು ಬಿಟ್ಟು ಹೋದೆಯಲ್ಲವೆ?" ಎಂದು ಗೋಳಿಡುತ್ತಿದ್ದನು. ಮತ್ತು ಆತನು ಚಿತೆಯ ಮೇಲೆ ಭಸ್ಮರೂಪವಾಗಿ ಬಿದ್ದಿದ್ದ ತಂದೆಯ ದೇಹದ ಆಕಾರವನ್ನು ನೋಡಿದಾಗ, ಅದು ಬೂದಿಮುಚ್ಚಿ ಕಪ್ಪಾಗಿ ಇದ್ದಲಾಗಿತ್ತು. ಅಸ್ಥಿಪಂಜರಗಳೆಲ್ಲವೂ ಬಂದು ಹಾಗೆಯೇ ಬೂದಿಯಲ್ಲಿ ಹುದುಗಿಕೊಂಡಿದ್ದುದನ್ನು ನೋಡಿದನು. ಆಗ ಆತನ ಸಂಕಟವು ಮಿತಿಮೀರಿ ಉಕ್ಕಿ ಬಂದಿತು. ಮತ್ತಷ್ಟು ಗಟ್ಟಿಯಾಗಿ ಪ್ರಲಾಪಿಸತೊಡಗಿದನು. ಹೀಗೆ ಭರತನು ಆ ಚಿತೆಯನ್ನು ನೋಡಿ ನೋಡಿ ಸಂಕಟದಿಂದ ಅಳುತ್ತಿರುವಾಗಲೇ ಆತನಿಗೆ ದೇಹದಲ್ಲಿ ಪ್ರಜ್ಞೆಯು ತಪ್ಪಿತು. ಹಗ್ಗದಿಂದೆಳೆದು ಕಟ್ಟಲ್ಪಟ್ಟ ಇಂದ್ರಧ್ವಜವು ಸಡಿಲಿದಾಗ ತಟ್ಟನೆ ಬಗ್ಗಿ ಬೀಳುವ ಹಾಗೆ ನೆಲದ ಮೇಲೆ ಬಿದ್ದುಬಿಟ್ಟನು. ಇದನ್ನು ನೋಡಿ ಬಂಧುಗಳೆಲ್ಲರೂ ಬೆಜ್ಜರಬಿದ್ದು ಅವನ ಸಮೀಪಕ್ಕೆ ಬಂದರು. ಪುಣ್ಯಕ್ಷಯದಿಂದ ಸ್ವರ್ಗಭ್ರಷ್ಟನಾದ ಯಯಾತಿಯನ್ನು ಆತನ ದೌಹಿತ್ರರಾದ ಋಷಿಗಳು ಎತ್ತಿಹಿಡಿದಂತೆ, ಅವರೆಲ್ಲರೂ ಭರತನನ್ನು ಎತ್ತಿ ಹಿಡಿದು ನಿಲ್ಲಿಸುತ್ತಿದ್ದರು. ಶತ್ರುಘ್ನನು ಧೈರ್ಯವನ್ನು ತಂದುಕೊಂಡಿದ್ದರೂ, ಈಗ ಭರತನ ಅವಸ್ಥೆಯನ್ನು ನೋಡಿದೊಡನೆಯೇ ಆತನಿಗಿದ್ದ ಧೈರ್ಯವು ತಗ್ಗಿತು. ಆತನ ಮನಸ್ಸು ಕದಲಿತು. ತಾನೂ ದಶರಥನನ್ನು ಸ್ಮರಿಸಿಕೊಂಡು ಪ್ರಲಾಪಿಸುತಿದ್ದು ಕೊನೆಗೆ ಮೂರ್ಛೆಬಿದ್ದನು. ಆತನೂ ಸ್ವಲ್ಪಹೊತ್ತಿಗೆ ಚೇತರಿಸಿಕೊಂಡು ತಂದೆಯ ರೂಪವನ್ನೂ ಆತನ ಗುಣಗಳನ್ನೂ ಬಾರಿಬಾರಿಗೂ ನೆನೆಸಿಕೊಂಡು, ದುಃಖದಿಂದ ಬುದ್ಧಿಗೆಟ್ಟು, ಹುಚ್ಚನಂತೆ "ಅಹಾ! ಮಂಥರೆಯೆಂಬವಳಿಂದ ಹುಟ್ಟಿ, ಕೈಕೇಯಿಯೆಂಬ ಮೊಸಳೆಗೆ ವಾಸಸ್ಥಾನವಾಗಿ ವರದಾನವೆಂಬ ಜಲ ಸಮೃದ್ಧಿಯಿಂದ ಕೂಡಿದ ಅಪಾರವಾದ ಈ ದುಃಖ ಸಮುದ್ರದಲ್ಲಿ ನಾವೆಲ್ಲರೂ ಒಟ್ಟಿಗೆ ಮುಳುಗಿಹೋಗಬೇಕಾಗಿ ಬಂದಿರುವುದಲ್ಲಾ! ಎಲೆ ತಾತನೆ! ನಿನ್ನ ಪರಮಪ್ರೀತಿಗೆ ಪಾತ್ರನಾದ ಈ ಭರತನು, ಇಲ್ಲಿ ತಡೆಯಲಾರದ ಸಂಕಟದಿಂದ ಕೂಗಿಡುತ್ತಿದ್ದರೂ ಆತನನ್ನು ಬಿಟ್ಟು ನೀನೆಲ್ಲಿಗೆ ಹೋಗುತ್ತಿರುವೆ? ನೀನು ಯಾವಾಗಲೂ ಲಾಲಿಸುತ್ತಿದ್ದ ಬಾಲನಾದ ಆತನಲ್ಲಿ ಹೀಗೆ ನೀನು ಉದಾಸೀನ

ನಾಗಬಹುದೇ? ಅಯ್ಯೋ? ಭೋಜನ ಪದಾರ್ಥಗಳಲ್ಲಿಯಾಗಲಿ, ಪಾನ ದ್ರವ್ಯಗಳಲ್ಲಿಯಾಗಲಿ, ವಸ್ತ್ರಾಭರಣಾದಿಗಳಲ್ಲಿಯಾಗಲಿ, ನಮುನಮಗೆ ಇಷ್ಟವಾದುದನ್ನು ನಾವು ತೆಗೆದುಕೊಳ್ಳುವುದಕ್ಕೆ ನೀನು ಎಷ್ಟೋ ನಿರ್ಬಂಧಪಡಿಸಿದ್ದೆಯಲ್ಲವೆ? ಇನ್ನು ಮೇಲೆ ನಮ್ಮನ್ನು ಇಷ್ಟು ವಾತ್ಸಲ್ಯದಿಂದ ಪೋಷಿಸುವವರಾರು? [1]ಧರ್ಮಜ್ಞನಾಗಿಯೂ, ಮಹಾತ್ಮನಾಗಿಯೂ, ಇರುವ ನಿನ್ನಂತಹ ರಾಜನನ್ನಗಲಿಯೂ, ಈ ಭೂಮಿಯು ಸೀಳಿಹೋಗದಿರುವುದಲ್ಲಾ! ಇದನ್ನು ನೋಡಿದರೆ ಪ್ರಳಯ ಕಾಲದಲ್ಲಿಯೂ ಇದಕ್ಕೆ ನಾಶವಿಲ್ಲವೆಂದೇ ಎಣಿಸಬೇಕಾಗಿದೆ! ತಂದೆಯಾದ ನೀನೂ ಸ್ವರ್ಗಸ್ಥನಾಗಿ, ಅಣ್ಣನಾದ ರಾಮನೂ ಕಾಡುಪಾಲಾಗಿ ಹೊರಟು ಹೋದ ಮೇಲೆ ಯಾರ ಬಲದಿಂದ ನಾನು ಬದುಕಿರಲಿ? ಈಗ ಅಗ್ನಿಯಲ್ಲಿ ಬಿದ್ದು ಪ್ರಾಣವನ್ನು ಕಳೆದುಕೊಳ್ಳಬೇಕಾದುದೊಂದಲ್ಲದೆ ನನಗೆ ಬೇರೆ ಗತಿಯಿಲ್ಲ! ಇಕ್ಷ್ವಾಕುವಂಶದವರಿಂದ ಪಾಲಿತವಾದ ಈ ಅಯೋಧ್ಯಾಪಟ್ಟಣವು ಹೀಗೆ ಹಾಳು ಬಿದ್ದಿರುವಾಗ ಅಣ್ಣನನ್ನೂ ತೊರೆದು, ತಂದೆಯನ್ನೂ ಕಳೆದುಕೊಂಡು, ನಾನೆಷ್ಟು ಮಾತ್ರಕ್ಕೂ ಪ್ರವೇಶಿಸಲಾರೆನು! ನಾನೂ ತಪೋವನಕ್ಕೇ ಹೋಗುವೆನು" ಎಂದು ಅಳುತ್ತಿದ್ದನು. ಭರತಶತ್ರುಘ್ನರಿಬ್ಬರೂ ಪ್ರಲಾಪಿಸುತ್ತಿರುವುದನ್ನು ನೋಡಿ, ಆತನೊಡನೆ ಹಿಂಬಾಲಿಸಿ ಬಂದಿದ್ದವರೆಲ್ಲರೂ ದುಃಖದಿಂದ ಅಳುತ್ತಿದ್ದರು. ಹೀಗೆ ಆ ಅಣ್ಣತಮ್ಮಂದಿರಿಬ್ಬರೂ ಅನೇಕ ವಿಧದಲ್ಲಿ ಬಹು ಪ್ರಲಾಪಿಸಿ, ಕೊಂಬನ್ನು ಮುರಿದುಕೊಂಡ ಎತ್ತಿನಂತೆ ಸಂಕಟಪಟ್ಟು, ನೆಲದ ಮೇಲೆ ಬಿದ್ದು ಅಳುತ್ತಿದ್ದರು. ಆಗ ಉತ್ತಮ ಸ್ವಭಾವವುಳ್ಳವನಾಗಿಯೂ, ಸರ್ವಜ್ಞನಾಗಿಯೂ ದಶರಥನ ಕುಲಪುರೋಹಿತನಾಗಿಯೂ, ಇರುವ ವಸಿಷ್ಠನು, ಭರತನನ್ನು ಕೈ ಹಿಡಿದೆತ್ತಿ ಕುಳ್ಳಿರಿಸಿ, ಎಲೈ ಪ್ರಭುವೆ! ತಂದೆಯು ಗತಿಸಿ ಇದು [2] ಹದಿಮೂರನೆಯ ದಿನವಲ್ಲವೆ? ಈಗ ನಡೆಸಬೇಕಾದ ಅಸ್ಥಿಸಂಚಯನವನ್ನು ಮಾಡುವುದಕ್ಕೆ ಏಕೆ

---

[1]ಧರ್ಮಜ್ಞನಾಗಿಯೂ, ಮಹಾತ್ಮನಾಗಿಯೂ ಇರುವ ನಿನ್ನಂತಹ ರಾಜನನ್ನು ಅಗಲಿದಾಗ ಈ ಭೂಮಿಯು ಭೇದಿಸಿಹೋಗಬೇಕಾದುದೇ ನ್ಯಾಯವು. ಹೀಗಿದ್ದರೂ ಇದು ಸ್ವಾಭಾವಿಕ ಸ್ಥಿತಿಯಲ್ಲಿರುವುದಾಶ್ಚರ್ಯವೆಂದು ಇಲ್ಲಿ ಅರ್ಥಾಂತರವು.

[2]ಹತ್ತು ದಿವಸಗಳ ಮಧ್ಯದಲ್ಲಿ ಶಾಸ್ತ್ರವಿಹಿತವಾದ ಪ್ರಧಾನಾಸ್ಥಿ ಸಂಚಯನವನ್ನು ಮಾಡಿ, ಹದಿಮೂರನೆಯ ದಿನದಲ್ಲಿ ತದ್ದೇಶಾಚಾರದಿಂದ ಬಂದ ಸ್ಥಳಶೋಧನವು ಮಾತ್ರ ಮಾಡಲ್ಪಟ್ಟುದರಿಂದ, ತ್ರಯೋದಶಾಹದಲ್ಲಿ ಅಸ್ಥಿಸಂಚಯನವನ್ನು ಮಾಡಬೇಕೆಂಬುದು ಸ್ಮೃತಿವಿರುದ್ಧವಲ್ಲವೆಂದೂ ಗ್ರಹಿಸಬಹುದು.

ಸಾವಕಾಶವಮಾಡುತ್ತಿರುವೆ? ಲೋಕದಲ್ಲಿ ಹಸಿವು ಬಾಯಾರಿಕೆಗಳು, ಶೋಕ ಮೋಹಗಳು, ಜರಾಮರಣಗಳು, ಎಂಬೀ ಮೂರು ವಿಧವಾದ ದ್ವಂದ್ವಗಳೂ ಜಂತುಗಳಲ್ಲಿ ಸಾಮಾನ್ಯವಾಗಿ ಸಂಭವಿಸದೇ ಬಿಡವು. ಹೀಗೆ ಯಾರಿಂದಲೂ ತಪ್ಪಿಸುವುದಕ್ಕಾಗದ ಈ ವಿಷಯಗಳಿಗಾಗಿ ನೀನು ದುಃಖಿಸುತ್ತಿರುವುದುಚಿತವಲ್ಲ! ಏಳು!" ಎಂದನು. ತತ್ವಜ್ಞನಾದ ಸುಮಂತ್ರನೂ ಹಾಗೆಯೇ ಶತ್ರುಘ್ನನ ಬಳಿಗೆ ಬಂದು ಆತನನ್ನೆತ್ತಿ ಕುಳ್ಳಿರಿಸಿ, ಅನೇಕ ಸಮಾಧಾನವಾಕ್ಯಗಳನ್ನು ಹೇಳಿ, ಪ್ರಾಣಿಗಳಿಗೆ ಜನನಮರಣಗಳೆರಡೂ ಸ್ವಾಭಾವಿಕವಾದುದರಿಂದ, ಅದನ್ನು ತಪ್ಪಿಸುವುದು ಯಾರಿಂದಲೂ ಸಾಧ್ಯವಲ್ಲವೆಂಬ ತತ್ವವನ್ನುಪದೇಶಿಸಿದನು. ಯಶಸ್ವಿಗಳಾದ ಆ ರಾಜಕುಮಾರರಿಬ್ಬರೂ ಮನಸ್ಸಮಾಧಾನವನ್ನು ಮಾಡಿ ಕೊಂಡು ಮೇಲಕ್ಕೆದ್ದು, ಕೆಂಪಾದ ಕಣ್ಣುಗಳನ್ನೊರೆಸಿಕೊಂಡು ಕುಗ್ಗಿದ ಸ್ವರವುಳ್ಳವರಾಗಿದ್ದರು. ಅಲ್ಲಿದ್ದ ಮಂತ್ರಿಗಳೂ ಮುಂದಿನ ಅಸ್ಥಿಸಂಚಯನಾದಿ ಕಾರ್ಯಗಳಿಗೆ ಭರತ ಶತ್ರುಘ್ನರನ್ನು ತ್ವರೆಪಡಿಸುತಿದ್ದರು.

ಇಲ್ಲಿಗೆ ಎಪ್ಪತ್ತೇಳನೆಯ ಸರ್ಗವು.

ಶತ್ರುಘ್ನನು ಮಂಥರೆಯನ್ನು ಶಿಕ್ಷಿಸುವಾಗ ಕೈಕೇಯಿಯು ಆಕೆಯನ್ನು ಬಿಡಿಸಿದುದು.

ಅಪರಕ್ರಿಯೆಗಳೆಲ್ಲವೂ ನಡೆದು ಎಲ್ಲರೂ ಮನೆಗೆ ಬಂದಮೇಲೆ, ಆ ಕ್ಷಣವೇ ರಾಮನಿರುವ ಸ್ಥಳಕ್ಕೆ ಹೊರಡಬೇಕೆಂದು ಪ್ರಯಾಣಸನ್ನದ್ಧನಾಗಿದ್ದ ಭರತನನ್ನು ನೋಡಿ ಶತ್ರುಘ್ನನು "ಅಣ್ಣಾ! ದುಃಖವು ಸಂಭವಿಸಿದಾಗ ಅವರವರ ದುಃಖವನ್ನು ನೀಗಿಸಿ ಸಮಸ್ತಪ್ರಾಣಿಗಳಿಗೂ ದಿಕ್ಕಾಗಿರಬಲ್ಲ ರಾಮನು, ತನಗೆ ಮಹಾಬಲಾಢ್ಯನಾಗಿದ್ದರೂ ಕೊನೆಗೆ ಒಬ್ಬ ಅಬಲೆಯಿಂದ ಕಾಡಿಗೆ ಓಡಿಸಲ್ಪಟ್ಟ ನಲ್ಲವೆ? ಇದಕ್ಕಿಂತಲೂ ಆಶ್ಚರ್ಯವೇನಿರುವುದು? ಒಂದುವೇಳೆ ರಾಮನು ತಂದೆ ಯಾಜ್ಞೆಗೆ ಕಟ್ಟುಬಿದ್ದು ಕಾಡಿಗೆ ಹೊರಟಿದ್ದರೂ ಇರಲಿ! ಬಲವಂತನಾಗಿಯೂ, ಪರಾಕ್ರಮವಂತನಾಗಿಯೂ ಪ್ರಸಿದ್ಧಿ ಹೊಂದಿದ ಲಕ್ಷ್ಮಣನೆಂಬವನೊಬ್ಬನು ಇಲ್ಲಿಯೇ ಇದ್ದನಲ್ಲವೆ? ಆತನಾದರೂ ಹೀಗೆ ಅಕಾರ್ಯದಲ್ಲಿ ಪ್ರವರ್ತಿಸಿದ ತಂದೆ

ಯನ್ನು ನಿಗ್ರಹಿಸಿ ರಾಮನ ವನಪ್ರಯಾಣವನ್ನು ತಪ್ಪಿಸಬಾರದಾಗಿತ್ತೇ? ಹೆಂಡತಿಯ ಮಾತಿಗೆ ಮರುಳಾಗಿ ಉನ್ಮಾರ್ಗಕ್ಕೆ ಪ್ರವರ್ತಿಸಿದ ರಾಜನನ್ನು ಇಷ್ಟು ಅನರ್ಥಗಳುಂಟಾಗುವುದಕ್ಕೆ ಮೊದಲೇ ನಿಗ್ರಹಿಸಬೇಕಾಗಿತ್ತು! ಅವರೊಬ್ಬರೂ ನ್ಯಾಯಾನ್ಯಾಯಗಳನ್ನು ವಿಚಾರಿಸಲಿಲ್ಲವೆಂದೇ ಎಣಿಸಬೇಕಾಗಿದೆ” ಎಂದನು. ಶತ್ರುಘ್ನನು ಈ ಮಾತುಗಳನ್ನಾಡುತ್ತಿರುವಷ್ಟರಲ್ಲಿ ಮಂಥರೆಯೆಂಬ ಆ ಗೂನಿಯು ತಾನು ಸಂಕಲ್ಪಿಸಿದ್ದ ಭರತಾಭಿಷೇಕ ಕಾರ್ಯವನ್ನೇ ಇದಿರುನೋಡುತ್ತಿದ್ದು, ಈ ಭರತಶತ್ರುಘ್ನರಿಬ್ಬರೂ ಹಿಂತಿರುಗಿ ಬಂದ ವೃತ್ತಾಂತವನ್ನು ಕೇಳಿ, ಸಂತೋಷದಿಂದ ತನ್ನ ಮೈಯ್ಯನ್ನು ಸರ್ವಾಭರಣಗಳಿಂದ ಅಲಂಕರಿಸಿಕೊಂಡು ಆಕಸ್ಮಿಕವಾಗಿ ಈ ಭರತಶತ್ರುಘ್ನರಿದ್ದ ಮನೆಯ ಪೂರ್ವದಿಕ್ಕಿನ ಬಾಗಿಲಿಗೆ ಬಂದಳು. ಆಗ ಆಕೆಯ ಅಲಂಕಾರವನ್ನು ಹೇಳತಕ್ಕುದೇನು? ಘಮಘಮಿಸುತ್ತಿರುವ ಗಂಧವನ್ನು ಮೈಗೆ ಲೇಪಿಸಿಕೊಂಡು, ಕೈಕೇಯಿಯು ಆಗಾಗ ತನಗೆ ಉಡುಗೊರೆಯಾಗಿ ಕೊಟ್ಟ ರಾಜಯೋಗ್ಯವಾದ ವಸ್ತ್ರಗಳನ್ನುಟ್ಟು, ನವರತ್ನಖಚಿತವಾದ ಆಭರಣಗಳನ್ನು ತೊಟ್ಟು, ಬಹಳ ಬೆಡಗಿನಿಂದ ಬರುತಿದ್ದಳು. ವಿಚಿತ್ರವರ್ಣವುಳ್ಳ ನಡುವಿನ ಪಟ್ಟಿಯನ್ನೂ, ಇನ್ನೂ ವಿಧವಿಧವಾದ ಭೂಷಣಗಳನ್ನು ಧರಿಸಿಕೊಂಡಿದ್ದಳು. ಎಷ್ಟಾಭರಣಗಳನ್ನು ತೊಟ್ಟರೇನು? ಎಷ್ಟು ಅಮೂಲ್ಯವಾದ ವಸ್ತ್ರಗಳನ್ನುಟ್ಟರೇನು? ಸ್ವಾಭಾವಿಕ ಸೌಂದರ್ಯವಿಲ್ಲದವರಿಗೆ ವಸ್ತ್ರಾಭರಣಗಳಿಂದ ಸೌಂದರ್ಯವನ್ನು ಹುಟ್ಟಿಸುವುದಕ್ಕಾದೀತೇ? ಇಷ್ಟು ಆಭರಣಗಳನ್ನು ತೊಟ್ಟಿದ್ದರೂ, ಆಕೆಯು ಹಗ್ಗದಿಂದ ಬಿಗಿದು ಕಟ್ಟಲ್ಪಟ್ಟ ಕೋತಿಯಂತೆ ಕಾಣುತಿದ್ದಳು. ಪಾಪಬುದ್ಧಿಯುಳ್ಳ ಆಕೆಯನ್ನು ಕಂಡೊಡನೆಯೇ ಅಲ್ಲಿ ಕಾವಲಿದ್ದ ದ್ವಾರಪಾಲಕರು ವೇಗದಿಂದ ಬಂದು, ನಿರ್ಘೃಣಳಾದ ಆಕೆಯನ್ನು ಸೆಳೆದುಕೊಂಡು ಹೋಗಿ ಶತ್ರುಘ್ನನ ಮುಂದೆ ನಿಲ್ಲಿಸಿ, “ಎಲೈ ರಾಜಕುಮಾರನೆ! ಇಷ್ಟು ಮಹಾನರ್ಥಗಳಿಗೂ ಇವಳೇ ಮೂಲವು. ಇವಳಿಂದಲೇ ರಾಮನು ಕಾಡುಪಾಲಾಗಿ ಹೋಗಬೇಕಾಯಿತು. ನಿನ್ನ ತಂದೆಯ ಸಾವಿಗೂ ಇವಳೇ ಕಾರಣವು. ಪರಮ ಘಾತುಕಿಯಾದ ಈ ಪಾಪಿನಿಯನ್ನು ಈಗ ನೀನು ನಿನ್ನ ಮನಸ್ಸಿಗೆ ಬಂದಂತೆ ಶಿಕ್ಷಿಸಬಹುದು” ಎಂದರು. ಇದನ್ನು ಕೇಳಿ ಶತ್ರುಘ್ನನು ಬಹುದುಃಖಿತನಾಗಿ ಆ ಅಂತಃಪುರದಲ್ಲಿದ್ದವರೆಲ್ಲರನ್ನೂ ಕುರಿತು, “ಯಾವಳಿಂದ ನನ್ನ ಒಡಹುಟ್ಟಿದವರಾದ

ರಾಮಲಕ್ಷ್ಮಣರಿಗೂ, ತಂದೆಯಾದ ದಶರಥನಿಗೂ ಇಷ್ಟು ತೀವ್ರದುಃಖ ವುಂಟಾಯಿತೋ ಆಕೆಯು ತನ್ನ ಕ್ರೂರಕಾರ್ಯಕ್ಕೆ ತಕ್ಕ ಫಲವನ್ನು ಈಗಲೇ ಅನುಭವಿಸುವಳು ! ನೀವೆಲ್ಲರೂ ನೋಡಿರಿ" ಎಂದು ಹೇಳಿ, ಸಖಿಯರ ನಡುವೆ ನಿಂತಿದ್ದ ಆ ಗೂನಿಯ ತಲೆಯಕೂದಲನ್ನು ಬಲಾತ್ಕಾರದಿಂದ ಹಿಡಿದು ಎಳೆಯು ತ್ತಿದ್ದನು. ಆವರಣವೆಲ್ಲವೂ ಕಿತ್ತುಹೋಗುವಂತೆ, ಆ ಮಂಥರೆಯು ಬಹು ದೀನಧ್ವನಿಯಿಂದ ಗಟ್ಟಿಯಾಗಿ ಕೂಗಿಡುತ್ತಿದ್ದಳು. ಆಮೇಲೆ ಮಂಥರೆಯ ಸಖಿಯರೆಲ್ಲರೂ ಭಯದಿಂದಲೂ, ವ್ಯಸನದಿಂದಲೂ ಕೂಡಿದವರಾಗಿ, ಶತ್ರುಘ್ನ ನಿಗೆ ಮಿತಿಮೀರಿಹೋಗಿರುವ ಕೋಪಾವೇಶವನ್ನು ನೋಡಿ ಹೆದರಿ ದಿಕ್ಕುದಿಕ್ಕಾಗಿ ಓಡಿಹೋದರು. ಆಗ ಇನ್ನುಕೆಲವು ಸಖಿಯರು, ಒಂದು ಕಡೆಯಲ್ಲಿ ಸೇರಿ, ಒಬ್ಬರಿಗೊಬ್ಬರು ಮುಖವನ್ನು ನೋಡುತ್ತಾ "ಈತನ ಸಂಕಲ್ಪವನ್ನು ನೋಡಿದರೆ ನಮ್ಮೆಲ್ಲರನ್ನೂ ನಿರ್ಮೂಲಮಾಡಿಬಿಡುವನೆಂದೇ ತೋರುವುದು ! ಈಗ ನಮ್ಮ ಪ್ರಾಣವನ್ನುಳಿಸಿಕೊಳ್ಳಬೇಕಾದರೆ ನಾವೆಲ್ಲರೂ ಒಂದಾಗಿ ಸೇರಿ ಕೌಸಲ್ಯೆಯ ಕಾಲಿಗೆಬಿದ್ದು ಮರೆಹೊಗುವುದೇ ಮೇಲು ! ಆಕೆಯು ಬಹಳ ದಯಾಳುವು ಮತ್ತು ಉದಾರಸ್ವಭಾವವುಳ್ಳವಳು. ಧರ್ಮಾಧರ್ಮಗಳನ್ನು ಚೆನ್ನಾಗಿ ತಿಳಿದವಳು. ಆದುದರಿಂದ ಯಶಸ್ವಿನಿಯಾದ ಆಕೆಯೇ ನಮಗೆ ಈಗ ಪ್ರಾಣರಕ್ಷಣೆಯನ್ನು ಮಾಡಬೇಕೇಹೊರತು ಬೇರೆ ಉಪಾಯವಿಲ್ಲವು" ಎಂದು ತಮ್ಮೊಳಗೆ ತಾವು ಆಲೋಚಿಸಿಕೊಂಡರು. ಇಷ್ಟರಲ್ಲಿ ಇತ್ತಲಾಗಿ ಶತ್ರುಘ್ನನು ಕೆಂಪಾದ ಕಣ್ಣುಳ್ಳವನಾಗಿ, ಆ ಗೂನಿಯನ್ನು ಹಿಡಿದೆಳೆಯುತ್ತಲೇ ಇದ್ದನು. ಆಕೆಯು "ಹೋ" ಎಂದು ಅರಚುತಿದ್ದಳು. ಅವಳ ತುರುಬನ್ನು ಹಿಡಿದು ಶತ್ರುಘ್ನನು ದರದರನೆ ನೆಲದಮೇಲೆ ಎಳೆದುಕೊಂಡು ಹೋಗುತ್ತಿದ್ದಾಗ, ಆ ಮಂಥರೆಯ ದೇಹದಲ್ಲಿದ್ದ ಒಡವೆಗಳೆಲ್ಲವೂ ಪುಡಿಪುಡಿಯಾಗಿ ಅಲ್ಲಲ್ಲಿ ಉದ್ದಕ್ಕೆ ಉದಿರಿಬಿದ್ದಿದ್ದುವು. ಈ ಆಭರಣದ ಪುಡಿಗಳಿಂದ ಮನೆಯ ಅಂಗಳವೆಲ್ಲವೂ, ನಕ್ಷತ್ರದ ಸಮೂಹಗಳಿಂದ ಕೂಡಿದ ಶರತ್ಕಾಲದ ಆಕಾಶದಂತೆ ಕಾಣಿಸುತಿತ್ತು. ಇಷ್ಟರಲ್ಲಿ ಆಕೆಯನ್ನು ಬಿಡಿಸಿಕೊಳ್ಳುವುದಕ್ಕಾಗಿ ಕೈಕೇಯಿಯು ಓಡಿಬರಲು, ಶತ್ರುಘ್ನನು ಆಕೆಯನ್ನು ಹುಂಕಾರದಿಂದ ಗದರಿಸಿ, ಕ್ರೂರವಾಕ್ಯಗಳನ್ನಾಡುತ್ತಾ ಬಲಾತ್ಕಾರದಿಂದೆಳೆದುಕೊಂಡೇ ಹೋಗುತಿದ್ದನು. ಕೈಕೇಯಿಯು ಶತ್ರುಘ್ನನ ಕ್ರೂರವಾಕ್ಯಗಳಿಗೆ ಬಹಳವಾಗಿ ನೊಂದು, ಆತನು ತನ್ನನ್ನೂ ಏನು ಮಾಡಿ

ಬಿಡುವನೋ ಎಂಬ ಭಯದಿಂದ ತತ್ತ್ರಳಿಸುತ್ತ, ಭರತನ ಸಮೀಪಕ್ಕೆ ಬಂದು, ಆತನಲ್ಲಿ ಮರೆಹೊಕ್ಕಳು. ಆಗ ಭರತನು ಕೈಕೇಯಿಯ ದುರವಸ್ಥೆಯನ್ನೂ, ಶತ್ರುಘ್ನನ ಕೋಪಾವೇಶವನ್ನೂ ನೋಡಿ ಮರುಕಗೊಂಡು, ಆತನನ್ನು ಕುರಿತು “ವತ್ಸ ಶತ್ರುಘ್ನನೆ! ಸಮಸ್ತಭೂತಗಳಲ್ಲಿಯೂ ಸ್ತ್ರೀಯರನ್ನು ಮಾತ್ರ ಕೊಲ್ಲಬಾರದು. ಅವರು ಯಾವ ತಪ್ಪನ್ನು ಮಾಡಿದರೂ ಮನ್ನಿಸಬೇಕು. ಇದೇ ಲೋಕಧರ್ಮವು. ಹೀಗಿಲ್ಲದಿದ್ದಪಕ್ಷದಲ್ಲಿ ನಾನು ಆಗಲೇ ಈ ಕೈಕೇಯಿಯನ್ನು ಕೊಂದುಬಿಡುತಿದ್ದೆನು. ಈಕೆಯು ಪರಮದುಷ್ಟೆಯಾಗಿದ್ದರೂ, ಇವಳನ್ನು ಕೊಂದರೆ ಧಾರ್ಮಿಕನಾದ ರಾಮನು ನನ್ನನ್ನು ಮಾತೃಘಾತುಕನೆಂದು ನಿಂದಿಸು ತಿದ್ದನು. ಆತನ ನಿಂದೆಗೆ ಒಳಗಾಗಬಾರದೆಂಬುದಕ್ಕಾಗಿಯೇ ಈ ಪಾಪಿಯನ್ನು ನಾನು ಸುಮ್ಮನೆ ಬಿಟ್ಟುಬಿಟ್ಟೆನು. ಈ ಗೂನಿಯನ್ನು ಕೊಲ್ಲುವುದರಿಂದ ಮಾತೃಹತ್ಯಾದೋಷವಿಲ್ಲದಿದ್ದರೂ, ಈ ವಿಷಯವು ರಾಮನಿಗೆ ತಿಳಿದರೆ ಆತನು ಸ್ತ್ರೀಹತ್ಯೆಯನ್ನು ಮಾಡಿದ ನಮ್ಮಿಬ್ಬರಿಗೂ ಮುಖಕೊಟ್ಟು ಮಾತನ್ನೇ ಆಡಲಾರನು. ಇದು ನಿಜವು” ಎಂದನು. ಈ ಮಾತನ್ನು ಕೇಳಿ ಶತ್ರುಘ್ನನು ಕೋಪವನ್ನು ತನ್ನಲ್ಲಿಯೇ ಅಡಗಿಸಿಕೊಂಡು ಆ ಮಂಥರೆಯನ್ನು ಬಿಟ್ಟು ಬಿಟ್ಟನು. ಶತ್ರುಘ್ನನು ಕೈಬಿಟ್ಟೊಡನೆಯೇ ಮಂಥರೆಯು ಕೈಕೇಯಿಯ ಕಾಲಿಗೆ ಬಿದ್ದು, ದುಃಖದಿಂದ ನಿಟ್ಟುಸಿರನ್ನು ಬಿಡುತ್ತಾ, ದೀನಸ್ವರದಿಂದ ಅಳುತಿದ್ದಳು. ಹೀಗೆ ಶತ್ರುಘ್ನನು ಹಿಡಿದೆಳೆದುದರಿಂದ ಮಂಥರೆಯು ಪ್ರಜ್ಞೆ ತಪ್ಪಿದವಳಂತೆ ಬಂದು ತನ್ನ ಕಾಲಮೇಲೆ ಬಿದ್ದು ಕ್ರೌಂಚಪಕ್ಷಿಯಂತೆ ನಾಲ್ಕು ಕಡೆಗಳನ್ನೂ ನೋಡಿ ದೈನ್ಯದಿಂದ ಕೂಗುತ್ತಿರಲು, ಕೈಕೇಯಿಯು ಮೃದುವಾಕ್ಯಗಳಿಂದ ಆಕೆಯನ್ನು ಅನೇಕವಿಧದಲ್ಲಿ ಸಮಾಧಾನಪಡಿಸಿದಳು.

ಇದು ಎಪ್ಪತ್ತೆಂಟನೆಯ ಸರ್ಗವು.

ಭರತನು ರಾಜ್ಯವನ್ನು ಅಂಗೀಕರಿಸದೆ, ರಾಮನನ್ನೇ ಹಿಂತಿರುಗಿಸಿ ಕರೆತರುವುದಕ್ಕಾಗಿ ಕಾಡಿಗೆ ಹೊರಡಬೇಕೆಂದು ನಿಶ್ಚಯಿಸಿ, ಮಾರ್ಗವನ್ನು ಕ್ರಮಪಡಿಸುವಂತೆ ನಿಯಮಿಸಿದುದು.

ಆಮೇಲೆ ಹದಿನಾಲ್ಕನೆಯದಿನದ ಪ್ರಾತಃಕಾಲದಲ್ಲಿ, ರಾಜ್ಯಾಭಿಷೇಕವನ್ನು ನಿರ್ವಹಿಸತಕ್ಕ ಅಧಿಕಾರಿಗಳೆಲ್ಲರೂ ಸೇರಿಬಂದು ಭರತನನ್ನು ನೋಡಿ “ನಮಗೆ ಪರಮಗುರುವಿನಂತಿದ್ದ ದಶರಥರಾಜನು, ತನ್ನ ಹಿರಿಯಮಗನಾದ ರಾಮನನ್ನೂ ಬಲಾಢ್ಯನಾದ ಲಕ್ಷ್ಮಣನನ್ನೂ ಕಾಡಿಗೆ ಕಳುಹಿಸಿ ತಾನೂ ಸ್ವರ್ಗಸ್ಥನಾದನು. ಎಲೈ ರಾಜಕುಮಾರನೆ! ಇನ್ನುಮೇಲೆ ಯಶಸ್ವಿಯಾದ ನೀನೇ ನಮಗೆ ರಾಜನಾಗಿದ್ದು ನಮ್ಮನ್ನು ಕಾಪಾಡಬೇಕು. ರಾಜ್ಯವನ್ನು ಇದುವರೆಗೆ ಅನಾಯಕವಾಗಿ ಬಿಟ್ಟದ್ದುದೇ ತಪ್ಪು! ಹೀಗಿದ್ದರೂ ದೈವಿಕವಾಗಿ ಇಲ್ಲಿನ ಪ್ರಜೆಗಳೊಬ್ಬರೂ ಪರಸ್ಪರ ದ್ರೋಹಚಿಹ್ನ ಚಿಂತೆಯಿಲ್ಲದೆ, ಯಾವ ಅಪರಾಧಗಳನ್ನೂ ನಡೆಸದೆ ಅಭಿಷೇಕಸಾಮಗ್ರಿಗಳೆಲ್ಲವೂ ಯಥಾವತ್ತಾಗಿ ಸಿದ್ಧಪಡಿಸಲ್ಪಟ್ಟಿರುವುವು. ಮಂತ್ರಿ ಮೊದಲಾದವರೂ ಇತರ ಪ್ರಜೆಗಳೂ ನಿನ್ನನ್ನೇ ಇದಿರುನೋಡುತ್ತಿರುವರು. ಎಲೈ ಪುರುಷಶ್ರೇಷ್ಠನೆ! ನಿನ್ನ ಕುಲಕ್ರಮಾಗತವಾಗಿ ಬಂದಿರುವ ಈ ಸ್ಥಿರರಾಜ್ಯವನ್ನು ಪರಿಗ್ರಹಿಸಿ ಅಭಿಷೇಕವನ್ನು ನಡೆಸಿಕೊಂಡು, ನಮ್ಮೆಲ್ಲರನ್ನೂ ಪಾಲಿಸು” ಎಂದರು. ನೀತಿಜ್ಞನಾದ ಭರತನು ಅಲ್ಲಿ ಸಿದ್ಧವಾಗಿದ್ದ ಅಭಿಷೇಕಕಾರ್ಯಗಳೆಲ್ಲವನ್ನೂ ಪ್ರದಕ್ಷಿಣಮಾಡಿ, ಅಭಿಷೇಕ ಕಾರ್ಯದಲ್ಲಿ ನಿಯಮಿಸಲ್ಪಟ್ಟ ಆ ಅಧಿಕಾರಿಗಳನ್ನು ನೋಡಿ, “ಎಲೈ ಪೂಜ್ಯರೇ! ನಮ್ಮ ವಂಶದಲ್ಲಿ ಜ್ಯೇಷ್ಠಪುತ್ರನೇ ರಾಜ್ಯಾಭಿಷೇಕವನ್ನು ವಹಿಸುವುದು ಕುಲಕ್ರಮಾಗತವಾಗಿ ಬಂದ ಧರ್ಮವಲ್ಲವೆ? ಹೀಗಿರುವಾಗಲೂ ಇವೆಲ್ಲವನ್ನೂ ತಿಳಿದ ನೀವು ನನ್ನೊಡನೆ ಈ ಮಾತುಗಳನ್ನಾಡಬಹುದೆ? ನಮಗೆ ಹಿರಿಯನಾದ ರಾಮನೇ ನಿಮ್ಮನ್ನು ಪಾಲಿಸುವುದಕ್ಕೆ ತಕ್ಕ ರಾಜನು. ನಾನೇ ಆತನಿಗೆ ಪ್ರತಿಯಾಗಿ ಹದಿನಾಲ್ಕು ವರ್ಷಗಳವರೆಗೆ ಕಾಡಿನಲ್ಲಿದ್ದು ಬರುವೆನು. ನಾನೇ ಹೋಗಿ ಆತನನ್ನು ಹಿಂತಿರುಗಿಸಿ ಕರೆತಂದು ರಾಜ್ಯದಲ್ಲಿರಿಸುವೆನು. ನಮ್ಮ ಸಮಸ್ತ ಸೈನ್ಯಗಳನ್ನೂ ಸಂಗಡ ಕರೆದುಕೊಂಡುಹೋಗುವೆನು. ನಮ್ಮ ಚತುರಂಗ ಸೈನ್ಯವನ್ನೂ ಕರೆತರಿಸಿರಿ! ಈಗ ನೀವು ಅಭಿಷೇಕಾರ್ಥವಾಗಿ ಸಿದ್ಧಪಡಿಸಿರುವ ಸಮಸ್ತವಸ್ತುಗಳನ್ನೂ ನನ್ನ ಸಂಗಡ ಅಲ್ಲಿಗೇ ಸಾಗಿಸಿಕೊಂಡು ಹೋಗುವೆನು. ಸಂಸ್ಕರಿಸಲ್ಪಟ್ಟ ಆ ಸಾಮಗ್ರಿ

ಗಳೆಲ್ಲವನ್ನೂ ತರಿಸಿರಿ! ಪೂಜ್ಯನಾದ ರಾಮನಿಗೆ ಅವನಿರತಕ್ಕ ವನದಲ್ಲಿಯೇ ಈ ರಾಜ್ಯದ ಪಟ್ಟಾಭಿಷೇಕವನ್ನು ಮಾಡಿ, ಯಾಗಶಾಲೆಯಿಂದ ತ್ರೇತಾಗ್ನಿಯನ್ನು ತರುವಂತೆ ಅಭಿಷಿಕ್ತನಾದ ಆತನನ್ನೇ ಇಲ್ಲಿಗೆ ಕರೆತರುವೆನು. ಹೆಸರು ಮಾತ್ರಕ್ಕೆ ನನಗೆ ತಾಯಿಯೆನಿಸಿಕೊಂಡಿರುವ ದುಷ್ಟೆಯಾದ ಈ ಕೈಕೇಯಿಯ ಕೋರಿಕೆಯನ್ನು ನಾನೆಂದಿಗೂ ಈಡೇರಿಸಲಾರೆನು. ಇವಳ ಕೋರಿಕೆಗೆ ವಿರುದ್ಧವಾಗಿಯೇ ನಡೆಸಬೇಕೆಂಬುದು ನನ್ನ ಸಂಕಲ್ಪವು. ಅದಕ್ಕಾಗಿಯೇ ನಾನು ಕಾಡಿನಲ್ಲಿದ್ದುಬಿಡುವೆನು. ರಾಮನು ರಾಜನಾಗಿರಲಿ! ಹಳ್ಳತಿಟ್ಟುಗಳನ್ನು ಸಮಮಾಡಿ, ದಾರಿಯನ್ನು ಕ್ರಮಪಡಿಸುವಂತೆ ಶಿಲ್ಪಿಗಳಿಗೆ ಆಜ್ಞಾಪಿಸಿರಿ! ಮತ್ತು ದಾರಿಯಲ್ಲಿ ದುರ್ಗಮವಾದ ಸ್ಥಳಗಳನ್ನು ಪರಿಶೋಧಿಸಿ ತಿಳಿದು, ಅವುಗಳನ್ನು ಸುರಕ್ಷಿತವಾಗಿ ದಾಟಿಸತಕ್ಕ ಕಾವಲುಗಾರರನ್ನು ಅಲ್ಲಲ್ಲಿ ನಿಯಮಿಸಿಡಿರಿ!" ಎಂದನು. ಹೀಗೆ ರಾಮನಿಗಾಗಿ ಮರುಕಗೊಂಡು ಆತನನ್ನು ಗೌರವಿಸಿ ಮಾತಾಡುತಿದ್ದ ಭರತನನ್ನು ನೋಡಿ ಅಲ್ಲಿದ್ದ ಜನರೆಲ್ಲರೂ "ಎಲೈ ರಾಜಪುತ್ರನೇ! ಸ್ವಪ್ರಯೋಜನವನ್ನು ಬಿಟ್ಟು ಹಿರಿಯಣ್ಣನಲ್ಲಿ ಇಷ್ಟು ಗೌರವಬುದ್ಧಿಯನ್ನು ತೋರಿಸುತ್ತಿರುವ ಮಹಾತ್ಮನಾದ ನಿನ್ನನ್ನು ಪದ್ಮಾಲಯೆಯಾದ ಲಕ್ಷ್ಮಿಯು ಎಡೆಬಿಡದೆ ಅನುವರ್ತಿಸುತ್ತಿರಬೇಕೆಂಬುದೇ ನಮ್ಮ ಶ್ರೇಯಃಪ್ರಾರ್ಥನೆಯು!" ಎಂದರು. ತನ್ನ ಕೈಗೆ ಸಿಕ್ಕಿದ ರಾಜ್ಯವನ್ನು ತನ್ನ ಅಣ್ಣನಿಗೇ ಕೊಡಿಸಬೇಕೆಂದು ದೃಢಸಂಕಲ್ಪವನ್ನು ಮಾಡಿರುವ ಆ ಭರತನ ಲೋಕೋತ್ತರವಾದ ಮಾತುಗಳನ್ನು ಕೇಳಿ, ಅಲ್ಲಿದ್ದ ಸಮಸ್ತ ಜನರೂ ಸಂತೋಷದಿಂದ ಆನಂದಬಾಷ್ಪವನ್ನು ಬಿಡುತಿದ್ದರು. ಆಗ ಅಲ್ಲಿದ್ದ ಅಧಿಕಾರಿಗಳೆಲ್ಲರೂ ಮಂತ್ರಿಗಳೊಡಗೂಡಿ, ಭರತನ ಮಾತಿಗೆ ಸಮಾಧಾನಗೊಂಡವರಾಗಿ, ಆತನನ್ನು ಕುರಿತು "ಎಲೈ ರಾಜಪುತ್ರನೆ! ನಿನ್ನ ಆಜ್ಞೆಯಂತೆಯೇ ಮಾರ್ಗವನ್ನು ಕ್ರಮಪಡಿಸುವುದಕ್ಕಾಗಿ ರಾಜಭಕ್ತಿಯುಳ್ಳ ರಕ್ಷಕರನ್ನೂ, ಶಿಲ್ಪಿಗಳನ್ನೂ ಸಿದ್ಧಪಡಿಸಿರುವೆವು" ಎಂದರು.

ಇದು ಎಪ್ಪತ್ತೊಂಬತ್ತನೆಯ ಸರ್ಗವು.

ಅಯೋಧ್ಯೆಯಿಂದ ಗಂಗಾನದಿಯವರೆಗೂ ಮಾರ್ಗವನ್ನು ಕ್ರಮಪಡಿಸಿದುದು.

ಆಮೇಲೆ ಅಲ್ಲಲ್ಲಿ ಭೂಪ್ರದೇಶಗಳ ಸ್ಥಿತಿಯನ್ನು ತಿಳಿದವರೂ, ಸೂತ್ರಕಾರ್ಯಗಳನ್ನು ತಿಳಿದು ಅಲ್ಲಲ್ಲಿ ಆಳವಾದ ವಾಪೀಕೂಪಾದಿಗಳಿಂದ ನೀರು ಸೇದುವುದಕ್ಕೆ ತಕ್ಕ ಸಾಧನಗಳನ್ನು ಸಿದ್ಧಪಡಿಸುವವರೂ, ನೇಗೆಯವರೂ, ತಮ್ಮ ತಮ್ಮ ಕಾರ್ಯಗಳನ್ನು ಅಕ್ಕರೆಯಿಂದ ನಡೆಸಿ ನಿರ್ವಹಿಸತಕ್ಕ ಶೂರರಾದ ರಕ್ಷಕರೂ, ನೆಲದ ಮಣ್ಣನ್ನು ತೋಡತಕ್ಕ ಕೆಲಸಗಾರರೂ, ಯಂತ್ರಗಳನ್ನು ನಿರ್ಮಿಸತಕ್ಕವರೂ, ಕೂಲಿಯವರೂ, ಬಡಗಿಗಳೂ, ಬಲೆಗಾರರೂ, ನದೀತರಣಾದಿಗಳಿಗೆ ಬೇಕಾದ ಯಂತ್ರಗಳನ್ನು ನಿರ್ಮಿಸತಕ್ಕವರೂ, ಮರಗೆಲಸದವರೂ, ಮಾರ್ಗಗಳನ್ನು ಕ್ರಮಪಡಿಸುವುದರಲ್ಲಿ ಚಾತುರ್ಯವುಳ್ಳವರೂ, ಮರಗಳನ್ನು ಕಡಿಯತಕ್ಕವರೂ, ಸುಣ್ಣವನ್ನು ಬಳಿಯುವವರೂ, ಮೇದರೂ, ಮಾರ್ಗವನ್ನು ಪರೀಕ್ಷಿಸಿ ನೋಡತಕ್ಕವರೂ, ಇನ್ನೂ ಆಯಾ ಕಾರ್ಯಗಳಲ್ಲಿ ವಿಶೇಷಾನುಭವವುಳ್ಳ ಕೆಲಸಗಾರರೂ ಮುಂದಾಗಿ ಹೊರಟು ದಾರಿಯನ್ನು ಸರಿಮಾಡತೊಡಗಿದರು. ಹೀಗೆ ಅಪಾರವಾದ ಜನಸಮೂಹವು ಅತ್ಯುತ್ಸಾಹದಿಂದ ಕೆಲಸ ಮಾಡುತ್ತ, ದಾರಿಯಲ್ಲಿ ಉದ್ದಕ್ಕೂ ಸಂಭ್ರಮದಿಂದ ಓಡಾಡುತ್ತಿರಲು, ಪರ್ವಕಾಲದಲ್ಲಿ ಪ್ರವಾಹ ವೇಗದಿಂದ ಉಕ್ಕುತ್ತಿರುವ ಮಹಾ ಸಮುದ್ರದಂತೆ ತೋರುತ್ತಿತ್ತು. ಹೀಗೆ ಮಾರ್ಗಗಳನ್ನು ಸರಿಮಾಡುವುದರಲ್ಲಿ ನಿಪುಣರಾದ ಕೆಲಸಗಾರರೆಲ್ಲರೂ ತಕ್ಕ ಸಾಧನಗಳನ್ನು ಹಿಡಿದು ತಮ್ಮ ತಮ್ಮ ಭಾಗಕ್ಕೆ ನಿರ್ಣಯಿಸಲ್ಪಟ್ಟ ಭೂಪ್ರದೇಶಗಳನ್ನು ಸರಿಮಾಡುತ್ತ ಮುಂದೆ ಮುಂದೆ ಹೋಗುತ್ತಿದ್ದರು. ಅವರು ಅಲ್ಲಲ್ಲಿ ದಾರಿಗೆ ಅಡ್ಡಲಾಗಿದ್ದ ಕೊಂಬೆಗಳನ್ನೂ, ಬಳ್ಳಿಗಳನ್ನೂ, ಪೊದೆಗಳನ್ನೂ, ಮರಗಳನ್ನೂ, ಕಲ್ಲುಗಳನ್ನೂ, ಕಡಿದೊತ್ತರಿಸುತ್ತ, ಮಾರ್ಗವನ್ನು ಸರಿಮಾಡುತ್ತಿದ್ದರು. ಕೆಲವರು ವೃಕ್ಷವಿಲ್ಲದ ಕಡೆಗಳಲ್ಲಿ ನೆಳಲಿಗಾಗಿ ಸಾಲುಮರಗಳನ್ನು ನಡುತ್ತಿದ್ದರು. ಮತ್ತೆ ಕೆಲವರು ಕೊಡಲಿಗಳಿಂದಲೂ, ಕಲ್ಲುಳಿಗಳಿಂದಲೂ, ಕುಡುಗೋಲುಗಳಿಂದಲೂ ದಾರಿಗಡ್ಡವಾಗಿದ್ದ ಮುಳ್ಳು, ಮೊದಲಾದುವುಗಳನ್ನು ತೆಗೆದುಹಾಕುತ್ತಿದ್ದರು. ಇನ್ನು ಕೆಲವರು ಅಲ್ಲಲ್ಲಿ ದಾರಿಗಡ್ಡಲಾಗಿ ಬೆಳೆದು ಬಲವಾಗಿ ನಾಟಕೊಂಡಿರುವ ಹುಲ್ಲುಕಡ್ಡಿ

ಮೊದಲಾದುವುಗಳಿಗೆ ಬೆಂಕಿಯಿಟ್ಟು ಅವುಗಳನ್ನು ಸುಡುತ್ತಿದ್ದರು. ಕೆಲವರು ದುರ್ಗಮವಾದ ಸ್ಥಳಗಳನ್ನು ಬಹು ಪ್ರಯತ್ನಪಟ್ಟು ಸರಿಮಾಡುತ್ತಿದ್ದರು. ಮತ್ತೆ ಕೆಲವರು ಅಲ್ಲಲ್ಲಿ ಆಳವಾದ ಬಾವಿಗಳನ್ನೂ, ವಿಸ್ತಾರವಾದ ಹಳ್ಳಗಳನ್ನೂ ಮಣ್ಣಿನಿಂದ ಮುಚ್ಚುತ್ತಿದ್ದರು. ಹಾಗೆಯೇ ಕೆಲವರು ತಗ್ಗು ನೆಲವನ್ನು ಸಮ ಮಾಡುತ್ತಿದ್ದರು. ಅಲ್ಲಲ್ಲಿ ನದಿಗಳನ್ನು ದಾಟುವುದಕ್ಕಾಗಿ ಸೇತುವೆ ಮೊದಲಾದ ಕಟ್ಟಡಗಳನ್ನು ಕಟ್ಟಬೇಕಾದ ಸ್ಥಳಗಳಲ್ಲಿ ಅವುಗಳನ್ನು ಕಟ್ಟುತ್ತ, ಒಡೆಯ ಬೇಕಾದ ದಿಣ್ಣೆಗಳನ್ನೊಡೆಯುತ್ತ, ಸೀಳಬೇಕಾದ ಕಡೆಯಲ್ಲಿ ಸೀಳುತ್ತ, ಆಯಾ ಪ್ರದೇಶಗಳನ್ನು ಸರಿಮಾಡುತ್ತಿದ್ದರು. ಅಲ್ಲಲ್ಲಿ ಸೇನೆಗಳಿಗೆ ತಕ್ಕಂತೆ ಜಲ ಸಮೃದ್ಧಿಯನ್ನುಂಟುಮಾಡುವುದಕ್ಕಾಗಿ, ದಾರಿಯಲ್ಲಿ ಹರಿಯುತ್ತಿದ್ದ ಸಣ್ಣ ಪ್ರವಾಹಗಳಿಗೆ ಅಣೆಕಟ್ಟನ್ನು ಕಟ್ಟಿ, ನೀರನ್ನು ತಡೆದು, ನಿಮಿಷಮಾತ್ರದಲ್ಲಿ ದೊಡ್ಡ ಸಮುದ್ರದಂತೆ ಮಾಡಿಟ್ಟರು. ನೀರಿಲ್ಲದ ಕಡೆಗಳಲ್ಲಿ ಅತ್ಯುತ್ತಮವಾದ ನೀರು ಸಿಕ್ಕುವಂತೆ ಬಾವಿಗಳನ್ನು ತೋಡಿ, ಅವುಗಳಿಗೆ ಸುಲಭವಾಗಿ ಇಳಿದು ಹೋಗುವಂತೆ ಸೋಪಾನಗಳನ್ನೂ ಮಾಡಿಟ್ಟರು. ಬಹು ಶೀಘ್ರದಲ್ಲಿಯೇ ದಾರಿಯು ಕ್ರಮಪಡಿಸಲ್ಪಟ್ಟಿತು. ಭರತನ ಸೈನ್ಯವು ನಡೆದುಬರತಕ್ಕ ದಾರಿ ಯಲ್ಲಿ ಉದ್ದಕ್ಕೂ ನೆಲದ ಮೇಲೆ ಸುಣ್ಣದ ತಿಳಿಯನ್ನು ಚೆಲ್ಲಿದ್ದರು. ಪುಷ್ಪ ಫಲಭರಿತವಾದ ಸಾಲುಮರಗಳನ್ನೇ ಉದ್ದಕ್ಕೂ ನಟ್ಟಿದ್ದರು. ಆ ಮರಗಳ ಮೇಲೆ ಮಕರಂದಪಾನದಿಂದ ಮದಿಸಿದ ಪಕ್ಷಿಗಳೆಲ್ಲವೂ ಕಿವಿಗಿಂಪಾಗಿ ಕೂಗು ತ್ತಿದ್ದುವು. ದಾರಿಯ ಉದ್ದಕ್ಕೂ ಪತಾಕೆಗಳನ್ನು ನಾಟಿದ್ದರು. ಉದ್ದಕ್ಕೂ ಸುಗಂಧಶೀತಲವಾದ ನೀರನ್ನು ಚೆಲ್ಲಿ ಪುಷ್ಪಗಳನ್ನು ಉದಿರಿಸಿದ್ದರು. ಆ ಮಾರ್ಗವು ದೇವಲೋಕದ ದಾರಿಯಂತೆಯೇ ಅತಿ ಮನೋಹರವಾಗಿ ಪ್ರಕಾಶಿಸು ತಿತ್ತು. ಹೀಗೆ ದಾರಿಯು ಕ್ರಮಪಟ್ಟ ಮೇಲೆ, ಅಲ್ಲಲ್ಲಿ ವಿಶ್ರಾಂತಿಗಾಗಿ, ಶಿಬಿರಗಳನ್ನು ನಿರ್ಮಿಸುವುದರಲ್ಲಿ ಸಮರ್ಥರಾದ ಕೆಲಸಗಾರರೆಲ್ಲರೂ ಒಂದಾಗಿ ಕಲೆತು, ರಮಣೀಯವಾದ ಸ್ಥಳಗಳನ್ನು ನೋಡಿ ರುಚಿರುಚಿಯಾದ ಫಲಗಳ ಸಮೃದ್ಧಿಯುಳ್ಳ ಅನುಕೂಲವಾದ ಪ್ರದೇಶಗಳಲ್ಲಿ, ಮಹಾತ್ಮನಾದ ಭರತನ ಮನೋಭಿಪ್ರಾಯವನ್ನನುಸರಿಸಿ ಬಿಡಾರಗಳನ್ನು ಮಾಡಿಟ್ಟರು. ಅವುಗಳಿಗೆ ಮೇಲುಕಟ್ಟು ಮೊದಲಾದ ವಿಚಿತ್ರಾಲಂಕಾರಗಳನ್ನೂ ಮಾಡಿಟ್ಟರು. ವಾಸ್ತು ಶಾಸ್ತ್ರವನ್ನು ಚೆನ್ನಾಗಿ ಬಲ್ಲ ಶಿಲ್ಪಿಗಳು, ಭರತನ ವಾಸಾರ್ಥವಾಗಿ ಪ್ರಶಸ್ತವಾದ

ಶುಭದಿನ ಮುಹೂರ್ತ ನೋಡಿ ನಿವೇಶನಗಳನ್ನು ಕಟ್ಟಿದರು. ಅದರ ನೆಲಕ್ಕೆಲ್ಲಾ ಸಣ್ಣ ಮರಳನ್ನು ಹರಡಿ, ಅದರ ಸುತ್ತಲೂ ಕಾಲುವೆಯನ್ನಗೆದು, ಅದರೊಳಗಡೆಯಲ್ಲಿಯೇ ವಿನೋದ ಸಂಚಾರಾರ್ಥವಾದ ಬೀದಿಗಳನ್ನೂ ಮಾಡಿಟ್ಟರು. ಅದರ ಸನ್ನಿವೇಶವು ಇಂದ್ರಕೀಲಪರ್ವತದಂತೆ ಅತಿಮನೋಹರವಾಗಿ ಕಾಣುತ್ತಿತ್ತು. ಅದರಲ್ಲಿಯೇ ಅಲ್ಲಲ್ಲಿ ಪ್ರಸಾದಗಳೂ, ಉಪ್ಪರಿಗೆಗಳೂ, ಗೋಪುರಗಳೂ, ಪ್ರಾಕಾರಗಳೂ ಕಂಗೊಳಿಸುತ್ತಿದ್ದುವು. ನಾಲ್ಕು ಕಡೆಗಳೂ ಧ್ವಜಪತಾಕೆಗಳಿಂದ ಅಲಂಕರಿಸಲ್ಪಟ್ಟಿದ್ದುವು. ಅಲ್ಲಲ್ಲಿ ರಾಜಮಾರ್ಗಗಳನ್ನೂ ಮಾಡಿದ್ದರು. ಅದರ ಮೇಲುಮನೆಗಳೆಲ್ಲವೂ, ಆಕಾಶವನ್ನು ವ್ಯಾಪಿಸಿದಂತೆ ಅತ್ಯುನ್ನತಗಳಾಗಿ ಕಾಣುತ್ತ, ಇಂದ್ರಪುರದಂತೆಯೇ ಭ್ರಾಂತಿಯನ್ನುಂಟುಮಾಡುತ್ತಿದ್ದುವು. ನಾನಾ ವಿಧ ವೃಕ್ಷ ಸಮೂಹಗಳಿಂದಲೂ, ನಿರ್ಮಲವಾದ ನೀರಿನ ಸಮೃದ್ಧಿಯಿಂದಲೂ ಅಂದವಾದ ಮೀನುಗಳಿಂದಲೂ ಕೂಡಿದ ಗಂಗಾನದಿಯವರೆಗೂ ಹೀಗೆ, ಅಲ್ಲಲ್ಲಿ ಸಾಲಾಗಿ ಶಿಬಿರಗಳು ನಿರ್ಮಿಸಲ್ಪಟ್ಟಿದ್ದುವು. ರಾತ್ರಿಯಲ್ಲಿ ಚಂದ್ರನಿಂದಲೂ ನಕ್ಷತ್ರ ಸಮೂಹದಿಂದಲೂ ಕೂಡಿ ಪ್ರಕಾಶಿಸುವ ನಿರ್ಮಲವಾದ ಗಗನಪ್ರದೇಶದಂತೆ ಸಮರ್ಥರಾದ ಶಿಲ್ಪಿಗಳಿಂದ ನಿರ್ಮಿಸಲ್ಪಟ್ಟ ಆ ಮಾರ್ಗವು ಅತಿಮನೋಹರವಾಗಿ ತೋರುತ್ತಿತ್ತು.

ಇದು ಎಂಬತ್ತನೆಯ ಸರ್ಗವು.

ಭರತನ ಶೋಕವು. ವಸಿಷ್ಠನು ಸುಮಂತ್ರನನ್ನು ಕಳುಹಿಸಿ ಭರತಶತ್ರುಘ್ನರನ್ನು ರಾಜಸಭೆಗೆ ಕರೆಸಿದುದು.

ಹೀಗೆ ಇತ್ತಲಾಗಿ ರಾಮನನ್ನು ಕರೆತರಬೇಕೆಂಬ ಮಹೋತ್ಸಾಹವೂ, ಅತ್ತಲಾಗಿ ವಸಿಷ್ಠನು ಭರತಾಭಿಷೇಕಕ್ಕಾಗಿ ನಡೆಸಿದ ನಾಂದೀಕಾರ್ಯವೂ ಆರಂಭಿಸಿರಲು, ಆ ದಿನದ ಅಪರರಾತ್ರಿಯಲ್ಲಿ ವಂದಿಮಾಗಧರೆಲ್ಲರೂ ಬಂದು, ಮಂಗಳ ಸ್ತುತಿಗಳಿಂದ ಭರತನನ್ನು ಸ್ತೋತ್ರಮಾಡಲಾರಂಭಿಸಿದರು. ಯಾಮ ಸೂಚಕವಾದ ದುಂದುಭಿವಾದ್ಯಗಳು ಸುವರ್ಣಮಯವಾದ ದಂಡದಿಂದ ನುಡಿಸಲ್ಪಡುತ್ತಿದ್ದುವು. ಅಲ್ಲಲ್ಲಿ ಶಂಖಗಳನ್ನು ಊದುತ್ತಿದ್ದರು. ಕಹಳೆ ಮೊದಲಾದ

ನಾನಾ ವಿಧ ವಾದ್ಯಗಳನ್ನೂ ನುಡಿಸುತ್ತಿದ್ದರು. ಈ ವಾದ್ಯ ಧ್ವನಿಗಳು ಆಕಾಶವನ್ನು ತುಂಬುವ ಹಾಗೆ ಸುತ್ತಲೂ ವ್ಯಾಪಿಸಿದುವು. ಈ ಮಹೋತ್ಸಾಹವು ಭರತನಿಗೆ ಪೂರ್ವಸ್ಮರಣೆಯನ್ನು ತಂದು, ಆತನ ದುಃಖವನ್ನು ಪುನಃ ಮರುಕೊಳಿಸುವ ಹಾಗೆ ಮಾಡಿತು. ಆಗಲೇ ಭರತನು ಆ ಸ್ತುತಿಪಾಠಕರನ್ನು ತಡೆದು, ವಾದ್ಯಗಳೆಲ್ಲವನ್ನೂ ನಿಲ್ಲಿಸುವಂತಾಜ್ಞಾಪಿಸಿ, "ನನ್ನನೇಕೆ ರಾಜನಂತೆ ಸ್ತೋತ್ರ ಮಾಡುವಿರಿ? ನಾನು ರಾಜನಲ್ಲ! ನಿಲ್ಲಿಸಿರಿ!" ಎಂದು ಹೇಳಿ, ಆಮೇಲೆ ಶತ್ರುಘ್ನನನ್ನು ನೋಡಿ, "ವತ್ಸ ಶತ್ರುಘ್ನನೆ! ಕೈಕೇಯಿಯು ಈ ಪ್ರಪಂಚಕ್ಕೆ ಕೇಡುಂಟಾಗುವಂತೆ ಎಂತಹ ಮಹಾಪಕಾರವನ್ನುಂಟುಮಾಡಿಬಿಟ್ಟಳು. ನೋಡಿದೆಯಾ? ಅವಳಿಂದಲ್ಲವೇ ನಮ್ಮ ರಾಜನೂ ನಮ್ಮನ್ನು ಇಷ್ಟು ದುಃಖಕ್ಕೆ ಭಾಗಿಗಳನ್ನಾಗಿ ಮಾಡಿ, ತಾನೂ ಹೊರಟುಹೋದನು? ಮಹಾತ್ಮನಾದ ನಮ್ಮ ರಾಜನನ್ನು ಆಶ್ರಯಿಸಿಕೊಂಡಿದ್ದ ಈ ನಮ್ಮ ಇಕ್ಷ್ವಾಕುವಂಶದ ರಾಜಲಕ್ಷ್ಮಿಯೂ ಈಗ ತಕ್ಕ ಆಶ್ರಯವಿಲ್ಲದುದಕ್ಕಾಗಿ ನಾವಿಕನಿಲ್ಲದ ದೋಣಿಯಂತೆ ಅಲೆದಾಡಬೇಕಾಯಿತು. ನಮ್ಮೆಲ್ಲರಿಗೂ ಮುಖ್ಯನಾದ ರಾಮನೂ ಕಾಡಿಗೆ ಕಳುಹಿಸಲ್ಪಟ್ಟನು. ಈ ಅನರ್ಥಗಳೆಲ್ಲಕ್ಕೂ ಧರ್ಮಹೀನೆಯಾದ ಕೈಕೇಯಿಯೇ ಮೂಲವು" ಎಂದನು. ಹೀಗೆಂದು ಗೋಳಿಡುತ್ತ ಪ್ರಜ್ಞೆ ತಪ್ಪಿದ ಭರತನನ್ನು ನೋಡಿ, ಅಲ್ಲಿದ್ದ ರಾಜಸ್ತ್ರೀಯರೆಲ್ಲರೂ ದುಃಖದಿಂದ ದೀನವಾಗಿ ಪ್ರಲಾಪಿಸತೊಡಗಿದರು. ಭರತನು ಇತ್ತಲಾಗಿ ಹೀಗೆ ಪ್ರಲಾಪಿಸುತ್ತಿರಲು, ರಾಜಧರ್ಮಗಳೆಲ್ಲವನ್ನೂ ಚೆನ್ನಾಗಿ ಬಲ್ಲ ವಸಿಷ್ಠನು, ಅತ್ತಲಾಗಿ ರಾಜಸಭೆಗೆ ಹೋದನು. ಮಹಾ ಯಶಸ್ವಿಯಾದ ಆತನು ಸುವರ್ಣಮಯವಾಗಿಯೂ, ಅತಿ ಮನೋಹರವಾಗಿಯೂ, ರತ್ನಾಲಂಕೃತವಾಗಿಯೂ, ಸುಧರ್ಮ ಸಭೆಯಂತೆ ಅತಿ ಮನೋಹರವಾಗಿಯೂ ಇದ್ದ ಆ ಸಭೆಯನ್ನು ಶಿಷ್ಯಗಣದಿಂದ ಕೂಡಿ ಪ್ರವೇಶಿಸಿ, ಅಲ್ಲಿ ಮೃದುವಾದ ಮೇಲು ಹೊದಿಕೆಯಿಂದ ಕೂಡಿದ ಒಂದು ಸುವರ್ಣಪೀಠದಲ್ಲಿ ಕುಳಿತನು. ಆಮೇಲೆ ಸಮಸ್ತ ವೇದಗಳನ್ನೂ ತಿಳಿದ ಆ ಮಹಾತ್ಮನು, ಅಲ್ಲಿದ್ದ ದೂತರನ್ನು ಕಂಡು ಅಯೋಧ್ಯೆಯಲ್ಲಿರತಕ್ಕ ಬ್ರಾಹ್ಮಣೋತ್ತಮರನ್ನೂ, ಕ್ಷತ್ರಿಯರನ್ನೂ, ವೈಶ್ಯರನ್ನೂ, ಮಂತ್ರಿಗಳನ್ನೂ, ಆಯಾ ಸಂಗಡಗಳಲ್ಲಿ ಪ್ರಮುಖರಾದವರನ್ನೂ ಕೂಡಲೇ ಕರೆತರುವಂತೆ ಆಜ್ಞಾಪಿಸಿದನು. ಹಾಗೆಯೆ ರಾಜಪುತ್ರರಾದ ಭರತಶತ್ರುಘ್ನರನ್ನೂ, ಯುಧಾಜಿತ್ತನನ್ನೂ, ಸುಮಂತ್ರನನ್ನೂ.

*

ಇನ್ನು ರಾಜ್ಯಕ್ಕೆ ಹಿತೈಷಿಗಳಾದವರು ಯಾರು ಯಾರುಂಟೋ ಅವರೆಲ್ಲರನ್ನೂ ಆ ಸಭೆಗೆ ಕರೆತರುವಂತೆ ನಿಯಮಿಸಿದನು. ಹೀಗೆ ವಸಿಷ್ಠನು ಆಗಿನ ಕಾರ್ಯಾತುರವನ್ನು ತಿಳಿಸಿ ದೂತರನ್ನು ತ್ವರೆಪಡಿಸಿದೊಡನೆಯೇ, ಪುರವಾಸಿಗಳನೇಕರು ತಮ್ಮ ತಮ್ಮ ಸ್ಥಿತಿಗೆ ತಕ್ಕಂತೆ ಆನೆಗಳನ್ನೂ, ಕುದುರೆಗಳನ್ನೂ, ರಥಗಳನ್ನೂ ಏರಿ, ರಾಜಸಭೆಗೆ ಹೊರಟುಬರುತ್ತಿದ್ದರು. ಆಗ ಅಯೋಧ್ಯೆಯಲ್ಲಿ ದೊಡ್ಡ ಕೋಲಾಹಲವುಂಟಾಯಿತು. ಅವರೆಲ್ಲರೂ ಬಂದು ಸೇರಿದ ಮೇಲೆ ಭರತನೂ ರಾಜ ಸಭೆಯನ್ನು ಪ್ರವೇಶಿಸಿದನು. ಸಭಾಪ್ರವೇಶವನ್ನು ಮಾಡುತ್ತಿದ್ದ ಭರತನನ್ನು ನೋಡಿ ಪ್ರಜೆಗಳೆಲ್ಲರೂ ಅತ್ಯುತ್ಸಾಹಗೊಂಡವರಾಗಿ, ಮೊದಲು ದಶರಥನನ್ನು ಗೌರವಿಸುತ್ತಿದ್ದಂತೆಯೇ ಆತನನ್ನೂ ಗೌರವಿಸುತ್ತ, ದೇವತೆಗಳು ಇಂದ್ರನನ್ನು ಆದರಿಸುವಂತೆ ಆತನನ್ನೂ ಆದರಿಸಿ ಬರಮಾಡಿಕೊಂಡರು. ದೊಡ್ಡ ಮತ್ಸ್ಯಗಳಿಂದಲೂ, ಮಹಾ ಗಜದಿಂದಲೂ ಕೂಡಿ, ನಿಶ್ಚಲವಾದ ನೀರಿನಿಂದ ತುಂಬಿ ರತ್ನಗಳಿಂದಲೂ, ಶಂಖಗಳಿಂದಲೂ, ಮಕರಗಳಿಂದಲೂ ಪ್ರಕಾಶಿಸುವ ದೊಡ್ಡ ಮಡುವಿನಂತೆ ದಶರಥ ಪುತ್ರರಾದ ಭರತ ಶತ್ರುಘ್ನರಿಂದಲೂ ವಸಿಷ್ಠನಿಂದಲೂ, ಸುಮಂತ್ರಾದಿಗಳಿಂದಲೂ ಕೂಡಿದ ಆ ಮಹಾ ಸಭೆಯು ಮೊದಲು ದಶರಥ ರಾಜನಿದ್ದಾಗ ಹೇಗೆ ಪ್ರಕಾಶಿಸುತಿತ್ತೋ, ಹಾಗೆಯೇ ನೇತ್ರಾನಂದಕರವಾಗಿತ್ತು.

ಇದು ಎಂಬತ್ತೊಂದನೆಯ ಸರ್ಗವು.

ಭರತನು ರಾಜ್ಯವನ್ನೊಲ್ಲದೆ ಪೌರರೊಡಗೂಡಿ ರಾಮನಿರುವ ಕಾಡಿಗೆ ಪ್ರಯಾಣಮಾಡಿದುದು.

ಆಗ ಧೀಮಂತನಾದ ಭರತನು ಅನೇಕ ಸಜ್ಜನ ಸಮೂಹದಿಂದ ತುಂಬಿ ಸ್ತಬ್ಧವಾಗಿದ್ದ ಆ ಸಭಾಸ್ಥಾನವನ್ನು, ಪೂರ್ಣಚಂದ್ರನು ಗಗನಪ್ರದೇಶವನ್ನು ಹೇಗೋ ಹಾಗೆ ಪ್ರವೇಶಿಸಿ, ಸುತ್ತಲೂ ಕಣ್ಣಿಟ್ಟು ನೋಡಿದನು. ಅಲ್ಲಿ ಅನೇಕ ಮಹನೀಯರು ತಮತಮಗೆ ಉಚಿತವಾದ ಆಸನಗಳಲ್ಲಿ ಕುಳಿತಿದ್ದರು. ಅವರವರ ಅಮೂಲ್ಯವಾದ ವಸ್ತ್ರಾಭರಣಗಳ ಕಾಂತಿಯಿಂದಲೂ, ಚಂದನಾದ್ಯನುಲೇಪನಗಳ ಹೊಳಪಿನಿಂದಲೂ, ಆ ಸಭಾಸ್ಥಾನವೆಲ್ಲವೂ ಅತ್ಯಂತ ಕಾಂತಿವಿಶಿಷ್ಟವಾಗಿ ಪ್ರಕಾ

ಶಿಸುತಿತ್ತು. ಅನೇಕ ವಿದ್ವಜ್ಜನರಿಂದ ದಟ್ಟವಾಗಿ ತುಂಬಿ ಅತಿಮನೋಹರವಾದ ಆ ಸಭಾಸ್ಥಾನವು, ಶರತ್ಕಾಲದಲ್ಲಿ ಪೂರ್ಣಚಂದ್ರನಿಂದ ಕೂಡಿ ಕಂಗೊಳಿಸುತ್ತಿರುವ ರಾತ್ರಿಯಂತೆ ಬೆಳಗುತ್ತಿತ್ತು. ಆಗ ಅಲ್ಲಿ ಅಗ್ರಾಸನಾಸೀನನಾಗಿದ್ದ ಕುಲಪುರೋಹಿತನಾದ ವಸಿಷ್ಠನು, ಸಭೆಯಲ್ಲಿ ನೆರೆದಿದ್ದ ಸಮಸ್ತಪ್ರಜೆಗಳೂ ಕೇಳುವಂತೆ, ಭರತನನ್ನು ನೋಡಿ, ಬಹಳ ಅನುನಯಪೂರ್ವಕವಾಗಿ, “ವತ್ಸ ಭರತನೆ! ಇದುವರೆಗೂ ಧರ್ಮದಲ್ಲಿಯೇ ನಿರತನಾಗಿ ರಾಜ್ಯವನ್ನು ನಡೆಸುತಿದ್ದ ನಿನ್ನ ತಂದೆಯಾದ ದಶರಥನು, ಧನಧಾನ್ಯಸಮೃದ್ಧಿಯಿಂದ ತುಂಬಿದ ಈ ಭೂಭಾಗವನ್ನು ನಿನ್ನ ವಶಕ್ಕೊಪ್ಪಿಸಿ, ತಾನು ಸ್ವರ್ಗಲೋಕವನ್ನು ಸೇರಿದನು. ಹಾಗೆಯೇ ಸತ್ಯಸಂಕಲ್ಪನಾದ ರಾಮನೂಕೂಡ ಸತ್ಪುತ್ರರಿಗೆ ಯೋಗ್ಯವಾದ ಧರ್ಮವನ್ನೇ ಅವಲಂಬಿಸಿ, ಆಕಾಶದಲ್ಲಿ ಉದಿಸುತ್ತಿರುವ ಚಂದ್ರನು ಚಂದ್ರಿಕೆಯನ್ನು ಬಿಡದಿರುವಂತೆ, ತಂದೆಯ ಆಜ್ಞೆಯನ್ನು ನಿರಾಕರಿಸದೆ ಕಾಡಿಗೆ ಹೊರಟುಹೋದನು. ನಿನ್ನ ತಂದೆಯಾದ ದಶರಥನೂ, ನಿನ್ನ ಹಿರಿಯಣ್ಣನಾದ ರಾಮನೂ, ತಾವಾಗಿಯೇ ಇಷ್ಟಪಟ್ಟು ನಿಷ್ಕಂಟಕವಾದ ಈ ರಾಜ್ಯವನ್ನು ನಿನಗೇ ಒಪ್ಪಿಸಿಬಿಟ್ಟಿರುವರು. ಆದುದರಿಂದ ನಿನ್ನ ಮಂತ್ರಿಗಳೊಡಗೂಡಿ ಸಂತೋಷದಿಂದ ಈ ರಾಜ್ಯವನ್ನು ನೀನೇ ಅನುಭವಿಸು! ಶೀಘ್ರದಲ್ಲಿಯೇ ಪಟ್ಟಾಭಿಷೇಕವನ್ನು ನಡೆಸಿಕೊಳ್ಳುವನಾಗು! ಪೂರ್ವಪಶ್ಚಿಮ ದಕ್ಷಿಣೋತ್ತರದೇಶಾಧಿಪತಿಗಳೂ, ಅಪರಾಂತದೇಶದ ಅಧಿಪತಿಗಳಾದ ಯವನರೂ, ಸಮುದ್ರಮಧ್ಯದಲ್ಲಿರುವ ಅನೇಕ ದ್ವೀಪಾಧಿಪತಿಗಳೂ ನಿನಗೆ ಕೋಟಿಕೋಟಿಸಂಖ್ಯೆಯಿಂದ ರತ್ನಗಳನ್ನು ತಂದು ಕಾಣಿಕೆಗಳನ್ನು ಕೊಡಲಿ!” ಎಂದನು. ಇದನ್ನು ಕೇಳಿದೊಡನೆಯೇ
1 ಭರತನಿಗೆ ಮನಸ್ಸಿನಲ್ಲಿ ಮಹಾವ್ಯಸನವುಂಟಾಯಿತು. ಕುಲಧರ್ಮವನ್ನು

---

1 ಇಲ್ಲಿ “ತಚ್ಛ್ರುತ್ವಾ ಭರತೋ ವಾಕ್ಯಂ ಶೋಕೇನಾಭಿಪರಿಪ್ಲುತಃ ! ಜಗಾಮ ಮನಸಾ ರಾಮಂ ಧರ್ಮಜ್ಞೋ ಧರ್ಮಕಾಂಕ್ಷಯಾ” ಎಂದು ಮೂಲವು. (ತತ್ ವಾಕ್ಯಂ) ಧರ್ಮಾಧರ್ಮಗಳನ್ನು ಚೆನ್ನಾಗಿ ಬಲ್ಲ ವಸಿಷ್ಠನು ಹೇಳಿದ ಆ ಮಾತನ್ನು (ಶ್ರುತ್ವಾ) ಕೇಳಿ (ಧರ್ಮಜ್ಞಃ) ಧರ್ಮವನ್ನು ಬಲ್ಲವನಾದ ಎಂದರೆ ಜ್ಯೇಷ್ಠಾನುವರ್ತನವೆಂಬ ಧರ್ಮವನ್ನು ಚೆನ್ನಾಗಿ ಬಲ್ಲವನಾದ ಭರತನು, (ಶೋಕೇನ ಅಭಿಪರಿಪ್ಲುತಃ) ಶೋಕದಲ್ಲಿ ಮುಳುಗಿಸಲ್ಪಟ್ಟವನಾಗಿ, ಮೊದಲು ದಶರಥನ ಮರಣವಾರ್ತೆಯಿಂದಲೇ ದುಃಖದಲ್ಲಿ ಮುಳುಗಿದ್ದ ಭರತನು, ಈಗ ತನಗೆ ಗುರುವಾಗಿಯೂ, ಸರ್ವಜ್ಞನಾಗಿಯೂ, ಶ್ರೇಯಃಕಾಂಕ್ಷಿಯಾಗಿಯೂ, ಇರುವ ಆ ವಸಿಷ್ಠನೂ ಕೂಡ ಧರ್ಮವೆಂಬ ವ್ಯಾಜವನ್ನಿಟ್ಟುಕೊಂಡು ಅಧರ್ಮವನ್ನು ಬೋಧಿಸಿದನೆಂಬ ಮಹಾ

ಚೆನ್ನಾಗಿ ಬಲ್ಲ ಆತನು ಧರ್ಮಬುದ್ಧಿಯನ್ನು ಬಿಡದವನಾದುದರಿಂದ, ಆತನ ಮನಸ್ಸು ರಾಮನಮೇಲೆಯೇ ನೆಲಸಿತು. ಆತನ ಕಣ್ಣುಗಳಲ್ಲಿ ನೀರು ತುಳುಕುತ್ತಿತ್ತು. 2 ಕಲಹಂಸದಂತೆ ಇಂಪಾದ ಸ್ವರವುಳ್ಳ ಆತನು ಗದ್ಗದಸ್ವರದಿಂದ ಕೂಡಿದವನಾಗಿ, ಆ ಸಭಾಮಧ್ಯದಲ್ಲಿ ಗಟ್ಟಿಯಾಗಿ ಗೋಳಿಡುತ್ತ, ವಸಿಷ್ಠನನ್ನು

ದುಃಖದಲ್ಲಿ (ಅಭಿಪರಿಪ್ಲುತಃ) ಇನ್ನೂ ವಿಶೇಷವಾಗಿ ಮುಳುಗಿಹೋದನೆಂದು ಭಾವವು. (ಧರ್ಮಕಾಂಕ್ಷಯಾ) ಅಧರ್ಮಹೇತುವಾದ ತನ್ನ ರಾಜ್ಯಾಭಿಷೇಕವೆಂಬ ವಿಪರೀತವಾರ್ತೆಯನ್ನು ಕೇಳಿದ ಪಾಪಕ್ಕೆ ಪ್ರಾಯಶ್ಚಿತ್ತಮಾಡಿಕೊಳ್ಳಬೇಕೆಂಬ ಬುದ್ಧಿಯಿಂದ (ಮನಸಾ ರಾಮಂ ಜಗಾಮ) ಮನಸ್ಸಿನಿಂದಲೇ ರಾಮನನ್ನು ಸ್ಮರಿಸಿದನು. ಎಂದರೆ, "ಆಚಾರ್ಯನಾದ ವಸಿಷ್ಠನು ಹೇಳಿದ ಈ ದುರ್ವಾರ್ತೆಯನ್ನು ಕೇಳಿದ ಪಾಪವನ್ನು ನೀನೇ ಕ್ಷಮಿಸಬೇಕು" ಎಂಬ ಬುದ್ಧಿಯಿಂದ ರಾಮನಲ್ಲಿ ಶರಣಾಗತಿಯನ್ನು ಮಾಡಿದನೆಂದು ಭಾವವು. ಮತ್ತು (ಧರ್ಮಕಾಂಕ್ಷಯಾ) ರಾಜ್ಯಪರಿಪಾಲನ ರೂಪವಾದ ಸಾಮಾನ್ಯ ಧರ್ಮಕ್ಕಿಂತಲೂ ಮೇಲೆನಿಸಿಕೊಂಡ ರಾಮ ಕೈಂಕರ್ಯ ರೂಪವೆಂಬ ಧರ್ಮವನ್ನು ಹಿಡಿಯಬೇಕೆಂದುದ್ದೇಶಿಸಿ ಹೀಗೆ ಹೇಳಿದನೆಂದೂ ಭಾವವು.

2 ಇಲ್ಲಿ "ಸಬಾಷ್ಪಕಲಯಾ ವಾಚಾ ಕಲಹಂಸಸ್ವರೋ ಯುವಾ | ವಿಲಲಾಪ ಸಭಾಮಧ್ಯೇ ಜಗರ್ಹೇ ಚ ಪುರೋಹಿತಂ ||" ಎಂದು ಮೂಲವು. (ಬಾಷ್ಪಕಲಯಾ) ಕಣ್ಣೀರು ತಡೆದುಕೊಳ್ಳುವುದರಿಂದ ಅವ್ಯಕ್ತವಾದ (ವಾಚಾ) ಮಾತಿನಿಂದ, ಕಣ್ಣೀರು ಉಕ್ಕಿ ಬಂದು ಗಂಟಲನ್ನು ತಡೆಯುತ್ತಿದ್ದರೂ ಅದನ್ನು ಕೂಡ ಲಕ್ಷ್ಯಮಾಡದೆ, (ಕಲಹಂಸಸ್ವರಃ) ಹಂಸದಂತೆ ಮಧುರ ಗಂಭೀರ ಸ್ವರವುಳ್ಳವನಾಗಿ, (ಯುವಾ) ಯೌವನವಂತನಾಗಿರುವುದರಿಂದಲೇ ಆ ಅವಸ್ಥೆಯಲ್ಲಿಯೂ ವ್ಯಕ್ತವಾಗಿ ಮಾತಾಡಬಲ್ಲವನಾದನೆಂದು ಭಾವವು. (ವಿಲಲಾಪ) ಪ್ರಲಾಪಿಸಿದನು. (ಪುರೋಹಿತಂ ಜಗರ್ಹೇ) ಪುರೋಹಿತನನ್ನೂ ನಿಂದಿಸಿದನು. "ನಮ್ಮ ವಂಶಕ್ಕೆ ಬರಬಹುದಾದ ಯಶಸ್ಸನ್ನು ಬಹಳ ಚೆನ್ನಾಗಿ ಊಹಿಸಿ ಹೇಳಿದೆ!" ಎಂದು ಮರ್ಮೋದ್ಘಾಟಕವಾಗಿ ನಿಂದಿಸಿದನೆಂದು ಭಾವವು. (ಸಭಾ ಮಧ್ಯೇ) ಇಂತಹ ದೊಡ್ಡ ಸಭೆಯಲ್ಲಿ ಮಹನೀಯರಾದ ನೀವೆಲ್ಲರೂ ಸೇರಿ, ನನಗೊಬ್ಬನಿಗೆ ಇದುವರೆಗಿದ್ದ ರಾಮಶೇಷತ್ವವನ್ನೂ, ಪಾರತಂತ್ರ್ಯವನ್ನೂ ನೀಗಿಸುವುದಕ್ಕೆ ಪ್ರಯತ್ನಿಸಬಹುದೆ?" ಎಂದು ಪ್ರಲಾಪಿಸುತ್ತಿದ್ದುದಾಗಿ ಭಾವವು. ಮತ್ತು "ಸಭಾಮಧ್ಯದಲ್ಲಿ" ಎಂದರೆ, "ನಿಯಮಾತಿಕ್ರಮಂ ರಹಸಿ ಬೋಧಯೇತ್" ನ್ಯಾಯಾತಿಕ್ರಮವನ್ನು ರಹಸ್ಯದಲ್ಲಿ ಬೋಧಿಸಬೇಕೆಂಬ ಶಾಸ್ತ್ರವನ್ನು ನೀವೆಲ್ಲರೂ, ಈ ಮಹಾಸಭೆಯ ಮಧ್ಯದಲ್ಲಿಯೇ ನಿಯಮೋಲ್ಲಂಘನರೂಪವಾದ ಈ ಅತಿಕ್ರೂರ ಧರ್ಮವನ್ನು ನನಗೆ ಹೇಳಬಹುದೆ?" ಎಂಬ ದುಃಖಪಾರವಶ್ಯದಿಂದ ಈ ಬಗೆಯ ಧರ್ಮೋಪದೇಶವನ್ನು ಸಭಾಮಧ್ಯದಲ್ಲಿ ಹೇಳಿದುದಕ್ಕಾಗಿ ಅವರನ್ನು ನಿಂದಿಸಿದನೆಂದೂ ಭಾವವು.

ನೋಡಿ, ಕೋಪಗೊಂಡು, ತಾನು ಭೋಗಾರ್ಹವಾದ ಮಧ್ಯಯೌವ್ವನದಲ್ಲಿದ್ದರೂ ರಾಜಭೋಗಗಳಲ್ಲಿ ಆಸೆಯನ್ನು ತೊರೆದು ಆ ಪುರೋಹಿತನನ್ನು ನಿಂದಿಸತೊಡಗಿ, ಆತನನ್ನು ಕುರಿತು "ಎಲೈ ಬ್ರಾಹ್ಮಣೋತ್ತಮನೆ! [1] ಬ್ರಹ್ಮಚರ್ಯದಲ್ಲಿದ್ದು ಗುರುಕುಲವಾಸವನ್ನು ಮಾಡಿ, ವೇದಾಧ್ಯಯನಗಳನ್ನು ನಡೆಸಿ, ಆಮೇಲೆ ಸ್ನಾತಕಕರ್ಮವನ್ನು ಹೊಂದಿ, ವೇದಾರ್ಥಗಳನ್ನು ತಿಳಿದು ಆ ಧರ್ಮವನ್ನೇ ಅನುಸರಿಸಿ ನಡೆಯುತ್ತಿರುವ ರಾಮನ ರಾಜ್ಯವನ್ನು ಶಾಸ್ತ್ರಮರ್ಯಾದೆಗೆ ವಶನಾಗಿರುವ ನನ್ನಂತವನು ಅಪಹರಿಸುವುದೆಂದರೆ ನ್ಯಾಯವೆ? [2] ದಶರಥನ

---

[1] ಇದರಿಂದ ಬ್ರಹ್ಮಚರ್ಯಾದಿ ಲಕ್ಷಣ ಲಕ್ಷಿತನಾದವನ ಧನವನ್ನಪಹರಿಸುವುದು ಮಹಾಪಾತಕವೆಂದು ಸೂಚಿಸಿರುವುದಾಗಿ ಗ್ರಹಿಸಬೇಕು.

[2] ಇಲ್ಲಿ "ಕಥಂ ದಶರಥಾಜ್ಜಾತೋ ಭವೇದ್ರಾಜ್ಯಾಪಹಾರಕಃ । ರಾಜ್ಯಂ ಚಾಹಂ ಚ ರಾಮಸ್ಯ ಧರ್ಮಂ ವಕ್ತುಮಿಹಾರ್ಹಸಿ ॥" ಎಂದು ಮೂಲವು. ಇಲ್ಲಿನ ವಿಶೇಷಾರ್ಥಗಳೇನೆಂದರೆ (ದಶರಥಾಜ್ಜಾತಃ) ದಶರಥನಿಂದ ಹುಟ್ಟಿದವನು (ಕಥಂ) ಹೇಗೆ ತಾನೇ (ರಾಜ್ಯಾಪಹಾರಕೋ ಭವೇತ್) ರಾಜ್ಯವನ್ನು ಅಪಹರಿಸತಕ್ಕವನಾಗುವನು? ಎಂದರೆ, ರಾಮನನ್ನಗಲಿದ ಕ್ಷಣವೇ ಪ್ರಾಣವನ್ನು ಬಿಟ್ಟವನಾದ ದಶರಥನ ಹೊಟ್ಟೆಯಲ್ಲಿ ಹುಟ್ಟಿದ ನಾನು, ಆ ರಾಮನು ಬಿಟ್ಟುಹೋದ ರಾಜ್ಯಕ್ಕೆ ಆಸೆಪಟ್ಟು ಬರಬಹುದೆ?" ಎಂದು ಭಾವವು. ರಾಮನನ್ನು ಬಿಟ್ಟಿರುವಾಗ ದಶರಥನಂತೆ ನಾನೂ ಪ್ರಾಣತ್ಯಾಗವನ್ನು ಮಾಡಿಕೊಳ್ಳುವುದುಚಿತವೇ ಹೊರತು ಬೇರೆಯಲ್ಲ. ಅಥವಾ ಪ್ರಾಣತ್ಯಾಗವನ್ನು ಮಾಡಿಕೊಳ್ಳದಿದ್ದರೂ, ಅಂತಹ ದಶರಥನ ಹೊಟ್ಟೆಯಲ್ಲಿ ಹುಟ್ಟಿದ ನಾನು ಈ ರಾಜ್ಯಕ್ಕೂ ಆಸೆಪಡಬಹುದೇ? ಎಂದಿಗೂ ನಾನು ಅದಕ್ಕಾಸೆಪಡಲಾರೆ"ನೆಂದು ಹೇಳಿದುದಾಗಿ ಗ್ರಹಿಸಬೇಕು. ಇದಲ್ಲದೆ ತನ್ನ ಸ್ವರೂಪವನ್ನು ಆಲೋಚಿಸಿದರೂ ತಾನು ರಾಜ್ಯಾರ್ಹನಲ್ಲವೆಂದು ತಿಳಿಸುವನು. ಹೇಗೆಂದರೆ:—(ರಾಜ್ಯಂ ಚಾಹಂ ಚ ರಾಮಸ್ಯ) ರಾಜ್ಯವೂ, ನಾನೂ ರಾಮನ ವಸ್ತುಗಳಾಗಿಯೇ ಇರುವೆವು. ಎಂದರೆ ರಾಮನಿಗೆ ಶೇಷಭೂತರು. ಹೀಗೆ ಎರಡೂ ಮತ್ತೊಂದಕ್ಕೆ ಶೇಷಭೂತಗಳಾಗಿರುವುದರಿಂದ, ಪಾರತಂತ್ರ್ಯವೆಂಬುದು ಎರಡಕ್ಕೂ ಸಮಾನವು. ಹೀಗಿರುವಾಗ ಒಂದು ಶೇಷವಸ್ತುವು ಮತ್ತೊಂದು ಶೇಷವಸ್ತುವಿನ ಮೇಲೆ ಹೇಗೆ ಅಧಿಕಾರವನ್ನು ನಡೆಸಬಲ್ಲದು? ಒಂದು ವೇಳೆ ಹಾಗೂ ಸಂಭವವಿದ್ದರೆ, ನನ್ನಂತೆಯೇ ಇತರ ಶೇಷವಸ್ತುವಾದ ರಾಜ್ಯವೇ ನನ್ನನ್ನು ಅಧೀನವಾಗಿ ಮಾಡಿಕೊಳ್ಳಬಾರದೆ? ಆದುದರಿಂದ, ನನಗಾಗಲಿ, ರಾಜ್ಯಕ್ಕಾಗಲಿ, ಒಂದನ್ನೊಂದು ಆಳತಕ್ಕ ಶಕ್ತಿಯಿಲ್ಲವು. ಇವೆರಡೂ ಸ್ವಾಮಿಯಾದ ರಾಮನಿಗೆ ಶೇಷಭೂತಗಳಾಗಿರಬೇಕಾದುದೇ ಸ್ವರೂಪಾನುರೂಪವೆಂದು ಭಾವವು. (ಧರ್ಮಂ ವಕ್ತುಮಿಹಾರ್ಹಸಿ) ನೀನು ಈ ವಿಷಯದಲ್ಲಿ ಧರ್ಮವನ್ನು ಆಲೋಚಿಸಿ ಹೇಳಬೇಕಲ್ಲವೆ? ಲೋಕದಲ್ಲಿ ಹೆತ್ತ ತಂದೆಯನ್ನು ನಿಗ್ರಹಿಸಿ ರಾಜ್ಯವನ್ನು ವಶಮಾಡಿಕೊಳ್ಳುವವರೂ ಇರಬಹುದು! ಹಾಗೆ ನನ್ನನ್ನು

ಹೊಟ್ಟೆಯಲ್ಲಿ ಹುಟ್ಟಿಯೂ ಇತರರಿಗೆ ಸೇರಬೇಕಾದ ರಾಜ್ಯವನ್ನು ಅಪಹರಿಸಬಹುದೆ? ಈ ರಾಜ್ಯವು ರಾಮನಿಗೇ ಸೇರಬೇಕಾದುದು. ನಾನೂ ರಾಮನಿಗೇ

ಎಣಿಸಕೂಡದು. (ಇಹ) ಈ ನನ್ನ ವಿಷಯದಲ್ಲಿ ಮಾತ್ರ, (ಧರ್ಮಂ) ನನ್ನ ಸ್ವಭಾವಕ್ಕೆ ತಕ್ಕ ಧರ್ಮವನ್ನು ಎಂದರೆ "ರಕ್ಷಕವು ಯಾವುದು? ರಕ್ಷಿಸಲ್ಪಡುವುದಕ್ಕೆ ಯೋಗ್ಯವಾದ ವಸ್ತುವಾವುದು? ಎಂಬುದನ್ನು ಚೆನ್ನಾಗಿ ಆಲೋಚಿಸಿ ಅದಕ್ಕೆ ತಕ್ಕ ಧರ್ಮವನ್ನೇ ಉಪದೇಶಿಸಬೇಕೇ ಹೊರತು, ಶೇಷವಸ್ತುವೇ ಮತ್ತೊಂದು ಶೇಷವಸ್ತುವನ್ನು ಪಾಲಿಸಬಹುದೆಂಬ ಧರ್ಮವಿರುದ್ಧವಾದ ಮಾತನ್ನು ಹೇಳಬಹುದೆ?" ಎಂದು ಭಾವವು. ಆದರೆ ಆಭರಣಗಳು, ಪೆಟ್ಟಿಗೆ, ಇವೆರಡೂ ಶೇಷವಸ್ತುಗಳಾಗಿರುವಾಗ ಆಭರಣಗಳನ್ನು ಪೆಟ್ಟಿಗೆಯು ಕಾಪಾಡಿಡುವುದಿಲ್ಲವೆ? ಅದರಂತೆಯೇ ಈಗ ನೀನು ಶೇಷವಸ್ತುವಾಗಿದ್ದರೂ ರಕ್ಷಕನಾಗಿರಬಹುದಲ್ಲವೆ?" ಎಂದು ನೀನು ಕೇಳಬಹುದು. ಆಭರಣ ಯೋಗ್ಯವಾದ ಪೆಟ್ಟಿಗೆಗೆ ಸ್ವಾಮಿಯಾದವನು ಬೀಗ ಮೊದಲಾದುವುಗಳನ್ನು ಹಾಕಿ, ಅದನ್ನು ರತ್ನಾದಿಗಳಿಗೆ ರಕ್ಷಕವನ್ನಾಗಿ ಮಾಡಿಡುವುದರಿಂದಲೇ ಅದಕ್ಕೆ ರಕ್ಷಕತ್ವವೇ ಹೊರತು, ತನಗೆ ತಾನೇ ಅದು ರಕ್ಷಕವಾಗಿರಲಾರದು. ಅದರಂತೆಯೇ ನಮ್ಮ ಸ್ವಾಮಿಯಾದ ರಾಮನು ರಾಜ್ಯಕ್ಕೆ ನನ್ನನ್ನು ರಕ್ಷಕನನ್ನಾಗಿ ನಿಯೋಗಿಸಲಿಲ್ಲವಾದುದರಿಂದ ನಾನಾಗಿಯೇ ಆ ಸ್ವಾತಂತ್ರ್ಯವನ್ನು ವಹಿಸಲಾರೆನು ಮತ್ತು ಸ್ವಾಮಿಯಾದವನು ತಾನು ಮಾತ್ರವೇ ಧರಿಸತಕ್ಕ ರತ್ನಾಭರಣಾದಿಗಳನ್ನು ಅವಶ್ಯವಿಲ್ಲದಿದ್ದಾಗ ಪೆಟ್ಟಿಗೆಯಲ್ಲಿರಿಸಿರುವನಲ್ಲವೆ? ಹಾಗೆ ರಾಮನು ತಾನೇ ಧರಿಸಲು ಯೋಗ್ಯವಾದ ಈ ರಾಜ್ಯವನ್ನು ತನಗೆ ಅವಶ್ಯವಿಲ್ಲದಿದ್ದಾಗ ಮತ್ತೊಬ್ಬರ ಅಧೀನದಲ್ಲಿರಿಸಿರಬಹುದು. ಈಗ ನಾವು ಸಾಧ್ಯವಾದ ಮಟ್ಟಿಗೂ ಅವನನ್ನು ಪ್ರಸನ್ನನನ್ನಾಗಿ ಮಾಡಿ ಕರೆತರುವುದಕ್ಕೆ ಪ್ರಯಾಸಪಟ್ಟರೂ, ಆತನಿಗೆ ಈ ರಾಜ್ಯವು ಈಗ ಅವಶ್ಯವಿಲ್ಲದಿದ್ದ ಪಕ್ಷದಲ್ಲಿ, ಮತ್ತು ಆತನೇ ನನ್ನ ವಶಕ್ಕೆ ಈ ರಾಜ್ಯವನ್ನು ಒಪ್ಪಿಸಿದ ಪಕ್ಷದಲ್ಲಿ, ಆಗಲೂ ನಾನು ಪೆಟ್ಟಿಗೆಯಂತೆ ಅವನಿಗೆ ಪರತಂತ್ರನಾಗಿಯೇ ಇದ್ದು ಆತನ ಶಕ್ತಿಯಿಂದಲೇ ಅವನು ಬರುವವರೆಗೂ ಅದನ್ನು ರಕ್ಷಿಸುತ್ತಿರುವೆನು. ಆದುದರಿಂದ ಆತನನ್ನು ಕರೆತರಬೇಕಾದುದೇ ಈಗ ಅವಶ್ಯಕಾರ್ಯವು. ಎಲ್ಲಕ್ಕಿಂತಲೂ ಮೊದಲು ನಾನು ರಾಮನ ಬಳಿಗೆ ಹೋದೊಡನೆ, ವರಪ್ರದಾನನಿರ್ಬಂಧದಿಂದ ರಾಜ್ಯವು ನನ್ನ ಕೈಗೆ ಸೇರಿಹೋಗಿರುವುದೆಂಬ ಭಾವವನ್ನು ಆತನಿಗೆ ಪರಿಹರಿಸಬೇಕೆಂದಿರುವೆನು. ಮತ್ತು (ಧರ್ಮಂ ವಕ್ತುಮಿಹಾರ್ಹಸಿ) ಎಂದರೆ, "ರಾಮನೂ ರಾಜ್ಯವನ್ನು ಬಿಟ್ಟುಹೋಗಿ, ದಶರಥನೂ ಮೃತಿಹೊಂದಿದಮೇಲೆ, ರಾಜ್ಯವು ಅನಾಯಕವಾಗಿರುವುದರಿಂದ ಇದ್ದವರಿಗೇ ಅಭಿಷೇಕವನ್ನು ಮಾಡಿಬಿಡಬೇಕೆಂಬ ಈ ಧರ್ಮವನ್ನು ಮಾತ್ರ ಆಲೋಚಿಸಿದೆಯೇ ಹೊರತು, ಹಾಗೆ ನಾನು ರಾಜ್ಯವನ್ನು ವಹಿಸಿಬಿಟ್ಟರೆ, ಆತನಿಗೆ ಶೇಷಭೂತನಾದ ನನ್ನ ಸ್ವರೂಪಕ್ಕೇ ಹಾನಿಬರುವುದೆಂಬ ಸೂಕ್ಷ್ಮಧರ್ಮವನ್ನು ವಿಚಾರಿಸದೆ ಹೋದೆಯಲ್ಲವೆ? ಇನ್ನು ಮೇಲೆ ಹಾಗೆ ಹೇಳದೆ, ನನಗೆ ಉಪದೇಶಿಸಬೇಕಾದ ಮುಖ್ಯ ಧರ್ಮವನ್ನು ಎಂದರೆ, ರಾಮಕೈಂಕರ್ಯರೂಪ ಧರ್ಮವನ್ನೇ ಹೇಳಬೇಕೆಂದು ಮುಖ್ಯ ಭಾವವು.

ಅಧೀನನಾದವನು. ಧರ್ಮಗಳೆಲ್ಲವನ್ನೂ ನೀನು ಚೆನ್ನಾಗಿ ಬಲ್ಲವನಾಗಿದ್ದರೂ, ಆ ಧರ್ಮವನ್ನು ನಮಗೆ ಉಪದೇಶಿಸದೆ, ಅಧರ್ಮವನ್ನು ಹೇಳುವೆಯಲ್ಲವೆ? ರಾಮನಾದರೋ ನಮ್ಮೆಲ್ಲರಿಗೂ ವಯಸ್ಸಿನಲ್ಲಿಯೂ ಹಿರಿಯನು. ಗುಣಗಳಲ್ಲಿಯೂ ಆತನೇ ಮೇಲಾದವನು. ಆತನನ್ನು ಧರ್ಮಸ್ವರೂಪವೆಂದೇ ಹೇಳಬಹುದು! ದಿಲೀಪನಹುಷಾದಿಗಳಿಗೆ ಸಮಾನವಾದ ಗುಣವುಳ್ಳ ಆ ರಾಮನೇ ರಾಜ್ಯಾಧಿಕಾರಕ್ಕರ್ಹನು. ದಶರಥನಂತೆ ಆತನೇ ಈ ರಾಜ್ಯಕ್ಕೆ ಅಧಿಪತಿಯಾಗಿರಬೇಕೇ ಹೊರತು ಬೇರೆಯಲ್ಲ! ಹೀನಜನರಿಗೆ ಯೋಗ್ಯವಾಗಿರುವ ಈ ಪಾಪಕಾರ್ಯಕ್ಕೆ ನಾನು ಪ್ರವರ್ತಿಸಿದುದೇ ಆದರೆ, ಈ ಇಕ್ಷ್ವಾಕುವಂಶವನ್ನೇ ನಾನು ಕೆಡಿಸಿದವನಾಗುವೆನಲ್ಲವೆ? ತಾಯಿಯಾದ ಕೈಕೇಯಿಯೇ ಈ ಪಾಪಕಾರ್ಯವನ್ನು ನಡೆಸಿದವಳಾಗಿದ್ದರೂ ನಾನು ಅದಕ್ಕೆ ಅನುಮತಿಸುವೆನೆಂದು ನೀನೆಂದಿಗೂ ತಿಳಿಯಬೇಡ! ರಾಮನು ಈಗ ನನ್ನಿದಿರಿಗಿಲ್ಲದೆ ಕಾಡಿನಲ್ಲಿದ್ದರೂ, ನನ್ನ ಮನಸ್ಸು ಆತನನ್ನು ಬಿಟ್ಟು ಅಗಲಲಾರದು. ಇಲ್ಲಿಂದಲೇ ನಾನು ಆತನಿಗೆ ಬಾರಿಬಾರಿಗೂ ಕೈಮುಗಿದು ನಮಸ್ಕರಿಸುತ್ತಿರುವೆನು. ನಾನು ಆ ರಾಮನನ್ನೇ ಹಿಂಬಾಲಿಸಿ ಹೋಗುವೆನು. ಈ ರಾಜ್ಯಕ್ಕೆ ಆತನಲ್ಲದೆ ಬೇರೊಬ್ಬರೂ ಪ್ರಭುಗಳಾಗಲಾರರು. ಈ ಪ್ರಪಂಚದಲ್ಲಿರುವ ಮನುಷ್ಯಸಾಮಾನ್ಯಕ್ಕೆಲ್ಲಾ ಮೇಲೆನಿಸಿಕೊಂಡಿರುವ ಆ ರಾಮನು ಈ ರಾಜ್ಯಕ್ಕೆ ಮಾತ್ರವೇ ಅಲ್ಲ. ಈ ಮೂರು ಲೋಕಗಳನ್ನೂ ಆಳುವುದಕ್ಕೂ ಆತನೇ ಅರ್ಹನು" ಎಂದನು. ಹೀಗೆ ಭರತನು ಧರ್ಮಯುಕ್ತವಾಗಿ ಹೇಳಿದ ಆ ಮಾತನ್ನು ಕೇಳಿ, ಅಲ್ಲಿದ್ದ ಸಭಿಕರೆಲ್ಲರೂ ರಾಮನ ಗುಣದಲ್ಲಿಯೇ ನಟ್ಟ ಮನಸ್ಸುಳ್ಳವರಾಗಿ, ಆನಂದಬಾಷ್ಪವನ್ನು ಸುರಿಸುತಿದ್ದರು. ಆಮೇಲೆ ಭರತನು ಪುನಃ ಆ ಸಭೆಯನ್ನು ಸಂಬೋಧಿಸಿ, "ಎಲೈ ಪೂಜ್ಯರೆ! ನನ್ನ ದೃಢಸಂಕಲ್ಪವನ್ನು ಹೇಳುವೆನು ಕೇಳಿರಿ! ನಾನು ಇಲ್ಲಿಂದ ಹೋಗಿ ರಾಮನನ್ನು ಕರೆತರುವುದೇನೋ ನಿಜವು! ಹಾಗೆ ಆ ಕಾರ್ಯವು ನನ್ನಿಂದ ಹೇಗೂ ಅಸಾಧ್ಯವಾದ ಪಕ್ಷದಲ್ಲಿ, ಆರ್ಯನಾದ ಲಕ್ಷ್ಮಣನಂತೆಯೇ ನಾನೂ ಕಾಡಿನಲ್ಲಿಯೇ ನಿಂತು, ಪೂಜ್ಯನಾದ ರಾಮನ ಪಾದಶುಶ್ರೂಷೆಯಲ್ಲಿಯೇ ನಿರತನಾಗಿದ್ದುಬಿಡುವೆನು. ನನ್ನ ಕೈಯಿಂದ ಸಾಧ್ಯವಾದಮಟ್ಟಿಗೆ ಆತನನ್ನು ಹಿಂತಿರುಗಿಸುವುದಕ್ಕೆ ಪ್ರಯತ್ನವನ್ನು ಮಾಡುವೆನು. ನೀವೆಲ್ಲರೂ ನನ್ನೊಡನೆಯೇ ಹೊರಟುಬರಬೇಕು. ಸಾಧುಗಳಾಗಿಯೂ, ಗುಣಶಾಲಿಗಳಾ

ಗಿಯೂ, ಇರುವ ಸಾಮಾಜಿಕರಾದ ನಿಮ್ಮೆಲ್ಲರ ಮುಂದೆಯೇ ನಾನು ಆ ರಾಮ ನನ್ನು ಹಿಂತಿರುಗಿಸುವುದಕ್ಕೆ ಆದಷ್ಟು ಉಪಾಯಗಳನ್ನು ಮಾಡಿನೋಡುವೆನು. ಇದಕ್ಕೆ ಮೊದಲೇ ನಾನು ದಾರಿಯನ್ನು ಸರಿಮಾಡುವುದಕ್ಕೂ, ಕಾವಲಿರು ವುದಕ್ಕೂ ಕೆಲವು ಬಿಟ್ಟಿಯಾಳುಗಳನ್ನೂ ಕೂಲಿಯವರನ್ನೂ ಕಳುಹಿಸಿರುವೆನು. ಅಲ್ಲಿಗೆ ಪ್ರಯಾಣಮಾಡಬೇಕೆಂಬುದೇ ನನ್ನ ಸಂಕಲ್ಪವು" ಎಂದನು. ಅಣ್ಣನಲ್ಲಿ ಪರಮಭಕ್ತಿಯುಳ್ಳ ಧರ್ಮಾತ್ಮನಾದ ಭರತನು ಸಭೆಗಿದಿರಾಗಿ ಈ ಮಾತನ್ನು ಹೇಳಿ, ಆಮೇಲೆ ಸಮೀಪದಲ್ಲಿದ್ದ ಮಂತ್ರಜ್ಞನಾದ ಸುಮಂತ್ರನನ್ನು ನೋಡಿ, "ಎಲೈ ಸುಮಂತ್ರನೆ! ನೀನು ಈಗಲೇ ಎದ್ದು ನನ್ನ ಆಜ್ಞೆಯಿಂದ ನಮ್ಮ ಸಮಸ್ತ ಸೈನ್ಯಕ್ಕೂ ಪ್ರಯಾಣಸನ್ನದ್ಧವಾಗಿರುವಂತೆ ನಿಯಮಿಸು" ಎಂದನು. ಈ ಮಾತನ್ನು ಕೇಳಿ ಸುಮಂತ್ರನು ಪರಮಸಂತೋಷಯುಕ್ತನಾಗಿ ಆ ಭರತನ ಆಜ್ಞೆಯಂತೆ ಸಮಸ್ತಸೈನ್ಯಕ್ಕೂ ಪ್ರಯಾಣಸನ್ನದ್ಧವಾಗಿರಬೇಕೆಂದು ನಿಯಮಿಸಿ ದನು. ಭರತನು ರಾಮನನ್ನು ಹಿಂತಿರುಗಿಸಿ ಕರೆತರುವುದಕ್ಕಾಗಿ ಹೋಗುವನೆಂಬ ಸುದ್ದಿಯನ್ನು ಕೇಳಿ, ಸಮಸ್ತಪ್ರಜೆಗಳೂ ಸಂತೋಷಭರಿತರಾಗಿದ್ದರು. ಸೇನಾಧಿ ಪತಿಗಳೂ ಸಂತೋಷದಿಂದ ಉಕ್ಕುತ್ತಿದ್ದರು. ಆಯಾ ಸೈನಿಕರ ಹೆಂಡಿರೂ ಕೂಡ ಈ ಸುದ್ದಿಯನ್ನು ಕೇಳಿ ಅತ್ಯುತ್ಸಾಹಗೊಂಡು, ತಮ್ಮ ತಮ್ಮ ಪತಿಗಳನ್ನು ಅಲ್ಲಿನ ಪ್ರಯಾಣಕ್ಕೆ ತ್ವರೆಪಡಿಸುತ್ತ ಮನೆಮನೆಗಳಲ್ಲಿಯೂ ನಿರ್ಬಂಧಿಸುತ್ತಿದ್ದರು. ವೇಗವತ್ತಾದ ಕುದುರೆಯಬಂಡಿಗಳನ್ನೂ, ಕಾಲಾಳುಗಳನ್ನೂ ಸೇರಿಸಿ, ಸೈನ್ಯ ವನ್ನು ಸಿದ್ಧಪಡಿಸಿಟ್ಟರು. ಪ್ರಯಾಣಸನ್ನದ್ಧವಾದ ಸೈನ್ಯವನ್ನು ನೋಡಿ ಭರತನು, ವಸಿಷ್ಠನು ಕೇಳುತ್ತಿರುವಾಗಲೇ ತನ್ನ ಮನೋನಿಶ್ಚಯಕ್ಕೆ ಆತನು ಅನುಮತಿಸಬೇಕೆಂಬ ಭಾವದಿಂದ ಸಮೀಪದಲ್ಲಿದ್ದ ಸುಮಂತ್ರನನ್ನು ನೋಡಿ ಬೇಗ ರಥವನ್ನು ತರುವಂತೆ ಆಜ್ಞಾಪಿಸಿದನು. ಭರತನ ಆಜ್ಞೆಯಂತೆ ಸುಮಂತ್ರನು ಉತ್ತಮವಾದ ಕುದುರೆಗಳಿಂದ ಕೂಡಿದ ರಥವನ್ನು ನಡೆಸಿಕೊಂಡುಬಂದನು. ಆಗ ರಘುಕುಲಲಲಾಮನಾಗಿಯೂ, ಕುಂದದ ಧೈರ್ಯವುಳ್ಳವನಾಗಿಯೂ, ಪರಾಕ್ರಮಶಾಲಿಯಾಗಿಯೂ ಇರುವ ಭರತನು, ಯುಕ್ತಿಯುಕ್ತವಾದ ಮಾತು ಗಳಿಂದ ಪ್ರಜೆಗಳೆಲ್ಲರಿಗೂ ಸಮಾಧಾನವನ್ನು ಹೇಳಿ ಕಾಡಿನಲ್ಲಿರುವ ಯಶಸ್ವಿ ಯಾದ ರಾಮನನ್ನು ಮನ್ನಿಸಿ ಕರೆತರಬೇಕೆಂಬ ದೃಢಸಂಕಲ್ಪವನ್ನಿಟ್ಟುಕೊಂಡು, ಸುಮಂತ್ರನನ್ನು ನೋಡಿ, "ಎಲೈ ಸೂತನೆ! ನೀನು ಪುನಃ ಹೋಗಿ ನಮ್ಮ

ಬಲಾಧ್ಯಕ್ಷರನ್ನು ತ್ವರೆಪಡಿಸು! ಸೈನ್ಯವೆಲ್ಲವೂ ಸಿದ್ಧವಾಗಿರಬೇಕೆಂದು ತಿಳಿಸು! ನಾನು ರಾಮನನ್ನು ಕಾಡಿನಿಂದ ಕರೆತರಬೇಕೆಂದು ಸಂಕಲ್ಪಿಸಿರುವುದು ಈ ಲೋಕಹಿತಾರ್ಥವಾಗಿಯೇ ಹೊರತು ನನ್ನೊಬ್ಬನಿಗಾಗಿಯೇ ಅಲ್ಲವು" ಎಂದನು. ಇದನ್ನು ಕೇಳಿ ಸುಮಂತ್ರನು ತನ್ನ ಕೋರಿಕೆಗಳೆಲ್ಲವೂ ಆಗಲೇ ಕೈಗೂಡಿದಂತೆ ಸಂತುಷ್ಟನಾಗಿ ಹೊರಟು, ಪ್ರಜೆಗಳಲ್ಲಿ ಪ್ರಮುಖರಾದವರನ್ನೂ, ಬಲಾಧ್ಯಕ್ಷರನ್ನೂ, ಮಿತ್ರರನ್ನೂ ಪ್ರತ್ಯೇಕ ಪ್ರತ್ಯೇಕವಾಗಿ ಬಂದು ನೋಡಿ, ಭರತನ ಆಜ್ಞೆಯನ್ನು ತಿಳಿಸಿದನು. ಆಗ ಆ ಅಯೋಧ್ಯಾಪಟ್ಟಣದ ಮನೆಮನೆಗಳಲ್ಲಿಯೂ ಬ್ರಾಹ್ಮಣ ಕ್ಷತ್ರಿಯ ವೈಶ್ಯ ಶೂದ್ರರೆಂಬ ನಾಲ್ಕು ವರ್ಣದವರೂ ಅತ್ಯುತ್ಸಾಹಗೊಂಡು, ತಮ್ಮ ತಮ್ಮ ಸ್ಥಿತಿಗೆ ತಕ್ಕಂತೆ ಒಂಟೆಗಳನ್ನೂ, ಹೇಸರಗತ್ತೆಗಳನ್ನೂ, ಬಂಡಿಗಳನ್ನೂ, ಆನೆಗಳನ್ನೂ, ಉತ್ತಮವಾದ ಜಾತ್ಯಶ್ವಗಳನ್ನೂ ಏರಿ ಹೊರಟರು.

ಇಲ್ಲಿಗೆ ಎಂಬತ್ತೆರಡನೆಯ ಸರ್ಗವು

ಭರತನು ಸೈನ್ಯದೊಡನೆ ಪ್ರಯಾಣಮಾಡಿ ಗಂಗಾತೀರವನ್ನು ಸೇರಿದುದು.

ಆಮೇಲೆ ಭರತನು ಬೆಳಗಾಗುವಷ್ಟರಲ್ಲಿಯೇ ಎದ್ದು, ಉತ್ತಮವಾದ ರಥವನ್ನೇರಿ, ರಾಮದರ್ಶನ ಕುತೂಹಲದಿಂದ ಬಹುಶೀಘ್ರದಲ್ಲಿ ಪ್ರಯಾಣಮಾಡುತಿದ್ದನು. ಮಂತ್ರಿಗಳೂ, ಪುರೋಹಿತರೂ ಸೂರ್ಯರಥದಂತೆ ಉತ್ತಮಾಶ್ವಗಳಿಂದ ಹೂಡಿದ ರಥವನ್ನೇರಿ ಭರತನಿಗೆ ಮುಂದಾಗಿಯೇ ಹೋಗುತಿದ್ದರು. ಅಜ್ಞಾನುಸಾರವಾಗಿ ಅಯೋಧ್ಯೆಯಲ್ಲಿದ್ದ ಆನೆಗಳಲ್ಲಿ ಒಂಬತ್ತುಸಾವಿರ ಆನೆಗಳು ಆತನನ್ನು ಹಿಂಬಾಲಿಸಿಬರುತ್ತಿದ್ದುವು. ಮತ್ತು ಯಶಸ್ವಿಯಾದ ಆ ರಾಜಪುತ್ರನ ಹಿಂದೆ ಅರುವತ್ತುಸಾವಿರ ರಥಗಳೂ, ಇನ್ನೂ ನಾನಾವಿಧ ಶಸ್ತ್ರಾಸ್ತ್ರಗಳನ್ನೂ ಹಿಡಿಯತಕ್ಕ ಧನುರ್ಧಾರಿಗಳಾದ ಯೋಧರೂ ಹೊರಟುಬರುತ್ತಿದ್ದರು. ಸತ್ಯಸಂಧನಾಗಿಯೂ, ಜಿತೇಂದ್ರಿಯನಾಗಿಯೂ ಇದ್ದ ಆ ಭರತನು ಹೋಗುತ್ತಿದ್ದಾಗ, ಒಂದು ಲಕ್ಷ ಸಂಖ್ಯೆಯುಳ್ಳ ಕುದುರೆಯ ಸೈನ್ಯಗಳೂ ಆತನನ್ನು ಹಿಂಬಾಲಿಸಿ

ಹೊರಟುವು. ಹಾಗೆಯೇ ಕೈಕೇಯಿೀ ಸುಮಿತ್ರೆಯರೂ ಭರತನನ್ನು ಹಿಂಬಾಲಿಸಿದರು. ಯಶಸ್ವಿನಿಯಾದ ಕೌಸಲ್ಯೆಯೂ ಹೊರಟಳು. ಇವರೆಲ್ಲರೂ ಬೇರೆಬೇರೆ ವಾಹನಗಳನ್ನೇರಿ, ರಾಮನು ಹಿಂತಿರುಗಿ ಬರುವನೆಂಬ ಪರಮಸಂತೋಷದಿಂದ ಕೂಡಿದವರಾಗಿ ಹೋಗುತ್ತಿದ್ದರು. ಇವರಲ್ಲಿ ಕೈಕೇಯಿಯು ತಾನು ತಂದಿಟ್ಟ ಅನರ್ಥಗಳಿಗೆ ನಾಚಿಕೆಗೊಂಡು ಪಶ್ಚಾತ್ತಾಪಪಡುತ್ತ ತಾನೇ ಮುಂದಾಗಿ ಹೊರಟಳು. ಹಾಗೆಯೇ ಪ್ರಜೆಗಳೆಲ್ಲರೂ ಲಕ್ಷ್ಮಣಸಹಿತನಾದ ರಾಮನನ್ನು ನೋಡುವ ವಿಷಯದಲ್ಲಿ ಪರಮಕುತೂಹಲವುಳ್ಳವರಾಗಿ ಅವರ ವಿಷಯವಾದ ಮಾತುಗಳನ್ನೇ ಆಡುತ್ತ ಉಲ್ಲಾಸದಿಂದ ಹೋಗುತ್ತಿದ್ದರು. ಅವರು ಅಲ್ಲಲ್ಲಿ ಗುಂಪಾಗಿ ಸೇರಿಸಿಕೊಂಡು, ಪ್ರತ್ಯೇಕವಾಗಿ ಒಬ್ಬರಿಗೊಬ್ಬರು [1] "ನೀಲಮೇಘ

---

[1] ಇಲ್ಲಿ "ಮೇಘಶ್ಯಾಮಂ ಮಹಾಬಾಹುಂ ಸ್ಥಿರಸತ್ವಂ ದೃಢವ್ರತಂ । ಕದಾ ದ್ರಕ್ಷ್ಯಾಮಹೇ ರಾಮಂ ಜಗತಶ್ಶೋಕನಾಶನಂ" ಎಂದು ಮೂಲವು. ಇದಕ್ಕೆ ರಾಮನಲ್ಲಿ ಸಾಮಾನ್ಯವಾದ ಉತ್ತಮ ಪುರುಷಗುಣಗಳಲ್ಲದೆ ಪರಮಪುರುಷನಾದ ಶ್ರೀ ವೈಕುಂಠನಾಥನ ಆ ಅಪ್ರಾಕೃತಗುಣವಿಶೇಷಗಳನ್ನೂ ಸೂಚಿಸುವ ವಿಶೇಷಾರ್ಥಗಳುಂಟು. (ಮೇಘಶ್ಯಾಮಂ) ನೀಲಮೇಘದಂತೆ ಕಪ್ಪಾದಮೈಬಣ್ಣವುಳ್ಳವನೆಂದು ಸಾಮಾನ್ಯಾರ್ಥವು. ಮೇಘದಂತೆ ದೂರಸ್ಥನಾಗಿದ್ದರೂ, ತನ್ನ ಸೌಂದರ್ಯಾನುಭವವನ್ನು ಕೊಟ್ಟು, ಸಂತೋಷಪಡಿಸತಕ್ಕವನೆಂದೂ, ಬಿಸಿಲಿನಿಂದ ಬಳಲಿದವರಿಗೆ ಮೇಘವು ಹೇಗೋಹಾಗೆ ನೋಡಿದಮಾತ್ರದಿಂದಲೇ ಸರ್ವಸಂತಾಪವನ್ನೂ ಅಪಹರಿಸತಕ್ಕವನೆಂದೂ ಭಾವವು. (ಮಹಾಬಾಹುಂ) ಉದ್ದವಾಗಿಯೂ ದಪ್ಪನಾಗಿಯೂ ಇರುವ ತೋಳುಗಳುಳ್ಳವನೆಂದು ಸಾಮಾನ್ಯಾರ್ಥವು. ಭುಜಗಳು ದಾನಸಾಧನಗಳಾಗಿರುವುದರಿಂದ ಪೂರ್ವೋಕ್ತವಾದ ತನ್ನ ಸೌಂದರ್ಯದ ಅನುಭವವನ್ನು ದಾನಮಾಡುವುದರಲ್ಲಿ ಮಹೌದಾರ್ಯವುಳ್ಳವನೆಂದೂ, ಮತ್ತು ತನ್ನ ಸೌಂದರ್ಯಾನುಭವಕ್ಕೆ ವಿರೋಧಿಗಳಾದವರನ್ನು ಖಂಡಿಸತಕ್ಕವನೆಂದೂ ಭಾವವು. ಆದುದರಿಂದಲೇ "ರಾಮಮಿಂದೀವರಶ್ಯಾಮಂ ಸರ್ವಶತ್ರುನಿಬರ್ಹಣಂ" ಎಂದು "ಕನ್ನೆಯ್ದಿಲೆಯಂತೆ ಕಪ್ಪುಕಾಂತಿಯುಳ್ಳವನಾಗಿಯೂ, ಸಮಸ್ತ ಶತ್ರುಗಳನ್ನೂ, ಅಡಗಿಸತಕ್ಕವನಾಗಿಯೂ ಇರುವ ರಾಮನನ್ನು" ಎಂದು ಕಾಂತಿಪ್ರಯುಕ್ತನಾದ ಸೌಂದರ್ಯವೂ ಪರಾಕ್ರಮವೂ ಆಗಾಗ ವರ್ಣಿಸಲ್ಪಡುವುವು. (ಸ್ಥಿರಸತ್ತ್ವಂ) ಸ್ಥಿರವಾದ ಬಲವುಳ್ಳವನೆಂದು ಸಾಮಾನ್ಯಾರ್ಥವು. "ದ್ರವ್ಯೇಷು ವ್ಯವಸಾಯೇಷು ಸತ್ವಂ" ಎಂಬುದಾಗಿ ಸತ್ತ್ವವೆಂದರೆ ವ್ಯವಸಾಯವು, ಅಥವಾ ಪ್ರತಿಜ್ಞೆಯು, ಇದರಿಂದ ಸ್ಥಿರಸಂಕಲ್ಪವುಳ್ಳವನೆಂದರ್ಥವು. ತನ್ನ ಆಶ್ರಿತರೇ ತನಗೆ ಪ್ರತಿಕೂಲರಾದರೂ ಮನಸ್ಸು ಕಲಕದಷ್ಟು ಸ್ಥಿರಚಿತ್ತವುಳ್ಳವನೆಂದು ಭಾವವು. (ದೃಢವ್ರತಂ) ಆಶ್ರಿತರಕ್ಷಣವೆಂಬ ದೃಢವಾದ ವ್ರತವನ್ನು ಹಿಡಿದಿರತಕ್ಕವನು. ಇಂತಹ (ರಾಮಂ) ಸರ್ವ

ಶ್ಯಾಮನಾಗಿ, ಮಹಾಬಾಹುವಾಗಿ, ಸ್ಥಿರಪ್ರಯತ್ನವುಳ್ಳವನಾಗಿ, ಸತ್ಯ ಪರಿಪಾಲನೆ, ಆಶ್ರಿತರಕ್ಷಣೆ, ಮೊದಲಾದ ವ್ರತಗಳನ್ನು ದೃಢವಾಗಿ ಹಿಡಿದಿರುವ ರಾಮನನ್ನು ನಾವು ಇನ್ನೆಷ್ಟುಹೊತ್ತಿಗೆ ನೋಡುವೆವೊ? ಸಮಸ್ತಲೋಕಕ್ಕೂ ದುಃಖನಿವಾರಕನಾದ ಆತನನ್ನು ನಾವು ಒಂದಾವರ್ತಿ [2]ದೃಷ್ಟಿಯಿಟ್ಟು ನೋಡಿದರೆ ಸಾಕು! ಸೂರ್ಯನು ಉದಿಸಿದಾಗ ಅಂಧಕಾರವು ಹೇಗೋ ಹಾಗೆ ನಮ್ಮ ಸಮಸ್ತದುಃಖವೂ ಆ ಕ್ಷಣದಲ್ಲಿಯೇ ನೀಗಿಹೋಗುವುದು." ಹೀಗೆಂದು ಅಲ್ಲಿ ಹೋಗುತ್ತಿದ್ದ ಪುರವಾಸಿಗಳೆಲ್ಲರೂ ಮಹೋತ್ಸಾಹದಿಂದ ರಾಮನ ಶುಭ ಗಳನ್ನೇ ನಾನಾ ವಿಧವಾಗಿ ವರ್ಣಿಸುತ್ತ, ಒಬ್ಬರಿಗೊಬ್ಬರು ಅಪ್ಪಿಕೊಳ್ಳುತ್ತ ಉಲ್ಲಾಸದಿಂದ ದಾರಿನಡೆಯುತ್ತಿದ್ದರು. ಹಾಗೆಯೇ ರಾಮನಲ್ಲಿ ಪ್ರೀತಿಯುಳ್ಳ ಪಟ್ಟಣದ ಅನೇಕ ವರ್ತಕರೂ ಇತರ ಪ್ರಜೆಗಳೊಡನೆ ಕಲೆತು, ಪರಮಸಂತೋಷ ದಿಂದ ಭರತನನ್ನು ಹಿಂಬಾಲಿಸುತ್ತಿದ್ದರು. ರತ್ನವೇ ಮೊದಲಾದ ಮಣಿಗಳನ್ನು ಸಾಣೆಹಿಡಿಯತಕ್ಕವರೂ, ಕಾರ್ಯನಿಪುಣರಾದ ಕುಂಬಾರರೂ, ನೇಗೆಯವರೂ, ಶಸ್ತ್ರಜೀವಿಗಳೂ, ನವಿಲುಗರಿಯಲ್ಲಿ ಚಿತ್ರಕೆಲಸಗಳನ್ನು ಮಾಡತಕ್ಕವರೂ, ಗರಗಸದವರೂ, ನಯಗೆಲಸಗಾರರೂ, ರತ್ನಾದಿಗಳಿಗೆ ವೆಜ್ಜವನ್ನು ಹಾಕತಕ್ಕ ವರೂ, ದಂತದ ಕೆಲಸದವರೂ, ಗಾರೆಕೆಲಸದವರೂ, ಗಂಧವನ್ನು ತೇಯತಕ್ಕ ವರೂ, ಅಕ್ಕಸಾಲಿಗರೂ, ಕಂಬಳಿಗಳನ್ನು ತೊಳೆಯತಕ್ಕವರೂ ನ್ಯೈಹಿಡಿಯ ತಕ್ಕವರೂ, ಧೂಪದ್ರವ್ಯಗಳನ್ನು ಮಾಡತಕ್ಕವರೂ, ಮದ್ಯವನ್ನಿಳಿಸತಕ್ಕವರೂ, ಅಗಸರೂ, ಚಿಪ್ಪಿಗರೂ, ಗ್ರಾಮದಲ್ಲಿ ಪ್ರಮುಖರಾದವರೂ, ನಟವಿಟ

ಲೋಕಾಹ್ಲಾದಕನಾದ ಮಹಾಪುರುಷನನ್ನು (ಕದಾ ದ್ರಕ್ಷ್ಯಾಮಃ) ಯಾವಾಗ ನೋಡು ವೆವೊ? (ಜಗತಶ್ಶೋಕನಾಶನಂ) ಆ ರಾಮನು ಸಮಸ್ತಲೋಕಗಳಿಗೂ ದುಃಖವನ್ನು ನೀಗಿಸಬೇಕಾಗಿ ಬಂದಿರುವುದು ಆಶ್ಚರ್ಯವೆಂದು ಭಾವವು.

2 ಇಲ್ಲಿ "ದೃಷ್ಟ ಏವ ಹಿ ನಶ್ಶೋಕಮಪನೇಷ್ಯತಿ ರಾಘವಃ" ಎಂದು ಮೂಲವು, ಆತನು ನಮ್ಮ ಕಣ್ಣಿಗೆ ಗೋಚರಿಸಿದರೆ ಸಾಕು, ಆತನು ನಮ್ಮನ್ನು ನೋಡಿ ಕಿರುನಗೆಯಿಂದ ನಗಬೇಕಾದ ಆವಶ್ಯಕವೂ ಇಲ್ಲ. ಆತನು ನಮ್ಮೊಡನೆ ಮೃದುವಾದ ಮಾತುಗಳನ್ನಾಡಿ ಮನಸ್ಸಂತೋಷಪಡಿಸಬೇಕಾದ ಆವಶ್ಯಕತೆಯೂ ಇಲ್ಲ. ನಾವು ನಮ್ಮ ದುಃಖವನ್ನು ನೀಗಿಸಿಕೊಳ್ಳುವುದಕ್ಕಾಗಿ ಬೇರೆ ಯಾವುದೊಂದು ಪ್ರಯತ್ನವನ್ನೂ ಮಾಡಬೇಕಾದುದಿಲ್ಲ. ಆತನನ್ನು ದೂರದಿಂದ ಕಂಡಮಾತ್ರಕ್ಕೆ ಆಗಲೇ ನಮ್ಮ ದುಃಖವೆಲ್ಲವೂ ನೀಗುವುದೆಂದು ಭಾವವು.

ಗಾಯಕಾದಿಗಳೂ, ವಾರಸ್ತ್ರೀಯರೂ, ಬಲೆಗಾರರೂ ಆ ಭರತನನ್ನು ಹಿಂಬಾಲಿಸಿ ಹೊರಟರು. ಇದಲ್ಲದೆ ಯೋಗನಿಷ್ಠರಾಗಿಯೂ, ವೇದವಿತ್ತುಗಳಾಗಿಯೂ, ಸದಾಚಾರಪರರಾಗಿಯೂ ಇರುವ ಸಾವಿರಾರು ಮಂದಿ ಬ್ರಾಹ್ಮಣೋತ್ತಮರು ಎತ್ತಿನ ಬಂಡಿಗಳ ಮೇಲೆ ಕುಳಿತು ಭರತನ ಹಿಂದೆ ಹೊರಟರು. ಹೀಗೆ ರಾಮ ದರ್ಶನಾರ್ಥವಾಗಿ ಹೊರಟವರೆಲ್ಲರೂ ತಮ್ಮ ತಮ್ಮ ಸ್ಥಿತಿಗೆ ತಕ್ಕಂತೆ ಚೆನ್ನಾಗಿ ಅಲಂಕರಿಸಿಕೊಂಡು, ಉತ್ತಮವಾದ ಮಡಿಬಟ್ಟೆಗಳನ್ನು ಕೆಂಪುಗಂಧವನ್ನುಟ್ಟು ಪೂಸಿ, ನಾನಾವಿಧವಾದ ವಾಹನಗಳನ್ನೇರಿ ಮೆಲ್ಲಗೆ ಭರತನ ಹಿಂದೆ ಬರುತ್ತಿದ್ದರು. ಪರಮಸಂತೋಷದಿಂದುಬ್ಬಿದ ಚತುರಂಗಸೈನ್ಯವೂ, ಭ್ರಾತೃವತ್ಸಲನಾದ ಭರತನು ರಾಮನನ್ನು ಕರೆತರುವುದಕ್ಕಾಗಿ ಹೋಗುವನೆಂಬ ಹರ್ಷದಿಂದ ಆತನ ಮಾರ್ಗವನ್ನೇ ಹಿಡಿದು ನಡೆಯುತ್ತಿತ್ತು. ಇವರೆಲ್ಲರೂ ರಥಗಳನ್ನೂ ಕುದುರೆ ಗಳನ್ನೂ ಆನೆಗಳನ್ನೂ, ಪಲ್ಲಕ್ಕಿ ಮೊದಲಾದ ಇತರ ವಾಹನಗಳನ್ನೂ ಏರಿ, ಬಹುದೂರದವರೆಗೆ ಪ್ರಯಾಣಮಾಡಿ ಗಂಗಾನದಿಯನ್ನು ಸಮೀಪಿಸಿದರು. ಅಲ್ಲಿ ರಾಮನಿಗೆ ಪರಮಮಿತ್ರನಾದ ಗುಹನೆಂಬ ವ್ಯಾಧಾಧಿಪತಿಯು, ತನ್ನ ಬಂಧು ಜನರೊಡಗೂಡಿ ಎಚ್ಚರಿಕೆಯಿಂದ ಪಾಲಿಸುತ್ತಿದ್ದ ಶೃಂಗಿಬೇರಪುರದ ಕಡೆಗೆ ಬಂದು, ಅದರ ಸಮೀಪದಲ್ಲಿಯೇ ಗಂಗಾತೀರದಲ್ಲಿಳಿದರು. ಅನೇಕ ಚಕ್ರವಾಕ ಪಕ್ಷಿಗಳಿಗಾಶ್ರಯವಾದ ಆ ದೇಶಪ್ರದೇಶದಲ್ಲಿಯೇ ಭರತನ ಸಮಸ್ತಸೈನ್ಯವೂ ಬೀಡನ್ನಿಳಿಸಿತು. ಆಗ ಭರತನು ತನ್ನನ್ನು ಹಿಂಬಾಲಿಸಿಬಂದಿರುವ ಅಪಾರವಾದ ಸೈನ್ಯವನ್ನೂ, ಪುಣ್ಯತೀರ್ಥವುಳ್ಳ ಆ ಗಂಗಾನದಿಯನ್ನೂ ನೋಡಿ, ಸಮೀಪ ದಲ್ಲಿದ್ದ ಸಮಸ್ತಮಂತ್ರಿಗಳನ್ನೂ ಕುರಿತು, "ಎಲೈ ಮಂತ್ರಿಶ್ರೇಷ್ಠರೆ! ನಮ್ಮ ಸೈನಿಕರಿಗೂ, ಅವರವರ ಇಷ್ಟಾನುಸಾರವಾಗಿ ಅನುಕೂಲವಾದ ಸ್ಥಳವನ್ನು ನೋಡಿಕೊಂಡು ಇಲ್ಲಿಯೇ ಇಳಿಯುವಂತೆ ಅಜ್ಞಾಪಿಸಿರಿ! ಈ ದಿವಸದಮಟ್ಟಿಗೆ ಇಲ್ಲಿಯೇ ವಿಶ್ರಮಿಸಿಕೊಂಡಿದ್ದು ನಾಳೆ ಈ ನದಿಯನ್ನು ದಾಟುವೆವು. ನಾನೂ ಅಷ್ಟರಲ್ಲಿ ಸ್ವರ್ಗಸ್ಥನಾದ ನನ್ನ ತಂದೆಗೆ ಊರ್ಧ್ವದೇಹಶುದ್ಧಿಗಾಗಿ ಈ ಪುಣ್ಯ ನದಿಯಲ್ಲಿಳಿದು ಜಲತರ್ಪಣವನ್ನು ಬಿಟ್ಟುಬರುವೆನು" ಎಂದನು. ಈ ಮಾತನ್ನು ಕೇಳಿ ಮಂತ್ರಿಗಳೆಲ್ಲರೂ ಹಾಗೆಯೇ ಆಗಲೆಂದೊಪ್ಪಿದವರಾಗಿ, ಸಮಸ್ತಸೈನ್ಯಕ್ಕೂ ಅವರವರ ಮನಸ್ಸಿಗೊಪ್ಪಿದ ಸ್ಥಳಗಳನ್ನೇರ್ಪಡಿಸಿ ಬಹಳ ಎಚ್ಚರಿಕೆಯಿಂದ ಬೇರೆಬೇರೆಯಾಗಿ ಇಳಿಸಿದರು. ಭರತನು ತನ್ನ ಸಮಸ್ತ ಸೈನ್ಯಕ್ಕೂ ಪಟಗೃಹ

ಗಳೇ ಮೊದಲಾದ ಎಲ್ಲಾ ಸೌಕರ್ಯಗಳನ್ನೂ ಕಲ್ಪಿಸಿಕೊಟ್ಟು, ಗಂಗಾನದಿಯ ತೀರಪ್ರದೇಶದಲ್ಲಿರಿಸಿದಮೇಲೆ, ಮಹಾತ್ಮನಾದ ಆ ರಾಮನನ್ನು ಹಿಂತಿರುಗಿಸಿ ಕರೆತರುವುದಕ್ಕೆ ತಕ್ಕ ಉಪಾಯವಾವುದೆಂಬುದನ್ನೇ ತಾನು ಮನಸ್ಸಿನಲ್ಲಿ ಚಿಂತಿಸುತ್ತ ಅಲ್ಲಿಯೇ ಇರುತ್ತಿದ್ದನು.

ಇಲ್ಲಿಗೆ ಎಂಬತ್ತಮೂರನೆಯ ಸರ್ಗವು

ಭರತನಿಗೆ ಗುಹನು ಆತಿಥ್ಯಗಳನ್ನು ಮಾಡಿದುದು.

ಆಗ ಗಂಗಾನದಿಯ ತೀರದಲ್ಲಿ ಬಂದಿಳಿದಿದ್ದ ಅಪಾರವಾದ ಸೈನ್ಯವನ್ನು ನೋಡಿದೊಡನೆಯೇ ಶೃಂಗಿಬೇರಪುರಾಧಿಪತಿಯಾದ ಗುಹನು ಬೆಜ್ಜರಬಿದ್ದು, ತನ್ನ ಜ್ಞಾತಿಗಳನ್ನು ನೋಡಿ, "ಅದೋ! ಅಲ್ಲಿ ನೋಡಿದಿರಾ ? ಮಹಾಸಾಗರದಂತೆ ಅಪಾರವಾದ ಒಂದು ದೊಡ್ಡ ಸೈನ್ಯವು ಗಂಗಾತೀರದಲ್ಲಿ ಬಂದಿಳಿದಿರುವುದು! ಇದಕ್ಕೆ ಪಾರವೆಲ್ಲಿರುವುದೆಂದು ಮನಸ್ಸಿನಲ್ಲಿ ಎಣಿಸುವುದಕ್ಕೂ ಸಾಧ್ಯವಿಲ್ಲದಂತಿದೆ! ಒಂದುವೇಳೆ ಭರತನು ತನ್ನ ತಾಯಿಯಂತೆಯೇ ತಾನೂ ದುರ್ಬುದ್ಧಿಯಿಂದ ರಾಮನನ್ನಿದಿರಿಸುವುದಕ್ಕಾಗಿ ತಾನೇ ಸೇನೆಯನ್ನು ಕಟ್ಟಿಕೊಂಡು ಬಂದಿರಬಹುದೆ? ಇದ್ದರೂ ಇರಬಹುದೆಂದೇ ಎಣಿಸಬೇಕಾಗಿದೆ. ಇದರಲ್ಲಿ ಸಂದೇಹವಿಲ್ಲ! ಅದೋ ಅಲ್ಲಿ ರಥದ ಮೇಲೆ ದೊಡ್ಡ ಆಕಾರವುಳ್ಳ ಕೋವಿದಾರ ಧ್ವಜವು ಕಾಣುತ್ತಿರುವುದಲ್ಲವೆ? ಇನ್ನು ಸಂದೇಹವೇನು? ಭರತನೇ ಸೇನಾ ಸಮೇತನಾಗಿ ಬಂದಿರುವನು. ನಮ್ಮ ಕಡೆಯವರೆಲ್ಲರನ್ನೂ ಈತನು ನಿರ್ಮೂಲವಾಗಿ ಕೊಂದು ಹಾಕಿದರೂ ಹಾಕಬಹುದು. ಇವನು ದುಷ್ಟೆಯಾದ ಆ ಕೈಕೇಯಿಯ ಮಗನಲ್ಲವೆ? ಅವಳಿಗಿರತಕ್ಕ ದುರ್ಬುದ್ಧಿಯೇ ಇವನಿಗೂ ಇರುವುದರಲ್ಲಿ ಸಂದೇಹವೇನಿದೆ? ದಶರಥನಂತೂ ಕೈಕೇಯಿಯ ಮಾತಿಗೆ ಕಿವಿಗೊಟ್ಟು ರಾಮನನ್ನು ಕಾಡಿಗಟ್ಟಿಬಿಟ್ಟನು. ಈಗ ರಾಜ್ಯವೆಲ್ಲವೂ ಈ ಭರತನ ಕೈಗೆ ಸಿಕ್ಕಿಹೋಗಿರುವುದು. ಕೈಗೆ ಸಿಕ್ಕಿದ ರಾಜ್ಯವನ್ನು ಸಂಪೂರ್ಣವಾಗಿ ದಕ್ಕಿಸಿಕೊಳ್ಳಬೇಕೆಂಬ ದುರಾಶೆಯಿಂದ, ಈತನು ರಾಮನನ್ನು ಕೊಲ್ಲುವುದಕ್ಕಾಗಿಯೇ ಸೇನೆಯೊಡನೆ ಬಂದಿರುವನು. ರಾಮನು ಬಂದಮೇಲೆ ತನಗೆ ಈ ರಾಜ್ಯವು ದಕ್ಕದೆಂದು

ತಾನೇ ತಿಳಿದುಕೊಂಡಿರುವನು. ಈಗ ರಾಮನು ತಕ್ಕ ಸಹಾಯ ಸಂಪತ್ತಿಯಿಲ್ಲದೆ ದುರ್ಬಲನಾಗಿರುವನೆಂದೂ ತಿಳಿದು, ದಾಯಾದನಾದ ಆತನನ್ನು ನಿಗ್ರಹಿಸುವುದಕ್ಕೆ ಇದೇ ಸಮಯವೆಂದು, ಸೇನೆಯನ್ನು ಕಟ್ಟಿಕೊಂಡು ಬಂದಿರುವನು. ನನಗಾದರೋ ಆ ರಾಮನೇ ಪ್ರಭುವು. ನನಗೆ ಆತನೇ ಪರಮಮಿತ್ರನು. ಸಾಧ್ಯವಾದಮಟ್ಟಿಗೆ ಆತನಿಗೆ ಸಹಾಯಕರಾಗಿರಬೇಕಾದುದೇ ನಮ್ಮ ಕರ್ತವ್ಯವು. ಆದುದರಿಂದ ನೀವೆಲ್ಲರೂ ನಿಮ್ಮ ನಿಮ್ಮ ಆಯುಧಾದಿಗಳನ್ನು ಹಿಡಿದು ಸಿದ್ಧರಾಗಿ ಗಂಗಾತೀರಕ್ಕೆ ಹೊರಡಿರಿ! ನಮ್ಮ ಕಡೆಯ ಬೇಡರೆಲ್ಲರೂ ಸೇನೆಯೊಡನೆ ಆ ನದೀತೀರದಲ್ಲಿ ನಿಂತು, ನದೀತರಣ ಮಾರ್ಗದಲ್ಲಿ ಯಾವನೊಬ್ಬನನ್ನೂ ಬಿಡದೆ ಕಾವಲಿರಲಿ! ಅವರವರು ಆಹಾರಾರ್ಥವಾಗಿ ಗೆಡ್ಡೆಗೆಣಸುಗಳನ್ನೂ, ಮಾಂಸಗಳನ್ನೂ, ಹಣ್ಣುಗಳನ್ನೂ, ಸಿದ್ಧಪಡಿಸಿಕೊಂಡೇ ಅಲ್ಲಿಗೆ ಹೋಗಲಿ! ಒಂದೊಂದು ದೋಣಿಯಲ್ಲಿ ನೂರು ನೂರು ಮಂದಿ ಬೇಡರೊಡನೆ ಐನೂರು ದೋಣಿಗಳು ಸಿದ್ಧವಾಗಿ ಹೋಗಲಿ! ನಮ್ಮ ಬೇಡರಲ್ಲಿಯೂ ಒಳ್ಳೇ ಪ್ರಾಯಸಮರ್ಥರಾಗಿ, ಬಲಾಢ್ಯರಾಗಿರುವವರನ್ನೇ ಆರಿಸಿ ಕಳುಹಿಸಿರಿ. ಅವರೆಲ್ಲರೂ ಆ ಗಂಗಾನದಿಯಲ್ಲಿ ಯಾರೊಬ್ಬರೂ ದಾಟಿ ಹೋಗದಂತೆ ತಡೆಯುತ್ತಿರಲಿ" ಎಂದನು. ಆಮೇಲೆ ಪುನಃ ಆ ಗುಹನು ತನ್ನ ಮನಸ್ಸಿನಲ್ಲಿಯೇ ತಾನು, ಭರತನ ಸುಗುಣಗಳನ್ನು ಸ್ಮರಿಸಿಕೊಂಡು, ಇದಿರಿಗಿದ್ದ ಮಂತ್ರಿಗಳನ್ನು ನೋಡಿ "ಎಲೈ ಅಮಾತ್ಯರೆ! ಒಂದುವೇಳೆ ಭರತನು ರಾಮನಲ್ಲಿ ಸ್ನೇಹಭಾವದಿಂದಲೇ ಬಂದಿದ್ದರೂ ಇರಬಹುದು. ಹಾಗೆ ಆತನಲ್ಲಿ ರಾಮನ ವಿಷಯವಾಗಿ ದುರಭಿಪ್ರಾಯವೊಂದೂ ಇಲ್ಲವೆಂದು ನಿಶ್ಚಯವಾಗಿ ನಿಮಗೆ ತಿಳಿದಪಕ್ಷದಲ್ಲಿ, ಆತನ ಸೈನ್ಯವೆಲ್ಲವೂ ಕ್ಷೇಮದಿಂದಲೇ ಗಂಗೆಯನ್ನು ದಾಟಿಹೋಗಲಿ! ಹಾಗಿಲ್ಲದೆ ಆತನು ರಾಮನಿಗೆ ವಿರೋಧಿಯಾಗಿಯೇ ಬಂದಿದ್ದ ಪಕ್ಷದಲ್ಲಿ ಆತನ ಸೈನ್ಯವನ್ನು ಕಂಡ ಕಡೆಯಲ್ಲಿ ಧ್ವಂಸಮಾಡಿಬಿಡಿರಿ!" ಎಂದು ಹೇಳಿ ತಾನು ಲೋಕಮರ್ಯಾದೆಯನ್ನನುಸರಿಸಿ, ರಾಜನಾದ ಭರತನಿಗೆ ಕಾಣಿಕೆಯಾಗಿ ಪಟ್ಟೆಮಡಿ ಮೊದಲಾದ ವಸ್ತ್ರಾಭರಣಗಳನ್ನೂ, ಮೀನುಗಳನ್ನೂ, ಮೃಗಮಾಂಸಗಳನ್ನೂ, ಜೇನನ್ನೂ ತೆಗೆದುಕೊಂಡು ಇದಿರುಗೊಂಡು ಬಂದನು. ಹೀಗೆ ಸಪರಿವಾರನಾಗಿ ಬರುತ್ತಿದ್ದ ಗುಹನನ್ನು ಭರತನ ಸಮೀಪದಲ್ಲಿದ್ದ ಸುಮಂತ್ರನು ದೂರದಿಂದಲೇ ನೋಡಿ, ಭರತನನ್ನು ಕುರಿತು ವಿನಯದಿಂದ "ಎಲೈ ರಾಜಪುತ್ರನೆ! ಅದೋ ನೋಡು!

ಬೇಡರಿಗೆಲ್ಲಾ ಪ್ರಭುವಾದ ಗುಹನೆಂಬುವನು ಸಾವಿರಾರು ಮಂದಿ ಬಂಧು ಗಳೊಡಗೂಡಿ ಬರುತ್ತಿರುವನು. ಈತನಿಗೆ ದಂಡಕಾರಣ್ಯದ ಸಮಸ್ತ ಪ್ರದೇಶ ಗಳಲ್ಲಿಯೂ ಬಹಳ ದಿವಸಗಳ ಬಳಕೆಯುಂಟು. ನಿಮ್ಮಣ್ಣನಿಗೆ ಈತನು ಬಹಳ ಪ್ರಿಯಮಿತ್ರನು. ಇದರಮೇಲೆ ವಯೋವೃದ್ಧನಾಗಿಯೂ ಇರುವನು. ಆತನಿಗೆ ನೀನು ದರ್ಶನವನ್ನು ಕೊಟ್ಟು ಉಚಿತ ರೀತಿಯಿಂದ ಮನ್ನಿಸಬೇಕು. ಆತನು ಈ ಪ್ರದೇಶದ ಬೇಡರಿಗೆಲ್ಲಾ ದೊರೆಯೆನಿಸಿಕೊಂಡಿರುವನು. ರಾಮಲಕ್ಷ್ಮಣರ ವೃತ್ತಾಂತವನ್ನು ಇವನು ಆಗಾಗ ತಿಳಿದುಕೊಳ್ಳುತ್ತಿರುವನು. ಈಗಲೂ ಅವರೆಲ್ಲಿರುವರೆಂದು ಈತನಿಗೆ ನಿಶ್ಚಯವಾಗಿ ತಿಳಿದಿರಬಹುದು" ಎಂದನು. ಸುಮಂತ್ರನು ಹೇಳಿದ ಈ ಶುಭವಾಕ್ಯವನ್ನು ಕೇಳಿ ಭರತನು ಆತನನ್ನು ಕುರಿತು "ಎಲೆ ಸೂತನೆ! ಅದಕ್ಕೆ ತಡೆಯೇನು? ಆ ಗುಹನು ಈ ಕ್ಷಣವೇ ನನ್ನನ್ನು ಬಂದು ನೋಡಬಹುದು" ಎಂದನು. ಅಷ್ಟರಲ್ಲಿ ಗುಹನು ಸಮೀಪಸ್ಥನಾಗಿ, ತನ್ನ ದರ್ಶನಕ್ಕೆ ಭರತನು ಅನುಮತಿ ಕೊಟ್ಟುದನ್ನು ಕೇಳಿ ಸಂತೋಷ ಯುಕ್ತನಾಗಿ, ತನ್ನ ಸಮಸ್ತ ಬಂಧುಗಳೊಡನೆ ಭರತನ ಬಳಿಗೆ ಬಂದು ವಿನಯ ದಿಂದ ಮುಂದೆ ನಿಂತು, "ಎಲೈ ರಾಜಪುತ್ರನೆ! ಈ ನಮ್ಮ ದೇಶವೆಲ್ಲವೂ ನಿನ್ನ ಅಯೋಧ್ಯೆಗೆ ಮನೆಯ ಹಿಂದಿನ ತೋಟದಂತೆಯೇ ಹೊರತು ಬೇರೆಯಲ್ಲ! ನೀನು ಇದನ್ನು ಬೇರೆಯವರದೆಂದೆಣಿಸಬೇಡ! ಇದರಲ್ಲಿ ನಿನಗೆ ಸರ್ವ ಸ್ವಾತಂತ್ರ್ಯ ವುಂಟು. ನೀನು ಇಲ್ಲಿಗೆ ಹೊರಟು ಬರುವ ವಿಷಯವು ನಮಗೆ ಮೊದಲೇ ತಿಳಿಯದೆ ನಾವು ಮೋಸಹೋದೆವು. ಇದು ನಮಗೆ ಮೊದಲೇ ತಿಳಿದಿದ್ದರೆ ಇನ್ನೂ ಎಷ್ಟೋ ಅನುಕೂಲ್ಯಗಳನ್ನು ಕಲ್ಪಿಸಿಕೊಟ್ಟು ನಮ್ಮ ರಾಜಭಕ್ತಿಯನ್ನು ತೋರ್ಪಡಿಸುತ್ತಿದ್ದೆವು. ಇದೋ! ಈಗಲೂ ನಮ್ಮ ಸಮಸ್ತ ಸ್ವತ್ತನ್ನೂ ನಿನಗೇ ಒಪ್ಪಿಸಿರುವೆವು. ನಿನಗೆ ದಾಸಭೂತರಾದ ನಮ್ಮ ಮನೆಯಲ್ಲಿ ಸ್ವೇಚ್ಛೆಯಾಗಿ ಇದ್ದು ಹೋಗಬಹುದು. ನಮ್ಮ ಕಡೆಯ ಬೇಡರು ಬೇಕಾದಷ್ಟು ಕಂದಮೂಲ ಗಳನ್ನೂ ಸಂಗ್ರಹಿಸಿಟ್ಟಿರುವರು. ಹಸಿಯ ಮಾಂಸವಾಗಲಿ, ಒಣಗಿದ ಮಾಂಸ ವಾಗಲಿ, ಯಾವುದು ಬೇಕಾದರೂ ಸಿದ್ಧವಾಗಿರುವುದು. ಕಾಡಿನಲ್ಲಿ ಸಿಕ್ಕುವ ಸಮಸ್ತ ಧಾನ್ಯಗಳೂ ಮನೆಯಲ್ಲಿ ತುಂಬಿರುವುವು. ಈ ನಿನ್ನ ಸಮಸ್ತ ಸೈನ್ಯವೂ ಈ ರಾತ್ರಿಯಲ್ಲಿ ಇಲ್ಲಿಯೇ ಇದ್ದು, ನಮ್ಮ ಆತಿಥ್ಯವನ್ನು ಸ್ವೀಕರಿಸಿ ಹೋಗ ಬೇಕೆಂಬುದೇ ನನ್ನ ಪ್ರಾರ್ಥನೆಯು. ಹಾಗೆಯೇ ನೀನೂ ನಮ್ಮ ಸತ್ಕಾರಗಳನ್ನು

ಸ್ವೀಕರಿಸಿ, ಸೇನಾ ಸಮೇತನಾಗಿ ನಾಳೆ ಮುಂದಕ್ಕೆ ಪ್ರಯಾಣಮಾಡಬಹುದು" ಎಂದನು.

ಇದು ಎಂಬತ್ತನಾಲ್ಕನೆಯ ಸರ್ಗವು.

ಗುಹನು ಭರತನನ್ನು ಸಮಾಧಾನಪಡಿಸಿದುದು

ನಿಷಾದಾಧಿಪತಿಯಾದ ಗುಹನ ಈ ಮಾತನ್ನು ಕೇಳಿದೊಡನೆ, ಪ್ರಾಜ್ಞನಾದ ಭರತನು ಯುಕ್ತವಾದ ಮಾತುಗಳಿಂದ ಆತನನ್ನು ಮನ್ನಿಸಿ, ತನಗೆ ಗುರುವಾದ ರಾಮನಿಗೆ ಪ್ರಿಯಮಿತ್ರನೆಂಬ ಗೌರವಬುದ್ಧಿಯಿಟ್ಟು, ಮರ್ಯಾದೆಯಿಂದ ಸಂಬೋಧಿಸುತ್ತ "ಎಲೆ ಭದ್ರನೆ! ಇದೇನು? ನೀನು ಏಕಾಕಿಯಾಗಿದ್ದು ಕೊಂಡು ಅಪಾರವಾದ ಈ ನನ್ನ ಸೈನ್ಯಕ್ಕೆ ಆತಿಥ್ಯವನ್ನು ಮಾಡುವೆನೆಂದು ಕುತೂಹಲಗೊಂಡಿರುವೆಯಲ್ಲಾ! ಈ ನಿನ್ನ ಕೋರಿಕೆಯನ್ನು ನೋಡಿದಾಗಲೇ ನನಗೆ ನಿನ್ನ ಸಮಸ್ತ ಸತ್ಕಾರಗಳೂ ಸೇರಿದಷ್ಟು ಸಂತೋಷವುಂಟಾಯಿತು" ಎಂದನು. ಮಹಾತೇಜಸ್ವಿಯಾದ ಭರತನು ಮರ್ಯಾದೆಯೊಡನೆ ಬಹು ಗಂಭೀರವಾದ ಈ ಮಾತನ್ನು ಹೇಳಿದಮೇಲೆ, ಪುನಃ ಆ ಗುಹನನ್ನು ಕುರಿತು "ಎಲೆ ಗುಹನೆ! ಅವೆಲ್ಲವೂ ಹಾಗಿರಲಿ! ಈಗ ಭರದ್ವಾಜಾಶ್ರಮಕ್ಕೆ ಹೋಗಬೇಕಾದರೆ ಅನುಕೂಲವಾದ ದಾರಿ ಯಾವುದು? ಯಾವ ಕಡೆಯಿಂದ ಹೋಗಬೇಕು. ಈ ಪ್ರದೇಶಗಳೆಲ್ಲವೂ ಬಹಳ ದುರ್ಗಮಗಳಾಗಿರುವುವು. ಗಂಗಾತೀರಕ್ಕೆ ಸೇರಿದ ಈ ಜೌಗುಪ್ರದೇಶಗಳಲ್ಲಿ ನಡೆಯುವುದು ಇನ್ನೂ ಕಷ್ಟವಾಗಿರುವುದು. ಒಂದೊಂದು ಕಡೆಯಲ್ಲಿ ದಾಟಿಹೋಗುವುದೇ ಸಾಧ್ಯವಾಗುವುದಿಲ್ಲ" ಎಂದನು. ಇದನ್ನು ಕೇಳಿ, ಕಾಡುಗಳೆಲ್ಲವನ್ನೂ ತಿರುಗಿ ಬಹಳ ಪರಿಶ್ರಮವುಳ್ಳವನಾದ ಆ ಗುಹನು, ಭರತನನ್ನು ನೋಡಿ ವಿನಯದಿಂದ ಕೈಮುಗಿದು "ಎಲೈ ಮಹಾ ಯಶಸ್ವಿಯಾದ ರಾಜಕುಮಾರನೆ! ನಿನಗೆ ಅದರ ಚಿಂತೆಯೇಕೆ? ನಾನೇ ನಿನ್ನ ಸಂಗಡ ಬರುವೆನು. ಇದಲ್ಲದೆ ಧನುರ್ಧಾರಿಗಳಾದ ನಮ್ಮ ಕಡೆಯ ಬೇಡರೆಲ್ಲರೂ ಬಹಳ ಎಚ್ಚರಿಕೆಯಿಂದ ನಿನ್ನನ್ನು ಹಿಂಬಾಲಿಸಿ ಬರುವರು. ಈ ಮಾರ್ಗವನ್ನು ಕುರಿತು ನೀನು ಸ್ವಲ್ಪವೂ ಅಂಜಬೇಕಾದುದಿಲ್ಲ. ಆದರೆ ಮೊದಲು ನನಗೆ ಒಂದು ಸಂದೇಹವಿರುವುದು. ಈಗ ನೀನು ರಾಮನ ಬಳಿಗೆ ವಿರೋಧಬುದ್ಧಿಯಿಂದ

ಹೋಗುವವನಲ್ಲವಷ್ಟೆ? ಏಕೆಂದರೆ, ಆ ರಾಮನು ಪರಮಧರ್ಮಾತ್ಮನು. ಯಾರೊಬ್ಬರಿಗೂ ಕೇಡನ್ನೆಣಿಸತಕ್ಕವನಲ್ಲ! ನಿನ್ನೊಡನಿರುವ ಈ ಅಪಾರವಾದ ಸೈನ್ಯವನ್ನು ನೋಡಿ ನನ್ನ ಮನಸ್ಸಿನಲ್ಲಿ ಸ್ವಲ್ಪ ಶಂಕೆಯುಂಟಾಗಿರುವುದು. ನಾನು ಹೀಗೆ ಕೇಳಿದೆನೆಂದು ನೀನು ಕೋಪಿಸಕೂಡದು" ಎಂದನು. ಇದನ್ನು ಕೇಳಿ [1]ಆಕಾಶದಂತೆ ನಿರ್ಮಲಸ್ವಭಾವವುಳ್ಳ ಭರತನು, ಆ ಗುಹನನ್ನು ನೋಡಿ, ಸ್ವಲ್ಪವಾದರೂ ಕೋಪವನ್ನು ತೋರಿಸದೆ, ಮೃದುವಾದ ಮಾತಿನಿಂದ "ಎಲೈ ಗುಹನೆ! ನಾನು ರಾಮನಿಗೆ ಕೇಡನ್ನು ಬಯಸುವೆನೆಂಬ ಸಂದೇಹವಾದರೂ ಹುಟ್ಟುವಂತಾಯಿತೆ? ಛೀ! ಇಂತಹ ದುಷ್ಕಾಲವು ಇನ್ನೆಂದಿಗೂ ಉಂಟಾಗ ದಂತಿರಲಿ! ನಾನು ರಾಮನಿಗೆ ಕೇಡನ್ನು ಬಯಸುವೆನೆಂಬ ಶಂಕೆಯು ಜನರಿಗೆ ನನ್ನಲ್ಲಿ ಉಂಟಾಗದಿರಲಿ! ಜ್ಯೇಷ್ಠಭ್ರಾತೃವಾದ ಆತನು ನನಗೆ ತಂದೆ ಯಂತಲ್ಲವೆ? ಕಾಡಿನಲ್ಲಿ ಕಷ್ಟಪಡುತ್ತಿರುವ ಆತನನ್ನು ಮರ್ಯಾದೆಯಿಂದ ಹಿಂತಿರುಗಿಸಿ ಕರೆತರಬೇಕೆಂಬುದಕ್ಕಾಗಿಯೇ ನಾನು ಹೊರಟಿರುವೆನೇ ಹೊರತು ಬೇರೆಯಲ್ಲ. ನೀನು ನನ್ನ ವಿಷಯದಲ್ಲಿ ಬೇರೆ ಶಂಕಿಸಬೇಡ! ಬೇಕಾದರೆ ಆಣೆ ಯಿಟ್ಟು ಹೇಳುವೆನು. ಇದನ್ನು ಸತ್ಯವೆಂದು ತಿಳಿ" ಎಂದನು. ಇದನ್ನು ಕೇಳಿ ಗುಹನು ಪರಮಸಂತೋಷಯುಕ್ತನಾಗಿ ಪುನಃ ಆ ಭರತನನ್ನು ಕುರಿತು "ಎಲೈ ಭರತನೆ! ನೀನೇ ಧನ್ಯನು! ಈ ಪ್ರಪಂಚದೊಳಗಾಗಿ ನಿನಗೆ ಸಮಾನರಾದವರಿಲ್ಲ! ಅನಾಯಾಸವಾಗಿ ಕೈಗೆ ಸಿಕ್ಕಿದ ರಾಜ್ಯದಲ್ಲಿಯೂ ಆಸೆಯಿಡದೆ, ಅಣ್ಣನಲ್ಲಿ ಭಕ್ತಿಯಿಂದ ಆತನನ್ನನುಸರಿಸಿ ಹೋಗುತ್ತಿರುವೆಯಲ್ಲಾ! ನಿನ್ನ ಸತ್ಕೀರ್ತಿಯು ಸಮಸ್ತ ಲೋಕಗಳನ್ನೂ ವ್ಯಾಪಿಸಿ ಶಾಶ್ವತವಾಗಿರುವುದರಲ್ಲಿ ಸಂದೇಹವಿಲ್ಲ. ಕಷ್ಟದಲ್ಲಿ ಸಿಕ್ಕಿಬಿದ್ದಿರುವ ರಾಮನನ್ನು ಹಿಂತಿರುಗಿಸಿ ಕರೆತರುವುದಕ್ಕಾಗಿ ಹೊರಟಿರುವ ನಿನ್ನಂತಹ ಧರ್ಮಾತ್ಮ ಬೇರೆ ಯಾವನುಂಟು!" ಎಂದನು. ಹೀಗೆ

---

1 ಆಕಾಶದಂತೆ ನಿರ್ಮಲವೆಂಬುದರಿಂದ ಆಕಾಶಕ್ಕೆ ಕೊಳೆಯು ಹೇಗೆ ಅಂಟಲಾರದೋ, ಹಾಗೆಯೇ ಈತನಿಗೆ ದೋಷ ಸಂಬಂಧವೇ ಇಲ್ಲವೆಂದೂ, ಒಂದುವೇಳೆ ಇತರರು ಅದೇ ಆಕಾಶಕ್ಕೆ ಮಸಿ ಮೊದಲಾದುದನ್ನು ಬಳಿಯುವುದಕ್ಕೆ ಪ್ರಯತ್ನಿಸಿದರೂ, ಅದು ಅವರವರ ಕೈಗೆ ಅಂಟಿಕೊಳ್ಳುವುದಲ್ಲದೆ, ಅದಕ್ಕೆ ಹೇಗೆ ಸಂಬಂಧಿಸಲಾರದೋ ಹಾಗೆಯೇ, ಭರತನ ಮೇಲೆ ಇಲ್ಲದ ದೋಷವನ್ನು ಹೊರಿಸಲೆಳಸುವವರು, ತಾವೇ ದೋಷಭಾಗಿಗಳಾಗುವರೆಂದೂ ಭಾವವು.

*

ಗುಹನು ಭರತನೊಡನೆ ಮಾತಾಡುತ್ತಿರುವಾಗಲೇ ಸೂರ್ಯಪ್ರಭೆಯು ಕ್ರಮ ಕ್ರಮವಾಗಿ ಕುಂದುತ್ತ ರಾತ್ರಿಯು ಸಮೀಪಿಸಿತು. ಆಮೇಲೆ ಭರತನು ಸೇನೆಗಳನ್ನು ಅಲ್ಲಲ್ಲಿರಿಸಿ, ಗುಹನ ಸತ್ಕಾರಗಳೆಲ್ಲವನ್ನೂ ಪ್ರೀತಿಯಿಂದಾದರಿಸುತ್ತ, ಸಂತುಷ್ಟನಾಗಿದ್ದು, ಕೊನೆಗೆ ಶತ್ರುಘ್ನಸಹಿತನಾಗಿ ಶಯನಗೃಹಕ್ಕೆ ಹೋಗಿ ಮಲಗಿದನು. ಭರತನಾದರೋ ಆಗರ್ಭಶ್ರೀಮಂತನು. ಎಂದಿಗೂ ದುಃಖವನ್ನೇ ಕಂಡವನಲ್ಲ. ಮಹಾ ಧೈರ್ಯವುಳ್ಳವನು. ಇಂತವನಿಗೂ ಕೂಡ ಈಗ ಮಹಾ ವ್ಯಸನವು ಪ್ರಾಪ್ತವಾಯಿತು. ರಾಮನ ವಿಷಯವಾದ ಚಿಂತೆಯೇ ಆತನನ್ನು ಹಗಲುರಾತ್ರಿಯೂ ಬಾಧಿಸುತ್ತಿತ್ತು. ಪಿತೃಶೋಕಾದಿಗಳಿಂದ ಮೊದಲೇ ಕಂದಿದ ಮೈಯುಳ್ಳ ಆ ಭರತನಿಗೆ ರಾಮವಿಷಯವಾದ ಚಿಂತಾಗ್ನಿಯು ಹೃದಯದಲ್ಲಿ ವ್ಯಾಪಿಸಿ, ಸಮೀಪದಲ್ಲಿ ಹಬ್ಬಿ ಬರುತ್ತಿರುವ ಕಾಡುಗಿಚ್ಚಿನ ಕಾವಿನಿಂದ ಮೊದಲೇ ಕಂದಿ ಹೋಗಿರುವ ಗಿಡದಲ್ಲಿ ಒಳಗೊಳಗೆ ಕೋಟರಾಗ್ನಿಯು ಉದ್ಭವಿಸಿ ಗೂಢವಾಗಿ ದಹಿಸುವಂತೆ ಸಂಕಟದಿಂದ ತತ್ತಳಿಸುತ್ತಿದ್ದನು. ಸೂರ್ಯಕಿರಣದಿಂದ ಕಾದುಹೋದ ಹಿಮವತ್ಪರ್ವತದಲ್ಲಿ ಹಿಮದ ನೀರು ಅವಿಚ್ಛಿನ್ನವಾಗಿ ಹೊರಡುವಂತೆ, ದುಃಖಾಗ್ನಿಯಿಂದ ಬೆಂದ ಭರತನ ದೇಹದಲ್ಲಿ ಬೆವರಿನ ನೀರು ಪ್ರವಾಹರೂಪವಾಗಿ ಹರಿಯುತ್ತಿತ್ತು. ಆ ರಾಜಪುತ್ರನಿಗೆ ದುಃಖವೆಂಬ ದೊಡ್ಡ ಬೆಟ್ಟವೊಂದು ಮೇಲೆ ಕವಿದುಬಿದ್ದಂತಾಯಿತು. [1]ರಾಮವಿಷಯವಾದ ಧ್ಯಾನವೆಂಬುದೇ ಅದರ ಗುಹೆಗಳಲ್ಲಿದ್ದ ಕಲ್ಲುಗಳಂತಿದ್ದುವು. ಆತನ ನಿಟ್ಟುಸಿರುಗಳೇ ಧಾತುಗಳಂತಾದುವು. ಇಂದ್ರಿಯಗಳೆಲ್ಲವೂ ಸ್ತಬ್ಧವಾದ ವೃಕ್ಷ

---

[1] ಮನಸ್ಸಿನ ಚಿಂತೆಯಿಂದುಂಟಾದ ಧ್ಯಾನಪರಂಪರೆಗಳು ಎಡೆಬಿಡದೆ ತುಂಬಿದ್ದುದರಿಂದ, ಅವುಗಳನ್ನು ಬಂಡೆಗಳಿಗೂ, ನಿಟ್ಟುಸಿರೆಂಬುದು ದೇಹದ ಒಳಭಾಗದಿಂದ ಕಿತ್ತು ಬರುವುದರಿಂದ ಅವುಗಳನ್ನು ಗಣಿಗಳಲ್ಲಿ ಹುದುಗಿರುವ ಗೈರಿಕಾಧಿ ಧಾತುಗಳಿಗೂ, ದೈನ್ಯವೆಂಬುದು ಶಾಖೋಪಶಾಖೆಗಳಾಗಿ ಕವಲೊಡೆದು ಹೋಗುತ್ತಿರುವುದರಿಂದ ಅದನ್ನು ವೃಕ್ಷಸಮೂಹಕ್ಕೂ, ದುಃಖವೂ ಆಯಾಸವೂ ಮೇಲೆ ಮೇಲೆ ಉಬ್ಬಿಹೋಗುತ್ತಿದ್ದುದರಿಂದ ಅವುಗಳನ್ನು ಉನ್ನತವಾಗಿ ಬೆಳೆದ ಶಿಖರಗಳಿಗೂ, ಮೋಹವೆಂಬುದು ಪ್ರಾಣಭಯವನ್ನುಂಟುಮಾಡುತ್ತಿದ್ದುದರಿಂದ ಅದನ್ನು ಪರ್ವತದ ಮೇಲಿನ ಕ್ರೂರ ಮೃಗಗಳಿಗೂ, ಮನಸ್ಸಂತಾಪವು ದಟ್ಟವಾಗಿ ತುಂಬಿದ್ದುದರಿಂದ ಅದನ್ನು ಬಿದರುಮೆಳೆಗೂ ಹೋಲಿಸಿ, ಇವೆಲ್ಲವುಗಳಿಂದಲೂ ಕೂಡಿ ದುರ್ಭರವಾಗಿರುವ ಆತನ ವ್ಯಸನಭಾರವನ್ನು ಪರ್ವತಕ್ಕೆ ಹೋಲಿಸಿರುವುದಾಗಿಯೂ ತಿಳಿಯಬೇಕು.

ಸಮೂಹಗಳಂತಿದ್ದುವು. ಮೇಲೆ ಹೆಚ್ಚುತ್ತಿರುವ ದುಃಖವೂ ಆಯಾಸವೂ, ಮನೋವ್ಯಥೆಯೂ ಉಬ್ಬಿದ ಶಿಖರಗಳಂತಿದ್ದುವು. ದ್ರೋಹವೆಂಬುದೇ ಅಸಂಖ್ಯಾತವಾದ ಕಾಡುಮೃಗಗಳಂತಿದ್ದುವು. ಆತನ ಮನಸ್ಸಿನ ಬೇಗೆಯೇ ಬೇರೆ ಬೇರೆ ಓಷಧಿಗಳಂತೆಯೂ, ಬಿದಿರುಮೆಳೆಗಳಂತೆಯೂ ಆದುವು. ಹೀಗೆ ಶೋಕವೆಂಬ ಪರ್ವತವೇ ಮೇಲೆ ಬಿದ್ದಂತೆ ಭರತನು ಬಹು ದುಃಖಿತನಾಗಿ, ಆಗಾಗ ನಿಟ್ಟುಸಿರನ್ನು ಬಿಡುತ್ತ, ಆಗಾಗ ಪ್ರಜ್ಞೆ ತಪ್ಪುತ್ತ, ಮಹಾ ವಿಪತ್ತಿಗೆ ಸಿಕ್ಕಿದವನಂತೆ ನರಳುತ್ತ, ಮನೋವ್ಯಾಧಿಯಿಂದ ಪೀಡಿಸಲ್ಪಟ್ಟವನಾಗಿ, ಮಂದೆಯನ್ನು ತಪ್ಪಿ ಬಂದ ಎತ್ತಿನಂತೆ ತತ್ತಳಿಸುತ್ತಿದ್ದನು. ಆತನಿಗೆ ಯಾವಾಗಲೂ ಮನಸ್ಸಿನಲ್ಲಿ ಶಾಂತಿಯೆಂಬುದೇ ಉಂಟಾಗಲಿಲ್ಲ. ಮಹಾತ್ಮನಾದ ಭರತನು ಹೀಗೆ ಏಕಾಗ್ರಚಿತ್ತನಾಗಿ, ಚಿಂತಿಸುತ್ತಿರುವಾಗ ಗುಹನೂ ಈತನ ಬಳಿಗೆ ಬಂದು ಸೇರಿದನು. ಅವನು ಚಿಂತಿಸುತ್ತಿರುವ ಭರತನನ್ನು ನೋಡಿ ತಾನೂ ರಾಮನ ವಿಷಯವಾದ ದುಃಖವನ್ನು ತೋರಿಸುತ್ತ, ಆತನಿಗೆ ಸಮಾಧಾನ ವಾಕ್ಯಗಳನ್ನು ಹೇಳುತ್ತಿದ್ದನು,

ಇಲ್ಲಿಗೆ ಎಂಬತ್ತೈದನೆಯ ಸರ್ಗವು.

ಗುಹನು ಭರತನೊಡನೆ ರಾಮನ ವಿಷಯವಾದ
ಅನೇಕ ಕಥೆಗಳನ್ನಾಡುತಿದ್ದುದು.

ಆಮೇಲೆ [1]ವನಸಂಚಾರಗಳಲ್ಲಿ ವಿಶೇಷಪರಿಶ್ರಮವುಳ್ಳ ಗುಹನು ಮಹಾತ್ಮನಾದ ಭರತನನ್ನು ಕುರಿತು, ಲಕ್ಷ್ಮಣನಿಗೆ ಅಣ್ಣನಾದ ರಾಮನಲ್ಲಿರುವ ಭಕ್ತಿ ವಿಶೇಷವನ್ನು ತಿಳಿಸಲಾರಂಭಿಸಿದನು. “ಎಲೈ ಭರತನೆ! ಅಣ್ಣನಾದ ರಾಮನಲ್ಲಿ

---

[1]ಇಲ್ಲಿ “ಆಚಚಕ್ಷೇಥ ಸದ್ಭಾವಂ ಲಕ್ಷ್ಮಣಸ್ಯ ಮಹಾತ್ಮನಃ ॥ ಭರತಾಯಾಪ್ರಮೇಯಾಯ ಗುಹೋ ಗಹನಗೋಚರಃ” ಎಂದು ಮೂಲವು. ಮಹಾತ್ಮನಾದ ಲಕ್ಷ್ಮಣನ ಸದ್ಭಾವವನ್ನು ಎಂದರೆ “ಬಾಲ್ಯಾತ್ಪ್ರಭೃತಿ ಸುಸ್ನಿಗ್ಧಃ” ಎಂಬಂತೆ ಬಾಲ್ಯ ಮೊದಲುಗೊಂಡು ತನ್ನ ಅಣ್ಣನಾದ ರಾಮನಲ್ಲಿ ಬಹು ಪ್ರೀತಿಯುಳ್ಳವನಾಗಿ ನಡೆಯುತ್ತಿದ್ದ ಜ್ಯೇಷ್ಠಾನುವರ್ತನವೆಂಬ ಆತನ ಸುಸ್ವಭಾವವನ್ನು ಕೇವಲ ಕಾಡು ಮನುಷ್ಯನೆನಿಸಿಕೊಂಡ ಗುಹನೆಂಬ

ಲಕ್ಷ್ಮಣನಿಗಿರುವ ವಿಧೇಯತೆಯನ್ನು ನಾನೇನೆಂದು ಹೇಳಲಿ! ಅವರು ಇಲ್ಲಿದ್ದಾಗ ಒಂದಾನೊಂದು ರಾತ್ರಿಯಲ್ಲಿ ರಾಮನು ಮಲಗಿರಲು, ಆತನ ಅಂಗರಕ್ಷಣೆಗಾಗಿ ಲಕ್ಷ್ಮಣನು ತಾನೇ ಧನುರ್ಬಾಣಗಳನ್ನು ಹಿಡಿದು ರಾತ್ರಿಯೆಲ್ಲವೂ ಎವೆಮುಚ್ಚದೆ ಎಚ್ಚರಿಕೆಯಿಂದ ಕಾದಿದ್ದನು. ಹೀಗೆ ಕಷ್ಟಪಡುತ್ತಿದ್ದ ಆ ಲಕ್ಷ್ಮಣನನ್ನು ನೋಡಿ ನಾನು "ಎಲೈ ರಘುನಂದನನೆ! ಇದೋ ಇಲ್ಲಿ ನಿನಗಾಗಿಯೂ ಹಾಸಿಗೆಯು ಸಿದ್ಧವಾಗಿರುವುದಲ್ಲವೆ? ಸುಖವಾಗಿ ಮಲಗು! ಈ ವಿಧವಾದ ಕಷ್ಟಗಳಿಗೆ ರಾಜಪುತ್ರನಾದ ನೀನು ಅರ್ಹನಲ್ಲ. ವನಜೀವಿಗಳಾದ ನಾವು ಎಷ್ಟು ಕಷ್ಟವನ್ನಾದರೂ ಸಹಿಸಬಲ್ಲೆವು. ಆದುದರಿಂದ ನಾವೆಲ್ಲರೂ ಎಚ್ಚರಗೊಂಡು ಕಾವಲಿರುವೆವು. ನನಗೆ ಈ ಭೂಲೋಕದಲ್ಲಿ ರಾಮನಿಗಿಂತಲೂ ಪ್ರಿಯವಾದ ವಸ್ತುವು ಬೇರೊಂದೂ ಇಲ್ಲವು. ಅವನಿಗಾಗಿ ನೀನು ಎಚ್ಚರಗೊಂಡಿರಬೇಕಾದುದಿಲ್ಲ. ಈ ವಿಷಯದಲ್ಲಿ ನೀನು ಸ್ವಲ್ಪವೂ ವಿಚಾರಪಡಬೇಕಾದುದಿಲ್ಲ. ನಾನು ಅಸತ್ಯವನ್ನು ಹೇಳುವೆನೆಂದು ನೀನೆಂದಿಗೂ ಎಣಿಸಬೇಡ! ಈ ರಾಮನ ಅನುಗ್ರಹದಿಂದಲೇ ನಾನು ಈ ಲೋಕದಲ್ಲಿ ಸತ್ಕೀರ್ತಿಯನ್ನಾಗಲಿ ಧರ್ಮವನ್ನಾಗಲಿ ಪಡೆಯಬೇಕೇ ಹೊರತು ನನಗೆ ಬೇರೆ ಆಶ್ರಯವಿಲ್ಲ. ಅಂತಹ ಮಹಾತ್ಮನಾದ ರಾಮನನ್ನು ಕಾಯುವುದಕ್ಕೆ ಇಲ್ಲಿ ನಾನೊಬ್ಬನುಮಾತ್ರವಲ್ಲದೆ ಸೀತಾಸಮೇತನಾಗಿ ಮಲಗಿರುವ ಈತನ ಅಂಗರಕ್ಷಣೆಗಾಗಿ ಇಲ್ಲಿ ನನ್ನ ಜ್ಞಾತಿಗಳೆಲ್ಲರೂ ಕಾವಲಿರುವರು. ನಾನೂ ಧನುರ್ಧಾರಿಯಾಗಿ ಎಚ್ಚರಿಕೆಯಿಂದಿರುವೆನು. ಈ ವನದಲ್ಲಿ ನನಗೆ ತಿಳಿಯದುದೊಂದೂ ಇಲ್ಲವು. ನಾನು ಈ ಪ್ರಾಂತ್ಯಗಳನ್ನೆಲ್ಲಾ ಪ್ರತಿದಿನವೂ ಸುತ್ತಿ ಬರತಕ್ಕವನು. ಇಲ್ಲಿಗೆ ಶತ್ರುಗಳು ತಮ್ಮ ಚತುರಂಗ ಸೈನ್ಯಗಳೊಡನೆ ಬಂದು ಇದಿರಿಸಿದರೂ, ನಾವು ನಿಮಿಷಮಾತ್ರದಲ್ಲಿ ಉಪಾಯದಿಂದ ಅವರನ್ನು ಓಡಿಸಿಬಿಡಬಲ್ಲೆವು. ನೀನು ಸುಖವಾಗಿ ಮಲಗಿರು" ಎಂದು ಆತನನ್ನು ನಾನು ನಿರ್ಬಂಧಿಸಿದೆನು. ಎಷ್ಟು ಹೇಳಿದರೇನು? ಮಹಾತ್ಮನಾದ ಆ ಲಕ್ಷ್ಮಣನು ಸ್ವಧರ್ಮದಲ್ಲಿಯೇ ದೃಷ್ಟಿಯುಳ್ಳವನಾದುದರಿಂದ, ನಾನು

ಬೇಡನು, ಎಣೆಯಿಲ್ಲದ ಮಹಿಮೆಯುಳ್ಳ ಭರತನಿಗೆ ಹೇಳಿ ತಿಳಿಸಿದನು" ಎಂದರ್ಥವು. ಇದರಿಂದ ಭಗವದ್ವಿಷಯಕವಾದ ಉಪದೇಶವನ್ನು ಮಾಡುವುದಕ್ಕೆ ಚಿಕ್ಕವರು ದೊಡ್ಡವರೆಂಬ ಭೇದವಾಗಲಿ, ನೀಚೋತ್ತಮರೆಂಬ ಭೇದವಾಗಲಿ ಇಲ್ಲವು ಹೇಳುವವರೆಲ್ಲರೂ ಗುರುಗಳು, ಅದರಿಂದ ಕೇಳುವವರೆಲ್ಲರೂ ಉಪದೇಶಕರೆಂದು ಸೂಚಿತವಾಗಿದೆ.

ಹೇಳುವವರೆಗೂ ಕೇಳುತ್ತಿದ್ದು, ಆಮೇಲೆ ಬಹು ಮೃದುವಾಕ್ಯದಿಂದ ನಮ್ಮೆಲ್ಲರನ್ನೂ ಕುರಿತು “ದಶರಥ ಮಹಾರಾಜನ ಹೊಟ್ಟೆಯಲ್ಲಿ ಹುಟ್ಟಿದ ಈ ರಾಮನು ರಾಜಪುತ್ರಿಯಾದ ಸೀತೆಯೊಡನೆ ಬರೀ ನೆಲದ ಮೇಲೆ ಮಲಗಿರುವುದನ್ನು ನೋಡಿದರೆ, ನನಗೆ ಪ್ರಾಣವನ್ನು ಇಟ್ಟುಕೊಂಡಿರುವುದೇ ಕಷ್ಟವಾಗಿರುವುದಲ್ಲವೆ? ಹೀಗಿರುವಾಗ ನನಗೆ ಹೇಗೆ ತಾನೇ ನಿದ್ರೆಯು ಬಂದೀತು? ಇತರ ಸುಖಗಳಲ್ಲಿ ಹೇಗೆ ತಾನೇ ನನಗೆ ಆಸೆಯುಂಟಾಗುವುದು? ಎಲೈ ಗುಹನೆ! ದೇವದಾನವರೆಲ್ಲರೂ ಒಂದಾಗಿ ಬಂದು ಏಕಕಾಲದಲ್ಲಿ ಇದಿರಿಸಿದರೂ, ಯಾರಮುಂದೆ ಕ್ಷಣಮಾತ್ರವೂ ನಿಲ್ಲಲಾರರೋ ಅಂತಹ ಲೋಕೈಕವೀರನಾದ ಈ ರಾಮನು, ಈಗ ತನ್ನ ಪ್ರಿಯಪತ್ನಿಯೊಡನೆ ಬರೀ ನೆಲದ ಮೇಲೆ ಮಲಗಬೇಕಾಗಿಬಂದುದನ್ನು ನೋಡಿದೆಯಾ? ದಶರಥನು ಎಷ್ಟೋ ತಪಸ್ಸುಗಳನ್ನು ಮಾಡಿ, ಅನೇಕ ವ್ರತಗಳನ್ನು ನಡೆಸಿ, ಅಸಂಖ್ಯಾತವಾದ ಯಾಗಗಳನ್ನು ಮುಗಿಸಿ ಈ ಪುತ್ರರತ್ನವನ್ನು ಪಡೆದನು. ತನಗೆ ಸಮಾನವಾದ ಸದ್ಗುಣವುಳ್ಳ ಈ ಒಬ್ಬ ಪುತ್ರನನ್ನೂ ಕಾಡಿಗೆ ತೊರೆದುಬಿಡಬೇಕಾಯಿತು. ಈ ಪುತ್ರನನ್ನಗಲಿದಮೇಲೆ ತಂದೆಯಾದ ದಶರಥನು ಇನ್ನು ಬಹುಕಾಲದವರೆಗೆ ಬದುಕಿಯೇ ಇರಲಾರನು. ಶೀಘ್ರದಲ್ಲಿಯೇ ಭೂಮಿಗೆ ವೈಧವ್ಯವುಂಟಾಗುವುದು. ಇದು ನಿಶ್ಚಯವು. ಇಷ್ಟುಹೊತ್ತಿಗೆ ಅಂತಃಪುರಸ್ತ್ರೀಯರೆಲ್ಲರೂ ಅತ್ತು ಸಾಕಾಗಿ ಬಳಲಿ ಸುಮ್ಮನಾಗಿಬಿಟ್ಟಿರುವರು. ಅರಮನೆಯಲ್ಲಿ ಮೊದಲು ದೊಡ್ಡ ಗದ್ದಲವುಂಟಾಗಿದ್ದರೂ, ಇಷ್ಟರೊಳಗೆ ಆ ಕೋಲಾಹಲವೆಲ್ಲವೂ ಶಾಂತವಾಗಿ ನಿಶ್ಶಬ್ದವಾಗಿರಬಹುದು. ದಶರಥನಾಗಲಿ, ಕೌಸಲ್ಯೆಯಾಗಲಿ, ನನ್ನ ತಾಯಿ ಸುಮಿತ್ರೆಯಾಗಲಿ ಇನ್ನು ಬಹುಕಾಲದವರೆಗೆ ಬದುಕಿರಲಾರರು. ಒಂದುವೇಳೆ ಕಷ್ಟದಿಂದ ಜೀವಿಸಿದ್ದರೂ ಈ ಒಂದು ರಾತ್ರಿಯನ್ನು ಕಳೆಯಬಹುದೇಹೊರತು ಅದಕ್ಕೆ ಮೇಲೆ ಬದುಕಿರಲಾರರು. ಒಂದುವೇಳೆ ನನ್ನ ತಾಯಿಯಾದ ಸುಮಿತ್ರೆಗೆ ಶತ್ರುಘ್ನನೆಂಬ ಬೇರೊಬ್ಬ ಮಗನಿರುವುದರಿಂದ, ಆತನನ್ನು ನೋಡಿಕೊಂಡು ಅವಳುಮಾತ್ರ ಬದುಕಿರಬಹುದಾದರೂ, ವೀರಮಾತೆಯಾದ ಕೌಸಲ್ಯೆಯು ಮಾತ್ರ ಎಂದಿಗೂ ಪ್ರಾಣವನ್ನು ನಿಲ್ಲಿಸಿಕೊಂಡಿರಲಾರಳು. ಅಂತೂ ಕಾರ್ಯವು ಮಿಂಚಿಹೋಯಿತು. ಎಲ್ಲವೂ ಕೆಟ್ಟುಹೋಯಿತು! ಈಗ ಮಾಡತಕ್ಕುದೇನು? ನನ್ನ ತಂದೆಯಾದ ದಶರಥನ ದೌರ್ಭಾಗ್ಯವನ್ನು ಏನೆಂದು ಹೇಳಲಿ! ಇಂತಹ ಸತ್ಪುತ್ರನಾದ ರಾಮನಿಗೆ

ರಾಜ್ಯಾಭಿಷೇಕವನ್ನು ಮಾಡಿ ತನ್ನ ಕೋರಿಕೆಯನ್ನು ಈಡೇರಿಸಿಕೊಳ್ಳದೆಯೇ ಸಾಯಬೇಕಾಗಿಬಂತಲ್ಲವೆ? ಇನ್ನು ನಮ್ಮ ದೌರ್ಭಾಗ್ಯವನ್ನು ಹೇಳಬೇಕಾದು ದೇನು? ಆ ತಂದೆಯ ಮರಣಕಾಲದಲ್ಲಿ ಆತನ ಅಪರ ಸಂಸ್ಕಾರಗಳನ್ನು ಮಾಡತಕ್ಕ ಭಾಗ್ಯವೂ ನಮಗಿಲ್ಲದೇಹೋಯಿತು. ಭರತಶತ್ರುಘ್ನರಿಗೆ ಆ ಭಾಗ್ಯವಾದರೂ ಲಭಿಸಿತು. ಅವರಿಬ್ಬರೇ ಧನ್ಯರು! ತಂದೆಯು ಮರಣವನ್ನು ಹೊಂದಿದಾಗ ಆತನ ಪ್ರೇತಕಾರ್ಯಗಳನ್ನು ನಡೆಸುವುದಕ್ಕಿಂತಲೂ ಮಕ್ಕಳಿಗೆ ಬೇರೆ ಭಾಗ್ಯವೇನುಂಟು? ಆಹಾ! ಈಗಲೂ ಆ ಅಯೋಧ್ಯೆಯ ಅಂದವನ್ನು ನೆನೆಸಿಕೊಂಡರೆ ಮನಸ್ಸಿಗೆ ಎಷ್ಟೋ ವ್ಯಸನವುಂಟಾಗುವುದು. ಅಂದವಾದ ಚತುಷ್ಪಥಗಳೂ, ಬೇರೆಬೇರೆಯಾಗಿ ವಿಭಾಗಿಸಲ್ಪಟ್ಟ ರಾಜಮಾರ್ಗಗಳೂ, ಧನವಂತರ ಉಪ್ಪರಿಗೆ ಮನೆಗಳೂ ನೋಡುವುದಕ್ಕೆ, ಎಷ್ಟೋ ರಮ್ಯವಾಗಿ ರುವುವು. ಮನೆಗಳೆಲ್ಲವೂ ನವರತ್ನ ಖಚಿತವಾಗಿಯೇ ಕಂಗೊಳಿಸುತ್ತಿರುವುವು. ಎಲ್ಲಿ ನೋಡಿದರೂ ಆನೆಗಳು! ಎಲ್ಲಿ ನೋಡಿದರೂ ಕುದುರೆಗಳು! ಎಲ್ಲಿ ನೋಡಿದರೂ ಪದಾತಿಗಳು! ಎಲ್ಲಿ ನೋಡಿದರೂ ರಥಗಳು! ಹೀಗೆ ಚತುರಂಗಸೈನ್ಯವೂ ದಟ್ಟವಾಗಿ ತುಂಬಿರುವುವು. ಅಲ್ಲಿ ಅನವರತವೂ ಎಡೆಬಿಡದೆ ಮಂಗಳವಾದ್ಯಗಳು ಪ್ರತಿಧ್ವನಿಯನ್ನು ಕೊಡುತ್ತಿರುವುವು. ಅದು ಮಂಗಳಕಾರ್ಯಗಳಿಗೆ ನಿತ್ಯಾಶ್ರಯ ವಾಗಿರುವುದು. ಅಲ್ಲಿನ ಜನರೆಲ್ಲರೂ ತುಷ್ಟರಾಗಿಯೂ, ಪುಷ್ಟರಾಗಿಯೂ ಇರುವರು. ಉದ್ಯಾನಗಳೂ, ತೋಟಗಳೂ ಹೇರಳವಾಗಿ ತುಂಬಿರುವುವು. ಸಮಾಜಗಳೂ, ಉತ್ಸವಗಳೂ ಯಾವಾಗಲೂ ಎಡೆಬಿಡದೆ ನಡೆಯುತ್ತಿರುವುವು. ಹೀಗೆ ಲೋಕಮೋಹಕವಾದ ನನ್ನ ತಂದೆಯ ರಾಜಧಾನಿಯಲ್ಲಿ ಸಂಚರಿಸುವವರೇ ಧನ್ಯರಲ್ಲವೆ? ಅವರೇ ಪರಮಸುಖಿಗಳು. ನಮಗಂತೂ ಆ ಭಾಗ್ಯವೂ ಇಲ್ಲದೆ ಹೋಯಿತು. ಇನ್ನು ಹೇಳುವುದರಿಂದೇನು? ಅಯ್ಯೋ! ಈ ಹದಿನಾಲ್ಕು ವರ್ಷಗಳ ವನವಾಸದ ಅವಧಿಯನ್ನು ತೀರಿಸಿಕೊಂಡು ಕ್ಷೇಮದಿಂದ ರಾಮನೊಡ ಗೂಡಿ ಈ ಅಯೋಧ್ಯಾನಗರವನ್ನು ಪ್ರವೇಶಿಸುವೆನೆ?" ಎಂದು ಆ ಲಕ್ಷ್ಮಣನು ಬಹಳವಾಗಿ ಕೊರಗಿ ಪ್ರಲಾಪಿಸುತಿದ್ದನು. ಎಲೈ ಭರತನೆ! ಈ ಪ್ರಲಾಪ ಗಳಲ್ಲಿಯೇ ಆ ರಾತ್ರಿಯು ಕಳೆದುಹೋಯಿತು! ಚೆನ್ನಾಗಿ ಬೆಳಗಾದಮೇಲೆ ರಾಮಲಕ್ಷ್ಮಣರಿಬ್ಬರೂ ಈ ಗಂಗಾತೀರದಲ್ಲಿಯೇ ಜಟೆಯನ್ನು ಧರಿಸಿಕೊಂಡರು. ಆಮೇಲೆ ನಾನು ಅವರನ್ನು ಸುಖವಾಗಿ ಈ ನದಿಯನ್ನು ದಾಟಿಸಿದೆನು. ಆನೆಯ

ಸಲಗಗಳಂತೆ ಬಲಾಢ್ಯರಾದ ಅವರಿಬ್ಬರೂ ಜಟೆಯನ್ನು ಧರಿಸಿ, ನಾರುಮಡಿಯನ್ನುಟ್ಟು ಕತ್ತಿ, ಬಿಲ್ಲು, ಬಾಣಗಳನ್ನು ಹಿಡಿದು, ಈ ಕಾಡನ್ನು ಸುತ್ತಿ ನೋಡುತ್ತ ಸೀತೆಯೊಡನೆ ಮುಂದಕ್ಕೆ ಪ್ರಯಾಣಮಾಡಿದರು. ಇದೀಗ ಇಲ್ಲಿ ನಡೆದ ವೃತ್ತಾಂತವು" ಎಂದನು.

ಇದು ಎಂಬತ್ತಾರನೆಯ ಸರ್ಗವು.

ರಾಮನು ಜಲಾಹಾರವನ್ನು ಮಾತ್ರ ಮಾಡಿ ಸೀತೆಯೊಡನೆ
ಮರದ ಕೆಳಗೆ ಮಲಗಿದ್ದ ವಿಷಯವನ್ನೂ
ಗುಹನು ಭರತನಿಗೆ ತಿಳಿಸಿದುದು

ರಾಮಲಕ್ಷ್ಮಣರು ಜಡೆಯನ್ನು ಧರಿಸಿ ಕಾಡಿಗೆ ಹೋದರೆಂಬ ಅಪ್ರಿಯ ವಾಕ್ಯವನ್ನು ಕೇಳಿದೊಡನೆಯೇ ಭರತನು ವ್ಯಸನದಿಂದ ಪರವಶನಾಗಿ ಚಿಂತಿಸುತ್ತ "ಆಹಾ! ಹೀಗೆ ಜಡೆಯನ್ನು ಧರಿಸಿ ತಾಪಸವೇಷದಿಂದ ಹೊರಟು ಹೋದ ರಾಮನು ಇನ್ನು ಮೇಲೆ ಹಿಂತಿರುಗುವನೆ? ಎಂದು ಶಂಕಿಸಿ ಹಾಗೆಯೇ ಮೈಮರೆತವನಂತೆ ಮೂರ್ಛೆಗೊಂಡನು. ಆ ಭರತನಾದರೋ ಬಹಳ ಸುಕುಮಾರವಾದ ಮೈಯುಳ್ಳವನು. ಮಹಾಬಲಾಢ್ಯನು. ಸಿಂಹದಂತೆ ಎದೆಯ ಕಟ್ಟುಳ್ಳವನು. ಉದ್ದವಾದ ತೋಳುಗಳುಳ್ಳವನು. ಬಿಳೀಕಮಲದಂತೆ ವಿಸ್ತಾರವಾದ ಕಣ್ಣುಳ್ಳವನು. ಇನ್ನೂ ಎಳೆಪ್ರಾಯದವನು. ಇಂತಹ ಸರ್ವಲಕ್ಷಣ ಸಂಪನ್ನನಾದ ಆ ರಾಜಕುಮಾರನೂ, ಮೇಲೆಮೇಲೆ ಕಿವಿಗೆ ಬೀಳುತ್ತಿರುವ ಅಪ್ರಿಯವಾಕ್ಯಗಳಿಂದ ಕಂದಿ ಕೃಶನಾಗಿ, ಸ್ವಲ್ಪಹೊತ್ತಿನವರೆಗೆ ಮೈಮೇಲೆ ಪ್ರಜ್ಞೆಯಿಲ್ಲದೆ ಬುದ್ಧಿಭ್ರಮವುಳ್ಳವನಾಗಿ, ಕೊನೆಗೆ ಕಶೆಯಿಂದ ಹೊಡೆಯಲ್ಪಟ್ಟ ಮದ್ದಾನೆಯಂತೆ ಆ ದುಃಖವನ್ನು ಸಹಿಸಲಾರದೆ ಮೂರ್ಛಿತನಾಗಿ ಕೆಳಗೆ ಬಿದ್ದನು. ಭರತನ ಈ ಅವಸ್ಥೆಯನ್ನು ನೋಡಿ ಶತ್ರುಘ್ನನು ಸಮೀಪಕ್ಕೆ ಬಂದು, ಆತನ ದೇಹವನ್ನಪ್ಪಿಕೊಂಡು ಗೋಳಿಡುತ್ತ ಕೊನೆಗೆ ಮೂರ್ಛೆಬಿದ್ದನು. ರಾಮನ ವನಪ್ರಯಾಣದಿಂದೀಚೆಗೆ ಮೇಲೆಮೇಲೆ ಒದಗಿಬರುತ್ತಿರುವ ಅನರ್ಥಪರಂಪರೆಗಳಿಂದ ಯಾರಿಗೂ ಸರಿಯಾಗಿ ನಿದ್ರಾಹಾರಗಳಿಲ್ಲದೆ, ಅವರೆಲ್ಲರೂ ಕೃಶವಾದ ದೇಹವುಳ್ಳವರಾಗಿ ದುಃಖದಿಂದ ಕಂದಿದ್ದುದಲ್ಲದೆ, ಪತಿವಿರಹದಿಂದುಂಟಾದ ವ್ಯಸನವು ಅವರ ಮೈಯನ್ನು ಕೇವಲ ನಿಸ್ಸಾರವಾಗಿ ಮಾಡಿತ್ತು. ಈ

ರಾಜಸ್ತ್ರೀಯರೆಲ್ಲರೂ ಅತ್ಯಾತುರದಿಂದ ಬಂದು ಮೂರ್ಛಿತನಾಗಿ ಬಿದ್ದಿದ್ದ ಆ ಭರತನ ಸುತ್ತಲೂ ಕುಳಿತು ಪ್ರಲಾಪಿಸುತ್ತಿದ್ದರು. ಅವರಲ್ಲಿ ಕೌಸಲ್ಯೆಯು ಮಾತ್ರ ವ್ಯಸನವನ್ನು ತಡೆಯಲಾರದೆ ಭರತನ ಸಮೀಪಕ್ಕೆ ಬಂದು, ಆತನ ದೇಹವನ್ನು ಮುಟ್ಟಿ ಸವರಿ, ಕರುವನ್ನು ಕಂಡ ಹಸುವಿನಂತೆ ಪ್ರೇಮಪರವಶಳಾಗಿ, ಆತನನ್ನು ಕುರಿತು, "ವತ್ಸ ಭರತನೆ! ಈಗ ಯಾವ ಮಹಾ ವ್ಯಾಧಿಯು ನಿನಗೆ ಈ ಬಾಧೆಯನ್ನುಂಟುಮಾಡಿರುವುದು ? ಅಯ್ಯೋ ! ಈಗ ರಾಜವಂಶಕ್ಕೆ ಸೇರಿದ ನಮ್ಮೆಲ್ಲರ ಪ್ರಾಣವೂ ನಿನ್ನೊಬ್ಬನ ಕೈಯಲ್ಲಿಯೇ ಅಡಗಿರುವುದಲ್ಲವೆ? ರಾಮನು ತಮ್ಮನಾದ ಲಕ್ಷ್ಮಣನೊಡನೆ ಕಾಡಿಗೆ ಹೊರಟುಹೋಗಿದ್ದರೂ ನಿನ್ನನ್ನು ನೋಡುತ್ತಿರುವುದರಿಂದ ನಾನು ಸ್ವಲ್ಪಮಟ್ಟಿಗಾದರೂ ಮನಸ್ಸಮಾಧಾನವನ್ನು ಹೊಂದಿ ಬದುಕುತ್ತಿರುವೆನು. ಅತ್ತಲಾಗಿ ನನ್ನ ಹೊಟ್ಟೆಯಲ್ಲಿ ಹುಟ್ಟಿದ ಮಗನೂ ಕಾಡುಪಾಲಾಗಿ ಹೊರಟುಹೋದುದಲ್ಲದೆ, ಕೈಹಿಡಿದ ಗಂಡನೂ ಮೃತನಾದನು. ಇನ್ನು ನಮ್ಮೆಲ್ಲರಿಗೂ ನೀನೊಬ್ಬನೇ ದಿಕ್ಕಾಗಿರುವೆಯಲ್ಲವೆ ? ಎಲೈ ಪುತ್ರನೆ! ಲಕ್ಷ್ಮಣನ ವಿಷಯವಾಗಿಯಾಗಲಿ, ನನಗೆ ಒಬ್ಬನೇ ಮಗನಾಗಿ ಈಗ ಪತ್ನಿಯೊಡನೆ ಕಾಡುಪಾಲಾಗಿ ಹೊರಟುಹೋಗಿರುವ ರಾಮನ ವಿಷಯವಾಗಿಯಾಗಲೀ ನಿನಗೆ ಅಪ್ರಿಯವಾಕ್ಯವೇನಾದರೂ ಕಿವಿಗೆ ಬಿದ್ದಿರುವುದೆ ? ನೀನು ಆಕಸ್ಮಿಕವಾಗಿ ಈ ಅವಸ್ಥೆಯನ್ನು ಹೊಂದುವುದಕ್ಕೆ ಕಾರಣವೇನು? ಎಂದಳು. ಯಶಸ್ವಿಯಾದ ಭರತನು ಸ್ವಲ್ಪಹೊತ್ತಿನ ಮೇಲೆ ಚೇತರಿಸಿಕೊಂಡು ವ್ಯಸನದಿಂದಲೇ ಗೋಳಿಡುತ್ತ ಕೌಸಲ್ಯೆಯನ್ನು ನೋಡಿ "ಅಮ್ಮಾ ! ಅದೇನೂ ಇಲ್ಲವು. ನೀನು ಅಂಜಬೇಡ" ಎಂದು ಸಮಾಧಾನಪಡಿಸಿ, ಅತ್ತಲಾಗಿ ಗುಹನ ಕಡೆಗೆ ತಿರುಗಿ "ಎಲೈ ಗುಹನೆ! ನನ್ನ ಅಣ್ಣನಾದ ರಾಮನು ಆ ರಾತ್ರಿಯಲ್ಲಿ ಎಲ್ಲಿದ್ದನು? ಸೀತೆಯೆಲ್ಲಿದ್ದಳು ? ಲಕ್ಷ್ಮಣನಿದ್ದುದೆಲ್ಲಿ? ಅವರೆಲ್ಲರೂ ಯಾವ ಆಹಾರವನ್ನು ತೆಗೆದುಕೊಂಡರು? ಎಲ್ಲಿ ಮಲಗಿದರು? ಇವೆಲ್ಲವನ್ನೂ ನನಗೆ ವಿಸ್ತಾರವಾಗಿ ತಿಳಿಸುವೆಯಾ ? " ಎಂದು ಕೇಳಿದನು. ಆಗ ನಿಷಾಧಾಧಿಪತಿಯಾದ ಗುಹನು, ರಾಮನ ವೃತ್ತಾಂತವನ್ನು ಕೀರ್ತಿಸಿ ಹೇಳತಕ್ಕ ಮಹಾ ಭಾಗ್ಯವಾದರೂ ತನಗೆ ಲಭಿಸಿತೆಂದು ಪರಮ ಸಂತೋಷಯುಕ್ತನಾಗಿ, ತನಗೆ ಪ್ರಿಯಾತಿಥಿಯಾಗಿ ಬಂದ ರಾಮನಿಗೆ ತಾನು ಹೇಗೆ ಸತ್ಕಾರಗಳನ್ನು ನಡೆಸಿದನೋ ಅದೆಲ್ಲವನ್ನೂ ವಿವರವಾಗಿ ಹೇಳಲಾರಂಭಿಸಿದನು. "ಎಲೈ ರಾಜಕುಮಾರನೆ! ರಾಮನು ಇಲ್ಲಿಗೆ

ಬಂದೊಡನೆಯೇ ನಾನು ಆತನ ಭೋಜನಾರ್ಥವಾಗಿ ನಾನಾ ವಿಧಗಳಾದ ಭಕ್ಷ್ಯಗಳನ್ನೂ, ಅನ್ನವನ್ನೂ, ಫಲಮೂಲಾದಿಗಳನ್ನೂ, ಪಾನೀಯಾದ್ಯನೇಕ ಪದಾರ್ಥಗಳನ್ನೂ ತಂದೊದಗಿಸಿಟ್ಟೆನು. ನಾನು ತರಿಸಿಟ್ಟ ಭೋಜ್ಯ ವಸ್ತುಗಳೆಲ್ಲವನ್ನೂ ನೋಡಿ ಆ ರಾಮನು ತನ್ನ ಕ್ಷತ್ರಿಯಧರ್ಮವನ್ನು ಸ್ಮರಿಸಿದವನಾಗಿ ನನ್ನನ್ನು ನೋಡಿ "ಮಿತ್ರನೆ! ಕ್ಷತ್ರಿಯರಾದ ನಾವು ಇತರರಿಗೆ ದಾನ ಮಾಡುವುದಕ್ಕೆ ಮಾತ್ರ ಅರ್ಹರೇ ಹೊರತು, ಇತರರಿಂದ ಪ್ರತಿಗ್ರಹಿಸುವುದು ನಮಗೆ ಧರ್ಮವಲ್ಲ." ಎಂದು [1]ಸಮಾಧಾನಪಡಿಸಿಬಿಟ್ಟನು. ಆಮೇಲೆ ಯಶಸ್ವಿಯಾದ ಆತನು ಲಕ್ಷ್ಮಣನು ತಂದಿಟ್ಟ ಗಂಗಾತೀರ್ಥವನ್ನೇ ಕುಡಿದನು. ಆ ಜಲಾಹಾರದಿಂದಲೇ ತೃಪ್ತನಾಗಿ ಸೀತೆಯೊಡನೆ ಉಪವಾಸವಿದ್ದುಬಿಟ್ಟನು. ಆಮೇಲೆ ರಾಮನು ಕುಡಿದು ಮಿಕ್ಕ ಸ್ವಲ್ಪ ನೀರನ್ನೇ ಲಕ್ಷ್ಮಣನೂ ಕುಡಿದು ಅದರಿಂದಲೇ ಇದ್ದುಬಿಟ್ಟನು. [2]ಆ ಮೂವರೂ ವಾಙ್ನಿಯಮದಿಂದ ಏಕಾಗ್ರಚಿತ್ತರಾಗಿ [3]ಸಂಧ್ಯೋಪಾಸನೆಯನ್ನು ಮಾಡಿದ ಮೇಲೆ, ಲಕ್ಷ್ಮಣನು ತಾನಾಗಿಯೇ ಶೀಘ್ರವಾಗಿ ಹೋಗಿ ದರ್ಭೆಗಳನ್ನು ಸಂಗ್ರಹಿಸಿತಂದು ದರ್ಭಾಸ್ತರಣವನ್ನು ಕಲ್ಪಿಸಿಟ್ಟನು. ಸೀತಾರಾಮರಿಬ್ಬರೂ ಆ ಹಾಸಿಗೆಯ ಮೇಲೆ

---

[1]ಇಲ್ಲಿ ಗುಹನು ತಂದಿಟ್ಟ ಫಲಮೂಲಾದಿಗಳನ್ನು ನೋಡಿ, ಆ ಗುಹನ ಭಕ್ತಿಯಿಂದಲೇ ಅವೆಲ್ಲವೂ ಪವಿತ್ರವಾಗಿದ್ದರೂ, ಶಬರೀ ವಿದುರಾದಿಗಳಂತೆ ಆತನೂ ಪರಮಭಾಗವತನೆನಿಸಿಕೊಂಡಿದ್ದರೂ, ಅವು ತನಗೆ ಸ್ವೀಕಾರಾರ್ಹವಾಗಿದ್ದರೂ, ರಾಮನು ಅವುಗಳನ್ನು ಅಂಗೀಕರಿಸದೆ ಹೋದುದೇಕೆಂದರೆ, ತನಗೆ ಪ್ರಿಯರಾದ ತಂದೆ, ತಾಯಿ, ಮೊದಲಾದವರೆಲ್ಲರನ್ನೂ ಅಗಲಿಬಂದ ದುಃಖದಿಂದ ಮನಸ್ಸಿಗೆ ನೆಮ್ಮದಿಯಿಲ್ಲದೆಹೋಗಿದ್ದುದರಿಂದಲೂ, ಪುಣ್ಯನದೀತೀರದಲ್ಲಿ ಉಪವಾಸವಿರಬೇಕೆಂಬ ಉದ್ದೇಶವು ಮೊದಲೇ ಆತನಿಗೆ ಹುಟ್ಟಿದ್ದುದರಿಂದಲೂ ಆಗ ಗುಹನು ಕೊಟ್ಟುದನ್ನು ಪ್ರತಿಗ್ರಹಿಸಲಿಲ್ಲವು. ಈ ವಿಷಯವು ಗುಹನಿಗೂ ತಿಳಿದಿದ್ದುದರಿಂದ ಆತನೂ ಪುನಃ ರಾಮನನ್ನು ನಿರ್ಬಂಧಿಸಲಿಲ್ಲವೆಂದೂ ಗ್ರಹಿಸಬೇಕು.

[2]ಇಲ್ಲಿ "ಮೂವರೂ" ಎಂದುದರಿಂದ ಸಂಧ್ಯಾಕಾಲದಲ್ಲಿ ಸೀತೆಗೂ ಧ್ಯಾನಜಪಾದಿನಿಯಮಂಗಳು ಕೆಲವಿದ್ದುವೆಂದು ತಿಳಿಯಬೇಕು.

[3]ಹಿಂದೆ "ತತಶ್ಚೀರೋತ್ತರಾಸಂಗಸ್ಸಂಧ್ಯಾಮನ್ವಾಸ್ಯ ಪಶ್ಚಿಮಾಂ । ಜಲಮೇವಾದದೇ ಭೋಜ್ಯಂ ಲಕ್ಷ್ಮಣೇನಾಹೃತಂ ಸ್ವಯಂ ॥" ಎಂಬುದಾಗಿ, ಮೊದಲು ಸಂಧ್ಯೋಪಾಸನೆಯನ್ನು ಮಾಡಿ ಆಮೇಲೆ ಜಲಪಾನವನ್ನು ಮಾಡಿದುದಾಗಿ ಕಾಣಿಸಲ್ಪಟ್ಟಿರುವುದು. ಈಗಲಾದರೋ ಜಲಪಾನವನ್ನು ಮಾಡಿದಮೇಲೆ ಸಂಧ್ಯೋಪಾಸನೆಯನ್ನು ಮಾಡಿದುದಾಗಿ ಕಾಣಿಸಲ್ಪಟ್ಟಿದೆ. ಹೀಗೆ ಪರಸ್ಪರ ವಿರೋಧವಿರುವುದಕ್ಕೆ ಕಾರಣವೇನೆಂದು ಶಂಕೆಯುಂಟಾಗ

ಮಲಗಿದ್ದರು. ಬಹುದೂರದವರೆಗೆ ದಾರಿ ನಡೆದುದರಿಂದ ಸೀತಾರಾಮರಿಬ್ಬರೂ ಬಹಳವಾಗಿ ಬಳಲಿರುವುದನ್ನು ನೋಡಿ, ಲಕ್ಷ್ಮಣನು ತನ್ನ ಕೈಗಳಿಂದಲೇ ರಾಮನ ಪಾದಗಳನ್ನು ತೊಳೆದು, ಸೀತೆಗೂ ಪಾದಪ್ರಕ್ಷಾಳನಾರ್ಥವಾಗಿ ನೀರನ್ನು ತಂದಿಟ್ಟು ತಾನು ಮಾತ್ರ ದೂರವಾಗಿ ಬೇರೊಂದು ಕಡೆಗೆ ಹೋಗಿ ಕಾವಲಾಗಿದ್ದನು. ಇದೋ! ಈ ಇಂಗಳದಮರದಡಿಯಲ್ಲಿಯೇ ಅವರು ಮಲಗಿದ್ದುದು! ಇದೋ! ಇಲ್ಲಿ ದರ್ಭಾಸ್ತರಣವೂ ಹಾಗೆಯೇ ಇರುವುದು ನೋಡು. ಇದರಮೇಲೆಯೇ ಸೀತಾರಾಮರಿಬ್ಬರೂ ಆ ರಾತ್ರಿಯಲ್ಲಿ ಮಲಗಿದ್ದರು! ಆ ರಾತ್ರಿಯಲ್ಲಿ ಲಕ್ಷ್ಮಣನಾದರೋ, ನಾಣೊತ್ತುಗಳನ್ನೂ, ಕೈಚೀಲಗಳನ್ನೂ ಧರಿಸಿ ಬಾಣಗಳಿಂದ ತುಂಬಿದ ಎರಡು ಬತ್ತಳಿಕೆಗಳನ್ನು ಬೆನ್ನಿಗೆ ಕಟ್ಟಿಕೊಂಡು ನಾಣೇರಿಸಲ್ಪಟ್ಟ ಮಹಾಧನುಸ್ಸನ್ನು ಹಿಡಿದು, ರಾತ್ರಿಯೆಲ್ಲವೂ ರೆಪ್ಪೆಮುಚ್ಚದೆ, ರಾಮನ ಶಯನಸ್ಥಳದ ಸುತ್ತಲೂ ಕಾವಲಾಗಿ ತಿರುಗುತ್ತಿದ್ದನು. ಆಗ ನಾನಾದರೋ ಉತ್ತಮವಾದ ಧನುರ್ಬಾಣಗಳನ್ನು ಹಿಡಿದು, [1]ಆ ಲಕ್ಷ್ಮಣನು ಹೋಗುತ್ತಿದ್ದ ದಾರಿಯನ್ನೇ ಅನುಸರಿಸಿ ಅವನಿಗೆ ಬೆಂಗಾವಲಾಗಿ, ತಿರುಗುತ್ತಿದ್ದೆನು. ಹಾಗೆಯೇ ನನ್ನ ಕಡೆಯವರೆಲ್ಲರೂ ಬಹಳ ಎಚ್ಚರಿಕೆಯುಳ್ಳವರಾಗಿ, ಧನುರ್ಬಾಣಗಳನ್ನು ಹಿಡಿದು ಇಂದ್ರಸಮಾನನಾದ ಆ ರಾಮನ ಸುತ್ತಲೂ ಕಾವಲಿದ್ದು ಸುತ್ತುತ್ತಿದ್ದರು" ಎಂದನು.

ಇದು ಎಂಬತ್ತೇಳನೆಯ ಸರ್ಗವು.

ಬಹುದು. ಈ ವಿಷಯದಲ್ಲಿ ಮೊದಲು ಹೇಳಿದುದೇ ಕ್ರಮವು. ಇಲ್ಲಿ ಗುಹನು ತರಿಸಿಟ್ಟ ಆಹಾರವನ್ನು ರಾಮನು ಸ್ವೀಕರಿಸಲಿಲ್ಲವೆಂದು ಹೇಳಿದಾಗ, ಮತ್ತಾವುದನ್ನು ಭುಜಿಸಿದನೆಂದು ಶಂಕೆಯುಂಟಾಗಬಹುದೆಂದೆಣಿಸಿ, ಪ್ರಸಂಗಸಂಗತಿಯಿಂದ ಆ ವಿಷಯವನ್ನು ಇಲ್ಲಿಯೇ ತಿಳಿಸಲಾರಂಭಿಸಿ ಜಲಪಾನವನ್ನು ಹೇಳಿ, ಆಮೇಲೆ ಸಂಧ್ಯೋಪಾಸನೆಯನ್ನು ಹೇಳಿದುದಾಗಿ ಗ್ರಹಿಸಬೇಕು. ಕಾರ್ಯಕ್ರಮವೇನೋ ಮೊದಲು ಹೇಳಿದಂತೆಯೇ ನಡೆದುದರಿಂದ ಇಲ್ಲಿ ವಿರೋಧಶಂಕೆಗವಕಾಶವಿಲ್ಲವೆಂದು ತಿಳಿಯಬೇಕು.

[1] ಲಕ್ಷ್ಮಣನು ರಾಮನಲ್ಲಿ ವಿಶೇಷಭಕ್ತಿಯುಳ್ಳವನೆಂದು ಗುಹನು ಚೆನ್ನಾಗಿ ತಿಳಿದುಕೊಂಡಿದ್ದರೂ, "ಅತಿಸ್ನೇಹಃ ಪಾಪಶಂಕೀ" ಎಂಬಂತೆ "ಲಕ್ಷ್ಮಣನೂ ದಾಯಾದದ್ವೇಷದಿಂದ ರಾಮನನ್ನು ಏನು ಮಾಡಿಬಿಡುವನೋ?" ಎಂದು ಶಂಕಿಸಿ ಶಸ್ತ್ರಧಾರಿಯಾಗಿ ತಾನು ಆತನ ಹಿಂದೆ ತಿರುಗಿದ್ದುದಾಗಿಯೂ ಭಾವವು.

ಇಂಗಳದಮರದ ಕೆಳಗೆ ಸೀತೆಯ ಆಭರಣದಿಂದುದಿರಿದ ರತ್ನಗಳನ್ನೂ
ಆಕೆಯ ಪಟ್ಟೆವಸ್ತ್ರದಿಂದ ಉದಿರಿದ ನೂಲುಗಳನ್ನೂ
ನೋಡಿ ಭರತನು ದುಃಖಿಸಿದುದು.

ಗುಹನು ಹೇಳಿದ ಮಾತುಗಳೆಲ್ಲವನ್ನೂ ಭರತನು ಕೇಳಿ ಮಂತ್ರಿಗಳೊಡನೆ ಆ ಇಂಗಳದ ಮರದ ಕೆಳಕ್ಕೆ ಬಂದು ರಾಮನು ಮಲಗಿದ್ದ ಹಾಸಿಗೆಯನ್ನು ನೋಡಿ ತನ್ನ ಮಾತೆಯರೆಲ್ಲರನ್ನೂ ಕುರಿತು, "ಎಲೈ ಜನನಿಯರೆ! ಮಹಾತ್ಮನಾದ ರಾಮನು ರಾತ್ರಿಯಲ್ಲಿ ಇಲ್ಲಿಯೇ ಮಲಗಿದ್ದನಂತೆ! ಇದೋ ಈ ಹಾಸಿಗೆಯೆಲ್ಲವೂ ಕದಲಿರುವುದನ್ನು ನೋಡಿರಿ! ಮಹಾಭಾಗ್ಯಕ್ಕೆಡೆಯಾದ ಇಕ್ಷ್ವಾಕುವಂಶದಲ್ಲಿ ಹುಟ್ಟಿ. ಭಾಗ್ಯಶಾಲಿಯಾಗಿ ಧೀಮಂತನೆನಿಸಿಕೊಂಡು ರಾಜಾಧಿರಾಜನಾದ ದಶರಥನ ಪುತ್ರನೆನಿಸಿಯೂ, ರಾಮನು ಹೀಗೆ ಬರೀ ನೆಲದಮೇಲೆ ಮಲಗಬೇಕಾಗಿಬಂತಲ್ಲವೆ? ಈ ದುರವಸ್ಥೆಯು ಎಂದಿಗೂ ಆತನಿಗೆ ಉಚಿತವಲ್ಲ. ಮೃದುವಾದ ಜಿಂಕೆಯ ಚರ್ಮವನ್ನು ಮೇಲೆ ಹೊದ್ದಿಸಿ, ಸರ್ವೋತ್ತಮವಾದ ದುಪ್ಪಟಿಗಳಿಂದ ಕೂಡಿ, ಶೀತೋಷ್ಣಾದಿಕಾಲಗಳಿಗೆ ತಕ್ಕಂತೆ ವಿಧವಿಧವಾಗಿರುವ ಸುಖಶಯ್ಯೆಯಲ್ಲಿ ಯಾವಾಗಲೂ ಮಲಗುತಿದ್ದ ಪುರುಷಶ್ರೇಷ್ಠನಾದ ಆ ರಾಮನು, ಹೀಗೆ ಬರೀ ನೆಲದಮೇಲೆ ಮಲಗಬೇಕೆಂದರೆ ಹೇಗೆ ತಾನೇ ವಿಮಾನಗಳಿಗೆ ಸಮಾನವಾದ ಉಪ್ಪರಿಗೆಗಳಮೇಲೆಯೂ, ಕೂಟಾಗಾರಗಳಲ್ಲಿಯೂ, ಚಿನ್ನದಿಂದಲೂ ಬೆಳ್ಳಿಯಿಂದಲೂ ಚಿತ್ರಕೆಲಸಮಾಡಲ್ಪಟ್ಟು ಉತ್ತಮವಾದ ರತ್ನಗಂಬಳಿಗಳಿಂದ ಹೊದ್ದಿಸಲ್ಪಟ್ಟ ನೆಲಗಟ್ಟುಗಳಲ್ಲಿಯೂ, ಪುಷ್ಪೋಪಹಾರಗಳಿಂದ ವಿಚಿತ್ರವಾಗಿಯೂ, ಅಗರುಚಂದನಗಳಿಂದ ಸುವಾಸಿತವಾಗಿಯೂ, ಬಿಳೀ ಮೇಘದಂತೆ ಹೊಳೆಯುತ್ತಿರುವ ಸೌಧಗಳಲ್ಲಿಯೂ, ಕಿವಿಗಿಂಪಾಗಿ ಕೂಗುತ್ತಿರುವ ಗಿಳಿಗಳ ಗಾನಗಳಿಂದ ಮನೋಹರವಾದ ಪ್ರಾಸಾದಗಳಲ್ಲಿಯೂ ಸುಗಂಧಶೀತಲವಾದ ವಾಯುಸಂಚಾರವುಳ್ಳ ಮೇಲುಮನೆಗಳಲ್ಲಿಯೂ, ಚಿನ್ನದ ಗೋಡೆಗಳಿಂದ ಮೇರುಪರ್ವತಕ್ಕೆ ಸಮಾನವಾಗಿ ನೇತ್ರಾನಂದಕರವಾದ ಮಹೋನ್ನತ ಗೃಹಗಳಲ್ಲಿಯೂ ಸುಖವಾಗಿ ಮಲಗುತ್ತಿದ್ದ ಆ ರಾಮನು, ಈ ಕಾಡಿನಲ್ಲಿ ನೆಲದಮೇಲೆ ಹೇಗೆ ಮಲಗಿದ್ದನೋ! ಮತ್ತು ಆತನನ್ನು ನಿದ್ರೆಯಿಂದ ಎಚ್ಚರಗೊಳಿಸುವುದಕ್ಕಾಗಿ ಒಂದು ಕಡೆಯಲ್ಲಿ ಗಾನಗಳೂ, ಮತ್ತೊಂದು ಕಡೆಯಲ್ಲಿ ವಾದ್ಯಧ್ವನಿಗಳೂ, ಬೇರೊಂದುಕಡೆಯಲ್ಲಿ ಅಂತಃಪುರಸ್ತ್ರೀಯರ ಕಾಲಂದುಗೆ ಮೊದಲಾದ ಆಭರಣಗಳ

ಧ್ವನಿಗಳೂ, ಅಲ್ಲಲ್ಲಿ ಮೃದಂಗಧ್ವನಿಗಳೂ, ಪರಂಪರೆಯಾಗಿ ಹೊರಡುತಿದ್ದು ವಲ್ಲವೆ? ಹೀಗೆ ಮಂಗಳ ವಾದ್ಯಗಳಿಂದ ಯಾವಾಗಲೂ ಎಚ್ಚರಗೊಳಿಸಲ್ಪಡುತಿದ್ದ ರಾಮನನ್ನು ಇಲ್ಲಿ ಎಚ್ಚರಿಸುವವರಾರು? ಆತನು ನಿದ್ರೆ ತಿಳಿದೆದ್ದಮೇಲೆಯೂ ಕೂಡ ಸೂತಮಾಗಧರೇ ಮೊದಲಾದ ಹೊಗಳುಭಟರು ಕಾಲೋಚಿತವಾದ ಪದಗಳನ್ನು ಹೇಳಿ ಸ್ತೋತ್ರಮಾಡಿ ವಂದಿಸುತ್ತಿದ್ದವರಲ್ಲವೆ? ಆತನು ಈ ಕಾಡಿನಲ್ಲಿ ಏಕಾಕಿಯಾಗಿದ್ದು ಹೇಗೆ ತಾನೇ ಮನಸ್ಸಿನಲ್ಲಿ ಕಳವಳಿಸದಿದ್ದನು! ಹಾ! ಕಷ್ಟವೆ! ರಾಮನು ಹೀಗೆ ಹುಲ್ಲಿನ ಮೇಲೆ ಮಲಗಿದ್ದನೆಂದು ಹೇಳಿದರೆ ನನಗೆ ಇದರಲ್ಲಿ ಸ್ವಲ್ಪವೂ ನಂಬಿಕೆಯಿಲ್ಲ! ಇದು ನಿಜವೆಂದೇ ನನಗೆ ತೋರಲಿಲ್ಲ! ಇದೇನು ನನ್ನ ಮನಸ್ಸಿಗೆ ಭ್ರಮವೇನಾದರೂ ಉಂಟಾಗಿರಬಹುದೆ? ರಾಮನು ಈ ನೆಲದ ಮೇಲೆ ಮಲಗಿದ್ದನೆಂದು ನಾನೇನಾದರೂ ಸ್ವಪ್ನವನ್ನು ಕಂಡೆನೆ? ಹಾಗಿದ್ದರೂ ಇರಬಹುದು. ಇದು ಸ್ವಪ್ನವಲ್ಲದೆ ಬೇರೆಯಲ್ಲವೆಂದೇ ತೋರುವುದು! ಹಾಗಿಲ್ಲ ದಿದ್ದರೆ ಲೋಕದಲ್ಲಿ ನಡೆಯಲಾರದ ಈ ವಿಪರೀತ ಕಾರ್ಯಗಳೆಲ್ಲವೂ ನಡೆದಿರುವು ವೆಂದು ಹೇಗೆತಾನೇ ನಂಬಬಹುದು? ದೈವಗತಿಗಿಂತಲೂ ಕಾಲಗತಿಯೇ ಬಲವತ್ತರವೆಂದು ನನಗೆ ತೋರುವುದು. ಹಾಗಿಲ್ಲದಿದ್ದರೆ ದಶರಥಪುತ್ರನಾದ ಆ ರಾಮನೂ ಹೀಗೆ ನೆಲದ ಮೇಲೆ ಮಲಗಬೇಕಾಗಿಬರುತ್ತಿತ್ತೆ? ವಿದೇಹ ರಾಜನಿಗೆ ಮಗಳಾಗಿ, ದಶರಥನಿಗೆ ಸೊಸೆಯಾಗಿ, ರಾಮನಿಗೆ ಕೈಹಿಡಿದ ಹೆಂಡತಿ ಯಾಗಿ, ಲೋಕೋತ್ತರ ಸೌಂದರ್ಯವುಳ್ಳವಳೆನಿಸಿಕೊಂಡ ಆ ಸೀತೆಯು ಹೀಗೆ ನೆಲದ ಮೇಲೆ ಮಲಗುವುದೆಂದರೇನು! ಹಾ! ಇದೇ ನನ್ನ ಅಣ್ಣನು ಮಲಗಿದ್ದ ಹಾಸಿಗೆಯು! ಇದೆಲ್ಲವೂ ಕದಲಿರುವುದಲ್ಲವೆ? ಈ ಕಠಿನವಾದ ನೆಲದಲ್ಲಿ ಆತನು ಕಷ್ಟದಿಂದ ಮಲಗಿ ತನ್ನ ಮೈಯನ್ನು ಹೊರಳಿಸಿದುದರಿಂದ ಈ ಹುಲ್ಲೆಲ್ಲವೂ ಕಂದಿರುವುದು! ಸೀತೆಯು ತಾನು ಧರಿಸಿದ ಆಭರಣಗಳೊಡನೆಯೇ ಈ ಹಾಸಿಗೆಯಲ್ಲಿ ಮಲಗಿದ್ದಂತೆ ತೋರುತ್ತಿದೆ. ಇದೋ ಅಲ್ಲಲ್ಲಿ ಚಿನ್ನದ ಪುಡಿಗಳು ಉದಿರಿರುವುವು. ಇದೋ! ಇಲ್ಲಿ ಸೀತೆಯು ತನ್ನ ಮೇಲುಹೊದ್ದಿಕೆಯನ್ನು ತೆಗೆದಿಟ್ಟಿದ್ದಳೆಂದು ತೋರುವುದು. ಪಟ್ಟೆಯ ನೂಲುಗಳೆಲ್ಲವೂ ಅಲ್ಲಲ್ಲಿ ತಗುಲಿ ಕೊಂಡಿರುವುವು. ಆ ಸೀತೆಯು ಎಲ್ಲಿ ಮಲಗಿದ್ದರೇನು? ಆಕೆಯು ಬಹು ಸುಕುಮಾರಾಂಗಿಯಾಗಿ ಎಳಪ್ರಾಯದವಳಾಗಿದ್ದರೂ ಈ ಕಠಿನವಾದ ನೆಲದ ಮೇಲೆ ಮಲಗಿದಾಗಲೂ ದುಃಖವನ್ನು ಕಾಣದಿರುವಳಲ್ಲ! ಇದರಿಂದ ಪತಿವ್ರತಾ

ಸ್ತ್ರೀಯರಿಗೆ ಪತಿಸಾನ್ನಿಧ್ಯವೆಂಬುದು ಎಷ್ಟೇ ಕಷ್ಟದಲ್ಲಿಯೂ ಸುಖಕರವಾಗಿಯೇ ತೋರುವುದೆಂದೆಣಿಸುವೆನು! ಅಯ್ಯೋ! ರಾಮನು ಸೀತೆಯೊಡನೆ ಕೂಡಿ ದಿಕ್ಕಿಲ್ಲದವನಂತೆ ಹೀಗೆ ಕಠಿನವಾದ ನೆಲದ ಮೇಲೆ ಮಲಗಿ, ನನಗಾಗಿ ಈ ಕಷ್ಟವನ್ನನುಭವಿಸಬೇಕಾಯಿತಲ್ಲಾ! ನನಗಿಂತಲೂ ಪರಮಘಾತುಕನಾದವನು ಲೋಕದಲ್ಲಿ ಬೇರೊಬ್ಬನೂ ಇಲ್ಲವು! ಚಕ್ರವರ್ತಿ ಕುಲದಲ್ಲಿ ಹುಟ್ಟಿ, ಸಮಸ್ತಜನಗಳಿಗೂ ಹಿತವನ್ನೇ ಕೋರುತ್ತಿರುವ ಆ ರಾಮನಿಗೂ ಈ ಅವಸ್ಥೆಯುಂಟಾಯಿತೆ! ಕನ್ನೈದಿಲೆಯಂತೆ ಶ್ಯಾಮಲವರ್ಣನಾಗಿ, ಕಮಲದಂತೆ ಕೆಂಪಾದ ಕಣ್ಣುಳ್ಳವನಾಗಿ ಪ್ರಿಯದರ್ಶನನಾಗಿರುವ ಆ ರಾಮನು ಜನ್ಮದಲ್ಲಿಯಾಗಲಿ, ಗುಣಗಳಲ್ಲಿಯಾಗಲಿ ಶರೀರ ಲಕ್ಷಣಗಳಲ್ಲಿಯಾಗಲಿ, ಯಾವ ಭಾಗದಲ್ಲಿ ನೋಡಿದರೂ ರಾಜ್ಯಾರ್ಹನಾಗಿ ಸುಖವನ್ನನುಭವಿಸುವುದಕ್ಕರ್ಹನೇ ಹೊರತು, ಎಷ್ಟು ಮಾತ್ರವಾದರೂ ಇಂತಹ ದುಃಖಗಳನ್ನನುಭವಿಸುವುದಕ್ಕೆ ತಕ್ಕವನಲ್ಲ. ಆತನು ಈಗ ಸುಖಾರ್ಹನಾದ ಮತ್ತು ಎಣೆಯಿಲ್ಲದ ಅಂತಹ ರಾಜ್ಯವನ್ನು ಬಿಟ್ಟು ನೆಲದ ಮೇಲೆ ಹೇಗೆ ಮಲಗಬಲ್ಲನು? ಮಹಾಭಾಗನಾದ ಲಕ್ಷ್ಮಣನು ಕಷ್ಟಕಾಲದಲ್ಲಿಯೂ ಬಿಡದೆ ಅಣ್ಣನಾದ ರಾಮನನ್ನು ಅನುವರ್ತಿಸಿರುವನಲ್ಲವೆ? ಆತನೇ ಧನ್ಯನು! ಕಾಡಿನಲ್ಲಿಯೂ ತನ್ನ ಪತಿಸೇವೆಯನ್ನು ಬಿಡದೆ ಆತನನ್ನು ಅನುಸರಿಸಿ ಹೋದ ಸೀತೆಯೇ ಕೃತಾರ್ಥಳು. ಇನ್ನು ನಮ್ಮ ಬಾಳೇಕೆ? ಆ ಮಹಾತ್ಮನನ್ನು ಬಿಟ್ಟು ನಾವೆಲ್ಲರೂ ಹೊರಗಾಗಿರುವುದರಿಂದ, ಆತನು ನಮ್ಮ ಮಾತನ್ನೇ ಆದರಿಸುವನೋ ಇಲ್ಲವೋ ಎಂದು ಸಂದೇಹಿಸಬೇಕಾಗಿದೆ. ಅಂತಹ ಪ್ರಧಾನ ಪುರುಷನಿಲ್ಲದಮೇಲೆ ಈ ನಮ್ಮ ರಾಜ್ಯವೆಲ್ಲವೂ ಕೇವಲ ಶೂನ್ಯಪ್ರದೇಶದಂತೆಯೇ ನನಗೆ ತೋರಿರುವುದು. ದಶರಥನೂ ಮೃತನಾಗಿ, ರಾಮನು ಕಾಡಿಗೆ ಹೋಗಿರುವುದರಿಂದ ಈ ರಾಜ್ಯವು ಅನಾಯಕವಾಗಿದ್ದರೂ ಮತ್ತೊಬ್ಬರು ಇದಕ್ಕೆ ಆಶೆಪಟ್ಟು ಬರಲಾರರೆಂದೇ ಎಣಿಸುವೆನು. ಆ ರಾಮನು ಕಾಡಿನಲ್ಲಿದ್ದರೂ, ಆತನ ಬಾಹುವೀರ್ಯದಿಂದಲೇ ಈ ರಾಜ್ಯವು ಸುರಕ್ಷಿತವಾಗಿರಬೇಕೇ ಹೊರತು ಬೇರೆಯಲ್ಲ. ಈಗ ನಮ್ಮ ಅಯೋಧ್ಯೆಯಾದರೋ, ಮೊದಲಿನಂತೆ ಸಮರ್ಥರಾದ ಹೊರಗಾವಲಿನವರೂ ಇಲ್ಲದೆ ಒಳಗಾವಲೂ ಇಲ್ಲದೆ ತೆರೆದ ಬಾಗಿಲಾಗಿರುವುದು. ಅದರಲ್ಲಿ ಆನೆ ಕುದುರೆಗಳನ್ನು ಆಯಾ ಸ್ಥಾನಗಳಲ್ಲಿ ಕಟ್ಟಿಡುವವರೂ ಇಲ್ಲವು. ಅಲ್ಲಿನ ಸೈನ್ಯಗಳಿಗೂ ಸ್ವಲ್ಪವಾದರೂ ಹರ್ಷವಿಲ್ಲ. ತಕ್ಕ ಪಾಲಕರೂ ಇಲ್ಲದೆ

ಅನಾಯಕವಾಗಿ ಕೇವಲ ದುರ್ದಶೆಯಿಂದಿರುವುದು. ಅಲ್ಲಿ ನಗರರಕ್ಷಣೆಗೆ ಬೇಕಾದ ಸಾಧನಗಳೂ ತಪ್ಪಿಹೋಗಿರುವುವು. ಅದಕ್ಕೆ ಸುತ್ತುಗಾವಲೂ ಇಲ್ಲದಿರುವುದು. ಈ ಸ್ಥಿತಿಯಲ್ಲಿದ್ದರೂ ರಾಮಭಯದಿಂದ ಶತ್ರುರಾಜರು ಅದಕ್ಕೆ ಆಸೆಪಡದಿರುವರು. ವಿಷಮಿಶ್ರವಾದ ಭಕ್ಷಣಗಳನ್ನು ಕಂಡರೆ ಹೇಗೋ ಹಾಗೆ ಹೆದರಿ ಹಿಂಜರಿಯುವರು. ಅದು ಹೇಗಾದರೂ ಹೋಗಲಿ! ಇದು ಮೊದಲುಗೊಂಡು ನಾನೂ ರಾಮನ ಮಾರ್ಗವನ್ನೇ ಅವಲಂಬಿಸುವೆನು. ಬರೀ ನೆಲದ ಮೇಲೆಯೋ ಅಥವಾ ಹುಲ್ಲಿನ ಮೇಲೆಯೋ ಮಲಗುವೆನು. ಗೆಡ್ಡೆಗಳನ್ನೂ ತಿಂದು ಕಾಲವನ್ನು ಕಳೆಯುವೆನು. ಜಡೆಯನ್ನು ಕಟ್ಟಿ ನಾರುಮಡಿಯನ್ನುಡುವೆನು. ಇದುವರೆಗೆ ಕಳೆದುಹೋದುದು ಹೋಗಲಿ! ಇನ್ನು ಮುಂದೆ ರಾಮನು ಕಾಡಿನಲ್ಲಿರಬೇಕಾದ ಕಾಲವನ್ನು, ಆತನಿಗೆ ಪ್ರತಿಯಾಗಿ ನಾನೇ ಕಾಡಿನಲ್ಲಿ ಸುಖವಾಗಿದ್ದು ಕಳೆಯುವೆನು. ಹೀಗೆ ಮಾಡುವುದರಿಂದ ರಾಮನ ಪ್ರತಿಜ್ಞೆಗೂ ಭಂಗವುಂಟಾಗುವುದಿಲ್ಲ. ನಾನು ಕಾಡಿನಲ್ಲಿರುವಾಗ ನನ್ನ ಸಹಾಯಕ್ಕಾಗಿ ಶತ್ರುಘ್ನನು ನನ್ನ ಸಂಗಡ ಬರುವನು. ಲಕ್ಷ್ಮಣನೊಡನೆ ರಾಮನೇ ಅಯೋಧ್ಯೆಯನ್ನು ಪಾಲಿಸುತ್ತಿರಲಿ! ಅಯೋಧ್ಯೆಯಲ್ಲಿ ಬ್ರಾಹ್ಮಣರೆಲ್ಲರೂ ರಾಮನಿಗೆ ಅಭಿಷೇಕವನ್ನು ನಡೆಸಬೇಕೆಂದು ಎಷ್ಟೋ ಕುತೂಹಲವುಳ್ಳವರಾಗಿರುವರು. ಅವರೆಲ್ಲರೂ ಅಭಿಷೇಕವನ್ನು ನಡೆಸಲಿ! ದೇವತೆಗಳು ನನ್ನಲ್ಲಿ ಪ್ರಸನ್ನರಾಗಿ ಈ ನನ್ನ ಕೋರಿಕೆಯನ್ನು ಸಲ್ಲಿಸಿಕೊಡುವರೆ? ಆ ಭಾಗ್ಯವು ನನಗೆ ಲಭಿಸುವುದೆ! ಅದರ ಚಿಂತೆಯು ಹಾಗಿರಲಿ! ನಾನಾದರೋ ಈಗ ರಾಮನ ಬಳಿಗೆ ಹೋಗಿ, ಆತನಿಗೆ ಸಾಷ್ಟಾಂಗ ಪ್ರಣಾಮವನ್ನು ಮಾಡಿ, ಆತನನ್ನು ಅನೇಕ ವಿಧದಲ್ಲಿ ಪ್ರಾರ್ಥಿಸಿ ಪ್ರಸನ್ನವಾಗುವಂತೆ ಮಾಡುವೆನು. ಹಾಗಿದ್ದರೂ ಆತನು ನನ್ನಲ್ಲಿ ಅನುಗ್ರಹವನ್ನು ತೋರಿಸದಿದ್ದರೆ, ಆತನು ಕಾಡಿನಲ್ಲಿರುವವರೆಗೂ ನಾನೂ ಆತನನ್ನೇ ಅನುವರ್ತಿಸುತ್ತ ಕಾಡಿನಲ್ಲಿಯೇ ಇದ್ದುಬಿಡುವೆನು. ಆತನಿಗೆ ನಾನು ಒಡಹುಟ್ಟಿದ ತಮ್ಮನು ಮಾತ್ರವೇ ಅಲ್ಲ! ದಾಸಭೂತನಾಗಿಯೂ ಇರುವೆನು. ಹೀಗಿರುವ ನನ್ನನ್ನು ಆತನು ಎಂದಿಗೂ ಉಪೇಕ್ಷಿಸಲಾರನು" ಎಂದನು.

ಇದು ಎಂಬತ್ತೆಂಟನೆಯ ಸರ್ಗವು.

ಭರತನು ಗಂಗೆಯನ್ನು ದಾಟಿ ಭರದ್ವಾಜಾಶ್ರಮಕ್ಕೆ ಹೋದುದು.

ರಘುವಂಶಶ್ರೇಷ್ಠನಾದ ಭರತನು, ರಾತ್ರಿಯೆಲ್ಲವೂ ಆ ಗಂಗಾತೀರದಲ್ಲಿಯೇ ಇದ್ದು, ಬೆಳಗಾದಮೇಲೆ ಎದ್ದು ಶತ್ರುಘ್ನನನ್ನು ನೋಡಿ, "ವತ್ಸ ಶತ್ರುಘ್ನನೆ! ಏಳು! ಮಲಗಿರುವೆಯಾ? ನಾವು ಹೊರಡಬೇಡವೆ? ಈಗಲೇ ಎದ್ದು ಹೋಗಿ ನಿಷಾದಾಧಿಪತಿಯಾದ ಗುಹನನ್ನು ಕರೆದುಕೊಂಡು ಬಾ! ನಿನಗೆ ಶುಭವಾಗಲಿ. ಈ ಗಂಗಾನದಿಯನ್ನು ದಾಟುವುದಕ್ಕೆ ಅವನು ಸಹಾಯ ಮಾಡುವನು" ಎಂದನು. ಹೀಗೆ ಭರತನು ತ್ವರೆಪಡಿಸುತ್ತಿರಲು ಅದನ್ನು ಕೇಳಿ ಶತ್ರುಘ್ನನು "ಅಣ್ಣಾ! ನಾನೂ [1]ಆರ್ಯನಾದ ಆ ರಾಮನನ್ನೇ ನೆನೆಸಿಕೊಂಡು ಎಚ್ಚರವಾಗಿಯೇ ಇರುವೆನು. ನಾನು ನಿದ್ರೆಮಾಡುತ್ತಿರುವೆನೆಂದೆಣಿಸಬೇಡ!" ಎಂದನು. ಪುರುಷಶ್ರೇಷ್ಠರಾದ ಅಣ್ಣತಮ್ಮಂದಿರಿಬ್ಬರೂ ಪರಸ್ಪರಸಲ್ಲಾಪ ಮಾಡುತ್ತಿರುವಷ್ಟರಲ್ಲಿಯೇ ಗುಹನು ಭರತನನ್ನು ನೋಡುವುದಕ್ಕೆ ತಕ್ಕ ಸಮಯವನ್ನು ತಿಳಿದು ತಾನಾಗಿಯೇ ಒಳಗೆ ಹೋಗಿ ಆತನಿಗೆ ಕೈಮುಗಿದು "ಎಲೈ ಕಕುತ್ಸ್ಥವಂಶಶಿಖಾಮಣಿಯೆ! ರಾತ್ರಿಯಲ್ಲಿ ನಿನಗೆ ಈ ನದೀತೀರದಲ್ಲಿ ಸುಖನಿದ್ರೆಯುಂಟಾಯಿತೆ? ನಿನಗೂ ನಿನ್ನ ಸೈನ್ಯಗಳಿಗೂ ಯಾವುದೊಂದು ಪದ್ರವವೂ ಉಂಟಾಗಲಿಲ್ಲವಷ್ಟೆ" ಎಂದನು. ಅದಕ್ಕಾ ಭರತನು "ಎಲೈ ಗುಹನೆ! ನಮಗೆ ರಾತ್ರಿಯಲ್ಲಿ ಸುಖವಾಗಿಯೇ ನಿದ್ರೆಯು ಬಂದಿತು. ನಿನ್ನ ಸತ್ಕಾರಗಳೆಲ್ಲವೂ ಲೋಪವಿಲ್ಲದೆ ನಮಗೆ ಸೇರಿದುವು. ಈಗ ನಿನ್ನಿಂದ ನಡೆಯಬೇಕಾದ ಮತ್ತೊಂದುಪಕಾರವುಂಟು. ನಿನ್ನ ಕಡೆಯ ಬಲೆಗಾರರನ್ನು ಕಳುಹಿಸಿ ನಮ್ಮನ್ನು ದೋಣಿಯಿಂದ ಈ ಗಂಗಾನದಿಯನ್ನು ದಾಟಿಸಿಬಿಡು" ಎಂದನು. ಆಗ ಗುಹನು ಭರತನು ಹೇಳಿದ ಮಾತನ್ನು ಕೇಳಿ, ತಾನೇ ಅತ್ಯಾತುರದಿಂದ ತನ್ನ ಪಟ್ಟಣಕ್ಕೆ ಹಿಂತಿರುಗಿಹೋಗಿ ತನ್ನ ಬಂಧುಗಳನ್ನು ನೋಡಿ, "ಎಲೈ ಪ್ರಿಯರೇ! ಏಳಿರಿ ಏಳಿರಿ! ನಿಮಗೆ ಶುಭವಾಗಲಿ! ದೋಣಿಗಳನ್ನು ನಡೆಸಿ

---

[1]ಇದರಿಂದ ಚರಮಪರ್ವನಿಷ್ಠನಾದವನಿಗೆ ಪ್ರಥಮ ಪರ್ವದಲ್ಲಿ ಅಭಿನಿವೇಶವು ತನ್ನ ಶೇಷಿ (ಸ್ವಾಮಿಗೆ) ತೃಪ್ತಿಯನ್ನುಂಟುಮಾಡುವುದಕ್ಕಾಗಿಯೇ ಹೊರತು ಬೇರೆಯಲ್ಲವೆಂದು ಗ್ರಹಿಸಬೇಕು.

ಕೊಂಡು ಬನ್ನಿರಿ! ಭರತಾದಿಗಳನ್ನು ಗಂಗಾನದಿಯ ಆಚೆಯದಡಕ್ಕೆ ಬಿಟ್ಟು ಬರಬೇಕು” ಎಂದನು. ಇದನ್ನು ಕೇಳಿ ಅವರೆಲ್ಲರೂ ರಾಜಾಜ್ಞೆಯನ್ನು ಅತ್ಯಾದರದಿಂದ ಗೌರವಿಸುತ್ತ, ಬೇಗನೆ ಹೊರಟು, ತಮ್ಮ ಪಟ್ಟಣದ ನಾಲ್ಕು ಕಡೆಗಳಲ್ಲಿಯೂ ಇದ್ದ ದೋಣಿಗಳೆಲ್ಲವನ್ನೂ ಸೇರಿಸಿ ಐನೂರು ದೋಣಿಗಳನ್ನು ತರಿಸಿಟ್ಟರು. ಸ್ವಸ್ತಿಕವೆಂಬ ರಾಜಾರ್ಹವಾದ ಬೇರೆ ಕೆಲವು ದೋಣಿಗಳನ್ನೂ ತರಿಸಿಟ್ಟರು. ಇವುಗಳಿಗೆ ನಾಲ್ಕು ಮೂಲೆಗಳಲ್ಲಿಯೂ ಉತ್ತಮವಾದ ಘಂಟೆಗಳು ಕಟ್ಟಲ್ಪಟ್ಟಿದ್ದುವು. ಇವುಗಳ ಸುತ್ತಲೂ ವಿಚಿತ್ರವಾದ ಧ್ವಜಗಳೂ ಕಟ್ಟಲ್ಪಟ್ಟಿದ್ದುವು. ಅಲ್ಲಲ್ಲಿ ಸುವರ್ಣದ ಚಿತ್ರಕೆಲಸಗಳನ್ನು ಮಾಡಿದ್ದರು. ವಾಯುಸಂಚಾರಕ್ಕೆ ಅನುಕೂಲಿಸುವಂತೆಯೂ, ಬಿರುಗಾಳಿಯನ್ನು ತಡೆದಿಡುವುದಕ್ಕೆ ತಕ್ಕಂತೆಯೂ, ಅಲ್ಲಲ್ಲಿ ಗವಾಕ್ಷಗಳು ಮಾಡಲ್ಪಟ್ಟಿದ್ದುವು. ಮತ್ತು ಕಬ್ಬಿಣದ ಕೀಲುಗಳಿಂದ ಬಲವಾಗಿ ನಾಟಲ್ಪಟ್ಟಿದ್ದುವು. ಹೀಗೆ ಸ್ವಸ್ತಿಕಗಳೆಂದು ಕರೆಯಲ್ಪಡುವ ರಾಜಯೋಗ್ಯವಾದ ನಾವೆಗಳಲ್ಲಿ ಉತ್ತಮವಾದುದೊಂದನ್ನು ಆರಿಸಿ, ಗುಹನು ತಾನಾಗಿಯೇ ಹೋಗಿ ಭರತನ ಪ್ರಯಾಣಕ್ಕಾಗಿ ತರಿಸಿಟ್ಟನು. ಅದರ ಕೆಳಭಾಗಕ್ಕೆ ಬಿಳೀಕಂಬಳಿಯನ್ನು ಹಾಸಿದ್ದನು. ಘಂಟಾಧ್ವನಿಯಿಂದ ಕೂಡಿ ಅತಿಮನೋಹರವಾಗಿದ್ದ ಆ ನಾವೆಯನ್ನು ಭರತ ಶತ್ರುಘ್ನರಿಬ್ಬರೂ ಮೊದಲು ಏರಿದರು. ಆಮೇಲೆ ಕ್ರಮವಾಗಿ ವಸಿಷ್ಠನೂ ಆಮೇಲೆ ಗುರುಜನಗಳೂ, ಆಮೇಲೆ ಇತರ ಬ್ರಾಹ್ಮಣರೂ ದೋಣಿಗಳನ್ನೇರಿದರು. ಆಮೇಲೆ ರಾಜಭಾರ್ಯೆಯರಾದ ಕೌಸಲ್ಯೆ, ಸುಮಿತ್ರೆ ಮೊದಲಾದವರೆಲ್ಲರೂ ಒಬ್ಬೊಬ್ಬರಾಗಿ ಅದೇ ದೋಣಿಯನ್ನೇರಿ ಕುಳಿತರು. ಆಮೇಲೆ ಬಂಡಿಗಳೂ, ಸಾಮಾನುಗಳೂ ಏರಿಸಲ್ಪಟ್ಟುವು. ಈ ಪ್ರಯಾಣ ಸಂಭ್ರಮದಲ್ಲಿ ಸೈನಿಕರೆಲ್ಲರೂ ತಾವು ಇಳಿದಿದ್ದ [1]ಬಿಡಾರಗಳಿಗೆ ಬೆಂಕಿಯಿಟ್ಟು ಆತುರದಿಂದ ಓಡಿಬರುವಾಗಲೂ, ನಾನು ತಾನೆಂದು ಸ್ಪರ್ಧೆಯಿಂದ ನೀರಿನಲ್ಲಿಳಿದು ದೋಣಿಯನ್ನೇರುವಾಗಲೂ, ನನ್ನದು ತನ್ನದೆಂದು ತಮ್ಮ ತಮ್ಮ ಪದಾರ್ಥಗಳನ್ನು ಸಂಗ್ರಹಿಸಿ ಕಟ್ಟುಡುವಾಗಲೂ, ಅವರಲ್ಲಿ ಉಂಟಾದ ಕೋಲಾಹಲವು ಗಗನಸ್ಥಳವೆಲ್ಲವನ್ನೂ ವ್ಯಾಪಿಸಿತು. ಚಾಪೆಕಟ್ಟಲ್ಪಟ್ಟ ಆ ನಾವೆ

---

[1]ರಾಜಭಟರು ತಾವು ಮೊದಲಿದ್ದ ಸ್ಥಳವನ್ನು ಬಿಟ್ಟು ಬೇರೊಂದುಕಡೆಗೆ ಹೋಗುವಾಗ, ತಮ್ಮ ಬಿಡಾರದಲ್ಲಿ ಬೆಂಕಿಯಿಟ್ಟುಹೋಗುವುದುಂಟು. ಜಯಲಕ್ಷ್ಮೀಸಮಾಗಮಾರ್ಥವಾಗಿ ಹೀಗೆ ಮಾಡುವ ವಾಡಿಕೆಯು.

ಗಳೆಲ್ಲವೂ ಸಮರ್ಥರಾದ ಬೆಸ್ತರಿಂದ ನಡೆಸಲ್ಪಡುತ್ತ ಅಷ್ಟು ಜನಸಮೂಹವನ್ನೂ ಸಾಗಿಸಿಕೊಂಡು ಬಹುಬೇಗನೆ ಮುಂದುವರಿಯುತ್ತಿದ್ದುವು. ಹೀಗೆ ಸಾಗಿಬರುತಿದ್ದ ನಾವೆಗಳಲ್ಲಿ ಕೇವಲ ಸ್ತ್ರೀಸಮೂಹದಿಂದಲೇ ತುಂಬಿದ ನಾವೆಗಳು ಕೆಲವು, ಸೈನ್ಯಾಶ್ವಗಳಿಂದ ತುಂಬಿದುವು ಕೆಲವು, ರಥಗಳಿಂದಲೂ, ರಥದಕುದುರೆಗಳಿಂದಲೂ ಎತ್ತುಗಳಿಂದಲೂ ತುಂಬಿದ ನಾವೆಗಳು ಕೆಲವು, ಧನರಾಶಿಯಿಂದ ತುಂಬಿದುವು ಕೆಲವು, ಹೀಗೆ ಬೇರೆಬೇರೆಯಾಗಿ ಸಾಲಾಗಿ ಹೊರಟು ಆಚೆಯ ದಡವನ್ನು ನಿಮಿಷಮಾತ್ರದಲ್ಲಿ ಮುಟ್ಟಿದುವು. ಅಲ್ಲಿ ಹೊರೆಗಳನ್ನಿಳಿಸಿ, ಏರಿದ್ದ ಜನರೆಲ್ಲರೂ ಇಳಿದಮೇಲೆ, ಅದನ್ನು ನಡೆಸುತ್ತಿದ್ದ ನಾವಿಕರೆಲ್ಲರೂ ತಮ್ಮ ತಮ್ಮ ದೋಣಿಗಳನ್ನು ನಡುನೀರಿಗೆ ತಂದು, ತಮ್ಮ ತಮ್ಮ ಚಾತುರ್ಯಕ್ಕೆ ತಕ್ಕಂತೆ ಅವುಗಳನ್ನು ವಿಚಿತ್ರಗತಿಯಿಂದ ನಡೆಸುತ್ತ ಸ್ವಲ್ಪಹೊತ್ತಿನವರೆಗೆ ವಿನೋದಿಸುತ್ತಿದ್ದರು. [1]ಮೇಲುಮನೆಗಳಂತಿರುವ ಅಂಬಾರಿಗಳಿಂದ ಶೋಭಿಸುತ್ತಿದ್ದ ಆನೆಗಳೆಲ್ಲವೂ ಮಾವಟಿಗರಿಂದ ಪ್ರೇರಿಸಲ್ಪಟ್ಟು ತಾವಾಗಿಯೇ ಆ ಗಂಗಾನದಿಯನ್ನು ದಾಟಿ ಬರುತ್ತ, ಸಂಚರಿಸುತ್ತಿರುವ ಬೆಟ್ಟಗಳಂತೆ ಕಾಣುತ್ತಿದ್ದುವು. ಕೆಲವರು ನಾವೆಗಳನ್ನೂ, ಕೆಲವರು ಸಣ್ಣತೆಪ್ಪಗಳನ್ನೂ, ಕೆಲವರು ದೋಣಿಗಳನ್ನೂ ಏರಿ, ಆ ನದಿಯನ್ನು ದಾಟಿಹೋದರು. ವಿಶೇಷವಾದ ಬಾಹುಬಲವುಳ್ಳ ಮತ್ತೆ ಕೆಲವರು ತೋಳುಗಳಿಂದಲೇ ಈಜಿಹೋದರು. ಕೆಲವರು ಕೊಡಗಳನ್ನಪ್ಪಿಕೊಂಡು ಅದರ ಸಹಾಯದಿಂದ ದಾಟಿದರು. ಗಂಗಾಸ್ನಾನದಿಂದ ಪರಿಶುದ್ಧವಾದ ಆ ಸಮಸ್ತ ಸೈನ್ಯವೂ ಪ್ರಾಯಕವಾಗಿ ನಾವಿಕರಿಂದಲೇ ಸಾಗಿಸಲ್ಪಟ್ಟಿತು.

---

1 "ಸವೈಜಯನ್ತಾಸ್ತುಗಜಾಃ" ಎಂದು ಮೂಲವು. ರಾಜರು ಆನೆಯಮೇಲೆ ಮನೆಗಳಂತಿರುವ ಅಂಬಾರಿಗಳನ್ನು ಏರಿಸಿ, ಅದರಮೇಲೇರಿ ಹೊರಡುವುದುಂಟು. ಆದುದರಿಂದಲೇ "ಸವೈಜಯಂತ"ವೆಂದರೆ ಗೃಹಗಳೊಡನೆ ಕೂಡಿದ ಆನೆಗಳೆಂದು ಅರ್ಥವು ಬರೆಯಲ್ಪಟ್ಟಿರುವುದು. ಇದಕ್ಕನುಸಾರವಾಗಿ "ಸಧ್ವಜಾ ಇವ ಪರ್ವತಾಃ" ಎಂಬ ದೃಷ್ಟಾಂತ ವಾಕ್ಯದಲ್ಲಿಯೂ "ಸಧ್ವಜಾಃ" ಎಂಬುದಕ್ಕೆ "ಧ್ವಜಗತೌ" ಎಂಬ ವ್ಯುತ್ಪತ್ತಿಯಿಂದ ಗತಿವಿಶಿಷ್ಟವಾದ ಜಂಗಮಪರ್ವತಗಳೆಂದೂ ಅರ್ಥಮಾಡಲ್ಪಟ್ಟಿದೆ. ಅಥವಾ ಇಲ್ಲಿ ಧ್ವಜವಿಶಿಷ್ಟವಾದ ಆನೆಗಳು ಧ್ವಜವೇರಿಸಲ್ಪಟ್ಟ ಬೆಟ್ಟಗಳಂತೆ ಕಾಣುತ್ತ ನದಿಯನ್ನು ದಾಟಿದುವೆಂದೂ ಅರ್ಥವನ್ನು ಹೇಳಬಹುದು.

*

ಗಂಗೆಯನ್ನು ದಾಟಿದಮೇಲೆ [1]ಮೈತ್ರಮುಹೂರ್ತಕ್ಕೆ ಸರಿಯಾಗಿ ಎಲ್ಲರೂ ಪ್ರಯಾಗವನವನ್ನು ಸೇರಿದ್ದರು. ಅಲ್ಲಿ ಮಹಾತ್ಮನಾದ ಭರತನು ತನ್ನ ಸಮಸ್ತ ಸೈನ್ಯವನ್ನೂ ಸಮಾಧಾನಗೊಳಿಸಿ, ಅವರವರಿಗೆ ಅನುಕೂಲವಾದ ಸ್ಥಳಗಳನ್ನು ಕಲ್ಪಿಸಿಕೊಟ್ಟು, ಋಷಿಶ್ರೇಷ್ಠನಾದ ಭರದ್ವಾಜನನ್ನು ದರ್ಶನಮಾಡುವುದಕ್ಕಾಗಿ, ಋತ್ವಿಕ್ಪುರೋಹಿತರೊಡಗೂಡಿ ಆ ಆಶ್ರಮದ ಕಡೆಗೆ ಹೊರಟನು. ಸಮಸ್ತ ವೇದಗಳನ್ನು ಬಲ್ಲವನಾಗಿಯೂ, ಉತ್ತಮ ಸ್ವಭಾವವುಳ್ಳವನಾಗಿಯೂ, ಬೃಹಸ್ಪತಿಪುತ್ರನಾದುದರಿಂದ ದೇವತೆಗಳಿಗೆ ಪುರೋಹಿತನಾಗಿಯೂ, ಬ್ರಾಹ್ಮಣೋತ್ತಮನಾಗಿಯೂ ಇದ್ದ ಆ ಭರದ್ವಾಜಮಹರ್ಷಿಯ ಆಶ್ರಮದ ಸಮೀಪಕ್ಕೆ ಬಂದು, ಅಲ್ಲಿ ಅತಿಮನೋಹರವಾದ ವೃಕ್ಷಸಮೂಹಗಳಿಂದಲೂ, ಅನೇಕ ಪರ್ಣಶಾಲೆಗಳಿಂದಲೂ ಕೂಡಿದ ಒಂದು ಮಹಾವನವನ್ನು ಕಂಡನು.

ಇದು ಎಂಬತ್ತೊಂಬತ್ತನೆಯ ಸರ್ಗವು.

ಭರತನು ಭರದ್ವಾಜಮಹರ್ಷಿಯನ್ನು ದರ್ಶನಮಾಡಿದುದು.
ಪರಸ್ಪರ ಕುಶಲ ಪ್ರಶ್ನೆಗಳು.

ಪುರುಷಶ್ರೇಷ್ಠನಾಗಿಯೂ, ಧರ್ಮಜ್ಞನಾಗಿಯೂ ಇರುವ ಆ ಭರತನು, ಇನ್ನೂ ಒಂದು ಹರದಾರಿಯ ದೂರವಿರುವಾಗಲೇ ಭರದ್ವಾಜಾಶ್ರಮವನ್ನು ಕಂಡು, ಅಲ್ಲಿಯೇ ತನ್ನ ಸೈನ್ಯವನ್ನು ನಿಲ್ಲಿಸಿಬಿಟ್ಟು, ಮಂತ್ರಿಗಳನ್ನು ಮಾತ್ರ ತನ್ನೊಡನೆ ಕರೆದುಕೊಂಡು, ಶಸ್ತ್ರಗಳೇ ಮೊದಲಾದ ತನ್ನ ಕ್ಷತ್ರಿಯ ವೇಷ

---

[1]ಹಗಲಿನ ಹದಿನೈದು ಭಾಗಗಳಲ್ಲಿ ಮೂರನೆಯ ಭಾಗವಾದ ಎರಡು ಗಳಿಗೆಗಳಿಗೆ ಮೈತ್ರ ಮುಹೂರ್ತವೆಂದು ಹೆಸರು. ಮುಹೂರ್ತವೆಂದರೆ ಎರಡು ಗಳಿಗೆಯ ಕಾಲವು. “ರೌದ್ರಸ್ಸಾರ್ಪಸ್ತಥಾ ಮೈತ್ರಃ ಪೈತ್ರೋವಾಸವ ಏವ ಚ । ಆಪ್ಯೋವೈಶ್ವಸ್ತಥಾ ಬ್ರಾಹ್ಮಃ ಪ್ರಾಜೇಶೈಂದ್ರಾಸ್ತಥೈವಚ ॥ ಐಂದ್ರಾಗ್ನೋ ನೈಋತಶ್ಚೈವ ವಾರುಣಾರ್ಯಮಣಾಭಗೀ ॥ ಏತೇತ್ರ ಕ್ರಮಶೋ ಜ್ಞೇಯಾ ಮುಹೂರ್ತಾ ದಶಪಂಚ ಚ” ಎಂದು ಹದಿನೈದು ಮುಹೂರ್ತಗಳಿಗೂ ಬೇರೆ ಬೇರೆ ಹೆಸರುಂಟು.

ಗಳೆಲ್ಲವನ್ನೂ ತೆಗೆದುಹಾಕಿ, ಎರಡು [1]ಪಟ್ಟೆಮಡಿಗಳನ್ನು ಮಾತ್ರವೇ ಧರಿಸಿ, ಪುರೋಹಿತನಾದ ವಸಿಷ್ಠನನ್ನು ಮುಂದಿಟ್ಟುಕೊಂಡು ಋಷಿಯ ದರ್ಶನಾರ್ಥವಾಗಿ ಆಶ್ರಮದ ಕಡೆಗೆ ಕಾಲುನಡೆಯಿಂದಲೇ ಹೊರಟನು. ಹೀಗೆ ಮುಂದೆ ಮುಂದೆ ಹೋಗುತ್ತ ದೂರದಿಂದಲೇ ಭರದ್ವಾಜ ಮಹರ್ಷಿಯನ್ನು ಕಂಡು, ತನ್ನ ಮಂತ್ರಿಗಳನ್ನೂ ಅಲ್ಲಿಯೇ ನಿಲ್ಲಿಸಿಬಿಟ್ಟು, ತಾನು ಮಾತ್ರ ಪುರೋಹಿತನಾದ ವಸಿಷ್ಠನನ್ನು ಹಿಂಬಾಲಿಸಿ ಹೋದನು. ಭರದ್ವಾಜಮಹರ್ಷಿಯು ವಸಿಷ್ಠನು ಬರುತ್ತಿರುವುದನ್ನು ನೋಡಿದೊಡನೆಯೇ ಸಂಭ್ರಮದಿಂದ ತಟ್ಟನೆ, ಆಸನವನ್ನು ಬಿಟ್ಟು ಎದ್ದು, ಶಿಷ್ಯರನ್ನು ನೋಡಿ "ಅರ್ಘ್ಯವೆಲ್ಲಿ? ಅರ್ಘ್ಯವೆಲ್ಲಿ?" ಎಂದು ಅತ್ಯಾತುರದಿಂದ ತ್ವರೆಪಡಿಸಿದನು. ಆಮೇಲೆ ವಸಿಷ್ಠನ ಬಳಿಗೆ ಬಂದು ಅವನೊಡನೆ ಕಲಿತಿರುವಾಗ [2]ಭರತನು ಆ ಮಹರ್ಷಿಗೆ ಸಾಷ್ಟಾಂಗ ಪ್ರಣಾಮವನ್ನು ಮಾಡಿದನು. ಆಗ ಭರದ್ವಾಜನು ತನ್ನ ಜ್ಞಾನದೃಷ್ಟಿಯಿಂದಲೂ ವಸಿಷ್ಠನ ಸಾಹಚರ್ಯದಿಂದಲೂ ಆ ರಾಜಕುಮಾರನು ದಶರಥನ ಪುತ್ರನೆಂಬುದನ್ನು ತಿಳಿದು, ವಸಿಷ್ಠನಿಗೂ ಭರತನಿಗೂ ಕ್ರಮವಾಗಿ ಅರ್ಘ್ಯಪಾದ್ಯಾದಿ ಸತ್ಕಾರಗಳನ್ನು ನಡೆಸಿ, ಆಹಾರಾರ್ಥವಾಗಿ ಫಲಮೂಲಗಳನ್ನು ತಂದಿಟ್ಟು ಕ್ಷೇಮಲಾಭಗಳನ್ನು ವಿಚಾರಿಸತೊಡಗಿ, "ಎಲೈ ರಾಜಪುತ್ರನೆ? ಮನೆಯಲ್ಲಿ ಎಲ್ಲರೂ ಕ್ಷೇಮದಿಂದಿರುವರೆ?" ಎಂದು ಮೊದಲು ಕುಶಲಪ್ರಶ್ನೆಯನ್ನು ಮಾಡಿ, ಆಮೇಲೆ ಕ್ರಮವಾಗಿ ಅಯೋಧ್ಯೆಯ ಕ್ಷೇಮವನ್ನೂ, ಮಂತ್ರಿಗಳು, ಮಿತ್ರರು, ಬಂಡಾರಗಳು, ಇವೇ ಮೊದಲಾದ ರಾಜ್ಯಾಂಗಗಳ ಕ್ಷೇಮವನ್ನೂ ವಿಚಾರಿಸಿದನು. ಆದರೆ ದಶರಥನು ಮೃತಿ ಹೊಂದಿದನೆಂಬ ಸುದ್ದಿಯನ್ನು ಈ ಮಹರ್ಷಿಯು ಮೊದಲೇ ತನ್ನ ಯೋಗದೃಷ್ಟಿಯಿಂದ ತಿಳಿದವನಾಗಿದ್ದುದರಿಂದ, ಆ ದಶರಥ ರಾಜನ ಸುದ್ದಿಯನ್ನೇ ಎತ್ತದೆ ಬಿಟ್ಟುಬಿಟ್ಟನು.

---

[1]ಮೊದಲೇ ಭರತನು ಜಟಾವಲ್ಕಲಗಳನ್ನುಟ್ಟುದಾಗಿ ಹೇಳಲ್ಪಟ್ಟಿದೆ. ಇಲ್ಲಿ ಪಟ್ಟೆ ಮಡಿಯನ್ನುಟ್ಟುದಾಗಿ ಹೇಳುವುದು ಹೇಗೆಂದು ಶಂಕೆಯುಂಟಾಗಬಹುದು. ಮೊದಲು ನಾರುಮಡಿಯನ್ನುಡುವುದಾಗಿ ಪ್ರತಿಜ್ಞೆಯನ್ನು ಮಾತ್ರವೇ ಮಾಡಿದನೇ ಹೊರತು, ಭರದ್ವಾಜಾಶ್ರಮಕ್ಕೆ ಬಂದ ಮೇಲೆಯೇ ಅದರಂತೆ ಅನುಷ್ಠಿಸಿದುದಾಗಿ ಗ್ರಹಿಸಬೇಕು.

[2]ಸಮಾನ ವಯಸ್ಸುಳ್ಳವನಾದುದರಿಂದ ಇಲ್ಲಿ ವಸಿಷ್ಠನು ನಮಸ್ಕಾರಮಾಡಲಿಲ್ಲವೆಂದು ತಿಳಿಯಬೇಕು.

ಹಾಗೆಯೇ ವಸಿಷ್ಠಭರತರಿಬ್ಬರೂ ಕ್ರಮವಾಗಿ ಆ ಭರದ್ವಾಜಮಹರ್ಷಿಯ [1]ದೇಹಾರೋಗ್ಯವನ್ನೂ ಅಗ್ನಿಹೋತ್ರಗಳ ನಿರ್ವಿಘ್ನ ಪರಿಸಮಾಪ್ತಿಯನ್ನೂ, ಶಿಷ್ಯರ ಕ್ಷೇಮವನ್ನೂ, ಆಶ್ರಮವೃಕ್ಷಗಳ ಬೆಳವಳಿಕೆಯನ್ನೂ, ಆ ಆಶ್ರಮದ ಮೃಗಪಕ್ಷಿಗಳ ಸೌಖ್ಯವನ್ನೂ ವಿಚಾರಿಸಿದರು. ಮಹಾ ತಪಸ್ವಿಯಾದ ಭರದ್ವಾಜನು ಅವರಿಬ್ಬರಿಗೂ ತನ್ನ ಕ್ಷೇಮವನ್ನು ತಿಳಿಸಿದಮೇಲೆ ರಾಮನಲ್ಲಿ ತನಗಿರುವ ಪ್ರೇಮಾತಿಶಯದಿಂದ ಭರತನನ್ನು ನೋಡಿ "ವತ್ಸನೆ! ರಾಜ್ಯಕಾರ್ಯವನ್ನು ನಿರ್ವಹಿಸಬೇಕಾದ ನೀನು ಇಲ್ಲಿಗೇಕೆ ಬಂದೆ? ನೀನು ಆಕಸ್ಮಿಕವಾಗಿ ರಾಜ್ಯವನ್ನು ಬಿಟ್ಟು ಇಲ್ಲಿಗೆ ಬಂದುದನ್ನು ನೋಡಿ ನನ್ನ ಮನಸ್ಸಿಗೆ ಶಂಕೆಯುಂಟಾಗಿರುವುದು! ನಿಜಸ್ಥಿತಿಯನ್ನು ವಿವರವಾಗಿ ತಿಳಿಸು! ಸಮಸ್ತಲೋಕಕ್ಕೂ ಆನಂದವರ್ಧಕನಾಗಿ, ಶತ್ರುಗಳನ್ನು ಹುಟ್ಟಡಗಿಸತಕ್ಕ ಮಹಾವೀರ್ಯವುಳ್ಳ ಯಾವ ಪುತ್ರರತ್ನವನ್ನು ಕೌಸಲ್ಯೆಯು ಪಡೆದಿದ್ದಳೋ ಆ ರಾಮನು ತನ್ನ ಪತ್ನಿಯನ್ನೂ ಸಹೋದರನನ್ನೂ ಕರೆದುಕೊಂಡು ಕಾಡಿಗೆ ಹೊರಟು ಹೋದನು. ತಂದೆಯಾದ ದಶರಥನೇ ತನ್ನ ಹೆಂಡತಿಯ ಮಾತಿಗೆ ಮರುಳಾಗಿ ಮಹಾ ಯಶಸ್ವಿಯಾದ ತನ್ನ ಪುತ್ರನನ್ನು ಹದಿನಾಲ್ಕು ವರ್ಷಗಳವರೆಗೆ ಕಾಡಿನಲ್ಲಿರುವಂತೆ ನಿಯಮಿಸಿ ಕಳುಹಿಸಿಬಿಟ್ಟನು, ಅದು ಹೋಗಲಿ! ಹುಟ್ಟಿದುದು ಮೊದಲು ಪಾಪಕಾರ್ಯವೆಂಬುದನ್ನೇ ಕಂಡರಿಯದ ಮಹಾತ್ಮನಾದ ಆ ರಾಮನಿಗಾಗಲಿ, ಆತನ ತಮ್ಮನಾದ ಲಕ್ಷ್ಮಣನಿಗಾಗಲಿ ಯಾವುದಾದರೂ ಕೇಡನ್ನುಂಟುಮಾಡಬೇಕೆಂದು ಬಯಸಿ ನೀನು ಬಂದವನಲ್ಲವಷ್ಟೆ? ಈಗ ನೀನು ಇಷ್ಟಾತುರದಿಂದ ಸೇನಾಸಮೇತನಾಗಿ ಬಂದಿರುವುದನ್ನು ನೋಡಿದರೆ ರಾಜ್ಯವನ್ನು ನಿಷ್ಕಂಟಕವಾಗಿ ಮಾಡಿಕೊಂಡು ನೀನೊಬ್ಬನೇ ಅನುಭವಿಸಬೇಕೆಂಬ ದುರುದ್ದೇಶದಿಂದ, ಆ ರಾಮಲಕ್ಷ್ಮಣರನ್ನು ಕಾಡಿನಲ್ಲಿಯೂ ಇರಗೊಳಿಸದೆ, ಅವರಿಗೆ ಕೇಡನ್ನು ಬಯಸಿ ಬಂದಿರಬಹುದೆಂದು ನೋಡಿದವರೆಲ್ಲರಿಗೂ ಶಂಕೆಯುಂಟಾಗುವಂತಿದೆಯಲ್ಲವೆ?" ಎಂದನು. ಈ ಕರ್ಣಕಠೋರವಾದ ಮಾತು

---

[1] ಭರದ್ವಾಜನಿಗೆ ಆತನ ದೇಹವೂ, ಅಗ್ನಿಯೂ ತಪಸ್ಸಾಧನಗಳಾಗಿರುವುದರಿಂದಲೂ, ಆ ವನದ ಮೃಗಪಕ್ಷಿಗಳೆಲ್ಲವೂ ಪವಿತ್ರಗಳಾಗಿ ಆತನಿಗೆ ಶಿಷ್ಯರಂತೆ ಉಪಚರಿಸುತ್ತಿರುವುದರಿಂದಲೂ, ವೃಕ್ಷಾದಿಗಳು ಆತನ ದೇಹಧಾರಣೆಗೆ ಸಹಾಯಕಗಳಾಗಿರುವುದರಿಂದಲೂ, ಅವೆಲ್ಲವುಗಳ ಕ್ಷೇಮಲಾಭವನ್ನೂ ವಸಿಷ್ಠಭರತರು ವಿಚಾರಿಸಿದುದಾಗಿ ಗ್ರಹಿಸಬೇಕು.

ಗಳನ್ನು ಕೇಳಿ ಭರತನು ಪರಮದುಃಖಿತನಾಗಿ ಕಣ್ಣೀರುಬಿಡುತ್ತ, ಮಾತುಗಳು ತಡವರಿಸುತ್ತಿರಲು, ಆ ಭರದ್ವಾಜಮಹರ್ಷಿಯನ್ನು ನೋಡಿ, "ಹಾ! ನಾನು ಕೆಟ್ಟೆನು! ಇನ್ನು ನನ್ನ ಬಾಳೇಕೆ? ಸಮಸ್ತಪ್ರಪಂಚವ್ಯಾಪಾರವನ್ನೂ ಧ್ಯಾನ ದೃಷ್ಟಿಯಿಂದಲೇ ಕಂಡುಕೊಳ್ಳುವ ಮಹಾ ಮಹಿಮೆಯುಳ್ಳ ನೀನೂ ನನ್ನನ್ನು ಹೀಗೆಂದೆಣಿಸಬಹುದೆ? ನಾನು ದೋಷಿಯೆಂದು ಸ್ವಲ್ಪಮಟ್ಟಿಗಾದರೂ ಶಂಕಿಸು ವುದಕ್ಕೆ ಅವಕಾಶವಿಲ್ಲ! ನೀನು ನನ್ನನ್ನು ಹೀಗೆ ನಿರಾಕರಿಸಬಾರದು! ನನ್ನ ತಾಯಿಯೇ ಇದಕ್ಕೆಲ್ಲಾ ಮೂಲವು! ಅನರ್ಥ ಕಾರ್ಯಗಳು ನಡೆಯುವಾಗ ನಾನು ಸಮೀಪದಲ್ಲಿದ್ದಿದ್ದರೆ ಇಷ್ಟಕ್ಕೆ ಎಂದಿಗೂ ಅವಕಾಶಕೊಡುತ್ತಿರಲಿಲ್ಲ! ನನ್ನ ತಾಯಿಯು ನನ್ನ ಪ್ರಯೋಜನಕ್ಕಾಗಿಯೇ ಇದನ್ನು ಮಾಡಿದು ದಾಗಿದ್ದರೂ ನಾನು ಇದಕ್ಕೆ ಎಂದಿಗೂ ಒಪ್ಪುತ್ತಿರಲಿಲ್ಲ! ಇದರಿಂದ ನನಗೆ ಸ್ವಲ್ಪವೂ ಸಂತೋಷವಿಲ್ಲ! ಈಗ ನಾನು ಹೊರಟಿರುವುದು, ಆ ರಾಮನನ್ನು ಸಮಾಧಾನಪಡಿಸಿ ಹಿಂತಿರುಗಿಸಿ ಅಯೋಧ್ಯೆಗೆ ಕರೆತರಬೇಕೆಂಬುದಕ್ಕಾಗಿಯೇ ಹೊರತು ಬೇರೆಯಲ್ಲ! ಆತನನ್ನು ಹಿಂತಿರುಗಿಸಿ ಕರೆತಂದು ಅವನ ಪಾದ ಶುಶ್ರೂಷೆಯನ್ನು ಮಾಡುತ್ತಿರಬೇಕೆಂಬುದೇ ನನ್ನ ಉದ್ದೇಶವು. ಈಗ ನಾನು ಹೇಳಿದುದನ್ನು ಸತ್ಯವೆಂದು ನಂಬಿ ನನ್ನಲ್ಲಿ ಪ್ರಸನ್ನನಾಗಿ ಅನುಗ್ರಹಿಸಬೇಕು. ಈಗ ನಮ್ಮ ರಾಮನು ಎಲ್ಲಿರುವನು? ದಯವಿಟ್ಟು ಹೇಳಬೇಕು" ಎಂದನು. ಆಗ ಅಲ್ಲಿದ್ದ ವಸಿಷ್ಠಾದಿ ಋತ್ವಿಕ್ಕುಗಳೆಲ್ಲರೂ ಭರತನಿಗಿರುವ ನಿಜವಾದ ರಾಮ ಭಕ್ತಿಯನ್ನು ತಿಳಿಸಿ ಪ್ರಾರ್ಥಿಸಲು, ಭರದ್ವಾಜಮುನಿಯು ಪ್ರಸನ್ನನಾಗಿ ಭರತನನ್ನು ಕುರಿತು, "ವತ್ಸನೇ! ರಘುವಂಶದಲ್ಲಿ ಹುಟ್ಟಿದ ಪುರುಷಶ್ರೇಷ್ಠನಾದ ನಿನಗೆ ಇದೇ ಯುಕ್ತವು. ಹಿರಿಯರನ್ನು ಅನುವರ್ತಿಸುವುದೂ, ಇಂದ್ರಿಯಗಳ ನ್ನಡಗಿಸಿಡುವುದೂ, ಸಾಧುಗಳ ಮಾರ್ಗವನ್ನನುಸರಿಸಿ ನಡೆಯುವುದೂ ರಘುವಂಶದ ಕುಲಧರ್ಮವು. ನಿನ್ನ ಈ ಸದ್ಗುಣಗಳೆಲ್ಲವೂ ನನಗೆ ಜ್ಞಾನದೃಷ್ಟಿ ಯಿಂದ ಮೊದಲೇ ತಿಳಿದಿದ್ದರೂ, ಅದನ್ನು ಮತ್ತಷ್ಟು ದೃಢಪಡಿಸುವುದಕ್ಕಾಗಿ ಹೀಗೆ ಕೇಳಿದೆನೇ ಹೊರತು ಬೇರೆಯಲ್ಲ! ನಿನ್ನ ಕೀರ್ತಿಯು ಶಾಶ್ವತವಾಗಿ ವೃದ್ಧಿಹೊಂದುತ್ತಿರಬೇಕೆಂಬುದಕ್ಕಾಗಿಯೇ ನಾನು ಹೀಗೆ ಆಕ್ಷೇಪಿಸಿ ನಿನ್ನ ಮಾತಿ ನಿಂದ ದೃಢೀಕರಿಸಿದೆನು. ರಾಮನಿರತಕ್ಕ ಸ್ಥಳವನ್ನು ನಾನು ಬಲ್ಲೆನು. ಈಗ ಆತನು ಸೀತಾಲಕ್ಷ್ಮಣರೊಡನೆ ಚಿತ್ರಕೂಟವೆಂಬ ಮಹಾಪರ್ವತದಲ್ಲಿರುವನು.

ನಾಳೆ ನೀನು ಅಲ್ಲಿಗೆ ಹೊರಡಬಹುದು. ಈ ದಿವಸದಮಟ್ಟಿಗೆ ನೀನು ಮಂತ್ರಿಗಳೊಡನೆ ಇಲ್ಲಿಯೇ ಇದ್ದು, ನಾಳೆ ಮುಂದಕ್ಕೆ ಪ್ರಯಾಣಮಾಡು! ನನ್ನ ಇದೊಂದು ಕೋರಿಕೆಯನ್ನು ನಡೆಸಿಕೊಡು! ನೀನು ಪ್ರಾಜ್ಞನಾದುದರಿಂದ ನಾನು ನಿನಗೆ ವಿಶೇಷವಾಗಿ ಹೇಳಬೇಕಾದುದೊಂದೂ ಇಲ್ಲವು" ಎಂದನು. ಈ ಮಾತನ್ನು ಕೇಳಿ ಉದಾರ ಸ್ವಭಾವುಳ್ಳ ಭರತನು ಆ ಮಹರ್ಷಿಯ ಮಾತನ್ನು ಮೀರಲಾರದೆ, ಹಾಗೆಯೇ ಆಗಲೆಂದೊಪ್ಪಿ, ಆ ರಾತ್ರಿಯನ್ನು ಭರದ್ವಾಜಾಶ್ರಮದಲ್ಲಿಯೇ ಕಳೆಯುವುದಾಗಿ ನಿಶ್ಚಯಿಸಿಕೊಂಡನು.

ಇದು ತೊಂಬತ್ತನೆಯ ಸರ್ಗವು.

ಭರದ್ವಾಜನು ಭರತನಿಗೂ ಅವನ ಸೈನ್ಯಕ್ಕೂ, ಅತಿಥ್ಯವನ್ನು ನಡೆಸಿದುದು.

ಹೀಗೆ ಭರತನು ತನ್ನ ಪರಿವಾರಗಳೊಡಗೂಡಿ ಆ ರಾತ್ರಿಯನ್ನು ಅಲ್ಲಿಯೇ ಕಳೆಯಬೇಕೆಂದು ನಿಶ್ಚಯಿಸಿದಮೇಲೆ, ಆತನನ್ನು ನೋಡಿ ಭರದ್ವಾಜಮುನಿಯು "ವತ್ಸ ಭರತನೆ! ಈ ರಾತ್ರಿಗೆ ನೀನು ಸಪರಿವಾರನಾಗಿ ನಮ್ಮ ಅತಿಥ್ಯವನ್ನು ಸ್ವೀಕರಿಸಬೇಕು" ಎಂದು ಕೇಳಿಕೊಂಡನು. ಅದಕ್ಕಾ ಭರತನು ಋಷಿಯನ್ನು ನೋಡಿ "ಆರ್ಯನೆ! ನೀನು ಮಾಡಬೇಕಾದ ಸತ್ಕಾರಗಳೆಲ್ಲವೂ ಆಗಲೇ ನನಗೆ ಸೇರಿರುವುವಲ್ಲವೆ? ಕಾಡಿನಲ್ಲಿರುವ ನಿಮ್ಮಂತವರು ನಡೆಸಬೇಕಾದ ಅರ್ಘ್ಯಪಾದ್ಯಗಳೇ ಮೊದಲಾದುವುಗಳು ಹೊರತು ವಿವಿಕ್ತವಾದ ಈ ಸ್ಥಳದಲ್ಲಿ ಇನ್ನು ಬೇರೆ ಯಾವುದು ತಾನೇ ಸಾಧ್ಯವು? ಇಲ್ಲಿ ನಡೆಸುವುದಕ್ಕೆ ಸಾಧ್ಯವಾದ ಅಲ್ಪಸ್ವಲ್ಪ ಸತ್ಕಾರಗಳನ್ನು ನೀವು ನಡೆಸಿಯೇಬಿಟ್ಟಿರುವಿರಿ! ಇನ್ನೇನು?" ಎಂದನು. ಅದಕ್ಕಾ ಭರದ್ವಾಜನು ಮಂದಹಾಸವನ್ನು ತೋರಿಸುತ್ತ, "ವತ್ಸನೆ! ನನ್ನಲ್ಲಿ ನಿನಗೆ ಪ್ರೀತಿಯಿರುವುದೆಂಬುದನ್ನು ಚೆನ್ನಾಗಿ ಬಲ್ಲೆನು! ಕೇವಲ ವಾಙ್ಮಾತ್ರದಿಂದ ಉಪಚರಿಸಿದರೂ ನೀನು ಸಂತೋಷಿಸತಕ್ಕವನೆಂಬುದನ್ನೂ ನಾನು ಬಲ್ಲೆನು. ಆದರೆ ಈ ನಿನ್ನ ದೊಡ್ಡ ಸೇನೆಗೂ ತಕ್ಕ ಔತಣವನ್ನು ಮಾಡಬೇಕೆಂದಪೇಕ್ಷಿಸುವೆನು. ನಿನ್ನ ಪ್ರೀತಿಗೆ ತಕ್ಕಂತೆ ನೀನು ಇದಕ್ಕನುಮತಿಸಬೇಕು!

ಎಲೈ ಪುರುಷಶ್ರೇಷ್ಠನೆ! ನಿನ್ನ ಸೈನ್ಯವನ್ನು ಬಹುದೂರದಲ್ಲಿಯೇ ನಿಲ್ಲಿಸಿ ನೀನು ಮಾತ್ರ ಇಲ್ಲಿಗೆ ಬಂದುದೇಕೆ? ಅವರನ್ನೂ ಇಲ್ಲಿಗೇಕೆ ಕರೆತರಲಿಲ್ಲ? ನಿನ್ನ ಸೇನೆಯೊಡನೆ ಇಲ್ಲಿಗೆ ಬರಬಹುದಾಗಿತ್ತಲ್ಲವೆ?" ಎಂದನು. ಆಗ ಭರತನು ಆ ಮಹರ್ಷಿಗೆ ಕೈಮುಗಿದು ನಿಂತು "ಎಲೈ ಪೂಜ್ಯನೆ! ನಿಮ್ಮಲ್ಲಿ ಅಪಚಾರಪಡಬಾರದೆಂಬ ಭಯಕ್ಕಾಗಿ ನಾನು ಸೈನ್ಯದೊಡನೆ ಇಲ್ಲಿಗೆ ಬರಲಿಲ್ಲ! ಎಲೈ ಮಹಾತ್ಮನೆ! ರಾಜನಾಗಲಿ, ರಾಜಪುತ್ರನಾಗಲಿ, ಸೈನ್ಯದೊಡನೆ ಪ್ರಯಾಣಮಾಡುತ್ತಿರುವ ಕಾಲದಲ್ಲಿ, ಋಷ್ಯಾಶ್ರಮವನ್ನು ಕಂಡಾಗ ಸೈನ್ಯವನ್ನು ದೂರದಲ್ಲಿಯೇ ನಿಲ್ಲಿಸಬೇಕಾದುದು ಧರ್ಮವಲ್ಲವೆ? ಅಥವಾ ಆ ದಾರಿಯನ್ನೇ ಬಿಟ್ಟು ಬೇರೆ ದಾರಿಯಿಂದ ಹೋಗಬೇಕು! ಈಗ ನನ್ನೊಡನೆ ಬಂದಿರುವ ಸೈನ್ಯವಾದರೋ ಅಪಾರವಾಗಿರುವುದು. ಅದರಲ್ಲಿ ಅನೇಕ ಜಾತ್ಯಶ್ವಗಳೂ, ಕಾಲಾಳುಗಳೂ, ಮದಿಸಿದ ಆನೆಗಳೂ ಅಸಂಖ್ಯಾತವಾಗಿರುವುವು. ಆ ನನ್ನ ಸೈನ್ಯವನ್ನು ನಿಲ್ಲಿಸಿದರೆ ಬಹು ವಿಸ್ತಾರವಾದ ಭೂಪ್ರದೇಶವೆಲ್ಲವೂ ದಟ್ಟವಾಗಿ ತುಂಬಿಹೋಗುವುದು. ಆ ಸೇನೆಯೆಲ್ಲವನ್ನೂ ಇಲ್ಲಿಗೆ ಕರೆತಂದರೆ, ಆಶ್ರಮವೃಕ್ಷಗಳನ್ನೂ, ಇಲ್ಲಿನ ಕೊಳಗಳನ್ನೂ ಕೆಡಿಸಿಬಿಡುವುವು. ಈ ಕಾರಣದಿಂದಲೇ ಸೈನ್ಯವನ್ನು ದೂರದಲ್ಲಿಯೇ ನಿಲ್ಲಿಸಿ ನಾನೊಬ್ಬನೇ ಇಲ್ಲಿಗೆ ಬಂದೆನು" ಎಂದನು. ಆಗ ಭರದ್ವಾಜನು ಭರತನನ್ನು ನೋಡಿ "ವತ್ಸನೆ ಚಿಂತೆಯಿಲ್ಲ! ಆ ಸೈನ್ಯವನ್ನು ಇಲ್ಲಿಗೆ ಕರೆಸು" ಎಂದನು. ಹೀಗೆ ಭರದ್ವಾಜನು ಆಜ್ಞಾಪಿಸಿದಮೇಲೆ ಭರತನು ತನ್ನ ಸೈನ್ಯವನ್ನು ಆಶ್ರಮಕ್ಕೆ ಕರೆಸಿದನು. ಆಮೇಲೆ ಭರದ್ವಾಜನು ಅಗ್ನಿಶಾಲೆಯನ್ನು ಪ್ರವೇಶಿಸಿ, ಮೂರಾವರ್ತಿ ಆಚಮನವನ್ನು ಮಾಡಿ ಬಾಯಿಯನ್ನು ಒರೆಸಿಕೊಂಡು ಈ ಸೇನೆಗಳಿಗೆ ಆತಿಥ್ಯವನ್ನು ನಡೆಸುವುದಕ್ಕಾಗಿ ಮಂತ್ರಬಲದಿಂದ ವಿಶ್ವಕರ್ಮನನ್ನು ಕರೆಯುತ್ತ, "ಸಂಕಲ್ಪಮಾತ್ರದಿಂದಲೇ ಗೃಹಾದಿಗಳನ್ನು ನಿರ್ಮಿಸುವ ವಿಶ್ವಕರ್ಮನು ಈ ಕ್ಷಣವೇ ಇಲ್ಲಿಗೆ ಬರುವವನಾಗಲಿ, ಭರತನಿಗೂ, ಆತನ ಸೈನ್ಯಕ್ಕೂ ಈಗ ನಾನು ಅತಿಥ್ಯವನ್ನು ನಡೆಸಬೇಕೆಂದಿರುವೆನು. ಅದಕ್ಕೆ ದೇವಶಿಲ್ಪಿಯಾದ ವಿಶ್ವಕರ್ಮನು ನಡೆಸಬೇಕಾದ ಕಾರ್ಯಗಳೆಲ್ಲವನ್ನೂ ನಡೆಸಲಿ! ಹಾಗೆಯೇ ಯಮ ವರುಣ ಕುಬೇರರೆಂಬ ಮೂವರು ದಿಕ್ಪಾಲಕರೂ ಇಲ್ಲಿ ಸನ್ನಿಹಿತರಾಗಿರಲಿ? ದೇವೇಂದ್ರನೇ ಮೊದಲಾದ ದೇವತೆಗಳೂ ಸಿದ್ಧರಾಗಿ

ಬರಲಿ ! ಈಗ ನಾನು ಆತಿಥ್ಯವನ್ನು ನಡೆಸುವ ವಿಷಯದಲ್ಲಿ ಅವರವರು ನಡೆಸ ಬೇಕಾದ ಅನ್ನಪಾನಾದಿಗಳನ್ನು ಸಿದ್ಧಪಡಿಸಲಿ ! ಭೂಮಿಯಲ್ಲಿಯೂ, ಅಂತರಿಕ್ಷ ದಲ್ಲಿಯೂ, ಪೂರ್ವಾಭಿಮುಖವಾಗಿಯಾಗಲಿ, ಪಶ್ಚಿಮಾಭಿಮುಖವಾಗಿಯಾಗಲಿ ಪ್ರವಹಿಸುವ ಸಮಸ್ತನದಿಗಳೂ ಒಟ್ಟಾಗಿ ಇಲ್ಲಿಗೆ ಬಂದು ಕೂಡಲಿ ! ಅವುಗಳಲ್ಲಿ ಕೆಲವು ಖರ್ಜೂರಾದಿಗಳಿಂದ ಉತ್ಪನ್ನವಾಗುವ ಮೈರೇಯವೆಂಬ ಮದ್ಯವನ್ನೂ ಮತ್ತೆ ಕೆಲವು ಗೌಡಿ, ಪೈಷ್ಟಿ, ಮಾಧ್ವಿಗಳೆಂಬ ಮೂರು ಬಗೆಯುಳ್ಳ ಸುರೆಯೆಂಬ ಮದ್ಯವನ್ನೂ, ಇನ್ನು ಕೆಲವು ಕಬ್ಬಿನ ರಸದಂತೆ ಸವಿಯಾದ ಶೀತಳ ಜಲವನ್ನೂ ಒದಗಿಸಿಕೊಡಲಿ ! ಈ ಸೈನಿಕರ ಮನಸ್ಸಂತೋಷಾರ್ಥವಾಗಿ [1]ದೇವಗಂಧರ್ವ ಜಾತಿಗೆ ಸೇರಿದ ವಿಶ್ವಾವಸು, ಹಾಹಾ ಹೂಹೂ, ಮೊದಲಾದ ಗಂಧರ್ವರೆಲ್ಲರೂ ಬಂದು ಗಾನಮಾಡಲಿ ! ಹಾಗೆಯೇ ದೇವಜಾತಿಗೆ ಸೇರಿದ ಅಪ್ಸರಸ್ತ್ರೀಯರೂ ಬಂದು ಸಿದ್ಧರಾಗಲಿ ! ಮತ್ತು ಈ ಸೈನಿಕರ ಮುಂದೆ ನಾಟ್ಯಮಾಡುವುದಕ್ಕಾಗಿ ಘೃತಾಚಿ, ವಿಶ್ವಾಚಿ, ಮಿಶ್ರಕೇಶಿ, ಅಲಂಬುಸೆ, ನಾಗದಂತೆ, ಹೇಮೆ, ಪರ್ವತವಾಸಿನಿಯಾದ ಹಿಮೆ ಮುಂತಾದ ದೇವಲೋಕದ ನರ್ತಕಿಯರೆಲ್ಲರೂ ಬಂದು ಸಿದ್ಧರಾಗಿರಲಿ ! ದೇವೇಂದ್ರನನ್ನುಪಚರಿಸತಕ್ಕ ಅಪ್ಸರಸ್ತ್ರೀಯರೂ, ಚತುರ್ಮುಖಬ್ರಹ್ಮನನ್ನುಪಚರಿಸತಕ್ಕ [2]ಅಪ್ಸರಸ್ತ್ರೀಯರೂ ತಮ್ಮ ನೃತ್ಯ ಗೀತಾದ್ಯುಪಕರಣಗಳೊಡನೆ ತಮ್ಮ ಗಾನಶಿಕ್ಷಕನಾದ ತುಂಬುರುವಿನೊಡಗೂಡಿ ಬಂದು ಸಿದ್ಧರಾಗಿರಲಿ ಮತ್ತು ಸರ್ವೋತ್ತಮವಾದ ವಸ್ತ್ರಾಭರಣಗಳನ್ನೆ ತನ್ನಲ್ಲಿರುವ ಎಲೆಗಳನ್ನಾಗಿಯೂ, ದಿವ್ಯಸ್ತ್ರೀಯರನ್ನೇ ಫಲಗಳನ್ನಾಗಿಯೂ ಪಡೆದು, ಉತ್ತರದೇಶದಲ್ಲಿ ದೇವತಾರ್ಹವಾಗಿ ಪ್ರಕಾಶಿಸುತ್ತಿರುವ ಕುಬೇರೋ ದ್ಯಾನವೇ ಇಲ್ಲಿಗೆ ಬಂದು ಸನ್ನಿಹಿತವಾಗಲಿ ! ಪೂಜ್ಯನಾದ ಚಂದ್ರನು ಇಲ್ಲಿ ಬಂದು ಭಕ್ಷ್ಯ, ಭೋಜ್ಯ, ಚೋಷ್ಯ, ಲೇಹ್ಯಗಳೆಂಬ ನಾಲ್ಕುವಿಧವಾದ ಅನ್ನ ಗಳನ್ನು ವಿಶೇಷವಾಗಿ, ನಾನಾಬಗೆಯಾಗಿ ಸಿದ್ಧಪಡಿಸಿಡಲಿ ! ಮತ್ತು ಸಮಸ್ತ ಓಷಧಿಗಳಿಗೂ ಒಡೆಯನಾದ ಆ ಚಂದ್ರನು ಗಿಡಗಳಿಂದ ಆಗಲೇ ಉದಿರಿದ

---

[1] ಮನುಷ್ಯಜಾತಿ ಗಂಧರ್ವರೆಂದೂ ದೇವಜಾತಿ ಗಂಧರ್ವರೆಂದೂ ಎರಡು ಬಗೆ ಯಿರುವುದರಿಂದ ಇಲ್ಲಿ ದೇವಗಂಧರ್ವರೆಂದು ಹೇಳಲ್ಪಟ್ಟಿದೆ.

[2] "ತಂ ಪಂಚಶತಾನ್ಯಪ್ಸರಸಾಂ ಪ್ರತಿ ಧಾವಂತಿ" ಎಂಬುದರಿಂದ ಬ್ರಹ್ಮಲೋಕ ದಲ್ಲಿಯೂ ಅಪ್ಸರಸ್ಸುಗಳಿದ್ದರೆಂದು ವ್ಯಕ್ತವಾಗುವುದು.

ವಿಚಿತ್ರ ವಿಚಿತ್ರಗಳಾದ ಪುಷ್ಪಮಾಲಿಕೆಗಳನ್ನೂ, ಸುರೆ ಮೊದಲಾದ ಪಾನದ್ರವ್ಯ ಗಳನ್ನೂ, ಬಗೆಬಗೆಯಾದ ಮಾಂಸಗಳನ್ನೂ ಒದಗಿಸಲಿ" ಎಂದು ಆಹ್ವಾನ ಮಂತ್ರಗಳನ್ನು ಜಪಿಸಿದನು. ಹೀಗೆ ಸರ್ವೋತ್ತಮವಾದ ಯೋಗಬಲದಿಂದ ಎಣೆಯಿಲ್ಲದ ತೇಜಸ್ಸುಳ್ಳವನಾದ ಆ ಭರದ್ವಾಜನು ಶಿಕ್ಷಾಶಾಸ್ತ್ರವನ್ನನುಸರಿಸಿ ಸ್ವರಗಳನ್ನು ಸ್ವಚ್ಛವಾಗಿಯೂ, ನಿರ್ದೋಷವಾಗಿಯೂ ಉಚ್ಚರಿಸುತ್ತ, ಪೂರ್ವಾಭಿಮುಖವಾಗಿ ಕೈಮುಗಿದು ನಿಂತು, ಆಯಾ ಮಂತ್ರಗಳನ್ನು ಜಪಿಸಿ ಧ್ಯಾನಿಸುತಿದ್ದನು. ಈ ಧ್ಯಾನದಲ್ಲಿರುವಾಗಲೇ ಆಯಾ ದೇವತೆಗಳು ಬೇರೆ ಬೇರೆಯಾಗಿ ಆಶ್ರಮಕ್ಕೆ ಬಂದು ಸೇರಿದರು. ಆ ಕ್ಷಣವೇ ಸುಗಂಧ ಶೀತಳ ವಾದ ವಾಯುವು ಮಲಯದರ್ದುರಗಳೆಂಬ ಬೆಟ್ಟಗಳಮೇಲೆ ಬೀಸಿ, ಸುಗಂಧ ಸಾರವನ್ನು ಹೊತ್ತು ಆ ಸೈನಿಕರ ಮೈಗೆ ಹಿತಕರವಾಗಿರುವಂತೆ ತಾಪಶಾಂತಿಯ ನ್ನುಂಟುಮಾಡಿ, ಅವರ ಮೈಯೊಳಗಿನ ಬೆವರನ್ನಾರಿಸುತ್ತಾ ಮೆಲ್ಲಗೆ ಬೀಸಲಾ ರಂಭಿಸಿತು. ಆಕಾಶದಿಂದ ದೇವತೆಗಳು ಎಡಬಿಡದೆ ಪುಷ್ಪವೃಷ್ಟಿಗಳನ್ನು ಸುರಿಸು ತ್ತಿದ್ದರು. ನಾಲ್ಕುಕಡೆಗಳಿಂದಲೂ ದೇವದುಂದುಭಿಗಳು ಮೊಳಗುತಿದ್ದುವು. ಸುಖ ಸ್ಪರ್ಶವಾದ ಗಾಳಿಯೂ ಬೀಸುತ್ತಿತ್ತು. ಒಂದು ಕಡೆಯಲ್ಲಿ ಅಪ್ಸರಸ್ತ್ರೀಯರು ಕುಣಿಯುತ್ತಿದ್ದರು. ಮತ್ತೊಂದುಕಡೆಯಲ್ಲಿ ದೇವಗಂಧರ್ವರು ವೀಣೆಗಳನ್ನು ನುಡಿಸುತ್ತಿದ್ದರು. ಇಂಪಾದ ಈ ಮಂಗಳವಾದ್ಯಧ್ವನಿಗಳೆಲ್ಲವೂ ಭೂಮ್ಯಾಕಾಶ ಗಳೆಲ್ಲವನ್ನೂ ವ್ಯಾಪಿಸಿ, ಜನಗಳ ಕಿವಿಯಲ್ಲಿ ತುಂಬಿ ಆಪ್ಯಾಯನವನ್ನುಂಟು ಮಾಡುತ್ತಿತ್ತು. ಶ್ರುತಿಯಲ್ಲಿ ಲಯಿಸಿ ತಾಳಕ್ರಮವನ್ನನುಸರಿಸಿ ಹಾಡುತ್ತಿದ್ದ ಗಾನಗಳೆಲ್ಲವೂ ಅತ್ಯಾನಂದವನ್ನುಂಟುಮಾಡುತ್ತಿದ್ದುವು. ಹೀಗೆ ಕಿವಿಗಿಂಪಾದ ದಿವ್ಯಗಾನಗಳೆಲ್ಲವೂ ಸ್ವಲ್ಪಹೊತ್ತಿನವರೆಗೆ ನಡೆದು ನಿಂತುಹೋದಮೇಲೆ, ಭರತನ ಸೈನಿಕರಿಗೆ ವಿಶ್ವಕರ್ಮನ ಶಿಲ್ಪಚಮತ್ಕಾರವು ಅಲ್ಲಲ್ಲಿ ಕಣ್ಣಿಗೆ ಗೋಚರಿಸಿತು. ಆ ಆಶ್ರಮದಲ್ಲಿ ಸೈನಿಕರಿಳಿದಿದ್ದ ಪ್ರದೇಶಕ್ಕೆ ಸುತ್ತಲೂ ಐದು ಗಾವುದಗಳವರೆಗೆ ಸ್ವಲ್ಪವಾದರೂ ಹಳ್ಳತಿಟ್ಟುಗಳಿಲ್ಲದೆ ಸಮಭೂಮಿಯಾಗಿ ಪರಿಣಮಿಸಿತು. ಅಲ್ಲಿ ನೀಲ ರತ್ನ ವೈಡೂರ್ಯಗಳಿಂದ ಕೆತ್ತಿದಂತೆ ವಿಧವಿಧವಾದ ಗರಿಕೆಹುಲ್ಲುಗಳು ಭೂ ಪ್ರದೇಶಗಳೆಲ್ಲವನ್ನೂ ಮುಚ್ಚಿಕೊಂಡು ದಟ್ಟವಾಗಿ ಬೆಳೆದಿದ್ದುವು. ಬಿಲ್ವ, ಬೇಲ, ಹಲಸು, ದಾಳಿಂಬ, ನೆಲ್ಲಿ, ಮಾವು, ಮೊದಲಾದ ಫಲವೃಕ್ಷಗಳೆಲ್ಲವೂ ಫಲಭರಿತಗಳಾಗಿ ಆ ಪ್ರದೇಶದ ಸುತ್ತಲೂ ತುಂಬಿಹೋದವು. ಭಾರದ್ವಾಜ

ಮಹರ್ಷಿಯ ಕೋರಿಕೆಯಂತೆ ಉತ್ತರಕುರುದೇಶಗಳಿಂದ ಭೋಗಾರ್ಹವಾದ ಚೈತ್ರರಥವೆಂಬ ಉದ್ಯಾನವನವೇ ಅಲ್ಲಿಗೆ ಪ್ರತ್ಯಕ್ಷವಾಗಿ ಬಂದು ಸೇರಿತು. ಅನೇಕ ತೀರವೃಕ್ಷಗಳೊಡನೆ ಸಮಸ್ತ ದಿವ್ಯನದಿಗಳೂ ಅಲ್ಲಿ ಬಂದು ಪ್ರವಹಿಸುತ್ತಿದ್ದುವು. ಸುಣ್ಣದಿಂದ ಬೆಳಗಿ ಬಿಳುಪಾದ ಚತುಶ್ಶಾಲೆಗಳೂ, ಆನೆ ಕುದುರೆ ಲಾಯಗಳೂ, ಮಹೋನ್ನತಗಳಾದ ಉಪ್ಪರಿಗೆಗಳೂ, ಗೋಪುರಗಳೂ, ಹೊರಬಾಗಿಲುಗಳೂ, ಗೋಚರಿಸಿದುವು. ಬಿಳೀಮೇಘದಂತೆ ಮಹಾಗಂಭೀರವಾಗಿ ಹೊಳೆಯುತ್ತಿರುವ, ಮತ್ತು ಉತ್ತಮವಾದ ಬಾಗಿಲುಳ್ಳ ಒಂದು ಅರಮನೆಯೂ ಅಲ್ಲಿ ಉದ್ಭವಿಸಿತು. ಈ ಅರಮನೆಯ ಸುತ್ತಿನ ಪ್ರಾಕಾರಗಳೆಲ್ಲವೂ ಪುಷ್ಪಮಾಲಿಕೆಗಳಿಂದ ಅಲಂಕರಿಸಲ್ಪಟ್ಟು, ಧೂಪ ದೀಪ ಚಂದನಾದಿಗಳಿಂದ ಸುವಾಸಿತವಾಗಿ ಮಾಡಲ್ಪಟ್ಟಿದ್ದುವು ಮತ್ತು ಅದು ನೂಲಳತೆಗೆ ಸರಿಯಾಗಿ ಸ್ವಲ್ಪವೂ ವ್ಯತ್ಯಾಸವಿಲ್ಲದೆ ಚತುರಶ್ರಾಕಾರವಾಗಿ, ವಿಸ್ತಾರವಾಗಿ, ಉತ್ತಮವಾದ ಹಾಸಿಗೆಗಳಿಂದಲೂ, ಆಸ್ತರಣಗಳಿಂದಲೂ, ವಾಹನಗಳಿಂದಲೂ ತುಂಬಿದುದಾಗಿತ್ತು. ಅಲ್ಲಿ ಷಡ್ರಸೋಪೇತಗಳಾದ ಭೋಜನ ಪದಾರ್ಥಗಳೂ, ಉತ್ತಮವಾದ ವಸ್ತ್ರಗಳೂ ತುಂಬಿದ್ದುವು. ಅಪೂಪಾದ್ಯನ್ನರಾಶಿಗಳೂ ಸಿದ್ಧವಾಗಿದ್ದುವು. ಅಲ್ಲಿ ಪಾತ್ರಗಳೆಲ್ಲವೂ ಚೆನ್ನಾಗಿ ತೊಳೆಯಲ್ಪಟ್ಟು ನಿರ್ಮಲವಾಗಿ ಹೊಳೆಯುತ್ತಿದ್ದುವು. ಇದೇ ಅಲ್ಲದೆ ಅಲ್ಲಲ್ಲಿ ಭೋಜನ ಸ್ನಾನಾದಿಗಳಿಗೆ ತಕ್ಕ ಆಸರೆಗಳೆಲ್ಲವೂ ಕ್ರಮವಾಗಿ ಪ್ರತ್ಯೇಕ ಪ್ರತ್ಯೇಕವಾಗಿ ಏರ್ಪಡಿಸಲ್ಪಟ್ಟಿದ್ದುವು. ಭಾಗ್ಯಲಕ್ಷ್ಮಿಗೆ ಇದೇ ನಿತ್ಯಾಶ್ರಯವಾಗಿ ತೋರುತ್ತಿತ್ತು. ಉತ್ತಮವಾದ ಮೇಲುಹೊದ್ದಿಕೆಗಳಿಂದ ಕೂಡಿದ ಅಮೂಲ್ಯವಾದ ಶಯನಗಳು ಅಲ್ಲಲ್ಲಿ ಸಿದ್ಧವಾಗಿದ್ದವು. ಹೀಗೆ ಇವೆಲ್ಲವೂ ಸಿದ್ಧವಾಗಿರಲು, ಮಹಾಬಾಹುವಾದ ಭರತನು ಭರದ್ವಾಜಮಹರ್ಷಿಯ ಅಪ್ಪಣೆಯಮೇಲೆ ರತ್ನಪೂರ್ಣವಾದ ಆ ಮನೆಯನ್ನು ಪ್ರವೇಶಿಸಿದನು. ಪುರೋಹಿತರೂ, ಮಂತ್ರಿಗಳೂ ಆ ಭರತನನ್ನು ಹಿಂಬಾಲಿಸಿಹೋದರು. ಹೀಗೆ ಪ್ರವೇಶಿಸಿದೊಡನೆಯೇ ಅವರೆಲ್ಲರೂ ಅರಮನೆಯ ಕಟ್ಟಡದ ಚಮತ್ಕಾರವನ್ನು ನೋಡಿ ಪರಮಾನಂದಭರಿತರಾಗಿ ಆಶ್ಚರ್ಯಪಡುತ್ತಿದ್ದರು. ಭರತನು ಅಲ್ಲಿದ್ದ ದಿವ್ಯಸಿಂಹಾಸನವನ್ನೂ, ಚಾಮರವನ್ನೂ, ರಾಜಯೋಗ್ಯವಾದ ಶ್ವೇತಚ್ಛತ್ರವನ್ನೂ ನೋಡಿ ರಾಜನಂತೆಯೇ ಅದನ್ನು ಗೌರವಿಸಿ, ಮಂತ್ರಿಗಳೊಡನೆ ಪ್ರದಕ್ಷಿಣಮಾಡಿದನು. ಮತ್ತು ಆ ರಾಜಸಿಂಹಾಸನದಮೇಲೆ ರಾಮನು ಕುಳಿತಿರು

ವಂತೆ ಮನಸ್ಸಿನಲ್ಲಿ ಭಾವಿಸಿಕೊಂಡು, ಅದರ ಮುಂದೆ ನಿಂತು ನಮಸ್ಕರಿಸಿ, ಅಲ್ಲಿದ್ದ ಚಾಮರವನ್ನು ಕೈಯಲ್ಲಿ ತೆಗೆದುಕೊಂಡು ಆ ರಾಜಪೀಠದ ಕೆಳಭಾಗದಲ್ಲಿ ಮಂತ್ರಿಗಳು ಕುಳಿತಿರತಕ್ಕ ಒಂದಾನೊಂದು ಆಸನದಮೇಲೆ ಕುಳಿತುಕೊಂಡನು. ಆಮೇಲೆ ಕ್ರಮವಾಗಿ ಮಂತ್ರಿಪುರೋಹಿತಾದಿಗಳೆಲ್ಲರೂ ತಮ್ಮ ತಮ್ಮ ಉಚಿತಾಸನಗಳಲ್ಲಿ ಕುಳಿತುಕೊಂಡರು. ಆಮೇಲೆ ಸೇನಾಧಿಪತಿಯೂ, ಶಿಬಿರನಾಯಕನೂ ತಮ್ಮ ಪೀಠಗಳಲ್ಲಿ ಕುಳಿತರು. ಒಂದು ಮುಹೂರ್ತಕಾಲದೊಳಗಾಗಿಯೇ ಪಾಯಸದ ಸಾರವುಳ್ಳ ನದಿಗಳು ಭರತನ ಮುಂದೆ ಪ್ರವಹಿಸಲಾರಂಭಿಸಿದುವು. ಆ ನದಿಗಳ ಎರಡು ತೀರಗಳಲ್ಲಿಯೂ ಈ ಭರದ್ವಾಜಋಷಿಯ ಮಹಿಮೆಯಿಂದ ಅತಿಮನೋಹರಗಳಾದ ದಿವ್ಯಗೃಹಗಳು ಉದ್ಭವಿಸಿದುವು. ಆ ಕ್ಷಣವೇ ಬ್ರಹ್ಮನಿಂದ ಕಳುಹಿಸಲ್ಪಟ್ಟ ದಿವ್ಯಾಭರಣಭೂಷಿತರಾದ ಇಪ್ಪತ್ತುಸಾವಿರ ಅಪ್ಸರಸ್ತ್ರೀಯರು ಬಂದು ನೆರೆದರು. ಹಾಗೆಯೇ ಕುಬೇರನಿಂದ ಕಳುಹಿಸಲ್ಪಟ್ಟು ಸ್ವರ್ಣಾಭರಣಗಳಿಂದಲೂ, ರತ್ನದ ಒಡವೆಗಳಿಂದಲೂ, ಮುತ್ತಿನ ಹಾರಗಳಿಂದಲೂ, ಹವಳದ ಸರಗಳಿಂದಲೂ ಅಲಂಕರಿಸಲ್ಪಟ್ಟ, ಇಪ್ಪತ್ತು ಸಾವಿರಮಂದಿ ಯಕ್ಷಿಣಿಯರೂ ಬಂದು ಸೇರಿದರು. ಯಾವ ಸ್ತ್ರೀಯರನ್ನು ಒಂದಾವರ್ತಿ ಅಪ್ಪಿಕೊಂಡ ಮಾತ್ರಕ್ಕೆ ಮನುಷ್ಯನು ಹುಚ್ಚುಹಿಡಿದವನಂತೆ ಮರುಳಾಗುವನೋ, ಅಂತಹ ಇಪ್ಪತ್ತುಸಾವಿರಮಂದಿ ಅಪ್ಸರಸ್ತ್ರೀಯರು ದೇವೇಂದ್ರನಿಂದ ಕಳುಹಿಸಲ್ಪಟ್ಟು, ನಂದನವನ್ನು ಬಿಟ್ಟು ಬಂದರು. ಹಾಗೆಯೇ ನಾರದ, ತುಂಬುರು, ಗೋಪರೆಂಬ ಸೂರ್ಯತೇಜಸ್ಸುಳ್ಳ ಮೂವರು ಗಂಧರ್ವಶ್ರೇಷ್ಠರು ಭರತನ ಮುಂದೆ ನಿಂತು ಗಾನಮಾಡಲಾರಂಭಿಸಿದರು. ಅಲಂಬುಸೆ, ಮಿಶ್ರಕೇಶಿ, ಪುಂಡರೀಕೆ, ವಾಮನೆ, ಮುಂತಾದ ದೇವವೇಶ್ಯೆಯರೆಲ್ಲರೂ ಭರದ್ವಾಜನ ಪ್ರೇರಣೆಯಿಂದ ಭರತನ ಮುಂದೆ ಬಂದು ನರ್ತಿಸುತಿದ್ದರು. ದೇವಲೋಕದ ನಂದನವನದಲ್ಲಿಯಾಗಲಿ, ಕುಬೇರನ ಚೈತ್ರರಥವೆಂಬ ತೋಟದಲ್ಲಿಯಾಗಲಿ, ಯಾವ ಯಾವ ವಿಚಿತ್ರಪುಷ್ಪಗಳುಂಟೋ ಅವೆಲ್ಲವೂ ಭರದ್ವಾಜನ ಮಹಿಮೆಯಿಂದ ಆತನ ಪ್ರಯಾಗಕ್ಷೇತ್ರದಲ್ಲಿಯೇ ಕಾಣುತ್ತಿದ್ದುವು. ಭರದ್ವಾಜ ಮಹರ್ಷಿಯ ದಿವ್ಯತೇಜಸ್ಸಿನಿಂದ ಅಚೇತನಗಳಾದ ಮರಗಿಡಗಳೆಲ್ಲವೂ ಭರತನನ್ನೂ, ಆತನ ಸೈನ್ಯಗಳನ್ನೂ ಉಪಚರಿಸಲಾರಂಭಿಸಿದುವು. ಬಿಲ್ವವೃಕ್ಷಗಳು ಮದ್ದಳೆಯನ್ನು ನುಡಿಸುತಿದ್ದುವು. ಕಲಿವೃಕ್ಷಗಳು ತಾಳವನ್ನು ಹಾಕು

ತ್ತಿದ್ದುವು. ಅರಳಿಯಮರಗಳು ನರ್ತನಮಾಡಿದುವು. ಹಾಗೆಯೇ ಸರಳ, ತಾಲ, ತಿಲಕ, ನಕ್ತಮಾಲಗಳೆಂಬ ವೃಕ್ಷವಿಶೇಷಗಳೆಲ್ಲವೂ ಗೂನರಂತೆಯೂ ಗುಜ್ಜಾರಿಗಳಂತೆಯೂ ಬಂದು ಸಂತೋಷದಿಂದ ತಿರುಗುತಿದ್ದುವು, [1]ಶಿಂಶುಪಾವೃಕ್ಷಗಳೂ ಆಮಲಕೀ ವೃಕ್ಷಗಳೂ (ನೆಲ್ಲಿ) ಜಂಬೂವೃಕ್ಷಗಳೂ (ನೇರಳೆ) ಇನ್ನೂ ಇತರ ಕಾಡುಮರಗಳೂ, ಜಾಜಿ, ಮಲ್ಲಿಗೆ, ಮೊದಲಾದ ಹೂಬಳ್ಳಿಗಳೂ, ಸ್ತ್ರೀರೂಪವನ್ನು ಧರಿಸಿ ಬಂದು ಭರತನ ಸೈನಿಕರನ್ನು ನೋಡಿ “ಮದ್ಯವನ್ನು ಕುಡಿಯುವವರು ಬೇಕಾದಷ್ಟು ಮದ್ಯವನ್ನು ಕುಡಿಯಬಹುದು! ಭೋಜನದಲ್ಲಿ ಅಪೇಕ್ಷೆಯುಳ್ಳವರು ಪಾಯಸವೇ ಮೊದಲಾದ ಭೋಜನಪದಾರ್ಥಗಳನ್ನು ತೆಗೆದುಕೊಳ್ಳಬಹುದು! ಮಾಂಸಾಪೇಕ್ಷೆಯುಳ್ಳವರು ಬೇಕಾದಷ್ಟು ಮಾಂಸವನ್ನು ತಿನ್ನಿರಿ! ಇದೋ! ಇಲ್ಲಿ ರುಚಿಯಾದ ಮದ್ಯವಿರುವುದು! ಇಲ್ಲಿ ಪಾಯಸವಿರುವುದು. ಇಲ್ಲಿ ಶುದ್ಧವಾದ ಮಾಂಸವಿರುವುದು! ನಿಮ್ಮ ನಿಮ್ಮ ಮನಸ್ತೃಪ್ತಿಯಾಗುವವರೆಗೂ ಭುಜಿಸಿರಿ!” ಎಂದು ಕೂಗಿಕೂಗಿ ಕೊಡುತ್ತಿದ್ದುವು. ಒಬ್ಬೊಬ್ಬ ಪುರುಷನಿಗೂ ಏಳೆಂಟುಮಂದಿ ಸ್ತ್ರೀಯರು ಸುತ್ತಿನಿಂತು, ತೈಲಾಭ್ಯಂಗನವನ್ನು ಮಾಡಿ, ಮೈಹಿಡಿದು, ಮನೋಹರವಾದ ನದೀತೀರಗಳಿಗೆ ಕರೆದುಕೊಂಡು ಹೋಗಿ ಸ್ನಾನಮಾಡಿಸುತ್ತಿದ್ದರು. ಅಂದವಾದ ಕಣ್ಣುಳ್ಳ ಕೆಲವು ಸ್ತ್ರೀಯರು ಅವರ ಕಾಲುಗಳನ್ನೊತ್ತುತ್ತ, ಅವರ ಮೈಯನ್ನೊರಸಿ, ಅವರ ದೇಹವನ್ನಲಂಕರಿಸಿ ಮದ್ಯಗಳನ್ನು ಕುಡಿಸುತಿದ್ದರು. ಭರದ್ವಾಜಮಹರ್ಷಿಯ ಮಹಿಮೆಯಿಂದ ಸೃಷ್ಟಿಸಲ್ಪಟ್ಟ ವಾಹನಪಾಲಕರನೇಕರು ಬಂದು, ಆ ಸೈನಿಕರ ಕುದುರೆಗಳನ್ನೂ, ಆನೆಗಳನ್ನೂ, ಹೇಸರಗತ್ತೆಗಳನ್ನೂ, ಒಂಟೆಗಳನ್ನೂ, ಎತ್ತುಗಳನ್ನೂ ಆದರಿಸಿ, ಅವುಗಳಿಗೆ ತಕ್ಕ ತಕ್ಕ ಆಹಾರಗಳನ್ನು ಕೊಟ್ಟು ತೃಪ್ತಿಪಡಿಸಿದರು. ಬಲಾಢ್ಯರಾದ ಆ ವಾಹನಪಾಲಕರು ಭರತನ ಸೈನ್ಯದಲ್ಲಿದ್ದ ಆನೆ ಮೊದಲಾದ ಸಮಸ್ತ ವಾಹನಗಳಿಗೂ, ಕಬ್ಬು, ಜೇನು, ಅರಳು, ಮೊದಲಾದ ರುಚಿರುಚಿಯಾದ ಆಹಾರಗಳನ್ನಿತ್ತು ನಿರ್ಬಂಧಪೂರ್ವಕವಾಗಿ ತಿನ್ನಿಸುತ್ತಿದ್ದರು. ಹೀಗೆ ಆಕಂಠಪೂರ್ತಿಯಾಗಿ ಆಹಾರವನ್ನು ತಿಂದಮೇಲೆ, ಕೊಬ್ಬಿಬೆಳೆದ ಆ ಸೈನ್ಯದಲ್ಲಿ, ಕುದುರೆಯ ಸವಾರರು ತಮ್ಮ ಕುದುರೆಯು ಯಾವುದೆಂದು ಕಂಡುಹಿಡಿಯಲಾರದೆ

[1]ಇಲ್ಲಿ ಲಿಂಗಭೇದದಿಂದ ಸ್ತ್ರೀಲಿಂಗವೃಕ್ಷಗಳು ಸ್ತ್ರೀರೂಪವನ್ನು ಧರಿಸಿ ಉಪಚರಿಸುತಿದ್ದುವೆಂದು ಗ್ರಹಿಸಬೇಕು.

ಹೋದರು. ಮಾವಟಿಗರು ತಮ್ಮ ಆನೆಗಳ ಗುರುತನ್ನೇ ಕಂಡುಹಿಡಿಯಲಾರದಿದ್ದರು. ಹೀಗೆ ಆ ಸೈನಿಕರೆಲ್ಲರೂ ಮದಪದಾರ್ಥಗಳಿಂದ ಮದಿಸಿ, ಮೈಮರೆತು, ಮೈತಿಳಿಯದಷ್ಟು ಸಂತೋಷದಿಂದ ಸುತ್ತುತ್ತಿದ್ದರು. ತಮಗೆ ಬೇಕುಬೇಕಾದ ಭೋಗಗಳೆಲ್ಲವನ್ನೂ ಅನುಭವಿಸಿ, ರಕ್ತಚಂದನಾದಿಗಳಿಂದ ಅಲಂಕೃತರಾಗಿ ಒಬ್ಬೊಬ್ಬರೂ ಅಪ್ಸರಸ್ತ್ರೀಯರೊಡಗೂಡಿ, ಉಲ್ಲಾಸದಿಂದ ಮಾತಾಡುತ್ತಿದ್ದರು. ಆ ಸೈನಿಕರು ಅಲ್ಲಲ್ಲಿ ಗುಂಪುಗೂಡಿ ಒಬ್ಬರಿಗೊಬ್ಬರು "ನಾವು ಇನ್ನು ಅಯೋಧ್ಯೆಗೂ ಹೋಗುವುದಿಲ್ಲ! ಅತ್ತಲಾಗಿ ದಂಡಕಾರಣ್ಯಕ್ಕೂ ಹೋಗುವುದಿಲ್ಲ! ಇಲ್ಲಿಯೇ ಇದ್ದುಬಿಡುವೆವು. ಭರತನು ಹೇಗೋ ಒಂದು ವಿಧದಲ್ಲಿ ಕ್ಷೇಮದಿಂದಿರಲಿ! ರಾಮನೂ ಅತ್ತಲಾಗಿ ಸುಖವಾಗಿದ್ದುಕೊಂಡಿರಲಿ" ಎಂದು ಹೇಳುತ್ತಿದ್ದರು. ಕಾಲಾಳುಗಳೂ, ಮಾವಟಿಗರೂ, ರಾವುತರೂ, ಆನೆ ಕುದುರೆಗಳನ್ನು ಕಟ್ಟತಕ್ಕವರೂ ಆ ಭರದ್ವಾಜಋಷಿಯ ಆತಿಥ್ಯದಿಂದ, ಕೊಬ್ಬಿ ಹಿಂದುಮುಂದು ತೋರದೆ, ತಮಗೆ ಬೇರೆ ನಿಯಾಮಕರೇ ಇಲ್ಲವೆಂದೂ, ತಾವೇ ಸ್ವತಂತ್ರರೆಂದೂ ಮನಸ್ಸುಬಂದಂತೆ ಮಾತಾಡುತ್ತಿದ್ದರು. ಭರತನನ್ನು ಹಿಂಬಾಲಿಸಿ ಬಂದ ಸಮಸ್ತ ಸೈನಿಕರಿಗೂ ಸಂತೋಷವು ಮಿತಿಮೀರಿಹೋಯಿತು. ಎಲ್ಲರೂ ಉಲ್ಲಾಸದಿಂದ ಕೋಲಾಹಲಧ್ವನಿಯನ್ನು ಮಾಡುತ್ತ "ಹಾ! ಇದಕ್ಕಿಂತ ಬೇರೆ ಸ್ವರ್ಗವುಂಟೆ? ಇದೇ ಸ್ವರ್ಗವು" ಎಂದು ಮಾತಾಡಿಕೊಳ್ಳುತ್ತಿದ್ದರು. ಅವರೆಲ್ಲರೂ ಪುಷ್ಪಮಾಲಿಕೆಯನ್ನು ಧರಿಸಿ, ಕೆಲವರು ಕುಣಿಯುತ್ತಲೂ, ಕೆಲವರು ನಗುತ್ತಲೂ, ಕೆಲವರು ಹಾಡುತ್ತಲೂ ಸಾವಿರಾರು ಮಂದಿ ಗುಂಪುಕೂಡಿ ಸುತ್ತಲೂ ಓಡಾಡುತ್ತಿದ್ದರು. ಅವರೆಲ್ಲರೂ ಅಮೃತಪ್ರಾಯವಾದ ಆ ಅನ್ನವನ್ನು ಯಥೇಷ್ಟವಾಗಿ ಭುಜಿಸಿ ತೃಪ್ತರಾಗಿದ್ದರೂ, ಅಲ್ಲಲ್ಲಿ ರಾಶಿಹಾಕಿದ್ದ ವಿಧವಿಧವಾದ ಭಕ್ಷ್ಯಗಳನ್ನು ಕಂಡೊಡನೆಯೇ ಪುನಃ ಅವರಿಗೆ ತಿನ್ನಬೇಕೆಂಬ ಆಸೆಯು ಉಂಟಾಯಿತು. ಆ ಸೇನೆಯಲ್ಲಿ ಪರಿಚಾರಕರೂ, ದಾಸಿಯರೂ, ಕೆಲಸಮಾಡುತ್ತಿದ್ದ ಇತರ ಸ್ತ್ರೀಯರೂ ಸಾವಿರಾರು ಮಂದಿ ಸೇರಿ, ಅನ್ನಪಾನಾದಿಗಳಿಂದ ತೃಪ್ತರಾಗಿ ಹೊಸಬಟ್ಟೆಗಳನ್ನುಟ್ಟು ಸಂತೋಷದಿಂದ ಬೆಳಗುತ್ತಿದ್ದರು. ಅಲ್ಲಿದ್ದ ಆನೆಗಳು, ಕುದುರೆಗಳು, ಒಂಟೆಗಳು, ಕತ್ತೆಗಳು, ಗೋವುಗಳು, ಮೃಗಪಕ್ಷಿಗಳು ಮುಂತಾದ ಸಮಸ್ತ ಪ್ರಾಣಿಗಳೂ ಸಂಪೂರ್ಣವಾಗಿ ತೃಪ್ತಿಹೊಂದಿದುವು. ಅಲ್ಲಿ ಭರದ್ವಾಜ ಮಹಾಋಷಿಯ ಮಹಿಮೆಯಿಂದುಂಟಾದ ಪದಾರ್ಥಗಳು ಹೊರತು

ಬೇರೊಂದನ್ನು ಯಾರೂ ಅಪೇಕ್ಷಿಸಲಿಲ್ಲ. ಅಲ್ಲಿ ಹೊಸದಾದ ಮಡಿಬಟ್ಟೆಯನ್ನುಡದವನು ಒಬ್ಬನೂ ಇರಲಿಲ್ಲ. ಹಸಿದವನಾಗಲಿ, ಕೊಳೆ ಮೈಯುಳ್ಳವನಾಗಲಿ, ಕೊಳೆಯಾದ ತಲೆಕೂದಲುಳ್ಳವನಾಗಲಿ ಯಾವನೊಬ್ಬನೂ ಇರಲಿಲ್ಲ. ಮೇಕೆಯ ಮಾಂಸಗಳನ್ನೂ, ಹಂದಿಯ ಮಾಂಸಗಳನ್ನೂ, ಸಕ್ಕರೆ ಮೊದಲಾದುವುಗಳನ್ನೂ, ತೊವ್ವೆಗಳನ್ನೂ ಸುವಾಸನೆಯನ್ನು ಕೊಡುವಹಾಗೆ ಪಾಕವಿಟ್ಟ ರಸಾಯನಗಳನ್ನೂ, ಶಾಲ್ಯನ್ನಗಳನ್ನೂ ತುಂಬಿಟ್ಟ ಅನೇಕ ಸುವರ್ಣಪಾತ್ರಗಳು ಅಲ್ಲಲ್ಲಿ ಚಿತ್ರಕೆಲಸಗಳಿಂದ ಕೂಡಿ, ರಾಸಿಹಾಕಿದ ಅನ್ನದ ಸುತ್ತಲೂ ಸಾಲಾಗಿ ಇರಿಸಲ್ಪಟ್ಟಿದ್ದುವು. ಈ ಸುವರ್ಣಪಾತ್ರಗಳ ಸಾವಿರಾರು ಸಾಲುಗಳನ್ನು ನೋಡಿದವರೆಲ್ಲರೂ ಹಾಗೆಯೇ ಆಶ್ಚರ್ಯದಿಂದ ಸ್ತಬ್ಧರಾಗಿಬಿಡುತ್ತಿದ್ದರು. ತೋಟದ ಸುತ್ತಲೂ ಕೇವಲ ಪಾಯಸಗಳಿಂದಲೇ ತುಂಬಿದ ಬಾವಿಗಳು ಅನೇಕವಾಗಿರುತ್ತಿದ್ದುವು. ಆ ಆಶ್ರಮದಲ್ಲಿ ಮೊದಲಿದ್ದ ಗೋವುಗಳೆಲ್ಲವೂ, ಅಪೇಕ್ಷಿಸಿದಾಗಲೆಲ್ಲಾ ಕೋರಿದಷ್ಟು ಹಾಲುಗಳನ್ನು ಕೊಡುವ ಶಕ್ತಿಯುಳ್ಳವುಗಳಾದುವು. ಪ್ರತಿಯೊಂದು ವೃಕ್ಷದಲ್ಲಿಯೂ ಮಕರಂದರಸವು ಅವಿಚ್ಛಿನ್ನವಾಗಿ ಸುರಿಯುತ್ತಿದ್ದುವು. ಅಲ್ಲಿನ ನಡೆಬಾವಿಗಳೆಲ್ಲವೂ ಮೈರೇಯವೆಂಬ ಮದ್ಯದಿಂದಲೇ ತುಂಬಿಹೋದುವು. ಅದರ ಸುತ್ತಲೂ ಪಾತ್ರೆಗಳಲ್ಲಿ ಚೆನ್ನಾಗಿ ಪಚನಮಾಡಿದ ಮೃಗಮಾಂಸಗಳೂ, ನವಿಲಿನ ಮಾಂಸಗಳೂ, ಕೋಳಿಯ ಮಾಂಸಗಳೂ, ಇರಿಸಲ್ಪಟ್ಟಿದ್ದುವು. ಅಲ್ಲಲ್ಲಿ ಸಾವಿರಾರು ಅನ್ನಕುಂಭಗಳೂ, ಲಕ್ಷೋಪಲಕ್ಷ ವ್ಯಂಜನಪಾತ್ರೆಗಳೂ, ಕೋಟಿಕೋಟಿ ಸಂಖ್ಯೆಯುಳ್ಳ ಸುವರ್ಣಮಯವಾದ ಭೋಜನಪಾತ್ರೆಗಳೂ ತುಂಬಿದ್ದುವು. [1]ಶುಂಠಿ ಮೊದಲಾದ ಪರಿಕರ ದ್ರವ್ಯಗಳನ್ನು

---

[1]ಇಲ್ಲಿ "ಯೌವನಸ್ಥಸ್ಯ ಗೌರಸ್ಯ ಕಪಿತ್ಥಸ್ಯ ಸುಗಂಧಿನಃ । ಹ್ರದಾಃ ಪೂರ್ಣಾ ರಸಾಲಸ್ಯ ದಧ್ನಶ್ಶ್ವೇತಸ್ಯ ಚಾಪರೇ" ಎಂದು ಮೂಲವು. ಇಲ್ಲಿ "ಕಪಿತ್ಥ" ವೆಂದರೆ ಕಡೆದಮಜ್ಜಿಗೆ "ತಕ್ರಂ ಕಪಿತ್ಥಂ ಮಥಿತಂ" ಎಂದು ನಿಘಂಟು ಪ್ರಮಾಣವು. ಹಾಗೆಯೇ "ಆ ಪಕ್ವ ತಕ್ರಂ ಸವ್ಯೋಷಂ ಚತುರ್ಜಾತಗುಡಾರ್ದ್ರಕಂ । ಸಜೀರಕಂ ರಸಾಲಂ ಸ್ಯಾತ್" ಎಂಬಂತೆ ರಸಾಲವೆಂದರೆ ವ್ಯೋಷವೆಂದು, ಕರೆಯಲ್ಪಡುವ ಶುಂಠಿ, ಹಿಪ್ಪಲಿ, ಮೆಣಸು, ಇವುಗಳಿಂದಲೂ, ಏಲಕ್ಕಿ, ಲವಂಗ, ತಕ್ಕೋಲ, ನಾಗಪುಷ್ಪಗಳೆಂಬ ಚತುರ್ಜಾತದಿಂದಲೂ, ಬೆಲ್ಲದಿಂದಲೂ, ಜೀರಿಗೆಯಿಂದಲೂ ಸುವಾಸಿತವಾದ ಪಕ್ವಮಾಡದ ಮೊಸರು ಇವೆಲ್ಲವೂ ಸಿದ್ಧವಾಗಿದ್ದುವೆಂದು ಭಾವವು.

ಹಾಕಿ ಸಂಸ್ಕರಿಸಲ್ಪಟ್ಟ ಮೊಸರಿನಿಂದ ತುಂಬಿದ ಅನೇಕ ಕುಂಭಗಳೂ, ಹರವಿಗಳೂ, ಸಣ್ಣಪಾತ್ರೆಗಳೂ ಹೇರಳವಾಗಿದ್ದುವು. ಅಲ್ಲಲ್ಲಿ ಬಹಳ ಪುರಾತನವೂ ಅಲ್ಲದೆ, ಕೇವಲ ನೂತನವೂ ಅಲ್ಲದೆ, ಬೇಲದಹಣ್ಣಿನ ವಾಸನೆಯಿಂದ ಕೂಡಿ ಶುಭ್ರವಾಗಿದ್ದ ಇಂಬುಳಿಯಾದ ಮಜ್ಜಿಗೆಯ ಮಡುಗಳು ಅಪರಿಮಿತವಾಗಿದ್ದುವು. ಮತ್ತೆ ಕೆಲವು ಕಡೆಗಳಲ್ಲಿ ಹಿಪ್ಪಲಿ, ಮೆಣಸು, ಏಲಕ್ಕಿ, ಲವಂಗ, ತಕ್ಕೋಲ, ನಾಗಕೇಸರಿ, ಜೀರಿಗೆ, ಸಕ್ಕರೆ, ಹಸೀಶುಂಠಿ ಮುಂತಾದ ವಾಸನಾದ್ರವ್ಯಗಳನ್ನು ಸೇರಿಸಿ ಕಡೆದಿಟ್ಟ ಮೊಸರಿನ ಮಡುಗಳೇ ತುಂಬಿದ್ದುವು. ಕೆಲವು ಕೊಳಗಳು ಪಾಯಸದಿಂದಲೇ ತುಂಬಿದ್ದುವು. ಇವುಗಳಿಗೆ ವ್ಯಂಜನಾರ್ಥವಾಗಿ ಪಕ್ಕದಲ್ಲಿ ಸಕ್ಕರೆಯು ರಾಶಿರಾಶಿಯಾಗಿ ಇಡಲ್ಪಟ್ಟಿದ್ದುವು. ಮತ್ತು ನೆಲ್ಲಿಕಾಯಿ ಮುಂತಾದ ಕಲ್ಕಗಳೂ, ಉದ್ದು ಮೊದಲಾದ ಧಾನ್ಯದ ಹಿಟ್ಟುಗಳೂ, ಕಷಾಯಗಳೂ ವಿಧವಿಧವಾದ ಸ್ನಾನ ಪದಾರ್ಥಗಳೂ, ಅಲ್ಲಲ್ಲಿ ಪಾತ್ರೆಗಳಲ್ಲಿ ತುಂಬಿ ನದೀ ತೀರಪ್ರದೇಶಗಳಲ್ಲಿ ಸಾಲಾಗಿ ಇರಿಸಲ್ಪಟ್ಟಿದ್ದುವು, ಮತ್ತು ಅಲ್ಲಿ ನಿರ್ಮಲವಾಗಿಯೂ, ಕೂರ್ಚಗಳುಳ್ಳದಾಗಿಯೂ ಇದ್ದ ಹಲ್ಲುಜ್ಜುವ ಕಡ್ಡಿಗಳು ನದೀ ತೀರಪ್ರದೇಶಗಳಲ್ಲಿ ಅಲ್ಲಲ್ಲಿ ರಾಶಿಹಾಕಲ್ಪಟ್ಟಿದ್ದುವು. ಅಲ್ಲಲ್ಲಿ ಸಿದ್ಧವಾಗಿ ಗಂಧವನ್ನು ತೇದು ಬಟ್ಟಲುಗಳಲ್ಲಿ ತುಂಬಿಟ್ಟಿದ್ದರು. ಅಲ್ಲಲ್ಲಿ ಕನ್ನಡಿಗಳನ್ನು ನಿರ್ಮಲವಾಗಿ ತೊಳೆದಿಟ್ಟಿದ್ದರು. ಅಲ್ಲಲ್ಲಿ ಮಡಿಬಟ್ಟೆಗಳನ್ನು ರಾಶಿಹಾಕಿದ್ದರು. ಅಲ್ಲಲ್ಲಿ ಜತೆಜತೆಯಾದ ಪಾದುಕೆಗಳೂ ಇರಿಸಲ್ಪಟ್ಟಿದ್ದುವು. ಅಲ್ಲಲ್ಲಿ ಕಣ್ಣುಕಪ್ಪಿನ ಕರಡಿಗೆಗಳೂ, ಬಾಚಣಿಗೆಗಳೂ, ಕದವೆಗಳೂ, ಕೂರ್ಚಗಳೂ, ವಿಧವಿಧವಾದ ಶಸ್ತ್ರಗಳೂ, ಯುದ್ಧ ಕವಚವೇ ಮೊದಲಾದ ಸಾಧನಗಳೂ ಅಪರಿಮಿತವಾಗಿ ಸಿದ್ಧಪಡಿಸಲ್ಪಟ್ಟಿದ್ದುವು. ಅಲ್ಲಲ್ಲಿ ವಿಚಿತ್ರ ವಿಚಿತ್ರಗಳಾದ ಹಾಸಿಗೆಗಳೂ, ಆಸನಗಳೂ ಇರಿಸಲ್ಪಟ್ಟಿದ್ದುವು. ಮತ್ತು ಆನೆಗಳು, ಕುದುರೆಗಳು, ಕತ್ತೆಗಳು ಮೊದಲಾದ ಸೈನ್ಯದ ಜಂತುಗಳಿಗೆ, ತಿಂದ ಆಹಾರವನ್ನು ಜೀರ್ಣಮಾಡುವುದಕ್ಕೋಸ್ಕರ ಕುಡಿಸತಕ್ಕ ಕಷಾಯಗಳು ಮಡುವಿನಂತೆ ತುಂಬಿಡಲ್ಪಟ್ಟಿದ್ದುವು. ಸ್ನಾನಮಾಡುವುದಕ್ಕೆ ಯೋಗ್ಯವಾದ ಸೋಪಾನ ಘಟ್ಟಗಳಿಂದ ಕೂಡಿ, ತಾವರೆ ನೈದಿಲೆ ಮೊದಲಾದ ನೀರು ಹೂಗಳಿಂದ ನೇತ್ರಾನಂದಕರವಾಗಿ, ಆಕಾಶದಂತೆ ಸ್ವಚ್ಛವಾದ ನೀರುಳ್ಳದಾಗಿ, ಸುಲಭವಾಗಿ ಸ್ನಾನಮಾಡುವುದಕ್ಕೆ ತಕ್ಕ ನೆಲಗಟ್ಟುಗಳುಳ್ಳದಾಗಿಯೂ, ಇರುವ ಅನೇಕ ಸರೋವರಗಳು ಅಲ್ಲಲ್ಲಿ ತುಂಬಿದ್ದುವು.

ಮತ್ತು ಹಸುಗಳ ಮೇವಿಗಾಗಿ ಅಲ್ಲಲ್ಲಿ ನೀಲರತ್ನದಂತೆಯೂ, ವೈಡೂರ್ಯದಂತೆಯೂ ವಿಚಿತ್ರವರ್ಣವುಳ್ಳ ಮೃದುವಾದ ಎಳಗರಿಕೆಗಳಿಂದ ಕೂಡಿದ ಹುಲ್ಲುಮೈದಾನಗಳು ವಿಸ್ತಾರವಾಗಿ ಕಾಣುತ್ತಿದ್ದುವು. ಇದೆಲ್ಲವನ್ನೂ ನೋಡಿ ಆ ಸೈನಿಕರು ಆಶ್ಚರ್ಯದಿಂದ ಪರವಶರಾಗಿದ್ದರು. ಇದುವರೆಗೆ ಯಾವಾಗಲೂ ಕಂಡು ಕೇಳಿಲ್ಲದ ಈ ಮಹಾದ್ಭುತವನ್ನು ನೋಡಿ "ಇದೇನು ಸ್ವಪ್ನವೋ? ಅಥವಾ ನಿಜವೋ" ಎಂದು ತಮ್ಮಲ್ಲಿ ತಾವೇ ಸಂದೇಹಪಡುತ್ತ, ಎಲ್ಲರೂ ಬೆರಗಾಗಿದ್ದರು. ಭರದ್ವಾಜಮಹರ್ಷಿಯು ಭರತನಿಗೂ, ಆತನ ಸೈನ್ಯಕ್ಕೂ ನಡೆಸಿದ ಈ ಮಹಾದ್ಭುತವಾದ ಔತನವು ಒಬ್ಬೊಬ್ಬರಿಗೂ ಪರಮಾಶ್ಚರ್ಯವನ್ನುಂಟು ಮಾಡಿತು. ನಂದನವನದಲ್ಲಿರುವ ದೇವತೆಗಳಂತೆ ಆ ಆಶ್ರಮದಲ್ಲಿ ವಿಹರಿಸುತ್ತಿದ್ದ ಸೈನಿಕರಿಗೆ ಆ ರಾತ್ರಿಯೆಲ್ಲವೂ ಒಂದು ವಿನಾಡಿಯಂತೆ ಕಳೆದುಹೋಯಿತು. ಆಮೇಲೆ ಭರದ್ವಾಜನ ಆಜ್ಞೆಯಿಂದ ಅಲ್ಲಿಗೆ ಬಂದಿದ್ದ ನದಿಗಳೂ, ಗಂಧರ್ವರೂ ದೇವತೆಗಳೂ, ಅಪ್ಸರಸ್ತ್ರೀಯರೂ, ಆ ಮಹರ್ಷಿಯ ಅನುಮತಿಯನ್ನು ಪಡೆದು, ತಾವು ಬಂದ ದಾರಿಯನ್ನೇ ಹಿಡಿದು ಹೊರಟುಹೋದರು. [1]ಇತ್ತಲಾಗಿ ಸೈನಿಕರೆಲ್ಲರೂ ಮದ್ಯಪಾನದಿಂದ ಮದಿಸಿ, ಗಂಧಪುಷ್ಪಾದಿಗಳಿಂದ ಅಲಂಕೃತರಾಗಿಯೇ ಇದ್ದರು. ಅವರು ಧರಿಸಿದ್ದ ಗಂಧಮಾಲ್ಯಾದಿಗಳೆಲ್ಲವೂ ಅಲ್ಲಲ್ಲಿ ನೆಲದ ಮೇಲೆ ಉದುರಿದ್ದುವು. ಅವು ದೇವತೆಗಳಿಂದ ತರಲ್ಪಟ್ಟುವಾದುದರಿಂದ ಸ್ವಲ್ಪವಾದರೂ ಕಂದಿಕುಂದದೆ ಮೊದಲಿನಂತೆಯೇ ಕಾಣುತ್ತಿದ್ದುವು.

ಇದು ತೊಂಬತ್ತೊಂದನೆಯ ಸರ್ಗವು.

---

[1]ಇಂದ್ರಜಾಲದ ಹಾಗೆ ಅನುಭವ ಕಾಲದಲ್ಲಿ ಮಾತ್ರವೇ ಇದ್ದು ಆಮೇಲೆ ಏನೂ ಇಲ್ಲದಂತಾಗುವುದಲ್ಲ. ಅವೆಲ್ಲವೂ ಯಥಾರ್ಥವೇ ಎಂಬುದನ್ನು ತಿಳಿಸುವುದಕ್ಕಾಗಿ ಈ ವಾಕ್ಯಗಳು ಹೇಳಲ್ಪಟ್ಟವೆ.

ಭರತನು ಭರದ್ವಾಜನಿಗೆ ಕೌಸಲ್ಯಾದಿಗಳನ್ನು ತಿಳಿಸಿದುದು.
ಚಿತ್ರಕೂಟ ಪ್ರಯಾಣವು. ನಡುವೆ ಯಮುನಾ
ತೀರವನವನ್ನು ಪ್ರವೇಶಿಸಿದುದು.

ಹೀಗೆ ಭರತನು ಭರದ್ವಾಜನ ಆತಿಥ್ಯವನ್ನು ಹೊಂದಿದಮೇಲೆ, ರಾಮನನ್ನು ನೋಡುವ ಆತುರದಿಂದ ಭರದ್ವಾಜಮುನಿಯ ಬಳಿಗೆ ಹೋದನು. ಅಷ್ಟರಲ್ಲಿ ಭರದ್ವಾಜಮುನಿಯೂ ಅಗ್ನಿಹೋತ್ರಾದಿ ವಿಧಿಗಳನ್ನು ಮುಗಿಸಿದ್ದನು. ಭರತನು ಹೋಗಿ ಆತನ ಮುಂದೆ ಕೈಮುಗಿದು ನಿಲ್ಲಲು, ಆತನನ್ನು ನೋಡಿ ಋಷಿಯು “ಎಲೈ ಪುರುಷಶ್ರೇಷ್ಠನೇ! ನಿನಗೆ ಈ ನನ್ನಾಶ್ರಮದಲ್ಲಿ ನಿನ್ನೆ ರಾತ್ರಿ ಅಷ್ಟಾಗಿ ಕಷ್ಟವೇನೂ ತೋರಲಿಲ್ಲವಷ್ಟೆ? ನಾನು ಮಾಡಿಸಿದ ಆತಿಥ್ಯಗಳಿಂದ ನಿನ್ನ ಸೈನಿಕರೆಲ್ಲರೂ ತೃಪ್ತಿಪಟ್ಟಿರಬಹುದಲ್ಲವೆ? ಏನಾದರೂ ಲೋಪವಿದ್ದರೆ ತಿಳಿಸು. ನನಗೆ ಅದರ ವಿಚಾರವೇ ಬಹಳವಾಗಿರುವುದು” ಎಂದನು. ಆಗ ಭರತನು ತನಗಿಂತಲೂ ಮೊದಲೇ ತನ್ನನ್ನು ನೋಡಬೇಕೆಂದು ಹೊರಟು ಬರುತ್ತಿದ್ದ ಮಹಾ ತೇಜಸ್ವಿಯಾದ ಆ ಮಹರ್ಷಿಯ ಸೌಂದರ್ಯಕ್ಕೂ, ಸೌಲಭ್ಯಕ್ಕೂ ಪರಮಸಂತುಷ್ಟನಾಗಿ, ಆತನಿಗೆ ವಿನಯದಿಂದ ಸಾಷ್ಟಾಂಗ ಪ್ರಣಾಮವನ್ನು ಮಾಡಿ, ಕೈಮುಗಿದು “ಎಲೈ ಮಹಾತ್ಮನೆ! ಆ ಸೌಖ್ಯವನ್ನು ನಾನೇನೆಂದು ಹೇಳಲಿ! ನಿನ್ನೆಯ ರಾತ್ರಿಯೆಲ್ಲವೂ ನನಗೆ ಬಹು ಸುಖವಾಗಿ ಕಳೆಯಿತು. ನಾನೊಬ್ಬನೇ ಅಲ್ಲ. ನನ್ನ ಮಂತ್ರಿಗಳೂ, ನನ್ನ ಸೈನಿಕರೂ, ನನ್ನ ವಾಹನಗಳೂ ಇನ್ನೂ ನನ್ನೊಡನೆ ಬಂದ ಇತರ ಪರಿವಾರಗಳೆಲ್ಲವೂ ಬೇಕು ಬೇಕಾದ ಸೌಖ್ಯಗಳನ್ನನುಭವಿಸಿ ತೃಪ್ತರಾಗಿರುವರು. ನಮ್ಮ ಪರಿಚಾರಕರು ಮೊದಲುಗೊಂಡು, ಸಮಸ್ತರೂ ಬೇಕುಬೇಕಾದ ಮೃಷ್ಟಾನ್ನ ಭೋಜನ ಗಳನ್ನುಂಡು, ಸುಖವಾಗಿ ವಿಶ್ರಾಂತಿಯನ್ನು ತೆಗೆದುಕೊಂಡರು. ಒಬ್ಬೊಬ್ಬರೂ ಅರಮನೆಯಂತೆ ಸುಖಾಶ್ರಯವಾದ ಬಿಡದಿಗಳಲ್ಲಿ ಮಲಗಿದ್ದರು. ಎಲೈ ಪೂಜ್ಯನೆ! ನಿನ್ನ ಮಹಾ ಪ್ರಭಾವದಿಂದುಂಟಾದ ಈ ಆತಿಥ್ಯದಲ್ಲಿ ಹೇಗೆ ತಾನೇ ಲೋಪಗಳುಂಟಾಗುವುವು! [1]ಅದು ಹಾಗಿರಲಿ! ಈಗ ನಾನು

---

[1] ಭರತನ ಅಂತರ್ಯವನ್ನು ಕಂಡುಕೊಳ್ಳುವುದಕ್ಕಾಗಿಯೇ ಭರದ್ವಾಜನು ಇಷ್ಟು ಆತಿಥ್ಯ ವನ್ನು ನಡೆಸಿರುವನು. ಭರತನಿಗೆ ರಾಮನಲ್ಲಿ ನಿಜವಾದ ಭಕ್ತಿಯಿಲ್ಲದಿದ್ದರೆ, ಈ ಆಶ್ರಮದಲ್ಲಿ ಲಭಿಸಿದ ಭೋಗಸಾಮಗ್ರಿಗಳಲ್ಲಿಯೇ ಮಗ್ನನಾಗಿ, ಇಲ್ಲಿಯೇ ನಡೆದಷ್ಟು ದಿವಸಗಳವರೆಗೆ

ಅಣ್ಣನಾದ ರಾಮನ ಬಳಿಗೆ ಹೊರಡಬೇಕೆಂದಿರುವೆನು. ಅನುಜ್ಞೆಯನ್ನು ಕೊಡಬೇಕು! ದಯಾದೃಷ್ಟಿಯಿಂದ ನಮ್ಮನ್ನು ಅನುಗ್ರಹಿಸಬೇಕು. ಧಾರ್ಮಿಕನಾದ ರಾಮನಿರತಕ್ಕ ಆಶ್ರಮಕ್ಕೆ ಯಾವ ದಾರಿಯಿಂದ ಹೋಗಬೇಕು? ಅದು ಇಲ್ಲಿಗೆ ಇನ್ನೆಷ್ಟು ದೂರದಲ್ಲಿರುವುದು?" ಎಂದನು. ಹೀಗೆ ಅಣ್ಣನನ್ನು ನೋಡಬೇಕೆಂಬ ಆತುರದಿಂದ ಕೇಳುತ್ತಿರುವ ಆ ಭರತನನ್ನು ನೋಡಿ, ಮಹಾತೇಜಸ್ವಿಯಾದ ಆ ಮುನಿಯು "ವತ್ಸ ಭರತನೆ! ಇಲ್ಲಿಗೆ ಎರಡೂವರೆ ಗಾವುದಗಳ ದೂರದಲ್ಲಿ ನಿರ್ಜನವಾದ ವನವೊಂದಿರುವುದು. ಅಲ್ಲಿ ಮಹಾತ್ಮರಾದ ಕೆಲವು ತಪಸ್ವಿಗಳು ಹೊರತು ಬೇರೆ ಸಾಮಾನ್ಯ ಜನರಿಲ್ಲವು. ಆ ವನದ ನಡುವೆ ಅಂದವಾದ ತಪ್ಪಲುಗಳಿಂದಲೂ, ಕಾಡುಗಳಿಂದಲೂ, ಕೂಡಿದ ಚಿತ್ರಕೂಟವೆಂಬ ಪರ್ವತವೊಂದು ಕಾಣುವುದು. ಅದಕ್ಕೆ ಉತ್ತರದಲ್ಲಿ ಮಂದಾಕಿನಿಯೆಂಬ ನದಿಯೊಂದು ಪ್ರವಹಿಸುತ್ತಿರುವುದು. ಅದರ ತೀರದಲ್ಲಿ ಪುಷ್ಪಿತಗಳಾದ ಅನೇಕ ವೃಕ್ಷಗಳು ದಟ್ಟವಾಗಿ ತುಂಬಿರುವುವು. ಅಲ್ಲಿ ಹೂತೋಟಗಳೂ ಹೇರಳವಾಗಿರುವುವು. ಆ ನದಿಯ ಪಕ್ಕದಲ್ಲಿರುವುದೇ ಚಿತ್ರಕೂಟವು. ಅದರಲ್ಲಿ ಪರ್ಣಶಾಲೆಯನ್ನು ಮಾಡಿಕೊಂಡು ನಿನ್ನ ಸಹೋದರರಿಬ್ಬರೂ ವಾಸಮಾಡುತ್ತಿರುವರು. ಎಲೈ ಪುರುಷಶ್ರೇಷ್ಠನೆ! ಇದೋ! ಇಲ್ಲಿ ನಮ್ಮಾಶ್ರಮದ ದಕ್ಷಿಣಕ್ಕೆ ಒಂದು ದಾರಿಯು ಹೋಗುತ್ತಿರುವುದಲ್ಲವೆ? ಈ ದಾರಿಯಿಂದಲೇ ಸ್ವಲ್ಪದೂರದವರೆಗೆ ನಿನ್ನ ಸೈನ್ಯಗಳನ್ನು ನಡೆಸಿಕೊಂಡುಹೋಗಿ, ಆಮೇಲೆ ಅಲ್ಲಿಂದ ನೈಋತ್ಯಕ್ಕೆ ತಿರುಗುವ ದಾರಿಯನ್ನು ಹಿಡಿದುಹೋಗು. ಈ ಕಾಡುದಾರಿಗಳೆಲ್ಲವೂ ಬಹಳ ಸಣ್ಣವಾಗಿರುವುದರಿಂದ, ನಿನ್ನ ಆನೆ, ಕುದುರೆ, ರಥಗಳೆಂಬ ಸಮಸ್ತಸೈನ್ಯಗಳನ್ನೂ ಆ ದಾರಿಯಲ್ಲಿಯೇ ನಡೆಸಿಕೊಂಡು ಹೋಗಬೇಕೆಂದರೆ ಸಾಧ್ಯವಾಗಲಾರದು. ಆದರೆ ದಾರಿಯ ಉಭಯಪಾರ್ಶ್ವಗಳಲ್ಲಿಯೂ ವಿಸ್ತಾರವಾದ ಮೈದಾನಗಳಿರುವುವು. ಅವುಗಳಲ್ಲಿಯೂ ನೀನು ಧಾರಾಳವಾಗಿ ಸೈನ್ಯವನ್ನು ನಡೆಸಿಕೊಂಡು ಹೋಗಬಹುದು. ಇದೇ ದಾರಿಯನ್ನು ಹಿಡಿದುಹೋಗಿ ನೀನು ನಿಮ್ಮಣ್ಣನನ್ನು ನೋಡಬಹುದು." ಎಂದನು. ಈ ಪ್ರಯಾಣಸನ್ನಾಹವನ್ನು ಕೇಳಿದೊಡನೆಯೇ

ನಿಂತುಬಿಡುವನೆಂದು ಆ ಋಷಿಯ ಅಭಿಪ್ರಾಯವು. ಹಾಗಿದ್ದರೂ ಭರತನು ಅದರಲ್ಲಿ ಮಗ್ನನಾಗದೆ ರಾಮದರ್ಶನಾತುರದಿಂದಲೇ ಕಳವಳಿಸುತ್ತಿದ್ದುದನ್ನು ನೋಡಿ ಭರದ್ವಾಜನಿಗೆ ಪೂರ್ಣವಾದ ನಂಬಿಕೆಯುಂಟಾಯಿತೆಂದು ಗ್ರಹಿಸಬೇಕು.

ದಶರಥನ ಭಾರ್ಯೆಯರೆಲ್ಲರೂ, ತಾವು ವಾಹನವನ್ನು ಬಿಟ್ಟು ಹೊರಗೆ ಬರಬಾರದಾಗಿದ್ದರೂ, ಆ ಮಹರ್ಷಿಯಲ್ಲಿ ಗೌರವದಿಂದ ಇಳಿದು ಬಂದು ಭರದ್ವಾಜನ ಮುಂದೆ ನಿಂತರು. ಅವರಲ್ಲಿ ಮೊದಲು ದುಃಖದಿಂದ ಕಂದಿ ಕೃಶಳಾಗಿದ್ದ ಕೌಸಲ್ಯೆಯು ನಡುಗುತ್ತ, ಸುಮಿತ್ರೆಯೊಡಗೂಡಿ ಮುಂದೆಬಂದು ಆ ಮಹರ್ಷಿಯ ಪಾದಗಳೆರಡನ್ನೂ ಹಿಡಿದು ನಮಸ್ಕರಿಸಿದಳು. ಇವರನ್ನು ನೋಡಿದ ಮೇಲೆ ಕೈಕೇಯಿಯೂ ಮುಂದೆ ಬಂದಳು. ತಾನು ಕೋರಿದ ಕಾರ್ಯಗಳೆಲ್ಲವೂ ನಿಷ್ಫಲವಾದುದಲ್ಲದೆ, ಅದರಿಂದ ದೊಡ್ಡ ಲೋಕಾಪವಾದಕ್ಕೂ ತಾನು ಗುರಿಯಾಗಬೇಕಾಯಿತೆಂಬ ನಾಚಿಕೆಯಿಂದ, ಅವಳು ತಲೆಯನ್ನೆತ್ತದೆಯೇ ಮುಂದೆ ಹೋಗಿ ಋಷಿಯ ಪಾದಕ್ಕೆ ನಮಸ್ಕರಿಸಿದಳು. ಆಮೇಲೆ ಆಕೆಯು ಆ ಮಹರ್ಷಿಯ ಮುಂದೆ ನಿಲ್ಲುವುದಕ್ಕೂ ನಾಚಿಕೊಂಡು ಆ ಮಹಾತ್ಮನನ್ನು ಪ್ರದಕ್ಷಿಣಮಾಡುವ ನೆವದಿಂದ, ಆತನ ಹಿಂಭಾಗದಿಂದ ಹೊರಟು ಭರತನಿದ್ದ ಕಡೆಗೆ ಬಂದು ಮರೆಯಾಗಿ ನಿಂತಿದ್ದಳು. ಆಮೇಲೆ ವ್ರತನಿಷ್ಠನಾದ ಭರದ್ವಾಜನು ಭರತನನ್ನು ನೋಡಿ, [1]"ವತ್ಸನೇ! ನಿನ್ನ ಈ ಮಾತೆಯರಲ್ಲಿ ಅವರವರ ಹೆಸರೇನೆಂದು ತಿಳಿಸು" ಎಂದನು, ಅದಕ್ಕಾ ಭರತನು ಭರದ್ವಾಜಮಹರ್ಷಿಗೆ ಕೈಮುಗಿದು ನಿಂತು, "ಮಹಾತ್ಮನೆ! ಇದೋ ಇಲ್ಲಿ ದುಃಖದಿಂದ ನಿದ್ರಾಹಾರಗಳಿಲ್ಲದೆ ಕೃಶಳಾಗಿ ಧರ್ಮದೇವತೆಯಂತೆ ನಿನ್ನ ಮುಂದೆ ನಿಂತಿರುವವಳೇ ಕೌಸಲ್ಯೆಯೆಂಬವಳು. ಇವಳೇ ಪೂಜ್ಯನಾದ ನನ್ನ ತಂದೆಗೆ ಪಟ್ಟಮಹಿಷಿಯು. ಅದಿತಿಯು ಮಹಾವಿಷ್ಣುವನ್ನು ಪಡೆದಂತೆ, ಈಕೆಯೇ ಸಿಂಹವಿಕ್ರಮನಾಗಿ ಪುರುಷಸಿಂಹನೆನಿಸಿಕೊಂಡ ಆ ರಾಮನನ್ನು ಪಡೆದವಳು. ಇದೋ! ಇಲ್ಲಿ ಕೌಸಲ್ಯೆಯ ಎಡದಭುಜವನ್ನು ಹಿಡಿದು, ಕಾಡಿನಲ್ಲಿ ಉದುರಿಹೋದ ಪುಷ್ಪಗಳುಳ್ಳ ಕರ್ಣಿಕಾರ ವೃಕ್ಷದ ಶಾಖೆಯಂತೆ ದುಃಖದಿಂದ ಕೃಶಳಾಗಿ ನಿಂತಿರುವ ಆಕೆಯೇ ಸುಮಿತ್ರೆಯೆಂಬವಳು. ಅಶ್ವಿನೀದೇವತೆಗಳಂತೆ ದಿವ್ಯರೂಪವುಳ್ಳವರಾಗಿಯೂ ವೀರರಾಗಿಯೂ, ಸತ್ಯಪರಾಕ್ರಮವುಳ್ಳವರಾಗಿಯೂ ಇರುವ ಲಕ್ಷ್ಮಣಶತ್ರುಘ್ನರಿಬ್ಬರೂ ಈಕೆಯ ಮಕ್ಕಳು. ಎಲೈ ಮಹಾತ್ಮನೆ! ಅದೋ ಅಲ್ಲಿ ನೋಡು!

---

[1]ಸರ್ವಜ್ಞನಾದ ಭರದ್ವಾಜನು ಕೌಸಲ್ಯಾದಿಗಳನ್ನು ತಿಳಿಯದವನಲ್ಲ. ಹಾಗಿದ್ದರೂ ಭರತನ ಮೂಲಕವಾಗಿ ಕೈಕೇಯಿಯ ಯೋಗ್ಯತೆಯನ್ನು ಹೊರಪಡಿಸಬೇಕೆಂಬುದಕ್ಕಾಗಿಯೇ ಹೀಗೆ ಏನೂ ತಿಳಿಯದವನಂತೆ ಕೇಳಿರುವನು.

ಯಾವಳ ದೆಸೆಯಿಂದ ಪುರುಷಶ್ರೇಷ್ಠರಾದ ರಾಮಲಕ್ಷ್ಮಣರಿಬ್ಬರೂ ಪ್ರಾಣಾಂತಕವಾದ ಕಷ್ಟಕ್ಕೆ ಗುರಿಮಾಡಲ್ಪಟ್ಟು ಕಾಡುಪಾಲಾಗಿ ಹೊರಟು ಹೋಗಿರುವರೋ, ಯಾವಳ ದೆಸೆಯಿಂದ ರಾಜಾಧಿರಾಜನಾದ ದಶರಥನು ಪುತ್ರ ವಿರಹಕ್ಕೆ ಗುರಿಯಾಗಿ ಮೃತ್ಯುವಶನಾದನೋ, ಅಂತಹ ಮಹಾಕ್ರೂರೆಯೂ, ವಿವೇಕಶೂನ್ಯಳೂ, ಕೋಪಾತ್ಮಳೂ, ತಾನೇ ತ್ರಿಲೋಕಸುಂದರಿಯೆಂಬ ಅಹಂಭಾವವುಳ್ಳವಳೂ, ಐಶ್ವರ್ಯದಲ್ಲಿ ಪರಮಲೋಭವುಳ್ಳವಳೂ ಆದ ಆಕೆಯೇ ಕೈಕೇಯಿಯೆಂಬವಳು. ಹೊರಗೆಮಾತ್ರ ಬಹುಯೋಗ್ಯಳಂತೆ ಕಾಣುತ್ತಿದ್ದರೂ, ಪರಮ ಘಾತುಕಿಯಾಗಿ, ಪಾಪಬುದ್ಧಿಯುಳ್ಳವಳಾಗಿರುವ ಈಕೆಯ ಹೊಟ್ಟೆಯಲ್ಲಿ ಹುಟ್ಟಬೇಕಾದ ದೌರ್ಭಾಗ್ಯಕ್ಕೆ ನಾನೇ ಗುರಿಯಾದೆನು. ಈಕೆಯಿಂದಲೇ ನಾನೂ ಇಂತಹ ಘೋರವಾದ ವ್ಯಸನದಲ್ಲಿ ಸಿಕ್ಕಿ ನರಳಬೇಕಾಯಿತು." ಎಂದು ಹೇಳುತ್ತ, ಭರತನು ಕೊನೆಕೊನೆಗೆ ಗದ್ಗದಸ್ವರವುಳ್ಳವನಾಗಿ, ಕಣ್ಣಿನಲ್ಲಿ ನೀರುತುಂಬಿಕೊಂಡು, ಕೆಂಪಾದ ಕಣ್ಣುಗಳುಳ್ಳವನಾಗಿ, ಕೋಪದಿಂದ ಬುಸು ಗುಟ್ಟುತ್ತಿರುವ ಸರ್ಪದಂತೆ ಉದ್ದವಾಗಿ ನಿಟ್ಟುಸಿರನ್ನು ಬಿಟ್ಟನು. ಹೀಗೆ ದುಃಖದಿಂದ ಮಾತಾಡುತ್ತಿರುವ ಭರತನನ್ನು ನೋಡಿ, ಮಹಾಧೀಮಂತನಾದ ಭರದ್ವಾಜನು, ಯುಕ್ತಿಯುಕ್ತವಾದ ಮಾತುಗಳಿಂದ ಆತನನ್ನು ಸಮಾಧಾನ ಪಡಿಸುತ್ತ, "ವತ್ಸ ಭರತನೆ! ಚಿಂತಿಸಬೇಡ! [1]ನೀನು ಕೈಕೇಯಿಯ ವಿಷಯ ದಲ್ಲಿ ಹಾಗೆ ದೋಷವನ್ನೆಣಿಸಬೇಡ! ರಾಮನನ್ನು ಕಾಡಿಗೆ ಕಳುಹಿಸಿದುದು ಮುಂದಿನ ಶ್ರೇಯಸ್ಸಿಗಾಗಿಯೇ ಹೊರತು ಬೇರೆಯಲ್ಲ. ಇದರಿಂದ ಮುಂದೆ ಬಹಳ ಸೌಖ್ಯವುಂಟು. ಇದರಿಂದ ದೇವತೆಗಳಿಗೂ, ದಾನವರಿಗೂ, ಆತ್ಮನಿಷ್ಠ ರಾದ ಮಹರ್ಷಿಗಳಿಗೂ ಅನೇಕ ವಿಧದಲ್ಲಿ ಕ್ಷೇಮವುಂಟು" ಎಂದನು. ಆಮೇಲೆ ಭರತನು ಆತನಿಗೆ ನಮಸ್ಕರಿಸಿ, ಆತನ ಆಶೀರ್ವಾದಗಳನ್ನು ಪಡೆದು, ಆತನನ್ನು ಪ್ರದಕ್ಷಿಣಮಾಡಿ, ಅನುಜ್ಞೆಯನ್ನು ಪಡೆದು, ಮುಂದಿನ ಪ್ರಯಾಣಕ್ಕೆ ಸೈನ್ಯ ಗಳನ್ನು ಸಿದ್ಧಪಡಿಸುವಂತೆ ಆಜ್ಞಾಪಿಸಿದನು. ಆಗಲೇ ಸೈನಿಕರೆಲ್ಲರೂ ತಮ್ಮ

---

[1]ಇಲ್ಲಿ ದೈವಪ್ರೇರಣೆಯಿಂದಲೇ ಕೈಕೇಯಿಯು ಈ ತಂತ್ರವನ್ನು ನಡೆಸಿರುವಳೆಂದೂ ರಾವಣಾದಿಗಳನ್ನು ಕೊಲ್ಲುವುದರ ಮೂಲಕವಾಗಿ ಇದರಿಂದ ಲೋಕಕ್ಷೇಮವುಂಟಾಗುವು ದೆಂದೂ, ಸರ್ವಜ್ಞನಾದ ಆ ಭರದ್ವಾಜನು ಜ್ಞಾನದೃಷ್ಟಿಯಿಂದರಿತು ಅವರಿಗೆ ಸೂಚಿ ಸಿರುವನು.

ತಮ್ಮ ಆನೆ, ಕುದುರೆ, ರಥಗಳೆಲ್ಲವನ್ನೂ ಅಲಂಕರಿಸಿಕೊಂಡು, ಆಯಾ ವಾಹನಗಳನ್ನೇರಿ ಪ್ರಯಾಣಸನ್ನದ್ಧರಾಗಿದ್ದರು. ಅಲ್ಲಿ ಹೆಣ್ಣಾನೆಗಳೂ ಗಂಡಾನೆಗಳೂ, ಸುವರ್ಣಮಯವಾದ ಪಕ್ಷರಕ್ಷೆಗಳಿಂದಲಂಕರಿಸಲ್ಪಟ್ಟು, ಮೇಲೆತ್ತಿ ಹಿಡಿಯಲ್ಪಟ್ಟ ಧ್ವಜಪತಾಕೆಗಳುಳ್ಳದಾಗಿ, ಮಳೆಗಾಲದಲ್ಲಿ ಗುಡುಗುತ್ತಿರುವ ಮೇಘಗಳಂತೆ ಘಂಟಾಧ್ವನಿಗಳೊಡನೆ ಹೊರಟುವು. ರಥಗಳೇ ಮೊದಲಾದ ದೊಡ್ಡದೊಡ್ಡ ವಾಹನಗಳೂ, ಪಲ್ಲಕ್ಕಿ ಮೊದಲಾದ ಸಣ್ಣ ವಾಹನಗಳೂ ಪರಿಷ್ಕೃತಗಳಾಗಿ ಸಾಗುತ್ತಿದ್ದುವು. ಕಾಲಾಳುಗಳೆಲ್ಲರೂ ಕಾಲುನಡೆಯಿಂದಲೇ ಸಾಲಾಗಿ ಹೊರಟರು. ಆಗ ಕೌಸಲ್ಯೆಯೇ ಮೊದಲಾದ ಸ್ತ್ರೀಯರು, ರಾಮನನ್ನು ನೋಡಬೇಕೆಂಬ ಅತ್ಯಾತುರದಿಂದ, ತಮ್ಮ ತಮ್ಮ ಉತ್ತಮವಾದ ವಾಹನಗಳನ್ನೇರಿ ಸಂತೋಷದಿಂದ ಹೊರಟರು. ಶ್ರೀಮಂತನಾದ ಭರತನು ಚಂದ್ರಸೂರ್ಯರಂತೆ ಹೊಳೆಯುತ್ತಿರುವ ಉತ್ತಮವಾದ ಪಲ್ಲಕ್ಕಿಯೊಂದನ್ನು ಏರಿ, ಪರಿವಾರಸಮೇತನಾಗಿ ಹೊರಟನು. ಹೀಗೆ ಆನೆಗಳಿಂದಲೂ, ಕುದುರೆಗಳಿಂದಲೂ, ರಥಗಳಿಂದಲೂ ತುಂಬಿದ ಆ ಮಹಾಸೈನ್ಯವು ದಕ್ಷಿಣಾಭಿಮುಖವಾಗಿ ಹೊರಟು, ಮಹಾಮೇಘಪರಂಪರೆಗಳಂತೆ ಆ ಪ್ರದೇಶವೆಲ್ಲವನ್ನೂ ವ್ಯಾಪಿಸಿತು. ವಿಚಿತ್ರ ವಿಚಿತ್ರಗಳಾದ ಮೃಗ ಪಕ್ಷಿಗಳಿಂದ ತುಂಬಿದ ಅನೇಕ ವನಗಳನ್ನು ದಾಟಿ, ಗಂಗೆಯ ಆಚೆಯ ದಡದಲ್ಲಿದ್ದ ಬೆಟ್ಟಗಳಲ್ಲಿಯೂ, ನದಿಗಳಲ್ಲಿಯೂ, ವಿಶ್ರಾಂತಿಯನ್ನು ತೆಗೆದುಕೊಂಡು ಮುಂದೆ ಹೋಗುತ್ತಿದ್ದರು. ಆನೆ ಕುದುರೆ ಮೊದಲಾದ ಚತುರಂಗಸೈನ್ಯವೂ ಅಲ್ಲಲ್ಲಿ ದಾರಿಯಲ್ಲಿದ್ದ ಮೃಗ ಪಕ್ಷಿಗಳನ್ನು ಹೆದರಿಸುವಂತೆ ಉತ್ಸಾಹದಿಂದ ಕೋಲಾಹಲ ಧ್ವನಿಗಳನ್ನು ಮಾಡುತ್ತ, ಮುಂದಿದ್ದ ಒಂದು ದೊಡ್ಡ ಮಹಾರಣ್ಯವನ್ನು ಪ್ರವೇಶಿಸಿ ಅತಿ ವೈಭವದಿಂದ ಪ್ರಕಾಶಿಸುತ್ತಿತು.

ಇದು ತೊಂಬತ್ತೆರಡನೆಯ ಸರ್ಗವು.

ಭರತನು ಚಿತ್ರಕೂಟ ವನವನ್ನು ಪ್ರವೇಶಿಸಿದುದು. ವನವರ್ಣನವು.
ರಾಮಾಶ್ರಮವನ್ನು ಹುಡುಕುತ್ತಿದ್ದುದು.

ಆ ದೊಡ್ಡ ಸೈನ್ಯವು ಹೋಗುತ್ತಿರುವಾಗ ಕಾಡಿನಲ್ಲಿರುವ ಮೃಗಗಳೆಲ್ಲವೂ ಭಯದಿಂದ ಓಡುತ್ತಿದ್ದುವು. ಕರಡಿಗಳೂ, ಜಿಂಕೆಗಳೂ, ಕೃಷ್ಣಸಾರಂಗಗಳೆಂಬ ಮಚ್ಚೆಯಿಲ್ಲದ ಜಿಂಕೆಗಳೂ, ಗುಂಪು ಗುಂಪಾಗಿ ಬೆಟ್ಟಗಳ ಮಾರ್ಗವಾಗಿಯೂ ಕಾಡುಗಳ ಮಾರ್ಗವಾಗಿಯೂ, ನದೀತೀರಗಳ ಮಾರ್ಗವಾಗಿಯೂ ಸಿಕ್ಕಿದ ಕಡೆಗೆ ಓಡಿಹೋಗುತ್ತಿದ್ದುವು. ಧರ್ಮಾತ್ಮನಾದ ಭರತನು ಈ ವಿನೋದಗಳನ್ನು ನೋಡಿ ಸಂತೋಷಪಡುತ್ತ, ಮಹತ್ತಾದ ತನ್ನ ಚತುರಂಗಸೈನ್ಯದಿಂದ ಪರಿವೃತನಾಗಿ ಹೋಗುತ್ತಿದ್ದನು. ಮಹಾ ಸಮುದ್ರದಂತೆ ಅಪಾರವಾದ ಆ ಭರತನ ಸೈನ್ಯವು. ವರ್ಷಾಕಾಲದಲ್ಲಿ ಮೇಘಪರಂಪರೆಗಳು ಆಕಾಶವನ್ನು ಮುಚ್ಚಿಕೊಳ್ಳುವಂತೆ ಆ ವನಪ್ರದೇಶವೆಲ್ಲವನ್ನೂ ಮರೆತು, ಕುದುರೆಗಳ ಸಾಲುಗಳಿಂದಲೂ, ಮಹಾ ವೇಗವುಳ್ಳ ಆನೆಗಳಿಂದಲೂ ವ್ಯಾಪ್ತವಾಗಿ ಬಹುಕಾಲದವರೆಗೆ ಆ ಭೂಭಾಗ ವೆಲ್ಲವೂ ನೆಲವೇ ಕಾಣದಂತೆ ಮುಚ್ಚಿಹೋಗಿತ್ತು. ಹೀಗೆ ಬಹುದೂರ ಪ್ರಯಾಣ ಮಾಡಿ ವಾಹನಗಳೆಲ್ಲವೂ ಬಳಲಿರುವುದನ್ನು ನೋಡಿ, ಭರತನು ತನಗೆ ಮಂತ್ರಿ ಯಂತಿರುವ ಪುರೋಹಿತನಾದ ವಸಿಷ್ಠನನ್ನು ಕುರಿತು 'ಎಲೈ ಮಹಾತ್ಮನೆ! ನಾವು ಮೊದಲು ಈ ವನಪ್ರದೇಶವು ಹೇಗಿರುವುದೆಂದು ಎಣಿಸಿದ್ದೆವೋ, ಇತರರಿಂದ ಇದರ ಸ್ವರೂಪವನ್ನು ಕುರಿತು ಹೇಗೆ ಕೇಳಿದ್ದೆವೋ ಹಾಗೆಯೇ ಎಲ್ಲವೂ ಸ್ಪಷ್ಟವಾಗಿ ಕಾಣುವುವು. ಭರದ್ವಾಜಮಹಾಮುನಿಯು ಹೇಳಿದ್ದಂತೆಯೇ ಕಾಣುತ್ತಿರುವ ಪ್ರದೇಶಕ್ಕೆ ಬಂದುಬಿಟ್ಟೆವು. ಇದೋ! ಈ ಪರ್ವತವೇ ಚಿತ್ರಕೂಟವು. ಇದೇ ಮಂದಾಕಿನೀ ನದಿಯು. ದೂರದಿಂದ ನೋಡಿದರೆ ನೀಲಮೇಘದಂತೆ ಕಾಣು ತ್ತಿರುವ ಮಹಾರಣ್ಯವು ಇಲ್ಲಿಗೇ ಗೋಚರಿಸುತ್ತಿರುವುದಲ್ಲವೆ! ಇದೋ! ಈ ಚಿತ್ರ ಕೂಟದ ತಪ್ಪಲುಗಳೆಲ್ಲವೂ ಅತಿಮನೋಹರವಾಗಿರುವುವು. ಪರ್ವತಗಳಂತೆ ಮಹೋನ್ನತಗಳಾದ ನಮ್ಮ ಆನೆಗಳೆಲ್ಲವೂ ಆ ಪ್ರದೇಶದ ವನಗಳನ್ನು ಮುರಿದು ಹಾಕುತ್ತಿರುವುವು. ಈ ತಪ್ಪಲುಗಳಲ್ಲಿರುವ ಗಿಡಗಳೆಲ್ಲವೂ ವರ್ಷಾಕಾಲದಲ್ಲಿ ಕಾಲಮೇಘಗಳು ಮಳೆಯನ್ನು ಸುರಿಯುವಂತೆ ತಮ್ಮಷ್ಟಕ್ಕೆ ತಾವೇ ಪುಷ್ಪವೃಷ್ಟಿ ಯನ್ನು ಕರೆಯುತ್ತಿರುವುವು" ಎಂದುಹೇಳಿ ಶತ್ರುಘ್ನನ ಕಡೆಗೆ ತಿರುಗಿ "ವತ್ಸ

ಶತ್ರುಘ್ನನೆ! ಇದೋ ನೋಡು! ಸಮುದ್ರವು ಮೊಸಳೆಗಳಿಂದ ತುಂಬಿರುವಂತೆ, ಸುತ್ತಲೂ ಅನೇಕ ಮೃಗಸಮೂಹದಿಂದ ವ್ಯಾಪ್ತವಾಗಿ, ಕಿನ್ನರರ ಸಂಚಾರಕ್ಕೆ ನಿತ್ಯಾಶ್ರಯವಾದ ಈ ಪರ್ವತವನ್ನು ನೋಡಿದೆಯಾ! ಶರತ್ಕಾಲದಲ್ಲಿ ವಾಯುವಿನಿಂದ ಓಡಿಸಲ್ಪಟ್ಟ ಮೇಘಪರಂಪರೆಯು ಆಕಾಶದಲ್ಲಿ ಅತಿವೇಗವಾಗಿ ಓಡುವಂತೆ, ಇದೋ ಇಲ್ಲಿ ಮೃಗಗಳೆಲ್ಲವೂ ನಮ್ಮ ಸೈನಿಕರಿಂದ ಓಡಿಸಲ್ಪಟ್ಟು ಬಹುವೇಗವಾಗಿ ಓಡುತ್ತಿರುವುವು. ಇದೋ? ಇಲ್ಲಿ ನೋಡು! ದಕ್ಷಿಣದೇಶದ ಜನಗಳು ಹೇಗೆ ಕಪ್ಪಾಗಿ ಮಿನುಗುತ್ತಿರುವ ತಮ್ಮ ತಲೆಕೂದಲುಗಳನ್ನು ಅಂದವಾಗಿ ಎತ್ತಿಕಟ್ಟಿ, ಅವುಗಳಿಗೆ ಹೂಗಳನ್ನು ಮುಡಿದಿಡುವಂತೆ, ಈ ಗಿಡಗಳೂ ಕಪ್ಪಾದ ತಮ್ಮ ಶಾಖಾಗ್ರಗಳಲ್ಲಿ ಸುವಾಸನೆಯುಳ್ಳ ಹೂಗಳನ್ನು ಧರಿಸಿರುವುವು. ಭಯಂಕರವಾಗಿ ಕಾಣತಕ್ಕ ಈ ಅರಣ್ಯವೂ ಕೂಡ ಮೊದಲು ಮನುಷ್ಯರ ಶಬ್ದವೇ ಇಲ್ಲದಿದ್ದು, ಈಗ ನಮ್ಮ ಸೈನಿಕರ ಕೋಲಾಹಲದಿಂದ ಕೂಡಿ ವಿಶೇಷ ಜನಭರಿತವಾಗಿರುವುದನ್ನು ನೋಡಿದರೆ, ನಮ್ಮ ಅಯೋಧ್ಯೆಯಂತೆಯೇ ನನಗೆ ಕಾಣುತ್ತಿರುವುದು. ನಮ್ಮ ಸೈನ್ಯದಲ್ಲಿರುವ ಕುದುರೆಗಳ ಗೊರಸಿನಿಂದೆದ್ದ ಧೂಳಿಯು ಆಕಾಶವೆಲ್ಲವನ್ನೂ ವ್ಯಾಪಿಸಿರುವುದನ್ನು ನೋಡಿದೆಯಾ? ಆದರೆ ಗಾಳಿಯು ಆ ರೇಣುಪರಂಪರೆಯನ್ನು ಆಯಾ ಕ್ಷಣವೇ ಸಾಗಿಸಿಕೊಂಡು ಹೋಗುವುದರಿಂದ, ನನಗೆ ಪ್ರಿಯವನ್ನುಂಟುಮಾಡುವಂತೆ ತೋರುತ್ತಿದೆ! ಹಾಗಿಲ್ಲದಿದ್ದರೆ ನಮಗೆ ರಾಮನ ಆಶ್ರಮವನ್ನು ಕಂಡುಹಿಡಿಯುವುದೇ ಅಸಾಧ್ಯವಾಗುತ್ತಿತ್ತಲ್ಲವೆ? ಎಲೆ ವತ್ಸನೆ! ಇದೋ ನೋಡು! ನಮ್ಮ ಸಾರಥಿಗಳು, ರಾಮನನ್ನು ನೋಡಬೇಕೆಂಬ ಆತುರದಿಂದ ಕಾಡಿನಲ್ಲಿ ವೇಗವತ್ತಾದ ಕುದುರೆಗಳಿಂದ ಕೂಡಿದ ತಮ್ಮ ರಥಗಳನ್ನು ಎಷ್ಟು ಶೀಘ್ರದಿಂದ ನಡೆಸಿಕೊಂಡು ಬರುವರು ನೋಡಿದೆಯಾ? ಇದೋ! ಇಲ್ಲಿ ಅಂದವಾದ ಗರಿಗಳಿಂದ ಕೂಡಿ, ನೋಡುವುದಕ್ಕೆ ಅತಿಮನೋಹರವಾದ ಈ ನವಿಲುಗಳೆಲ್ಲವೂ ನಮ್ಮ ಸೈನ್ಯವನ್ನು ನೋಡಿ ಹೆದರಿ ಓಡಿಹೋಗಿ ತಮ್ಮ ತಮ್ಮ ಗೂಡುಗಳಲ್ಲಿ ಸೇರಿಕೊಳ್ಳುತ್ತಿರುವುವು. ನನಗಾದರೋ ಈ ಪ್ರದೇಶವೆಲ್ಲವೂ ಅತಿ ಮನೋಹರವಾಗಿರುವಂತೆ ಕಾಣುವುವು. ನಾನು ಇದನ್ನೇ ಸ್ವರ್ಗದಂತೆ ಎಣಿಸುವೆನು. ಇದು ತಪಸ್ವಿಗಳಿಗೆ ಸುಖಾಶ್ರಯವೆಂಬುದರಲ್ಲಿ ಸಂದೇಹವಿಲ್ಲ. ಇದೋ! ಇಲ್ಲಿ ಅಸಂಖ್ಯಾತಗಳಾದ ಜಿಂಕೆಗಳು ಹೆಣ್ಣು ಜಿಂಕೆಗಳೊಡಗೂಡಿ ಸಂಚರಿಸುತ್ತಿರುವುವು. ಚಿಳೀಮಚ್ಚೆಗಳುಳ್ಳ ಈ

ಜಿಂಕೆಗಳು ಎಷ್ಟೋ ಮನೋಹರವಾಗಿರುವುವು. ಇವುಗಳ ಮೈಯೆಲ್ಲವೂ ಹೂಗಳಿಂದ ಚಿತ್ರಕೆಲಸ ಮಾಡಲ್ಪಟ್ಟಂತೆ ಅಂದವಾಗಿ ಕಾಣುತ್ತಿರುವುವು. ಎಲೆ ವತ್ಸನೆ! ನಮಗೆ ಈ ವಿನೋದಗಳಿಂದೇನು! ಸೈನ್ಯಗಳೆಲ್ಲವನ್ನೂ ಕಳುಹಿಸಿ ಈ ಅರಣ್ಯದಲ್ಲಿ ರಾಮಲಕ್ಷ್ಮಣರಿರುವ ಆಶ್ರಮವಾವುದೆಂಬುದನ್ನು ಕಂಡು ಹಿಡಿಯಬೇಕು. ಆದುದರಿಂದ ಈಗಲೇ ಸೈನ್ಯಗಳು ನಾನಾದಿಕ್ಕುಗಳಿಗೂ ಹೊರಡಲಿ! ಪುರುಷಶ್ರೇಷ್ಠರಾದ ಆ ರಾಮಲಕ್ಷ್ಮಣರಿರುವ ಸ್ಥಳವನ್ನು ಹುಡುಕಿ ಬರಲಿ?" ಎಂದನು. ಈ ಮಾತು ಕಿವಿಗೆ ಬಿದ್ದೊಡನೆಯೇ ಕೆಲವು ವೀರಭಟರು ಆಯುಧಪಾಣಿಗಳಾಗಿ ಆ ಕಾಡಿಗೆ ಪ್ರವೇಶಿಸಿದರು. ಅದರ ನಡುವೆ ದೊಡ್ಡ ಹೊಗೆಯಾಡುತ್ತಿರುವುದನ್ನೂ ನೋಡಿದರು. ಇದನ್ನು ನೋಡಿದೊಡನೆಯೇ ಅವರೆಲ್ಲರೂ ಹಿಂತಿರುಗಿ ಭರತನ ಬಳಿಗೆ ಓಡಿಬಂದು "ಎಲೈ ರಾಜಪುತ್ರನೆ! ಅದೋ! ಅಲ್ಲಿ ಹೊಗೆಯು ಕಾಣುತ್ತಿರುವುದು. ಆದುದರಿಂದ ಅಲ್ಲಿ ಯಾರೋ ಮನುಷ್ಯರಿರಬೇಕು. ಮನುಷ್ಯರಿಲ್ಲದ ಕಡೆಯಲ್ಲಿ ಹೊಗೆಗೆ ಕಾರಣವಿಲ್ಲವಲ್ಲವೆ? ಆದುದರಿಂದ ರಾಮಲಕ್ಷ್ಮಣರು ಅಲ್ಲಿಯೇ ಇರಬೇಕು. ಒಂದುವೇಳೆ ಪುರುಷ ಶ್ರೇಷ್ಠರಾದ ಆ ರಾಜಕುಮಾರರು ಅಲ್ಲಿಲ್ಲದಿದ್ದರೂ ಬೇರೆ ತಪಸ್ವಿಗಳಾದರೂ ಅಲ್ಲಿ ಆಶ್ರಮವನ್ನು ಕಟ್ಟಿಕೊಂಡಿರಬೇಕು. ಇದರಲ್ಲಿ ಸಂದೇಹವಿಲ್ಲ" ಎಂದರು. ಈ ಮಾತನ್ನು ಕೇಳಿ ಭರತನು ತನ್ನ ಸಮಸ್ತ ಸೈನ್ಯವನ್ನೂ ನೋಡಿ "ಎಲೈ ಸೈನಿಕರೆ! ನೀವೆಲ್ಲರೂ ಎಚ್ಚರಿಕೆಯಿಂದ ಇಲ್ಲಿಯೇ ಇರಬೇಕು. ಇಲ್ಲಿಂದ ಮುಂದೆ ನೀವು ನನ್ನನ್ನು ಹಿಂಬಾಲಿಸಿ ಬರಬೇಕಾದ ಆವಶ್ಯಕವಿಲ್ಲ. ಸುಮಂತ್ರನನ್ನೂ, ವಸಿಷ್ಠನನ್ನೂ ಕರೆದುಕೊಂಡು ನಾನು ಮಾತ್ರ ಹೋಗು ವೆನು" ಎಂದನು. ಭರತನು ಹೀಗೆ ಆಜ್ಞಾಪಿಸಿದುದನ್ನು ಕೇಳಿ ಆ ಸೈನಿಕ ರೆಲ್ಲರೂ ಅಲ್ಲಿಯೇ ನಿಂತುಬಿಟ್ಟರು. ಭರತನು ಮುಂದೆ ಹೊರಟು ಆ ಹೊಗೆಯು ಹೊರಡುತ್ತಿದ್ದ ಪ್ರದೇಶವನ್ನೇ ನೋಡುತ್ತ ಮುಂದೆ ನಡೆದನು. ಇತ್ತಲಾಗಿ ಭರತನಿಂದ ತಡೆದಿರಿಸಲ್ಪಟ್ಟ ಸೈನಿಕರೂ, ಅಲ್ಲಿಯೇ ನಿಂತು, ಆ ಹೊಗೆಯನ್ನೇ ಕಣ್ಣಿಟ್ಟು ನೋಡುತ್ತ, ಇನ್ನು ಶೀಘ್ರದಲ್ಲಿಯೇ ನಮ್ಮ ಪ್ರಿಯವಾದ ರಾಮನನ್ನು ಕಾಣಬಹುದೆಂಬ ಆಶೋತ್ತರವನ್ನಿಟ್ಟುಕೊಂಡು ಪರಮ ಸಂತೋಷದಿಂದಿದ್ದರು.

ಇದು ತೊಂಬತ್ತಮೂರನೆಯ ಸರ್ಗವು.

ರಾಮನು ಅತ್ತಲಾಗಿ ಚಿತ್ರಕೂಟದಲ್ಲಿ ನಡೆಸುತ್ತಿದ್ದ ನಿತ್ಯ
ಕಾರ್ಯಗಳು. ಅಯೋಧ್ಯೆಗಿಂತಲೂ ಚಿತ್ರಕೂಟವು
ರಮಣೀಯವೆಂಬುದನ್ನು ನಿರೂಪಿಸಿದುದು.

ಅತ್ತಲಾಗಿ ದೇವಸಮಾನನಾದ ರಾಮನು ಪರ್ವತಗಳಲ್ಲಿಯೂ, ಕಾಡುಗಳಲ್ಲಿಯೂ ವಾಸಮಾಡುವುದರಲ್ಲಿ ತನಗಿರುವ ಅತ್ಯಾಸೆಯನ್ನು ತೋರಿಸುತ್ತ, ಒಂದು ತಿಂಗಳಕಾಲದವರೆಗೆ ಅಲ್ಲಿಯೇ ಇದ್ದು, ಸೀತೆಯ ಮನಸ್ಸನ್ನು ಸಂತೋಷಪಡಿಸಬೇಕೆಂಬುದಕ್ಕಾಗಿಯೂ, ತನ್ನ ಮನಸ್ಸಿನ ಬೇಸರವನ್ನು ಕಳೆಯಬೇಕೆಂಬುದಕ್ಕಾಗಿಯೂ, ಶಚೀದೇವಿಯೊಡಗೂಡಿದ ಇಂದ್ರನಂತೆ, ಸೀತೆಯೊಡನೆ ಸುತ್ತಲೂ ಸಂಚರಿಸುತ್ತ, ಅವಳಿಗೆ ಅಲ್ಲಲ್ಲಿನ ವಿಚಿತ್ರಗಳನ್ನು ತೋರಿಸುತ್ತಿದ್ದನು. "ಎಲೆ ಮಂಗಳಾಂಗಿ! ಅತಿರಮ್ಯವಾದ ಪರ್ವತ ಪ್ರದೇಶವನ್ನು ನೋಡುವುದರಿಂದ, ನನಗೆ ರಾಜ್ಯಭ್ರಂಶದಿಂದುಂಟಾದ ದುಃಖವಾಗಲಿ, ನನ್ನ ಮಿತ್ರರನ್ನು ಅಗಲಿಬಂದ ವ್ಯಸನವಾಗಲಿ, ಯಾವುದೊಂದೂ ತೋರುವುದಿಲ್ಲ. ಎಲೆ ಭದ್ರೆ! ಅನೇಕ ಪಕ್ಷಿ ಸಮೂಹದಿಂದ ಕೂಡಿದ ಈ ಬೆಟ್ಟವನ್ನು ನೋಡಿದೆಯಾ? ಬಗೆಬಗೆಯ ಬಣ್ಣಗಳುಳ್ಳ ಗೈರಿಕಾಧಾತುಗಳಿಂದ ವಿಚಿತ್ರವಾಗಿ ಪ್ರಕಾಶಿಸುವ ಇದರ ಶಿಖರಗಳು ಆಕಾಶವನ್ನು ಭೇದಿಸಿಕೊಂಡು ಹೋಗುವಂತೆ ಕಾಣುವುವು. ಅದರಲ್ಲಿರುವ ವಿಚಿತ್ರಗಳಾದ ಧಾತುಗಳನ್ನು ನೋಡು! ಕೆಲವು ಕಡೆಗಳಲ್ಲಿ ರಜತಮಯವಾಗಿರುವಂತೆಯೂ, ಕೆಲವು ಕಡೆಗಳಲ್ಲಿ ರತ್ನಮಯವಾಗಿರುವಂತೆಯೂ ಕೆಲವು ಕಡೆಯಲ್ಲಿ ಅರಸಿನವನ್ನು ಸವರಿಟ್ಟಂತೆಯೂ, ಕೆಲವು ಕಡೆಗಳಲ್ಲಿ ನೀಲರತ್ನಗಳನ್ನೂ, ಕೆಲವು ಕಡೆಗಳಲ್ಲಿ ಪುಷ್ಪರಾಗಗಳನ್ನೂ, ಕೆಲವು ಕಡೆಗಳಲ್ಲಿ ಸ್ಫಟಿಕಗಳನ್ನೂ ಕೆತ್ತಿದಂತೆಯೂ ಕಾಣುವುದು. ಕೆಲವು ಪ್ರದೇಶಗಳು ತಾಳೆಹೂವಿನಂತೆ ಹೊಂಬಣ್ಣದಿಂದಿರುವುದು. ಕೆಲವು ಪ್ರದೇಶಗಳು ನಕ್ಷತ್ರದಂತೆ ಮಿನುಗುತ್ತಿರುವುವು. ಕೆಲವು ಭಾಗಗಳು ಪಾದರಸವನ್ನು ತುಂಬಿದಂತೆ ಕಾಣುವುವು. ಹುಲಿಗಳು, ಚಿರತೆಗಳು, ಕರಡಿಗಳು, ಜಿಂಕೆಗಳು ಮುಂತಾದ ಮೃಗಜಾತಿಗಳೆಲ್ಲವೂ ಅಲ್ಲಲ್ಲಿ ವಿಶೇಷವಾಗಿ ಸಂಚರಿಸುತ್ತಿರುವುವು. ಹೀಗಿದ್ದರೂ ಇಲ್ಲಿರತಕ್ಕ ಮಹರ್ಷಿಗಳ ಪ್ರಭಾವದಿಂದ ಈ ಪ್ರದೇಶವು ಬಹು ಶಾಂತವಾಗಿರುವಂತೆಯೇ ಕಾಣುವುದು. ಇಲ್ಲಿರತಕ್ಕ ಪಕ್ಷಿ ಸಮೂಹಗಳೆಲ್ಲವೂ ವಿಚಿತ್ರ ವಿಚಿತ್ರಗಳಾಗಿರುವುವು. ಮಾವು, ನೇರಳೆ, ಹಲಸು, ಕಡವು, ಬೆತ್ತ, ಬಿದಿರು, ಸಾಲೆ,

ಲೋಧ್ರಕ, ಅಂಕೋಲೆ, ಬಿಲ್ವ, ಬೇವು, ಎಲಚಿ, ನೆಲ್ಲಿ, ದಾಳಿಂಬ, ಮುಂತಾದ ಸಮಸ್ತ ವೃಕ್ಷಜಾತಿಗಳೂ, ಪುಷ್ಪಫಲ ಸಮೃದ್ಧಗಳಾಗಿ, ಎಲೆಗಳು ದಟ್ಟವಾಗಿ ತುಂಬಿರುವುದರಿಂದ ತಂಪಾದ ನೆರಳನ್ನೂ ಉಂಟುಮಾಡುತ್ತ ಮನೋಹರವಾಗಿ ಕಾಣುತ್ತಿರುವುದನ್ನು ನೋಡಿದೆಯಾ! ಈ ಪರ್ವತವು ಸೌಭಾಗ್ಯಕ್ಕೆ ನಿತ್ಯಾಶ್ರಯವಾಗಿರುವುದೆಂದೇ ನಾನೆಣಿಸುವೆನು. ಎಲೆ ಪ್ರಿಯೇ! ಇದೋ ಇತ್ತಲಾಗಿ ಮನೋಹರವಾದ ಈ ಬೆಟ್ಟದ ತಪ್ಪಲುಗಳಲ್ಲಿ ಕಿನ್ನರದಂಪತಿಗಳು ಸಂತೋಷದಿಂದ ಅಲ್ಲಲ್ಲಿ ವಿಹರಿಸುತ್ತಿರುವುದನ್ನು ನೋಡು! ಇವರ ಸಂಭ್ರಮವನ್ನೂ, ಇವರ ರೂಪಾತಿಶಯವನ್ನೂ ನೋಡಿದರೆ, ನನಗೆ ಮೈಯಲ್ಲಿ ರೋಮಾಂಚವೇಳುತ್ತಿರುವುದು. ಇದೋ! ಇತ್ತಲಾಗಿ ವಿದ್ಯಾಧರರು, ಈ ಮರದ ಕೊಂಬೆಗಳಲ್ಲಿ ತಮ್ಮ ಖಡ್ಗಗಳನ್ನೂ, ವಸ್ತ್ರಗಳನ್ನೂ ತಗುಲಿಸಿಟ್ಟು, ತಮ್ಮ ತಮ್ಮ ಸ್ತ್ರೀಯರೊಡನೆ ಸೇರಿ ಕ್ರೀಡಿಸುತ್ತಿರುವ ಪ್ರದೇಶಗಳು ಎಷ್ಟು ಮನೋಹರವಾಗಿರುವುವು? ನೋಡು? ಅಲ್ಲಲ್ಲಿ ಗಿರಿನದಿಗಳೂ, ಜಲಪಾತಗಳೂ, ಚಿಲುಮೆಗಳೂ ಹರಿಯುತ್ತಿರುವುದನ್ನು ನೋಡಿದರೆ, ಈ ಪರ್ವತವು ಮದಜಲವನ್ನು ಸುರಿಸುತ್ತಿರುವ ಒಂದು ದೊಡ್ಡ ಆನೆಯಂತೆ ಕಾಣುವುದು. ಇದೋ! ಈ ಪರ್ವತದ ಗುಹಾದ್ವಾರಗಳಿಂದ ಹೊರಟು ಬೀಸುತ್ತಿರುವ ಗಾಳಿಯು, ಈ ಬೆಟ್ಟದ ಮೇಲಿನ ಬಗೆಬಗೆಯ ಹೂಗಳ ವಾಸನೆಯನ್ನು ಹೊತ್ತು ತಂದು, ನಮ್ಮ ಘ್ರಾಣೇಂದ್ರಿಯಗಳಿಗೆ ಎಷ್ಟು ತೃಪ್ತಿಯನ್ನುಂಟುಮಾಡುತ್ತಿರುವುದು ನೋಡಿದೆಯಾ? ಇದೆಲ್ಲವನ್ನೂ ಅನುಭವಿಸಿದರೆ ಯಾರ ಮನಸ್ಸಿಗೆ ತಾನೇ ಉಲ್ಲಾಸವುಂಟಾಗದು? ಎಲೆ ಆರ್ಯೆ! ನಾನು ನಿನ್ನೊಡನೆಯೂ ಲಕ್ಷ್ಮಣನೊಡನೆಯೂ [1]ಕೂಡಿಯೇ ಇರುವುದಾದರೆ, ಎಷ್ಟು ವರ್ಷಗಳಿದ್ದರೂ ನನ್ನ ಮನಸ್ಸಿಗೆ ದುಃಖವೆಂಬುದೇ ಕಾಣುವುದಿಲ್ಲ. ಅನೇಕ ಪಕ್ಷಿ ಸಮೂಹದಿಂದ ಕೂಡಿ, ಪುಷ್ಪ ಫಲಗಳಿಂದ ತುಂಬಿ, ವಿಚಿತ್ರವಾದ ಶಿಖರಗಳಿಂದ ಅತಿಮನೋಹರವಾಗಿರುವ ಈ ಪರ್ವತ ಪ್ರದೇಶಗಳಲ್ಲಿಯೇ ನನ್ನ ಮನಸ್ಸು ಸಂಪೂರ್ಣವಾಗಿ

---

[1] ಇದಕ್ಕೆ "ಯದಿ ವತ್ಸ್ಯಾಮಿ" ಎಂದು ಮೂಲವು. ಇಲ್ಲಿ "ಯದಿ" ಎಂಬ ಪಕ್ಷಾಂತರವಾಚಕ ಶಬ್ದದಿಂದ, ಮುಂದೆ ಈ ಸ್ಥಿತಿಯಲ್ಲಿಯೂ ಸ್ಥಿರವಾಗಿ ನಿಲ್ಲುವುದಕ್ಕವಕಾಶವಿಲ್ಲದೆ, ಸೀತೆಯನ್ನು ಅಗಲಿರಬೇಕಾದ ಸಂಭವವೂ ಬರುವುದೆಂದು ಭವಿಷ್ಯದ್ವೃತ್ತಾಂತವು ಸೂಚಿತವಾಗುವುದು.

ನಷ್ಟವಾಗಿಹೋಗಿರುವುದು. ಪಂಚೇಂದ್ರಿಯುಗಳಿಗೂ ಉಲ್ಲಾಸವನ್ನುಂಟುಮಾಡುವ ಈ ವನಪ್ರದೇಶವನ್ನು ಬಿಟ್ಟು ಹೋಗುವುದಕ್ಕೆ ನನಗೆ ಮನಸ್ಸುಬಾರದು. ಎಲೆ ದೇವಿ! ಮುಖ್ಯವಾಗಿ ಈ ವನದಿಂದ ನನಗೆ ಎರಡು ವಿಧವಾದ ಫಲವುಂಟಾಯಿತು. ತಂದೆಯ ಋಣವನ್ನು ತೀರಿಸಿದುದೊಂದು, ನನ್ನ ಪ್ರಿಯ ಸಹೋದರನಾದ ಭರತನಿಗೆ ಪ್ರಿಯವನ್ನುಂಟುಮಾಡಿದುದು ಮತ್ತೊಂದು ; ಹೀಗೆ ಮುಖ್ಯವಾದ ಎರಡು ಫಲಗಳು ಸಿದ್ಧಿಸಿದುವು. ಎಲೆ ಸೀತೆ! ಈ ಮನೋಹರವಾದ ಚಿತ್ರಕೂಟ ದಲ್ಲಿ ನೀನು ನನ್ನೊಡನೆ ವಿಹರಿಸುತ್ತಿರುವುದರಿಂದ, ನಿನ್ನ ಮನಸ್ಸಿಗೇನಾದರೂ ಬೇಸರವು ತೋರುತ್ತಿದೆಯೆ? ಇಲ್ಲಿರತಕ್ಕ ಮಲಯಮಾರುತಗಳೂ, ಕೋಕಿಲ ಧ್ವನಿಗಳೂ, ಫಲಪುಷ್ಪ ಸಮೃದ್ಧಿಗಳೂ ಇನ್ನೂ ಶೃಂಗಾರ ರಸೋದ್ದೀಪಕ ಗಳಾದ ಇತರ ವಿಷಯುಗಳೂ ಕಿನ್ನರರು ಮತ್ತು ಕಾಡುಮೃಗಗಳ ವ್ಯಾಪಾರಗಳೂ ಯಾರಿಗಾದರೂ ಮನೋವಾಕ್ಕಾಯಗಳೆಂಬ ತ್ರಿಕರಣಗಳನ್ನೂ ವಶಪಡಿಸಿ ಕೊಳ್ಳದಿರಲಾರವು. ಇವೆಲ್ಲವನ್ನೂ ನೀನು ನೋಡುತ್ತ, ಮನಃಪೂರ್ವಕವಾದ ಸಂತೋಷದಿಂದ ನನ್ನೊಡನೆ ವಿಹರಿಸುತ್ತಿರುವೆಯಾ? ನನ್ನ ಮುತ್ತಾತಂದಿರು ಮೊದಲಾದ ಪುರಾತನ ರಾಜಋಷಿಗಳು, ದೇಹಾವಸಾನದಲ್ಲಿ ಸಂಸಾರಬಂಧವನ್ನು ಬಿಡಿಸಿಕೊಳ್ಳುವುದಕ್ಕಾಗಿ, ವಾನಪ್ರಸ್ಥರಿಗೆ ಯೋಗ್ಯವಾದ ಈ ವನವಾಸವನ್ನೇ ಅಮೃತದಂತೆ ಭೋಗವನ್ನಾಗಿ ಅಂಗೀಕರಿಸಿರುವರು. ಇದೇ ಮೋಕ್ಷವೆಂದೂ ಹೇಳಿರುವರು. ಎಲೆ ಪ್ರಿಯೆ! ಈ ಬೆಟ್ಟದಲ್ಲಿರುವ, ವಿಸ್ತಾರವಾದ ಕಲ್ಲುಬಂಡೆ ಗಳನ್ನು ನೋಡು! ಕಪ್ಪು, ಹಳದಿ, ಬಿಳುಪು, ಕೆಂಪು, ಮುಂತಾದ ವಿಚಿತ್ರ ವರ್ಣಗಳಿಂದ ಕೂಡಿ ಸುತ್ತಲೂ ಅಸಂಖ್ಯಾತವಾಗಿ ಕಾಣುತ್ತಿರುವುವು. ಮತ್ತು ಈ ಬೆಟ್ಟದ ಮೇಲೆ ಬೆಳದಿರುವ ಗಿಡಬಳ್ಳಿಗಳ ವೈಚಿತ್ರವನ್ನು ನೋಡು! ಈ ಓಷಧಿಗಳಲ್ಲಿ ಕೆಲವು, [1]ರಾತ್ರಿಕಾಲಗಳಲ್ಲಿ ತಮ್ಮ ತಮ್ಮ ತೇಜಸ್ಸನ್ನು ಹೊರಕ್ಕೆ ಕಾಣಿಸಿ, ಅಗ್ನಿಜ್ವಾಲೆಗಳಂತೆ ಜಾಜ್ವಲ್ಯಮಾನವಾಗಿ ಉರಿಯುತ್ತಿರುವುವು. ಈ ಪರ್ವತದಲ್ಲಿರುವ ಮತ್ತೊಂದು ವೈಚಿತ್ರವನ್ನು ನೋಡು! ಕೆಲವು ಕಡೆಗಳಲ್ಲಿ ಇದರ ಗುಹೆಗಳು ನಿವಾಸಯೋಗ್ಯವಾದ ದೊಡ್ಡ ದೊಡ್ಡ ಕಟ್ಟಡಗಳಂತೆಯೇ ಕಾಣುವುವು. ಕೆಲವು ಕಡೆಗಳಲ್ಲಿ ಉದ್ಯಾನವನಗಳಂತೆ ತೋರುವುವು. ಕೆಲವು ಕಡೆಯಲ್ಲಿ ವಿಸ್ತಾರವಾಗಿರುವ ಇದರ ಬಂಡೆಗಳನ್ನು ನೋಡಿದರೆ ಈ ಪರ್ವತ

[1] ಇವುಗಳಿಗೆ ಜ್ಯೋತಿಷ್ಮತೀ ಲತೆಗಳೆಂದು ಹೆಸರು.

ವೆಲ್ಲವೂ ಒಂದೇ ಕಲ್ಲಿನಿಂದಾದಂತೆ ಕಾಣುವುದು. ಈ ಚಿತ್ರಕೂಟಪರ್ವತವು ಭೂಭಾಗವನ್ನು ಭೇದಿಸಿಕೊಂಡು ಮೇಲಕ್ಕೆ ಎದ್ದು ಬಂದಿರುವುದೋ ಎಂಬಂತೆ ಕಾಣುತ್ತಿರುವುದು! ಶಿಖರಗಳೆಲ್ಲವೂ ಎಷ್ಟು ಮನೋಹರವಾಗಿ ಕಾಣುವುವು ನೋಡು! ಮತ್ತು ಇಲ್ಲಿ ಪುತ್ರಜೀವಿಯ ಹೂಗಳನ್ನೂ, ನೈದಿಲೆಯ ಹೂಗಳನ್ನೂ, ಭುಜಪತ್ರೆಯ ತೊಗಟೆಗಳನ್ನೂ ಮೇಲೆ ಹೊದ್ದಿಸಿ, ಕೆಳಗೆ ಕಮಲದಳಗಳನ್ನು ಹರಡಿ ಸಿದ್ಧಪಡಿಸಿರುವ ಹಾಸಿಗೆಗಳನ್ನು ನೋಡಿದೆಯಾ? ಕಾಮುಕರು ಬಂದು ಇಲ್ಲಿ ಕ್ರೀಡಿಸುವುದಕ್ಕಾಗಿ ಇವುಗಳನ್ನು ಕಲ್ಪಿಸಿರುವರು. ಎಲೆ ಪ್ರಿಯೆ! ಇಲ್ಲಿ ಕಾಮುಕರು ಬಂದು, ವಾಸನೆಯನ್ನನುಭವಿಸಿ ಅಲ್ಲಲ್ಲಿ ಬಿಸುಟಿರುವುದರಿಂದ ಕಂದಿಹೋದ ತಾವರೆಹೂಗಳೂ, ಅವರವರು ರುಚಿನೋಡಿ ಬಿಸುಟಿರುವ ಬಗೆಬಗೆಯ ಹಣ್ಣುಗಳೂ ಬಿದ್ದಿರುವುದನ್ನು ನೋಡು. ಕುಬೇರನಗರಿಯಲ್ಲಿರುವ ಮಾನಸರೋವರಗಳನ್ನೂ, ಉತ್ತರಕುರುದೇಶಗಳನ್ನೂ ಅತಿಶಯಿಸಿರುವಂತೆ ಬಗೆಬಗೆಯ ಫಲಮೂಲಗಳಿಂದಲೂ, ತಿಳಿನೀರಿನಿಂದಲೂ ಕೂಡಿರುವ ಈ ಪರ್ವತಪ್ರದೇಶವನ್ನು ನೋಡು! ಎಲೆ ಪ್ರಿಯೆ! ನಾನು ಉತ್ತಮವಾದ ನಿಯಮವನ್ನನುಸರಿಸಿ ಸತ್ಪುರುಷರ ಮಾರ್ಗವನ್ನೇ ಹಿಡಿದು ನಿನ್ನೊಡನೆಯೂ, ಲಕ್ಷ್ಮಣನೊಡನೆಯೂ ಕೂಡಿ ನನ್ನ ವನವಾಸ ಕಾಲಗಳೆಲ್ಲವನ್ನೂ ಇಲ್ಲಿಯೇ ಕಳೆದು, ಆಮೇಲೆ ನಮ್ಮ ಕುಲಧರ್ಮವಾದ ಪ್ರಜಾಪಾಲನವನ್ನು ನಡೆಸುತ್ತ, ರಾಜ್ಯಸುಖವನ್ನನುಭವಿಸುವೆನು."

ಇಲ್ಲಿಗೆ ತೊಂಬತ್ತನಾಲ್ಕನೆಯ ಸರ್ಗವು.

ರಾಮನು ಮಂದಾಕಿನೀನದಿಯ ಅಂದವನ್ನು ವರ್ಣಿಸಿ ಸೀತೆಯನ್ನು ವಿನೋದಪಡಿಸಿದುದು.

ರಾಮನು ಹೀಗೆ ಸೀತಾದೇವಿಗೆ ಚಿತ್ರಕೂಟಪರ್ವತವನ್ನು ವರ್ಣಿಸಿ ತೋರಿಸುತ್ತಿದ್ದು, ಅಲ್ಲಿಂದ ಹಾಗೆಯೇ ಸಂಚರಿಸಿಬರುತ್ತ, ಆಕೆಯೊಡನೆ ಮಂದಾಕಿನೀ ತೀರಕ್ಕೆ ಬಂದು, ಸ್ವಚ್ಛವಾದ ನೀರುಳ್ಳ ಆ ನದಿಯನ್ನೂ ತೋರಿಸಿದನು. ಕಮಲದಂತೆ ಕಣ್ಣುಳ್ಳ ಆ ರಾಮನು, ಕಾಡುಗಳನ್ನೂ, ಬೆಟ್ಟಗಳನ್ನೂ ನದಿಗಳನ್ನೂ

ನೋಡುವ ಕುತೂಹಲದಿಂದ ಉಲ್ಲಾಸಗೊಂಡು, ಚಂದ್ರಬಿಂಬದಂತೆ ಪ್ರಕಾಶಿಸುವ ಮುಖವುಳ್ಳ ಸೀತೆಯನ್ನು ನೋಡಿ [1]"ಎಲೆ ಪ್ರಿಯೇ! ಇದೋ! ಈ ನದಿಯನ್ನು ನೋಡು! ಇದರ ಸುತ್ತಲೂ ವಿಚಿತ್ರವಿಚಿತ್ರಗಳಾದ ಮರಳು ದಿಣ್ಣೆಗಳಿರುವುವು. ಇದರಲ್ಲಿ ಹಂಸಸಾರಸಾದಿ ಜಲಚರಪಕ್ಷಿಗಳೆಲ್ಲವೂ ಕೂಗುತ್ತ ಉಲ್ಲಾಸದಿಂದ ಸಂಚರಿಸುತ್ತಿರುವುವು. ತಾವರೆಹೂಗಳು ವಿಶೇಷವಾಗಿ ತುಂಬಿರುವುವು. ಇದರ ತೀರದಲ್ಲಿ ಪುಷ್ಪಫಲಗಳಿಂದ ತುಂಬಿದ ಬಗೆಬಗೆಯ ವೃಕ್ಷಗಳು ಸಾಲಾಗಿ ಬೆಳೆದಿರುವುವು. ಇದನ್ನು ನೋಡಿದರೆ ಕುಬೇರನ ಮಾನಸ ಸರಸ್ಸನ್ನೇ ಹೀಗಳೆಯುವಂತೆ ಪ್ರಕಾಶಿಸುವುದು. ಅಲ್ಲಲ್ಲಿ ಮೃಗಗಳು ನೀರನ್ನು ಕುಡಿದು ನೀರೆಲ್ಲವೂ ಕಲಗಿದ್ದರೂ, ರಮಣೀಯವಾದ ಇದರ ಘಟ್ಟಗಳು ನನ್ನ ಮನಸ್ಸನ್ನು ವಿಶೇಷವಾಗಿ ಆಕರ್ಷಿಸುತ್ತಿರುವುವು. ಎಲೆ ಪ್ರಿಯೇ! ಜಟೆಗಳನ್ನೂ, ಕೃಷ್ಣಾಜಿನವನ್ನೂ ಧರಿಸಿ, ನಾರುಮಡಿಯನ್ನುಟ್ಟು ಋಷಿಗಳು ತಮ್ಮ ತಮ್ಮ ನಿಯಮಕಾಲಕ್ಕೆ ಬಂದು ಈ ಮಂದಾಕಿನೀನದಿಯಲ್ಲಿ ಸ್ನಾನಮಾಡುತ್ತಿರುವುದನ್ನು ನೋಡಿದೆಯಾ! ಮತ್ತು ಅಲ್ಲಲ್ಲಿ ತೀರಪ್ರದೇಶಗಳಲ್ಲಿ ಕೆಲವರು ತಮ್ಮ ತೋಳುಗಳನ್ನು ಮೇಲಕ್ಕೆ ನೀಡಿ, ನಿಯಮದಿಂದ ಸೂರ್ಯೋಪಸ್ಥಾನವನ್ನು ಮಾಡುತ್ತಿರುವರು. ಇದೋ! ಈ ಚಿತ್ರಕೂಟಪರ್ವತದಮೇಲೆ ಬೆಳೆದ ವೃಕ್ಷಗಳೆಲ್ಲವೂ ಗಾಳಿಗೆ ಅಲುಗುತ್ತಿರುವ ತಮ್ಮ ಕೊಂಬೆಗಳಿಂದ ಹೂಗಳನ್ನು ಉದಿರಿಸುತ್ತಿರುವುವು. ಇದನ್ನು ನೋಡಿದರೆ ಈ ಪರ್ವತವು ನರ್ತಕನಂತೆ ಪುಷ್ಪಾಂಜಲಿಯನ್ನು ಚೆಲ್ಲಿ ಕೈಕಾಲುಗಳನ್ನಾಡಿಸುತ್ತಿರುವಂತೆ ತೋರುವುದು! ಈ ನದೀಪ್ರವಾಹದ ವೈಚಿತ್ರ್ಯವನ್ನು ನೋಡಿದೆಯಾ? [2]ಒಂದೊಂದು ಕಡೆಯಲ್ಲಿ ಇದರ

---

[1]ಇದರಿಂದ ರಾಮನು ಸೀತೆಯನ್ನು ನೋಡುತ್ತ, ಆಕೆಯ ಸೌಂದರ್ಯಕ್ಕೆ ಮೋಹಿತನಾಗಿ, ಶೃಂಗಾರೋದ್ದೀಪಕಗಳಾದ ಮಾತುಗಳಿಂದ ಅವಳ ಮನಸ್ಸಿನ ಬೇಸರವನ್ನು ಕಳೆಯಬೇಕೆಂಬುದಕ್ಕಾಗಿ, ಅವಳನ್ನು ಮಂದಾಕಿನೀ ನದಿಯೊಡನೆ ಹೋಲಿಸಿ ವರ್ಣಿಸುವುದಾಗಿ ಅಲಂಕಾರವು ಧ್ವನಿತವಾಗುವುದು. ಹೇಗೆಂದರೆ:—"ನಿನ್ನ ನಿತಂಬ ಪ್ರದೇಶಗಳಂತೆ ಉನ್ನತವಾದ ಮರಳುದಿಣ್ಣೆಗಳನ್ನೂ, ನಿನ್ನ ಕಂಠಸ್ವರದಂತೆ ಇಂಪಾದ ಹಂಸಸಾರಸಾದಿ ಜಲಜಂತುಗಳ ಧ್ವನಿಗಳನ್ನೂ, ನಿನ್ನ ಕರಚರಣಮುಖಾದಿಗಳಂತೆ ಅಂದವಾದ ಕಮಲಗಳನ್ನೂ ಒಳಗೊಂಡ ಈ ನದಿಯು ನಿನ್ನಂತೆಯೇ ಕಾಣುತ್ತಿರುವು"ದೆಂದು ಭಾವವು.

[2]ಇಲ್ಲಿ ನೀರನ್ನು ಬಿಳೀಮುತ್ತಿಗೆ ಹೋಲಿಸಿರುವುದರಿಂದಲೂ, ಪುಳಿನ ಪ್ರದೇಶದ ಅಂದವನ್ನು ವರ್ಣಿಸಿರುವುದರಿಂದಲೂ, ದುಕೂಲವನ್ನುಟ್ಟು, ಅಂದವಾದ ನಿತಂಬವುಳ್ಳ

ನೀರು ಮುತ್ತಿನಂತೆ ಥಳಥಳಿಸುತ್ತಿರುವುದು, ನಡುನಡುವೆ ಉಬ್ಬಿದ ಮರಳು ಕಾಣುತ್ತಿರುವುವು. ಸಿದ್ಧರು ಬಂದು ಜಲಕ್ರೀಡೆಯನ್ನಾಡುತ್ತಿರುವರು. [2]ತೀರ ವೃಕ್ಷದಲ್ಲಿರುವ ಹೂಗಳೆಲ್ಲವೂ ಗಾಳಿಗೆ ಉದಿರಿಬಿದ್ದು ನದೀತೀರಪ್ರದೇಶಗಳೆಲ್ಲ ವನ್ನೂ ಪುಷ್ಪೋಪಹಾರದಿಂದ ಅಲಂಕರಿಸಿಟ್ಟಂತೆ ಕಾಣುವುವು. ಇವುಗಳಲ್ಲಿ ಕೆಲವು ನೀರಿನಲ್ಲಿ ಬಿದ್ದು ಪ್ರವಾಹವೇಗಕ್ಕೆ ಸಿಕ್ಕಿ ವಿಚಿತ್ರಗತಿಯಿಂದ ತೇಲಿಹೋಗು ತ್ತಿರುವುದನ್ನು ನೋಡು! ಅದೋ! ಅತ್ತಲಾಗಿ [3]ಚಕ್ರವಾಕ ದಂಪತಿಗಳು ಜತೆಜತೆಯಾಗಿ ಕೂಡಿ ಪರಸ್ಪರಾನುರಾಗದಿಂದ ರತಿಕೇಳಿಗಾಗಿ ಒಂದಕ್ಕೊಂದು ಮುದ್ದು ಮಾತುಗಳನ್ನಾಡಿ ಕರೆಯುತ್ತ, ಮಧುರವಾದ ಕಂಠಧ್ವನಿಯಿಂದ ಕೂಗುತ್ತ, ಈ ಹೂಗಳ ರಾಶಿಯಮೇಲೆ ಏರಿ ಭೋಗಿಸುತ್ತಿರುವುದನ್ನು ನೋಡು! ಎಲೆ ಮಂಗಳಾಂಗಿ! ಹೀಗೆ ಏಕಾಂತವಾಗಿ ಭೋಗಸ್ಥಾನವಾದ ಈ ಚಿತ್ರಕೂಟಪರ್ವತದ ನೋಟವು ಅಯೋಧ್ಯೆಯ ವಾಸಕ್ಕಿಂತಲೂ ಹೆಚ್ಚು ಸುಖವನ್ನುಂಟುಮಾಡುವುದೆಂದೇ ನನಗೆ ತೋರಿರುವುದು. ಮತ್ತು ಮನ್ಮಥೋ ದ್ದೀಪಕವಾಗಿರುವ ಈ ಮಂದಾಕಿನೀನದಿಯ ದರ್ಶನವು ನಿನ್ನ ದರ್ಶನಕ್ಕಿಂತಲೂ ಮೇಲಾಗಿಯೇ ಇರುವುದೆಂದು ನನ್ನ ಅಭಿಪ್ರಾಯವು. ಎಲೆ ಪ್ರಿಯೇ! ತಪಸ್ಸು, ಶಮೆ, ದಮೆ, ಮೊದಲಾದುವುಗಳಿಂದ ಕೂಡಿ, ಪಾಪರಹಿತರಾಗಿ ಇಲ್ಲಿ ನಿತ್ಯವಾಸ ವನ್ನು ಮಾಡುತ್ತಿರುವ ಸಿದ್ಧರು. ಇದರಲ್ಲಿ ಯಾವಾಗಲೂ ಸ್ನಾನಮಾಡು ತ್ತಿರುವುದರಿಂದ ಪರಮಪಾವನವೆನಿಸಿಕೊಂಡ ಈ ನದಿಯಲ್ಲಿ ನಾವಿಬ್ಬರೂ ಜಲಕ್ರೀಡೆಯನ್ನಾಡುವೆವೆ? ಎಲೆ ಸೀತೆ! ನಿನ್ನ ಸಖೀಜನದೊಡನೆ ನೀನು ಸರೋವರಗಳಲ್ಲಿಳಿದು ವಿನೋದಿಸುವಂತೆ ನನ್ನೊಡನೆ ಇದರಲ್ಲಿಳಿದು, ಇದರೊಳಗಿನ ಕಮಲವನ್ನೂ, ಬಿಳಿದಾವರೆಗಳನ್ನೂ ಕದಲಿಸಿ, ನೀರಿನಲ್ಲಿ ಮುಳುಗಿಸುತ್ತ

ವಳಾಗಿ, ಕಾಮುಕರಿಂದ ಸುತ್ತಲ್ಪಟ್ಟಿರುವ ರೂಪವತಿಯಾದ ಒಬ್ಬ ಸ್ತ್ರೀಯ ರೂಪವು ಧ್ವನಿತವಾಗುವುದು.

[2]ಹಿಂದಿನಂತೆಯೇ ಇಲ್ಲಿಯೂ ಗಾಳಿಯಿಂದ ತೀರದ ಕಡೆಗೊತ್ತರಿಸಲ್ಪಟ್ಟ ಹೂಗಳನ್ನು ವರ್ಣಿಸಿರುವುದರಿಂದಲೂ, ಕಾಮುಕನಾದ ನಾಯಕನಿಂದೆಳೆಯಲ್ಪಟ್ಟ ವಸ್ತ್ರವುಳ್ಳ ನಾಯಿಕೆ ಯೊಬ್ಬಳು, ನಾಚಿಕೆಯಿಂದ ವಸ್ತ್ರಾರ್ಧವನ್ನು ಮೈಗೆ ಮರೆಸಿಕೊಂಡಿರುವಳೆಂದು ಧ್ವನಿತ ವಾಗುವುದು.

[3]ಇಲ್ಲಿಯೂ ಚಕ್ರವಾಕದಂಪತಿಗಳ ರತಿಯು ಸೂಚಿತವಾಗಿದೆ.

ನನ್ನೊಡನೆ ಇದರಲ್ಲಿ ವಿಹರಿಸು! ಎಲೆ ಪ್ರಿಯೇ! ನೀನು ಈ ಪ್ರದೇಶಗಳನ್ನು ಕಾಡುಗಳೆಂದೆಣಿಸಬೇಡ? ಇಲ್ಲಿರತಕ್ಕ ವನಚರಪ್ರಾಣಿಗಳನ್ನು ಪುರವಾಸಿಗಳಂತೆಯೂ, ಈ ಪರ್ವತಪ್ರದೇಶವನ್ನು ಅಯೋಧ್ಯೆಯಂತೆಯೂ, ಈ ನದಿಯನ್ನೇ ಸರಯೂನದಿಯಂತೆಯೂ ಭಾವಿಸಿ ಪ್ರೀತಿಯಿಂದ ವಿಹರಿಸು! ಪಟ್ಟಣವನ್ನು ಬಿಟ್ಟುಬಂದೆನೆಂಬ ಕ್ಲೇಶವನ್ನು ಬಿಟ್ಟುಬಿಡು! ನನ್ನ ತಮ್ಮನಾದ ಲಕ್ಷ್ಮಣನೂ ಧರ್ಮವನ್ನು ಬಿಡದೆ ನನ್ನ ಆಜ್ಞೆಯಲ್ಲಿಯೇ ಇದ್ದುಕೊಂಡಿರುವನು. ನೀನೂ ನನ್ನ ಮನೋನುಕೂಲೆಯಾಗಿರುವೆ. ಹೀಗೆ ನೀವಿಬ್ಬರೂ ನನಗೆ ಎಷ್ಟೋ ಪ್ರೀತಿಯನ್ನುಂಟುಮಾಡುತ್ತಿರುವಿರಿ! ಇದಕ್ಕಿಂತಲೂ ನನಗೆ ಬೇರೆ ಸುಖವೇನುಂಟು? ಈ ಕಾಡಿನಲ್ಲಿ ತ್ರಿಸಂಧ್ಯೆಗಳಲ್ಲಿಯೂ ಸ್ನಾನಮಾಡಿ, ಅಲ್ಲಲ್ಲಿ ಸಿಕ್ಕುವ ರುಚಿಯಾದ ಹಣ್ಣುಗಳನ್ನೂ, ಗಡ್ಡೆಗೆಣಸುಗಳನ್ನೂ, ಹೊಸದಾದ ಜೇನನ್ನೂ ಭುಜಿಸುತ್ತ, ನಿನ್ನೊಡನೆ ವಿಹರಿಸುತ್ತಿದ್ದರೆ ನನಗೆ ಅಯೋಧ್ಯೆಯೂ ಬೇಡ, ರಾಜ್ಯಾಧಿಕಾರದಲ್ಲಿಯೂ ನನಗೆ ಆಸೆಯುಂಟಾಗದು. ಈ ಮಂದಾಕಿನೀ ನದಿಯಾದರೋ ಅತಿರಮಣೀಯವಾಗಿ ಅನೇಕ ಮೃಗಸಮೂಹಗಳಿಂದ ಕೂಡಿ ಶೋಭಿಸುತ್ತಿರುವುದು. ಇಲ್ಲಿ ವಾಸವಾಗಿರತಕ್ಕ ಋಷಿಗಳ ಮಹಿಮೆಯಿಂದ ಮೃಗಗಳೆಲ್ಲವೂ ಸ್ವಾಭಾವಿಕ ವೈರಗಳನ್ನು ಬಿಟ್ಟು ಪರಸ್ಪರ ಸ್ನೇಹಭಾವವನ್ನು ತೋರಿಸುತ್ತ, ಈ ನದಿಯಲ್ಲಿ ಜಲಪಾನವನ್ನು ಮಾಡುತ್ತಿರುವುವು. ಒಂದುಕಡೆಯಲ್ಲಿ ಆನೆಗಳು, ಮತ್ತೊಂದು ಕಡೆಯಲ್ಲಿ ಸಿಂಹಗಳು, ಬೇರೊಂದುಕಡೆಯಲ್ಲಿ ವಾನರಗಳು. ಇವೆಲ್ಲವೂ ಒಂದು ಸುತ್ತಲೂ ಈ ನದಿಯನ್ನು ಸೇವಿಸುತ್ತಿರುವುವು. ಇದರ ತೀರಪ್ರದೇಶದಲ್ಲಿ ವೃಕ್ಷಗಳೆಲ್ಲವೂ ಪುಷ್ಪಭರಿತಗಳಾಗಿ ಪ್ರಕಾಶಿಸುತ್ತಿರುವುವು. ಹೀಗೆ ಅತಿ ಪವಿತ್ರವಾಗಿಯೂ, ಮನಸ್ಸಿಗೆ ಉದ್ದೀಪಕವಾಗಿಯೂ ಇರುವ ಈ ನದಿಯನ್ನು ನೋಡಿದ ಮಾತ್ರಕ್ಕೆ ಎಷ್ಟು ಬಳಲಿಕೆಯಿದ್ದರೂ ಹೋಗುವುದು. ಇಂತಹ ನದಿಯಲ್ಲಿ ಇಳಿದು, ಸ್ನಾನಪಾನಾದಿಗಳನ್ನು ಮಾಡಿದಪಕ್ಷದಲ್ಲಿ ಯಾರಿಗೆ ತಾನೇ ಮನಸ್ಸಿಗೆ ಹರ್ಷವುಂಟಾಗದು?' ಎಂದನು. ಹೀಗೆ ರಾಮನು ತನ್ನ ಪ್ರಿಯೆಯಾದ ಸೀತೆಯೊಡನೆ ಆ ಮಂದಾಕಿನೀನದಿಯನ್ನು ವರ್ಣಿಸುತ್ತ ಕಣ್ಣುಗಪ್ಪಿನಂತೆ ನೀಲವರ್ಣವಾಗಿ ಅತಿ ಮನೋಹರವಾಗಿ ಪ್ರಕಾಶಿಸುತ್ತಿರುವ ಆ ಚಿತ್ರಕೂಟಪರ್ವತದಲ್ಲಿಯೇ ಅಲ್ಲಲ್ಲಿ ವಿಹರಿಸುತ್ತಿದ್ದನು.

ಇದು ತೊಂಬತ್ತೈದನೆಯ ಸರ್ಗವು.

(ಸೀತಾರಾಮರಿಬ್ಬರೂ ವಿನೋದದಿಂದ ಕುಳಿತು ಮಾಂಸಾಹಾರವನ್ನು ತೆಗೆದುಕೊಳ್ಳುತ್ತಿರುವ ಕಾಲದಲ್ಲಿ ವನಜಂತುಗಳು ಭಯಪಟ್ಟು ಓಡುತ್ತಿರುವುದನ್ನು ನೋಡಿ, ಅದರ ಕಾರಣವನ್ನು ತಿಳಿದುಬರುವುದಕ್ಕಾಗಿ ಲಕ್ಷ್ಮಣನನ್ನು ಕಳುಹಿಸಿದುದು. ಲಕ್ಷ್ಮಣನು ಒಂದು ಮರದ ಮೇಲೆ ಏರಿ ನಿಂತು, ಭರತನು ಸೇನಾಸಮೇತನಾಗಿ ಬರುವುದನ್ನು ಕಂಡು ಶಂಕಿಸಿದುದು.)

ಹೀಗೆ ರಾಮನು ಸೀತೆಗೆ ಮಂದಾಕಿನಿಯ ಅಂದವನ್ನು ತೋರಿಸಿದಮೇಲೆ, ಆ ಪರ್ವತದ ಸಾನುಪ್ರದೇಶದಲ್ಲಿ ಒಂದಾನೊಂದು ಕಡೆಯಲ್ಲಿ ಕುಳಿತು, ಆಕೆಗೆ ಭೋಜನಾರ್ಥವಾಗಿ ಮೃಗಮಾಂಸವನ್ನು ತಂದಿಟ್ಟು, “ಪ್ರಿಯೆ! ಇದೋ! ಮಾಂಸವನ್ನು ತಂದಿರುವೆನು. ಇದು ಬಹು ಪರಿಶುದ್ಧವಾದುದು. ಇದು ರಸವತ್ತಾಗಿಯೂ ಚೆನ್ನಾಗಿ ಪಕ್ವವಾಗಿಯೂ ಇರುವುದು. ಭುಜಿಸು” ಎಂದು ಆಕೆಯ ಮನಸ್ಸಿಗೆ ಆಪ್ಯಾಯಕರವಾದ ಮಾತುಗಳನ್ನಾಡುತ್ತ ಆಕೆಯೊಡನೆ ಕುಳಿತಿದ್ದನು. ಹೀಗೆ ಅವರಿಬ್ಬರೂ ಕುಳಿತಿರುವಾಗಲೇ ಇತ್ತಲಾಗಿ ಭರತನ ಕಡೆಯ ಸೈನ್ಯವು ಮುಂದೆ ಮುಂದೆ ಬರುತ್ತಿರಲು, ಅದರಿಂದೆದ್ದ ಧೂಳಿಯೂ, ಸೈನಿಕರ ಕೋಲಾಹಲವೂ ಆಕಾಶವನ್ನು ವ್ಯಾಪಿಸುವಂತೆ ಹರಡಿತು. ಇಷ್ಟರಲ್ಲಿ ಈ ಮಹಾಧ್ವನಿಯಿಂದ ಹೆದರಿ ಆ ಪರ್ವತಪ್ರಾಂತದಲ್ಲಿದ್ದ ಮದಿಸಿದ ಮೃಗಗಳ ಹಿಂಡುಗಳೆಲ್ಲವೂ ದಿಕ್ಕುದಿಕ್ಕಿಗೆ ಗುಂಪುಗುಂಪಾಗಿ ಓಡಲಾರಂಭಿಸಿದುವು. ಆಗ ರಾಮನು ಈ ಸೈನ್ಯರಜಸ್ಸಮೂಹದೊಡನೆ ಬಂದ ಧ್ವನಿಯನ್ನು ಕೇಳಿದನು. ಹಾಗೆಯೇ ನಾನಾಕಡೆಗಳಿಗೂ ಓಡುತ್ತಿರುವ ಮೃಗಗಳ ಗುಂಪನ್ನೂ ನೋಡಿದನು. ಹೀಗೆ ಕಾಡಿನಲ್ಲಿ ಆಕಸ್ಮಿಕವಾಗಿ ಒಂದು ಮಹಾಧ್ವನಿಯುಂಟಾದುದನ್ನೂ, ಯಾವಾಗಲೂ ಶಾಂತವಾಗಿದ್ದ ಆ ಪುಣ್ಯಪ್ರದೇಶದಲ್ಲಿ ಇದ್ದಕ್ಕಿದ್ದ ಹಾಗೆ ಮೃಗಗಳು ಚದರಿ ಓಡುತ್ತಿರುವುದನ್ನೂ ಕಂಡು ರಾಮನು ಶಂಕಿತನಾಗಿ, ತೇಜಸ್ವಿಯಾದ ಲಕ್ಷ್ಮಣನನ್ನು ಕುರಿತು ವತ್ಸ ಲಕ್ಷ್ಮಣನೆ! ಇದೇನು! ಅಲ್ಲಿ ನೋಡು! ಗುಡುಗಿನಂತೆ ಭಯಂಕರವಾಗಿಯೂ ಗಂಭೀರವಾಗಿಯೂ ಇರುವ ಮಹಾಧ್ವನಿಯೊಂದು ಕಿವಿಗೆ ಕೇಳಿಸುತ್ತಿರುವುದು. ಜನಗಳು ಗುಂಪುಗೂಡಿ ಒಟ್ಟಿಗೆ ಕೂಡಿಕೊಳ್ಳುವಂತೆ ಕಾಣುವುದು. ಇದೋ! ಈ ಕಾಡಿನಲ್ಲಿ ಆನೆಯ ಹಿಂಡುಗಳೋ, ಕಾಡೆಮ್ಮೆಗಳೋ, ಅಥವಾ ಇತರ ಮೃಗಗಳೋ ನಾನಾ ದಿಕ್ಕುಗಳಿಗೂ ಓಡುತ್ತಿರುವುವು! ಇವು ಸಿಂಹಗಳನ್ನು ನೋಡಿ ಹೆದರಿ ಓಡುತ್ತಿರಬಹುದೆ?

ಅಥವಾ ಅಲ್ಲಲ್ಲಿ ಸಿಂಹಗಳೂ ಈ ಮೃಗಗಳೊಡನೆ ಸೇರಿ ಭಯದಿಂದ ಓಡುತ್ತಿರುವ ಹಾಗಿದೆ! ಆದುದರಿಂದ ರಾಜನೋ ಅಥವಾ ರಾಜಸಮಾನವಾದ ಬೇರೊಬ್ಬನೋ ಬೇಟೆಗಾಗಿ ಇಲ್ಲಿಗೆ ಬಂದಿರಬಹುದು. ಇಲ್ಲವೇ, ಬೇರೆ ಯಾವುದಾದರೂ ಕ್ರೂರ ಜಂತುವು ಈ ಅರಣ್ಯಕ್ಕೆ ಪ್ರವೇಶಿಸಿರಬಹುದು! ಎಲೈ ಸುಮಿತ್ರಾಪುತ್ರನೆ! ಇದಕ್ಕೆ ಕಾರಣವೇನೆಂಬುದನ್ನು ತಿಳಿಯಬೇಕಲ್ಲವೆ? ಈಗ ಪರ್ವತದಲ್ಲಿ ಪಕ್ಷಿಗಳೂ ಕೂಡ ಸಂಚರಿಸಲಾರದೆ ಅಲ್ಲಲ್ಲಿ ಅಡಗಿಕೊಂಡಿರುವುದನ್ನು ನೋಡಿದೆಯಾ! ಇದಕ್ಕೆ ನಿಜವಾದ ಕಾರಣವೇನೆಂಬುದನ್ನು ಶೀಘ್ರದಲ್ಲಿಯೇ ತಿಳಿದುಬಾ!" ಎಂದನು. ಈ ಮಾತನ್ನು ಕೇಳಿದೊಡನೆಯೇ ಲಕ್ಷ್ಮಣನು, ಪುಷ್ಪಿತವಾಗಿ ವಿಶೇಷ ಎಲೆಗಳಿಲ್ಲದ ಒಂದಾನೊಂದು ಮರವನ್ನೇರಿ, ಸುತ್ತಲೂ ತಿರುಗಿ ನಾಲ್ಕು ದಿಕ್ಕುಗಳನ್ನೂ ನೋಡುತ್ತ, ಹಾಗೆಯೇ ಪೂರ್ವದಿಂದ ತಿರುಗಿ ಉತ್ತರದಿಕ್ಕಿನಲ್ಲಿ ನೋಡಿದಾಗ ಒಂದು ದೊಡ್ಡ ಸೈನ್ಯವು ಇದಿರಾಗಿ ಬರುತ್ತಿದ್ದುದನ್ನು ಕಂಡನು. ಅದರಲ್ಲಿ ಆನೆಗಳೂ, ಕುದುರೆಗಳೂ, ರಥಗಳೂ ದಟ್ಟವಾಗಿ ತುಂಬಿದ್ದುವು. ಕಾಲಾಳುಗಳು ಎಚ್ಚರಿಕೆಯಿಂದ ಸಾಲಾಗಿ ನಡೆದು ಬರುತ್ತಿದ್ದಿತು. ಆನೆಕುದುರೆಗಳೇ ಅದರಲ್ಲಿ ವಿಶೇಷವಾಗಿ ಕಾಣುತ್ತಿದ್ದುವು. ರಥದಮೇಲಿನ ಧ್ವಜಗಳು ಆ ಸೈನ್ಯಕ್ಕೆ ಅಲಂಕಾರಪ್ರಾಯವಾಗಿ ಕಾಣುತ್ತಿದ್ದುವು. ಆಗಲೇ ರಾಮನನ್ನು ಕೂಗಿ "ಅಣ್ಣಾ! ಮಹಾಸೇನೆಯೊಂದು ಇತ್ತಲಾಗಿ ಬರುತ್ತಿರುವುದು! ಹೊಗೆಯಾಡುತ್ತಿರುವ ನಮ್ಮ ಅಗ್ನಿಹೋತ್ರವನ್ನು ನಂದಿಸಿಬಿಡು! ಸೀತೆಯನ್ನು ಇತ್ತಲಾಗಿ ಯಾವುದಾದರೂ ಒಂದು ಗುಹೆಯಲ್ಲಿ ಬಚ್ಚಿಟ್ಟು ಬಾ! ಬಿಲ್ಲುಬಾಣಗಳನ್ನೂ, ಕವಚಗಳನ್ನೂ ಸಿದ್ಧಪಡಿಸಿಡು" ಎಂದನು. ಆಗ ಪುರುಷಶ್ರೇಷ್ಠನಾದ ರಾಮನು ಹೀಗೆ ಆತುರಪಡುತ್ತಿರುವ ಲಕ್ಷ್ಮಣನನ್ನು ನೋಡಿ "ವತ್ಸನೆ! ಚೆನ್ನಾಗಿ ನೋಡು. ಅದು ಯಾರ ಸೈನ್ಯವೆಂದು ನಿನಗೆ ತೋರಿರುವುದು?" ಎಂದನು. ಆಗ ಲಕ್ಷ್ಮಣನು ಬಹುಕೋಪಾವಿಷ್ಟನಾಗಿ ಆ ಸೇನೆಯೆಲ್ಲವನ್ನೂ ತನ್ನ ಕೋಪಾಗ್ನಿಯಿಂದಲೇ ಸುಟ್ಟುಬಿಡುವಂತೆ ನೋಡುತ್ತ, ರಾಮನನ್ನು ಕುರಿತು "ಅಣ್ಣಾ! ಇದು ಯಾರ ಸೈನ್ಯವೆಂಬುದನ್ನು ಕೇಳಬೇಕೆ? ದುಷ್ಟೆಯಾದ ಆ ಕೈಕೇಯಿಯ ಮಗನೇ ಸೈನ್ಯವನ್ನು ತೆಗೆದುಕೊಂಡು ಬರುತ್ತಿರುವನು! ತನ್ನ ತಾಯಿಯ ತಂತ್ರದಿಂದ ತನಗಂತೂ ಪಟ್ಟಾಭಿಷೇಕವಾಯಿತು. ಅಷ್ಟರಲ್ಲಿಯೂ ಆತನು ತೃಪ್ತಿಪಡದೆ ರಾಜ್ಯವನ್ನು ನಿಷ್ಕಂಟಕವಾಗಿ ಮಾಡಿಕೊಳ್ಳಬೇಕೆಂಬ

*

ದುರಾಲೋಚನೆಯಿಂದ ನಮ್ಮನ್ನು ಕೊಲ್ಲುವುದಕ್ಕಾಗಿಯೇ ಸೈನ್ಯದೊಡನೆ ಬರುತ್ತಿರುವನು. ಇದರಲ್ಲಿ ಸಂದೇಹವೇ ಇಲ್ಲ! ಅದೋ! ಧ್ವಜದಲ್ಲಿ ವೃಕ್ಷದ ಗುರುತು ಕಾಣುತ್ತಿರುವುದು. ರಥದಲ್ಲಿ ಎತ್ತರವಾದ ಬುಡವುಳ್ಳ ಕೋವಿದಾರ ವೃಕ್ಷದಿಂದ ಕೂಡಿದ ಧ್ವಜವೇ ಸ್ಪಷ್ಟವಾಗಿ ಕಾಣುತ್ತಿರುವುದು! ಅದೋ! ಅಲ್ಲಿ ಕುದುರೆಯ ರಾವುತರು ವೇಗವತ್ತಾದ ಕುದುರೆಗಳನ್ನೇರಿ ಧಾರಾಳವಾಗಿ ಮುಂದೆ ಬರುತ್ತಿರುವರು. ಗಜಯೋಧರೆಲ್ಲರೂ ತಮ್ಮ ತಮ್ಮ ಆನೆಗಳನ್ನು ನಡೆಸಿಕೊಂಡು ಉತ್ಸಾಹದಿಂದ ಮುಂದುವರಿಯುತ್ತಿರುವರು. ಇನ್ನು ನಾವು ಉದಾಸೀನರಾಗಿರುವುದಕ್ಕೆ ಕಾಲವಲ್ಲ! ನಾವು ನಮ್ಮ ನಮ್ಮ ಧನುಸ್ಸನ್ನು ಹಿಡಿದು ಈ ಬೆಟ್ಟದಲ್ಲಿ ಯಾವುದಾದರೂ ಒಂದು ಎತ್ತರವಾದ ದುರ್ಗಪ್ರದೇಶ ವನ್ನಾಶ್ರಯಿಸಬೇಕು. ಅಥವಾ ಇಲ್ಲಿಯೇ ನಮ್ಮ ನಮ್ಮ ಶಸ್ತ್ರಗಳನ್ನು ಸಿದ್ಧಪಡಿಸಿಕೊಂಡೇ ಎಚ್ಚರಿಕೆಯಿಂದ ನಿಲ್ಲಬೇಕು. ಕೋವಿದಾರಧ್ವಜವುಳ್ಳ ಆ ಕೈಕೇಯಿಪುತ್ರನು ಇಷ್ಟು ಸೈನ್ಯಗಳೊಡನೆ ಬರುತ್ತಿರುವುದರಿಂದ ಯುದ್ಧದಲ್ಲಿ ನಮ್ಮ ಕೈಗೆ ಸಿಕ್ಕದಿರನು! ರಾಮಾ! ನಮಗೆ ಇಷ್ಟು ವ್ಯಸನವನ್ನು ತಂದಿಟ್ಟ ಆ ಭರತನು ನಮ್ಮ ಕಣ್ಣಿಗೆ ಬೀಳುವನೆ! ನಿನಗೂ ಸೀತೆಗೂ, ನನಗೂ ಇಷ್ಟು ಕಷ್ಟವನ್ನು ತಂದಿಟ್ಟ ಆತನು ಕೈಗೆ ಸಿಕ್ಕಿದರೆ ಸಾಕು! ಆ ಕ್ಷಣವೇ ಧ್ವಂಸ ಮಾಡಿಬಿಡುವೆನು. ಅವನು ನಿನ್ನ ಕೈಯಲ್ಲಿ ಶಾಶ್ವತವಾಗಿರಬೇಕಾದ ರಾಜ್ಯ ವನ್ನು ತಪ್ಪಿಸಿದ ಮಹಾಪಾಪಿಯಲ್ಲವೆ? ಆತನೇ ಕೈಗೆ ಸಿಕ್ಕಿದಾಗ ನಾನು ಕೊಲ್ಲದೇ ಬಿಡುವೆನೆ? ಆತನನ್ನು ಕೊಂದುದರಿಂದ ಯಾವ ದೋಷವೂ ಇಲ್ಲವೆಂದೇ ನನಗೆ ತೋರುವುದು. ಮೊದಲು ನಮಗೆ ಅಪಕಾರಮಾಡಿದವರನ್ನು ಕೊಲ್ಲುವುದು ಅಧರ್ಮವೆಂದು ಇದುವರೆಗೆ ಯಾವ ಶಾಸ್ತ್ರವೂ ವಿಧಿಸಿಲ್ಲವು. ಭರತನು, ನಮಗೆ ಮೊದಲೇ ಅಪಕಾರಮಾಡಿದವನಲ್ಲವೆ? ಅವನು ನಮಗೆ ಮಾಡಿದ ಅಪಕಾರವು ಒಂದುವೇಳೆ ಏನೋ ಅಜ್ಞಾನವಶದಿಂದ ಸಂಭವಿಸಿದ್ದರೂ ನಾವು ಮನ್ನಿಸಿಬಿಡಬಹುದು! ಆತನು ಬುದ್ಧಿಪೂರ್ವಕವಾಗಿಯೇ ಹೀಗೆ ಮಾಡಿರುವನು. ಆತನನ್ನು ಕೊಲ್ಲುವುದಕ್ಕೂ, ಭೂಮಿಯನ್ನು ನಿನ್ನಧೀನ ವಾಗಿಮಾಡಿ ನೀನು ಸುಖವಾಗಿ ರಾಜ್ಯವನ್ನನುಭವಿಸುವ ಹಾಗೆ ಮಾಡು ವುದಕ್ಕೂ ತಕ್ಕ ಕಾಲವು ಬಂದೊದಗಿರುವುದು. ರಾಜ್ಯದಲ್ಲಿ ಹೇರಾಸೆಯುಳ್ಳ ಆ ಕೈಕೇಯಿಯು, ಆನೆಯಿಂದ ಮುರಿಯಲ್ಪಟ್ಟ ಮರದಂತೆ, ಈಗಲೇ ಯುದ್ಧ

ದಲ್ಲಿ ನನ್ನಿಂದ ಹತನಾಗುವ ಮಗನನ್ನು ನೋಡಿ ಸಂಕಟದಿಂದ ಕೊರಗಿ ಸಾಯಲಿ! ನಾನು ಕೈಕೇಯಿಯನ್ನೂ, ಮಂಥರೆಯೇ ಮೊದಲಾದ ಅವಳ ಪರಿವಾರಗಳೊಡನೆಯೂ, ಅವಳ ಇತರ ಬಂಧುಗಳೊಡನೆಯೂ ಕೊಂದು ಹಾಕುವೆನು. ಈ ದಿನವೇ! ಈ ಭೂಮಿಯು ಕೈಕೇಯಿಯ ರೂಪದಿಂದ ತನ್ನ ಮೇಲಿರುವ ಮಹಾಪಾತಕವನ್ನು ಕಳೆದುಕೊಂಡು ಪರಿಶುದ್ಧಿಯಾಗಲಿ, ಅಣ್ಣಾ! ಇನ್ನು ಹೆಚ್ಚಾಗಿ ಹೇಳಿದುದರಿಂದೇನು? ಇದುವರೆಗೆ ನಾನು ಅಡಗಿಸಿಟ್ಟು ಕೊಂಡಿದ್ದ ನನ್ನ ಕೋಪಾಗ್ನಿಯನ್ನೂ, ನಾನು ಇದುವರೆಗೆ ತಡೆದಿಟ್ಟುಕೊಂಡಿದ್ದ ಅವಮಾನವನ್ನೂ, ಈಗ ಬಾಣರೂಪವಾಗಿ ಶತ್ರುಸೈನ್ಯಗಳಮೇಲೆ ಬಿಡುವೆನು. ನೋಡು! ಒಣಗಿದ ಹುಲ್ಲುಪೊದೆಗಳಿಗೆ ಬೆಂಕಿಯಿಟ್ಟಂತೆ ಆ ನನ್ನ ಕೋಪಾಗ್ನಿಯೇ ಶತ್ರುಸೈನ್ಯಗಳನ್ನು ಸುಟ್ಟು ಭಸ್ಮಮಾಡುವುದು. ಈಗ ನನ್ನ ತೀಕ್ಷ್ಣವಾದ ಬಾಣಗಳಿಂದ ಭೇದಿಸಲ್ಪಟ್ಟ ಶತ್ರುಗಳ ದೇಹವನ್ನೂ ಆನೆ ಕುದುರೆಗಳೇ ಮೊದಲಾದ ಶತ್ರುಸೈನ್ಯವೆಲ್ಲವನ್ನೂ ಇಲ್ಲಿನ ಕ್ರೂರಮೃಗಗಳು ಎಳೆದಾಡಲಿ! ನಾನು ಇದುವರೆಗೆ ಅನೇಕ ಯುದ್ಧಗಳಲ್ಲಿ ನನ್ನ ಧನುರ್ಬಾಣ ಗಳಿಗೆ ಸಾಕಾದಷ್ಟು ಶತ್ರುಸೈನ್ಯಗಳನ್ನು ಆಹುತಿಯಾಗಿ ಕೊಟ್ಟು ಅವುಗಳ ಸಾಲವನ್ನು ತೀರಿಸಿಕೊಂಡೇ ಇರುವೆನು! ಈಗಲೂ ಮಹಾಯುದ್ಧವೊಂದು ಪ್ರಾಪ್ತವಾಗಿರುವುದು. ಇದರಲ್ಲಿಯೂ ಭರತನನ್ನೂ, ಅವನ ಸೇನೆಯನ್ನೂ, ತುಮುರುತುಮುರಾಗಿಸಿ ಅವುಗಳ ವಿಷಯದಲ್ಲಿ ನಾನು ತೀರಿಸಬೇಕಾದ ಉಳಿದ ಸಾಲವನ್ನೂ ತೀರಿಸಿಕೊಳ್ಳುವೆನು" ಎಂದನು.

ಇಲ್ಲಿಗೆ ತೊಂಬತ್ತಾರನೆಯ ಸರ್ಗವು.

ರಾಮನು ಲಕ್ಷ್ಮಣನ ಕೋಪವನ್ನು ಸಮಾಧಾನಪಡಿಸಿದುದು.

ಆಗ ರಾಮನಾದರೋ ಮಿತಿಮೀರಿದ ಕೋಪದಿಂದ ಹೀಗೆ ಆರ್ಭಟಿಸು ತ್ತಿರುವ ಲಕ್ಷ್ಮಣನನ್ನು ನೋಡಿ "ವತ್ಸ ಲಕ್ಷ್ಮಣನೆ! ಕೋಪಿಸಬೇಡ. ಭರತನ ವಿಷಯದಲ್ಲಿ ನೀನು ಹಾಗೆಣಿಸಬೇಡ! ಆತನು ಮಹಾ ಧನುಷ್ಮಂತನು. ಬಹಳ ಪ್ರಾಜ್ಞನು! ತಾನಾಗಿಯೇ ಆತನು ನಮ್ಮಲ್ಲಿಗೆ ಬರುತ್ತಿರುವಾಗ ಆತನಿ ಗಿದಿರಾಗಿ ನಾವು ಕತ್ತಿಯನ್ನೂ ಬಿಲ್ಲನ್ನೂ ಹಿಡಿದು ನಿಲ್ಲುವುದೆಂದರೇನು? ಇದು

ನಮಗುಚಿತವಲ್ಲ! ವತ್ಸನೆ! ನಾವು ಪಿತ್ರಾಜ್ಞೆಯನ್ನು ಪರಿಪಾಲಿಸುವುದಕ್ಕಾಗಿಯೇ ಈ ಕಾಡಿಗೆ ಬಂದಿರುವೆವು. ಈಗ ನಮ್ಮಲ್ಲಿಗೆ ಬರುತ್ತಿರುವ ಭರತನನ್ನು ನಾವು ಕೊಂದುಬಿಟ್ಟರೆ ನಮಗೆ ದೊಡ್ಡ ಲೋಕಾಪವಾದವುಂಟಾಗುವುದೇ ಹೊರತು ಬೇರೆಯಲ್ಲ! ಹೀಗೆ ಲೋಕಾಪವಾದಕ್ಕೆ ಗುರಿಯಾಗಿಯೂ ನಾವು ರಾಜ್ಯವನ್ನು ಸಂಪಾದಿಸಿ ಮಾಡಬೇಕಾದುದೇನು? ವಿಷಮಿಶ್ರವಾಗಿ ಮಾಡಲ್ಪಟ್ಟ ಆಹಾರಗಳಂತೆ ಬಂಧುಗಳನ್ನೂ, ಮಿತ್ರರನ್ನೂ ಕೊಂದು ಸಂಪಾದಿಸಿದ ಹಣವು ನನಗೆ ಯಾವಾಗಲೂ ಪ್ರತಿಗ್ರಾಹ್ಯವಾಗಿರಲಾರದು! ಧರ್ಮವನ್ನಾಗಲಿ, ಅರ್ಥವನ್ನಾಗಲಿ, ಕಾಮವನ್ನಾಗಲಿ, ಕೊನೆಗೆ ಭೂಮಿಯನ್ನಾಗಲಿ, ನಾನು ನಿಮಗೋಸ್ಕರವೇ ಅಪೇಕ್ಷಿಸಬೇಕೇ ಹೊರತು ನನಗೆ ಅದರಿಂದ ಯಾವ ಪ್ರಯೋಜನವೂ ಇಲ್ಲವು. ಇದನ್ನು ನೀನು ನಂಬದಿದ್ದರೆ ಆಣೆಯಿಟ್ಟು ಹೇಳುವೆನು. ರಾಜ್ಯವೆಂಬುದು ಅನೇಕ ವಿಧವಾದ ಕಷ್ಟಗಳಿಗೆ ನಿತ್ಯಾಶ್ರಯವಾಗಿರುವುದು. ಹಾಗಿದ್ದರೂ ನಾನು ಆ ರಾಜ್ಯವನ್ನು ವರಿಸಬೇಕೆಂದರೆ ನನ್ನ ಸಹೋದರರಾದ ನಿಮ್ಮಗಳ ಸಂತೋಷಾರ್ಥವಾಗಿಯೂ, ನಿಮ್ಮ ಸುಖಕ್ಕಾಗಿಯೂ, ನಿಮಗಾಗಿ ಹಣವನ್ನು ಸಂಗ್ರಹಿಸಿಡುವುದಕ್ಕಾಗಿಯೂ ಅಲ್ಲದೆ ಬೇರೆಯಲ್ಲ! ಇದೋ! ಈ ವಿಷಯದಲ್ಲಿ ನನ್ನ ಆಯುಧದ ಮೇಲೆ ಆಣೆಯಿಟ್ಟು ಹೇಳುವೆನು. ಎಲೆ ಸೌಮ್ಯನೆ! ನನಗೆ ಈ ಭೂಮಿಯನ್ನು ಸಂಪಾದಿಸುವುದು ಅಸಾಧ್ಯವೆಂದು ಎಂದಿಗೂ ತಿಳಿಯಬೇಡ! ನಾನು ಮಾತ್ರ ಮನಃಪೂರ್ವಕವಾಗಿ ಪ್ರಯತ್ನಿಸಿದರೆ, ಸಮುದ್ರಪರ್ಯಂತವಾದ ಈ ಸಮಸ್ತ ಭೂಮಿಯನ್ನೂ ನಿಮಿಷ ಮಾತ್ರದಲ್ಲಿ ಕೈವಶಮಾಡಿಕೊಳ್ಳಬಲ್ಲೆನು. ಅಧರ್ಮದಿಂದ ಬರುವುದಾದರೆ ಇಂದ್ರ ಪದವಿಯನ್ನಾದರೂ ನಾನು ಕೋರುವನಲ್ಲ! ಭರತನಿಗಾಗಲಿ, ನಿನಗಾಗಲಿ, ಶತ್ರುಘ್ನನಿಗಾಗಲಿ ಒಂದು ಕೇಡನ್ನುಂಟುಮಾಡಿ, ಪ್ರಿಯ ಸಹೋದರರಾದ ನಿಮ್ಮನ್ನು ಬಿಟ್ಟು ನನಗೆ ಲಭಿಸುವ ಸುಖವು, ಎಷ್ಟೇ ಮಹತ್ತಾಗಿದ್ದರೂ ಅಥವಾ ಅಲ್ಪವಾಗಿದ್ದರೂ ಆ ಸುಖವನ್ನು ಸುಡಬೇಕು. ಆ ಸುಖವನ್ನು ನಾನೆಂದಿಗೂ ಅಪೇಕ್ಷಿಸತಕ್ಕವನಲ್ಲ. ಭರತನನ್ನು ಸಾಮಾನ್ಯನೆಂದು ತಿಳಿಯಬೇಡ! ಆತನು ಅಣ್ಣತಮ್ಮಂದಿರಲ್ಲಿ ಪರಮ ವಾತ್ಸಲ್ಯವುಳ್ಳವನು. ನನಗೆ ಪ್ರಾಣಕ್ಕಿಂತಲೂ ಪ್ರಿಯನಾದವನು. ಆದುದರಿಂದ ಆತನು ಪಿತೃಶುಶ್ರೂಷೆಯೆಂಬ ತನ್ನ ಕುಲಧರ್ಮವನ್ನು ಬಿಟ್ಟಿರಲಾರದೆ ಮಾವನ ಮನೆಯನ್ನು

ಬಿಟ್ಟು ಅಯೋಧ್ಯೆಗೆ ಬಂದಿರಬಹುದು. ಆತನು ಬಂದಮೇಲೆ ನಾನು ತಂದೆಯಾಜ್ಞೆಯಿಂದ ಜಡೆಯನ್ನೂ, ನಾರುಮಡಿಯನ್ನೂ ಧರಿಸಿ, ಸೀತೆಯನ್ನೂ ನಿನ್ನನ್ನೂ ಕರೆದುಕೊಂಡು ಇತ್ತಲಾಗಿ ಕಾಡಿಗೆ ಹೊರಟು ಬಂದ ವೃತ್ತಾಂತವನ್ನು ಕೇಳಿ ನಮ್ಮಲ್ಲಿ ಸ್ನೇಹದಿಂದಲೂ, ದುಃಖದಿಂದಲೂ, ಕದಲಿದ ಮನಸುಳ್ಳವನಾಗಿ ನಮ್ಮನ್ನು ಬಿಟ್ಟಿರಲಾರದೆ ಇಲ್ಲಿಗೆ ಹೊರಟು ಬಂದಿದ್ದರೂ ಬಂದಿರಬಹುದು. ಹೀಗಲ್ಲದೆ ಆತನು ಬೇರೆ ದುರಭಿಪ್ರಾಯದಿಂದ ಎಂದಿಗೂ ಬಂದಿರಲಾರನು. ಈ ಭಾಗದಲ್ಲಿ ಆತನು ತನ್ನ ತಾಯಿಯಾದ ಕೈಕೇಯಿಯನ್ನೂ ಲಕ್ಷ್ಯಮಾಡತಕ್ಕವನಲ್ಲ. ಆಕೆಯ ಅಭಿಪ್ರಾಯಕ್ಕೆ ಆತನು ಕೋಪಿಸಿಕೊಂಡು, ಆಕೆಯನ್ನೂ ಕ್ರೂರವಾಗಿ ನಿಂದಿಸಿ, ನಮ್ಮ ತಂದೆಗೂ ಸಮಾಧಾನವನ್ನು ಹೇಳಿ, ಆತನನ್ನೂ ತನ್ನ ದಾರಿಗೆ ಬರುವಂತೆ ಮಾಡಿಕೊಂಡು ನನಗೆ ರಾಜ್ಯವನ್ನು ಕೊಡಿಸುವುದಕ್ಕಾಗಿಯೇ ಇಲ್ಲಿಗೆ ಹೊರಟು ಬಂದಿರಬಹುದು. ಭರತನು ಈಗ ಇಲ್ಲಿಗೆ ಆ ಅಭಿಪ್ರಾಯದಿಂದ ಹೊರಟುಬರುವುದಕ್ಕೆ ಇದು ಸಕಾಲವಾಗಿಯೇ ಇರುವುದಲ್ಲವೆ? ಈತನು ನಮ್ಮ ವಿಷಯದಲ್ಲಿ ಮನಸ್ಸಿನಿಂದಲಾದರೂ ಕೇಡನ್ನೆಣಿಸತಕ್ಕವನಲ್ಲ! ವತ್ಸ ಲಕ್ಷ್ಮಣನೆ! ನೀನೇ ಪರ್ಯಾಲೋಚಿಸಿ ನೋಡು! ಇದುವರೆಗೆ ಆತನು ನಿನಗೆ ಯಾವುದಾದರೂ ಅಪ್ರಿಯವಾಕ್ಯವನ್ನಾಗಲಿ ಹೇಳಿರುವನೆ? ನಿನಗೆ ಭಯವನ್ನು ಹುಟ್ಟಿಸತಕ್ಕ ಮಾತುಗಳು ಎಂದಾದರೂ ಅವನ ಬಾಯಿಂದ ಹೊರಟಿರುವುವೆ? ಆತನ ವಿಷಯದಲ್ಲಿ ನೀನು ಹೀಗೆ ಸಂದೇಹಿಸುವುದಕ್ಕೆ ಕಾರಣವೇನು? ನೀನು ಈಗ ಭರತನನ್ನು ನೋಡಿದಾಗ ಎಷ್ಟು ಮಾತ್ರಕ್ಕೂ ಕ್ರೂರವಾಕ್ಯವನ್ನಾಗಲಿ, ಅಪ್ರಿಯವನ್ನಾಗಲಿ, ಹೇಳಲೇ ಕೂಡದು! ನೀನು ಆತನ ವಿಷಯದಲ್ಲಿ ಯಾವುದಾದರೂ ಅಪ್ರಿಯವನ್ನು ಹೇಳಿದ ಪಕ್ಷದಲ್ಲಿ, ಅದು ನನಗೆ ಹೇಳಿದಂತೆಯೇ ಆಗುವುದು. ಎಲೆ ವತ್ಸನೆ! ಅದು ಹೋಗಲಿ! [1]ಲೋಕದಲ್ಲಿ ಎಷ್ಟೇ ಆಪತ್ತಿನಲ್ಲಿ ಸಿಕ್ಕಿದ್ದರೂ ಮಕ್ಕಳು ತಂದೆಯನ್ನಾಗಲಿ, ಒಡಹುಟ್ಟಿದವರು ತಮ್ಮ ಅಣ್ಣತಮ್ಮಂದಿರನ್ನಾಗಲಿ ಕೊಂದುದನ್ನು ನೀನು ಕೇಳಿರುವೆಯಾ?

---

[1] ಲಕ್ಷ್ಮಣನು ಮೊದಲು ತನ್ನ ತಂದೆಯಾದ ದಶರಥನನ್ನೇ ಕೊಂದುಬಿಡಬೇಕೆಂದು ಹೇಳಿದ್ದನಲ್ಲದೆ, ಈಗ ಭರತನ ವಿಷಯದಲ್ಲಿಯೂ ಅದೇ ವಿರೋಧಬುದ್ಧಿಯನ್ನಿಟ್ಟು ಅವನನ್ನೂ ಕೊಂದುಬಿಡಬೇಕೆಂದು ಹೇಳುತ್ತಿರುವನು. ಈಗ ಸುಮ್ಮನಿದ್ದರೆ ಏನಾದರೂ ಅನರ್ಥವು ನಡೆದು ಕಾರ್ಯಹಾನಿಯುಂಟಾಗಬಹುದೆಂಬ ಶಂಕೆಯಿಂದ, ರಾಮನು ಆತನಿಗೆ ಲೋಕಸಾಮಾನ್ಯವಾದ ಈ ಬುದ್ಧಿವಾದಗಳನ್ನು ಹೇಳಿದುದಾಗಿ ಗ್ರಹಿಸಬೇಕು.

ಪ್ರಾಣಕ್ಕೆ ಸಮಾನರಾದ ಅಂತಹ ಪ್ರಿಯಬಂಧುಗಳನ್ನು ಯಾರು ತಾನೇ ಕೊಲ್ಲುವರು? ಲಕ್ಷ್ಮಣನೆ! ಒಂದು ವೇಳೆ ನೀನು ರಾಜ್ಯದಾಸೆಗಾಗಿ ಈ ಮಾತುಗಳನ್ನು ಹೇಳಿರಬಹುದು. ಹಾಗಿದ್ದರೆ ಆ ಭರತನು ಇಲ್ಲಿಗೆ ಬಂದ ಮೇಲೆ ನಾನೇ ಆತನನ್ನು ನೋಡಿ "ನಿನ್ನ ರಾಜ್ಯವನ್ನು ಲಕ್ಷ್ಮಣನಿಗೆ ಕೊಟ್ಟು ಬಿಡು" ಎಂದು ಹೇಳುವೆನು. ಆಗ ಅವನ ಸುಸ್ವಭಾವವನ್ನು ನೀನೇ ಚೆನ್ನಾಗಿ ತಿಳಿಯಬಹುದು. ನಾನು ಈ ಮಾತನ್ನು ಮನಃಪೂರ್ವಕವಾಗಲ್ಲದೆ ಕೇವಲ ಪರೀಕ್ಷಾರ್ಥವಾಗಿಯೇ ಹೇಳಿದರೂ, ಆತನು ಅದನ್ನೇ ನಿಜವೆಂದು ನಂಬಿ "ಹಾಗೆಯೇ ಆಗಲಿ" ಎಂದು ಹೇಳುವನೇ ಹೊರತು ಬೇರೆ ಮಾತನ್ನೇ ಆಡಲಾರನು" ಎಂದನು. ಧರ್ಮಶೀಲನಾದ ರಾಮನು ಹೀಗೆ ಹೇಳಿದ ಬುದ್ಧಿವಾದಗಳನ್ನು ಕೇಳಿದೊಡನೆಯೇ ಲಕ್ಷ್ಮಣನಿಗೆ ನಾಚಿಕೆಯಿಂದ ಮೈಯೆಲ್ಲವೂ ಕುಗ್ಗಿತು. ತನ್ನ ಅವಯವಗಳಲ್ಲಿಯೇ ತಾನು ಮರೆಸಿಕೊಂಡಂತೆ ಉಡುಗಿದ ದೇಹವುಳ್ಳವನಾಗಿದ್ದನು. ಆತನ ತಲೆಯು ತಗ್ಗಿತು. ಲಕ್ಷ್ಮಣನಾದರೋ ರಾಮನ ಮನಸ್ಸನ್ನೇ ಅನುವರ್ತಿಸಿ, ಆತನಿಗೆ ಹಿತವಾಗಿಯೇ ನಡೆಯತಕ್ಕವನು. ಈಗಲೂ ಭರತನು ರಾಮನಿಗೆ ಯಾವ ಅಪಾಯವನ್ನು ತಂದಿಡುವನೋ ಎಂಬ ಭಯದಿಂದಲೇ ಹಿಂದು ಮುಂದು ನೋಡದೆ ರಾಮನ ಮನೋಭಿಪ್ರಾಯಕ್ಕೆ ವಿರೋಧವಾಗಿ ಈ ಮಾತುಗಳನ್ನಾಡಿಬಿಟ್ಟನು. ಹಾಗಿದ್ದರೂ ಆತನಿಗೆ ಈಗ ಮಿತಿಮೀರಿದ ನಾಚಿಕೆಯುಂಟಾಯಿತು. ಆಗ ರಾಮನನ್ನು ನೋಡಿ "ಅಣ್ಣಾ! ಒಂದು ವೇಳೆ ನಮ್ಮ ತಂದೆಯಾದ ದಶರಥನು ನಿನ್ನನ್ನು ನೋಡಬೇಕೆಂದು ತಾನಾಗಿಯೇ ಇಲ್ಲಿಗೆ ಬರುತ್ತಿರಬಹುದೆಂದೂ ನನಗೆ ತೋರುವುದು" ಎಂದನು. ಹೀಗೆ ಲಜ್ಜಿತನಾಗಿ ಬೇರೊಂದು ವಿಷಯವನ್ನೆತ್ತುತ್ತಿರುವ ಲಕ್ಷ್ಮಣನನ್ನು ನೋಡಿ ರಾಮನು, ಆತನಿಗುಂಟಾಗಿರುವ ಮಿತಿಮೀರಿದ ನಾಚಿಕೆಯನ್ನು ಹೋಗಲಾಡಿಸುವುದಕ್ಕಾಗಿ ಆತನ ಮಾತನ್ನೇ ಅನುಸರಿಸಿ "ವತ್ಸನೆ! ಹಾಗಿದ್ದರೂ ಇರಬಹುದು! ಮಹಾಬಾಹುವಾದ ದಶರಥನೇ ನಮ್ಮನ್ನು ನೋಡುವುದಕ್ಕಾಗಿ ತಾನಾಗಿ ಇಲ್ಲಿಗೆ ಹೊರಟು ಬರುವ ಸಂಭವವೂ ಉಂಟು. ಅಥವಾ ಅವನು ಸುಖಾರ್ಹರಾದ ನಮಗೆ ಈ ವನವಾಸದ ಕಷ್ಟವು ಯೋಗ್ಯವಲ್ಲವೆಂದು ಮನಸ್ಸಿನಲ್ಲಿ ನೆನೆಸಿಕೊಂಡು, ನಮ್ಮನ್ನು ಹಿಂತಿರುಗಿಸಿ ಮನೆಗೆ ಕರೆದುಕೊಂಡು ಹೋಗುವುದಕ್ಕಾಗಿಯೇ ಇಲ್ಲಿಗೆ ಬರುತ್ತಿದ್ದರೂ ಇರಬಹುದು. ಹಾಗಿಲ್ಲದಿದ್ದರೆ

ಕೊನೆಗೆ ಆತನು ಯಾವಾಗಲೂ ಸುಖವನ್ನೇ ಅನುಭವಿಸುವುದಕ್ಕೆ ಯೋಗ್ಯಳಾದ ಈ ಸೀತೆಯೊಬ್ಬಳನ್ನಾದರೂ ಮನೆಗೆ ಕರೆದುಕೊಂಡು ಹೋಗದೆ ಬಿಡಲಾರ ನೆಂದೇ ತೋರುವುದು. ಎಲೈ! ವೀರನೇ! ಅದೋ ನೋಡು! ಅಲ್ಲಿ ವಾಯು ವೇಗವುಳ್ಳವುಗಳಾಗಿ, ಉತ್ತಮಜಾತಿಯಲ್ಲಿ ಹುಟ್ಟಿ, ಅಂದವಾದ ರೂಪವುಳ್ಳ ಆ ರಥಾಶ್ವಗಳೆರಡನ್ನೂ ನೋಡು. ಅವು ನಮ್ಮ ತಂದೆಯ ರಥಾಶ್ವಗಳಲ್ಲವೆ? ಮತ್ತು ಅಲ್ಲಿ ಮಹಾದೇಹವುಳ್ಳ ಶತ್ರುಂಜಯವೆಂಬ ನಮ್ಮ ತಂದೆಯ ಪಟ್ಟ ದಾನೆಯೂ ಆ ಸೇನೆಯ ಮುಂಭಾಗದಲ್ಲಿ ಬರುತ್ತಿರುವುದನ್ನು ನೋಡಿದೆಯಾ? ವತ್ಸ ಲಕ್ಷ್ಮಣನೆ! ಅದು ಹಾಗಿರಲಿ! ಇದೇನು? ನಮ್ಮ ತಂದೆಗೆ ಮುಖ್ಯ ರಾಜ ಚಿಹ್ನವಾಗಿ ಲೋಕಪೂಜ್ಯವೆನಿಸಿಕೊಂಡಿರುವ ಶ್ವೇತಚ್ಛತ್ರವು ಮಾತ್ರ ಇಲ್ಲಿರುವ ಹಾಗೆ ಕಾಣಲಿಲ್ಲ. ಇದನ್ನು ನೋಡಿದರೆ ನನ್ನ ಮನಸ್ಸಿಗೇನೋ ಬಹಳ ಸಂದೇಹವುಂಟಾಗಿರುವುದು. ನಮ್ಮ ತಂದೆಯು ಯಾವಾಗಲೂ ಹೀಗೆ ಹೊರಟವನಲ್ಲ. ವತ್ಸನೆ! ಹೇಗಾದರೂ ಆಗಲಿ! ಇನ್ನು ನೀನು ಮರ ದಿಂದಿಳಿದು ಬಾ! ನಾನು ನಿನಗೆ ಹಿಂದೆ ಹೇಳಿದ ವಿಷಯಗಳನ್ನು ಮಾತ್ರ ಚೆನ್ನಾಗಿ ಮನಸ್ಸಿನಲ್ಲಿಟ್ಟು ನಾನು ಹೇಳಿದಂತೆಯೇ ಶಾಂತನಾಗಿರು" ಎಂದನು. ಧರ್ಮಾತ್ಮನಾದ ರಾಮನು ಹೇಳಿದ ಮಾತನ್ನು ಕೇಳಿ ಲಕ್ಷ್ಮಣನು ಆಗಲೇ ಮರ ದಿಂದಿಳಿದು ಬಂದು ರಾಮನ ಪಾರ್ಶ್ವದಲ್ಲಿ ಕೈಕಟ್ಟಿಕೊಂಡು ನಿಂತಿದ್ದನು. ಇತ್ತಲಾಗಿ ಭರತನು ತನ್ನ ಸೈನ್ಯಕ್ಕೆ ಆ ಪರ್ವತ ಪ್ರಾಂತಗಳಲ್ಲಿ ಯಾವುದೊಂದು ಗದ್ದಲವನ್ನೂ ಮಾಡಬಾರದೆಂದು ನಿಯಮಿಸಿ, ಆ ಸೈನ್ಯಗಳೆಲ್ಲವನ್ನೂ ದೂರ ದೂರದಲ್ಲಿಯೇ ನಿಲ್ಲಿಸಿಬಿಟ್ಟನು. ಆತನಾಜ್ಞೆಯಂತೆ ಅವನ ಚತುರಂಗ ಸೈನ್ಯವೂ ಆ ಪರ್ವತದ ಪಾರ್ಶ್ವಗಳಲ್ಲಿ ಒಂದೂವರೆ ಯೋಜನದ ದೂರದವರೆಗೆ ವ್ಯಾಪಿಸಿ ಮಂಡಲಾಕಾರವಾಗಿ ನಿಂತಿತು. ಆಗ ಭರತನು ತನ್ನ ಸಮಸ್ತ ಸೈನ್ಯವನ್ನೂ ಆಶ್ರಮಕ್ಕೆ ನಡೆಸಿಕೊಂಡು ಹೋದರೆ ರಾಮನನ್ನು ಪ್ರಸನ್ನನಾಗಿ ಮಾಡುವುದು ಕಷ್ಟವಾಗುವುದೆಂಬ ನೀತಿಯನ್ನು ಪರ್ಯಾಲೋಚಿಸಿ ವಿನಯವೇಷದಿಂದಲೇ ಆತನ ಸಮೀಪಕ್ಕೆ ಹೋಗಬೇಕೆಂಬ ಧರ್ಮವನ್ನು ಮುಂದಿಟ್ಟುಕೊಂಡು, ಗರ್ವವನ್ನು ಬಿಟ್ಟು, ತಾನು ಮಾತ್ರ ಮುಂದೆ ಹೊರಟನು. ಸೈನ್ಯವೆಲ್ಲವೂ ಆತನ ಆಜ್ಞೆಗೆ ಕಟ್ಟುಬಿದ್ದು ಆ ಪರ್ವತ ಪ್ರಾಂತ್ಯಗಳಲ್ಲಿಯೇ ಅಲ್ಲಲ್ಲಿ ನಿಂತಿದ್ದುವು.

ಇದು ತೊಂಬತ್ತೇಳನೆಯ ಸರ್ಗವು.

> ಭರತನು ಪಾದಚಾರಿಯಾಗಿ ಹೊರಟು ರಾಮಾಶ್ರಮವನ್ನು ಹುಡುಕುತ್ತಿದ್ದುದು. ಹೊಗೆಯ ಗುರುತನ್ನು ನೋಡಿದ ಮೇಲೆ ಇತರ ಪರಿವಾರಗಳನ್ನೂ ಅಲ್ಲಿಯೇ ನಿಲ್ಲಿಸಿ, ಗುಹ ಶತ್ರುಘ್ನರೊಡನೆ ಮುಂದೆ ಬಂದುದು.

ಪರಮಧಾರ್ಮಿಕನಾದ ರಾಮನ ಬಳಿಗೆ ನಡೆದು ಹೋಗತಕ್ಕ ಭಾಗ್ಯವು ತನ್ನ ಕಾಲುಗಳಿಗೆ ಸಂಭವಿಸಿದುದಕ್ಕಾಗಿ, ಧನ್ಯವಾದ ಪಾದಪದ್ಮವುಳ್ಳವನೆನಿಸಿ ಕೊಂಡ ಭರತನು, ಸೇನೆಯನ್ನು ಅಲ್ಲಿಯೇ ನಿಲ್ಲಿಸಿ, ಪಿತ್ರಾಜ್ಞಾನುವರ್ತಿಯಾದ ಅಣ್ಣನನ್ನು ಹುಡುಕಿಕೊಂಡು ಪಾದಚಾರಿಯಾಗಿಯೇ ಹೊರಡಬೇಕೆಂದುದ್ದೇಶಿಸಿದನು. ಸೈನ್ಯವು ತಮತಮಗೆ ಅನುಕೂಲವಾದ ಸ್ಥಳವನ್ನು ಕಲ್ಪಿಸಿಕೊಂಡು ಅಲ್ಲಲ್ಲಿ ನಿಂತೊಡನೆಯೇ, ಭರತನು ವಿನಯವೇಷವನ್ನು ಧರಿಸಿ, ಪಕ್ಕದಲ್ಲಿದ್ದ ಶತ್ರುಘ್ನನನ್ನು ನೋಡಿ, "ವತ್ಸ ಶತ್ರುಘ್ನನೆ! ನೀನು ನಮ್ಮ ಸೇನೆಯಲ್ಲಿ ಕೆಲವು ಮನುಷ್ಯರನ್ನೂ, ಕೆಲವು ಬೇಡರನ್ನೂ ಸಹಾಯಕ್ಕಾಗಿ ಕರೆದುಕೊಂಡು, ಈ ವನದ ಸುತ್ತಲೂ ಹುಡುಕಿಬರಬೇಕು. ಹಾಗೆಯೇ ಈ ಗುಹನೂ ಧನುರ್ಬಾಣ ಧಾರಿಗಳಾದ ತನ್ನ ಕಡೆಯ ಸಾವಿರಾರು ಮಂದಿ ಬೇಡರೊಡನೆ ಹೊರಟು, ರಾಮ ಲಕ್ಷ್ಮಣರಿರುವ ಸ್ಥಳವನ್ನು ಹುಡುಕಿ ಬರಲಿ! ನಾನೂ ನಮ್ಮ ಮಂತ್ರಿಗಳನ್ನೂ, ಪುರವಾಸಿಗಳನ್ನೂ, ಗುರುಜನರನ್ನೂ, ಕೆಲವು ಬ್ರಾಹ್ಮಣರನ್ನೂ, ಸಂಗಡ ಕರೆದುಕೊಂಡು ಕಾಲುನಡೆಯಿಂದಲೇ ಈ ಕಾಡುಗಳೆಲ್ಲವನ್ನೂ ಸುತ್ತಿಬರುವೆನು. ರಾಮನನ್ನಾಗಲಿ, ಬಲಾಢ್ಯನಾದ ಲಕ್ಷ್ಮಣನನ್ನಾಗಲಿ, ಭಾಗ್ಯವತಿಯಾದ ಸೀತೆಯನ್ನಾಗಲಿ ಕಣ್ಣಾರೆಕಂಡ ಹೊರತು ನನ್ನ ಮನಸ್ಸಿಗೆ ನೆಮ್ಮದಿಯಿರದು. ಕಮಲದಳಗಳಂತಿರುವ ಕಣ್ಣುಗಳಿಂದ ಕೂಡಿ, ಚಂದ್ರಬಿಂಬಕ್ಕೆ ಸಮಾನ ವಾಗಿರುವ ಆ ನನ್ನ ಅಣ್ಣನ ಮುಖವನ್ನು ಕಂಡಹೊರತು ನನ್ನ ಮನಸ್ಸಿಗೆ ಸಮಾಧಾನವಿಲ್ಲ. ರಾಜಚಿಹ್ನೆಗಳಿಂದ ಕೂಡಿದ ಆ ನನ್ನ ಅಣ್ಣನ ಪಾದ ಕಮಲಗಳನ್ನು ನಾನು ನನ್ನ ಶಿರಸ್ಸಿನಿಂದ ಧರಿಸಿದ ಹೊರತು ನನ್ನ ಮನಸ್ಸಿಗೆ ಶಾಂತಿಯುಂಟಾಗದು. ರಾಜ್ಯಾರ್ಹನಾದ ಆ ರಾಮನು ನಮ್ಮ ಪಿತೃಪಿತಾಮಹ ಪರಂಪರೆಯಾಗಿ ಬಂದ ರಾಜ್ಯದಲ್ಲಿ ನೆಲೆಗೊಂಡು, ಅಭಿಷೇಕತೀರ್ಥದಿಂದ ಪ್ರೋಕ್ಷಿಸಲ್ಪಡುವುದನ್ನು ನೋಡಿದ ಹೊರತು ನನ್ನ ಮನಸ್ಸಿನ ಕಳವಳವು ನಿಲ್ಲದು. ಆಹಾ! ಚಂದ್ರಬಿಂಬಕ್ಕೆ ಸಮಾನವಾದ ಆ ರಾಮನ ಮುಖವನ್ನು ಎಡಬಿಡದೆ

ಯಾವಾಗಲೂ ನೋಡುತ್ತಿರುವ ಲಕ್ಷ್ಮಣನೇ ಪರಮಭಾಗ್ಯಶಾಲಿಯು! ಆತನೇ ಧನ್ಯನು! ಸಮುದ್ರಮೇಖಲೆಯಾದ ಈ ಸಮಸ್ತಭೂಮಿಗೂ ಅಧಿನಾಥನಾದ ರಾಮನನ್ನು ಹಿಂಬಾಲಿಸಿ ಹೋಗಿರುವ ಆ ಸೀತೆಯೇ ಕೃತಾರ್ಥಳು. ಆಕೆಯೇ ಪರಮಭಾಗ್ಯಶಾಲಿನಿಯು! [1]ನಂದವನದಲ್ಲಿ ಕುಬೇರನು ವಿಹರಿಸುವಂತೆ, ಇಲ್ಲಿ

---

[1] ಇಲ್ಲಿ "ಸುಭಗಶ್ಚಿತ್ರಕೂಟೋಽಸೌ ಗಿರಿರಾಜೋಪಮೋ ಗಿರಿಃ। ಯಸ್ಮಿನ್ ವಸತಿ ಕಾಕುತ್ಸ್ಥಃ ಕುಬೇರ ಇವ ನಂದನೇ ॥" ಎಂದು ಮೂಲವು. ಇದಕ್ಕೆ ಗೋವಿಂದರಾಜೀಯ ವ್ಯಾಖ್ಯಾನಾನುಸಾರವಾದ ವಿಶೇಷಾರ್ಥಗಳೇನೆಂದರೆ :— (ಸುಭಗಃ) ಅತಿಮನೋಹರವಾದುದು ರಾಮನ ವಾಸಸ್ಥಳವಾಗಿರುವುದರಿಂದ, ಬೇರೆ ಎಲ್ಲಾ ಸ್ಥಳಗಳಿಗಿಂತಲೂ ಮನೋಹರವಾದುದೆಂದು ಭಾವವು. ಮತ್ತು (ಚಿತ್ರಕೂಟಃ) ವಿಚಿತ್ರವಾದ ಶಿಖರಗಳುಳ್ಳುದು. ಶ್ರೀರಾಮನ ನಿವಾಸಯೋಗ್ಯವಾದುದರಿಂದ ಇದಕ್ಕೆ ಈ ವಿಧವಾಗಿ ಅನನ್ಯಸಾಧಾರಣವಾದ ಶೋಭೆಯುಂಟಾಗಿರುವುದು. ಮಾತ್ರವೇ ಅಲ್ಲದೆ, ಸಹಜವಾದ ತನ್ನ ಸ್ವರೂಪದಿಂದಲೂ ಇದು ಲೋಕಮೋಹಕವಾಗಿರುವುದೆಂದು ಭಾವವು. (ಅಸೌ) "ಇದು" ಎಂದರೆ ಪೂರ್ವದಲ್ಲಿ ವಿಭೀಷಣನು ರಾಮನನ್ನು ಪ್ರಾರ್ಥಿಸಿ, ರಘುವಂಶದವರ ಗೃಹಾರಾಧನದಲ್ಲಿದ್ದ ರಂಗನಾಥಮೂರ್ತಿಯನ್ನು ತಮ್ಮ ರಾಜಧಾನಿಯಾದ ಲಂಕೆಗೆ ಬಿಜಯಮಾಡಿಸಿಕೊಂಡು ಹೋಗುತ್ತಿದ್ದಾಗ, ದಾರಿಯಲ್ಲಿ ಶ್ರೀರಂಗನಾಥನು ಶ್ರೀರಂಗಕ್ಷೇತ್ರದ ಯೋಗ್ಯತೆಯನ್ನು ನೋಡಿ, ಅಲ್ಲಿಯೇ ಸ್ಥಿರವಾಗಿ ನೆಲೆಸಿಬಿಟ್ಟಂತೆ, ಈಗ ರಾಮನೂ ಅಯೋಧ್ಯೆಯಿಂದ ದಂಡಕಾವನಕ್ಕೆ ಹೊರಟುಬರುವಾಗ, ನಡುದಾರಿಯಲ್ಲಿ ಸಿಕ್ಕಿದ ಈ ಪರ್ವತದ ಅಂದವನ್ನು ನೋಡಿ, ಮೋಹಗೊಂಡು ಇಲ್ಲಿಯೇ ನಿಂತುಬಿಟ್ಟಿರುವನಲ್ಲವೆ? ಹೀಗೆ ರಾಮನ ಮನಸ್ಸನ್ನೂ ಆಕರ್ಷಿಸಿದ ಮಹಾಮಹಿಮೆಯುಳ್ಳ ಈ ಪ್ರದೇಶವೆಂದು ಭಾವವು. ಮತ್ತು (ಗಿರಿರಾಜೋಪಮಃ) ಸಾಕ್ಷಾತ್ ಶ್ರೀನಿವಾಸನ ಸಾನ್ನಿಧ್ಯದಿಂದ ಪ್ರಸಿದ್ಧಿಹೊಂದಿರುವ ವೇಂಕಟಾಚಲವೆಂಬ ಪುಣ್ಯಕ್ಷೇತ್ರಕ್ಕೆ ಸಮಾನವಾದುದು. (ಯಸ್ಮಿನ್ ವಸತಿ ಕಾಕುತ್ಸ್ಥಃ) ರಾಮನು ಸುಖದಿಂದ ವಾಸಮಾಡುತ್ತಿರುವ ಸ್ಥಳವು. ಸಾಕ್ಷಾದ್ಭಗವದಂಶದಿಂದವತರಿಸಿದ ರಾಮನು ಹುಟ್ಟಿ ಕೆಲವು ಕಾಲ ಕಳೆದ ಮೇಲೆ ಆತನನ್ನಗಲಿದ ಅಯೋಧ್ಯೆಯಂತೆಯೂ ಅಲ್ಲದೆ, ಆತನು ಹುಟ್ಟಿದೊಡನೆಯೇ ಆತನನ್ನಗಲಿದ ಮಧುರಾಪುರಿಯಂತೆಯೂ ಅಲ್ಲದೆ, ಆತನ ನಿತ್ಯವಾಸಕ್ಕೆ ಯೋಗ್ಯವಾದ ನಿರತಿಶಯವಾದ ಸ್ಥಳವೆಂದು ಭಾವವು. (ಕಾಕುತ್ಸ್ಥೋ ಯಸ್ಮಿನ್ ವಸತಿ) ಈತನು ಈ ಪರ್ವತದಲ್ಲಿರುವುದರಿಂದ, ಇವನ ಕುಲಕ್ಕೆ ಕೂಟಸ್ಥನಾದ ರಾಮನೊಬ್ಬನು, ವೃಷಭರೂಪವನ್ನು ಧರಿಸಿದ ಇಂದ್ರನ ಹೆಗಲಿನ ಮೇಲೆ ಕುಳಿತಂತೆ, ಈ ಪ್ರದೇಶಕ್ಕೆ ಇದೊಂದು ಶೋಭೆಯನ್ನುಂಟುಮಾಡುತ್ತಿರುವುದೆಂದು ಭಾವವು. ಮತ್ತು (ಕುಬೇರ ಇವ ನಂದನೇ) ಕುಬೇರನು ತನಗೆ ಸ್ವಕೀಯವಾದ ಚೈತ್ರರಥವೆಂಬ ಉದ್ಯಾನವನ್ನು ಬಿಟ್ಟು, ಇಂದ್ರನ ವಿಹಾರೋದ್ಯಾನವಾದ ನಂದನವನದಲ್ಲಿ ಆಸೆಪಟ್ಟು ಅಲ್ಲಿ ಹೋಗಿ ವಿಹರಿಸುವಂತೆ, ರಾಮನು

ಕಾಕುತ್ಥ್ಸನಾದ ಈ ರಾಮನು ವಾಸಮಾಡುತ್ತಿರುವುದರಿಂದ ಹಿಮವತ್ಪರ್ವತಕ್ಕೆ ಸಮಾನವಾದ ಈ ಬೆಟ್ಟವೂ ಎಷ್ಟೋ ಭಾಗ್ಯವುಳ್ಳುದೆಂದೆಣಿಸುವೆನು. ಈ ಅರಣ್ಯವು ಅನೇಕ ಕ್ರೂರಮೃಗಗಳಿಗಾಶ್ರಯವಾಗಿ ದುರ್ಗಮವಾಗಿದ್ದರೂ, ಮಹಾತೇಜಸ್ವಿಯಾಗಿ, ಶಸ್ತ್ರಧಾರಿಗಳಲ್ಲಿ ಶ್ರೇಷ್ಠನೆನಿಸಿಕೊಂಡಿರುವ ರಾಮನು ಇದರಲ್ಲಿ ವಾಸಮಾಡುವುದರಿಂದ ಕೃತಾರ್ಥವಾಯಿತಲ್ಲವೆ?" ಎಂದು ಹೇಳಿ ಪ್ರಲಾಪಿಸುತ್ತ, ಪುರುಷಶ್ರೇಷ್ಠನಾಗಿಯೂ ತೇಜಸ್ವಿಯಾಗಿಯೂ ಇರುವ ಭರತನು ಕಾಲುನಡೆಯಿಂದಲೇ ಆ ವನವನ್ನು ಪ್ರವೇಶಿಸಿ ಸುತ್ತುತ್ತಿದ್ದನು. ಅಲ್ಲಲ್ಲಿ ತಪ್ಪಲುಗಳಲ್ಲಿ ಬೆಳೆದಿರುವ ಪುಷ್ಪಿತಗಳಾದ ಮರಗಳ ಗುಂಪಿನ ನಡುವೆ, ರಾಮನೊಡನೆ ತಾನು ಹೇಳಬೇಕಾದ ಮಾತುಗಳನ್ನೇ ಚಿಂತಿಸುತ್ತ ಹೋದನು. ಮುಂದೆ ಪುಷ್ಪಿತವಾಗಿದ್ದ ಒಂದು ದೊಡ್ಡ ಮರದಡಿಯಲ್ಲಿ ನಿಂತಾಗ, ಆಶ್ರಮಮಧ್ಯದಿಂದ ಹೊಗೆಯು ಹೊರಡುತ್ತಿರುವುದನ್ನು ಸ್ಪಷ್ಟವಾಗಿ ಕಂಡನು. ಆಗಲೇ ಆತನ ಸಂತೋಷವು ಉಕ್ಕಿತು. ಆತನ ಸಂಗಡಿಗರೂ ಅತ್ಯಾನಂದ

ಅಯೋಧ್ಯೆಯನ್ನು ಬಿಟ್ಟು ಬಂದು ಇಲ್ಲಿ ವಿಹರಿಸುವನೆಂದೂ ಭಾವವು: ಅಥವಾ "ಇಕ್ಷ್ವಾಕೂಣಾಮಿಯಂ ಭೂಮಿಸ್ಸಶೈಲವನಕಾನನಾ" ಎಂಬಂತೆ, ಆ ಚಿತ್ರಕೂಟವೂ ಕೋಸಲ ದೇಶಕ್ಕೆ ಸೇರಿದುದಾಗಿರುವುದರಿಂದ, ಮನೆಯನ್ನು ಬಿಟ್ಟು ಗೃಹೋದ್ಯಾನದಲ್ಲಿ ವಿಹರಿಸುವ ಕುಬೇರನಂತೆ ರಾಮನೂ ಅರಮನೆಯನ್ನು ಬಿಟ್ಟುಬಂದು ಅದಕ್ಕೆ ಹೊರತೋಟದಂತಿರುವ ಇಲ್ಲಿ ವಿಹರಿಸುತ್ತಿರುವನೆಂದೂ ಗ್ರಹಿಸಬಹುದು. ಮತ್ತು (ಕುಬೇರ ಇವ ನಂದನೇ) "ಕು" ಭೂಮಿಯನ್ನೇ "ಬೇರಃ" ಶರೀರವಾಗಿ ಉಳ್ಳವನು. ಜಗಚ್ಛರೀರಿಯಾದ ಪರಮಾತ್ಮನೆಂದರ್ಥವು (ನಂದನೇ) ವೈಕುಂಠೋದ್ಯಾನದಲ್ಲಿ ವಿಹರಿಸುವಂತೆ ರಾಮನು ಇಲ್ಲಿ ವಾಸಿಸುತ್ತಿರುವನೆಂದೂ ಭಾವವು. (ಇಲ್ಲಿ "ಯಸ್ಮಿನ್ ವಸತಿ ಕಾಕುತ್ಥ್ಸಃ) ಮತ್ತು (ಗಿರಿರಾಜೋಪಮಃ) ಎಂಬಿವುಗಳಿಂದ, ನಮ್ಮ ಭರತಖಂಡದಲ್ಲಿ, "ಶ್ರೀರಂಗಮಂಗಲಮಣಿಂ ಕರುಣಾನಿವಾಸಂ ಶ್ರೀವೇಂಕಟಾದ್ರಿ ಶಿಖರಾಲಯ ಕಾಲಮೇಘಂ। ಶ್ರೀಹಸ್ತಿಶೈಲ ಶಿಖರೋಜ್ಜ್ವಲ ಪಾರಿಜಾತಂ ಶ್ರೀಶಂ ನಮಾಮಿ ಶಿರಸಾ ಯದುಶೈಲದೀಪಂ" ಎಂಬುದಾಗಿ, ನಮ್ಮ ಪೂರ್ವಾಚಾರ್ಯರಿಂದ ಕೀರ್ತಿಸಲ್ಪಟ್ಟು ಪ್ರಸಿದ್ಧಿಗೊಂಡ ಶ್ರೀರಂಗಾದಿಗಳಾದ ನಾಲ್ಕು ದಿವ್ಯ ಕ್ಷೇತ್ರಗಳೂ ಧ್ವನಿತವಾಗುವುವು. ಕಕುತ್ಥ್ಸವಂಶದವರಿಗೆ ಕುಲಧನವಾದ ಶ್ರೀರಂಗನಾಥನು ವಾಸಮಾಡತಕ್ಕ ಶ್ರೀರಂಗಕ್ಷೇತ್ರವೂ, ವೆಂಕಟಗಿರಿ (ತಿರುಪತಿ) ಹಸ್ತಿಗಿರಿ (ಕಂಚಿ) ಯದುಗಿರಿ (ಮೇಲುಕೋಟೆ) ಎಂಬ ಮೂರು ಪರ್ವತಶ್ರೇಷ್ಠಗಳೂ, ಇಲ್ಲಿಯೇ ಸಾನ್ನಿಧ್ಯವನ್ನು ಹೊಂದಿದಂತೆ, ರಾಮಸಾನ್ನಿಧ್ಯದಿಂದ ಈ ಚಿತ್ರಕೂಟಕ್ಕೆ ಒಂದು ಮಹಾಮಹಿಮೆಯುಂಟಾಗಿರುವುದೆಂದೂ ಭಾವವು.

ದಿಂದುಬ್ಬಿದರು. ಸಮುದ್ರದಲ್ಲಿ ಬಿದ್ದವನಿಗೆ ದಡವು ಸಿಕ್ಕಿದಂತೆ ಅದನ್ನು ಕಂಡು ಹಿಗ್ಗುತ್ತಿದ್ದನು. ಆ ಚಿತ್ರಕೂಟದಲ್ಲಿ ಸತ್ಪುರುಷಸೇವಿತವಾದ ಆ ಆಶ್ರಮ ಚಿಹ್ನವನ್ನು ನೋಡಿದೊಡನೆ, ಸಂಗಡ ಬಂದಿದ್ದ ಸೇನೆಯನ್ನು ಅಲ್ಲಿಯೇ ನಿಲ್ಲಿಸಿ ಗುಹನೊಡನೆ ಕೂಡಿ ಬೇಗದಿಂದ ಮುಂದೆ ಹೋದನು.

ಇದು ತೊಂಬತ್ತೆಂಟನೆಯ ಸರ್ಗವು

ಭರತನು ಹಿಂದೆ ನಿಲ್ಲಿಸಿದ್ದ ತನ್ನ ಮಾತೆಯರನ್ನು ಕರೆತರುವುದಕ್ಕಾಗಿ
ವಸಿಷ್ಠನನ್ನು ಕಳುಹಿಸಿ, ತಾನು ಗುಹ ಸುಮಂತ್ರರೊಡನೆ
ಹೊರಟು ರಾಮನನ್ನು ಸೇರಿದುದು.

ಹೀಗೆ ಸೈನ್ಯವನ್ನು ನಿಲ್ಲಿಸಿಟ್ಟು ಭರತನು ಅಲ್ಲಿಯೇ ಕ್ಷಣಕಾಲವಿದ್ದು, ಆಮೇಲೆ ರಾಮನನ್ನು ನೋಡಬೇಕೆಂಬ ಆತುರದಿಂದ ಹೊರಟು, ಶತ್ರುಘ್ನನಿಗೆ ಆಶ್ರಮದ ಗುರುತುಗಳನ್ನು ತೋರಿಸುತ್ತ, ತನ್ನ ಮಾತೆಯರನ್ನು ಕರೆತರುವಂತೆ ವಸಿಷ್ಠನಿಗೆ ಹೇಳಿ ತಾನುಮಾತ್ರ ಅತ್ಯಾತುರದಿಂದ ಮುಂದೆಮುಂದೆ ಹೋಗುತ್ತಿದ್ದನು. ಆತನ ಹಿಂದೆ ಶತ್ರುಘ್ನನೂ, ಅವನ ಹಿಂದೆ ಸುಮಂತ್ರನೂ ಹೊರಟು ಬರುತ್ತಿದ್ದರು. ರಾಮನನ್ನು ನೋಡಬೇಕೆಂದು ಭರತನಹಾಗೆಯೇ ಶತ್ರುಘ್ನನೂ ಅತ್ಯಾತುರದಿಂದ ತತ್ತಳಿಸುತ್ತಿದ್ದನು. ಹೀಗೆ ಭರತನು ಶತ್ರುಘ್ನ ಸುಮಂತ್ರರೊಡನೆ ಸ್ವಲ್ಪದೂರ ನಡೆದುಹೋದಮೇಲೆ, ತಪಸ್ವಿಗಳ ಮನೆಯಂತೆ ಶಾಸ್ತ್ರೋಕ್ತವಾಗಿ ಕಟ್ಟಲ್ಪಟ್ಟಿದ್ದ ಒಂದು ಪರ್ಣಶಾಲೆಯನ್ನೂ, ಅಗ್ನಿಹೋತ್ರ ಗೃಹಗಳನ್ನೂ, ಅತಿಥಿ ಪೂಜಾಸ್ಥಾನಗಳೇ ಮೊದಲಾದ ಇತರ ಸನ್ನಿವೇಶಗಳನ್ನೂ ಕಂಡನು. ಆ ಪರ್ಣಶಾಲೆಯ ಮುಂದೆ ಅಲ್ಲಲ್ಲಿ ಮುರಿದುಹಾಕಿದ ಸೌದೆಯ ರಾಶಿಗಳನ್ನೂ, ದೇವಪೂಜಾರ್ಥವಾಗಿ ಅಲ್ಲಲ್ಲಿ ಸಂಗ್ರಹಿಸಿಡಲ್ಪಟ್ಟಿರುವ ಪುಷ್ಪಗಳನ್ನೂ ನೋಡಿದನು. ಅಲ್ಲಲ್ಲಿ ರಾಮಲಕ್ಷ್ಮಣರು ಸ್ನಾನಮಾಡುವುದಕ್ಕಾಗಿ ಸರೋವರಗಳಿಗೆ ಹೋಗಿಬರುವಾಗ ದಾರಿಯನ್ನು ತಿಳಿಯುವುದಕ್ಕಾಗಿಯೂ ತಾವು ಹೋಗಿ ಬಂದುದನ್ನು ಒಬ್ಬರಿಗೊಬ್ಬರಿಗೆ ತಿಳಿಸುವುದಕ್ಕಾಗಿಯೂ ಅಲ್ಲಲ್ಲಿ ಮರಗಳ ಮೇಲೆ ದರ್ಭೆಗಳಿಂದಲೂ ನಾರುಮುಡಿಗಳಿಂದಲೂ ಗುರುತುಮಾಡಿಟ್ಟಿರುವುದನ್ನೂ ನೋಡಿದನು. ಆ ಕಾಡಿನಲ್ಲಿ ಚಳಿಯನ್ನು ತಡೆಯಲಾರದೆ ಆಗಾಗ ಬೆಂಕಿಯನ್ನು

ಕಾಯಿಸುವುದಕ್ಕಾಗಿ ಅಲ್ಲಲ್ಲಿ ರಾಶಿರಾಶಿಯಾಗಿ ಸಂಗ್ರಹಿಸಿಟ್ಟಿರುವ ಕಾಡು ಬೆರಣಿಗಳನ್ನೂ ಕಂಡನು. ಹೀಗೆ ಭರತನು ಇವೆಲ್ಲವನ್ನೂ ನೋಡಿ ಸಂತೋಷ ದಿಂದ ಅರಳಿದ ಮುಖಕಾಂತಿಯುಳ್ಳವನಾಗಿ ಮನಸ್ಸಿಗೆ ಸಂಪೂರ್ಣವಾದ ಧೈರ್ಯವನ್ನು ತಂದುಕೊಂಡು, ಸಮೀಪದಲ್ಲಿದ್ದ ಶತ್ರುಘ್ನನನ್ನೂ ತನ್ನನ್ನು ಸುತ್ತಿಬರುತ್ತಿದ್ದ ಇತರ ಮಂತ್ರಿಗಳನ್ನೂ ನೋಡಿ "ಭರದ್ವಾಜನು ಹೇಳಿದ್ದ ಸ್ಥಳಕ್ಕೆ ನಾವು ಬಂದುಬಿಟ್ಟಂತೆಯೇ ತೋರುವುದು. ಆ ಮಂದಾಕಿನೀ ನದಿಯೂ ಕೂಡ ಇಲ್ಲಿಗೆ ಬಹಳ ದೂರವಿಲ್ಲವೆಂದೆಣಿಸುವೆನು. ಇದೋ ಇಲ್ಲಿ ನೋಡಿರಿ! ಈ ಮರದಮೇಲೆ ನಾರುಮಡಿಗಳು ಕಟ್ಟಲ್ಪಟ್ಟಿರುವುವು. ಒಂದುವೇಳೆ ಇವನ್ನು ಲಕ್ಷ್ಮಣನೇ ಕಟ್ಟಿರಬಹುದು. ಅಕಾಲಗಳಲ್ಲಿ ಹಣ್ಣುಗಳನ್ನಾಗಲಿ, ನೀರನ್ನಾಗಲಿ ತರುವುದಕ್ಕಾಗಿ ಹೊರಟು, ಹಿಂತಿರುಗಿ ಪರ್ಣಶಾಲೆಗೆ ಹೋಗುವಾಗ, ದಾರಿಯ ಗುರುತಿಗಾಗಿ ಇವುಗಳನ್ನು ಕಟ್ಟಿರಬಹುದು. ಆದುದರಿಂದ ನಾವು ಈ ದಾರಿ ಯಿಂದಲೇ ಹೋಗುವುದುತ್ತಮವು. ಇದೋ ಇಲ್ಲಿ ನೋಡಿರಿ! [1]ಉದ್ದವಾದ ದಂತಗಳಿಂದ ಕೂಡಿದ ಮಹಾವೇಗವುಳ್ಳ ಆನೆಗಳು ಒಂದನ್ನೊಂದು ನೋಡಿ ಕೋಪದಿಂದ ಗರ್ಜಿಸುತ್ತ ತಿರುಗಾಡಿದ ಕಾಲಿನ ಗುರುತುಗಳೇ ಅಲ್ಲಲ್ಲಿ ಕಾಣು ತ್ತಿರುವುವು. ಕಾಡಿನಲ್ಲಿ ತಾಪಸರು ಯಾವಾಗಲೂ ಹೋಮಮಾಡುವುದಕ್ಕಾಗಿ ರಕ್ಷಿಸಿಡುವ [2]ಅಗ್ನಿಹೋತ್ರದ ದಟ್ಟವಾದ ಧೂಮಪರಂಪರೆಯು ಮೇಲೆ ಏಳುತ್ತಿ

---

1 ಇಲ್ಲಿ ಆನೆಗಳ ಹಾವಳಿಯಿಂದ ದಾರಿಯು ಗುರುತು ಸಿಕ್ಕದಂತಾಗಿರುವುದರಿಂದಲೇ, ನಾರುಮಡಿ ಮೊದಲಾದುವುಗಳನ್ನು ಮಾರ್ಗಚಿಹ್ನವಾಗಿ ಅಲ್ಲಲ್ಲಿ ತಗುಲಿಸಿಟ್ಟಿರುವರೆಂದು ಭಾವವು.

2 ಇಲ್ಲಿ "ಯಮೇಂವಾಧಾತುಮಿಚ್ಛಂತಿ ತಾಪಸಾಸ್ಸತತಂ ವನೇ। ತಸ್ಯಾಸೌ ದೃಶ್ಯತೇ ಧೂಮಸ್ಸಂಕುಲಃ" ಎಂದು ಮೂಲವು, ಇಲ್ಲಿ ಸಂಕುಲವಾದ ಧೂಮವೆಂದರೆ ದಟ್ಟವಾದ ಹೊಗೆಯೆಂದರ್ಥವು. ಪಚನಕಾಲದಲ್ಲಿ ಉರಿಯೂ, ಹೋಮಕಾಲದಲ್ಲಿ ಕೆಂಡವೂ ಹೆಚ್ಚಾ ಗಿರಬೇಕಾದುದರಿಂದ, ಆಗ ದಟ್ಟವಾಗಿ ಹೊಗೆಯು ಹೊರಡಲಾರದು. ಆದುದರಿಂದ ಈ ಅಗ್ನಿಯು ಪಚನಹೋಮಾಗ್ನಿಗಳೆರಡೂ, ಅಲ್ಲವೆಂದೂ, ಇದು ಗಾರ್ಹಪತ್ಯಾಗ್ನಿಯೇ ಆಗಿರ ಬೇಕೆಂದೂ ಸಿದ್ಧವಾಗುವುದು. ರಾಮನು ಅಗ್ನ್ಯಾಧಾನ ಮುಂತಾದುವುಗಳನ್ನು ಮಾಡು ತ್ತಿರಲಿಲ್ಲವಾದುದರಿಂದ ಇದು ಶ್ರೌತಾಗ್ನಿಯಲ್ಲವು. ಧಾರ್ಯವಾದ ಸ್ಮಾರ್ತಾಗ್ನಿಯೆಂದೇ ಹೇಳ ಬೇಕು. ರಾಮನಿಗೆ ಈಗ ಶ್ರೌತಾಗ್ನಿಯಿದ್ದಿದ್ದರೆ, ಮುಂದೆ ರಾಮನು ಕಾಡಿನಿಂದ ಅಯೋಧ್ಯೆಗೆ ಹಿಂತಿರುಗಿ ಬರುವಾಗ "ರಾಮಃ ಕಮಲಪತ್ರಾಕ್ಷಃ ಪುರೋಧಸಮಥಾ

ರುವುದನ್ನು ನೋಡಿರಿ! ಈ ಆಶ್ರಮದಲ್ಲಿ ಮೇಲಾದ ಮಂತ್ರೋಪದೇಶ ಗಳನ್ನು ಮಾಡುವ ಮಹರ್ಷಿಗಳಂತಿರುವ ಪುರುಷಶ್ರೇಷ್ಠನಾದ ಆ ರಾಮನನ್ನು ನಾವು ನೋಡುವುದರಲ್ಲಿ ಸಂದೇಹವಿಲ್ಲ. ಈಗಲೇ ಆತನ ದರ್ಶನದಿಂದುಂಟಾದ

ಬ್ರವೀತ್। ಅಗ್ನಿಹೋತ್ರಂ ವ್ರಜತ್ವಗ್ರೇ ಸರ್ಪಿರ್ಜ್ವಲಿತಪಾವನಂ॥" ಎಂದು ಅಗ್ನಿಹೋತ್ರ ವನ್ನು ಪುರಸ್ಕರಿಸಿಕೊಂಡೇ ಬಂದುದಾಗಿ ಹೇಳಿರುವಂತೆ, ಕಾಡಿಗೆ ಹೋಗುವಾಗಲೂ ಹಾಗೆಯೇ ಅವನು ಅಗ್ನಿಯನ್ನು ಸಾಗಿಸಿ ತಂದುದಾಗಿ ಹೇಳಬೇಕಾಗಿತ್ತು. ಹಿಂದೆ ಆ ವಿಷಯವೇನೂ ಕಾಣುವುದಿಲ್ಲ. ಮತ್ತು ಇವನನ್ನು ತಮಸಾತೀರದವರೆಗೆ ಅನುಸರಿಸಿ ಬಂದ ಪೌರವೃದ್ಧರನ್ನು "ಸಾಗ್ನಯ ಏವ ಸಮಾಗತಾಃ" ಅಗ್ನಿಸಹಿತರಾಗಿಯೇ ಬಂದರೆಂದು ಹೇಳಿ ರುವಾಗ, ರಾಮನನ್ನು ಮಾತ್ರ ಹಾಗೆ ಹೇಳದಿರುವುದಕ್ಕೆ ಕಾರಣವಿಲ್ಲ. ಆದುದರಿಂದ ಅವನು ಶ್ರೌತಾಗ್ನಿಯನ್ನು ಸಾಗಿಸಿಕೊಂಡು ಬರಲಿಲ್ಲವೆಂದು ಸ್ಪಷ್ಟಪಡುವುದು. ಮತ್ತು "ದೀಕ್ಷಿತಂ ವ್ರತಸಂಪನ್ನಂ ವರಾಜಿನಧರಂ ಶುಚಿಂ। ಕುರಂಗಶೃಂಗಪಾಣಿಂ ಚ ಪಶ್ಯ ನೀತ್ವಾಂ ಭಜಾ ಮ್ಯಹಂ" ಎಂಬುದಾಗಿ ಸೀತೆಯು ರಾಮನ ಯಜ್ಞದೀಕ್ಷೆಯನ್ನು ಅಪೇಕ್ಷಿಸುವುದರಿಂದಲೇ, ರಾಜ್ಯಾಭಿಷೇಕಕ್ಕೆ ಮೊದಲು ಆತನು ಯಜ್ಞವೊಂದನ್ನೂ ಅನುಷ್ಠಿಸಲಿಲ್ಲವೆಂದೂ ತಿಳಿದು ಬರುವುದು. ಆದುದರಿಂದ ಇಲ್ಲಿ ಹೇಳಿದ ಅಗ್ನಿಯು ಗೃಹಾಗ್ನಿಯೇ ಆಗಿರಬೇಕೆಂಬುದು ನಿಜವು. ಆದರೆ "ಕಾಡಿಗೆ ಹೊರಡುವಾಗ ಆ ಅಗ್ನಿಯನ್ನಾದರೂ ತಂದುದಾಗಿ ಹೇಳ ಬೇಕಲ್ಲವೆ? ಹಾಗೆ ಹೇಳದಿರುವುದಕ್ಕೆ ಕಾರಣವೇನೆಂದು ಶಂಕೆಯುಂಟಾಗಬಹುದು. ಅದನ್ನು ಆತ್ಮಸಮಾರೋಪಣ ಮಾಡಿ ತೆಗೆದುಕೊಂಡು ಬಂದಿರಬಹುದು. ಹಾಗೆ ಆತ್ಮಸಮಾರೋಪಣ ಮಾಡಿತಂದರೂ, ಅದರಲ್ಲಿ ಎರಡು ವೇಳೆಯೂ ಹೋಮಮಾಡಬೇಕು. ಹಾಗೆ ಮಾಡು ತ್ತಿದ್ದಂತೆ ಎಲ್ಲಿಯೂ ಕಾಣಿಸಲ್ಪಟ್ಟಿಲ್ಲ. ಮತ್ತು ತಮಸಾತೀರದಲ್ಲಿಯೂ, ವೃಕ್ಷಮೂಲ ದಲ್ಲಿಯೂ, ಭರದ್ವಾಜಾಶ್ರಮದಲ್ಲಿಯೂ, ಯಮುನಾತೀರದಲ್ಲಿಯೂ, ಸಂಧ್ಯಾವಂದನೆ ಯನ್ನು ಮಾತ್ರವೇ ನಡೆಸಿದುದಾಗಿಯೂ ಹೇಳಲ್ಪಟ್ಟಿದೆ. ಮತ್ತು ಮೇಲಿನ ಶ್ಲೋಕದಲ್ಲಿ, ತಾಪಸಶಬ್ದದಿಂದಲೂ, ವನಶಬ್ದದಿಂದಲೂ, ಕಾಡಿನಲ್ಲಿ ತಾಪಸರು ಶೀತನಿವಾರಣೆಗಾಗಿಯೂ, ಕಂದಮೂಲಾದಿಗಳನ್ನು ಪಕ್ವಮಾಡುವುದಕ್ಕಾಗಿಯೂ, ಸಂಗ್ರಹಿಸಿಡುವ ಸಾಮಾನ್ಯಾಗ್ನಿ ಯನ್ನೇ ಹೇಳಿದುದಾಗಿಯೂ ಗ್ರಹಿಸಬಹುದು. ಇದನ್ನನುಸರಿಸಿ "ಆದಾತುಂ" ಎಂಬ ಪದಕ್ಕೆ "ಸಂಗ್ರಹಿಸುವುದಕ್ಕಾಗಿ" ಎಂದೂ ಅರ್ಥವನ್ನು ಮಾಡಿರಬಹುದು. ಆದುದರಿಂದ ಈ ಅಗ್ನಿಯು ಪಚನಾದಿಗಳಿಗುಪಯುಕ್ತವಾದ ಅಗ್ನಿಯೆಂದೇ ಹೇಳಬೇಕೇ ಹೊರತು ಧಾರ್ಯ ವಾದ ಸ್ಮಾರ್ತಾಗ್ನಿಯಲ್ಲ, ಎಂದು ಪೂರ್ವಪಕ್ಷವುಂಟಾಗುವುದು. ಇದರ ಸಿದ್ಧಾಂತವೇನೆಂದರೆ:– "ಪ್ರಾಗುದಕ್ಪ್ರವಣಾಂ ವೇದಿಂ ವಿಶಾಲಾಂ ದೀಪ್ತಪಾವಕಾಂ।" ಎಂದು ಮುಂದೆ ಹೇಳ ಲ್ಪಡುವುದು. ಸಂಸ್ಕರಿಸಲ್ಪಡದ ಸಾಮಾನ್ಯಾಗ್ನಿಗೆ ವೇದಿಸಂಬಂಧವು ಪ್ರಸಿದ್ಧವಲ್ಲ. "ಪ್ರಾಗುದಕ್ಪ್ರವಣಾಂ" ಇತ್ಯಾದಿ ಲಕ್ಷಣಗಳನ್ನು ವೇದಿಕೆಗೆ ಹೇಳಿರುವುದರಿಂದಲೇ

ಸಂತೋಷಕ್ಕೆ ನಾವು ಭಾಗಿಗಳಾಗಬಹುದು” ಎಂದನು. ಆಮೇಲೆ ಹಾಗೆಯೇ ಮುಂದೆ ನಡೆದು, ಒಂದು ಮುಹೂರ್ತಕಾಲದವರೆಗೆ ಚಿತ್ರಕೂಟಪರ್ವತದಲ್ಲಿ ಸಂಚರಿಸುತ್ತ, ಮಂದಾಕಿನೀ ನದಿಯನ್ನು ಸೇರಿ, ಶತ್ರುಘ್ನಾದಿಗಳನ್ನು ನೋಡಿ “ಅಯ್ಯೋ! ಇನ್ನು ನಾನು ಬದುಕಿದ್ದು ಪ್ರಯೋಜನವೇನು? ಜನನಾಥನಾಗಿಯೂ, ಪುರುಷಶ್ರೇಷ್ಠನಾಗಿಯೂ ಇರುವ ರಾಮನು ಹೀಗೆ ಜನಶೂನ್ಯವಾದ ಈ ಕಾಡಿನಲ್ಲಿ ಬರೀ ನೆಲದಮೇಲೆ ವೀರಾಸನದಲ್ಲಿ ಕುಳಿತಿರಬೇಕಾಯಿತಲ್ಲಾ! ಲೋಕನಾಥನಾಗಿ ಶ್ರೀಮಂತನಾದ ಆ ರಾಮನು ವ್ಯಸನವೆಲ್ಲವನ್ನೂ ನನಗಾಗಿಯೇ ಅನುಭವಿಸುತ್ತಿರುವನಲ್ಲಾ! ಅವನು ಸಮಸ್ತವಾದ ರಾಜಭೋಗಗಳನ್ನೂ ಬಿಟ್ಟು ಹೀಗೆ ಕಾಡಿನಲ್ಲಿರಬೇಕಾಯಿತು! ಛೀ! ನಾನು ಎಂತಹ ಲೋಕಾಪವಾದಕ್ಕೆ ಗುರಿಯಾದೆನು. ಈಗಲಾದರೂ ಆತನನ್ನು ಪ್ರಸನ್ನನನ್ನಾಗಿ ಮಾಡುವುದಕ್ಕೆ ಆ ರಾಮನ ಪಾದಗಳಲ್ಲಿ ಹೋಗಿ ಬಿದ್ದುಬಿಡುವೆನು. ಸೀತಾಲಕ್ಷ್ಮಣರು ನನಗಿಂತಲೂ ಚಿಕ್ಕವರಾದರೂ ಚಿಂತೆಯಿಲ್ಲ. ಅವರಿಬ್ಬರ ಕಾಲು

ಅಗ್ನಿಯೂ, ಅಗ್ನಿವೇದಿಕೆಯೂ ಸಂಸ್ಕರಿಸಲ್ಪಟ್ಟವೆಂದೇ ಸ್ಪಷ್ಟವಾಗುವುದು, ಹಾಗೆ ಸಂಸ್ಕೃತವಾದ ಅಗ್ನಿಯೇ ಆಗಿದ್ದ ಪಕ್ಷದಲ್ಲಿ, ಪ್ರತಿದಿನವೂ ಹೋಮ ಮಾಡುತ್ತಿದ್ದಂತೆ ಹೇಳದಿರುವುದಕ್ಕೆ ಕಾರಣವೇನೆಂದು ಕೇಳಬಹುದು. ಆದಿಕವಿಯಾದ ವಾಲ್ಮೀಕಿಯು ನಿರಂಕುಶನಾದುದರಿಂದ, ಒಂದಾವರ್ತಿ ಹೇಳಿದುದನ್ನು ಪುನಃ ಪುನಃ ಹೇಳುವವನಲ್ಲ. ಮುಂದೆ ಸುತೀಕ್ಷ್ಣಾಶ್ರಮದಲ್ಲಿ ಈ ವಿಷಯವನ್ನು ಒಂದಾವರ್ತಿ ಸೂಚಿಸಿರುವನು. “ಅಥ ತೇಽಗ್ನಿಂ ಸುರಾಶ್ಚೈವ ವೈದೇಹೀ ರಾಮಲಕ್ಷ್ಮಣೌ । ಕಾಲ್ಯಂ ವಿಧಿವದಭ್ಯರ್ಚ್ಯ ತಪಸ್ವಿಶರಣೇ ವನೇ । ಉದಯನ್ತಂ ದಿನಕರಂ ದೃಷ್ಟ್ವಾ ವಿಗತಕಲ್ಮಷಾಃ ॥ ಸುತೀಕ್ಷ್ಣಮಭಿಗಮ್ಯ” ಎಂಬುದಾಗಿದೆ. ಇಲ್ಲಿ ಹೋಮಮಾಡಿದುದಾಗಿ ಸ್ಪಷ್ಟವಾಗಿ ಕಾಣಿಸದಿದ್ದರೂ, ಉದಯಕಾಲಕ್ಕೆ ಮೊದಲೇ ಅಗ್ನಿಕಾರ್ಯವನ್ನು ಹೇಳಿರುವುದರಿಂದ, ಅದನ್ನು ಔಪಾಸನ ಕಾರ್ಯವೆಂದೇ ಸ್ಪಷ್ಟವಾಗಿ ಗ್ರಹಿಸಬಹುದು. ಈ ಅಗ್ನಿಕಾರ್ಯಗಳಲ್ಲಿ ರಾಮನು ಪ್ರಧಾನನಾಗಿಯೂ, ಸೀತೆಯು ಸಂಗಡವೇ ಇದ್ದು ಪ್ರಣಯನಾದಿಗಳಿಂದಲೂ, ಲಕ್ಷ್ಮಣನು ಸಮಿಧಾಹರಣಾದಿಗಳಿಂದಲೂ ಅನ್ವಯಿಸಿರುವುದಾಗಿ ತಿಳಿಯಬೇಕು. ಆದುದರಿಂದ ಹದಿನಾಲ್ಕು ವರ್ಷಗಳ ವನವಾಸ ಕಾಲದಲ್ಲಿ, ಸೀತಾಪಹರಣದವರೆಗೆ ರಾಮನು ಚಿತ್ರಕೂಟ ಪಂಚವಟೀ ಪ್ರದೇಶಗಳೊಳಗೆಲ್ಲಾ, ಹೆಚ್ಚು ದಿವಸಗಳ ವರೆಗೆ ನಿಂತ ಸ್ಥಳಗಳಲ್ಲಿ ಮಾತ್ರ ಸ್ಮಾರ್ತಾಗ್ನಿಯನ್ನು ಹೊರಗಿಟ್ಟು ಉಪಾಸನಾದಿಗಳನ್ನು ನಡೆಸುತ್ತಿದ್ದನೆಂದೂ, ಉಳಿದ ಕಾಲಗಳಲ್ಲಿ ಆತ್ಮ ಸಮಾರೋಪಣವನ್ನೋ ಅಥವಾ ಸಮಿಧಾರೋಪಣವನ್ನೋ ಮಾಡಿಟ್ಟು, ಹೋಮ ಕಾಲದಲ್ಲಿ ಆವಾಹನಮಾಡಿ ಪ್ರತಿದಿನವೂ ಔಪಾಸನವನ್ನು ನಡೆಸುತ್ತಿದ್ದನೆಂದೂ ಗ್ರಾಹ್ಯವು.

ಗಳಿಗೂ ಬೀಳುವೆನು" ಎಂದು ನಾನಾವಿಧದಲ್ಲಿ ಪ್ರಲಾಪಿಸುತ್ತ, ಮುಂದೆ, ಅತಿ ಪವಿತ್ರವಾಗಿಯೂ, ಮನೋಹರವಾಗಿಯೂ ಇರುವ ಆ ಪರ್ಣಶಾಲೆಯನ್ನು ಚೆನ್ನಾಗಿ ಕಂಡನು. ಆ ಪರ್ಣಶಾಲೆಯಾದರೋ ಮತ್ತಿ, ಅಶ್ವಕರ್ಣಿ ಮೊದಲಾದ ಬಗೆಬಗೆಯ ಮರದೆಲೆಗಳಿಂದ ದಟ್ಟವಾಗಿ ಮುಚ್ಚಲ್ಪಟ್ಟು ವಿಸ್ತಾರವಾದ ಯಜ್ಞವೇದಿಕೆಯಂತೆ ಮೃದುವಾದ ದರ್ಭೆಗಳಿಂದ ಕೂಡಿ ಪ್ರಕಾಶಿಸುತ್ತಿತ್ತು. ಇಂದ್ರಧನುಸ್ಸಿಗೆ ಸಮಾನವಾಗಿಯೂ, ಬಹಳ ಭಾರವುಳ್ಳುದಾಗಿಯೂ, ಚಿನ್ನದ ಕಟ್ಟುಗಳುಳ್ಳುದಾಗಿಯೂ, ಬಹಳ ದೃಢವಾಗಿಯೂ ಇರುವ ಅನೇಕ ಧನುಸ್ಸುಗಳು ಶತ್ರುನಿಗ್ರಹಣಾರ್ಥವಾಗಿ ಅಲ್ಲಲ್ಲಿ ಇರಿಸಲ್ಪಟ್ಟಿದ್ದುವು. ಸೂರ್ಯ ಕಾಂತಿಯಂತೆ ಜ್ವಲಿಸುತ್ತ ಭಯಂಕರಾಕಾರವುಳ್ಳವುಗಳಾಗಿ, ಉರಿಯುತ್ತಿರುವ ಅಲಗುಳ್ಳವುಗಳಾಗಿದ್ದ ಬಾಣಗಳು ಬತ್ತಳಿಕೆಯಲ್ಲಿ ತುಂಬಿ ಅಲ್ಲಲ್ಲಿ ತೂಗು ಹಾಕಲ್ಪಟ್ಟಿದ್ದುವು. ಇವುಗಳಿಂದ ಆ ಪ್ರದೇಶವೆಲ್ಲವೂ ಸರ್ಪಗಳಿಂದ ತುಂಬಿ ಭೋಗವತೀ ಪಟ್ಟಣದಂತೆ ಕಾಣುತ್ತಿತ್ತು. ಬೆಳ್ಳಿಯ ಒರೆಗಳಲ್ಲಿಡಲ್ಪಟ್ಟ ಸರ್ವೋತ್ತಮವಾದ ಎರಡು ಕತ್ತಿಗಳು ಜಾಜ್ವಲ್ಯಮಾನವಾಗಿ ಹೊಳೆಯು ತ್ತಿದ್ದುವು. ಬಂಗಾರದ ಬೊಟ್ಟುಗಳಿಂದ ಕೂಡಿ, ವಿಚಿತ್ರಾಕಾರವುಳ್ಳ ಗುರಾಣಿ ಗಳೆರಡು ಒಂದುಕಡೆಯಲ್ಲಿರಿಸಲ್ಪಟ್ಟಿದ್ದುವು. ಉಡುವಿನಚರ್ಮದಿಂದ ಮಾಡಲ್ಪಟ್ಟ ಮತ್ತು ಸುವರ್ಣದ ಚಿತ್ರಕೆಲಸಗಳಿಂದ ಕೂಡಿದ ಕೈಚೀಲಗಳು ಅಲ್ಲಲ್ಲಿ ತೂಗಾಡು ತ್ತಿದ್ದುವು. ಸಾಮಾನ್ಯಮೃಗಗಳಿಗೆ ಸಿಂಹವಿರುವ ಗುಹೆಯು ಹೇಗೋ ಹಾಗೆ ಆ ಪ್ರದೇಶವು ಶತ್ರುಗಳಿಗೆ ನೋಡುವಾಗಲೇ ಭಯವನ್ನುಂಟುಮಾಡಿ ದುಷ್ಪ್ರವೇಶ ವಾಗಿತ್ತು. ಆ ಪರ್ಣಶಾಲೆಯಲ್ಲಿ, ಅತಿಪವಿತ್ರವಾದ ಅಗ್ನಿವೇದಿಕೆಯೊಂದು ಕಾಣಿಸಿತು. ಆ ವೇದಿಕೆಯು ಕ್ರಮಕ್ರಮವಾಗಿ ಈಶಾನ್ಯದಿಕ್ಕಿಗೆ ತಗ್ಗಿ, ಜ್ವಲಿಸು ತ್ತಿರುವ ಅಗ್ನಿಯಿಂದ ಕೂಡಿತ್ತು. [1]ಆ ಪರ್ಣಶಾಲೆಯ ನಡುವೆ ರಾಮನು ಜಡೆಯನ್ನು ಧರಿಸಿ ತಪಸ್ಸಿನಲ್ಲಿದ್ದನು. ರಾಮನ ಈ ಅಪೂರ್ವವೇಷವನ್ನು ಹಿಂದೆ ಭರತನು ಯಾವಾಗಲೂ ಕಂಡಿಲ್ಲದಿದ್ದುದರಿಂದ, ಆತನು ರಾಮನೋ ಅಲ್ಲವೋ

---

1 ಇಲ್ಲಿ "ನಿರೀಕ್ಷ್ಯ ಸ ಮುಹೂರ್ತಂ ತು ದದರ್ಶ ಭರತೋ ಗುರುಂ| ಉಟಜೇ ರಾಮಮಾಸೀನಂ ಜಟಾಮಂಡಲಧಾರಿಣಂ" ಎಂದು ಮೂಲವು. ಇದರ ಕೊನೆಯ ಪಾದ ದಲ್ಲಿರುವ "ಣಂ" ಕಾರವು ಗಾಯತ್ರಿಯ ಏಳನೆಯ ಅಕ್ಷರವಾದುದರಿಂದ, ಇದುವರೆಗೆ ಆರು ಸಾವಿರ ಗ್ರಂಥಗಳು ಮುಗಿದು ಏಳನೆಯ ಸಹಸ್ರವು ಆರಂಭಿಸಿದುದಾಗಿ ಗ್ರಾಹ್ಯವು.

ಎಂಬುದನ್ನು ನಿರ್ಧರಿಸಿಕೊಳ್ಳುವುದಕ್ಕಾಗಿ ಕ್ಷಣಕಾಲದವರೆಗೆ ಚೆನ್ನಾಗಿ ಗಮನಿಸಿ ನೋಡಿದನು. ಕೊನೆಗೆ ಆತನೇ ತನ್ನಣ್ಣನೆಂಬುದು ವ್ಯಕ್ತವಾಗಿ ತಿಳಿಯಿತು. ಸಿಂಹದಂತೆ ಹೆಗಲೂ, ಉದ್ದವಾದ ಭುಜಗಳೂ, ತಾವರೆಯೆಸಳುಗಳಂತೆ ನೇತ್ರಗಳೂ, ಇನ್ನೂ ಅನೇಕ ಮಹಾಪುರುಷಲಕ್ಷಣಗಳೂ ಕ್ರಮಕ್ರಮವಾಗಿ ಆತನಲ್ಲಿ ಕಂಡುಬಂದುವು. ಸಮುದ್ರಾಂತವಾದ ಈ ಸಮಸ್ತಭೂಮಿಗೂ ನಾಯಕನಾಗಿದ್ದರೂ, ಧರ್ಮಾಚರಣಕ್ಕಾಗಿ [1] ಜಿಂಕೆಯ ಚರ್ಮವನ್ನು ಹೊದ್ದುಕೊಂಡು, ನಾರುಮಡಿಯನ್ನುಟ್ಟು ದರ್ಭಾಸನದಮೇಲೆ ಕುಳಿತಿರುವ ಆ ರಾಮನನ್ನು ಚೆನ್ನಾಗಿ ನೋಡಿದನು. ಸೀತಾ ಸಮೇತನಾಗಿ, ಲಕ್ಷ್ಮಣನಿಂದ ಉಪಚರಿಸಲ್ಪಡುತ್ತ, ಶಾಶ್ವತಬ್ರಹ್ಮದಂತೆ ಒಂದಾಸನದಲ್ಲಿ ಕುಳಿತು, ಆತ್ಮಧ್ಯಾನಪರನಾಗಿ, ಅಗ್ನಿಯಂತೆ ಜಾಜ್ವಲ್ಯಮಾನವಾದ ತೇಜಸ್ಸಿನಿಂದ ಒಪ್ಪುತ್ತಿರುವ ಆ ರಾಮನನ್ನು ನೋಡಿದೊಡನೆಯೇ ಧರ್ಮಾತ್ಮನಾದ ಭರತನಿಗೆ ಮನಸ್ಸಿನಲ್ಲಿ ಮಿತಿಮೀರಿದ ದುಃಖವುಂಟಾಯಿತು. ಆ ದುಃಖದಿಂದಲೇ ರಾಮನಿದ್ದಕಡೆಗೆ ಬಂದನು. ಆಗಲೂ ತನ್ನ ಮನಸ್ಸಿನ ದುಃಖದಿಂದಲೇ ತಡೆಯಲಾರದೆ ಪ್ರಲಾಪಿಸುತ್ತ, ಸ್ವಲ್ಪ ಹೊತ್ತಿನ ಮೇಲೆ ಧೈರ್ಯವನ್ನು ತಂದುಕೊಂಡು, ದುಃಖದಿಂದ ತಡವರಿ

---

[1] ಇಲ್ಲಿ "ತಂ ತು ಕೃಷ್ಣಾಜಿನಧರಂ ಚೀರವಲ್ಕಲವಾಸಸಂ | ದದರ್ಶ ರಾಮಮಾಸೀನಮಭಿತಃ ಪಾವಕೋಪಮಂ ||" ಎಂದು ಮೂಲವು. "ತಂ ತು ಕೃಷ್ಣಾಜಿನಧರಂ" ಎಂಬುದರಿಂದ, ಮೊದಲು ಅಮೂಲ್ಯವಾದ ವಸ್ತ್ರವಿಶೇಷಗಳನ್ನು ಧರಿಸಿರುತ್ತಿದ್ದ ಆ ರಾಮನು ಈಗ ಕೃಷ್ಣಾಜಿನವನ್ನೂ ನಾರುಮಡಿಯನ್ನೂ ಧರಿಸಬೇಕಾಯಿತೆಂದು ಭಾವವು (ರಾಮಂ) ಎಂಬುದರಿಂದ ಹೀಗೆ ವಲ್ಕಲಗಳನ್ನು ಧರಿಸಿದ್ದರೂ ಲೋಕಾಭಿರಾಮವಾದ ದೇಹಸೌಂದರ್ಯವುಳ್ಳವನೆಂದರ್ಥವು. "ಅಭಿತಃ ಪಾವಕೋಪಮಂ" ಎಂದರೆ ತಪೋಜ್ವಾಲೆಯಿಂದ ಅಗ್ನಿ ಸಮಾನನಾದವನೆಂದರ್ಥವು. ಅಥವಾ "ನೀಲತೋಯದಮಧ್ಯಸ್ಥಾ ವಿದ್ಯುಲ್ಲೇಖೇವ ಭಾಸ್ವರಾ" ಎಂಬಂತೆ ಪ್ರಕಾಶಿಸುವವನು. "ಪಾವಕೋಪಮಂ" ಎಂದರೆ ವಿರೋಧಿಗಳಿಗೆ ತಡೆಯಲಸಾಧ್ಯವಾದ ಪರಾಕ್ರಮವುಳ್ಳವನಾಗಿ, ಮೊದಲು ಅಯೋಧ್ಯೆಯಲ್ಲಿಯೇ ಪ್ರಕಾಶಿಸುತ್ತಿದ್ದವನಾದರೂ ಈಗಿನ ಸ್ಥಿತಿಯು ಮೊದಲಿಗಿಂತಲೂ ಅತಿಶಯವಾಯಿತೆಂದು ಭಾವವು. ಹೇಗೆಂದರೆ ಆ ಅಯೋಧ್ಯೆಯಲ್ಲಿ ಬಹಳ ಸಲಿಗೆಯಿಂದ ರಾಮನ ಸಮೀಪದಲ್ಲಿಯೇ ವರ್ತಿಸುತ್ತಿದ್ದ ತಮ್ಮನಾದ ಭರತನಿಗೂ ಕೂಡ ಇಲ್ಲಿ ಸಮೀಪಕ್ಕೆ ಹೋಗಲು ಅಸಾಧ್ಯವಾಯಿತೆಂದೂ, ಅದರಿಂದಲೇ ಭರತನು ಮೊದಲು ಕ್ಷಣಕಾಲದವರೆಗೆ ನಿಧಾನಿಸಿ ನೋಡಿ ಆಮೇಲೆ ಮುಂದೆ ಬಂದನೆಂದೂ ಹೇಳಲ್ಪಟ್ಟಿದೆ.

ಸುವ ಮಾತುಗಳಿಂದ "ಯಾವನನ್ನು ಸಭೆಗಳಲ್ಲಿ ರಾಜಾಧಿರಾಜರೂ, ಮಂತ್ರಿಗಳೂ ಸೇರಿ ಸುತ್ತಲೂ ಸೇವಿಸುತ್ತಿರಬೇಕೋ, ಅಂತಹ ನಮ್ಮಣ್ಣನಾದ ರಾಮನು ಈಗ ಕಾಡುಮೃಗಗಳಿಂದ ಸೇವಿಸಲ್ಪಡುವಹಾಗಾಯಿತೆ? ಅನೇಕ ಸಹಸ್ರವರಹಗಳ ಬೆಲೆಯುಳ್ಳ ಸರ್ವೋತ್ತಮವಾದ ವಸ್ತ್ರಗಳನ್ನುಡುವುದಕ್ಕೆ ಯಾವನು ಅರ್ಹನೋ, ಆ ನಮ್ಮಣ್ಣನು ಈಗ ಜಿಂಕೆಯ ಚರ್ಮವನ್ನು ಧರಿಸಿ ಧರ್ಮಾಚರಣೆಯಲ್ಲಿರುವಂತಾಯಿತೆ? ವಿಚಿತ್ರವಿಚಿತ್ರಗಳಾದ ಅನೇಕ ಪುಷ್ಪಮಾಲಿಕೆಗಳನ್ನು ಮುಡಿಯುತ್ತಿದ್ದ ಈತನು ಈಗ ಈ ಜಟಾಭಾರವನ್ನು ಹೇಗೆ ಧರಿಸಿರುವನು? ಶಾಸ್ತ್ರೋಕ್ತವಾಗಿ ಅನೇಕ ಯಜ್ಞಗಳನ್ನು ಮಾಡಿ ಧರ್ಮಗಳನ್ನು ಗಳಿಸಿಡಬೇಕಾದ ಈ ರಾಮನು, ಈಗ ವಾನಪ್ರಸ್ಥರಂತೆ ಶರೀರಕ್ಲೇಶದಿಂದ ಧರ್ಮಸಂಪಾದನೆಯನ್ನು ಮಾಡಬೇಕಾಯಿತೆ? ಯಾವನ ದೇಹವು ಮೊದಲು ಉತ್ತಮವಾದ ಚಂದನಗಳಿಂದ ಅಲಂಕರಿಸಲ್ಪಡುತ್ತಿತ್ತೊ, ಆತನ ದೇಹವು ಹೀಗೆ ಕೊಳೆಯಿಂದ ಕೂಡಿರುವುದಲ್ಲಾ! ಸುಖಾರ್ಹನಾದ ರಾಮನು ನನ್ನಿಂದಲೇ ಇಷ್ಟು ದುಃಖವನ್ನು ಅನುಭವಿಸಬೇಕಾಯಿತಲ್ಲವೆ? ಮಹಾಕ್ರೂರನಾಗಿ ಲೋಕಾಪವಾದಕ್ಕೆ ಗುರಿಯಾದ ನನ್ನ ಈ ಜನ್ಮವನ್ನೇ ಸುಡಬೇಕು" ಎಂದು ಹೇಳುತ್ತ ಕಣ್ಣೀರನ್ನು ಸುರಿಸಿ ದೈನ್ಯದಿಂದ ಪ್ರಲಾಪಿಸುತ್ತಿದ್ದನು. ಹಾಗೆಯೇ ಮುಂದೆ ಹೋಗಿ ರಾಮನ ಪಾದಗಳಿಗೆ ಬೀಳಬೇಕೆಂಬ ಉದ್ದೇಶದಿಂದ ಆತನ ಹತ್ತಿರಕ್ಕೆ ಬಂದು, ಹಾಗೆಯೇ ದುಃಖದಿಂದ ಮೈಮರೆತನು. ಬಹಳವಾಗಿ ಕಣ್ಣೀರು ತುಂಬಿಕೊಂಡಿರುವುದರಿಂದ ಕಣ್ಣುಗಳೂ ಕಾಣದಿರಲು, ಆ ರಾಮನ ಪಾದಗಳಮೇಲೆ ಬೀಳುವುದಕ್ಕೆ ಹೋಗಿ ಹಾಗೆಯೇ ನೆಲದಮೇಲೆ ಬಿದ್ದುಬಿಟ್ಟನು. ಮಹಾಬಲಾಢ್ಯನಾದ ಆ ಭರತನು ದುಃಖದಿಂದ ಬೇಯುತ್ತ, ಬಹುದೀನಸ್ವರದಿಂದ ಒಂದೇ ಆವರ್ತಿ "ಅಣ್ಣಾ!" ಎಂದು ಕೂಗಿ ಬೇರೊಂದು ಮಾತನ್ನೂ ಆಡಲಾರದೆ ಮೈಮರೆತಿದ್ದನು. ಹಾಗೆಯೇ ಶತ್ರುಘ್ನನೂ ಅಳುತ್ತ ಬಂದು ರಾಮನ ಎರಡು ಕಾಲುಗಳನ್ನೂ ಹಿಡಿದು ನಮಸ್ಕರಿಸಿದನು. ಹೀಗೆ-ದುಃಖಿತರಾಗಿ ಬಂದ ಭರತಶತ್ರುಘ್ನರಿಬ್ಬರನ್ನೂ ನೋಡಿ ರಾಮನು ತಾನೂ ದುಃಖದಿಂದ ಕಣ್ಣೀರುಬಿಡುತ್ತ, ಅವರಿಬ್ಬರನ್ನೂ ಕ್ರಮವಾಗಿ ಆಲಿಂಗಿಸಿಕೊಂಡನು. ಆಗ ಆ ಅರಣ್ಯದಲ್ಲಿ ರಾಮಲಕ್ಷ್ಮಣರಿಬ್ಬರೂ ಗುಹಸುಮಂತ್ರರೊಡನೆ ಕೂಡಿ ಮಾತಾಡುತ್ತಿರಲು, ಸೂರ್ಯ ಚಂದ್ರ ಗ್ರಹಗಳೆರಡೂ ಆಕಾಶದಲ್ಲಿ ಶುಕ್ರ

ಬೃಹಸ್ಪತಿಗಳೊಡನೆ ಸೇರಿದಂತೆ ಪ್ರಕಾಶಿಸಿದರು. ಹೀಗೆ ಸುಖಾತ್ಮರಾದ ಆ ರಾಜಕುಮಾರರೆಲ್ಲರೂ ಆನೆಯ ಸಲಗಗಳಂತೆ ಒಂದಾಗಿ ಸೇರಿ, ಆ ಮಹಾರಣ್ಯ ದಲ್ಲಿ ಪರಸ್ಪರ ದುಃಖ ಸಲ್ಲಾಪಗಳನ್ನು ಮಾಡುತ್ತಿರಲು, ಅದನ್ನು ನೋಡಿ ಕಾಡಿನಲ್ಲಿದ್ದ ಋಷಿಗಳೂ ಕೂಡ ಉತ್ಸಾಹವನ್ನು ಬಿಟ್ಟು ದುಃಖದಿಂದ ಕಣ್ಣೀರನ್ನು ಸುರಿಸುತ್ತಿದ್ದರು.

ಇದು ತೊಂಬತ್ತೊಂಬತ್ತನೆಯ ಸರ್ಗವು.

ರಾಮನು ಭರತನನ್ನು ಕುಶಲಪ್ರಶ್ನೆಮಾಡಿ ತನ್ಮೂಲಕವಾಗಿ ಆತನಿಗೆ ರಾಜನೀತಿಗಳನ್ನುಪದೇಶಿಸಿದುದು

ಆಮೇಲೆ ರಾಮನಾದರೋ, ತನ್ನಂತೆಯೇ [1] ಜಡೆಯನ್ನು ಧರಿಸಿ ನಾರು ಬಟ್ಟೆಯನ್ನುಟ್ಟು, ಕೈಜೋಡಿಸಿ ನೆಲದಮೇಲೆ ಬಿದ್ದಿರುವ ಭರತನನ್ನು ನೋಡಿ ದನು. ಆಗಲೂ, ಆತನು ಪ್ರಳಯಕಾಲದ ಸೂರ್ಯನಂತೆ ನೋಡುವುದಕ್ಕೆ ಅಸಾಧ್ಯನಾಗಿ ಪ್ರಕಾಶಿಸುತ್ತಿದ್ದನು. ಭರತನ ಮುಖವು ದುಃಖದಿಂದ ಬಣ್ಣಗುಂದಿ

---

[1] "ಇಲ್ಲಿ" "ಜಟಿಲಂ ಚೀರವಸನಂ ಪ್ರಾಂಜಲಿಂ ಪತಿತಂ ಭುವಿ। ದದರ್ಶ ರಾಮೋ ದುರ್ದರ್ಶಂ ಯುಗಾಂತೇ ಭಾಸ್ಕರಂ ಯಥಾ" ಎಂದು ಮೂಲವು. ಇಲ್ಲಿ "ಜಟಿಲಂ" ಮುಂತಾದ ವಿಶೇಷಣಗಳಿಂದ, ಭರತನ ಪೂರ್ವಸ್ಥಿತಿಗೂ ಈಗಿನ ಸ್ಥಿತಿಗೂ ತಾರತಮ್ಯವು ಕಾಣಿಸಲ್ಪಟ್ಟಿದೆ. ಮೊದಲು ರಾಜನಾದ ದಶರಥನು ಉತ್ತಮವಾದ ಒಂದು ಪುಷ್ಪಮಾಲಿಕೆ ಯನ್ನು ಕಂಡಾಗ, "ಇದು ಭರತನಿಗಿರಲಿ" ಎಂದು ಯಾವನ ತಲೆಗೆ ತಂದು ಮುಡಿಸು ತ್ತಿದ್ದನೋ, ಆತನು ಉತ್ತಮವಾದ ಒಂದು ಪೀತಾಂಬರವನ್ನು ಕಂಡಾಗ "ಇದು ಭರತ ನಿಗೇ ತಕ್ಕುದು" ಎಂದು ಅದನ್ನು ತಂದು ಯಾವನ ಮೈಯನ್ನು ಅಲಂಕರಿಸುತ್ತಿದ್ದನೋ, ಸುಕುಮಾರದೇಹವುಳ್ಳ ಯಾವನನ್ನು ತಂದೆಯಾದ ದಶರಥನು ತೊಡೆಯಮೇಲೆ ಕುಳ್ಳಿರಿಸಿ ಕೊಂಡು, ಭೋಗ್ಯವಾದ ವಸ್ತುಗಳನ್ನು ತಂದು ನಾನಾವಿಧದಲ್ಲಿ ಪ್ರಾರ್ಥಿಸಿಕೊಡುತ್ತಿದ್ದನೋ, ಅಂತಹ ಭರತನು ಈಗ ಜಡೆಗಳನ್ನು ಧರಿಸಿ, ನಾರುಮಡಿಯನ್ನುಟ್ಟು, ನೆಲದಮೇಲೆ ಹೊರಳಿ ಇತರರನ್ನು ಬೇಡುವಂತಾಯಿತೆಂದು ಭಾವವು. ಈ ಕಾರಣದಿಂದಲೇ "ದುರ್ದರ್ಶಂ" ಕಣ್ಣಿನಿಂದ ನೋಡಿ ಸಹಿಸುವುದಕ್ಕೂ ಅಸಾಧ್ಯವಾದ ದುರ್ದಶೆಯುಳ್ಳವನೆಂದರ್ಥವು. ಅಥವಾ ಕಷ್ಟಪಟ್ಟು ನೋಡಿದರೂ ಗುರುತು ತಿಳಿಯದ ಹಾಗಿರುವವನೆಂದೂ ಭಾವವು. "ಯುಗಾಂತೇ ಭಾಸ್ಕರಂ ಯಥಾ" ಪ್ರಳಯಕಾಲದ ಸೂರ್ಯನಂತೆ ನೋಡಿದವರೆಲ್ಲರಿಗೂ ಮಿತಿಮೀರಿದ ಸಂತಾಪವನ್ನುಂಟುಮಾಡುವವನು, ಅಥವಾ ಯುಗಾಂತದಲ್ಲಿ ಶಕ್ತಿಗುಂದಿ

ದೇಹವೆಲ್ಲವೂ ಕೃಶವಾಗಿದ್ದುದರಿಂದ, ನೋಡಿದಾಗಲೇ ಆತನು ತನ್ನ ತಮ್ಮನೆಂದು ತಿಳಿಯುವುದು ರಾಮನಿಗೆ ಅಸಾಧ್ಯವಾಯಿತು. ಆಮೇಲೆ ಹೇಗೋ ಗುರುತು ಹಿಡಿದು, ಸಮೀಪಕ್ಕೆ ಬಂದು ಆತನನ್ನು ತೋಳುಗಳಿಂದಪ್ಪಿ, ಆತನ ತಲೆಯನ್ನು ಆಘ್ರಾಣಿಸಿ, ಬಾರಿಬಾರಿಗೂ ಅಪ್ಪಿಕೊಂಡು ಆತನನ್ನು ಕರೆದು ತೊಡೆಯ ಮೇಲೆ ಕುಳ್ಳಿರಿಸಿ ಅತ್ಯಾದರದಿಂದ, ಅವನನ್ನು ನೋಡಿ "ವತ್ಸ ಭರತನೆ ಇದೇನು? ನೀನೇಕೆ ಕಾಡಿಗೆ ಬಂದೆ? ತಂದೆಯನ್ನೆಲ್ಲಿ ಬಿಟ್ಟುಬಂದೆ? ಆತನು ಬದುಕಿರುವಾಗ [1]ವೃದ್ಧನಾದ ಆತನನ್ನು ಬಿಟ್ಟುಬರಬಹುದೆ? ಆಹಾ! ನಿನ್ನನ್ನು

ನೆಲದಲ್ಲಿ ಬಿದ್ದಿರುವ ಸೂರ್ಯಬಿಂಬದಂತೆ ಬಹುದೀನದಶೆಯನ್ನು ಹೊಂದಿದವನೆಂದೂ ಹೇಳಬಹುದು. ಭರತನು ಮೊದಲು ಗಂಗಾತೀರದಲ್ಲಿಯೇ "ಅದ್ಯಪ್ರಭೃತಿ ಭೂಮೌ ತು ಶಯಿಷ್ಯೇಹಂ ತೃಣೇಷು ವಾ | ಫಲಮೂಲಾಶನೋ ನಿತ್ಯಂ ಜಟಾಚೀರಾಣಿ ಧಾರಯನ್ ॥" ಎಂಬುದಾಗಿ ಆಗಲೇ ಜಟಾವಲ್ಕಲಗಳನ್ನು ಧರಿಸುವುದಾಗಿ ಪ್ರತಿಜ್ಞೆಮಾಡಿರುವನು. ಅದರಿಂದಾಚೆಗೆ ಭರದ್ವಾಜದರ್ಶನ ಕಾಲದಲ್ಲಿ "ವಸಾನೋ ವಾಸಸೀ ಕ್ಷೌಮೇ" ಎಂದು ದುಕೂಲವನ್ನುಟ್ಟದ್ದುದಾಗಿ ಹೇಳಲ್ಪಟ್ಟಿದೆ. ಈಗ ಪುನಃ "ಜಟಿಲಂ ಚೀರವಸನಂ" ಎಂಬುದಾಗಿ ಇದಕ್ಕೆ ಮೊದಲೇ ಜಟಾವಲ್ಕಲಗಳನ್ನು ಧರಿಸಿಬಂದುದಾಗಿ ತಿಳಿಸಲ್ಪಟ್ಟಿದೆ. ಹೀಗೆ ಪರಸ್ಪರ ವಿರೋಧವಿರುವುದಕ್ಕೆ ಕಾರಣವೇನೆಂದು ಶಂಕೆಯುಂಟಾಗಬಹುದು. ಭರತನು ಜಟಾವಲ್ಕಲಗಳನ್ನು ಧರಿಸುವುದಾಗಿ ಗುಹನ ಪಟ್ಟಣದಲ್ಲಿ ಮೊದಲು ಪ್ರತಿಜ್ಞೆಮಾಡಿದುದು ಮಾತ್ರವೇ ಹೊರತು ಆಗಲೇ ಅವುಗಳನ್ನು ಧರಿಸಲಿಲ್ಲ. ಮರುದಿನದಲ್ಲಿ ಭರದ್ವಾಜನನ್ನು ನೋಡಿದ ಮೇಲೆ ತನ್ನ ಪ್ರತಿಜ್ಞೆಯನ್ನು ಸಾಧಿಸುವುದಾಗಿ ನಿಶ್ಚಯಿಸಿಕೊಂಡು ಬಂದನು. ಅಷ್ಟರಲ್ಲಿ ಭರದ್ವಾಜನು ಆತಿಥ್ಯಕ್ಕೆ ನಿಯಮಿಸಿದುದರಿಂದ, ಆಗಲೂ ಅದನ್ನು ನಡೆಸುವುದಕ್ಕೆ ಅವಕಾಶವಿಲ್ಲದೆ ಹೋಯಿತು. ಕೊನೆಗೆ ಆ ಆಶ್ರಮವನ್ನು ಬಿಟ್ಟು ಚಿತ್ರಕೂಟಕ್ಕೆ ಹೊರಟಾಗಲೇ ಅವುಗಳನ್ನು ಧರಿಸಿ ತಾಪಸವೇಷದಿಂದ ಹೊರಟನೆಂದು ಗ್ರಹಿಸಬೇಕು. ಈ ವಿಷಯವು ಮೊದಲೇ ವ್ಯಾಖ್ಯಾನದಲ್ಲಿ ಕಾಣಿಸಲ್ಪಟ್ಟಿದೆ.

1 ಇಲ್ಲಿ "ಈಗ ಆತನು ಬದುಕಿರುವನಷ್ಟೆ?" ಎಂದು ರಾಮನು ಆಕ್ಷೇಪಿಸಿರುವುದರಿಂದ, ತಂದೆಯು ಬದುಕಿರುವಾಗ ಪಿತೃಶುಶ್ರೂಷೆಯನ್ನು ಮಾಡದೆ ಬಿಟ್ಟುಬರಬಾರದೆಂದೂ, ನಿನ್ನನ್ನು ಅಗಲಿ ಆತನು ಬದುಕಿರುವುದೇ ಕಷ್ಟವಾಗುವುದೆಂದೂ ರಾಮನ ಅಭಿಪ್ರಾಯವು. ಮತ್ತು "ತಂದೆಯು ಈಗ ಎಲ್ಲಿಗೆ ಹೋಗಿರುವನು ? ಎಂದು ಕೇಳಿದಾಗಲೇ ಭರತನು ಆಗಲೇ ನಿಜಸ್ಥಿತಿಯನ್ನು ತಿಳಿಸಬೇಕಾಗಿದ್ದರೂ, ರಾಮನು ಬೇರೆ ಪ್ರಶ್ನೆಯನ್ನೆತ್ತಿದುದರಿಂದ ಭರತನು ಆಗಲೇ ಅದಕ್ಕೆ ಉತ್ತರವನ್ನು ಹೇಳುವುದಕ್ಕವಕಾಶವಿಲ್ಲದೆ ಹೋಯಿತೆಂದು ಗ್ರಹಿಸಬೇಕು".

ನೋಡಿ ಬಹುಕಾಲವಾಗಿತ್ತು. ಇಷ್ಟು ಕಾಲದಮೇಲೆ ಇಷ್ಟು ದೂರದಲ್ಲಿರುವ ಈ ಘೋರಾರಣ್ಯಕ್ಕೆ ಕೇಕಯನಗರದಿಂದ ನೀನು ಹೊರಟುಬಂದುದು ಬಹಳ ಅಸಾಧ್ಯಕಾರ್ಯವಲ್ಲವೆ? ಹೇಗಾದರೂ ಹೋಗಲಿ! ಬಹುಕಾಲಕ್ಕೆ ನಿನ್ನನ್ನು ನೋಡುವ ಹಾಗಾಯಿತು! ನನಗೆ ಬಹಳ ಸಂತೋಷವುಂಟಾಯಿತು. ನೀನು ಹೀಗೆ ಆಕಸ್ಮಿಕವಾಗಿ ಕಾಡಿಗೆ ಬರುವುದಕ್ಕೆ ಕಾರಣವೇನು? ಆಹಾ! ನಿನ್ನ ಮುಖದ ಬಣ್ಣವೇ ಬದಲಿಹೋಗಿರುವುದರಿಂದ ತಟ್ಟನೆ ಗುರುತು ಹಿಡಿಯುವುದೇ ಕಷ್ಟವಾಯಿತು. ವತ್ಸನೆ! ರಾಜನು ಬದುಕಿದ್ದಪಕ್ಷದಲ್ಲಿ ನೀನು ಇಲ್ಲಿಗೆ ಹೇಗೆ ಬರುತ್ತಿದ್ದೆ? ಆತನು ಜೀವಿಸಿರುವುದರಲ್ಲಿ ಸಂದೇಹವೇನೂ ಇಲ್ಲವಷ್ಟೆ? ನೀನು ಬರುವಾಗ ಆತನು ಸಂಕಟಪಡದಿದ್ದನೆ? ಈಗ ಅಲ್ಲಿ ಬೇರೆ ಅತ್ಯಾಹಿತವೇನೂ ನಡೆಯಲಿಲ್ಲವಷ್ಟೆ? ಅಥವಾ ನೀನು ಇನ್ನೂ ಚಿಕ್ಕವಯಸ್ಸಿನವನಾದುದರಿಂದ ರಾಜಕಾರ್ಯಗಳನ್ನು ನಡೆಸುವುದರಲ್ಲಿ ನಿನಗೆ ತಕ್ಕಷ್ಟು ಶಕ್ತಿಯಿಲ್ಲವೆಂಬುದನ್ನು ತಿಳಿದು ಸಮಯನಿರೀಕ್ಷಣೆಯಲ್ಲಿದ್ದ ಶತ್ರುಗಳಾರಾದರೂ ನಿನ್ನ ರಾಜ್ಯವನ್ನು ಕಿತ್ತುಕೊಂಡು ನಿನ್ನನ್ನು ಇತ್ತಲಾಗಿ ಕಾಡಿಗೆ ಓಡಿಸಿಬಿಡಲಿಲ್ಲವಷ್ಟೆ? ಅಪ್ಪ ಮಗು! ಸತ್ಯಪರಾಕ್ರಮನಾದ ನಮ್ಮ ತಂದೆಗೆ ಶುಶ್ರೂಷೆಯನ್ನು ಮಾಡುತ್ತಿರುವೆಯಾ? ನಮ್ಮ ರಾಜನಾದರೋ ಬಹಳ ಸತ್ಯಸಂಧನು. ಅನೇಕ ರಾಜಸೂಯಗಳನ್ನೂ, ಅಶ್ವಮೇಧಗಳನ್ನೂ ನಡೆಸಿದವನು. ಧರ್ಮದಲ್ಲಿಯೇ ದೃಢಸಂಕಲ್ಪವುಳ್ಳವನು. ಆ ನಮ್ಮ ತಂದೆಯು ಕ್ಷೇಮದಿಂದಿರುವನೇ?[1] ವಿದ್ವಾಂಸನಾಗಿಯೂ, ಬ್ರಾಹ್ಮಣೋತ್ತಮನಾಗಿಯೂ ಧರ್ಮನಿಷ್ಠನಾಗಿಯೂ ಮಹಾತೇಜಸ್ವಿಯಾಗಿಯೂ, ಇರುವ ನಮ್ಮ ಇಕ್ಷ್ವಾಕುವಂಶದ ಕುಲಪುರೋಹಿತನಾದ ವಸಿಷ್ಠನನ್ನು ಮೊದಲಿನಂತೆಯೇ ನೀನು ಗೌರವಿಸಿ ಪೂಜಿಸುತ್ತಿರುವೆಯಷ್ಟೆ? ನಾನು ಬರುವಾಗ ಸಂಕಟವನ್ನು ತಡೆಯಲಾರದೆ ಗೋಳಿಡುತ್ತಿದ್ದ ಆ ಕೌಸಲ್ಯೆಯು ಕ್ಷೇಮದಿಂದಿರುವಳೆ? ಸುಪುತ್ರವತಿಯಾದ ಸುಮಿತ್ರೆಗೆ ಕ್ಷೇಮವೆ? ಪೂಜ್ಯಳಾದ ನಿನ್ನ ತಾಯಿಯು ಸುಖದಿಂದಿರುವಳೆ? ಅವಳಿಗೆ ಮುಖ್ಯವಾಗಿ ರಾಜ್ಯದಮೇಲೆ ಬಹಳ ಆಸೆಯಿತ್ತು! ಈಗ ಆ ಆಸೆಯನ್ನು ತೀರಿಸಿಕೊಂಡು ಸುಖದಿಂದ

---

[1] ಇದು ಮೊದಲುಗೊಂಡು ಕುಶಲಪ್ರಶ್ನದ ವ್ಯಾಜದಿಂದ ರಾಮನು ಭರತನಿಗೆ ರಾಜನೀತಿಗಳನ್ನು ಬೋಧಿಸುವನು.

ರಾಜಭೋಗಗಳನ್ನನುಭವಿಸುತ್ತ ಸಂತೋಷದಿಂದಿರುವಳೆ? [1] ವಿನಯ ಸಂಪನ್ನನಾಗಿಯೂ, ಸತ್ಕುಲಪ್ರಸೂತನಾಗಿಯೂ ಅನೇಕ ಶಾಸ್ತ್ರಾರ್ಥಗಳನ್ನು ಕೇಳಿ ತಿಳಿದವನಾಗಿಯೂ, ಅಸೂಯಾರಹಿತನಾಗಿಯೂ ವಸಿಷ್ಠರಿಂದುಪದೇಶಿಸಲ್ಪಟ್ಟ ಶಾಸ್ತ್ರಾರ್ಥಗಳನ್ನು ಚೆನ್ನಾಗಿ ವಿಮರ್ಶಿಸತಕ್ಕವನಾಗಿಯೂ ಇರುವ ಪುರೋಹಿತನಾದ ಸುಯಜ್ಞನನ್ನು ನೀನು ತಕ್ಕ ಸತ್ಕಾರಗಳಿಂದ ಪೂಜಿಸುತ್ತಿರುವೆಯಾ? ಶಾಸ್ತ್ರಜ್ಞನಾಗಿಯೂ, ಬುದ್ಧಿವಂತನಾಗಿಯೂ ಋಜುಸ್ವಭಾವವುಳ್ಳವನಾಗಿಯೂ ಇರುವ ಆ ಪುರೋಹಿತನು ಆಯಾಕಾಲಕ್ಕೆ ನಡೆಸಬೇಕಾದ ಹೋಮಕಾರ್ಯಗಳನ್ನು ನಿನಗೆ ಲೋಪವಿಲ್ಲದೆ ತಿಳಿಸಿ ನಡೆಸುತ್ತಿರುವನೆ? ವತ್ಸನೆ! ನೀನು ದೇವತೆಗಳನ್ನೂ ತಂದೆತಾಯಿಗಳನ್ನೂ ಗುರುಜನಗಳನ್ನೂ, ತಂದೆಗೆ ಸಮಾನರಾದ ಬಂಧುಗಳನ್ನೂ, ಹಿರಿಯರನ್ನೂ, ವೈಶ್ಯರನ್ನೂ, ಬ್ರಾಹ್ಮಣರನ್ನೂ ಚೆನ್ನಾಗಿ ಸತ್ಕರಿಸುತ್ತಿರುವೆಯಾ? ನೀನು ಶಸ್ತ್ರಾಸ್ತ್ರಗಳಲ್ಲಿ ಪಾರಂಗತನಾಗಿಯೂ, ರಾಜನೀತಿಗಳಲ್ಲಿ ನಿಪುಣನಾಗಿಯೂ ನಮಗೆ ಧನುರ್ವಿದ್ಯಾಗುರುವಾಗಿಯೂ ಇರುವ ಸುಧನ್ವನನ್ನು ಚೆನ್ನಾಗಿ ಮನ್ನಿಸುತ್ತಿರುವೆಯಾ? ನಿನಗೆ ಸಮಾನವಯಸ್ಕರಾಗಿಯೂ, ವೀರರಾಗಿಯೂ, ವಿದ್ಯಾವಂತರಾಗಿಯೂ, ಜಿತೇಂದ್ರಿಯರಾಗಿಯೂ, ಸತ್ಕುಲದಲ್ಲಿ ಹುಟ್ಟಿದವರಾಗಿಯೂ, ಇತರರ ಮುಖವನ್ನು ನೋಡಿದ ಮಾತ್ರದಿಂದಲೇ ಅವರವರ ಮನೋಭಿಪ್ರಾಯಗಳನ್ನು ತಿಳಿದುಕೊಳ್ಳುವ ಇಂಗಿತಜ್ಞಾನವುಳ್ಳವರಾಗಿಯೂ, ಪ್ರಸಿದ್ಧಿ ಹೊಂದಿದವರನ್ನು ಮಂತ್ರಿತ್ವದಲ್ಲಿರಿಸಿರುವೆಯಾ? ಎಲೈ ರಘುಕುಲೋತ್ತಮನೆ! ರಾಜಪದವಿಯಲ್ಲಿರುವವರಿಗೆ ಮಂತ್ರಾಲೋಚನೆಯೆಂಬುದೇ ಜಯಕ್ಕೆ ಮೂಲಾಧಾರವಾದುದು. ಅಂತಹ ಮಂತ್ರಾಲೋಚನೆಗಳನ್ನು, ಶಾಸ್ತ್ರಜ್ಞರಾಗಿಯೂ, ಆಲೋಚಿಸಿದ ವಿಷಯಗಳನ್ನು ಧಾರಣಮಾಡತಕ್ಕವರಾಗಿಯೂ ಇರುವ ಮಂತ್ರಿಗಳೊಡನೆಯೇ ಸೇರಿ ನಡಸಬೇಕೆಂಬುದನ್ನು ತಿಳಿದಿರುವೆಯಾ? [2] ಯಾವಾಗಲೂ

---

1 ಇದರಿಂದ ರಾಜನು ಪುರೋಹಿತರನ್ನು ಯಾವಾಗಲೂ ಪೂಜಿಸಬೇಕೆಂಬ ನೀತಿಯು ಬೋಧಿತವಾಗುವುದು.

2 ಇದರಿಂದ ರಾಜನಾದವನು ಕೇವಲ ನಿದ್ರಾಪರವಶನಾಗಿರಕೂಡದೆಂದೂ, ಅರ್ಧರಾತ್ರಿಗಳಲ್ಲಿಯೂ ರಹಸ್ಯವಾಗಿ ರಾಜಕಾರ್ಯಗಳ ಬಲಾಬಲವನ್ನು ಆಲೋಚಿಸಬೇಕೆಂದೂ ಸೂಚಿತವಾಗುವುದು.

ನಿದ್ರೆಗೊಳಗಾಗಿರದೆ ಯುಕ್ತಕಾಲಗಳಲ್ಲಿ ಎಚ್ಚರಗೊಳ್ಳುವೆಯಾ? ಅರ್ಧರಾತ್ರಿಯಲ್ಲಿ ಏಕಾಂತವಾಗಿ ಆಲೋಚಿಸಬೇಕಾದ ರಹಸ್ಯಾರ್ಥಗಳನ್ನು ಆ ಕಾಲಗಳಲ್ಲಿಯೇ ಆಲೋಚಿಸಬೇಕೆಂಬ ಉಪಾಯವನ್ನು ಬಲ್ಲೆಯಾ? [1] ಆಲೋಚಿಸಬೇಕಾದ ವಿಷಯಗಳನ್ನು ತಾನೊಬ್ಬನೇ ಕುಳಿತು ಆಲೋಚಿಸಬಾರದೆಂಬುದನ್ನೂ, ಅಥವಾ ಕಂಡಕಂಡವರನ್ನೆಲ್ಲಾ ಕೂಗಿ ಕರೆದು ಅನೇಕ ಜನಗಳನ್ನು ಸೇರಿಸಿಕೊಂಡು ಆಲೋಚಿಸಬಾರದೆಂಬುದನ್ನೂ ಚೆನ್ನಾಗಿ ತಿಳಿದು ಹಾಗೆಯೇ ನಡೆಸುತ್ತಿರುವೆಯಷ್ಟೆ? ನೀನು ಆಲೋಚಿಸಿದ ಮಂತ್ರವು ಹೊರಬಿದ್ದು ನಿನ್ನ ರಾಷ್ಟ್ರದೊಳಗೆಲ್ಲಾ ಹರಡದಂತೆ ಎಚ್ಚರಿಕೆಯಿಂದ ನೋಡುತ್ತಿರುವೆಯಷ್ಟೆ? ವತ್ಸನೆ! [2] ಸ್ವಲ್ಪಪ್ರಯತ್ನಗಳಿಂದಲೇ ಸಿದ್ಧಿಸತಕ್ಕುದಾಗಿಯೂ, ಮಹಾಫಲವನ್ನು ಕೊಡತಕ್ಕುದಾಗಿಯೂ ಇರುವ ಕಾರ್ಯವನ್ನು ಮಾತ್ರ ಮನಸ್ಸಿನಲ್ಲಿ ನಿರ್ಧರಿಸಿಕೊಂಡು, ಅದನ್ನು ತಾಮಸಮಾಡದೆ ಆಗಾಗಲೇ ನಡೆಸಿಬಿಡಬೇಕೆಂಬುದನ್ನು ಬಲ್ಲೆಯಾ? ನೀನು ಆಲೋಚಿಸಿದ ಸಮಸ್ತಕಾರ್ಯಗಳೂ ಚೆನ್ನಾಗಿ ಪರಿಪಕ್ವವಾದ ಮೇಲೆಯಾಗಲಿ, ಅಥವಾ ಫಲೋನ್ಮುಖವಾಗಬಹುದೆಂದು ಚೆನ್ನಾಗಿ ನಿಶ್ಚಯವುಂಟಾದಮೇಲೆಯಾಗಲಿ, ಹೊರಬಿದ್ದು, ಆಗ ಮಾತ್ರವೇ ನಿನ್ನ ಸಾಮಂತರಾಜರಿಗೆ ಆ ಕಾರ್ಯಾಲೋಚನೆಯು ತಿಳಿಯುವಂತೆ ಎಚ್ಚರಿಕೆಯಿಂದಿರುವೆಯಷ್ಟೆ? ನೀನೇ ಆಲೋಚಿಸಿ ನಡೆಸಬೇಕಾದ ಕಾರ್ಯಗಳು ಮೊದಲೇ ಎಷ್ಟುಮಾತ್ರಕ್ಕೂ ಹೊರಗೆ ಬರಬಾರದೆಂಬುದನ್ನು ಚೆನ್ನಾಗಿ ತಿಳಿದಿರುವೆಯಾ?

---

[1] ಇದರಿಂದ ರಾಜನು ತಾನೊಬ್ಬನೇ ಕುಳಿತು ಕಾರ್ಯಾಲೋಚನೆಯನ್ನು ಮಾಡಬಾರದೆಂದೂ, ಅದರಿಂದ ಒಬ್ಬರಲ್ಲಿ ಪಕ್ಷಪಾತಬುದ್ಧಿಯು ಹುಟ್ಟಿ, ಅವರ ಗುಣಾವಗುಣಗಳನ್ನು ಸರಿಯಾಗಿ ಗ್ರಹಿಸುವುದಕ್ಕವಕಾಶವಿಲ್ಲದೆ ಹೋಗಿ, ಕಾರ್ಯವೇ ಕೆಡಬಹುದೆಂದೂ, ಬಹುಜನಗಳೊಡನೆ ಆಲೋಚಿಸಿದ ಪಕ್ಷದಲ್ಲಿಯೂ ಐಕಮತ್ಯವು ತಪ್ಪಿ, ರಹಸ್ಯವು ಹೊರಬೀಳಬಹುದಾದುದರಿಂದ ಅನೇಕರೊಡನೆಯೂ ಆಲೋಚಿಸಬಾರದೆಂದೂ, ಆಲೋಚಿಸಿದ ವಿಷಯವನು ಫಲಪರಿಣಾಮದವರೆಗೂ ಹೋರಬೀಳಿಸಬಾರದೆಂದೂ ಸೂಚಿತವಾಗುವುದು.

[2] ಈ ಮುಂದಿನ ವಾಕ್ಯಗಳಿಂದ "ಸ್ವಲ್ಪವಾದ ಪ್ರಯತ್ನದಿಂದಲೇ ದೊಡ್ಡಫಲವು ಲಭಿಸುವಂತೆ ಕಾರ್ಯಗಳನ್ನಾರಂಭಿಸಬೇಕು; ಆರಂಭಿಸಿದ ಕಾರ್ಯವನ್ನು ಆದಷ್ಟು ಶೀಘ್ರದಲ್ಲಿ ಮುಗಿಸಬೇಕು. ಆಲಸ್ಯಮಾಡಿದಷ್ಟೂ ವಿಘ್ನಭಯವು ಹೆಚ್ಚಾಗುವುದು. ಆಲೋಚಿಸಿದ ಕಾರ್ಯಗಳನ್ನು ಪೂರ್ಣಫಲವು ಕಾಣುವವರೆಗೂ ಹೊರಕ್ಕೆ ಬಿಡಬಾರದು" ಇವೇ ಮೊದಲಾದ ರಾಜನೀತಿಗಳು ಸೂಚಿತವಾಗುವುವು.

ಎಲೆ ಭರತನೆ! ನೀನಾಗಲಿ, ನಿನ್ನ ಮಂತ್ರಿಗಳಾಗಲಿ ನಡೆಸಿದ ಮಂತ್ರಾಲೋಚನೆಗಳು, ಊಹೆಯಿಂದಲಾಗಲಿ, ಯುಕ್ತಿಯಿಂದಲಾಗಲಿ, ಇತರರಿಗೆ ಸ್ವಲ್ಪಮಾತ್ರವೂ ತಿಳಿಯದಂತೆ ಜಾಗರೂಕನಾಗಿರುವೆಯಷ್ಟೆ? [1] ಸಾವಿರಾರುಮಂದಿ ಮೂರ್ಖರು ನಿನಗೆ ಅನುಕೂಲರಾಗಿ ಬರುತ್ತಿದ್ದರೂ, ಆ ಸಾವಿರಮಂದಿಗಿಂತಲೂ, ಒಬ್ಬ ಪಂಡಿತನು ಮಾತ್ರವಿದ್ದರೆ ಮೇಲೆಂಬುದನ್ನು ತಿಳಿದು, ಅಂತವನನ್ನೇ ಆದರಿಸುತ್ತಿರುವೆಯಾ? ಸಾವಿರಾರು ಮಂದಿ ಮೂರ್ಖರು ರಾಜನ ಸುತ್ತುಮುತ್ತಲೂ ನೆರೆದು ಆಶ್ರಯವನ್ನು ಕೊಡುತ್ತಿದ್ದರೂ, ಅವರಿಂದ ಮಂತ್ರೋಪಾಯಗಳಿಗೆ ಯಾವುದೊಂದು ಸಹಾಯವೂ ಉಂಟಾಗಲಾರದು. [2] ಇತರರು ಹೇಳಿದ ವಿಷಯಗಳನ್ನು ಆಯಾಕ್ಷಣವೇ ಚೆನ್ನಾಗಿ ಗ್ರಹಿಸುವನಾಗಿ, ಸ್ಥಿರಬುದ್ಧಿಯುಳ್ಳವನಾಗಿ, ಯುಕ್ತಾಯುಕ್ತ ವಿವೇಚನೆಯಲ್ಲಿ ಸಮರ್ಥನಾಗಿ, ರಾಜನೀತಿಗಳಲ್ಲಿ ಅನುಭವವುಳ್ಳ ಮಂತ್ರಿಯೊಬ್ಬನಿದ್ದರೂ, ರಾಜನಿಗಾಗಲಿ, ಇತರ ರಾಜ್ಯಾಧಿಕಾರಿಗಳಿಗಾಗಲಿ ಬಹಳ ಮೇಲಾದ ಶ್ರೇಯಸ್ಸನ್ನು ಕೂಡಿಸುವನು. ಈ ವಿಷಯಗಳೆಲ್ಲವನ್ನೂ ನೀನು ಚೆನ್ನಾಗಿ ಮನಸ್ಸಿನಲ್ಲಿಟ್ಟಿರುವೆಯಾ? ಎಲೆ ವತ್ಸನೆ? [3] ಅಡಿಗೆ

---

[1] ಇದರಿಂದ ಅನೇಕ ಮೂರ್ಖರ ಸಹಾಯಕ್ಕಿಂತಲೂ ಒಬ್ಬ ಪಂಡಿತನ ಸಹಾಯವು ಮೇಲಾದುದೆಂದೂ, ಎಷ್ಟೋ ಮೂರ್ಖಜನರು ಬೆಂಬಲವಾಗಿದ್ದರೂ ತಕ್ಕ ಸಮಯಗಳಲ್ಲಿ ರಾಜನಿಗೆ ಕಾಲೋಚಿತವಾದ ಸಹಾಯವನ್ನು ಕೊಡದೆ ಕೈಬಿಡುವರೆಂದೂ ಸೂಚಿತವಾಗುವುದು.

[2] ಇದರಿಂದ ಮಂತ್ರಿಗಳು ಬುದ್ಧಿವಂತರಾಗಿರಬೇಕಾದುದು ಮಾತ್ರವೇ ಅಲ್ಲದೆ, ಶೂರರಾಗಿಯೂ ಸಮರ್ಥರಾಗಿಯೂ ನೀತಿಶಾಸ್ತ್ರಜ್ಞರಾಗಿಯೂ ಇರಬೇಕೆಂದು ಸೂಚಿತವಾಗುವುದು.

[3] ಇದರಿಂದ ಭೃತ್ಯರನ್ನು ಅವರವರ ಜಾತಿಗುಣಾದಿಗಳಿಗೆ ಅನುರೂಪವಾದ ಕಾರ್ಯದಲ್ಲಿಯೇ ನಿಯಮಿಸಬೇಕೇ ಹೊರತು ಹೀನಾಧಿಕಕಾರ್ಯಗಳಲ್ಲಿ ನಿಯೋಗಿಸಬಾರದೆಂದು ಸೂಚಿತವು. ಉತ್ತಮ ಭೃತ್ಯನನ್ನು ಮಧ್ಯಮಾಧಮ ಕಾರ್ಯಗಳಲ್ಲಿ ನಿಯಮಿಸಿದರೆ ಅವನು ಅವಮಾನದಿಂದ ಉತ್ಸಾಹ ಭಂಗವನ್ನು ಹೊಂದಿ ಕೆಲಸವನ್ನು ಕೆಡಿಸಿಬಿಡುವನು. ಹಾಗೆಯೇ ಮಧ್ಯಮ ಭೃತ್ಯನನ್ನು ಉತ್ತಮಕಾರ್ಯದಲ್ಲಿ ನಿಯೋಗಿಸಿದರೆ ಅಶಕ್ತಿಯಿಂದಲೂ ಅಧಮಕಾರ್ಯದಲ್ಲಿ ನಿಯೋಗಿಸಿದರೆ ಅವಮಾನದಿಂದಲೂ ಕಾರ್ಯವನ್ನು ಸಾಧಿಸದೆ ಹೋಗುವನು. ಅಧಮಭೃತ್ಯನನ್ನು ಉತ್ತಮ ಮಧ್ಯಮ ಕಾರ್ಯಗಳಲ್ಲಿ ನಿಯೋಗಿಸಿದರೂ ಅವನು ಅವುಗಳನ್ನು ನಡೆಸಲಾರದೆ ಕಾರ್ಯಹಾನಿಯನ್ನುಂಟುಮಾಡುವನು. ಆದುದರಿಂದ ಅವರವರನ್ನು ಉಚಿತ ಕಾರ್ಯಗಳಲ್ಲಿಯೇ ನಿಯಮಿಸಬೇಕೆಂದು ಭಾವವು.

ಮೊದಲಾದ ಉತ್ತಮ ಕಾರ್ಯಗಳಿಗೆ ಉತ್ತಮರಾದ ಭೃತ್ಯರನ್ನೂ, ಹಾಸಿಗೆಯನ್ನು ಹಾಸುವುದು. ಆಸನವನ್ನಿಡುವುದು, ಇವೇ ಮೊದಲಾದ ಮಧ್ಯಮ ಕಾರ್ಯಗಳಿಗೆ ಮಧ್ಯಮಭೃತ್ಯರನ್ನೂ ಕಾಲೊತ್ತುವುದೇ ಮೊದಲಾದ ನೀಚ ಕಾರ್ಯಗಳಿಗೆ ನೀಚಭೃತ್ಯರನ್ನೂ ನಿಯಮಿಸಿರುವೆಯಾ? ಮತ್ತು [1] ಸಾಮದಾನಾದಿಗಳಾದ ನಾಲ್ಕು ಉಪಧೆಗಳಿಂದ ಪರೀಕ್ಷಿಸಲ್ಪಟ್ಟು ಶುದ್ಧರಾಗಿಯೂ, ಉತ್ತಮರಾಗಿಯೂ ವಂಶಪರಂಪರೆಯಿಂದ ಬಂದವರಾಗಿಯೂ, ವೃದ್ಧರಾಗಿಯೂ ಇರುವ ಮಂತ್ರಿಗಳನ್ನು ದೊಡ್ಡದೊಡ್ಡ ರಾಜಕಾರ್ಯಗಳಿಗೆ ನಿಯಮಿಸಿರುವೆಯಾ? ಒಂದುವೇಳೆ ನೀನು ಪ್ರಜೆಗಳಿಗೆ ಕ್ರೂರದಂಡನೆಗಳನ್ನು ವಿಧಿಸಿ ರಾಜ್ಯವನ್ನು ಪೀಡಿಸುತ್ತಿದ್ದರೂ, [2] ನಿನ್ನ ಮಂತ್ರಿಗಳು ಅದಕ್ಕೆ ಸಮ್ಮತಿಸದೆ ನಿನ್ನನ್ನು ತಡೆಯುವಷ್ಟು ಸ್ವಾತಂತ್ರ್ಯವನ್ನು ವಹಿಸಿರುವರೆ? [3] ದುರ್ದಾನಗಳಿಂದ ದ್ರವ್ಯವನ್ನಾರ್ಜಿಸಿ, ಯಾಗಮಾಡುವವನನ್ನು ಋತ್ವಿಕ್ಕುಗಳೂ, ಬಲಾತ್ಕಾರದಿಂದ ತಮ್ಮನ್ನು ಸೆಳೆಯುತ್ತಿರುವ ಕಾಮಾತುರನನ್ನು ಮಾನವತಿಯರಾದ ಸ್ತ್ರೀಯರೂ ನಿಂದಿಸುವಂತೆ, ಅನ್ಯಾಯದಿಂದ ನೀನು ದ್ರವ್ಯಾರ್ಜನೆಗೆಳಸಿ ಪ್ರಜೆಗಳ ನಿಂದೆಗೆ

---

[1] ಪರೀಕ್ಷಿಸಲ್ಪಟ್ಟವರೆಂದರೆ, ಅರ್ಥಕಾಮಗಳೇ ಮೊದಲಾದ ಚತುರುಪಧೆಗಳಿಂದ ಪರೀಕ್ಷಿಸಲ್ಪಟ್ಟವರೆಂದರ್ಥವು. ರಾಜನಾದವನು ತನಗೆ ಅತ್ಯಾಪ್ತರಾದ ಪುರುಷರ ಮೂಲಕವಾಗಿ ವಿಶೇಷವಾದ ದ್ರವ್ಯವನ್ನು ಕಳುಹಿಸಿ, ತನಗೆ ಆತ್ಯಾಪ್ತರಾದ ಪುರುಷರ ಮೂಲಕವಾಗಿ ಹೇಳಿಸಿ ಅವರ ಮನೋದಾರ್ಢ್ಯವನ್ನು ಪರೀಕ್ಷಿಸುವುದುಂಟು. ಮತ್ತು ಸೌಂದರ್ಯವುಳ್ಳ ಸ್ತ್ರೀಯರನ್ನು ಕಳುಹಿಸಿ ಮೋಹಪಡಿಸಿ ಅವರಿಂದ ದುರ್ಬೋಧನೆಯನ್ನು ಮಾಡಿಸಿಯೂ ಪರೀಕ್ಷಿಸುವುದುಂಟು. ಇವೇ ಮೊದಲಾದ ಉಪಾಯಗಳಿಗೂ ವಶರಾಗದೆ, ತ್ರಿಕರಣಶುದ್ಧಿಯಿಂದಿರುವವರನ್ನೇ ಮಂತ್ರಿತ್ವದಲ್ಲಿಡಬೇಕೆಂದೂ, ಅವರು ತಮ್ಮ ಕುಲಪರಂಪರೆಯಾಗಿ ಬಂದ ಮಂತ್ರಿ ಸಂತತಿಯಲ್ಲಿಯೇ ಹುಟ್ಟಿದವರಾದರೆ ಇನ್ನೂ ಉತ್ತಮವೆಂದೂ ಸೂಚಿತವಾಗುವುದು.

[2] ಇದರಿಂದ ಮಂತ್ರಿಯಾದವನು ರಾಜನ ಪ್ರೀತಿಯನ್ನು ಸಂಪಾದಿಸುವುದಕ್ಕಾಗಿ ಅವನ ಮನೋನುವರ್ತಿಯಾಗಿಯೇ ಮಾತಾಡತಕ್ಕವನಾಗಿರಬಾರದೆಂದೂ, ರಾಜನು ನ್ಯಾಯವನ್ನತಿಕ್ರಮಿಸಿ ನಡೆದಾಗ, ಧೈರ್ಯದಿಂದ ಆತನನ್ನು ನಿವಾರಿಸತಕ್ಕವನಾಗಿರಬೇಕೆಂದೂ ಸೂಚಿತವಾಗುವುದು.

[3] ಇದರಿಂದ ರಾಜನು ತೀಕ್ಷ್ಣದಂಡನೆಯನ್ನು ವಿಧಿಸಿ ಆ ಮೂಲಕವಾಗಿ ದ್ರವ್ಯವನ್ನು ಸಂಪಾದಿಸಬಾರದೆಂದೂ, ದುರ್ದಾನದಿಂದ ಸಂಪಾದಿಸಿದ ದ್ರವ್ಯದಿಂದ ಯಾಗವನ್ನು ಮಾಡಬಾರದೆಂದೂ, ಸ್ತ್ರೀಯರನ್ನು ಬಲಾತ್ಕಾರದಿಂದ ಪರಿಗ್ರಹಿಸಬಾರದೆಂದೂ ಸೂಚಿತವು.

ಗುರಿಯಾಗಿಲ್ಲವಷ್ಟೆ? [1] ಸಾಮಾದ್ಯುಪಾಯಗಳಲ್ಲಿ ನಿಪುಣನಾಗಿಯೂ, ಕುಟಿಲ ನೀತಿಗಳನ್ನು ತಿಳಿದವನಾಗಿಯೂ, ಅಂತರಂಗ ಭೃತ್ಯರಮೇಲೆ ಇಲ್ಲದ ದೋಷ ಗಳನ್ನು ಹೇಳಿ ಅಂತವರನ್ನು ನೀಗಿಸುವುದಕ್ಕೆ ಪ್ರಯತ್ನಿಸುವವನಾಗಿಯೂ, ರಾಜಹಿಂಸೆಗೆ ಸ್ವಲ್ಪವೂ ಭಯಪಡದವನಾಗಿಯೂ, ಹಣದಲ್ಲಿ ದುರಾಶೆಯುಳ್ಳವ ನಾಗಿಯೂ, ರಾಜನ ಪ್ರಭುತ್ವವನ್ನೇ ಅಪಹರಿಸುವುದಕ್ಕೆ ಪ್ರಯತ್ನಿಸುವವ ನಾಗಿಯೂ, ಇರುವ ಪುರುಷನು, ಎಷ್ಟೇ ಬುದ್ಧಿವಂತನಾಗಿದ್ದರೂ, ರಾಜನು ಆತನನ್ನು ಆಗಲೇ ಕೊಂದುಬಿಡಬೇಕು. ಹಾಗಿಲ್ಲದಿದ್ದರೆ ಆತನಿಂದ ರಾಜರಿಗೆ ಎಂದಾದರೂ ಮೃತ್ಯುವು ತಪ್ಪದು. ಈ ವಿಷಯವನ್ನು ನೀನು ಚೆನ್ನಾಗಿ ಬಲ್ಲೆಯಾ? ಅಂತವರನ್ನು ನೀನು ಹತ್ತಿರದಲ್ಲಿ ಸೇರಿಸಿಲ್ಲವಷ್ಟೆ? [2] ರಾಜನು ಮಾಡತಕ್ಕ ಸತ್ಕಾರಗಳಿಗೆ ಸಂತುಷ್ಟನಾಗಿ, ವ್ಯವಹಾರಗಳಲ್ಲಿ ನಿಪುಣನಾಗಿ,

---

[1] ಇದರಿಂದ ಯಾವ ಕಾರ್ಯಗಳಿಗಾದರೂ ಸಾಹಸದಿಂದ ಪ್ರವರ್ತಿಸತಕ್ಕ ಧೈರ್ಯವುಳ್ಳವ ನಾಗಿಯೂ, ಕುಟಿಲೋಪಾಯಗಳಲ್ಲಿ ನಿಪುಣನಾಗಿಯೂ, ಅಂತರಂಗಭೃತ್ಯರಲ್ಲಿ ಭೇದವನ್ನು ತಂದಿಡುವ ಕಿರುಕುಳದ ಸ್ವಭಾವವುಳ್ಳವನಾಗಿಯೂ, ರಾಜ್ಯಾಸೆಯುಳ್ಳವನಾಗಿಯೂ ಇರುವ ಪುರುಷನನ್ನು ಹತ್ತಿರಕ್ಕೆ ಸೇರಿಸದೆ, ಸಾಧ್ಯವಾದ ಮಟ್ಟಿಗೆ ಅಂತವರ ಪ್ರಾಬಲ್ಯವನ್ನು ಮುರಿದಿಡಬೇಕು. ಇಲ್ಲದಿದ್ದರೆ ರಾಜನಿಗೇ ಕೇಡುಂಟಾಗುವುದು ನಿಜವೆಂದು ಸೂಚಿತವು.

[2] ಈ ಮುಂದಿನ ವಾಕ್ಯಗಳಿಂದ ಸೈನಿಕರ ಸ್ವರೂಪವೂ, ರಾಜನು ತನ್ನ ಸೈನಿಕರನ್ನು ಸತ್ಕರಿಸತಕ್ಕ ರೀತಿಯೂ ಸೂಚಿತವಾಗುವುದು. ಹೇಗೆಂದರೆ:—

ಇದರಿಂದ ಸ್ವಾಮಿಭಕ್ತಿ, ಮನಸ್ತೃಪ್ತಿ, ನಂಬಿಕೆ, ಬುದ್ಧಿ, ಸಾಹಸ, ಕುಲೀನತೆ, ಮುಂತಾದ ಗುಣಗಳುಳ್ಳವನನ್ನೇ ಸೇನಾಧಿಪತ್ಯದಲ್ಲಿಡಬೇಕೆಂದು ಸೂಚಿತವು. ಮತ್ತು ರಾಜ್ಯಾಧಿಪತ್ಯವನ್ನು ಮಾಡುವವನು ಬಲವುಳ್ಳವನಾಗಿಯೂ, ಯುದ್ಧದಲ್ಲಿ ನಿಪುಣರಾಗಿಯೂ, ಪೌರುಷದಲ್ಲಿ ಪ್ರಖ್ಯಾತಿಹೊಂದಿದವರಾಗಿಯೂ, ಇರುವವರನ್ನೇ ಸೇನಾಜನವನ್ನಾಗಿ ನಿಯ ಮಿಸಬೇಕು. ಸೈನಿಕರಿಗೆ ಅವರವರ ಕಾರ್ಯಗೌರವಕ್ಕೆ ತಕ್ಕಂತೆ ಸಂಬಳಗಳನ್ನು ಹೆಚ್ಚಿಸಿ ಕಾಲಾತಿಕ್ರಮವಿಲ್ಲದಂತೆ ಅವರವರ ಭತ್ಯಗಳನ್ನು ಸಲ್ಲಿಸುತ್ತಿರಬೇಕು. ಅವರ ಮನಸ್ಸಿಗೆ ಅಸಮಾಧಾನವನ್ನುಂಟುಮಾಡಿದರೂ, ಅವರಿಗೆ ಸಲ್ಲಿಸಬೇಕಾದ ಭತ್ಯಗಳನ್ನು ಸಕಾಲಕ್ಕೆ ಸಲ್ಲಿಸದಿದ್ದರೂ, ಅವರನ್ನು ಅನಾದರಿಸಿದರೂ ಅವರು ಕೋಪಗೊಂಡು ಸಮಯದಲ್ಲಿ ಕೈಬಿಡು ವರಲ್ಲದೆ, ಅವಕಾಶವು ಸಿಕ್ಕಿದಾಗ ರಾಜಪದವಿಗೇ ಹಾನಿಯನ್ನು ತರುವರು. ಮತ್ತು ಸೈನಿಕರನ್ನು ತಕ್ಕ ರೀತಿಯಿಂದ ಪ್ರೋತ್ಸಾಹಿಸಿ ತನ್ನಲ್ಲಿ ಅನುರಕ್ತರನ್ನಾಗಿ ಮಾಡಿಕೊಂಡಿದ್ದರೆ ಅವರು ಪ್ರಭುವಿಗಾಗಿ ತಮ್ಮ ಪ್ರಾಣವನ್ನಾದರೂ ಕೊಡುವುದಕ್ಕೆ ಸಿದ್ಧರಾಗುವರು" ಎಂಬೀ ನೀತಿಗಳೆಲ್ಲವೂ ವ್ಯಕ್ತವಾಗುವುವು.

ಶೂರನಾಗಿ, ಆಯಾಕಾಲಕ್ಕೆ ತಕ್ಕಂತೆ ತನ್ನ ಸೈನ್ಯಗಳನ್ನು ಸಿದ್ಧಪಡಿಸುವದಕ್ಕೂ, ಶತ್ರುಸೈನ್ಯಗಳನ್ನು ಭೇದಿಸುವುದಕ್ಕೂ ತಕ್ಕಷ್ಟು ಬುದ್ಧಿ ಚಾತುರ್ಯವುಳ್ಳವನಾಗಿ, ಎಷ್ಟೇ ಮಹಾವಿಪತ್ತುಗಳು ಬರುವಹಾಗಿದ್ದರೂ ಎದೆಗುಂದದವನಾಗಿ, ಬಾಹ್ಯಾಭ್ಯಂತರಗಳೆರಡರಲ್ಲಿಯೂ ಶುದ್ಧನಾಗಿ, ಸತ್ಕುಲದಲ್ಲಿ ಹುಟ್ಟಿದವನಾಗಿ, ಪ್ರಭುಭಕ್ತಿಯುಳ್ಳವನಾಗಿ, ಕಾರ್ಯಸಮರ್ಥನೆನಿಸಿಕೊಂಡಿರುವವನನ್ನೇ ಸೇನಾಪತಿಯನ್ನಾಗಿ ಮಾಡಿಕೊಂಡಿರುವೆಯಾ? ಅಂತಹ ಸೇನಾಪತಿಯಿರುವಾಗಲೂ ಆತನನ್ನು ಬಿಟ್ಟು ಇತರರ ದುಷ್ಪ್ರೇರಣೆಯಿಂದ ಬೇರೊಬ್ಬನು ಎಷ್ಟೇ ಸಮರ್ಥನಾಗಿದ್ದರೂ ಆ ಕಾರ್ಯಕ್ಕೆ ನಿಯಮಿಸಬಾರದೆಂಬುದನ್ನು ಬಲ್ಲೆಯಾ? ಬಹಳ ಬಲಾಢ್ಯರಾಗಿ, ಯುದ್ಧದಲ್ಲಿ ನಿಪುಣರಾಗಿ, ಅನೇಕ ಯುದ್ಧಗಳನ್ನು ಮಾಡಿ ಪೌರುಷದಿಂದ ಪ್ರಸಿದ್ಧಿಹೊಂದಿದವರಾಗಿ, ಶೂರರಾಗಿರುವ ಪ್ರಮುಖರನ್ನು ಚೆನ್ನಾಗಿ ಪಾರಿತೋಷಿಕಾದಿಗಳಿಂದ ಸತ್ಕರಿಸುತ್ತಿರುವೆಯಷ್ಟೆ? ಎಲೆ ವತ್ಸನೆ! ಸೈನಿಕರಿಗೆ ಆಯಾಕಾಲಕ್ಕೆ ಕೊಡಬೇಕಾದ ಭತ್ಯಗಳನ್ನೂ, ಸಂಬಳಗಳನ್ನೂ ತಪ್ಪದೆ ಆಗಾಗಲೇ ಸಲಿಸುತ್ತಿರುವೆಯಷ್ಟೆ? ಈ ಭಾಗದಲ್ಲಿ ಮಾತ್ರ ಸ್ವಲ್ಪವಾದರೂ ವಿಳಂಬಮಾಡಬಾರದೆಂಬುದನ್ನು ಬಲ್ಲೆಯಾ? ಆ ಭೃತ್ಯರು ಸಂಬಳದಿಂದಲೇ ಜೀವಿಸಬೇಕಾಗಿರುವುದರಿಂದ. ಅದನ್ನು ತಕ್ಕ ಕಾಲದಲ್ಲಿ ಕೊಡದೆ, ವಿಳಂಬಮಾಡಿದರೆ ಅವರಿಗೆ ರಾಜನಲ್ಲಿ ಕೋಪವುಂಟಾಗುವುದು. ರಾಜನನ್ನು ನಿಂದಿಸಲಾರಂಭಿಸುವರು. ಕೊನೆಗೆ ಅವರು ರಾಜನಿಗೆ ಕೇಡನ್ನೂ ಬಯಸುವರು. ಇದರಿಂದ ಬಹಳ ಅನರ್ಥಗಳಿಗೆ ಕಾರಣವುಂಟೆಂಬುದನ್ನು ಚೆನ್ನಾಗಿ ಮನಸ್ಸಿನಲ್ಲಿಟ್ಟಿರುವೆಯಾ? ಪ್ರಮುಖರಾಗಿಯೂ ಕ್ಷತ್ರಿಯಕುಲದಲ್ಲಿ ಹುಟ್ಟಿದವರಾಗಿಯೂ ಇರುವ ಅನೇಕ ವೀರರು ನಿನ್ನಲ್ಲಿ ಅನುರಾಗವುಳ್ಳವರಾಗಿರುವರೇ? ಸಮಯಬಂದಾಗ ಅವರು ನಿನಗಾಗಿ ತಮ್ಮ ಪ್ರಾಣಗಳನ್ನಾದರೂ ಕೊಡುವುದಕ್ಕೆ ಹಿಂಜರಿಯದಿರುವರೆ? [1] ಎಲೈ

---

[1] ಇದರಿಂದ ದೂತಲಕ್ಷಣವು ತಿಳಿಸಲ್ಪಡುವುದು. ದೂತ್ಯದಲ್ಲಿರಿಸಲ್ಪಡುವವನು ಸ್ವದೇಶದವನಾಗಿಯೇ ಇರಬೇಕು, ಅನ್ಯದೇಶದವನಾಗಿದ್ದರೆ, ಅವನಿಗೆ ಪಕ್ಷಪಾತಬುದ್ಧಿಯುಂಟಾಗುವುದು. ಇಂಗಿತಗಳನ್ನು ನೋಡಿದ ಮಾತ್ರದಿಂದಲೇ ಇತರರ ಮನೋಭಿಪ್ರಾಯವನ್ನು ತಿಳಿದುಕೊಳ್ಳುವ ಸಾಮರ್ಥ್ಯವುಳ್ಳವನನ್ನೇ ದೂತಕಾರ್ಯದಲ್ಲಿ ನಿಯಮಿಸಬೇಕು. ದೂತನಾಗಿ ಕಳುಹಿಸಲ್ಪಡುವ ಪುರುಷನು ಸಮಯೋಚಿತವಾದ ಬುದ್ಧಿಸ್ಫೂರ್ತಿಯುಳ್ಳವನಾಗಿರಬೇಕು,

ಭರತನೆ! ನಮ್ಮ ದೇಶದಲ್ಲಿಯೇ ಹುಟ್ಟಿದವನಾಗಿ, ವಿದ್ವಾಂಸನಾಗಿ, ಸಾಹಸಿಯಾಗಿ, ಸಮಯೋಚಿತವಾದ ಬುದ್ಧಿಕೌಶಲವುಳ್ಳವನಾಗಿ, ತನ್ನೊಡನೆ ಹೇಳಿದ ಸಂದೇಶಗಳಲ್ಲಿ ಸ್ವಬುದ್ಧಿಯನ್ನು ತೋರಿಸಬೇಕೆಂದು ಇದ್ದುದರಲ್ಲಿ ಕೆಲವನ್ನು ಬಿಟ್ಟು, ಇಲ್ಲದುದನ್ನು ಸೇರಿಸಿಕೊಂಡು, ಸ್ವಕಪೋಲಕಲ್ಪನೆಯಿಂದ ಹೇಳದೆ, ಹೇಳಿದಂತೆಯೇ ಹೇಳುವ ಸುಸ್ವಭಾವವುಳ್ಳವರನ್ನೇ ದೂತಕಾರ್ಯಕ್ಕಿರಿಸಿರುವೆಯಾ? ನೀನು ನಿನ್ನ ಶತ್ರುಪಕ್ಷದಲ್ಲಿ ಮಂತ್ರಿ ಮೊದಲಾದ [1] ಹದಿನೆಂಟು

ಅವನು ಕಾರ್ಯಾರ್ಥವಾಗಿ ಹಲವು ಮಾತುಗಳನ್ನು ಹೇಳತಕ್ಕವನಾಗಿರಬೇಕಾದರೂ, ರಾಜನು ಹೇಳಿ ಕಳುಹಿಸಿರುವ ಮಾತುಗಳನ್ನು ಮಾತ್ರ ಸ್ವಲ್ಪವೂ ಹೆಚ್ಚುಕಡಿಮೆಯಿಲ್ಲದೆ ವ್ಯವಹರಿಸಿ ಕಾರ್ಯಗಳನ್ನು ನಿರ್ವಹಿಸತಕ್ಕವನಾಗಿರಬೇಕು. ಯುಕ್ತಾಯುಕ್ತಗಳನ್ನು ಚೆನ್ನಾಗಿ ಬಲ್ಲವನಾಗಿರಬೇಕು ಎಂಬ ವಿಷಯಗಳೆಲ್ಲವೂ ಇದರಿಂದ ಬೋಧಿತವಾಗುವುವು.

[1] ಹದಿನೆಂಟು ತೀರ್ಥಗಳಾವುವೆಂದರೆ:—(೧) ಮಂತ್ರಿ (೨) ಪುರೋಹಿತನು (೩) ಯುವರಾಜನು (೪) ಸೇನಾಧಿಪತಿ (೫) ಬಾಗಿಲು ಕಾಯುವವರಿಗೆ ನಿರ್ವಾಹಕನಾದ ದೌವಾರಿಕನೆಂಬವನು (೬) ಅಂತಃಪುರ ಕಾರ್ಯಗಳನ್ನು ನಿರ್ವಹಿಸತಕ್ಕ ಆಂತರ್ವಂಶಿಕನೆಂಬವನು (೭) ಸೆರೆಮನೆಯ ಅಧಿಕಾರಿ (೮) ಬಂಡಾರದ ಅಧಿಕಾರಿ (೯) ರಾಜಾಜ್ಞೆಯನ್ನು ಪ್ರಕಟಿಸತಕ್ಕ ಕಾರ್ಯನಿಯೋಜಕನೆಂಬವನು (೧೦) ವ್ಯವಹಾರಗಳನ್ನು ವಿಚಾರಿಸತಕ್ಕ ಪ್ರಾಡ್ವಿವಾಕನೆಂಬವನು. ಇವನ ಲಕ್ಷಣವೇನೆಂದರೆ:—"ವಿವಾಹೇ ಪೃಚ್ಛತಿ ಪ್ರಶ್ನಂ ಪ್ರತಿಪ್ರಶ್ನಂ ತಥೈವ ಚ । ಪ್ರಿಯಪೂರ್ವಂ ಪ್ರಾಗ್ವದತಿ ಪ್ರಾಡ್ವಿವಾಕಸ್ತತಃಸ್ಮೃತಃ" ಯಾವುದಾದರೂ ವಿವಾದವು ಬಂದಾಗ ಕಕ್ಷಿಪ್ರತಿಕಕ್ಷಿಗಳ ವಾಙ್ಮೂಲಗಳನ್ನು ಕೇಳಿ, ಆಕ್ಷೇಪಸಮಾಧಾನಗಳನ್ನು ತೋರಿಸುತ್ತ ಅವರ ಮನಸ್ಸೊಪ್ಪುವಂತೆ ಪ್ರಿಯವಾದ ಮಾತುಗಳನ್ನಾಡಿ, ನಿಜಸ್ಥಿತಿಯನ್ನು ತಿಳಿದು ನ್ಯಾಯವನ್ನು ತೀರ್ಮಾನಿಸುವವನು (೧೧) ಸೈನ್ಯಗಳಿಗೆ ಸಂಬಳಗಳನ್ನೂ, ಭತ್ಯಗಳನ್ನೂ ಹಂಚಿಕೊಡತಕ್ಕ ಸೇನಾನಾಯಕನು (೧೨) ರಾತ್ರಿಗಳಲ್ಲಿ ನಗರಶೋಧನೆಯನ್ನು ಮಾಡುತ್ತ, ಊರ ಹೊರಬಾಗಿಲನ್ನೂ, ಕೋಟೆ ಮೊದಲಾದುವುಗಳನ್ನೂ ಎಚ್ಚರಿಕೆಯಿಂದ ರಕ್ಷಿಸುವ ಕಾರ್ಯಗಳನ್ನೂ ವಿಧಿಸತಕ್ಕ ಅಧಿಕಾರಿಯು ಇವನಿಗೆ ನಗರಾಧ್ಯಕ್ಷನೆಂದು ಹೆಸರು. (೧೩) ಕರ್ಮಾಂತಿಕನು, ಎಂದರೆ ಸೈನಿಕರಂತಲ್ಲದೆ ತಮ್ಮ ತಮ್ಮ ಕೆಲಸಗಳನ್ನು ಮುಗಿಸಿಬಂದು ಆಗಾಗ ಭತ್ಯಗಳನ್ನು ತೆಗೆದುಕೊಳ್ಳುತ್ತಿರುವ ಬೇರೆ ಕೆಲಸಗಾರರಿಗೆಲ್ಲಾ ಅವರವರ ಕೆಲಸಕ್ಕೆ ತಕ್ಕ ದ್ರವ್ಯಭಾಗವನ್ನು ಹಂಚಿಕೊಡುವವನು. ಈತನು ರಾಜನಿಂದ ಮೊತ್ತವಾಗಿ ಹಣವನ್ನು ತಂದು ಅವರವರಿಗೆ ತಕ್ಕಂತೆ ಹಂಚುವನು. (೧೪) ಸಭ್ಯನು, ಇವನ ಕೆಲಸಗಳೇನೆಂದರೆ, ಸಭೆಯನ್ನು ಪ್ರತಿದಿನವೂ ಅಲಂಕರಿಸಿಡುವುದು. ರಾಜನಿಗೂ ಮಂತ್ರಿ ಮೊದಲಾದವರಿಗೂ ಉಚಿತಾಸನಗಳನ್ನೇರ್ಪಡಿಸುವುದು. ಸಭ್ಯರನ್ನು ಕರೆತರುವುದು. ಸಭಾರ್ಹರಲ್ಲದವರನ್ನು ಒಳಗೆ ಸೇರಿಸದಿರುವುದು. ಸಭಾಸ್ಥಾನ

ತೀರ್ಥಗಳಿಗೂ, ಒಬ್ಬೊಬ್ಬರಿಗೆ ಮೂರುಮೂರು ಚಾರರಂತೆ ಕಳುಹಿಸಿ, ಆ ಚಾರರು ಆಗಾಗ ಒಬ್ಬರಿಗೊಬ್ಬರು ಪರಸ್ಪರ ರಹಸ್ಯವನ್ನು ತಿಳಿದುಕೊಳ್ಳುವಂತೆ ಮಾಡಿ, ಆ ಶತ್ರುಗಳ ರಹಸ್ಯವನ್ನು ತಿಳಿಯುತ್ತಿರುವೆಯಾ ? ಹಾಗೆಯೇ ಸ್ವಪಕ್ಷದಲ್ಲಿಯೂ ನಿನ್ನ ಸಮೀಪವರ್ತಿಗಳಾದ ಮಂತ್ರಿ, ಪುರೋಹಿತನು, ಯುವರಾಜನು, ಈ ಮೂವರು ಹೊರತು, ಉಳಿದ ಹದಿನೈದು ತೀರ್ಥಗಳೊಳಗಿನ ಮರ್ಮಗಳನ್ನೂ ಆಗಾಗ ತಿಳಿದುಕೊಳ್ಳುವುದಕ್ಕಾಗಿ ಇಲ್ಲಿಯೂ ಒಬ್ಬೊಬ್ಬರಿಗೆ ಮೂರು ಮೂರು ಗೂಢಚಾರರನ್ನು ಕಳುಹಿಸಿ ರಹಸ್ಯಗಳನ್ನು ತಿಳಿಯುತ್ತಿರುವೆಯಾ ? [1] ನಿನ್ನಿಂದ

ವನ್ನು ಗದ್ದಲವಿಲ್ಲದಂತೆ ನೋಡಿಕೊಳ್ಳುವುದು. ಇವೇ ಮೊದಲಾದ ಕೆಲಸಗಳಿಗೆ ತಕ್ಕ ತಕ್ಕ ಪುರುಷರನ್ನು ನಿಯಮಿಸಿ ಅವರ ಮೇಲ್ವಿಚಾರಣೆಯನ್ನು ನೋಡಿಕೊಳ್ಳತಕ್ಕವನೇ ಸಭ್ಯನೆನಿಸುವನು. (೧೫) ದಾಯಭಾಗಾದಿವಿವಾದಗಳು ಬಂದಾಗ ಆ ವಿವಾದಕಾರಣಗಳನ್ನು ಚೆನ್ನಾಗಿ ವಿಚಾರಿಸಿ ಪರಿಶೀಲನೆಮಾಡಿ ಧರ್ಮಯುಕ್ತವಾದ ತೀರ್ಪನ್ನು ಕೊಡತಕ್ಕ ಧರ್ಮಾಧ್ಯಕ್ಷನೆಂಬವನು. (೧೬) ಕಳವು, ಕೊಲೆ, ಮೊದಲಾದ ಅಪರಾಧಗಳನ್ನು ನಡೆಸಿದವರಿಗೆ ರಾಜಾಜ್ಞೆಯಿಂದ ಕರಚ್ಛೇದನ, ಶಿರಚ್ಛೇದನ ಮೊದಲಾದ ದಂಡನೆಗಳನ್ನು ಮಾಡಿಸತಕ್ಕ ಅಧಿಕಾರಿಯು. ಇವನಿಗೆ ದಂಡಪಾಲನೆಂದು ಹೆಸರು (೧೭) ಗಿರಿದುರ್ಗ ವನದುರ್ಗ ಜಲದುರ್ಗ ಮುಂತಾದ ದುರ್ಗಗಳೆಲ್ಲವನ್ನೂ ಕಾಪಾಡುವ ದುರ್ಗಪಾಲನೆಂಬವನು. (೧೮) ರಾಷ್ಟ್ರಾಂತಪಾಲನೆಂಬವನು ರಾಜ್ಯದ ಎಲ್ಲೆಕಟ್ಟುಗಳಲ್ಲಿ ಪರರಾಜರು ಮುಂತಾದವರು ಅತಿಕ್ರಮಿಸಿ ಬಾರದಂತೆ ನಾಲ್ಕು ಕಡೆಗಳಲ್ಲಿಯೂ ಕಾವಲಿಟ್ಟು ನೋಡಿಕೊಳ್ಳತಕ್ಕ ಮುಖ್ಯಾಧಿಕಾರಿಯು. ಈ ಹದಿನೆಂಟು ಅಧಿಕಾರಿಗಳಿಗೂ ತೀರ್ಥಗಳೆಂದು ಹೆಸರು. ಶತ್ರುಪಕ್ಷದಲ್ಲಿರುವ ಈ ಹದಿನೆಂಟು ಮಂದಿಯ ರಹಸ್ಯಗಳನ್ನೂ ಗೂಢಚಾರರ ಮೂಲಕವಾಗಿ ರಾಜನು ತಿಳಿದುಕೊಳ್ಳುತ್ತಿರಬೇಕು. ಒಬ್ಬೊಬ್ಬರಿಗೆ ಮೂರು ಮೂರು ಮಂದಿ ಚಾರರನ್ನು ನಿಯಮಿಸಿಡಬೇಕು. ಹಾಗೆಯೇ ಸ್ವಪಕ್ಷದಲ್ಲಿಯೂ, ಮಂತ್ರಿ, ಪುರೋಹಿತನು, ಯುವರಾಜನು ; ಈ ಮೂವರನ್ನು ಬಿಟ್ಟು ಉಳಿದ ಹದಿನೈದು ತೀರ್ಥಗಳಿಗೂ ಒಬ್ಬೊಬ್ಬರಿಗೆ ಮೂರು ಮೂರು ಮಂದಿ ಚಾರರನ್ನು ಬಿಟ್ಟು ಮರ್ಮಗಳನ್ನು ತಿಳಿದುಕೊಳ್ಳಬೇಕು. ಮೇಲೆ ಹೇಳಿದ ಮೂವರು ಮುಖ್ಯಾಧಿಕಾರಿಗಳು ಮಾತ್ರ ಯಾವಾಗಲೂ ರಾಜನಿಗೆ ಸಮೀಪವರ್ತಿಗಳಾಗಿಯೇ ಇರುವುದರಿಂದ, ಅವರ ನಡತೆಗಳನ್ನು ರಾಜನು ತಾನಾಗಿಯೇ ಪರಿಶೀಲಿಸುತ್ತಿರಬಹುದು.

[1] ಇದರಿಂದ, ಪಲಾಯಿತರಾದ ಶತ್ರುಗಳು ನಾಚಿಕೆಯನ್ನು ಬಿಟ್ಟು ಹಿಂತಿರುಗಿ ಬಂದು ದೇಶದಲ್ಲಿ ಸೇರುವುದಾದರೆ, ಅವರು ಏನೋ ದುರಭಿಪ್ರಾಯವನ್ನಿಟ್ಟುಕೊಂಡೇ ಬಂದಿರಬೇಕಾದುದರಿಂದ, ಅವರು ಕೇವಲ ದುರ್ಬಲರೆಂದು ತೋರಿದರೂ, ಉಪೇಕ್ಷೆಮಾಡದೆ ಅವರ ವಿಷಯದಲ್ಲಿ ಬಹಳ ಎಚ್ಚರಿಕೆಯಿಂದಿರಬೇಕೆಂದು ಸೂಚಿತವಾಗುವುದು.

ನಿಗ್ರಹಿಸಲ್ಪಟ್ಟ ಶತ್ರುಗಳು ಕಾಲಾಂತರದಲ್ಲಿಯಾದರೂ ಹಿಂತಿರುಗಿ ಬಂದಾಗ, ಅವರು ಕೇವಲ ದುರ್ಬಲರೆಂದು ತಿಳಿದು ಉದಾಸೀನನಾಗಿ ಇದ್ದುಬಿಡದೆ, ಅವರ ವಿಷಯದಲ್ಲಿ ಯಾವಾಗಲೂ ಎಚ್ಚರಿಕೆಯಿಂದಿರುವೆಯಾ? ಎಲೆ ವತ್ಸನೆ! ನೀನು ನಾಸ್ತಿಕರಾದ ಬ್ರಾಹ್ಮಣರನ್ನು ಸೇವಿಸುವುದಿಲ್ಲವಷ್ಟೆ? ಅಂತವರು ಏನೂ ತಿಳಿಯದ ಮೂಢರಾಗಿದ್ದರೂ ತಾವೇ ಪಂಡಿತರೆಂದು ಹೆಮ್ಮೆಗೊಂಡಿರುವರು. ಅವರು ವಿವೇಕಶೂನ್ಯರಾಗಿಯೂ ಇರುವರು. ಅಂತವರನ್ನು ಗೌರವಿಸಿದರೆ ಇಲ್ಲದ ದುರ್ಬೋಧನೆಗಳನ್ನು ಮಾಡಿ, ಧರ್ಮಲೋಪ, ಅಧರ್ಮಾಚರಣ ಮೊದಲಾದ ಅನೇಕ ಅನರ್ಥಗಳಿಗೆ ಗುರಿಮಾಡುವರು. ಮತ್ತು ದುರ್ಬುದ್ಧಿಯುಳ್ಳ ನಾಸ್ತಿಕರು ಮಹರ್ಷಿಪ್ರಣೀತವಾದ ಧರ್ಮಶಾಸ್ತ್ರಗಳನೇಕವಾಗಿದ್ದರೂ ಅವೆಲ್ಲವನ್ನೂ ಬಿಟ್ಟು, ಕೇವಲ ಶುಷ್ಕತರ್ಕವಾದಗಳಿಂದ ನಿರರ್ಥಕವಾದ ಮಾತುಗಳನ್ನಾಡುತ್ತಿರುವರು. ವತ್ಸ ಭರತನೆ! ಈಗ ನಿನ್ನ ಕೈಗೆ ಸಿಕ್ಕಿರುವ ಅಯೋಧ್ಯೆಯು ಸಾಮಾನ್ಯವೆಂದೆಣಿಸಬೇಡ! ಮಹಾಪರಾಕ್ರಮಿಗಳಾದ ನಮ್ಮ ಹಿರಿಯರಿಗೆ ವಂಶಪರಂಪರೆಯಾಗಿ ಪಟ್ಟವನ್ನು ಕಟ್ಟಿದ ಸ್ಥಳವೇ ಇದು. ಆದುದರಿಂದಲೇ ಶತ್ರುಗಳಿಗೆ ಅಸಾಧ್ಯವಾದ ಆ ಪಟ್ಟಣಕ್ಕೆ ಅಯೋಧ್ಯೆಯೆಂಬ ಅನ್ವರ್ಥವಾದ ಹೆಸರು ಬಂದಿರುವುದು. ಆ ಪಟ್ಟಣದ ಹೊರಬಾಗಿಲುಗಳು ಅಭೇದ್ಯವಾಗಿರುವುವು. ಇದರಲ್ಲಿ ಬ್ರಾಹ್ಮಣ ಕ್ಷತ್ರಿಯ ವೈಶ್ಯರೆಂಬ ತ್ರೈವರ್ಣಿಕರೂ ಅವರವರ ಕರ್ಮಗಳಲ್ಲಿ ನಿರತರಾಗಿ ಯಾವಾಗಲೂ ದಟ್ಟವಾಗಿ ತುಂಬಿರುವರು. ಮತ್ತು ಅವರು ಜಿತೇಂದ್ರಿಯರಾಗಿಯೂ, ಆಯಾ ಜಾತಿಗಳಲ್ಲಿ ಪೂಜ್ಯತೆಯುಳ್ಳವರಾಗಿಯೂ ಇರುವರು. ಅದರಲ್ಲಿ ವಿಚಿತ್ರವಿಚಿತ್ರಗಳಾದ ಉಪ್ಪರಿಗೆಗಳಿರುವುವು. ವಿದ್ವಜ್ಜನಗಳು ಅದರಲ್ಲಿ ಕಿಕ್ಕಿರಿದು ತುಂಬಿರುವರು. ಹೀಗೆ ಸಮಸ್ತ ಸೌಭಾಗ್ಯ ಸಮೃದ್ಧಿಯುಳ್ಳುದಾಗಿ ಉಲ್ಲಾಸಗೊಂಡಿರುವ ನಮ್ಮ ದೇಶವು ಅಶ್ವಮೇಧಾದಿ ಮಹಾಯಾಗಗಳನ್ನು ಮಾಡಿದ ಅನೇಕ ಪ್ರದೇಶಗಳಿಂದ ಕೂಡಿದುದು. ಮತ್ತು ನಮ್ಮ ದೇಶಕ್ಕೆ ಬಂದ ಪ್ರಜೆಗಳು ಯಾವ ಕಾರಣದಿಂದಲೂ ಅದನ್ನು ಬಿಟ್ಟು ಹೋಗದೆ ಅಲ್ಲಿನ ಸುಭಿಕ್ಷವನ್ನೂ, ಸಂಪತ್ಸಮೃದ್ಧಿಯನ್ನೂ ನೋಡಿ ಅಲ್ಲಿಯೇ ಸ್ಥಿರವಾಗಿ ನಿಂತುಬಿಡುವರು. ಇಲ್ಲಿ ದೇವಾಲಯಗಳೂ, ಅರವಂಟಿಗೆಗಳೂ, ಕೆರೆಕೊಳಗಳೂ ಅಪರಿಮಿತವಾಗಿರುವುವು. ನಮ್ಮ ದೇಶದಲ್ಲಿರತಕ್ಕ ಪುರುಷರಾಗಲಿ, ಸ್ತ್ರೀಯರಾಗಲಿ ಪ್ರತಿಯೊಬ್ಬರೂ ನಿತ್ಯಸಂತೋಷವುಳ್ಳವರಾಗಿರುವರು. ಸಂಘ

ಗಳು, ಉತ್ಸವಗಳು ಮೊದಲಾದ ವಿನೋದಗಳಿಗೆ ನಮ್ಮ ದೇಶವು ನಿತ್ಯಾಶ್ರಯ ವಾಗಿರುವುದು. ಅಲ್ಲಿನ ಪ್ರದೇಶವೆಲ್ಲವೂ ಕೃಷಿಯೋಗ್ಯವಾಗಿರುವುದು. ನಮ್ಮ ದೇಶದಲ್ಲಿರತಕ್ಕ ಪಶುಸಮೃದ್ಧಿಯು ಬೇರೆಲ್ಲಿಯೂ ಇಲ್ಲವು. ಪ್ರಾಣಿಹಿಂಸೆ ಯೆಂಬುದೇ ನಮ್ಮ ದೇಶದಲ್ಲಿಲ್ಲವು. ಅತಿವೃಷ್ಟಿಯೇ ಮೊದಲಾದ ಈತಿಬಾಧೆ ಗಳೊಂದೂ ನಮ್ಮ ದೇಶದಲ್ಲಿ ಸಂಭವಿಸಲಾರವು. ಸರಯೂನದಿಯು ಅಲ್ಲಿ ಪ್ರವಹಿಸುತ್ತಿರುವುದರಿಂದ ಮಳೆಯನ್ನೇ ನಂಬಿಕೊಂಡು ಬೆಳಸಬೇಕಾದ ಸ್ಥಳವೇ ಅಲ್ಲಿ ದುರ್ಲಭವು. ಸಮಸ್ತ ಪ್ರದೇಶವೂ ನದೀಮಾತೃಕವಾಗಿಯೇ ಇರುವುದು. ಸಮಸ್ತ ವಿಷಯದಲ್ಲಿಯೂ ನಮ್ಮ ದೇಶವು ಅತಿಮನೋಹರವಾಗಿರುವುದು. ದುಷ್ಟ ಮೃಗಗಳೊಂದೂ ಅಲ್ಲಿಲ್ಲವು. ನಮ್ಮ ದೇಶದಲ್ಲಿ ಯಾವುದೊಂದು ಭಯಕ್ಕೂ ಅವಕಾಶವಿಲ್ಲ. ಅಲ್ಲಲ್ಲಿ ನವರತ್ನದ ಗಣಿಗಳೂ ನೇತ್ರಾನಂದಕವಾಗಿರುವುವು. ಅಲ್ಲಿ ಪಾಪಬುದ್ಧಿಯುಳ್ಳ ಮನುಷ್ಯರೊಬ್ಬರಾದರೂ ಇಲ್ಲವು. ನಮ್ಮ ಹಿರಿಯರು ಅದನ್ನು ಎಷ್ಟೋ ಪ್ರೇಮದಿಂದ ಕಾಪಾಡುತ್ತ ಬಂದರು. ಹೀಗೆ ಸಂಪತ್ಸಮೃದ್ಧ ವಾದ ನಮ್ಮ ಕೋಸಲದೇಶವು ಸುಖದಿಂದಿರುವುದೆ? ಕೃಷಿಗೋರಕ್ಷಣಾದಿಗಳಿಂದ ಜೀವಿಸುವ ವೈಶ್ಯಜಾತಿಯವರೆಲ್ಲರೂ ನಿನಗೆ ಅನುಕೂಲರಾಗಿ ವರ್ತಿಸುತ್ತಿರುವರೇ? ಮುಖ್ಯವಾಗಿ ದೇಶದ ಸೌಖ್ಯಕ್ಕೆ ವ್ಯಾಪಾರವೇ ಮೂಲಾಧಾರವು. ದೇಶದಲ್ಲಿ ವ್ಯಾಪಾರವನ್ನು ಹೆಚ್ಚಿಸುವುದರಿಂದ ಸಮಸ್ತ ವಿಧದಲ್ಲಿಯೂ ಕ್ಷೇಮವುಂಟು. ನೀನು ಆ ವರ್ತಕರ ಕೋರಿಕೆಗಳನ್ನು ಈಡೇರಿಸಿ ಅವರ ಕೇಡುಗಳನ್ನು ಬಿಡಿಸಿ ಚೆನ್ನಾಗಿ ಪೋಷಿಸುತ್ತಿರುವೆಯಾ? ರಾಜನಾದವನು ತನ್ನ ದೇಶದಲ್ಲಿರುವ ಸಮಸ್ತ ಪ್ರಜೆಗಳನ್ನೂ ನಿಷ್ಪಕ್ಷಪಾತವಾಗಿ ಒಂದೇ ವಿಧದಲ್ಲಿ ಧರ್ಮದಿಂದ ಪೋಷಿಸಬೇಕು. ಅದರಲ್ಲಿಯೂ ವರ್ತಕರನ್ನು ವಿಶೇಷವಾಗಿ ಆದರಿಸಿ ರಕ್ಷಿಸ ಬೇಕು. ವತ್ಸನೆ! [1] ನಿನ್ನ ಅಂತಃಪುರ ಸ್ತ್ರೀಯರನ್ನು ಆದರಿಸಿ ಅವರಿಗೆ ಅನುಕೂಲವಾಗಿ ವರ್ತಿಸುತ್ತಿರುವೆಯಾ? ಅವರಿಗೆ ದುಸ್ಸಹವಾಸಗಳೊಂದೂ

---

[1] ಇದರಿಂದ ರಾಜನು ಯಾವಾಗಲೂ ತನ್ನ ಅಂತಃಪುರಸ್ತ್ರೀಯರನ್ನು ಅನಾದರಿಸದೆ ಲಾಲಿಸಿ ಪ್ರೋತ್ಸಾಹಿಸುತ್ತಿರಬೇಕೆಂದೂ, ಅವರಿಗೆ ಪರಪುರುಷಸಂಭಾಷಣಾದಿಗಳಿಗೆ ಅವಕಾಶ ವಿಲ್ಲದಂತೆ ಎಚ್ಚರಿಕೆಯಿಂದ ನೋಡಿಕೊಳ್ಳುತ್ತಿರಬೇಕೆಂದೂ, ಸ್ತ್ರೀಯರ ಮಾತನ್ನು ನಂಬುವು ದಾಗಲಿ, ಅವರಿಗೆ ರಾಜರಹಸ್ಯಗಳನ್ನು ಹೇಳುವುದಾಗಲಿ, ಯಾವಾಗಲೂ ಅಪಾಯಕರ ವೆಂಬೂ ಸೂಚಿತವಾಗುವುದು.

ಸಂಭವಿಸದಂತೆ ಎಚ್ಚರಿಕೆಯಿಂದ ನೋಡಿಕೊಳ್ಳುತ್ತಿರುವೆಯಾ? ಅವರ ಮಾತನ್ನು ಯಾವಾಗಲೂ ನಿಜವೆಂದು ನಂಬಬಾರದೆಂಬುದನ್ನು ತಿಳಿದಿರುವೆಯಾ! ಯಾವ ರಹಸ್ಯವನ್ನೂ ಅವರಲ್ಲಿ ಹೊರಪಡಿಸುವುದಿಲ್ಲವಷ್ಟೆ? ನಿನ್ನ ದೇಶದಲ್ಲಿರುವ ಆನೆಗಳ ಕಾಡನ್ನು ಚೆನ್ನಾಗಿ ಕಾಪಾಡುತ್ತಿರುವೆಯಷ್ಟೇ? ಕಾಡಾನೆಗಳನ್ನು ಸಾಧು ಮಾಡಿಡುವುದಕ್ಕೆ ಬೇಕಾದಷ್ಟು ಹೆಣ್ಣಾನೆಗಳನ್ನು ಸಾಕಿಟ್ಟಿರುವೆಯಷ್ಟೆ? ಮತ್ತು [1] ಹೆಣ್ಣಾನೆಗಳನ್ನೂ, ಕುದುರೆಗಳನ್ನೂ ಸಂಗ್ರಹಿಸಿಡುವುದರಲ್ಲಿ ಯಾವಾಗಲೂ ನೀನು ತೃಪ್ತಿಹೊಂದದಿರುವೆಯಷ್ಟೆ? ನೀನು [2] ನಿತ್ಯವೂ ಪ್ರಾತಃಕಾಲದಲ್ಲಿ ಎದ್ದು, ಚೆನ್ನಾಗಿ ಅಲಂಕರಿಸಿಕೊಂಡು ಸಭಾಸ್ಥಾನವನ್ನು ಪ್ರವೇಶಿಸಿ, ಪ್ರಜೆಗಳಿಗೆ ದರ್ಶನವನ್ನು ಕೊಡುತ್ತಿರುವೆಯಷ್ಟೇ? [3] ನಿನ್ನ ಸೇವಕರು ನಿರ್ಭಯವಾಗಿ ನಿನ್ನೆದಿರಿಗೆ ನಿಂತು ಮಾತಾಡುವಷ್ಟು ಸ್ವಾತಂತ್ರ್ಯವನ್ನು ವಹಿಸಿಲ್ಲವಷ್ಟೆ? ಅಥವಾ ಆ ಸೇವಕರಿಗೆ ನೀನು ಸ್ವಲ್ಪವಾದರೂ ಮುಖಕೊಟ್ಟು ಮಾತಾಡದೆ, ಹಿಂತಿರುಗಿಸುವುದಿಲ್ಲವಷ್ಟೆ? ಹೀಗೆ ಅವರಲ್ಲಿ ವಿಶೇಷವಾದ ಹೆಮ್ಮೆಯನ್ನಾಗಲಿ,

---

1 ಇದರಿಂದ ರಾಜನು ಯಾವಾಗಲೂ, ಗಜತುರಗಾದಿಗಳನ್ನು ಸಂಗ್ರಹಿಸುತ್ತಲೇ ಇರ ಬೇಕೆಂದೂ, ಆ ವಿಷಯದಲ್ಲಿ ಎಷ್ಟಿದ್ದರೂ ತೃಪ್ತಿಹೊಂದಬಾರದೆಂದೂ, ತಾನು ತೃಪ್ತನಾಗಿ ಬಿಟ್ಟುಬಿಟ್ಟವುಗಳನ್ನು ಶತ್ರುಗಳು ಸಂಗ್ರಹಿಸುವರಾದುದರಿಂದ ಅವರ ಬಲವನ್ನು ಹೆಚ್ಚಿಸಿ ದಂತಾಗುವುದೆಂದೂ ಸೂಚಿತವು.

2 ಇದರಿಂದ ರಾಜನು ಪ್ರತಿದಿನವೂ ಬೆಳಗಾದ ಕೂಡಲೆ ಎದ್ದು ಪ್ರಜೆಗಳಿಗೆ ದರ್ಶನ ವನ್ನು ಕೊಡಬೇಕೆಂದೂ, ಹಾಗಿಲ್ಲದಿದ್ದರೆ ಅವರಿಗೆ ತನ್ನ ದೇಹಾರೋಗ್ಯ ವಿಷಯದಲ್ಲಿ ಸಂದೇಹವುಂಟಾಗಿ ಭಯಪಡುವರೆಂದೂ ಸೂಚಿತವು.

3 ಇದರಿಂದ ರಾಜನು ತನ್ನ ಸೇವಕರಲ್ಲಿ ವಿಶೇಷವಾಗಿ ಸಲಿಗೆಯನ್ನೂ ತೋರಿಸಬಾರದು, ಅವರನ್ನು ಬಹಳ ಉದಾಸೀನವಾಗಿ ಕಂಡು ಕ್ರೌರ್ಯವನ್ನೂ ತೋರಿಸಬಾರದು. ಅವರಲ್ಲಿ ಬಹಳ ಸಲಿಗೆಯನ್ನು ತೋರಿಸಿದರೆ ಅವರಿಗೆ ತನ್ನಲ್ಲಿ ಅನಾದರವುಂಟಾಗಿ ಭಯವು ತಪ್ಪಿ ಹೋಗುವುದು. ಅವರಲ್ಲಿ ಕೇವಲ ಔದಾಸೀನ್ಯವನ್ನೂ ಕ್ರೌರ್ಯವನ್ನೂ ತೋರಿಸುತ್ತಿದ್ದರೆ, ಅವರಿಗೆ ತನ್ನಲ್ಲಿ ಪ್ರೀತಿಯು ತಪ್ಪುವುದು. ಅವರು ತಮ್ಮ ತಮ್ಮ ಕಷ್ಟನಿಷ್ಠುರ್ಯಾದಿಗಳನ್ನು ಅರಿಕೆಮಾಡಿಕೊಳ್ಳುವುದಕ್ಕೂ ಅವಕಾಶವಿಲ್ಲದೆ ಹೋಗುವುದರಿಂದ ಕುಪಿತರಾಗಿ ರಾಜ ಕಾರ್ಯಕ್ಕೆ ಹಾನಿಯನ್ನು ತರುವರು. ಆದುದರಿಂದ ಅವರಲ್ಲಿ ಬಹಳ ಸಲಿಗೆಯನ್ನಾಗಲಿ, ಬಹಳ ಹೆಮ್ಮೆಯನ್ನಾಗಲಿ ತೋರಿಸದೆ ಮಧ್ಯರೀತಿಯಿಂದ ವರ್ತಿಸಬೇಕು" ಎಂಬೀ ನೀತಿಯು ಬೋಧಿತವಾಗುವುದು.

ಬಹಳ ಸಲಿಗೆಯನ್ನಾಗಲಿ ತೋರಿಸದೆ, ಮಧ್ಯಮರೀತಿಯಲ್ಲಿ ವರ್ತಿಸುತ್ತಿರುವೆಯಷ್ಟೆ? ಹೀಗಿರುವುದೇ ಕಾರ್ಯಸಿದ್ಧಿಗೆ ಕಾರಣವೆಂಬುದನ್ನು ಚೆನ್ನಾಗಿ ಬಲ್ಲೆಯಷ್ಟೆ? [1] ದುರ್ಗಗಳೆಲ್ಲವೂ ಧನಧಾನ್ಯಗಳಿಂದಲೂ, ಜಲಸಮೃದ್ಧಿಯಿಂದಲೂ, ಯಂತ್ರಗಳಿಂದಲೂ, ನಾನಾ ವಿಧವಾದ ಆಯುಧಗಳಿಂದಲೂ ತುಂಬಿ, ಅಲ್ಲಲ್ಲಿ ಶಿಲ್ಪಿಗಳೂ, ಧನುರ್ಧಾರಿಗಳೂ ನಿಯಮಿಸಲ್ಪಟ್ಟಿರುವರಷ್ಟೆ? [2] ನಿನಗೆ ಬರತಕ್ಕ ಆದಾಯವು ಹೆಚ್ಚಾಗಿಯೂ, ನೀನು ಮಾಡತಕ್ಕ ವ್ಯಯವು ಮಿತವಾಗಿಯೂ ಇರುವುದಷ್ಟೆ? ನಿನ್ನ ಬಂಡಾರದ ಹಣವು ಯಾವಾಗಲೂ ಅಪಾತ್ರದಲ್ಲಿ ವಿನಿಯೋಗವಾಗದೆ ಸತ್ಪಾತ್ರಗಳಲ್ಲಿಯೇ ಉಪಯೋಗಿಸಲ್ಪಡುತ್ತಿರುವುದಷ್ಟೆ? ನಿನ್ನ ವೆಚ್ಚವೆಲ್ಲವೂ ದೇವತೆಗಳಿಗಾಗಿಯೂ, ಪಿತೃಗಳಿಗಾಗಿಯೂ, ಅತಿಥಿಗಳಿಗಾಗಿಯೂ ವಿಶೇಷವಾಗಿ ಉಪಯೋಗಿಸಲ್ಪಡುತ್ತಿರುವುದಷ್ಟೆ? [3] ಪರಿಶುದ್ಧವಾದ

---

[1] ಇದರಿಂದ ರಾಜನು ಜಲಪರ್ವತಾದಿ ದುರ್ಗಗಳೆಲ್ಲವೂ ಯಾವಾಗಲೂ ಧನಧಾನ್ಯ ಜಲಸಮೃದ್ಧವಾಗಿರುವಂತೆಯೂ, ಯಂತ್ರಗಳಿಂದಲೂ, ಆಯುಧಗಳಿಂದಲೂ ಪೂರ್ಣವಾಗಿರುವಂತೆಯೂ ನೋಡಿಕೊಳ್ಳಬೇಕು. ಅಲ್ಲಿ ವಿಶೇಷವಾಗಿ ಶಿಲ್ಪಿಗಳೂ, ಧನುರ್ಧಾರಿಗಳೂ ಸಿದ್ಧರಾಗಿರಬೇಕು ಎಂಬ ನೀತಿಯು ಬೋಧಿತವಾಗುವುದು.

[2] ಇದರಿಂದ ರಾಜನ ರಾಜ್ಯದಲ್ಲಿ ಆದಾಯವು ಹೆಚ್ಚಾಗಿಯೂ, ವ್ಯಯವು ಮಿತವಾಗಿಯೂ ಇರುವಂತೆ ಆದಾಯವ್ಯಯಗಳನ್ನು ನೋಡಿಕೊಳ್ಳಬೇಕೆಂದೂ, ಬಂಡಾರದ ಹಣವನ್ನು ನಟವಿಟಗಾಯಕಾದಿಗಳಿಗೇ ಹೆಚ್ಚಾಗಿ ವಿನಿಯೋಗಿಸಬಾರದೆಂದೂ, ದೇವತೆಗಳಿಗಾಗಿಯೂ, ಪಿತೃಗಳಿಗಾಗಿಯೂ ಯೋಗ್ಯರಾದ ಬ್ರಾಹ್ಮಣರಿಗಾಗಿಯೂ ವ್ಯಯಮಾಡುವುದರಲ್ಲಿ ಮಾತ್ರ ಕೂಡಿದಮಟ್ಟಿಗೆ ಔದಾರ್ಯವನ್ನೇ ತೋರಿಸುತ್ತ, ಉಳಿದ ವಿಷಯಗಳಲ್ಲಿ ಮಿತವ್ಯಯವನ್ನು ಮಾಡಬೇಕೆಂದೂ ಸೂಚಿತವು.

[3] ಈ ಮುಂದಿನ ವಾಕ್ಯಗಳಿಂದ ರಾಜ್ಯಾಧಿಕಾರಿಯು ಅಪರಾಧಿಗಳನ್ನು ದಂಡಿಸುವುದರಲ್ಲಿ ಅನುಸರಿಸಬೇಕಾದ ಕೆಲವು ನೀತಿಗಳು ವ್ಯಕ್ತವಾಗುವುವು. ಹೇಗೆಂದರೆ :— "ಪೂಜ್ಯನಾದ ಒಬ್ಬ ಪುರುಷನ ಮೇಲೆ ದೈವಿಕವಾಗಿ ಯಾವುದಾದರೂ ಒಂದು ಅಪರಾಧವು ಹೊರಿಸಲ್ಪಟ್ಟಾಗ ರಾಜನು ಬಹುಜಾಗರೂಕತೆಯಿಂದ ಅದರ ಪೂರ್ವೋತ್ತರಗಳನ್ನು ವಿಚಾರಿಸಿ, ತನ್ನ ಮನಸ್ಸಿಗೆ ಸಂಪೂರ್ಣವಾದ ನಿಜಸ್ಥಿತಿಯು ಕಂಡುಬಂದ ಹೊರತು ದಂಡನೆಯನ್ನು ವಿಧಿಸಬಾರದು. ಅಪರಾಧಿಯೆಂದು ನಿಜವಾಗಿ ಕಂಡುಬಂದಾಗ ಆತನನ್ನು ದಂಡಿಸದಿರುವುದೂ ಮಹಾದೋಷವು. ಒಬ್ಬ ಬಡವನಿಗೂ, ಮತ್ತೊಬ್ಬ ಹಣಗಾರನಿಗೂ ಪರಸ್ಪರ ವಿವಾದವು ಬಂದಾಗ, ನ್ಯಾಯಾಧಿಕಾರಿಗಳು ಲಂಚದಾಸೆಗಾಗಿ ಹಣಗಾರನಲ್ಲಿ ಪಕ್ಷಪಾತವನ್ನಿಟ್ಟು ನ್ಯಾಯವಿರುದ್ಧವಾಗಿ ವ್ಯವಹಾರಗಳನ್ನು ತೀರ್ಮಾನಿಸಿದರೆ, ಅದರಿಂದ ರಾಜನಿಗೆ ಮಹಾದೋಷ

ಮನಸ್ಸುಳ್ಳವನಾಗಿಯೂ, ಪೂಜ್ಯನಾಗಿಯೂ ಇರುವ ಪುರುಷನೊಬ್ಬನು ದೈವಿಕವಾಗಿ ಕಳವಿನ ತಪ್ಪಿಗೆ ಗುರಿಯಾಗಿ ನಿನ್ನ ಮುಂದೆ ನಿಲ್ಲಿಸಲ್ಪಟ್ಟರೆ, ಆತನನ್ನು ನೀನು ಶಿಕ್ಷಿಸುವ ಕಾಲದಲ್ಲಿ ನೀತಿಶಾಸ್ತ್ರಜ್ಞರಾದವರೊಡನೆ ಚೆನ್ನಾಗಿ ಪರ್ಯಾಲೋಚಿಸದೆ ಲೋಭಬುದ್ಧಿಯಿಂದಲೇ ಆತನನ್ನು ಕೊಲ್ಲಬಾರದೆಂಬುದನ್ನು ಬಲ್ಲೆಯಷ್ಟೆ? ಕಳವು ಮಾಡಿದವನು ಒಂದುವೇಳೆ ತಲೆತಪ್ಪಿಸಿಕೊಂಡು ಹೋಗಿ, ಕಾಲಾಂತರದಲ್ಲಿ ಆತನು ತಾನು ಕದ್ದ ವಸ್ತುವಿನೊಡನೆ ಕೈಗೆ ಸಿಕ್ಕಿದಾಗ, ಆತನನ್ನು ನೀತಿಶಾಸ್ತ್ರಜ್ಞರಾದ ಪಂಡಿತರ ಮೂಲಕವಾಗಿ ಚೆನ್ನಾಗಿ ಪರೀಕ್ಷೆ ಮಾಡಿಸಿ ಆತನ ಕಾರ್ಯವು ಚೆನ್ನಾಗಿ ವ್ಯಕ್ತವಾದ ಮೇಲೆಯೂ, ಲಂಚ ದಾಸೆಗಾಗಿ ಆತನನ್ನು ಶಿಕ್ಷಿಸದೆ ಬಿಡದಿರುವೆಯಷ್ಟೆ? ಎಲೆ ವತ್ಸನೆ! ವಿಶೇಷ ವಿದ್ಯಾವಂತರಾದ ನಿನ್ನ ಮಂತ್ರಿಗಳು ಧನಿಕನಿಗೂ, ದರಿದ್ರನಿಗೂ ಒಂದು ವಿವಾದವು ಬಂದೊದಗಿದಾಗ, ಅವರ ವ್ಯವಹಾರವನ್ನು ತೀರಿಸುವ ವಿಷಯದಲ್ಲಿ ಸ್ವಲ್ಪವೂ ಹಣದಾಸೆಯನ್ನಿಡದೆ, ನಿಷ್ಪಕ್ಷಪಾತವಾಗಿ ಪರೀಕ್ಷಿಸಿ, ನ್ಯಾಯ ರೀತಿಯಿಂದ ಆ ವಿವಾದಗಳನ್ನು ತೀರಿಸುತ್ತಿರುವರೆ? ಒಬ್ಬರಲ್ಲಿ ಇಲ್ಲದ ದೋಷವು ಹೊರಿಸಲ್ಪಟ್ಟಾಗ, ಅವರ ವಿಷಯವಾಗಿ ನ್ಯಾಯಾನ್ಯಾಯ ವಿಚಾರವನ್ನೇ ಮಾಡದೆ, ಕೇವಲ ಭೋಗಾರ್ಥವಾಗಿಯೇ ರಾಜ್ಯಾಧಿಕಾರವನ್ನು ನಡೆಸುವುದಾಗಿ ತಿಳಿದುಕೊಂಡು ಉದಾಸೀನನಾಗಿರಬಾರದು. ಹಾಗೆ ರಾಜನ ಅನ್ಯಾಯ ಪ್ರವರ್ತನೆಯಿಂದ ಕಷ್ಟಕ್ಕೆ ಸಿಕ್ಕಿಬಿದ್ದ ವಾದಿಗಳು, ಸಂಕಟದಿಂದ ಕಣ್ಣೀರನ್ನು ಬಿಟ್ಟರೆ, ಆ ಬಾಷ್ಪಬಿಂದುಗಳು ರಾಜನ ಸಂತಾನವನ್ನೂ, ಆತನ ಪಶು ಸಮೃದ್ಧಿಯನ್ನೂ ಸಂಪೂರ್ಣವಾಗಿ ಕೆಡಿಸಿಬಿಡುವುದೆಂಬುದನ್ನು ಬಲ್ಲೆಯಾ? ಎಲೈ ರಘುವಂಶೋತ್ತಮನೆ! [1] ವೃದ್ಧರನ್ನೂ, ಬಾಲಕರನ್ನೂ, ಪಂಡಿತರನ್ನೂ

ವುಂಟಾಗುವುದು. ಈ ಅಕೃತ್ಯಗಳಿಗೆ ಅವಕಾಶವಿಲ್ಲದಂತೆ ಗಮನಿಸುವುದು ರಾಜನ ಕರ್ತವ್ಯವು. ಶಿಕ್ಷಾರ್ಹರಲ್ಲದವರನ್ನು ಶಿಕ್ಷಿಸಿದರೆ ರಾಜನ ವಂಶವೂ, ರಾಜನ ಸಂಪತ್ತುಗಳೂ ನಶಿಸುವುವು." ಎಂಬಿವೇ ಮೊದಲಾದ ನೀತಿಗಳು ಇದರಿಂದ ವ್ಯಕ್ತವಾಗುವುವು.

[1] ಇದರಿಂದ "ರಾಜನು ವೃದ್ಧರನ್ನೂ, ಬಾಲರನ್ನೂ, ಪಂಡಿತರನ್ನೂ ಆಗಾಗ ದಾನಾದಿ ಗಳಿಂದ ಸತ್ಕರಿಸಿ ವಶಪಡಿಸಿಕೊಳ್ಳಬೇಕು. ಮತ್ತು ಗುರುಜನರನ್ನೂ, ವೃದ್ಧರನ್ನೂ, ತಪಸ್ವಿಗಳನ್ನೂ, ದೇವತೆಗಳನ್ನೂ, ಅತಿಥಿಗಳನ್ನೂ, ಚತುಷ್ಪಥವೃಕ್ಷಗಳನ್ನೂ, ಬ್ರಾಹ್ಮ ಣೋತ್ತಮರನ್ನೂ ಕಂಡಾಗ ನಮಸ್ಕರಿಸದೆ ಹೋಗಬಾರದು" ಎಂಬೀ ನೀತಿಯು ಬೋಧಿತ ವಾಗುವುದು.

ದಾನದಿಂದಲೂ, ಸ್ನೇಹಭಾವದಿಂದಲೂ, ಮಾತಿನಿಂದಲೂ ಚೆನ್ನಾಗಿ ಆದರಿಸಿ, ಮನ್ನಿಸುತ್ತಿರುವೆಯಷ್ಟೆ? ಗುರುಗಳಿಗೂ, ವೃದ್ಧರಿಗೂ, ತಾಪಸರಿಗೂ, ದೇವತೆಗಳಿಗೂ, ಅತಿಥಿಗಳಿಗೂ, ಚತುಷ್ಪಥಗಳಲ್ಲಿ ದೇವತೆಗಳಿಗೆ ವಾಸಯೋಗ್ಯವಾದ ಮಹಾವೃಕ್ಷಗಳಿಗೂ, ಯಾಗಾದಿಕಾರ್ಯಗಳಿಂದ ಕೃತಕೃತ್ಯರಾಗಿರುವ ಬ್ರಾಹ್ಮಣರಿಗೂ ಅಲ್ಲಲ್ಲಿ ಕಂಡಾಗ ನಮಸ್ಕರಿಸುತ್ತಿರುವೆಯಷ್ಟೆ? [1] ಅರ್ಥಾರ್ಜನೆಯಲ್ಲಿಯೇ ಆಸಕ್ತನಾಗಿ ಧರ್ಮವನ್ನು ಬಿಡದಿರುವೆಯಷ್ಟೆ? ಅಥವಾ ಧರ್ಮವೊಂದನ್ನೇ ಸಂಪಾದಿಸಬೇಕೆಂದು ಅರ್ಥವನ್ನು ಬಿಡುವುದಿಲ್ಲವಷ್ಟೇ? ಸುಖಾಭಿಲಾಷೆಯಿಂದಾಗಲಿ, ಕಾಮವಶದಿಂದಲಾಗಲಿ, ಧರ್ಮಾರ್ಥಗಳೆರಡನ್ನೂ ಬಿಡದಿರುವೆಯಷ್ಟೆ! ಎಲೈ ಜಯಶೀಲನೆ! ನೀನು ಆಯಾ ಕಾಲಗತಿಗಳನ್ನು ಚೆನ್ನಾಗಿ ತಿಳಿದವನೆಂಬುದರಲ್ಲಿ ಸಂದೇಹವಿಲ್ಲ. ಈ ಧರ್ಮಾರ್ಥಕಾಮಗಳು ಮೂರನ್ನೂ ಬೇರ್ಪಡಿಸಿಕೊಂಡು, ಅವುಗಳನ್ನು ಉಚಿತಕಾಲಗಳಲ್ಲಿ ಸೇವಿಸುತ್ತಿರುವೆಯಷ್ಟೆ? ಸಕಲ ಶಾಸ್ತ್ರಜ್ಞರಾದ ಬ್ರಾಹ್ಮಣರೂ, ಪುರಜನರೂ, ದೇಶಜನರೂ ಯಾವಾಗಲೂ ನಿನ್ನ ಶ್ರೇಯಸ್ಸನ್ನೇ ಕೋರುತ್ತಿರುವರಷ್ಟೆ? ಎಲೈ ಪ್ರಾಜ್ಞನೆ! ಲೋಕದಲ್ಲಿ ನಾಸ್ತಿಕ್ಯ, ಸುಳ್ಳು, ಕೋಪ, ಅಜಾಗರೂಕತೆ, ಸೋಮಾರಿತನ, ಜ್ಞಾನಿಗಳಲ್ಲಿ ಅನಾದರಣೆ, ಇಂದ್ರಿಯಗಳಿಗೆ ವಶನಾಗಿರುವಿಕೆ, ಮಂತ್ರಿಗಳನ್ನು ಅನಾದರಿಸಿ ತಾನೊಬ್ಬನೇ ರಾಜಕಾರ್ಯಗಳನ್ನು ಆಲೋಚಿಸುವಿಕೆ, ಯುಕ್ತಾಯುಕ್ತ ವಿವೇಚನೆಯಿಲ್ಲದವರೊಡನೆಯೂ, ಅನುಭವವಿಲ್ಲದವರೊಡನೆಯೂ ಕಾರ್ಯಾಲೋಚನೆ. ನಿಶ್ಚಯಿಸಿದ ಕಾರ್ಯಗಳನ್ನು ಆರಂಭಿಸದಿರುವಿಕೆ, ಆಲೋಚಿಸಿ ಮನಸ್ಸಿನಲ್ಲಿಟ್ಟುಕೊಂಡಿರತಕ್ಕ ರಹಸ್ಯಗಳನ್ನು ಹೊರಗೆ ಬಿಡುವುದು, ಪ್ರಾತಃಕಾಲದಲ್ಲಿ ಎದ್ದಕೂಡಲೆ ತನ್ನ ಶ್ರೇಯಸ್ಸಿಗಾಗಿ ಮಾಡಬೇಕಾದ ದರ್ಪಣ

[1] ಈ ಮುಂದಿನ ವಾಕ್ಯಗಳಿಂದ ರಾಜನಿಗೆ ಧರ್ಮಾರ್ಥಕಾಮಗಳೆಂಬ ತ್ರಿವರ್ಗಗಳಲ್ಲಿರಬೇಕಾದ ಪ್ರವರ್ತನೆಯ ರೀತಿಯು ಬೋಧಿಸಲ್ಪಡುವುದು. ರಾಜನು ಕಾಮದಲ್ಲಿಯೇ ವಿಶೇಷಾಸಕ್ತಿಯಿಂದ, ಧರ್ಮಕ್ಕೂ ಅರ್ಥಕ್ಕೂ ಹಾನಿಯನ್ನು ತರಬಾರದು. ಹಾಗೆಯೇ ಧರ್ಮೈಕನಿರತನಾಗಿ ಕಾಮಾರ್ಥಗಳನ್ನು ಬಿಡಬಾರದು. ಅರ್ಥಪರಾಯಣನಾಗಿ ಧರ್ಮಕಾಮಗಳಿಗೂ ಲೋಪವನ್ನುಂಟುಮಾಡಬಾರದು. ಈ ಮೂರನ್ನೂ ಯಥೋಚಿತವಾಗಿ ಸಂಗ್ರಹಿಸುತ್ತಿರಬೇಕು. ಧರ್ಮಾರ್ಜನೆಗಾಗಿ ಪೂರ್ವಾಹ್ಣವನ್ನೂ, ಅರ್ಥಾರ್ಜನೆಗಾಗಿ ಅಪರಾಹ್ಣವನ್ನೂ ಕಾಮಾರ್ಜನೆಗಾಗಿ ಸಾಯಾಹ್ನವನ್ನೂ ವಿಭಾಗಿಸಿಕೊಂಡು ಆಯಾ ಕಾಲ ಪರಿಮಾಣದಲ್ಲಿಯೇ ಅವುಗಳನ್ನು ಸೇವಿಸುತ್ತಿರಬೇಕೆಂದು ಸೂಚಿತವು.

ದರ್ಶನವೇ ಮೊದಲಾದ ಮಂಗಳಕಾರ್ಯವನ್ನು ನಡೆಸದಿರುವಿಕೆ, (ಗೌರವಾಗೌರವಗಳನ್ನೆಣಿಸದೆ ಇದಿರಿಗೆ ಬಂದವರೆಲ್ಲರನ್ನೂ ಪ್ರತ್ಯುತ್ಥಾನದಿಂದ ಗೌರವಿಸುವಿಕೆ) ಒಂದೇ ಕಾಲದಲ್ಲಿ ನಾಲ್ಕುಕಡೆಗಳಿಗೂ ದಂಡೆತ್ತಿ ಹೋಗಿ ಸಮಸ್ತ ಶತ್ರುಗಳೊಡನೆಯೂ ಯುದ್ಧವನ್ನಾರಂಭಿಸುವಿಕೆ, ಈ ಹದಿನಾಲ್ಕು ರಾಜದೋಷಗಳನ್ನೂ ನೀನು ಚೆನ್ನಾಗಿ ತಿಳಿದು ಅವುಗಳನ್ನು ಸಂಪೂರ್ಣವಾಗಿ ಬಿಟ್ಟಿರುವೆಯಷ್ಟೆ? * ಮತ್ತು ನೀನು, [1] ದಶವರ್ಗಗಳನ್ನೂ, [2] ಪಂಚವರ್ಗ

---

* ಇದಕ್ಕೆ "ದಶಪಂಚ ಚತುರ್ವರ್ಗಾನ್. ಸಪ್ತವರ್ಗಂ ಚ ತತ್ತ್ವತಃ | ಅಷ್ಟವರ್ಗಂ ತ್ರಿವರ್ಗಂ ಚ ವಿದ್ಯಾಸ್ತಿಸ್ರಶ್ಚ ರಾಘವ ‖ ಇಂದ್ರಿಯಾಣಾಂ ಜಯಂ ಬುದ್ಧ್ವಾ ಷಾಡ್ಗುಣ್ಯಂ ದೈವಮಾನುಷಂ | ಕೃತ್ಯಂ ವಿಂಶತಿವರ್ಗಂ ಚ ತಥಾ ಪ್ರಕೃತಿ ಮಂಡಲಂ | ಯಾತ್ರಾದಂಡ ವಿಧಾನಂ ಚ ದ್ವಿಯೋನೀ ಸಂಧಿವಿಗ್ರಹೌ | ಕಚ್ಚಿದೇತಾನ್ ಮಹಾಪ್ರಾಜ್ಞ ಯಥಾವದನು ಮನ್ಯಸೇ" ಎಂದು ಮೂಲವು. ಇಲ್ಲಿ ವರ್ಗಗಳೆಂದರೆ ಸಮೂಹಗಳೆಂದು ಹೆಸರು. ಇವುಗಳಲ್ಲಿ ಕೆಲವು ತ್ಯಾಜ್ಯಗಳಾಗಿಯೂ, ಕೆಲವು ಪರಿಗ್ರಾಹ್ಯಗಳಾಗಿಯೂ ಇರುವುವು. ಹೇಗೆಂದರೆ:—

1 ದಶವರ್ಗಗಳು:—"ಮೃಗಯಾಕ್ಷೋ ದಿವಾಸ್ವಾಪಃ ಪರಿವಾದಸ್ತ್ರಿಯೋ ಮದಃ | ತೌರ್ಯತ್ರಿಕಂ ವೃಥಾಟ್ಯಾ ಚ ಕಾಮಜೋ ದಶಕೋ ಗಣಃ | ಎಂದರೆ, ಬೇಟೆ, ಜೂಜು ಹಗಲು ನಿದ್ರೆಮಾಡುವುದು, ಪರನಿಂದೆ, ಸ್ತ್ರೀಮೋಹವು, ಮದವು, ನೃತ್ಯವು, ಗೀತವು, ವಾದ್ಯವು, ವ್ಯರ್ಥವಾಗಿ ತಿರುಗುತ್ತಿರುವುದು, ಎಂಬಿವು ಹತ್ತೂ ಕಾಮದಿಂದ ಹುಟ್ಟತಕ್ಕ ಗುಣಗಳು. ಇವೆಲ್ಲವೂ ತದೇಕವ್ಯಸನವನ್ನುಂಟುಮಾಡುವುದರಿಂದ ರಾಜನಿಗೆ ತ್ಯಾಜ್ಯಗಳು. ಅಥವಾ ಕಾಮಂದಕನೀತಿಯಲ್ಲಿ ಹೇಳಿರುವಂತೆ ಈ ದಶವರ್ಗಗಳು ಪ್ರಕಾರಾಂತರವಾಗಿಯೂ ಹೇಳಲ್ಪಟ್ಟಿರುವುವು. ಅವು ಯಾವುವೆಂದರೆ:—"ಲುಬ್ಧಃ ಕ್ರೂರೋಽಲಸೋಽಸತ್ಯಃ ಪ್ರಮಾದೀಭೀರಸ್ಥಿರಃ ! ಮೂಢೋಽಯೋವಮಂತಾಚ ಸುಖಚ್ಛೇದೋ ರಿಪುರ್ಮತಃ |" ಎಂಬಂತೆ ಲೋಭವೂ, ಕೋಪವೂ, ಸೋಮಾರಿತನವೂ, ಅಸತ್ಯವೂ, ಅಜಾಗರೂಕತೆಯೂ, ಅಂಜಿಕೆಯೂ, ಚಂಚಲಮನಸ್ಸೂ, ಮೌಢ್ಯವೂ, ನೀತಿಯಿಲ್ಲದಿರುವಿಕೆಯೂ, ಪರರನ್ನು ಅವಮಾನಪಡಿಸುವುದೂ ಈ ಹತ್ತು ದುರ್ಗುಣಗಳೂ ದಶವರ್ಗವೆನಿಸುವುವು.

2 ಪಂಚವರ್ಗಗಳು:—ಐದು ವಿಧವಾದ ದುರ್ಗುಣಗಳು ಪಂಚವರ್ಗವೆನಿಸುವುವು. "ಔದಕಂ ಪಾರ್ವತಂ ವಾರ್ಕ್ಷಮೈರಿಣಂ ಧಾನ್ವನಂ ತಥಾ | ಶಸ್ತಂ ಪ್ರಶಸ್ತಮತಿಭಿಃ ದುರ್ಗಂ ದುರ್ಗೋಪಚಿಂತಕೈಃ, "ಎಂಬುದಾಗಿ ಮನುವಚನವು. ಜಲದುರ್ಗ, ಪರ್ವತದುರ್ಗ, ವೃಕ್ಷದುರ್ಗ, ವನದುರ್ಗ, ಧಾನುಷ್ಕದುರ್ಗವೆಂದು ಐದು ವಿಧವಾದ ದುರ್ಗಗಳುಂಟು. ಈ ದುರ್ಗಗಳೆಲ್ಲವನ್ನೂ ರಾಜನು ಜಾಗರೂಕತೆಯಿಂದ ಕಾಪಾಡಿಡಬೇಕೆಂದು ಭಾವವು. ಅಥವಾ

ಗಳನ್ನೂ, [1] ಚತುರ್ವರ್ಗಗಳನ್ನೂ, ರಾಜ್ಯಾಂಗಾದಿ [2] ಸಪ್ತವರ್ಗಗಳನ್ನೂ,

ಪಂಚವರ್ಗವೆಂದರೆ :—ಕಾಮಂದಕವಚನಾನುಸಾರವಾಗಿ ಪಂಚವಿಧವೈರಿಗಳೆಂದೂ ಗ್ರಹಿಸಬಹುದು. "ಸಾಪತ್ನಂ ವಸ್ತುಜಂ ಸ್ತ್ರೀಜಂ ವಾಗ್ಜಾತಮಪರಾಧಜಂ। ವೈರಪ್ರಭೇದನಿಪುಣೈಃ ವೈರಂ ಪಂಚವಿಧಂ ಸ್ಮೃತಂ ॥" ಎಂದರೆ ಸವತಿತಾಯಿಯಿಂದುಂಟಾದುದು, ದ್ರವ್ಯಮೂಲವಾದುದು, ಸ್ತ್ರೀಮೂಲವಾದುದು, ವಾಙ್ಮೂಲವಾದುದು, ತಪ್ಪಿತಗಳಿಂದುಂಟಾದುದು, ಎಂಬ ಐದು ವಿಧವಾದ ವೈರಕಾರಣಗಳುಂಟು. ರಾಜನು ಇವುಗಳನ್ನು ಎಚ್ಚರಿಕೆಯಿಂದ ನೋಡಿಕೊಳ್ಳಬೇಕು.

1 ಚತುರ್ವರ್ಗಗಳು :—ಸಾಮದಾನಭೇದದಂಡಗಳೆಂಬ ಚತುರುಪಾಯಗಳಿಗೂ ಚತುರ್ವರ್ಗಗಳೆಂದು ಹೆಸರು. ಅಥವಾ ಚತುರ್ವರ್ಗವೆಂದರೆ ಕಾಮಂದಕ ನೀತಿಯನ್ನನುಸರಿಸಿ ಚತುರ್ವಿಧ ಮಿತ್ರರೆಂದೂ ಹೇಳಬಹುದು. ಅವು ಯಾವುವೆಂದರೆ "ಔರಸಂ ತಂತು ಸಂಬಂಧಂ ತಥಾ ವಂಶಕ್ರಮಾಗತಂ। ರಕ್ಷಿತಂ ವ್ಯಸನೇಭ್ಯಶ್ಚ ಮಿತ್ರಂ ಜ್ಞೇಯಂ ಚತುರ್ವಿಧಂ" ಸ್ವಭಾರ್ಯೆಯಲ್ಲಿ ಹುಟ್ಟಿದವನು, ಬಂಧುತ್ವ ಸಂಬಂಧವುಳ್ಳವನು, ವಂಶಕ್ರಮವಾಗಿ ಬಂದವನು, ಆಪತ್ತಿನಿಂದ ರಕ್ಷಿಸಲ್ಪಟ್ಟು ಸ್ನೇಹವನ್ನು ಬೆಳಸಿದವನು. ಈ ನಾಲ್ಕು ಬಗೆಯಾದ ಮಿತ್ರರೂ ಚತುರ್ವರ್ಗವೆನಿಸುವುದುಂಟು. ಅಥವಾ "ನ್ಯಾಯೇನಾರ್ಜನಮರ್ಥಸ್ಯ ರಕ್ಷಣಂ ವರ್ಧನಂ ತಥಾ। ಸತ್ಪಾತ್ರೇ ಪ್ರತಿಪತ್ತಿಶ್ಚ ರಾಜವೃತ್ತಂ ಚತುರ್ವಿಧಂ" ಎಂಬ ಕಾಮಂದಕವಚನಾನುಸಾರವಾಗಿ ನ್ಯಾಯದಿಂದ ಧನವನ್ನು ಸಂಪಾದಿಸುವುದೂ, ಆ ಧನವನ್ನು ಕಾಪಾಡುವುದೂ, ಅದನ್ನು ವೃದ್ಧಿಹೊಂದಿಸುವುದೂ, ಅದನ್ನು ಸತ್ಪಾತ್ರದಲ್ಲಿ ವಿನಿಯೋಗಿಸುವುದೂ ಇವು ನಾಲ್ಕೂ ರಾಜನು ನಡೆಸಬೇಕಾದ ಚತುರ್ವರ್ಗವೆನಿಸುವುದು. ರಾಜನಾದವನು ಇವೆಲ್ಲವನ್ನೂ ಗಮನವಿಟ್ಟು ನೋಡಬೇಕೆಂದು ಭಾವವು.

2 ಸಪ್ತವರ್ಗಗಳು :—ಸ್ವಾಮ್ಯಮಾತ್ಯಾಶ್ಚ ರಾಷ್ಟ್ರಂ ಚ ದುರ್ಗಂ ಕೋಶೋ ಬಲಂ ಸುಹೃತ್। ಪರಸ್ಪರೋಪಕಾರೀದಂ ರಾಜ್ಯಂ ಸಪ್ತಾಂಗಮುಚ್ಯತೇ ॥" ಎಂಬಂತೆ ರಾಜನು, ಮಂತ್ರಿಗಳು, ರಾಷ್ಟ್ರವು, ದುರ್ಗವು, ಕೋಶವು, ಸೇನೆಗಳು, ಮಿತ್ರರು ಎಂಬಿವೇಳೂ ಪರಸ್ಪರೋಪಕಾರವಾಗಿ ರಾಜ್ಯಾಂಗಗಳೆನಿಸುವುವು. ಇವುಗಳನ್ನು ರಾಜನು ಎಚ್ಚರಿಕೆಯಿಂದ ಕಾಪಾಡಿಡಬೇಕು. ಅಥವಾ ಸಪ್ತವರ್ಗಗಳೆಂದರೆ ಏಳು ಬಗೆಯಾದ ಸ್ವಪಕ್ಷದವರೆಂದೂ ಹೇಳಬಹುದು. "ನಿಜೋಽಥಮೈತ್ರಶ್ಚ ಸಮಾಶ್ರಿತಶ್ಚಸು ಸುಬಂಧುಜಃ ಕಾರ್ಯಸಮುದ್ಭವಶ್ಚ। ಭೃತ್ಯೋ ಗೃಹೀತೋ ವಿವಿಧೋಪಚಾರೈಃ ಪಕ್ಷಂ ಬುಧಾಸ್ಸಪ್ತವಿಧಂ ವದಂತಿ ॥" ಎಂಬಂತೆ ತನ್ನ ಕಡೆಯವರು, ತನ್ನ ಮಿತ್ರರ ಕಡೆಯವರು, ತನ್ನ ಆಶ್ರಿತರು ತನ್ನ ನೆಂಟರ ಕಡೆಯವರು. ತನ್ನಲ್ಲಿ ಕಾರ್ಯಾರ್ಥವಾಗಿ ಬಂದವರು, ಅನೇಕ ಸತ್ಕಾರಗಳಿಂದ ವಶೀಕರಿಸಲ್ಪಟ್ಟವರು, ತನ್ನ ಭೃತ್ಯರು ಎಂಬೀ ಏಳು ಜನರೂ ಸ್ವಪಕ್ಷದವರು. ರಾಜನು ಇಂತವರನ್ನು

[1] ಅಷ್ಟವರ್ಗಗಳನ್ನೂ [2] ಧರ್ಮಾರ್ಥಕಾಮಾದಿಗಳಾದ ತ್ರಿವರ್ಗಗಳನ್ನೂ,

ಪ್ರೋತ್ಸಾಹಪಡಿಸಿ ತನಗೆ ಅನುಕೂಲರನ್ನಾಗಿ ಇಟ್ಟುಕೊಂಡಿರಬೇಕು. ಅಥವಾ ಸಪ್ತವರ್ಗವೆಂದರೆ ಏಳು ಬಗೆಯಾದ ವ್ಯೂಹಗಳೆಂದೂ ಹೇಳಬಹುದು. "ಶ್ಯೇನಸ್ಸೂಚೀ ಚ ವಜ್ರಶ್ಚ ಶಕಟೋ ಮಕರಸ್ತಥಾ। ದಂಡಾಖ್ಯಃ ಪದ್ಮನಾಮಾ ಚ ವ್ಯೂಹಾಸ್ಸಪ್ತ ಪ್ರಧಾನತಃ" ಎಂಬಂತೆ ಗಿಡುಗ, ಸೂಜಿ, ವಜ್ರ, ಬಂಡಿ, ಮೊಸಳೆ, ದಂಡ, ಪದ್ಮ, ಎಂಬ ಈ ಏಳೂ ವ್ಯೂಹಗಳಿಗೆ ಹೆಸರು. ರಾಜನು ತನ್ನ ಸೇನಾ ಸನ್ನಿವೇಶದಲ್ಲಿ ಈ ವ್ಯೂಹಗಳ ಕ್ರಮವನ್ನು ಚೆನ್ನಾಗಿ ತಿಳಿದಿರಬೇಕೆಂದು ಭಾವವು.

[1] ಅಷ್ಟವರ್ಗಗಳು :—"ಕೃಷಿರ್ವಾಣಿಜ್ಯ ದುರ್ಗಾಣಿ ಸೇತುಃ ಕುಂಜರಬಂಧನಂ। ಖನ್ಯಾಕರಃ ಕರಾದಾನಂ ಶೂನ್ಯಾನಾಂ ಚ ನಿವೇಶನಂ। ಅಷ್ಟವರ್ಗಮಹಂ ಸಾಧುಃ ಸ್ವಸ್ಥವೃತ್ತೋನಲೋಪಯೇತ್ ॥" ಎಂಬ ಕಾಮಂದಕವಚನಾನುಸಾರವಾಗಿ ಕೃಷಿ, ವಾಣಿಜ್ಯ, ದುರ್ಗ, ಸೇತುವೆ, ಆನೆಗಳ ಸಂಗ್ರಹ, ಗಣಿಗಳ ಸಂಗ್ರಹ, ಕಪ್ಪವನ್ನು ತೆಗೆಯುವುದು, ಶೂನ್ಯಪ್ರದೇಶಗಳನ್ನು ವಾಸಯೋಗ್ಯವಾಗಿ ಮಾಡುವುದು, ಎಂಬಿವೆಂಟೂ ರಾಜನು ಗಮನಿಸಿ ನೋಡಬೇಕಾದ ಅಷ್ಟವರ್ಗಗಳೆನಿಸುವುವು. ಅಥವಾ "ಪೈಶುನ್ಯಂ ಸಾಹಸಂ ದ್ರೋಹಂ ಈರ್ಷ್ಯಾಸೂಯಾರ್ಥದೂಷಣಂ। ವಾಗ್ದಂಡಯೋಶ್ಚ ಪಾರುಷ್ಯಂ ಕ್ರೋಧಜೋಪಿ ಗುಣೋಷ್ಟಕಃ ॥" ಎಂಬಂತೆ ಕಿರುಕುಳತನ, ಸಾಹಸ, ದ್ರೋಹಚಿಂತೆ, ತಾಳ್ಮೆಯಿಲ್ಲದಿರುವಿಕೆ, ಅಸೂಯೆ, ಕ್ರೂರ ವಾಕ್ಯಗಳು, ಹಣವನ್ನು ದುರ್ವಿನಿಯೋಗ ಪಡಿಸುವುದು, ಕಠಿನದಂಡನೆ, ಎಂಬಿವೆಂಟೂ ಕ್ರೋಧದಿಂದ ಹುಟ್ಟತಕ್ಕ ದುರ್ಗುಣಗಳು. ರಾಜನು ಇವುಗಳನ್ನು ತ್ಯಜಿಸಬೇಕೆಂದು ಭಾವವು.

[2] ತ್ರಿವರ್ಗಗಳು :—ಧರ್ಮಾರ್ಥಕಾಮಮೋಕ್ಷಗಳೆಂಬ ಮೂರು ಪುರುಷಾರ್ಥಗಳಿಗೆ ತ್ರಿವರ್ಗಗಳೆಂದು ಹೆಸರು, ಅಥವಾ ಪ್ರಭುಶಕ್ತಿ, ಉತ್ಸಾಹಶಕ್ತಿ, ಮಂತ್ರಶಕ್ತಿಗಳೆಂಬ ಶಕ್ತಿತ್ರಯಕ್ಕೂ ತ್ರಿವರ್ಗವೆಂದು ಹೆಸರುಂಟು. ಅಥವಾ "ಕ್ಷಯಸ್ಸ್ಥಾನಂ ಚ ವೃದ್ಧಿಶ್ಚ ತ್ರಿವರ್ಗೋ ನೀತಿವೇದಿನಾಂ" ಎಂಬಂತೆ, ಶತ್ರುಗಳ ಕ್ಷೀಣದಶೆ, ಶತ್ರುಗಳ ಸಮಸ್ಥಿತಿ, ಶತ್ರುಗಳ ಪುರೋವೃದ್ಧಿ ಎಂಬಿವು ಮೂರೂ ತ್ರಿವರ್ಗವೆನಿಸುವುದು. ರಾಜನು ಇವೆಲ್ಲವನ್ನೂ ಚೆನ್ನಾಗಿ ಗಮನಿಸಬೇಕೆಂದು ಭಾವವು. ಅಥವಾ "ವಸ್ತುಷ್ವಶಕ್ಯೇಷು ಸಮುದ್ಯಮಶ್ಚ ಶಕ್ಯೇಷು ಮೋಹಾದಸಮುದ್ಯಮಶ್ಚ। ಶಕ್ಯೇಷ್ವಕಾಲೇಷು ಸಮುದ್ಯಮಶ್ಚ ತ್ರಿಧೈವ ಕಾರ್ಯವ್ಯಸನಂ ವದಂತಿ ॥" ಎಂಬ ಕಾಮಂದಕವಚನಾನುಸಾರವಾಗಿ, ಆಗದ ಕೆಲಸಕ್ಕೆ ಪ್ರಯತ್ನಿಸುವುದು, ಸಾಧ್ಯವಾದ ಕೆಲಸಗಳನ್ನು ಅಜ್ಞಾನದಿಂದ ಮಾಡದೆ ಬಿಡುವುದು, ಕಾರ್ಯವು ಸಾಧ್ಯವೆಂದು ತೋರಿದಾಗಲೂ ಅಕಾಲದಲ್ಲಿ ಆ ಕಾರ್ಯಗಳಿಗೆ ಪ್ರಯತ್ನಿಸುವುದು. ಇವು ಮೂರೂ ಕಾರ್ಯವ್ಯಸನವೆನಿಸುವುದು. ಇವಕ್ಕೂ ತ್ರಿವರ್ಗವೆಂದು ವ್ಯವಹಾರವುಂಟು. ರಾಜನು ಇಂಥವುಗಳನ್ನು ತ್ಯಜಿಸಬೇಕೆಂದು ಭಾವವು.

[1] ಮೂರು ವಿದ್ಯೆಗಳನ್ನೂ, ಇಂದ್ರಿಯಜಯವನ್ನೂ, [2] ಷಡ್ಗುಣಗಳನ್ನೂ, [3] ದೈವಮಾನುಷಗಳೆಂಬ ವ್ಯಸನಗಳನ್ನೂ [4] ಭೇದಕೃತ್ಯ

---

1 ಮೂರು ವಿದ್ಯೆಗಳು:—"ತ್ರಯೀ ವಾರ್ತಾ ದಂಡನೀತಿರಿತಿ ವಿದ್ಯಾ ಹಿ ಮಾನವಾಃ" ಎಂಬ ಕಾಮಂದಕವಚನವನ್ನನುಸರಿಸಿ, ತ್ರಯೀ, ವಾರ್ತೆ, ದಂಡನೀತಿ ಇವು ಮೂರೂ ವಿದ್ಯಾತ್ರಯವೆನಿಸುವುವು. ತ್ರಯಿಯೆಂದರೆ ವೇದವು. ವಾರ್ತೆಯೆಂದರೆ ಕೃಷಿಗೋರಕ್ಷಣ ವಾಣಿಜ್ಯಗಳು, ದಂಡನೀತಿಯೆಂದರೆ ನೀತಿಶಾಸ್ತ್ರವು. ರಾಜನ ಪುರೋವೃದ್ಧಿಗೆ ಇವು ಮೂರೂ ಸಹಾಯಕಗಳೆಂದು ಭಾವವು. ಇಂದ್ರಿಯಜಯವೆಂದರೆ ಇಂದ್ರಿಯಗಳನ್ನು ಜಯಿಸುವ ಉಪಾಯವು.

2 ಷಾಡ್ಗುಣ್ಯಗಳು :—ಸಂಧಿ, ವಿಗ್ರಹ, ಯಾನ, ಆಸನ, ದ್ವೈಧೀಭಾವ, ಸಮಾಶ್ರಯಗಳೆಂಬ ಆರು ಗುಣಗಳಿಗೆ ಷಾಡ್ಗುಣ್ಯವೆಂದು ಹೆಸರು. ಶತ್ರುಗಳೊಡನೆ ಸಂಧಿಮಾಡಿಕೊಳ್ಳುವುದು, ಯುದ್ಧವನ್ನಾರಂಭಿಸುವುದು. ಶತ್ರುಜಯಕ್ಕಾಗಿ ಹೊರಡುವುದು, ಉಭಯಪಕ್ಷದವರೂ ಒಬ್ಬರಿಗೊಬ್ಬರು ತಡೆಯಲ್ಪಟ್ಟವರಾಗಿ ಯುಕ್ತ ಕಾಲವನ್ನು ನಿರೀಕ್ಷಿಸಿಕೊಂಡು ಸುಮ್ಮನಿರುವುದು, ಪ್ರಬಲರಾದ ಉಭಯಪಕ್ಷದವರೂ ಒಬ್ಬರಿಗೊಬ್ಬರು ತಮ್ಮ ಪ್ರತಿಪಕ್ಷದಲ್ಲಿ ಪರಸ್ಪರ ಕಲಹವನ್ನೆಬ್ಬಿಸಿ ಅವರ ಒಗ್ಗಟ್ಟನ್ನು ಮುರಿಯುವುದು, ತಮ್ಮ ಬೆಂಬಲಕ್ಕಾಗಿ ಶತ್ರುಗಳ ಇತರ ವೈರಿಗಳನ್ನು ಆಶ್ರಯಿಸುವುದು, ಎಂಬಿವಾರೂ ಷಡ್ಗುಣಗಳು. ರಾಜನು ಇವುಗಳನ್ನು ಕಾಲಾನುಸಾರವಾಗಿ ನಡೆಸಬೇಕು.

3 ದೈವಮಾನುಷವೆಂದರೆ, ದೇವತೆಗಳಿಂದಲೂ, ಮನುಷ್ಯರಿಂದಲೂ ಉಂಟಾಗತಕ್ಕ ಎರಡು ವಿಧವಾದ ವ್ಯಸನಗಳು. "ಹುತಾಶನೋ ಜಲಂ ವ್ಯಾಧಿರ್ದುರ್ಭಿಕ್ಷಂ ಮರಣಂ ತಥಾ" ಎಂಬಂತೆ, ಬೆಂಕಿ, ನೀರು, ವ್ಯಾಧಿ, ಕ್ಷಾಮ, ಮರಣ ಎಂಬಿವೈದೂ ದೈವವ್ಯಸನಗಳೆನಿಸುವುವು. ಹಾಗೆಯೇ "ಆಯುಕ್ತಕೇಭ್ಯಶ್ಚೋರೇಭ್ಯಃ ಪರೇಭ್ಯೋ ರಾಜವಲ್ಲಭಾತ್ | ಪೃಥಿವೀಪತಿಲೋಭಾಚ್ಚ ವ್ಯಸನಂ ಪಂಚಧಾ ಭವೇತ್" ಎಂಬಂತೆ ಅಧಿಕಾರಿಗಳಿಂದಲೂ, ಕಳ್ಳರಿಂದಲೂ, ಶತ್ರುಗಳಿಂದಲೂ, ಇಷ್ಟಜನದಿಂದಲೂ, ರಾಜನ ಲೌಭ್ಯದಿಂದಲೂ ರಾಷ್ಟ್ರಕ್ಕೆ ಉಂಟಾಗತಕ್ಕ ಐದು ವಿಧವಾದ ವ್ಯಸನಗಳು ಮಾನುಷ ವ್ಯಸನಗಳೆನಿಸುವುವು.

4 ಕೃತ್ಯವೆಂದರೆ ಭೇದಕಾರ್ಯವು. ಇವಾವುವೆಂದರೆ ಅಲಬ್ಧವೇತನೋ ಲುಬ್ಧೋ ಮಾನೀ ಚಾಪ್ಯವಮಾನಿತಃ | ಕ್ರುದ್ಧಶ್ಚ ಕೋಪಿತೋ ಕಸ್ಮಾತ್ತಥಾ ಭೀತಶ್ಚ ಭೀಷಿತಃ | ಯಥಾಭಿಲಷಿತೈಃ ಕಾಮೈರ್ಭಿಂದ್ಯಾದೇತಾಂಶ್ಚತುರ್ವಿಧಾಃ" ಎಂಬಂತೆ, ತನ್ನ ಶತ್ರುಗಳ ಕಡೆಯಲ್ಲಿ ಸಂಬಳವನ್ನು ಪಡೆಯದ ಲುಬ್ಧನನ್ನೂ, ಅಲ್ಲಿಂದ ಅವಮಾನಿತನಾದ ಮಾನವಂತನನ್ನೂ, ಕುಪಿತನಾಗಿ ಮಾಡಲ್ಪಟ್ಟ ಕೋಪ ಸ್ವಭಾವವುಳ್ಳವನನ್ನೂ, ಭಯಪಡಿಸಲ್ಪಟ್ಟ ಭೀರು ಸ್ವಭಾವವುಳ್ಳವನನ್ನೂ, ಕಂಡುಹಿಡಿದು, ಅವರವರ ಕೋರಿಕೆಗಳನ್ನು ತಾನು ಈಡೇರಿಸಿಕೊಟ್ಟು ವಶಪಡಿಸಿಕೊಳ್ಳಬೇಕೆಂದು ಭಾವವು.

ಗಳನ್ನೂ, [1] ವಿಂಶತಿವರ್ಗಗಳನ್ನೂ, [2] ಪಂಚಪ್ರಕೃತಿಗಳನ್ನೂ,

---

[1] ವಿಂಶತಿವರ್ಗಗಳು :—"ಬಾಲೋ ವೃದ್ಧೋ ದೀರ್ಘರೋಗೀ ತಥಾ ಜ್ಞಾತಿಬಹಿಷ್ಕೃತಃ | ಭೀರುಕೋ ಭೀರುಜನಕೋ ಲುಬ್ಧೋ ಲುಬ್ಧಜನಸ್ತಥಾ | ವಿರಕ್ತಪ್ರಕೃತಿಶ್ಚೈವ ವಿಷಯೇಷ್ವತಿಸಕ್ತಿಮಾನ್ | ಅನೇಕ ಚಿತ್ತಮಂತ್ರಶ್ಚ ದೇವಬ್ರಾಹ್ಮಣನಿನ್ದಕಃ" ದೈವೋಪಹತಕಶ್ಚೈವ ದೈವಚಿನ್ತಕ ಏವಚ| ದುರ್ಭಿಕ್ಷವ್ಯಸನೋಪೇತೋ ಬಲವ್ಯಸನಸಂಕುಲಃ || ಅದೇಶಸ್ಥೋ ಬಹುರಿಪುರ್ಯುಕ್ತೋ ಕಾಲೇನ ಯಶ್ಚ ಸಃ | ಸತ್ಯಧರ್ಮವ್ಯಪೇತಶ್ಚ ವಿಂಶತಿಃ ಪುರುಷಾ ಅಮೀ | ಏತೈಸ್ಸಂಧಿಂ ನ ಕುರ್ವೀತ ನಿಗೃಹ್ಣೀಯಾತ್ತು ಕೇವಲಂ ||" ಎಂಬಂತೆ, ಬಾಲನು, ವೃದ್ಧನು, ದೀರ್ಘರೋಗವುಳ್ಳವನು, ನಂಟರಿಂದ ಹೊರಗೆ ಹಾಕಲ್ಪಟ್ಟಿರುವವನು, ಬಹಳ ಭಯಸ್ವಭಾವವುಳ್ಳವನು, ಭೀರುಜನಗಳನ್ನೇ ತನ್ನ ಪರಿವಾರವಾಗಿಟ್ಟುಕೊಂಡಿರುವವನು, ಲೋಭಿಯು, ಲೋಭಿಗಳನ್ನು ತನ್ನಾಶ್ರಯದಲ್ಲಿರಿಸಿಕೊಂಡಿರುವವನು, ಕೇವಲ ವೈರಾಗ್ಯ ಪ್ರಕೃತಿಯುಳ್ಳವನು, ವಿಶೇಷವಾದ ವಿಷಯಾಭಿಲಾಷೆಯುಳ್ಳವನು. ಸ್ಥಿರಮನಸ್ಸಿಲ್ಲದವನು, ದೇವಬ್ರಾಹ್ಮಣರನ್ನು ನಿಂದಿಸುವ ಸ್ವಭಾವವುಳ್ಳವನು, ದುರದೃಷ್ಟಕ್ಕೀಡಾಗಿರುವವನು. ದೈವವನ್ನೇ ನಂಬಿಕೊಂಡು ಪುರುಷಪ್ರಯತ್ನವನ್ನು ಬಿಟ್ಟಿರುವವನು, ದುರ್ಭಿಕ್ಷ ದುಃಖದಿಂದ ಪೀಡಿತನಾದವನು, ಸೈನ್ಯವಿನಾಶದಿಂದ ಕೊರಗಿದವನು, ದೇಶಾಂತರದಲ್ಲಿರುವವನು. ಅನೇಕ ಶತ್ರುಗಳುಳ್ಳವನು, ದುಷ್ಕಾಲವಶದಿಂದ ನೊಂದವನು. ಸತ್ಯಧರ್ಮಗಳಿಲ್ಲದವನು, ಈ ಇಪ್ಪತ್ತು ಮಂದಿ ಪುರುಷರೊಡನೆ ರಾಜನು ಸಂಧಿಯನ್ನು ನಡೆಸಬಾರದು. ಇಂತಹ ಶತ್ರುಗಳನ್ನು ಸಮಯವಿದ್ದಾಗ ಯುದ್ಧದಲ್ಲಿ ಅಡಗಿಸಿಬಿಡಬೇಕು. ಈ ಇಪ್ಪತ್ತು ಮಂದಿಯೂ ದುರ್ಬಲಶತ್ರುಗಳೆನಿಸುವರು. ಅಥವಾ ವಿಂಶತಿವರ್ಗವೆಂದರೆ:—(ರಾಜ್ಯಸ್ತ್ರೀಸ್ಥಾನದೇಶಾನಾಂ ಜ್ಞಾತೀನಾಂ ಚ ಧನಸ್ಯ ಚ | ಅಪಹಾರೋ ಮದೋ ಮಾನಃ ಪೀಡಾ ವೈಷಯಿಕೀ ತಥಾ | ಜ್ಞಾನಾರ್ಥಶಕ್ತಿಧರ್ಮಾಣಾಂ ವಿಘಾತೋ ದೈವಮೇವ ಚ | ಮಿತ್ರಾರ್ಥಯೋಶ್ಚಾವಮಾನಸ್ತಥಾ ಬಂಧುವಿನಾಶನಂ | ಭೂತಾನುಗ್ರಹ ವಿಚ್ಛೇದಸ್ತಥಾ ಮಂಡಲದೂಷಣಂ | ಏಕಾರ್ಥಾಭಿನಿವೇಶಿತ್ವಮಿತಿವಿಗ್ರಹಯೋನಯಃ " ಎಂಬಂತೆ ಇತರರಾಜ್ಯವನ್ನಾಗಲಿ, ಸ್ತ್ರೀಯರನ್ನಾಗಲಿ, ಸ್ಥಾನವನ್ನಾಗಲಿ, ದೇಶವನ್ನಾಗಲಿ, ಧನವನ್ನಾಗಲಿ, ಜ್ಞಾತಿಗಳನ್ನಾಗಲಿ ಅಪಹರಿಸುವುದು. ಮದವು, ವಿಷಯತತ್ಪರತೆ, ಅಜ್ಞಾನವು ಧನ ಸಮೃದ್ಧಿಯಿಲ್ಲದಿರುವಿಕೆ, ಇಂದ್ರಾದಿ ದೇವತೆಗಳಿಗೆ ವಿರೋಧಿಯಾಗಿರುವಿಕೆ, ಮಿತ್ರರನ್ನು ಅವಮಾನಪಡಿಸುವುದು ಅವರ ಧನವನ್ನಪಹರಿಸುವುದು, ನಂಟರನ್ನು ಕೆಡಿಸುವುದು, ಭೂತದಯೆಯಿಲ್ಲದಿರುವುದು, ತನ್ನ ಮಂತ್ರಿಗಳು, ಸೇನಾಧಿಪತಿಗಳು, ಮಿತ್ರರು ಮುಂತಾದವರನ್ನು ಹೀಗಳೆಯುವುದು, ತನಗೆ ಇಷ್ಟವಾದ ವಿಷಯಕ್ಕಾಗಿ ಹಟಹಿಡಿಯುವುದು, ಇವು ಇಪ್ಪತ್ತೂ ರಾಜದೋಷಗಳು. ಇವು ಯುದ್ಧಕ್ಕೆ ಕಾರಣಗಳಾಗುವುವು.

[2] ಪಂಚಪ್ರಕೃತಿಗಳು :—"ಅಮಾತ್ಯ ರಾಷ್ಟ್ರ ದುರ್ಗಾಣಿ ಕೋಶೋ ದಂಡಸ್ತು ಪಂಚಮಃ | ಏತಾಃ ಪ್ರಕೃತಯಸ್ತಜ್ಞೈರ್ವಿಜಿಗೀಷೋರುದಾಹೃತಾಃ |" ಎಂಬಂತೆ,

1 ದ್ವಾದಶಮಂಡಲವನ್ನೂ, 2 ದಂಡಯಾತ್ರಾವಿಧಿಗಳನ್ನೂ,

ಮಂತ್ರಿ, ರಾಷ್ಟ್ರ, ದುರ್ಗ, ಬೊಕ್ಕಸ, ಸೇನೆಗಳೆಂಬ ಐದು ಪ್ರಕೃತಿಗಳುಂಟು. ಇವೈದನ್ನೂ ರಾಜನು ಸರಿಯಾದ ಸ್ಥಿತಿಯಲ್ಲಿಟ್ಟಿರಬೇಕೆಂದು ಭಾವವು.

[1] ದ್ವಾದಶಮಂಡಲಗಳು :—ವಿಜಿಗೀಷುವಾದವನಿಗೆ ಎಂದರೆ, ಶತ್ರುಜಯಕ್ಕಾಗಿ ಹೋಗುವ ರಾಜನಿಗೆ ಹಿಂದೆಯೂ, ಮುಂದೆಯೂ, ಪಕ್ಕಗಳಲ್ಲಿಯೂ, ಸಹಾಯಾರ್ಥವಾಗಿ ಸೇನಾಸಮೇತರಾದ ಕೆಲವು ರಾಜರಿರಬೇಕು. ಇವರನ್ನು ನಿಲ್ಲಿಸತಕ್ಕ ವಿನ್ಯಾಸಕ್ರಮವು ಕಾಮಂದಕನೀತಿಯಲ್ಲಿ ವಿವರಿಸಲ್ಪಟ್ಟಿರುವುದು ಹೇಗೆಂದರೆ "ಸಂಪನ್ನಸ್ತು ಪ್ರಕೃತಿಭಿರ್ಮ ಹೋತ್ಸಾಹಃ ಕೃತಶ್ರಮಃ | ಜೇತಾಮಿಾಷಣಶೀಲಶ್ಚ ವಿಜಿಗೀಷುರಿತಿ ಸ್ಮೃತಃ || ಅರಿರ್ಮಿತ್ರ ಮರೇರ್ಮಿತ್ರಂ ಮಿತ್ರಮಿತ್ರಮತಃಪರಂ | ತಥಾರಿಮಿತ್ರಮಿತ್ರಂ ಚ ವಿಜಿಗೀಷೋಃ ಪುರಸ್ಸರಾಃ | ಪಾರ್ಷ್ಣಿಗ್ರಾಹಸ್ತತಃ ಪಶ್ಚಾದಾಕ್ರನ್ದಸ್ತದನನ್ತರಂ | ಆಸಾರಾವನಯೋಶ್ಚೈವ ವಿಜಿಗೀಷೋಸ್ತು ಪೃಷ್ಠತಃ | ಅರೇಶ್ಚ ವಿಜಿಗೀಷೋಶ್ಚ ಮಧ್ಯಮೋ ಭೂಮ್ಯನಂತರಃ | ಅನುಗ್ರಹೇ ಸಂಹತಯೋರ್ವ್ಯಸ್ತಯೋರ್ನಿಗ್ರಹೇ ಪ್ರಭುಃ || ಮಂಡಲಾದ್ಬಹಿರೇತೇಷಾಮು ದಾಸೀನೋ ಬಲಾಧಿಕಃ | ಅನುಗ್ರಹೇ ಸಂಹತಾನಾಂ ವ್ಯಸ್ತಾನಾಂ ಚ ವಧೇ ಪ್ರಭುಃ" ಎಂಬಿವೆಲ್ಲವೂ ಮಂಡಲವಿನ್ಯಾಸದ ಲಕ್ಷಣಗಳು. ಹಿಂದೆ ಹೇಳಿದ ಪಂಚಪ್ರಕೃತಿಗಳ ಬಲದಿಂದ ಕೂಡಿದವನಾಗಿ, ಜಯೋತ್ಸಾಹದಿಂದ ಹೊರಡತಕ್ಕ ರಾಜನ ಮುಂಭಾಗದಲ್ಲಿ, ಅರಿ, ಮಿತ್ರನು, ಅರಿಮಿತ್ರನು, ಮಿತ್ರಮಿತ್ರನು, ಅರಿಮಿತ್ರಮಿತ್ರನೆಂದು ಕರೆಯಲ್ಪಡುವ ಐದು ಬಗೆಯ ರಾಜರೂ ಕ್ರಮವಾಗಿ ಒಬ್ಬರ ಮುಂದೊಬ್ಬರು ನಿಲ್ಲಬೇಕು. ಹಾಗೆಯೇ ಜಯಪ್ರಯಾಣ ಮಾಡುವ ರಾಜನ ಹಿಂಭಾಗದಲ್ಲಿ, ಮೊದಲು ಪಾರ್ಷ್ಣಿಗ್ರಾಹನೆಂಬವನೂ, ಇವನ ಹಿಂದೆ ಆಕ್ರಂದನೆಂಬವನೂ, ಇವನ ಹಿಂದೆ ಪಾರ್ಷ್ಣಿಗ್ರಾಹಾಸಾರನೆಂದು ಕರೆಯಲ್ಪಡುವ ಅವನ ಸ್ನೇಹಿತನೂ, ಇವನ ಹಿಂದೆ ಆಕ್ರಂದಾಸಾರನೆಂಬ ಆಕ್ರಂದನ ಮಿತ್ರನೂ, ಹೀಗೆ ನಾಲ್ಕು ಮಂದಿ ರಾಜರಿರಬೇಕು. ವಿಜಿಗೀಷುವಾದ ರಾಜನ ಪಾರ್ಶ್ವಭಾಗದಲ್ಲಿ ಮಧ್ಯಮನೆಂಬವ ನೊಬ್ಬನಿರಬೇಕು. ಈತನು ವಿಜಿಗೀಷುವೂ ಶತ್ರುಗಳೂ ಕಲೆತಿರುವಾಗ ಅವರಿಗೆ ಅನುಕೂಲ ನಾಗಿ ಅನುಗ್ರಹಿಸುವುದಕ್ಕೂ, ಅವರು ಬೇರ್ಪಟ್ಟಾಗ ಪ್ರತಿಕೂಲವಾಗಿ ನಿಗ್ರಹಿಸುವುದಕ್ಕೂ ತಕ್ಕ ಸಾಮರ್ಥ್ಯವುಳ್ಳವನಾಗಿರುವನು. ಇವರೆಲ್ಲರಿಗೂ ಹಿಂದೆ ಉದಾಸೀನನೆಂದು ವ್ಯವಹರಿ ಸಲ್ಪಡುವ ಬೇರೊಬ್ಬ ರಾಜನಿರುವನು. ಈತನೂ, ಅವರೆಲ್ಲರೂ ಒಂದಾಗಿ ಕಲೆತಿರುವಾಗ ಅನುಗ್ರಹಿಸುವುದಕ್ಕೂ, ಒಬ್ಬರೊಬ್ಬರಿಗೆ ಭೇದಿಸಿ ಹೋದಾಗ ನಿಗ್ರಹಿಸುವುದಕ್ಕೂ ತಕ್ಕ ಸಾಮರ್ಥ್ಯವುಳ್ಳವನಾಗಿರುವನು. ಮುಖ್ಯನಾದ ವಿಜಿಗೀಷುವೂ ಸೇರಿ, ಈ ಹನ್ನೆರಡು ಮಂದಿ ರಾಜರ ಸಮುದಾಯಕ್ಕೆ ಮಂಡಲವೆಂದು ಹೆಸರು.

[2] ದಂಡವಿಧಾನ :—ದಂಡವಿಧಾನವೆಂದರೆ ಸೈನ್ಯದ ವಿಧಾನವು. ಸೈನ್ಯದ ನಾನಾ ವಿಧ ವಾದ ವ್ಯೂಹಗಳೆಂದರ್ಥವು ಅಥವಾ ದಂಡವೆಂದರೆ ಶತ್ರುನಿರಸನವೆಂದೂ ಅರ್ಥವಾಗುವುದ ರಿಂದ ದಂಡವಿಧಾನವೆಂದರೆ ಶತ್ರು ನಿರಸನಕ್ರಮವೆಂದೂ ಹೇಳಬಹುದು.

[1] ಯಾನಾದಿಗಳೆಂಬ [2] ಎರಡೆರಡು ಕಾರಣಗಳುಳ್ಳ ಸಂಧಿವಿಗ್ರಹಗಳನ್ನೂ ಶಾಸ್ತ್ರಾನುಸಾರವಾಗಿ ಪರಿಶೀಲಿಸಿ, ಅವುಗಳಲ್ಲಿ ಬಿಡಬೇಕಾದುದನ್ನು ಬಿಟ್ಟು, ಅಂಗೀಕರಿಸಬೇಕಾದುದನ್ನಂಗೀಕರಿಸಿ ವರ್ತಿಸುತ್ತಿರುವೆಯಷ್ಟೆ? ಎಲೆ ವತ್ಸನೆ! ನೀನು ಶಾಸ್ತ್ರೋಕ್ತವಾದ ಲಕ್ಷಣಗಳಿಂದ ಪರೀಕ್ಷಿಸಲ್ಪಟ್ಟ ಮಂತ್ರಿಗಳಲ್ಲಿ [3] ನಾಲ್ವರನ್ನೋ ಅಥವಾ ಮೂವರನ್ನೋ ಇಟ್ಟುಕೊಂಡು, ರಹಸ್ಯಾರ್ಥಗಳನ್ನು

---

[1] ಯಾನವಿಧಿಃ—"ವಿಗೃಹ್ಯ ಸಂಧಾಯ ತಥಾ ಸಂಭೂಯಾಥಪ್ರಸಂಗತಃ | ಉಪೇಕ್ಷ್ಯ ಚೇತಿ ನಿಪುಣೈಃ ಯಾನಂ ಪಂಚವಿಧಂ ಸ್ಮೃತಂ || ಎಂಬಂತೆ ಯಾನವೆಂಬುದು ಐದು ವಿಧವಾಗಿರುವುದು. ಅತಿಶಯವಾದ ಬಲದಿಂದ ಪಾರ್ಷ್ಣಿಗ್ರಹಾದಿಗಳೊಡನೆ ಯುದ್ಧ ಮಾಡಿ ಶತ್ರುವಿನ ಮೇಲೆ ಬೀಳುವುದು ವಿಗ್ರಹಯಾನವೆನಿಸುವುದು. ಆ ಪಾರ್ಷ್ಣಿಗ್ರಹಾದಿಗಳೊಡನೆಯೇ ಉಪಾಯದಿಂದ ಸಂಧಿಮಾಡಿಕೊಂಡು ಶತ್ರುವಿನ ಮೇಲೆ ಬೀಳುವುದು ಸಂಧಿಯಾನವೆನಿಸುವುದು. ತನ್ನ ಸಾಮಂತ ರಾಜರೊಡನೆ ಒಟ್ಟುಗೂಡಿ ಮುಂದುವರಿಸುವುದು ಸಂಭೂಯಯಾನವೆನಿಸುವುದು. ಬೇರೊಬ್ಬನನ್ನುದ್ದೇಶಿಸಿ ದಂಡೆತ್ತಿ ಹೋಗುವ ಹಾಗೆ ನಟಿಸುತ್ತಾ, ತನಗೆ ಉದ್ದೇಶ್ಯನಾದ ಶತ್ರುವಿನ ಮೇಲೆ ಬೀಳುವುದು ಪ್ರಸಂಗಯಾನವೆನಿಸುವುದು. ಒಬ್ಬನ ಮೇಲೆ ದಂಡೆತ್ತುವುದಾಗಿ ಉದ್ದೇಶಿಸಿ ಆತನು ಬಲಾಢ್ಯನೆಂದು ತಿಳಿದಮೇಲೆ ಅವನನ್ನು ಬಿಟ್ಟು ಆತನ ಮಿತ್ರನ ಮೇಲೆ ಬೀಳುವುದು ಉಪೇಕ್ಷಾಯಾನವೆನಿಸುವುದು. ಈ ಐದು ವಿಧವಾದ ಯಾನ ರೀತಿಯನ್ನು ರಾಜನು ಚೆನ್ನಾಗಿ ತಿಳಿದಿರಬೇಕೆಂದು ಭಾವವು.

[2] ಎರಡೆರಡು ಕಾರಣಗಳುಳ್ಳ ಸಂಧಿವಿಗ್ರಹವೆಂದರೆ:—ಹಿಂದೆ ಸಂಧಿ, ವಿಗ್ರಹ, ಯಾನ, ಆಸನ, ದ್ವೈಧೀಭಾವ, ಸಮಾಶ್ರಯಗಳೆಂಬ ಷಡ್ಗುಣಗಳನ್ನೂ ಸಂಧಿವಿಗ್ರಹಗಳೆಂಬ ಮುಖ್ಯವಾದ ಎರಡು ಭೇದವುಳ್ಳವುಗಳನ್ನಾಗಿಯೇ ನಿರೂಪಿಸಿ, ಉಳಿದ ನಾಲ್ಕು ವಿಭಾಗಗಳನ್ನೂ ಈ ಸಂಧಿವಿಗ್ರಹಗಳೆರಡರಲ್ಲಿಯೇ ಅಂತರ್ಗತವಾಗಿ ಮಾಡಿ ಹೇಳುವುದಾಗಿ ಗ್ರಹಿಸಬೇಕು. ಹೇಗೆಂದರೆ, ಯಾನಾಸನಗಳೆರಡೂ ಸಂಧಿಯಲ್ಲಿಯೂ, ದ್ವೈಧೀಭಾವ ಸಮಾಶ್ರಯಗಳೆರಡೂ ವಿಗ್ರಹದಲ್ಲಿಯೂ ಸೇರುವುವು. ಹೀಗೆ ಷಾಡ್ಗುಣ್ಯವೇ ದ್ವೈಗುಣ್ಯರೂಪವಾಗಿ ನಿರೂಪಿಸಲ್ಪಟ್ಟಿರುವುದು. ಇದಕ್ಕಾಗಿಯೇ ಕಾಮಂದಕ ನೀತಿಯಲ್ಲಿ "ಯಾನಾಸನೇ ವಿಗ್ರಹಸ್ಯ ರೂಪಂ ಸದ್ಭಿರಿತಿ ಸ್ಮೃತಂ | ಸಂಧೇಶ್ಚ ಸಂಧಿಮಾರ್ಗಜ್ಞೈಃ ದ್ವೈಧೀಭಾವ ಸಮಾಶ್ರಯೌ" ಎಂದು ಎರಡು ವಿಧವಾಗಿಯೇ ವಿಭಾಗಿಸಲ್ಪಟ್ಟಿರುವುದು. ಈ ಮೇಲೆ ಹೇಳಿದ ದಶವರ್ಗಾದಿಗಳಲ್ಲಿ ಬಿಡಬೇಕಾದುದನ್ನು ಬಿಟ್ಟು ಪರಿಗ್ರಹಿಸಬೇಕಾದುದನ್ನು ಗ್ರಹಿಸಿ, ರಾಜ್ಯಭಾರವನ್ನು ನಿರ್ವಹಿಸುವುದೇ ರಾಜಲಕ್ಷಣವೆಂದು ರಾಜನೀತಿಯು ವ್ಯಕ್ತವಾಗುವುದು.

[3] ಇದರಿಂದ ರಾಜನು ಮೂವರು ಅಥವಾ ನಾಲ್ವರು ಮಂತ್ರಿಗಳನ್ನು ಮುಂದಿಟ್ಟುಕೊಂಡು ಮಂತ್ರಾಲೋಚನೆಯನ್ನು ನಡೆಸಿ, ಆಮೇಲೆ ಪುನಃ ಅವರಲ್ಲಿ ಒಬ್ಬೊಬ್ಬರನ್ನೂ ಬೇರೆ ಬೇರೆಯಾಗಿ ಕರೆದು ಅವರವರ ಅಭಿಪ್ರಾಯಗಳನ್ನು ತಿಳಿದುಕೊಳ್ಳಬೇಕೆಂದು ಭಾವವು.

ಅವರೆಲ್ಲರೊಡನೆ ಕಲೆತಾಗಲಿ, ಅಥವಾ ಪ್ರತ್ಯೇಕವಾಗಿ ಒಬ್ಬೊಬ್ಬರನ್ನೇ ಇಟ್ಟುಕೊಂಡಾಗಲಿ, ಪರ್ಯಾಲೋಚಿಸಿ, ಅವರ ಅಭಿಪ್ರಾಯಗಳನ್ನು ತಿಳಿದು ಕೊಳ್ಳುತ್ತಿರುವೆಯಷ್ಟೆ? ಎಲೆ ವತ್ಸನೆ! [1] ನೀನು ಹಿಂದೆ ಅಧ್ಯಯನಮಾಡಿದ ವೇದಗಳೆಲ್ಲವನ್ನೂ ಅನುಷ್ಠಾನದಿಂದ ಸಫಲಗೊಳಿಸುತ್ತಿರುವೆಯಷ್ಟೆ? ನೀನು ಗಳಿಸಿದ ಹಣವನ್ನು ದಾನಭೋಗಗಳಿಂದಲೂ, ನಿನ್ನ ಶಾಸ್ತ್ರಜ್ಞಾನವನ್ನು ಶೀಲವೃತ್ತಿಗಳಿಂದಲೂ, ನಿನ್ನ ಪತ್ನಿಯರನ್ನು ರತಿಸಂತಾನಗಳಿಂದಲೂ ಸಫಲ ಗೊಳಿಸುತ್ತಿರುವೆಯಷ್ಟೆ? [2] ಆಯುರ್ವೃದ್ಧಿಕರವಾಗಿಯೂ, ಕೀರ್ತಿಕರವಾ ಗಿಯೂ, ಧರ್ಮಾರ್ಥಕಾಮಗಳಿಗೆ ಸಾಧಕವಾಗಿಯೂ ಇರುವ, ಈ ವಿವೇಚನೆ ಗಳೆಲ್ಲವೂ ನನಗಿರುವಂತೆಯೇ ನಿನ್ನಲ್ಲಿಯೂ ತುಂಬಿರುವುವಷ್ಟೆ. [3] ನಮ್ಮ ತಂದೆಯಾದ ದಶರಥನು ಈಗಲೂ ಯಾವ ವೃತ್ತಿಯನ್ನವಲಂಬಿಸಿರುವನೋ, ಈಗ ಸ್ವರ್ಗಸ್ಥರಾಗಿರುವ ನಮ್ಮ ಹಿರಿಯರು ಯಾವ ವೃತ್ತಿಯನ್ನವಲಂಬಿಸಿ ದ್ದರೋ ಯಾವ ಸದ್ವೃತ್ತಿಯು, ಸಜ್ಜನಸಮ್ಮತವಾಗಿಯೂ, ನಾಶರಹಿತ ವಾಗಿಯೂ ಇರುವುದೋ ಆ ವೃತ್ತಿಯನ್ನೇ ನೀನೂ ಅವಲಂಬಿಸಿರುವೆಯಷ್ಟೆ? ಎಲೆ ವತ್ಸನೆ! [4] ಮಧುರವಾದ ಆಹಾರಗಳು ನಿನಗೆ ಸಿಕ್ಕಿದಾಗ ಅವುಗಳನ್ನು ನೀನೊಬ್ಬನೇ ರಹಸ್ಯವಾಗಿ ಭುಜಿಸುವುದಿಲ್ಲವಷ್ಟೆ? ನಿನ್ನ ಮಿತ್ರರು ನಿನ್ನನ್ನು ಪ್ರಾರ್ಥಿಸಿ ಕೇಳಿದಾಗ ಅವರಿಗೆ ಅಭಿಮತವಾದ ವಸ್ತುಗಳನ್ನು ಪ್ರೀತಿಯಿಂದ

---

[1] ಇದಕ್ಕೆ ಮಹಾಭಾರತದ ಪ್ರಮಾಣವೂ ಉಂಟು, ಹೇಗೆಂದರೆ:—"ಅಗ್ನಿಹೋತ್ರ-ಫಲಾ ವೇದಾಃ ದತ್ತಭುಕ್ತಫಲಂ ಧನಂ | ರತಿಪುತ್ರಫಲಾ ದಾರಾಶ್ಶೀಲವೃತ್ತಫಲಂ ಶ್ರುತಂ ||" ಎಂದು ಹೇಳಲ್ಪಟ್ಟಿರುವುದು.

[2] ಇದರಿಂದ ಈ ರಾಜಧರ್ಮಗಳನ್ನಾಚರಿಸಿದರೆ ರಾಜನಿಗೆ ಆಯುಸ್ಸು, ಕೀರ್ತಿ, ಪುರುಷಾರ್ಥಸಿದ್ಧಿ, ಇವೆಲ್ಲವೂ ಸಿದ್ಧಿಸುವುವೆಂದು ಭಾವವು.

[3] ಇದರಿಂದ ಪುತ್ರನಾದವನು ತನ್ನ ತಂದೆತಾಯಿಗಳು ಅವಲಂಬಿಸಿದ ವೃತ್ತಿಯನ್ನು ಬಿಡಕೂಡದೆಂದೂ, ಅವರು ಅನುಷ್ಠಿಸದಿದ್ದರೂ ಯುಕ್ತವಾದುವುಗಳನ್ನು ತಾನೇ ಅನುಷ್ಠಿಸ ಬೇಕೆಂದೂ ಸೂಚಿತವು.

[4] ಇದರಿಂದ ಮಧುರವಾದ ಆಹಾರವು ಸಿಕ್ಕಿದಾಗ ತಾನೊಬ್ಬನೇ ಭುಜಿಸಬಾರ ದೆಂದೂ, ತನ್ನ ಮಿತ್ರರಿಗೆ ಕೈಲಾದಮಟ್ಟಿಗಾದರೂ ಉಪಕಾರಮಾಡುತ್ತಿರಬೇಕೆಂದೂ ಸೂಚಿತವು.

ಕೊಡುತ್ತಿರುವೆಯಷ್ಟೆ? ಎಲೈ ದೀರ್ಘಾಯುಷ್ಮಂತನೆ! [1] ರಾಜ್ಯಾಧಿಕಾರವನ್ನು ವಹಿಸಿದವನು ಈಗ ಹೇಳಿದ ನೀತಿಧರ್ಮಗಳಲ್ಲಿ ಚೆನ್ನಾಗಿ ಮನಸ್ಸಿಟ್ಟು ಬುದ್ಧಿವಂತನಾಗಿ ಉಚಿತ ದಂಡವನ್ನು ಧರಿಸಿ ಧರ್ಮದಿಂದ ಪ್ರಜೆಗಳನ್ನು ಪಾಲಿಸುತಿದ್ದರೆ, ಅಂತವನು ಈ ಲೋಕದಲ್ಲಿ ಸಮಸ್ತ ಭೂಮಂಡಲವನ್ನನು ಭವಿಸಿ, ಶರೀರಾತ್ಮಜ್ಞಾನವನ್ನು ಪಡೆದು, ಕೊನೆಗೆ ಈ ಲೋಕವನ್ನು ಬಿಟ್ಟ ಮೇಲೆಯೂ ನಮ್ಮ ಪೂರ್ವರಾಜರಂತೆ ಸ್ವರ್ಗದಲ್ಲಿ ಸೇರಿ ಸುಖಿಸುವನು" ಎಂದನು.

ಇದು ನೂರನೆಯ ಸರ್ಗವು.

ಭರತನು ರಾಮನಿಗೆ ದಶರಥನ ಮರಣವಾರ್ತೆಯನ್ನು ತಿಳಿಸಿದುದು.

ರಾಮನು ಹೇಳಿದ ಈ ಮಾತುಗಳನ್ನು ಕೇಳಿ ಭರತನು "ಅಣ್ಣಾ! ಮೊದಲೇ ಧರ್ಮಭ್ರಷ್ಟನಾಗಿರುವ ನನಗೆ ಈ ರಾಜಧರ್ಮಗಳಿಂದೇನು? ಎಲೈ ಪುರುಷಶ್ರೇಷ್ಠನೆ! ಹಿರಿಯಮಗನಿರುವಾಗ ಕಿರಿಯನು ರಾಜ್ಯಾಧಿಕಾರಕ್ಕರ್ಹ ನಲ್ಲವೆಂಬುದು ನಮ್ಮ ಇಕ್ಷ್ವಾಕುವಂಶಕ್ಕೆ ಕುಲಕ್ರಮಾಗತವಾಗಿ ಬಂದ ಶಾಶ್ವತ ಧರ್ಮವಲ್ಲವೆ? ಆದುದರಿಂದ ನಮಗೆ ಜ್ಯೇಷ್ಠನಾದ ನೀನೇ ಈಗ ನನ್ನೊಡನೆ ಅಯೋಧ್ಯೆಗೆ ಬಂದು, ಸರ್ವಸಂಪತ್ಸಮೃದ್ಧವಾದ ನಮ್ಮ ನಗರಿಯಲ್ಲಿ ನಮ್ಮ ವಂಶಾಭ್ಯುದಯಕ್ಕಾಗಿ ಪಟ್ಟಾಭಿಷೇಕವನ್ನು ವಹಿಸು! ಎಲೈ ಆರ್ಯನೆ! ರಾಜ್ಯಭಾರವನ್ನು ವಹಿಸುವುದು ಸಾಮಾನ್ಯವಲ್ಲ. [2] ಕೇವಲ ಪ್ರಾಕೃತ ಜನರು

---

[1] ಇದರಿಂದ ರಾಜನು ನ್ಯಾಯರೀತಿಯಿಂದಲೂ, ಉಚಿತದಂಡನೆಗಳಿಂದಲೂ ರಾಜ್ಯ ವನ್ನು ನಡೆಸುತ್ತಿದ್ದರೆ, ಅವನಿಗೆ ಐಹಿಕಾಮುಷ್ಮಿಕಸುಖಗಳೆರಡೂ ಸಿದ್ಧಿಸುವುದೆಂದೂ "ರಾಜ್ಯಾಂತೇ ನರಕಂ ಧ್ರುವಂ" ಎಂಬ ವಾಕ್ಯವು ಅಧಾರ್ಮಿಕನಾದ ರಾಜನ ವಿಷಯವಾದು ದೆಂದೂ ಸೂಚಿತವು.

[2] ದೇವತ್ವವನ್ನುಂಟುಮಾಡುವ ತಪಸ್ಸನ್ನು ಬಿಟ್ಟು ರಾಜ್ಯದಿಂದೇನೆಂದು ರಾಮನು ಆಕ್ಷೇಪಿಸುವನೆಂದು, ಅದಕ್ಕೆ ಪ್ರತ್ಯುತ್ತರವಾಗಿ ಭರತನು ಈ ವಾಕ್ಯವನ್ನು ಹೇಳಿರುವನು. ಸಾಮಾನ್ಯ ಜನರು ರಾಜನನ್ನು ಮನುಷ್ಯಮಾತ್ರನೆಂದು ತಿಳಿದಿದ್ದರೂ, ನಾನು ರಾಜನನ್ನು ದೈವವೆಂದೇ ಭಾವಿಸುವೆನೆಂದೂ, ತಪಸ್ಸು ಮೊದಲಾದ ದೇಹದಂಡನೆಯಿಂದ ದೇವತ್ವವನ್ನು

ಮಾತ್ರ ರಾಜನನ್ನು ಸಾಮಾನ್ಯಮನುಷ್ಯನೆಂದು ಹೇಳುವರೇ ಹೊರತು, ಬಲ್ಲವರು ಎಂದಿಗೂ ಹಾಗೆ ಹೇಳಲಾರರು! ಧರ್ಮಾರ್ಥ ಸಂಪಾದಕವಾದ ರಾಜವೃತ್ತಿಯೆಂಬುದು, ಅತಿಮಾನುಷವೆಂದು ಅನೇಕ ಪ್ರಾಜ್ಞರು ಹೇಳಿರು ವುದನ್ನು ಕೇಳಿರುವೆನು? ಆದುದರಿಂದ ರಾಜನು ದೇವರೆಂದೇ ನನಗೆ ನಿಜವಾದ ಭಾವವು. ಅಣ್ಣಾ! ಆ ವಿಷಯವು ಹಾಗಿರಲಿ! ನೀನು ಅಲ್ಲಿರುವಾಗಲೇ ನಾನು ಕೇಕಯ ದೇಶಕ್ಕೆ ಹೊರಟುಹೋಗಿದ್ದೆನಷ್ಟೆ? ನೀನೂ ಇತ್ತಲಾಗಿ ಅರಣ್ಯಕ್ಕೆ ಹೊರಟು ಬಂದುಬಿಟ್ಟ ಮೇಲೆ, ನಾವಿಬ್ಬರೂ ಇಲ್ಲದಿದ್ದಾಗ ಯಾಗಶೀಲನಾಗಿಯೂ, ಪೂಜ್ಯನಾಗಿಯೂ ಇರುವ ನಮ್ಮ ತಂದೆಯು ಸ್ವರ್ಗವನ್ನು ಸೇರಿಬಿಟ್ಟನು. ನೀನು ಸೀತಾಲಕ್ಷ್ಮಣರೊಡನೆ ಇತ್ತಲಾಗಿ ಹೊರಟಕೂಡಲೆ, ನಿನ್ನಗಲಿಕೆಯಿಂದುಂಟಾದ ಮಹಾಸಂಕಟದಿಂದಲೇ ಆತನು ಪ್ರಾಣವನ್ನು ಬಿಟ್ಟುಬಿಟ್ಟನು. ಇನ್ನು ಚಿಂತಿಸಿ ಫಲವೇನು? ಆರ್ಯನೆ! ಏಳು! ತಂದೆಗೆ ಜಲತರ್ಪಣಾದಿಗಳನ್ನು ನಡೆಸು! ನಾನೂ ಈ ಶತ್ರುಘ್ನನೂ ಆಗಲೇ ಆತನಿಗೆ ಜಲಕ್ರಿಯೆಗಳನ್ನುಮಾಡಿ ಮುಗಿಸಿರುವೆವು. ಮುಖ್ಯವಾಗಿ ತಾಯಿತಂದೆಗಳಿಗೆ ಅತ್ಯಂತ ಪ್ರೇಮಪಾತ್ರರಾದ ಮಕ್ಕಳು ಕೊಟ್ಟ ಜಲತರ್ಪಣವೇ ಪಿತೃಲೋಕದಲ್ಲಿ ಅವರಿಗೆ ಅಕ್ಷಯವಾದ ಫಲವನ್ನು ಕೊಡುವುದೆಂದು ಹಿರಿಯರು ಹೇಳುವರು. ನಮ್ಮ ತಂದೆಗೆ ನೀನೇ ವಿಶೇಷಪ್ರಿಯನಾದುದರಿಂದ, ನಿನ್ನ ಕೈಯಿಂದ ನೀನು ಆತನಿಗೆ ಅಪರಕ್ರಿಯೆಗಳನ್ನು ಮಾಡಿ ಆತನನ್ನುದ್ಧರಿಸು! ಆರ್ಯನೆ! ನಮ್ಮ ತಂದೆಯು ತನ್ನ ಪ್ರಾಣೋತ್ಕ್ರಮಣ ಕಾಲದಲ್ಲಿಯೂ ನಿನಗಾಗಿಯೇ ದುಃಖಿಸುತ್ತ, ನಿನ್ನನ್ನೇ ನೋಡಬೇಕೆಂದು ಬಾರಿಬಾರಿಗೂ ಹಂಬಲಿಸುತ್ತ. ನಿನ್ನಲ್ಲಿಯೇ ಮನಸ್ಸಿಟ್ಟು, ನಿನ್ನ ವಿರಹದುಃಖದಿಂದಲೇ ಪೀಡಿತನಾಗಿ, ನಿನ್ನನ್ನೇ ಸ್ಮರಿಸಿಕೊಂಡು ಈ ಲೋಕವನ್ನು ಬಿಟ್ಟನು" ಎಂದನು.

ಇದು ನೂರೊಂದನೆಯ ಸರ್ಗವು.

ಸಂಪಾದಿಸುವುದಕ್ಕಿಂತಲೂ ರಾಜ್ಯಪಾಲನದಲ್ಲಿ ದೇವತ್ವವೆಂಬುದು ಭೋಗ ಮೂಲಕವಾಗಿಯೇ ಪ್ರತ್ಯಕ್ಷಾನುಭವಸಿದ್ಧವಾಗಿರುವುದರಿಂದ, ಇದೇ ಉತ್ತಮವೆಂದೂ ಭರತನ ಭಾವವು (ಮಹೇಶ್ವರ ತೀರ್ಥರು.)

ರಾಮನ ಪ್ರಲಾಪವು. ಮಂದಾಕಿನಿಯಲ್ಲಿ ಜಲತರ್ಪಣವನ್ನು ನಡೆಸಿದುದು. ಅಲ್ಲಿಂದ ಆಶ್ರಮಕ್ಕೆ ಹಿಂತಿರುಗಿ ಬಂದು ಪುನಃ ಪ್ರಲಾಪಿಸಿದುದು. ಅಯೋಧ್ಯಾವಾಸಿಗಳಿಗೆ ರಾಮನೊಡನೆ ಸಮಾಗಮವು.

ಹೀಗೆ ಪಿತೃಮರಣವೆಂಬ ಮಹಾದುಃಖವಾರ್ತೆಯು ಭರತನ ಬಾಯಿಯಿಂದ ಹೊರಟಕೂಡಲೇ ರಾಮನಿಗೆ ಪ್ರಜ್ಞೆತಪ್ಪಿತು. ಇಂದ್ರನಿಂದ ಪ್ರಯೋಗಿಸಲ್ಪಟ್ಟ ವಜ್ರಾಯುಧದಂತೆ ಅತಿದುಸ್ಸಹವಾಗಿ ಕರ್ಣಕಠೋರವಾದ ಆ ವಾಗ್ವಜ್ರವು ಬಂದು ತಾಗಿದಾಗಲೇ ರಾಮನು ಮಿತಿಮೀರಿದ ಸಂಕಟದಿಂದ ಕೈಗಳನ್ನು ಹಿಸುಕುತ್ತ, ಕಾಡಿನಲ್ಲಿ ಕೊಡಲಿಯಿಂದ ಕಡಿಯಲ್ಪಟ್ಟ ಪುಷ್ಪಿತವಾದ ಮರದಂತೆ ನೆಲದಮೇಲೆ ಬಿದ್ದುಬಿಟ್ಟನು. ಕಾಡಾನೆಯು ತನ್ನ ಮೈನವೆಯನ್ನಾರಿಸಿಕೊಳ್ಳುವುದಕ್ಕಾಗಿ ನದೀತೀರದಲ್ಲಿರುವ ಮರಳುದಿಣ್ಣೆಗಳಲ್ಲಿ ವಪ್ರಾಘಾತಲೀಲೆಯನ್ನು ಮಾಡಿ ಅದರಿಂದ ಬಳಲಿ, ಮಲಗಿರುವಂತೆ, ರಾಮನು ಮೂರ್ಛಿತನಾಗಿ ನೆಲದಮೇಲೆ ಮಲಗಿರುವುದನ್ನು ನೋಡಿ ಭರತನೂ, ಲಕ್ಷ್ಮಣನೂ, ಶತ್ರುಘ್ನನೂ, ಸೀತೆಯೂ ವ್ಯಸನದಿಂದ ಪ್ರಲಾಪಿಸತೊಡಗಿದರು. ಹೀಗೆ ದುಃಖದಿಂದ ಕಂದಿ ಮಲಗಿದ್ದ ಆತನಿಗೆ ಮೂರ್ಛೆ ತಿಳಿಸುವುದಕ್ಕಾಗಿ ಆತನ ಮೈಮೇಲೆ ತಣ್ಣೀರನ್ನು ಚೆಲ್ಲಿದರು. ಸ್ವಲ್ಪಹೊತ್ತಿನಮೇಲೆ ರಾಮನು ಮೆಲ್ಲನೆ ಮೂರ್ಛೆತಿಳಿದೆದ್ದು, ಕಣ್ಣೀರುಸುರಿಸುತ್ತ, ಬಹು ದೀನಸ್ವರದಿಂದ ಮಾತಾಡತೊಡಗಿದನು. ತಂದೆಯ ಮರಣವನ್ನು ನೆನೆಸಿಕೊಂಡು ವ್ಯಸನಪೀಡಿತನಾದ ಆತನು, ಧರ್ಮಯುಕ್ತವಾದ ಮಾತುಗಳಿಂದ ಭರತನನ್ನು ನೋಡಿ "ಹಾ! ವತ್ಸನೆ! ನಮ್ಮ ತಂದೆಯು ಕಾಲಗತಿಯನ್ನು ಹೊಂದಿದನೆ? ಇನ್ನು ಗತಿಯೇನು? ಅಯೋಧ್ಯೆಯಿಂದ ಇನ್ನು ನಮಗಾಗಬೇಕಾದುದೇನು? ರಾಜಶ್ರೇಷ್ಠನಾದ ಆತನನ್ನಗಲಿದಮೇಲೆ ಆ ಅಯೋಧ್ಯೆಯನ್ನು ಪಾಲಿಸುವ ಸಮರ್ಥನಾರು? ಅಯ್ಯೋ! ನನ್ನ ದುಃಖದಿಂದಲೇ ಆತನು ಮೃತಿಹೊಂದಿದನೆ? ಆತನಿಗೆ ಅಪರ ಸಂಸ್ಕಾರಗಳನ್ನು ನಡೆಸುವುದಕ್ಕೂ ನಾನು ಅರ್ಹನಾಗದೇಹೋದೆನೆ! ಅಂತಹ ಮಹಾತ್ಮನಿಗೆ ದುರ್ಜಾತನಾದ ಈ ನನ್ನಿಂದ ಏನುಪಯೋಗವಾಯಿತು? ಆತನಿಗೆ ನಾನು ಮಗನಾಗಿ ಹುಟ್ಟಿಯೂ ನಿರರ್ಥಕವಾಯಿತು. ಆತನನ್ನು ಕೊಲ್ಲುವುದಕ್ಕಾಗಿಯೇ ನಾನು ಹುಟ್ಟಿದಂತಾಯಿ

ತಲ್ಲವೆ? ವತ್ಸ ಭರತನೆ! ನೀನೇ ಧನ್ಯನು. ಶತ್ರುಘ್ನನೊಡಗೂಡಿ ಸಕಾಲದಲ್ಲಿ ರಾಜನಿಗೆ ಸಮಸ್ತ ಪ್ರೇತಕೃತ್ಯಗಳನ್ನೂ ನಡೆಸಿ, ಆತನನ್ನು ಸತ್ಕರಿಸಿ ದೋಷರಹಿತನಾದೆಯಲ್ಲವೆ? ಮಹಾರಾಜನು ಮೃತಿಹೊಂದಿದಮೇಲೆ ಇನ್ನು ಆ ಅಯೋಧ್ಯೆಗೆ ಕಳೆಯೆಲ್ಲಿರುವುದು? ಪ್ರಧಾನಪುರುಷನಿಲ್ಲದ ಆ ಪುರಕ್ಕೆ ಇನ್ನು ನೆಮ್ಮದಿಯೆಲ್ಲಿಯದು? ರಾಜನಿಲ್ಲದೆ ಅನಾಯಕವಾಗಿರುವ ಆ ಅಯೋಧ್ಯೆಗೆ ನನ್ನ ವನವಾಸವು ತೀರಿದಮೇಲೆಯೂ ನಾನು ಪ್ರವೇಶಿಸಲಾರೆನು. ನಮ್ಮ ತಂದೆಯು ಸತ್ತಮೇಲೆ ವನವಾಸವನ್ನು ಮುಗಿಸಿಕೊಂಡು ನಾನು ಹಿಂತಿರುಗಿ ಅಯೋಧ್ಯೆಗೆ ಹೋದರೂ ನನ್ನನ್ನು ಅಲ್ಲಿ ಶಿಕ್ಷಿಸಿ ಸನ್ಮಾರ್ಗಕ್ಕೆ ತರುವವರಾರು? ಮೊದಲು ನನ್ನ ತಂದೆಯು, ನಾನು ಆತನ ಆಜ್ಞೆಯನ್ನನುಸರಿಸಿಕೊಳ್ಳುತಿದ್ದುದಕ್ಕೆ ಎಷ್ಟೋ ಸಂತೋಷಿಸಿ ನನ್ನನ್ನು ಕಿವಿಗಿಂಪಾದ ಮಾತುಗಳಿಂದ ಮನ್ನಿಸುತಿದ್ದ ನಲ್ಲವೆ? ಇನ್ನು ನಾನು ಅಂತಹ ಮಾತುಗಳನ್ನು ಕೇಳುವುದೆಲ್ಲಿ?" ಎಂದನು. ಹೀಗೆ ಭರತನನ್ನು ನೋಡಿ ದೀನವಾಕ್ಯಗಳಿಂದ ಪ್ರಲಾಪಿಸಿದಮೇಲೆ, ಚಂದ್ರ ಮುಖಿಯಾದ ಸೀತೆಯಕಡೆಗೆ ತಿರುಗಿ, ಸಂಕಟದಿಂದ ತಪಿಸುತ್ತ "ಎಲೆ ಸೀತೆ! ನಿನ್ನ ಮಾವನು ಮೃತನಾದನು. ಲಕ್ಷ್ಮಣಾ! ನೀನೂ ತಂದೆಯಿಲ್ಲದ ತಬ್ಬಲಿ ಯಾದೆಯಲ್ಲಾ! ನಮ್ಮ ರಾಜಾಧಿರಾಜನು ಸ್ವರ್ಗಸ್ಥನಾದನೆಂಬ ದುಃಖವಾರ್ತೆ ಯನ್ನು ಭರತನು ಹೇಳುತ್ತಿರುವನು" ಎಂದನು. ರಾಮನು ಈ ಮಾತುಗಳ ನ್ನಾಡುತ್ತಿರುವಾಗಲೆ ಅಲ್ಲಿದ್ದವರೆಲ್ಲರ ಕಣ್ಣುಗಳಲ್ಲಿಯೂ ಪಳಪಳನೆ ನೀರು ಸುರಿಯುತಿತ್ತು. ಆಗ ಆ ಅಣ್ಣ ತಮ್ಮಂದಿರೆಲ್ಲರೂ ಅನೇಕ ವಿಧದಲ್ಲಿ ರಾಮನನ್ನು ಸಮಾಧಾನಪಡಿಸಿ, "ಅಣ್ಣಾ! ಏಳು! ತಂದೆಗೆ ಉದಕಕ್ರಿಯೆಗಳನ್ನು ನಡೆಸ ಬೇಕಲ್ಲವೆ?" ಎಂದು ಪ್ರಾರ್ಥಿಸುತಿದ್ದರು. ಆಗ ತನ್ನ ಮಾವನಾದ ದಶರಥನು ಸ್ವರ್ಗಸ್ಥನಾದುದನ್ನು ಕೇಳಿ, ಸೀತೆಯೂ ಎಡೆಬಿಡದೆ ಕಣ್ಣೀರುಬಿಡುತ್ತ, ಆ ಬಾಷ್ಪಪ್ರವಾಹದಲ್ಲಿ ತನ್ನ ಪತಿಯನ್ನೇ ನೋಡಲಾರದೆ ಹೋದಳು. ಹೀಗೆ ಮಿತಿಮೀರಿ ಪ್ರಲಾಪಿಸುತ್ತಿರುವ ಜನಕಪುತ್ರಿಯಾದ ಸೀತೆಗೆ ರಾಮನು ತಾನೇ ಸಮಾಧಾನವಾಕ್ಯಗಳನ್ನು ಹೇಳಿ, ಆಮೇಲೆ ದುಃಖಿತನಾದ ಲಕ್ಷ್ಮಣನನ್ನೂ ನೋಡಿ "ಎಲೆ ವತ್ಸನೆ! ಇನ್ನೇನು? ತಪಸ್ವಿಜನಗಳಿಗೆ ಭೋಜ್ಯವಾದ ಇಂಗಳದ ಹಿಂಡಿಯನ್ನು ತಂದಿಡು. ನನಗೆ ಉಡುವುದಕ್ಕೂ ಹೊದ್ದುಕೊಳ್ಳು ವುದಕ್ಕೂ ನಾರುಮಡಿಯನ್ನು ತಂದುಕೊಡು. ಮಹಾತ್ಮನಾದ ನಮ್ಮ ತಂದೆಗೆ

ಜಲಕ್ರಿಯೆಯನ್ನು ಮಾಡುವುದಕ್ಕಾಗಿ ಹೋಗುವೆನು. ಸೀತೆಯನ್ನು ಮುಂದಿಟ್ಟು ಕೊಂಡು ನೀನೂ ಹೊರಡು. ನಾನು ನಿನ್ನ ಹಿಂದೆ ಬರುವೆನು. ಇಂತಹ ಸಹಿಸ ಬಾರದ ದುಃಖಕಾರ್ಯಗಳಿಗೆ ಹೋಗುವಾಗ ಸ್ತ್ರೀಯರನ್ನೂ ಬಾಲಕರನ್ನೂ ಮುಂದೆ ಬಿಟ್ಟುಕೊಂಡು ಹೋಗಬೇಕಾದುದೇ ಶಾಸ್ತ್ರವಿಧಿಯು"ಎಂದನು. ಆಗ ಇಕ್ಷ್ವಾಕು ವಂಶದವರನ್ನು ಕುಲಕ್ರಮವಾಗಿ ಅನುಸರಿಸಿ, ಬಂದವನಾಗಿಯೂ, ಆತ್ಮಜ್ಞಾನ ವುಳ್ಳವನಾಗಿಯೂ, ಮಹಾಬುದ್ಧಿವಂತನಾಗಿಯೂ, ಮೃದುಸ್ವಭಾವವುಳ್ಳವ ನಾಗಿಯೂ, ಅಂತರ್ಬಹಿರಿಂದ್ರಿಯಗಳನ್ನು ನಿಗ್ರಹಿಸಿದವನಾಗಿಯೂ, ಮುಖ್ಯ ವಾಗಿ ರಾಮನಲ್ಲಿ ವಿಶೇಷಭಕ್ತಿಯುಳ್ಳವನಾಗಿಯೂ ಇರುವ ಸುಮಂತ್ರನು, ರಾಮನನ್ನೂ ಇತರ ರಾಜಕುಮಾರರನ್ನೂ ಅನೇಕ ವಿಧದಲ್ಲಿ ಸಮಾಧಾನಪಡಿಸಿ, ಅವರನ್ನು ಕೈಹಿಡಿದು ಕರೆದುಕೊಂಡು ಹೋಗಿ, ಮೆಲ್ಲಗೆ ಮಂದಾಕಿನೀ ನದಿಗೆ ಇಳಿಸಿದನು. ಮಹಾಯಶಸ್ವಿಗಳಾದ ಆ ಸೀತಾರಾಮಲಕ್ಷ್ಮಣರು ಸುಂದರವಾದ ಘಟ್ಟಗಳುಳ್ಳದಾಗಿಯೂ, ಪುಷ್ಪಿತವಾದ ತೀರವನಗಳುಳ್ಳದಾಗಿಯೂ, ಶೀಘ್ರ ಗಾಮಿನಿಯಾಗಿಯೂ ಪ್ರವಹಿಸುತ್ತಿರುವ ಆ ಮಂದಾಕಿನಿಯಲ್ಲಿ ದುಃಖ ದಿಂದಿಳಿದು ಸ್ನಾನವನ್ನು ಮಾಡಿ, ಅಲ್ಲಿಂದ ಮುಂದೆ ಕೆಸರಿಲ್ಲದ ಒಂದು ಘಟ್ಟ ವನ್ನು ನೋಡಿ ಅಲ್ಲಿ ಜಲಕ್ರಿಯೆಯನ್ನು ಮಾಡಲಾರಂಭಿಸಿದರು. ಆಗ ಅವರೆಲ್ಲರೂ ದುಃಖದಿಂದ "ಎಲೆ ತಾತನೆ! ಇದೋ! ಈ ಜಲವು ನಿನಗೆ" ಎಂದು ಹೇಳುತ್ತ ತರ್ಪಣವನ್ನು ಬಿಡಲಾರಂಭಿಸಿದರು. ಆಗ ರಾಮನೂ ತನ್ನ ಬೊಗಸೆ ಯಲ್ಲಿ ನೀರನ್ನು ತುಂಬಿಕೊಂಡು, ದಕ್ಷಿಣಾಭಿಮುಖವಾಗಿ ಕುಳಿತು, ದುಃಖವನ್ನು ತಡೆಯಲಾರದೆ ಗೋಳಿಡುತ್ತ 'ಎಲೆ ರಾಜಸಿಂಹನೆ! ನಾನು ಈಗ ಕೊಡತಕ್ಕ ಈ ಶುದ್ಧೋದಕವು ಪಿತೃಲೋಕವನ್ನು ಹೊಂದಿದ ನಿನಗೆ ಅಕ್ಷಯವಾಗಿರಲಿ." ಎಂದು ಹೇಳಿ ತರ್ಪಣವನ್ನು ಬಿಟ್ಟನು. ಆಮೇಲೆ ತೇಜಸ್ವಿಯಾದ ರಾಮನು ಆ ಸ್ಥಳವನ್ನು ಬಿಟ್ಟು ಮೇಲೆ ಬಂದು, ತನ್ನ ತಮ್ಮಂದಿರೊಡಗೂಡಿ ತಂದೆಗೆ ಪಿಂಡಪ್ರದಾನವನ್ನೂ ಮಾಡಿದನು. ಆಗ ಆತನು ಬದರೀಫಲ (ಎಲಚಿಹಣ್ಣು) ಮಿಶ್ರವಾದ ಇಂಗಳದ ಹಿಂಡಿಯನ್ನು ದರ್ಭಾಸ್ತರಣದ ಮೇಲಿಟ್ಟು, ಅದನ್ನು ನೋಡಿ ವ್ಯಸನಪೀಡಿತನಾಗಿ, ಗಟ್ಟಿಯಾಗಿ ಅಳುತ್ತಾ "ಎಲೈ ರಾಜಾಧಿರಾಜನೆ! ಇದೋ! ನಿನಗೆ ಪ್ರೀತ್ಯರ್ಥವಾಗಿ ಈ ಆಹಾರವನ್ನು ಸಮರ್ಪಿಸಿರುವೆನು. ಇಲ್ಲಿ ನಮಗೆ ಈ ವಿಧವಾದ ಹಿಂಡಿಯೇ ಆಹಾರವಾಗಿರುವುದರಿಂದ ನಿನಗೂ ಇದನ್ನೇ

ಅರ್ಪಿಸಬೇಕಾಯಿತು. ಪ್ರೀತಿಯಿಂದ ಸ್ವೀಕರಿಸಬೇಕು. ಲೋಕದಲ್ಲಿ ಮನುಷ್ಯರು ತಾವು ಭುಜಿಸತಕ್ಕ ಆಹಾರವನ್ನೇ ತಮ್ಮ ತಮ್ಮ ಇಷ್ಟದೇವತೆಗಳಿಗೆ ಮೊದಲು ನಿವೇದನಮಾಡಬೇಕಲ್ಲವೆ?" ಎಂದು ಹೇಳಿ ಪ್ರಲಾಪಿಸುತ್ತ ಪಿಂಡಪ್ರದಾನವನ್ನು ಮಾಡಿ, ಆ ಸ್ಥಳದಿಂದ ಎದ್ದು ಮೇಲೆ ಬಂದು, ಅಂದವಾದ ತಪ್ಪಲುಗಳುಳ್ಳ ಚಿತ್ರಕೂಟ ಪರ್ವತವನ್ನೇರಿದನು. ಲೋಕನಾಥನಾದ ಆ ರಾಮನು ತನ್ನ ಪರ್ಣಶಾಲೆಯ ಬಾಗಿಲಿಗೆ ಬಂದು ನಿಂತೊಡನೆಯೇ ಭರತಲಕ್ಷ್ಮಣರಿಬ್ಬರನ್ನೂ ಎರಡು ತೋಳುಗಳಿಂದಲೂ ಬಿಗಿಯಾಗಿ ಅಪ್ಪಿಕೊಂಡು ರೋದಿಸುತ್ತಿದ್ದನು. ಅದನ್ನು ನೋಡಿ ಸೀತಾಲಕ್ಷ್ಮಣ ಭರತಶತ್ರುಘ್ನಾದಿಗಳೆಲ್ಲರೂ ದುಃಖವನ್ನು ತಡೆಯಲಾರದೆ ಗಟ್ಟಿಯಾಗಿ ಅಳುವುದಕ್ಕಾರಂಭಿಸಿದರು. ಈ ರೋದನಧ್ವನಿಯು ಸಿಂಹಗಳ ಕೂಗಿನಂತೆ ಅತಿ ಪ್ರಬಲವಾಗಿ ಆ ಪರ್ವತದ ನಾಲ್ಕು ಕಡೆಗಳಲ್ಲಿಯೂ ಪ್ರತಿಧ್ವನಿಯನ್ನು ಹೊರಡಿಸಿತು. ಮಹಾಬಲಾಢ್ಯರಾದ ಈ ಅಣ್ಣ ತಮ್ಮಂದಿರೆಲ್ಲರೂ ತಂದೆಗೆ ಜಲತರ್ಪಣವನ್ನು ಬಿಡುವಾಗ, ರೋದಿಸುತ್ತಿದ್ದುದರಿಂದುಂಟಾದ ದೊಡ್ಡ ದೀನಧ್ವನಿಯನ್ನು ಕೇಳಿ ಸೈನಿಕರೆಲ್ಲರಿಗೂ ಭಯವುಂಟಾಯಿತು. ಆಗ ಅವರು ಒಬ್ಬರಿಗೊಬ್ಬರು "ಓಹೋ! ಭರತನು ರಾಮನನ್ನು ಸೇರಿದಹಾಗಿದೆ. ಅವರೆಲ್ಲರೂ ಒಂದಾಗಿ ಸೇರಿ ತಂದೆಯ ಮರಣವನ್ನು ಕುರಿತು ದುಃಖದಿಂದ ಗೋಳಿಡುತ್ತಿರುವರು. ಈ ಮಹಾ ಧ್ವನಿಯು ಅಲ್ಲಿಂದಲೇ ಹೊರಟುಬರುವುದು. ಇದಕ್ಕೆ ಸಂದೇಹವಿಲ್ಲ" ಎಂದರು. ಆಗಲೇ ಅವರೆಲ್ಲರೂ ತಮ್ಮ ತಮ್ಮ ಬಿಡಾರಗಳನ್ನು ಬಿಟ್ಟು ಎಲ್ಲರೂ ಒಟ್ಟಾಗಿ ಸೇರಿ, ಆ ದೀನ ಧ್ವನಿಯು ಹೊರಟುಬಂದ ಕಡೆಗಿದಿರಾಗಿ ಬಹುವೇಗದಿಂದ ಬರುತ್ತಿದ್ದರು. ರಾಮನ ಬಳಿಗೆ ಹೋಗುವಾಗ ವಾಹನಾದಿಗಳನ್ನು ಬಿಟ್ಟು ಕಾಲು ನಡೆಯಿಂದಲೇ ಹೋಗಬೇಕೆಂದೆಣಿಸಿ ಕೆಲವರು ನಡೆದೇ ಹೋಗುತ್ತಿದ್ದರು. ನಡೆಯುವುದಕ್ಕೆ ಶಕ್ತಿಯಿಲ್ಲದ ಮತ್ತೆ ಕೆಲವರು ವಾಹನಗಳನ್ನೇರಿ ಹೊರಟರು. ಕೆಲವರು ಕುದುರೆಗಳನ್ನೂ, ಕೆಲವರು ಆನೆಗಳನ್ನೂ, ಕೆಲವರು ಅಲಂಕೃತವಾದ ರಥಗಳನ್ನೂ ಏರಿ ಹೊರಟರು. ರಾಮನು ಕಾಡಿಗೆ ಹೋಗಿ ಬಹು ಸ್ವಲ್ಪಕಾಲವಾಗಿದ್ದರೂ, ಆ ಜನರಿಗೆ ರಾಮನನ್ನು ನೋಡಬೇಕೆಂಬ ಆತುರವು ಆತನನ್ನಗಲಿ ಎಷ್ಟೋ ದಿವಸಗಳಾದಂತೆ ತೋರುತ್ತಿತ್ತು. ಎಲ್ಲರೂ ಆತ್ಯಾತುರದಿಂದ ಆಶ್ರಮದ ಕಡೆಗೆ ಹೊರಟರು. ಆ ಆಶ್ರಮದಲ್ಲಿ ಅಣ್ಣತಮ್ಮಂದಿರೆಲ್ಲರೂ ಒಂದಾಗಿ ಕಲೆತು ಈ

ಮಹಾ ಸಂಭ್ರಮವನ್ನು ನೋಡಬೇಕೆಂಬ ಕುತೂಹಲವು ಒಬ್ಬೊಬ್ಬರ ಮನಸ್ಸಿನಲ್ಲಿಯೂ ಮಿತಿಮೀರಿ ಉಕ್ಕಿಬರುತ್ತಿತ್ತು. ಇವರು ಹೋಗುತ್ತಿದ್ದಾಗ ಕುದುರೆಯ ಗೊರಸಲಿನ ಧ್ವನಿಗಳೂ, ಚಕ್ರನೇಮಿಸ್ವನಗಳೂ, ದಿಕ್ಕುಗಳೆಲ್ಲವನ್ನೂ ವ್ಯಾಪಿಸಿತು. ಆಗ ಆ ಬೆಟ್ಟದ ತಪ್ಪಲುಗಳಲ್ಲಿ ನಡೆಯುತ್ತಿದ್ದ ಆನೆ ಕುದುರೆ ಮೊದಲಾದುವುಗಳ ಪದಹತಿಗಳಿಂದಲೂ, ರಥ ಚಕ್ರಗಳ ಬಳೆಗಳು ನೆಲದ ಮೇಲೆ ಉಜ್ಜುವುದರಿಂದಲೂ ಉಂಟಾದ ಮಹಾಧ್ವನಿಯು, ವರ್ಷಾಕಾಲದಲ್ಲಿ ಮೇಘಪರಂಪರೆಗಳು ಆಕಾಶದಲ್ಲಿ ಬಂದು ಸೇರುವುದರಿಂದ ಹೊರಡುವ ಮಹಾಧ್ವನಿಯಂತೆ ಸುತ್ತಲೂ ಮೊಳಗುತ್ತಿತ್ತು. ಅದನ್ನು ಕೇಳಿ ಆ ಬೆಟ್ಟದ ಮೇಲಿದ್ದ ಆನೆಗಳೆಲ್ಲವೂ ಭಯಪಟ್ಟು ತಮ್ಮ ತಮ್ಮ ಹೆಣ್ಣಾನೆಗಳೊಡನೆ ಕೂಡಿ ದಿಕ್ಕುದಿಕ್ಕಿಗೆ ಓಡಿ ಆ ಪ್ರದೇಶವನ್ನೇ ಬಿಟ್ಟು ಬೇರೆ ಬೇರೆ ಕಾಡುಗಳಲ್ಲಿ ಸೇರಿಕೊಂಡುವು. ಆ ಆನೆಗಳು ಹೀಗೆ ಭಯದಿಂದ ಮೈಮರೆತು ಓಡುತ್ತಿರುವಾಗ, ರಾಮದರ್ಶನದಿಂದುಂಟಾದ ಹರ್ಷವು ಅವುಗಳಿಗೆ ಮದವುಡುಗದಂತೆ ಮಾಡಿದ್ದುದರಿಂದ, ಅವುಗಳ ಮದದ ವಾಸನೆಯು, ಆ ವನದ ಸುತ್ತಲೂ ವ್ಯಾಪಿಸಿಕೊಂಡಿತ್ತು. ಹಂದಿಗಳು, ತೋಳಗಳು, ಕಾಡೆಮ್ಮೆಗಳು, ಕಪಿಗಳು, ಹಾವುಗಳು, ಹುಲಿಕರಡಿಗಳು, ಜಿಂಕೆಗಳು, ಕಡವೆಗಳು, ಗೋಕರ್ಣಗಳು, ಮೊದಲಾದ ವನಮೃಗಗಳೆಲ್ಲವೂ ಬೆದರಿ ದಿಕ್ಕುದಿಕ್ಕಾಗಿ ಓಡುತ್ತಿದ್ದವು. ಹಾಗೆಯೇ ಚಕ್ರವಾಕಗಳು, ನೀರುಕೋಳಿಗಳು, ಹಂಸಗಳು, ಕಾರಂಡವಗಳು, ದೊಡ್ಡಕೊಕ್ಕರೆಗಳು, ಗಂಡುಕೋಗಿಲೆಗಳು, ಕ್ರೌಂಚಗಳು, ಇವೇ ಮೊದಲಾದ ಜಂತುಗಳೆಲ್ಲವೂ ಈ ಕೋಲಾಹಲಕ್ಕೆ ಬೆದರಿ ಮೈಮರೆತು ಪ್ರಜ್ಞೆತಪ್ಪಿ ಅಲ್ಲಲ್ಲಿ ಹುದುಗಿಕೊಳ್ಳುತ್ತಿದ್ದುವು. ಹೀಗೆ ಭಯದಿಂದ ತತ್ತಳಿಸುತ್ತಿರುವ ಪಕ್ಷಿಗಳಿಂದ ಆಕಾಶವೆಲ್ಲವೂ ತುಂಬಿಹೋಯಿತು. ಅಲ್ಲಿನ ಭೂಭಾಗವೆಲ್ಲವೂ ಭರತನ ಸೈನಿಕರಿಂದ ತುಂಬಿತ್ತು. ಹೀಗೆ ಭೂಮ್ಯಾಕಾಶಗಳೆರಡೂ ಮುಚ್ಚಿಹೋಗಿ ವಿಚಿತ್ರವಾಗಿ ಕಾಣುತ್ತಿತ್ತು. ಕೊನೆಗೆ ಈ ಸೈನಿಕರೆಲ್ಲರೂ ಬಹು ಸಂಭ್ರಮದಿಂದ ರಾಮನ ಪರ್ಣಶಾಲೆಯನ್ನು ಸೇರಿದರು. ಅಲ್ಲಿ ಮಹಾಯಶಸ್ವಿಯಾಗಿ, ಯಾವ ಶತ್ರುಗಳನ್ನಾದರೂ ನಿಮಿಷಮಾತ್ರದಲ್ಲಿ ನಿಗ್ರಹಿಸತಕ್ಕ ಅದ್ಭುತಪರಾಕ್ರಮವುಳ್ಳ ಪುರುಷಶ್ರೇಷ್ಠನಾದ ರಾಮನು ಬರೀ ನೆಲದ ಮೇಲೆ ಕುಳಿತಿರುವುದನ್ನು ಕಂಡರು. ಆಗ ಅವರೆಲ್ಲರಿಗೂ ಮನಸ್ಸಿನಲ್ಲಿ ಮಹಾ ಸಂಕಟವುಂಟಾಗಲು, ಒಬ್ಬರಿಗೊಬ್ಬರು ಕೈಕೇಯಿಯನ್ನೂ,

ಮಂಥರೆಯನ್ನೂ ಬಾಯಿಗೆ ಬಂದ ಹಾಗೆ ಬೈಯುತ್ತ, ಹಾಗೆಯೇ ಮುಂದೆ ಹೋಗಿ ರಾಮನ ಸಮೀಪವನ್ನು ಸೇರಿದರು. ಎಲ್ಲರ ಕಣ್ಣುಗಳಲ್ಲಿಯೂ ನೀರು ಸುರಿಯಲಾರಂಭಿಸಿತು. ಹೀಗೆ ದುಃಖಿತರಾಗಿ ಕಣ್ಣೀರುಬಿಡುತ್ತಿರುವ ಆ ಜನರ ವ್ಯಸನವನ್ನು ನೋಡಿ, ಧರ್ಮಾತ್ಮನಾದ ರಾಮನು ಅವರೆಲ್ಲರ ಸಮೀಪಕ್ಕೂ ಬಂದು, ತಂದೆತಾಯಿಗಳು ತಮ್ಮ ಮಕ್ಕಳನ್ನು ಹೇಗೋ ಹಾಗೆ ಒಬ್ಬೊಬ್ಬರನ್ನೂ ಬಹು ಪ್ರೀತಿಯಿಂದಪ್ಪಿಕೊಂಡು ಸಮಾಧಾನಪಡಿಸಿದನು. ಆಲಿಂಗನಾರ್ಹರಲ್ಲದ ಮತ್ತೆ ಕೆಲವು ಸೇವಕರು, ಮುಂದೆ ಬಂದು ರಾಮನಿಗೆ ಸಾಷ್ಟಾಂಗ ಪ್ರಣಾಮಗಳನ್ನು ಮಾಡಿದರು. ರಾಮನು ಅವರೆಲ್ಲರನ್ನೂ ಅವರವರ ಸ್ಥಿತಿಗೆ ತಕ್ಕಂತೆ ಮನ್ನಿಸಿದನು. ಆಗಾಗ ನಾಲ್ಕು ಮಂದಿ ಅಣ್ಣತಮ್ಮಂದಿರೂ ಸೀತೆಯೂ ತಮಗುಂಟಾದ ಪರಸ್ಪರವಿಯೋಗವನ್ನೂ, ತಂದೆಯ ಮರಣವನ್ನೂ ನೆನೆಸಿಕೊಂಡು ದುಃಖದಿಂದ ಗೋಳಿಡುತ್ತಿರಲು, ಆ ಪ್ರಲಾಪಧ್ವನಿಯು ಭೂಮ್ಯಾಕಾಶಗಳಲ್ಲಿಯೂ, ಬೆಟ್ಟದ ಗವಿಗಳಲ್ಲಿಯೂ, ನಾನಾ ದಿಕ್ಕುಗಳಲ್ಲಿಯೂ ಪ್ರತಿಧ್ವನಿಯನ್ನುಂಟುಮಾಡುತ್ತ ಮೃದಂಗಧ್ವನಿಯಂತೆ ಗಂಭೀರವಾಗಿ ಸುತ್ತಲೂ ವ್ಯಾಪಿಸಿತು.

ಇಲ್ಲಿಗೆ ನೂರೆರಡನೆಯ ಸರ್ಗವು

ರಾಮನು ತನ್ನ ಮಾತೃಜನವನ್ನೂ, ವಸಿಷ್ಠನನ್ನೂ, ಇತರ ಮಂತ್ರಿಗಳೇ ಮೊದಲಾದವರನ್ನೂ ನೋಡಿ ಮಾತಾಡಿಸಿದುದು.

ಇತ್ತಲಾಗಿ ವಸಿಷ್ಠನು ಕೌಸಲ್ಯೆಯೇ ಮೊದಲಾದ ದಶರಥನ ಪತ್ನಿಯರನ್ನು ಮುಂದಿಟ್ಟುಕೊಂಡು, ರಾಮನನ್ನು ನೋಡಬೇಕೆಂಬ ಆತುರದಿಂದ ಬರುತಿದ್ದನು. ಈತನೊಡನೆ ರಾಜಪತ್ನಿಯರು ಮಂದಗಮನದಿಂದ ನಡೆದುಬರುತ್ತ ದಾರಿಯಲ್ಲಿ ಮಂದಾಕಿನೀನದಿಯನ್ನು ಕಂಡು ಅಲ್ಲಿ ರಾಮಾದಿಗಳು ಬಂದಿಳಿಯುತಿದ್ದ ಘಟ್ಟವನ್ನೂ ಕಂಡರು. ಅದನ್ನು ನೋಡಿದೊಡನೆಯೇ ಕೌಸಲ್ಯೆಯ ಕಣ್ಣುಗಳಲ್ಲಿ ದುಃಖಬಾಷ್ಪವು ಉಕ್ಕಿಬಂದಿತು. ಆಗ ಆಕೆಯು ಸಮೀಪದಲ್ಲಿದ್ದ ಸುಮಿತ್ರೆಯನ್ನೂ, ಇತರ ರಾಜಸ್ತ್ರೀಯರನ್ನೂ ನೋಡಿ “ಎಲೆ ಸುಮಿತ್ರೆ! ರಾಜ್ಯದಿಂದ

ಹೊರಡಿಸಲ್ಪಟ್ಟು ಈಗ ಕಾಡಿನಲ್ಲಿ ದಿಕ್ಕಿಲ್ಲದವರಂತೆ ಅಲೆಯುತ್ತಿರುವ ನಮ್ಮ ಸೀತಾರಾಮಲಕ್ಷ್ಮಣರು ಪ್ರತಿದಿನವೂ ಬಂದು ಸ್ನಾನಮಾಡಿ ಹೋಗುವ ತೀರ್ಥಘಟ್ಟವನ್ನು ನೋಡಿದೆಯಾ? ಇತರರಿಗೆ ದುಃಖಕರವಾದ ಕಾರ್ಯವನ್ನು ಮನಸ್ಸಿನಿಂದಲೂ ಸ್ಮರಿಸಲಾರದ ಆ ಮಹಾತ್ಮರಿಗೇ ಎಂತಹ ಮಹಾಕಷ್ಟವು ಬಂದೊದಗಿರುವುದು ನೋಡು? ಎಲೆ ಸುಮಿತ್ರೆ! ಭಾಗ್ಯಹೀನೆಯಾದ ನನ್ನ ಹೊಟ್ಟೆಯಲ್ಲಿ ಹುಟ್ಟಿದ ರಾಮನ ಸ್ಥಿತಿಯು ಹಾಗಿರಲಿ? ಅವನಿಗಾಗಿ ನಿನ್ನ ಮಗನಾದ ಲಕ್ಷ್ಮಣನೂ ಕೂಡ ಅಹೋರಾತ್ರಿಯಲ್ಲಿಯೂ ಬೇಸರವಿಲ್ಲದೆ, ತಾನೇ ಬಂದು ಇಲ್ಲಿಂದ ನೀರನ್ನು ಸಾಗಿಸಿಕೊಂಡು ಹೋಗುವನು! ನಿನ್ನ ಮಗನು ಈ ಹೀನಕೃತ್ಯವನ್ನು ಮಾಡುತಿದ್ದರೂ ಇದರಿಂದ ಆತನಿಗೆ ಕೀರ್ತಿಯೇ ಹೊರತು ನಿಂದ್ಯನಾಗಲಾರನು. ಹಿರಿಯಣ್ಣನು ತಂದೆಗೆ ಸಮಾನನೆಂದು ಹೇಳಲ್ಪಡುವುದರಿಂದ, ಆತನಿಗಾಗಿ ಯಾವ ಕೆಲಸವನ್ನು ಮಾಡಿದರೂ ಕೀರ್ತಿಕರ ವಾಗಿಯೇ ಇರುವುದು. ಒಂದುವೇಳೆ ಭರತನ ಪ್ರಾರ್ಥನೆಯನ್ನಂಗೀಕರಿಸಿ ರಾಮನು ಹಿಂತಿರುಗಿ ಬಂದು ರಾಜ್ಯದಲ್ಲಿ ನೆಲಸಿದರೆ, ಆಮೇಲೆ ನಿನ್ನ ಮಗನಿಗೆ ಈ ಕಷ್ಟವು ತಪ್ಪಬಹುದು. ಇಂತಹ ಕಷ್ಟಕಾರ್ಯಗಳಿಗೆ ಅರ್ಹನಲ್ಲದ ನಿನ್ನ ಮಗನು, ಹಾಗೆ ಸುಖವಾಗಿರತಕ್ಕ ಕಾಲವು ಬರುವುದೆ? ಅದನ್ನು ನೋಡುವ ಭಾಗ್ಯವು ನಮಗುಂಟಾಗುವುದೇ? ಇದುವರೆಗೆ ಅನುಭವಿಸಿದುದು ಹೋಗಲಿ! ಇನ್ನುಮೇಲಾದರೂ ಈ ಕಷ್ಟವು ತಪ್ಪಲಿ!" ಎಂದು ಹೇಳಿ ದುಃಖಿಸುತಿದ್ದಳು. ಆಮೇಲೆ ಮತ್ತೊಂದುಕಡೆಗೆ ತಿರುಗಿ ನೋಡಿದಾಗ, ಅಲ್ಲಿ ನೆಲದಮೇಲೆ ದಕ್ಷಿಣಾ ಗ್ರವಾಗಿ ಇಡಲ್ಪಟ್ಟಿದ್ದ ದರ್ಭಕೂರ್ಚಗಳನ್ನೂ, ಅದರಮೇಲಿದ್ದ ಪಿಂಡವನ್ನೂ ನೋಡಿ, ತಂದೆಯ ಪ್ರೀತ್ಯರ್ಥವಾಗಿ ರಾಮನು ಭಕ್ತಿಯಿಂದಿಟ್ಟ ಪಿಂಡವೇ ಅದಾ ಗಿರಬಹುದೆಂದು ತಿಳಿದು ಸಮೀಪದಲ್ಲಿದ್ದ ರಾಜಪತ್ನಿಯರನ್ನು ನೋಡಿ "ಇದೋ! ಇಲ್ಲಿ ನೋಡಿರಿ! ಇಕ್ಷ್ವಾಕುವಂಶಕ್ಕೆ ಪ್ರಭುವಾಗಿಯೂ, ಮಹಾತ್ಮನಾಗಿಯೂ ಇರುವ ದಶರಥನಿಗಾಗಿ ರಾಮನು ಭಕ್ತಿಯಿಂದ ಇಟ್ಟ ಪಿಂಡವು ಕಾಣುತ್ತಿರು ವುದು. ಅಯ್ಯೋ! ದೇವೇಂದ್ರನಿಗೆ ಸಮಾನನಾಗಿ, ಸಮಸ್ತಲೋಕಪ್ರಭುವಾಗಿ ಮಹಾತ್ಮನೆನಿಸಿಕೊಂಡು ಲೋಕದಲ್ಲಿ ಅನುಭವಿಸಬಹುದಾದ ಸಮಸ್ತ ಭೋಗ ಗಳನ್ನೂ ಅನುಭವಿಸಿದ ದಶರಥಮಹಾರಾಜನಿಗೆ, ಈಗ ಈ ಇಂಗಳದ ಹಿಂಡಿಯು ಭೋಜ್ಯವಸ್ತುವಾಯಿತೇ! ಆ ರಾಜಾಧಿರಾಜನಿಗೆ ಎಂದಿಗೂ ಇದು ಉ...ತವಾದ

ಆಹಾರವೆಂದು ನನಗೆ ತೋರಲಿಲ್ಲ! ಆತನು ಚತುಸ್ಸಮುದ್ರಾಂತವಾದ ಈ ಸಮಸ್ತಭೂಮಿಯನ್ನೂ ಏಕಾಧಿಪತ್ಯದಿಂದಾಳಿದವನಲ್ಲವೇ? ಆತನು ದೇವೇಂದ್ರನಿಗಿಂತಲೂ ಅಧಿಕವಾದ ಭೋಗಗಳನ್ನು ಅನುಭವಿಸಿದನಲ್ಲವೇ? ಇಂತಹ ಮಹಾಪ್ರಭುವು ಈ ಪಿಂಡವನ್ನು ಹೇಗೆ ತಾನೇ ಭುಜಿಸಬಲ್ಲನು. ಅಯ್ಯೋ! ಲೋಕದಲ್ಲಿ ಇದಕ್ಕಿಂತಲೂ ಇನ್ನು ದುಃಖವೇನುಂಟು? ರಾಜಪುತ್ರನಾಗಿ, ಆಗರ್ಭಶ್ರೀಮಂತನಾಗಿ ಹುಟ್ಟಿದ ರಾಮನು, ತನ್ನ ತಂದೆಗೆ ಪಿಂಡವನ್ನು ಹಾಕುವುದಕ್ಕೂ ಗತಿಯಿಲ್ಲದೆ, ಈಗ ಪಿತೃಪ್ರೀತ್ಯರ್ಥವಾಗಿ ಈ ಇಂಗಳದ ಹಿಂಡಿಯನ್ನು ಕಲೆಸಿ ಪಿಂಡವನ್ನಿಡಬೇಕಾಗಿ ಬಂದಿತಲ್ಲವೇ? ರಾಮನು ತಂದೆಯ ಶ್ರಾದ್ಧಕ್ಕಾಗಿ ಈ ವಿಧವಾದ ಪಿಂಡವಿಟ್ಟಿರುವುದನ್ನು ನೋಡಿಯೂ ನನ್ನ ಎದೆಯು ಸಹಸ್ರಭಾಗವಾಗಿ ಸೀಳಿಹೋಗದಿರುವುದಲ್ಲಾ! ನಾವು ಸುಮ್ಮನೆ ಚಿಂತಿಸಿದುದರಿಂದೇನು? ಕಾಲಗತಿಯಿಂದ ಇದೂ ನ್ಯಾಯವಾಗಿಯೇ ಇರುವುದು. ಲೋಕದಲ್ಲಿ ಮನುಷ್ಯನು ಯಾವ ಯಾವ ಆಹಾರವನ್ನು ಭುಜಿಸುವನೋ ಅದೇ ಆಹಾರವನ್ನು ತನ್ನ ಇಷ್ಟದೇವತೆಗಳಿಗೂ ಸಲ್ಲಿಸುವನೆಂಬ ಲೋಕಪ್ರಸಿದ್ಧವಾದ ಈ ಶ್ರುತಿವಾಕ್ಯವು ಈಗ ನನಗೆ ಚೆನ್ನಾಗಿ ಪ್ರತ್ಯಕ್ಷಸಿದ್ಧವಾಯಿತು" ಎಂದಳು. ಹೀಗೆ ನಾನಾವಿಧದಲ್ಲಿ ಪ್ರಲಾಪಿಸುತಿದ್ದ ಕೌಸಲ್ಯೆಯನ್ನು, ಇತರ ರಾಜಪತ್ನಿಯರೆಲ್ಲರೂ ಸಮಾಧಾನಪಡಿಸಿ, ಮುಂದೆ ಕರೆದುಕೊಂಡು ಹೋದರು. ಆಶ್ರಮ ಸಮೀಪವನ್ನು ಸೇರಿದೊಡನೆಯೇ ಅಲ್ಲಿ ಸ್ವರ್ಗದಿಂದ ಜಾರಿಬಿದ್ದ ದೇವತೆಯಂತೆ ತೋರುತಿದ್ದ ರಾಮನನ್ನು ನೋಡಿದರು. ಸಮಸ್ತ ರಾಜಭೋಗಗಳನ್ನೂ ಬಿಟ್ಟು ಕಾಡಿನಲ್ಲಿ ಅಲೆಯುತ್ತಿರುವ ಆತನ ಅವಸ್ಥೆಯನ್ನು ನೋಡಿ ರಾಜಮಾತೆಯರೆಲ್ಲರೂ ಅಳುವುದಕ್ಕಾರಂಭಿಸಿದರು. ಎಲ್ಲರ ಕಣ್ಣುಗಳಿಂದಲೂ ನೀರು ಸುರಿಯುತಿತ್ತು. ಉಚ್ಚಸ್ವರದಿಂದ ಪ್ರಲಾಪಿಸುವುದಕ್ಕಾರಂಭಿಸಿದರು. ಆಗ ರಾಮನು ತಟ್ಟನೆ ಎದ್ದುಬಂದು, ಆ ಮಾತೆಯರೆಲ್ಲರ ಕಾಲುಗಳನ್ನೂ ಹಿಡಿದು ನಮಸ್ಕರಿಸಿದನು. ಸತ್ಯಸಂಧನಾಗಿಯೂ, ಪುರುಷಶ್ರೇಷ್ಠನಾಗಿಯೂ ಇರುವ ರಾಮನು ಹೀಗೆ ವಿನಯದಿಂದ ಬಂದು ಕಾಲಮೇಲೆ ಬಿದ್ದು ಸಾಷ್ಟಾಂಗಪ್ರಣಾಮವನ್ನು ಮಾಡಿದುದನ್ನು ನೋಡಿ, ಕೌಸಲ್ಯಾದಿಗಳೆಲ್ಲರೂ ಕೋಮಲವಾದ ಬೆರಳುಳ್ಳ ತಮ್ಮ ತಮ್ಮ ಮೃದುವಾದ ಕೈಯಿಂದ ರಾಮನ ಬೆನ್ನ ಮೇಲಿನ ಧೂಳಿಗಳನ್ನೊರಸಿದರು. ಹಾಗೆಯೇ ಲಕ್ಷ್ಮಣನೂ ದುಃಖದಿಂದ ಮುಂದೆಬಂದು ಸಮಸ್ತ

ಮಾತೆಯರಿಗೂ ನಮಸ್ಕರಿಸಿದನು. ರಾಜಸ್ತ್ರೀಯರೆಲ್ಲರೂ ಶುಭಲಕ್ಷಣವುಳ್ಳ ಆ ಲಕ್ಷ್ಮಣನನ್ನೂ, ರಾಮನಲ್ಲಿ ಹೇಗೋ ಹಾಗೆಯೇ ಪ್ರೀತಿಯಿಂದ ಮನ್ನಿಸಿದರು. ಆಮೇಲೆ ಸೀತೆಯೂ ದುಃಖಿತಳಾಗಿ ಕಣ್ಣೀರು ಬಿಡುತ್ತ ಮುಂದೆ ಬಂದು ಮಾತೆಯರೆಲ್ಲರಿಗೂ ನಮಸ್ಕರಿಸಿ ನಿಂತಿದ್ದಳು. ವನವಾಸದಿಂದ ಕಂದಿದ ಸೀತೆಯ ದೇಹವನ್ನು ಕೌಸಲ್ಯೆಯು ಪುತ್ರ ವಾತ್ಸಲ್ಯದಿಂದ ಅಪ್ಪಿಕೊಂಡು “ ಹಾ ! ಏನು ಕಷ್ಟವು ಬಂದೊದಗಿತು ! ರಾಜಋಷಿಯಾದ ಜನಕರಾಜನ ಹೊಟ್ಟೆಯಲ್ಲಿ ಹುಟ್ಟಿ, ದಶರಥರಾಜನಿಗೆ ಸೊಸೆಯಾಗಿ ವೀರಾಗ್ರೇಸರನಾದ ರಾಮನಿಗೆ ಪ್ರಿಯಪತ್ನಿಯಾದ ನಿನಗೂ ಈ ಕಷ್ಟವು ಬಂದೊದಗಿತೆ? ಅಯ್ಯೋ ! ಸೀತೆ ! ನೀನು ಈ ನಿರ್ಜನವಾದ ವನದಲ್ಲಿ ಹೇಗೆ ವಾಸಮಾಡುವೆ? ಬಿಸಿಲಿಂದ ಕಂದಿದ ಕಮಲದಂತೆಯೂ, ನಲುಗಿದ ನೈದಿಲೆಯಂತೆಯೂ, ಕೊಳೆಹಿಡಿದ ಚಿನ್ನದಂತೆಯೂ, ಮೋಡದಿಂದ ಮರೆಸಲ್ಪಟ್ಟ ಚಂದ್ರಕಳೆಯಂತೆಯೂ ಕಾಂತಿಗುಂದಿದ ನಿನ್ನ ಮುಖವನ್ನು ನೋಡಿದರೆ, ಅಗ್ನಿಯು ತನಗಾಶ್ರಯವಾದ ಮರವನ್ನೇ ಸುಡುವಂತೆ, ವ್ಯಸನವೆಂಬ ಅರಣಿಯಿಂದ ನನ್ನ ದೇಹದಲ್ಲಿ ಹುಟ್ಟಿದ ಈ ದುಃಖಾಗ್ನಿಯು ಮನಸ್ಸಿನಲ್ಲಿ ವ್ಯಾಪಿಸಿ ದೇಹವೆಲ್ಲವನ್ನೂ ದಹಿಸುತ್ತಿರುವುದು ” ಎಂದಳು. ಇತ್ತಲಾಗಿ ಕೌಸಲ್ಯೆಯು ಹೀಗೆ ದುಃಖದಿಂದ ಪ್ರಲಾಪಿಸುತ್ತಿರುವಾಗಲೇ ರಾಮನು ಮುಂದೆಬಂದು ಆಕೆಗೂ, ವಸಿಷ್ಠನಿಗೂ ಪಾದಗಳನ್ನು ಹಿಡಿದು ನಮಸ್ಕರಿಸಿದನು. ಅಗ್ನಿಯಂತೆ ಮಹಾತೇಜಸ್ವಿಯಾಗಿ ಜ್ವಲಿಸುತ್ತಿರುವ ಕುಲಪುರೋಹಿತನಾದ ಆ ವಸಿಷ್ಠನಿಗೆ ಇಂದ್ರನು ಬೃಹಸ್ಪತಿಗೆ ನಮಸ್ಕರಿಸುವಂತೆ ರಾಮನು ವಿನಯದಿಂದ ನಮಸ್ಕರಿಸಿ, ಆತನ ಸಮೀಪದಲ್ಲಿಯೇ ಕುಳಿತಿದ್ದನು. ಇವರಿಬ್ಬರೂ ಕುಳಿತಮೇಲೆ ಭರತನೂ, ಇತರ ಮಂತ್ರಿಗಳೂ, ಪುರವಾಸಿಗಳಲ್ಲಿ ಪ್ರಮುಖರಾದವರೂ, ಸೈನಿಕರೂ, ಧಾರ್ಮಿಕರಾದ ಇತರ ಜನರೂ, ಒಬ್ಬೊಬ್ಬರಾಗಿ ಸುತ್ತಲೂ ಕುಳಿತರು. ಆಗ ಭರತನು ರಾಮನ ಸಮೀಪದಲ್ಲಿ ಕುಳಿತು, ತಾಪಸವೇಷದಿಂದ ಜ್ವಲಿಸುತ್ತಿರುವ ಆ ರಾಮನನ್ನು ನೋಡಿ ಬ್ರಹ್ಮನ ಮುಂದೆ ದೇವೇಂದ್ರನು ಹೇಗೋಹಾಗೆ ವಿನಯದಿಂದ ಕೈಮುಗಿದು ಕುಳಿತಿದ್ದನು. ಆಗ ಅಲ್ಲಿ ನೆರೆದಿದ್ದ ಸಾಧುಸಮೂಹವೆಲ್ಲವೂ, ತಮ್ಮ ತಮ್ಮ ಮನಸ್ಸಿನಲ್ಲಿ ಕುತೂಹಲದಿಂದ “ ಈಗ ಭರತನು ರಾಮನನ್ನು ಪ್ರಸನ್ನನನ್ನಾಗಿ ಮಾಡಿ ಹಿಂತಿರುಗಿಸುವುದಕ್ಕೆ ಏನುಪಾಯವನ್ನು ಮಾಡುವನೋ ! ಯಾವ ಮಾತುಗಳ

ನ್ನಾಡುವನೋ! ಯಾವ ಚಾತುರ್ಯದಿಂದ ಆತನ ಮನಸ್ಸನ್ನು ಆಕರ್ಷಿಸು ವನೋ!" ಎಂದು ಏಕಾಗ್ರಚಿತ್ತರಾಗಿ ಆತುರದಿಂದ ನಿರೀಕ್ಷಿಸುತಿದ್ದರು. ಅಮೋಘ ಧೈರ್ಯವುಳ್ಳ ರಾಮನೂ, ಮಹಾನುಭಾವನಾದ ಲಕ್ಷ್ಮಣನೂ, ಧಾರ್ಮಿಕನಾದ ಭರತನೂ ಈ ಮೂವರೂ ಮಿತ್ರರಿಂದ ಪರಿವೃತರಾಗಿ ತಾವು ನಡುವೆ ಕುಳಿತಿರಲು, ಯಾಗದಲ್ಲಿ ಶ್ರೋತ್ರಿಯರಾದ ಅನೇಕ ಸದಸ್ಯರಿಂದ ಪರಿವೇಷ್ಟಿತ ವಾದ ತ್ರೇತಾಗ್ನಿಯಂತೆ, ಕಾಂತಿ ವಿಶೇಷದಿಂದ ಕಂಗೊಳಿಸುತಿದ್ದರು.

ಇಲ್ಲಿಗೆ ನೂರಮೂರನೆಯ ಸರ್ಗವು.

ಭರತನು ರಾಜ್ಯವನ್ನು ಕೈಕೊಳ್ಳಬೇಕೆಂದು ರಾಮನನ್ನು ಪ್ರಾರ್ಥಿಸಿದುದು. ರಾಮನು ಸಮಾಧಾನವನ್ನು ಹೇಳಿದುದು.

ಕೈಗೆ ಸಿಕ್ಕಿದ ರಾಜ್ಯವನ್ನೂ ಬಿಟ್ಟು, ಜಟಾವಲ್ಕಲಗಳನ್ನು ಧರಿಸಿ, ಭರತನು ಹೀಗೆ ತನ್ನನ್ನು ಹುಡುಕಿಕೊಂಡು ಬಂದಿರುವುದನ್ನು ನೋಡಿ, ಆಗ ರಾಮನು ತನ್ನಲ್ಲಿ ಆತನಿಗಿರುವ ಭಕ್ತಿವಿಶ್ವಾಸಗಳನ್ನು ನೋಡಿ ಮನಸ್ಸಿನಲ್ಲಿಯೇ ಹಿಗ್ಗುತ್ತ ಲಕ್ಷ್ಮಣನೊಡಗೂಡಿ ಭರತನನ್ನು ಮಾತಾಡಿಸುವುದಕ್ಕೆ ತೊಡಗಿ ದನು. "ವತ್ಸ ಭರತನೆ! ಇದೇನು? ನಿನಗೆ ಈ ನಾರುಮಡಿಯೇನು? ಈ ಜಟೆ ಗಳೇನು? ಈ ಕೃಷ್ಣಾಜಿನವೇನು? ಈ ಕಾಡಿಗೇಕೆ ಬಂದೆ? ಇದಕ್ಕೆ ಕಾರಣ ವನ್ನು ತಿಳಿಯಬೇಕೆಂದು ನನಗೆ ಬಹಳ ಕುತೂಹಲವಿರುವುದು. ನೀನು ರಾಜ್ಯ ವನ್ನು ಬಿಟ್ಟುಬರಬಹುದೆ?" ಎಂದು ಮೃದುವಾಕ್ಯಗಳಿಂದಲೇ ಕೇಳುತಿದ್ದನು. ಎಷ್ಟು ಕೇಳಿದರೂ ಆ ಭರತನು ದುಃಖೋದ್ರೇಕದಿಂದ ಮಾತಾಡಲಾರದೆ ಸುಮ್ಮನಿರಲು, ಪುನಃ ರಾಮನು ಆ ಭರತನನ್ನು ಕೈನೀಡಿ ಅಪ್ಪಿಕೊಂಡು "ವತ್ಸನೆ, ಇದೇಕೆ ಮಾತಾಡದಿರುವೆ? ರಾಜ್ಯವನ್ನು ಬಿಟ್ಟು ಈ ತಾಪಸ ವೇಷವನ್ನು ಧರಿಸಿ ಈ ಕಾಡಿಗೇಕೆ ಬಂದೆ? ಬೇಗ ಹೇಳು" ಎಂದು ಬಾರಿ ಬಾರಿಗೂ ನಿರ್ಬಂಧಿಸುತಿದ್ದನು. ಆಗ ಭರತನು ರಾಮನಮುಂದೆ ಕೈಮುಗಿದು ನಿಂತು "ಅಣ್ಣಾ! ನಮ್ಮ ತಂದೆಯು ಕೋಸಲರಾಜ್ಯಕ್ಕೆ ನ್ಯಾಯವಾಗಿ

ಬಾಧ್ಯನಾದ ನಿನ್ನನ್ನು ಬಿಟ್ಟು ರಾಜ್ಯಾನರ್ಹನಲ್ಲದ ನನಗೆ ರಾಜ್ಯವನ್ನು ಕೊಡಿಸ ಬೇಕೆಂದು ಮಾಡಬಾರದ ಕಾರ್ಯವನ್ನು ಮಾಡಿಬಿಟ್ಟನು. ಇದರಿಂದ ತಾನೂ ಪುತ್ರಶೋಕಪೀಡಿತನಾಗಿ ಸ್ವರ್ಗವನ್ನು ಹೊಂದಿದನು. ಎಲೈ ಆರ್ಯನೆ! ಕೇವಲ ಸ್ತ್ರೀ ಮಾತ್ರಳಾದ ನನ್ನ ತಾಯಿಯಾದ ಕೈಕೇಯಿಯ ಮಾತಿಗೆ ಮರುಳಾಗಿ, ಈ ಮಹಾಪಾಪಕಾರ್ಯವನ್ನು ಮಾಡಿ ನಮ್ಮ ತಂದೆಯು ಲೋಕಾಪವಾದಕ್ಕೂ ಒಳಗಾದನು. ನನ್ನ ತಾಯಿಯಾದ ಕೈಕೇಯಿಯು ಇಷ್ಟು ತಂತ್ರಗಳನ್ನು ಮಾಡಿದರೂ ಅವುಗಳಿಂದ ತಾನು ವಿಧವೆಯಾಗಿ ಕುಳಿತು ಕೊಳ್ಳಬೇಕಾಯಿತೇ ಹೊರತು ಅವಳೂ ರಾಜ್ಯ ಸುಖವನ್ನನುಭವಿಸಲಿಲ್ಲ. ಸಾಯುವವರೆಗೂ ದುಃಖದಿಂದ ನರಳಬೇಕಾದ ಅವಸ್ಥೆಯು ಅವಳಿಗೆ ಬಂದಿತೇ ಹೊರತು ಬೇರೊಂದೂ ಇಲ್ಲವು. ಈ ಪಾಪಕೃತ್ಯವನ್ನು ನಡೆಸಿದುದಕ್ಕೆ ತಕ್ಕ ಫಲವನ್ನು ಆಕೆಯು ಅನುಭವಿಸದಿರಲಾರಳು. ಇದರಿಂದ ಅವಳು ಮಹಾ ಘೋರವಾದ ನರಕದಲ್ಲಿ ಬೀಳದಿರಳು. ಅಣ್ಣಾ! ಅದು ಹೇಗಾದರೂ ಹೋಗಲಿ! ಅಂತವಳ ಹೊಟ್ಟೆಯಲ್ಲಿ ಹುಟ್ಟಿ ಹೀಗೆ ಲೋಕಾಪವಾದಕ್ಕೆ ಗುರಿಯಾದ ನನ್ನನ್ನು ಅನುಗ್ರಹಿಸಬೇಕು. ನಾನು ನಿನಗೆ ದಾಸಭೂತನಾಗಿರುವೆನು. ನಿನ್ನಲ್ಲಿಯೇ ನಾನು ಶರಣಾಗತಿಯನ್ನು ಮಾಡಿರುವೆನು. ದಾಸಜನವನ್ನು ಅನುಗ್ರಹಿಸುವಂತೆ ನನ್ನನ್ನೂ ಅನುಗ್ರಹಿಸಬೇಕು. ನನ್ನ ಮಾತನ್ನು ಲಾಲಿಸಬೇಕು. ಇದೊಂದೇ ನನ್ನ ಪ್ರಾರ್ಥನೆಯು. ನೀನು ಈಗಲೇ ಅಯೋಧ್ಯೆಗೆ ಹಿಂತಿರುಗಿಬಂದು ದೇವೇಂದ್ರನಂತೆ ಪಟ್ಟಾಭಿಷೇಕವನ್ನು ಕೈಕೊಳ್ಳಬೇಕು. ಇದೋ! ಈ ಪ್ರಜೆಗಳೂ, ವಿಧವೆಯರಾದ ಈ ಮಾತೆಯರೂ, ಈ ಉದ್ದೇಶದಿಂದಲೇ ನಿನ್ನಲ್ಲಿಗೆ ಬಂದಿರುವರು. ನಮ್ಮೆಲ್ಲರನ್ನೂ ಅನುಗ್ರಹಿಸಬೇಕು. ಎಲೈ ಆರ್ಯನೇ! ನಮ್ಮ ಇಕ್ಷ್ವಾಕುವಂಶದ ಮಾನವನ್ನು ಕಾಪಾಡಿಡುವ ಭಾರವು ನಿನಗೆ ಸೇರಿದುದಲ್ಲವೆ? ನಮ್ಮ ವಂಶದಲ್ಲಿ ಜ್ಯೇಷ್ಠಾನುಕ್ರಮವಾಗಿ ಬಂದ ಈ ರಾಜ್ಯವನ್ನು ಕನಿಷ್ಠನಾದ ನಾನು ಸ್ವೀಕರಿಸಿದರೆ ನಮ್ಮ ವಂಶಮರ್ಯಾದೆ ಯನ್ನೂ ಕೆಡಿಸಿದಂತಾಗುವುದಿಲ್ಲವೆ? ಆದುದರಿಂದ ನಿನಗೆ ಯೋಗ್ಯವಾದ ರಾಜ್ಯ ವನ್ನು ನೀನೇ ಸ್ವೀಕರಿಸು. ನಮ್ಮ ವಂಶಮರ್ಯಾದೆಯನ್ನೂ ಪಾಲಿಸು. ನಿನ್ನ ಮಿತ್ರರ ಕೋರಿಕೆಗಳನ್ನೂ ಈಡೇರಿಸು. ಈಗ ವಿಧವೆಯಂತೆ ಕಳೆಗುಂದಿರುವ ಈ ಭೂದೇವಿಯು ಪತಿಯಾದ ನಿನ್ನಿಂದ ಶರತ್ಕಾಲದ ರಾತ್ರಿಯು ಚಂದ್ರನಿಂದ

ಹೇಗೋ ಹಾಗೆ ಪ್ರಕಾಶಿಸಲಿ. ಎಲೈ ಆರ್ಯನೆ! ಇದೋ! ಈ[1] ಸಮಸ್ತ ಮಂತ್ರಿಗಳೊಡಗೂಡಿ ನಾನು ಪ್ರಣಾಮಮಾಡಿ ಯಾಚಿಸುವೆನು. ನಾನು ನಿನಗೆ ಒಡಹುಟ್ಟಿದ ತಮ್ಮನೆಂದು ಮಾತ್ರವೇ ಎಣಿಸಬೇಡ. ನಿನಗೆ ನಾನು ಶಿಷ್ಯನು. ನಾನು ನಿನಗೆ ದಾಸಾನುದಾಸನು. ನನ್ನಲ್ಲಿ ಪ್ರಸನ್ನನಾಗಿ ಅನುಗ್ರಹಿಸಬೇಕು. ಎಲೈ ಪುರುಷಶ್ರೇಷ್ಠನೆ! ಇದೋ! ಇಲ್ಲಿ ನಿನ್ನಿದಿರಿಗೆ ಬಂದು ನಿಂತಿರುವವರನ್ನು ನೋಡು. ನಮ್ಮ ಪಟ್ಟಣದಲ್ಲಿ ಕುಲಪರಂಪರೆಯಿಂದ ಬಂದವರಾಗಿ, ಪೂಜ್ಯರಾಗಿ, ನಮ್ಮ ತಂದೆತಾಯಿಗಳ ಕಡೆಯವರಾಗಿರುವ ಅನೇಕ ಮಹನೀಯರೂ, ಮಂತ್ರಿ

---

[1] ಇದಕ್ಕೆ "ಏಭಿಶ್ಚ ಸಚಿವೈಸ್ಸಾರ್ಧಂ ಶಿರಸಾ ಯಾಚಿತೋ ಮಯಾ | ಭ್ರಾತುಶ್ಶಿಷ್ಯಸ್ಯ ದಾಸಸ್ಯ ಪ್ರಸಾದಂ ಕರ್ತುಮರ್ಹಸಿ" || ಎಂದು ಮೂಲವು. ಇದರ ವಿಶೇಷಾರ್ಥವೇನೆಂದರೆ:—(ಏಭಿಶ್ಚಸಚಿವೈಃ) ನಾನೊಬ್ಬನು ಕಣ್ಣೀರುಬಿಟ್ಟ ಮಾತ್ರಕ್ಕೆ ನೋಡಿ ಸಹಿಸಲಾರದ ನೀನು ಇಷ್ಟು ಜನರ ಸಂಕಟವನ್ನು ಹೇಗೆ ಸಹಿಸಬಲ್ಲೆ? ಎಂದು ಭಾವವು (ಸಚಿವೈಃ) ನಾನು ಮಾತ್ರ ಒಂದುವೇಳೆ ಯಾಚಿಸಿದರೆ ಒಡಹುಟ್ಟಿದ ತಮ್ಮನೆಂಬ ಸಲಿಗೆಯಿಂದ ನೀನು ನನ್ನ ಮಾತನ್ನು ಉಪೇಕ್ಷಿಸಿದರೂ ಉಪೇಕ್ಷಿಸಬಹುದು. ನಮ್ಮ ರಾಜ್ಯವನ್ನು ನಿರ್ವಹಿಸ ತಕ್ಕವರಾಗಿಯೂ, ಪೂಜ್ಯರಾಗಿಯೂ, ಇರುವ ಈ ಮಂತ್ರಿಗಳೇ ಬಂದು ಯಾಚಿಸುವಾಗ ಈ ಪ್ರಾರ್ಥನೆಯನ್ನು ಎಂದಿಗೂ ನಿರಾಕರಿಸಬಾರದೆಂದು ಭಾವವು (ಯಾಚಿತಃ) ನಾನು ನಿನ್ನ ಮುಂದೆ ದೈನ್ಯದಿಂದ ನಿಂತಮಾತ್ರಕ್ಕೆ ನೀನು ನಿನ್ನ ಕೋರಿಕೆಗಳನ್ನು ಈಡೇರಿಸಿಕೊಡುವಷ್ಟು ವಾತ್ಸಲ್ಯವುಳ್ಳವನು ಹೀಗಿರುವಾಗ ನಾನು ಹೀಗೆ ಯಾಚಿಸುತ್ತಿರುವಲ್ಲಿ ನಿನಗೆ ಕರುಣೆಯುಂಟಾಗುವುದನ್ನು ಹೇಳಬೇಕಾದುದೇನು? (ಮಯಾ) ನಾನೇ ಬಂದು ಯಾಚಿಸುವೆನೆಂದರ್ಥವು. ಇದುವರೆಗೆ ನೀನೇ ನನ್ನ ಬಳಿಗೆ ಬಂದು ಯಾಚಿಸಿ ನನ್ನ ಮನೋರಥಗಳನ್ನು ತಿಳಿದುಕೊಂಡು ಅವುಗಳನ್ನು ಈಡೇರಿಸಿಕೊಡುತಿದ್ದವನಲ್ಲವೆ? ಈಗ ನಾನೇ ಬಂದು ನಿನ್ನಲ್ಲಿ ಯಾಚಿಸುವಾಗ ನೀನು ಹೇಗೆ ತಾನೇ ಅದನ್ನು ನಿರಾಕರಿಸಬಲ್ಲೆ?

(ಭ್ರಾತುಃ) ನಿನಗೆ ನಾನೇನೂ ಅನ್ಯನಲ್ಲ. ಸಾಕ್ಷಾತ್ತಾಗಿ ನಿನಗೆ ಒಡಹುಟ್ಟಿದ ತಮ್ಮನಾದ್ದರಿಂದ ಈ ಬಂಧುತ್ವವನ್ನಾದರೂ ನೋಡಿ ನೀನು ನನ್ನ ಕೋರಿಕೆಯನ್ನು ಈಡೇರಿಸಿ ಕೊಡಬೇಕಲ್ಲವೆ? (ಶಿಷ್ಯಸ್ಯ) ನಾನು ಕೇವಲ ಸಹೋದರನಾಗಿಯೇ ಇದ್ದು ನಿನ್ನ ದಾಯಭಾಗವನ್ನು ಹಂಚಿಕೊಳ್ಳುವುದಕ್ಕಾಗಿಯೇ ಕಾದಿರುವೆನೆಂದೆಣಿಸಬೇಡ ನಿನ್ನಿಂದ ಅನೇಕ ವಿಧದಲ್ಲಿ ಉಪದೇಶವನ್ನು ಹೊಂದಿದ ಶಿಷ್ಯನೆಂಬುದನ್ನು ಸ್ಮರಿಸಿಕೊಳ್ಳುವನಾಗೆಂದು ಭಾವವು. (ದಾಸಸ್ಯ) ನಾನು ಶಿಷ್ಯನು ಮಾತ್ರವಾಗಿಯೇ ಇದ್ದು ನಿನ್ನಿಂದ ಬೇಕಾದ ಉಪದೇಶಗಳನ್ನು ಹೊಂದಿ ಕೊನೆಗೆ ಸ್ವತಂತ್ರವಾಗಿರುವವನೆಂದೆಣಿಸಬೇಡ. ನನ್ನನ್ನು ಕ್ರಯವಿಕ್ರಯಾದಿಗಳನ್ನು ಮಾಡುವಷ್ಟು ಸ್ವಾತಂತ್ರ್ಯವೂ ನಿನಗುಂಟೆಂದು ತಿಳಿ! ಆದುದರಿಂದ (ಪ್ರಸಾದಂ ಕರ್ತುಮರ್ಹಸಿ) ನನ್ನನ್ನು ಅನುಗ್ರಹಿಸಬೇಕಾದುದೇ ನಿನ್ನ ಅವಶ್ಯ ಕರ್ತವ್ಯವೆಂದು ಭಾವವು.

ಮೊದಲಾದವರೂ ಬಂದಿರುವುದನ್ನು ನೋಡಲಿಲ್ಲವೆ ? ಇವರೆಲ್ಲರೂ ಏಕ ವಾಕ್ಯದಿಂದ ಕೇಳುವ ಕೋರಿಕೆಯನ್ನು ಅತಿಕ್ರಮಿಸಬಾರದು " ಎಂದು ಹೇಳಿ ಕಣ್ಣೀರು ಬಿಡುತ್ತ, ಪುನಃ ರಾಮನ ಕಾಲುಗಳನ್ನು ಹಿಡಿದು ಸಾಷ್ಟಾಂಗವಾಗಿ ನಮಸ್ಕರಿಸಿದನು. ಮದಿಸಿದ ಆನೆಯಂತೆ ಬಾರಿಬಾರಿಗೂ ನಿಟ್ಟುಸಿರನ್ನು ಬಿಡುತ್ತ ವ್ಯಸನದಿಂದಲೂ, ದೈನ್ಯದಿಂದಲೂ, ಕೊರಗುತ್ತಿರುವ ಭರತನನ್ನು ಎತ್ತಿ, ರಾಮನು ಆತನನ್ನು ಎರಡು ತೋಳುಗಳಿಂದಲೂ ಅಪ್ಪಿಕೊಂಡು "ಎಲೆ ವತ್ಸನೆ! ಸತ್ಕುಲದಲ್ಲಿ ಹುಟ್ಟಿ, ಸತ್ವಗುಣಸಂಪನ್ನನಾಗಿ, ಮಹಾತೇಜಸ್ವಿಯೆನಿಸಿಕೊಂಡು ಅನೇಕ ವ್ರತಗಳನ್ನು ನಡೆಸಿರುವ ನಿನ್ನಂತವನಿಗೆ, ಈ ತುಚ್ಛವಾದ ರಾಜ್ಯಕ್ಕೋಸ್ಕರವಾಗಿ ಅಂತಹ ಪಾಪಕಾರ್ಯದಲ್ಲಿ ಮನಸ್ಸು ಪ್ರವರ್ತಿಸುವುದೇ? ಎಂದಿಗೂ ಇಲ್ಲ. ನಾನು ನಿನ್ನಲ್ಲಿ ಎಳ್ಳಷ್ಟಾದರೂ ದೋಷವನ್ನೆಣಿಸತಕ್ಕವನಲ್ಲ! ಇದನ್ನು ನಾನು ಚೆನ್ನಾಗಿ ಬಲ್ಲೆನು. ಆದರೆ ನೀನು ಬಾಲ್ಯವಯಸ್ಸಿನಿಂದುಂಟಾದ ಅಜ್ಞಾನದಿಂದ, ನಿನ್ನ ತಾಯಿಯನ್ನು ನಿಂದಿಸುತ್ತಿರುವುದು ಮಾತ್ರ ನನಗೆ ಉಚಿತವಾಗಿ ತೋರಲಿಲ್ಲ. [1] ಹಿರಿಯರು ಯಾವಾಗಲೂ ತಮಗೆ ಸೇರಿದ ಶಿಷ್ಯರನ್ನೂ, ಪರಿಜನಗಳನ್ನೂ, ಪತ್ನಿಯರನ್ನೂ, ಮಕ್ಕಳನ್ನೂ ತಮ್ಮ ಇಷ್ಟಬಂದಂತೆ ನಿಯಮಿಸುವುದಕ್ಕೆ ಸ್ವತಂತ್ರರಾಗಿರುವರು. ಇದು ಶಾಸ್ತ್ರವಿಹಿತವಾದುದೇ ಹೊರತು ಬೇರೆಯಲ್ಲ. ಲೋಕದಲ್ಲಿ ಹೆಂಡಿರು ಮಕ್ಕಳೂ, ಶಿಷ್ಯರೂ, ಯಾವಾಗಲೂ ನಿಯಮ್ಯರೇ ಹೊರತು ಸ್ವತಂತ್ರರಲ್ಲವು. ನಾವು ದಶರಥನ ಆಜ್ಞೆಗೆ ಅಧೀನರಾಗಿಯೇ ನಡೆದುಕೊಳ್ಳಬೇಕೆಂಬುದನ್ನು ನೀನು ಚೆನ್ನಾಗಿ ತಿಳಿ. ಎಲೆ ಸೌಮ್ಯನೆ! ಮಹಾರಾಜನಾದ ದಶರಥನು ನಮಗೆ ನಾರುಮಡಿಯನ್ನೂ, ಕೃಷ್ಣಾಜಿನವನ್ನೂ ಉಡಿಸಿ ಕಾಡಿನಲ್ಲಿರಿಸುವುದಕ್ಕಾಗಲಿ, ರಾಜ್ಯಾಧಿಕಾರದಲ್ಲಿರಿಸುವುದಕ್ಕಾಗಲಿ ಸ್ವಾತಂತ್ರ್ಯವುಳ್ಳವನಾಗಿರುವನು. ಎಲೆ ವತ್ಸನೆ! ನಿನಗೂ ಈ ಧರ್ಮಗಳು ತಿಳಿಯದುದಲ್ಲ. ನಾವು ತಂದೆಯಲ್ಲಿ ಗೌರವವನ್ನು ತೋರಿಸುವಂತೆಯೇ ತಾಯಿಯನ್ನೂ ಗೌರವಿಸಬೇಕು. ಧರ್ಮಶೀಲರಾದ ತಂದೆತಾಯಿಗಳಿಬ್ಬರೂ ನನ್ನನ್ನು ಕರೆದು ಕಾಡಿನಲ್ಲಿರುವಂತೆ ನಿಯಮಿಸಿರುವಾಗ, ನಾನು ಅದನ್ನು ಬಿಟ್ಟು ಹೇಗೆ ತಾನೇ ತಪ್ಪಿನಡೆಯಲಿ? ಅಯೋಧ್ಯೆಯಲ್ಲಿದ್ದು

---

[1] ಹಿರಿಯರೂ ಕೂಡ ತಮಗೆ ಇಷ್ಟರಾದ ದಾರ ಪುತ್ರಾದಿಗಳಲ್ಲಿ ತಮಗೆ ಇಚ್ಛೆ ಬಂದಂತೆ ಸ್ನೇಹವನ್ನು ತೋರಿಸುವರೆಂದು ಭಾವವು.

ಲೋಕಪೂಜ್ಯವಾದ ನಮ್ಮ ರಾಜ್ಯವನ್ನು ಪಾಲಿಸುತ್ತಿರುವುದೇ ನಿನಗೆ ನ್ಯಾಯವು. ನಾರುಮಡಿಯನ್ನುಟ್ಟು ಕಾಡಿನಲ್ಲಿರಬೇಕಾದುದೇ ನನ್ನ ಕೃತ್ಯವು. ತೇಜಸ್ವಿಯಾದ ದಶರಥಮಹಾರಾಜನು ಅನೇಕ ಪ್ರಜೆಗಳ ಮುಂದೆ ಹೀಗೆಯೇ ಕಾರ್ಯವಿಭಾಗವನ್ನು ಮಾಡಿಕೊಟ್ಟು ಸ್ವರ್ಗಸ್ಥನಾಗಿರುವನು. ಆತನ ವಾಕ್ಯವೇ ನಮಗೆ ಮುಖ್ಯಪ್ರಮಾಣವು. ಧರ್ಮಾತ್ಮನಾಗಿಯೂ, ಲೋಕಗುರುವಾಗಿಯೂ ಇರುವ ನಮ್ಮ ಮಹಾರಾಜನು, ನಿನ್ನ ಭಾಗಕ್ಕೆ ಒಪ್ಪಿಸಿರುವ ರಾಜ್ಯವನ್ನು ಲೋಪವಿಲ್ಲದೆ ನಡೆಸುತ್ತಿರುವುದೇ ನಿನ್ನ ಧರ್ಮವು. ಹದಿನಾಲ್ಕು ವರ್ಷಗಳವರೆಗೆ ದಂಡಕಾರಣ್ಯದಲ್ಲಿದ್ದು ಬರಬೇಕೆಂದು ತಂದೆಯು ನನಗೆ ಅನುಗ್ರಹಿಸಿಕೊಟ್ಟಿರುವ ಭಾಗವನ್ನು ಲೋಪವಿಲ್ಲದೆ ನಿರ್ವಹಿಸುವುದೇ ನನ್ನ ಕರ್ತವ್ಯವು. ವತ್ಸ ಭರತನೆ! ಹೆಚ್ಚಾಗಿ ಹೇಳಿದುದರಿಂದೇನು? ಲೋಕಪೂಜ್ಯನಾಗಿ, ಮಹಾತ್ಮನಾಗಿ, ದೇವೇಂದ್ರನಿಗೆ ಸಮಾನವಾಗಿರುವ ನಮ್ಮ ತಂದೆಯು ನನಗೆ ಯಾವುದನ್ನು ನಿಯಮಿಸಿರುವನೋ ಅದನ್ನೇ ನಾನು ಪರಮಶ್ರೇಯಸ್ಸೆಂದು ಎಣಿಸುವೆನೇ ಹೊರತು, ಆತನ ಇಷ್ಟಕ್ಕೆ ವಿರೋಧವಾಗಿ ನನಗೆ ಸರ್ವಲೋಕಸಾಮ್ರಾಜ್ಯವು ಬರುವುದಾದರೂ ಅದನ್ನು ನಾನು ಹಿತವೆಂದೆಣಿಸಲಾರೆನು" ಎಂದನು.

ಇದು ನೂರನಾಲ್ಕನೆಯ ಸರ್ಗವು.

ಭರತನು ರಾಮನನ್ನು ಪುನಃ ರಾಜ್ಯವನ್ನು ಕೈಕೊಳ್ಳಬೇಕೆಂದು ನಿರ್ಬಂಧಿಸಿದುದು. ರಾಮನು ತತ್ವಾರ್ಥಗಳನ್ನು ನಿರೂಪಿಸಿ ಸಮಾಧಾನಪಡಿಸಿದುದು.

ಪುರುಷಶ್ರೇಷ್ಠರಾದ ಆ ರಾಮಾದಿಗಳು, ಮಿತ್ರರೊಡಗೂಡಿ ದುಃಖಿಸುತ್ತಿರುವಾಗಲೇ, ಆ ರಾತ್ರಿಯು ಎಷ್ಟೋ ಪ್ರಯಾಸದಿಂದ ಕಳೆಯಿತು. ಬೆಳಗಾದ ಕೂಡಲೆ ಆ ಸಹೋದರರೆಲ್ಲರೂ ತಮ್ಮ ಮಿತ್ರಮಂಡಲದಿಂದ ಪರಿವೃತರಾಗಿ, ಬಂದು, ಮಂದಾಕಿನೀನದಿಯಲ್ಲಿ ಪ್ರಾತಃಕಾಲದಲ್ಲಿ ಮಾಡಬೇಕಾದ ಜಪಹೋಮಾದಿಗಳನ್ನೂ ಆಹ್ನಿಕಗಳನ್ನೂ ತೀರಿಸಿಕೊಂಡು, ರಾಮನ ಬಳಿಗೆ ಹೋದರು. ಆಗ ಅವರೆಲ್ಲರೂ ಸುಮ್ಮನೆ ಕುಳಿತಿದ್ದರೇ ಹೊರತು ಒಬ್ಬರೂ

ಒಂದು ಮಾತನ್ನಾದರೂ ಆಡಲಿಲ್ಲ. ಆಗ ಭರತನು ಮಾತ್ರ ಮಿತ್ರರಿಂದ ಪರಿವೃತನಾದ ರಾಮನನ್ನು ನೋಡಿ "ಆರ್ಯನೆ! ನಮ್ಮ ತಂದೆಯಂತೂ ನನ್ನ ತಾಯಿಯ ಮನಸ್ಸಮಾಧಾನಾರ್ಥವಾಗಿ ಅವಳ ಕೋರಿಕೆಯಂತೆ ನನಗೆ ರಾಜ್ಯವನ್ನು ಕೊಟ್ಟುಬಿಟ್ಟನು. ಈಗ ರಾಜ್ಯವು ನನ್ನದಾಗಿಯೇ ಇರುವುದರಿಂದ ನಾನು ಇದನ್ನೇನು ಮಾಡುವುದಕ್ಕೂ ಸ್ವತಂತ್ರನಾಗಿರುವೆನಲ್ಲವೆ? ಆದುದರಿಂದ ನನ್ನ ಭಾಗಕ್ಕೆ ಬಂದ ನಿಷ್ಕಂಟಕವಾದ ಈ ರಾಜ್ಯವನ್ನು ನಾನೇ ನಿನಗೆ ಕೊಡುವೆನು. ನೀನು ಯಥೇಚ್ಛವಾಗಿ ಅನುಭವಿಸು. ಇದರಿಂದ ಒಂದು ವೇಳೆ ನನ್ನ ತಾಯಿಯು ಅಸಮಾಧಾನಪಡುವಳೆಂದು ನೀನು ಶಂಕಿಸಬಹುದು. ಅವಳನ್ನೂ ನಾನು ಒಡಂಬಡಿಸಿರುವೆನು. ಮತ್ತು ಎಲೈ ಆರ್ಯನೆ! ಮಳೆಗಾಲದಲ್ಲಿ ದೊಡ್ಡ ಪ್ರವಾಹವೇಗದಿಂದ ಒಡೆದು ಹೋಗುತ್ತಿರುವ ಸೇತುವೆಯನ್ನು ತಡೆದಿಡುವುದಕ್ಕೆ ಯಾರಿಂದ ತಾನೇ ಸಾಧ್ಯವು? ಅದರಂತೆಯೇ ಈ ದೊಡ್ಡ ರಾಜ್ಯವನ್ನು ಸ್ಥಿರವಾಗಿ ನಿಲ್ಲಿಸುವುದಕ್ಕೆ ಲೋಕದಲ್ಲಿ ನೀನೊಬ್ಬನು ಹೊರತು ಬೇರೆ ಯಾರಿಂದ ಸಾಧ್ಯವು? ಎಲೈ ರಾಜನೆ! ಕುದುರೆಯ ನಡೆಗೆ ಕತ್ತೆಯೂ, ಗರುಡನ ಗಮನವೇಗಕ್ಕೆ ಇತರ ಪಕ್ಷಿಗಳೂ ಆಸೆಪಟ್ಟು ಹೋದರೆ ಅವುಗಳಿಗೆ ಸಾಧ್ಯವೇ? ಅದರಂತೆಯೇ ನೀನು ಮಾಡುವ ಕೆಲಸವನ್ನು ನಾನು ಮಾಡಬೇಕೆಂದರೆ ಹೇಗೆ ತಾನೇ ಶಕ್ಯವು? ಮತ್ತು ಯಾರಿಂದ ಅನೇಕ ಪ್ರಾಣಿಗಳು ಬದುಕುತ್ತಿರುವುವೋ ಆತನ ಜೀವನವೇ ಉತ್ತಮವಾದುದು. ಬೇರೆಯವರನ್ನಾಶ್ರಯಿಸಿ ಜೀವಿಸುವವನ ಬದುಕು ಕೇವಲ ನೀಚವೆನಿಸುವುದು. [1] ಲೋಕದಲ್ಲಿ ಒಬ್ಬ ಮನುಷ್ಯನು ಬೀಜವನ್ನು ನಟ್ಟು ನೀರು ಹಾಕಿ ಕಷ್ಟಪಟ್ಟು ಬೆಳಸಿದ

1 ಇಲ್ಲಿ ದಶರಥನನ್ನು ಬೀಜಹಾಕಿದವನಿಗೂ, ರಾಮನನ್ನು ಬೆಳೆಸಿದ ವೃಕ್ಷಕ್ಕೂ ಅಭಿಷೇಕ ಪ್ರಯತ್ನವನ್ನು ಪುಷ್ಪದರ್ಶನಕ್ಕೂ, ರಾಮನು ರಾಜ್ಯವನ್ನು ಕೈಕೊಳ್ಳದಿದ್ದುದು ಫಲವುಂಟಾಗದುದಕ್ಕೂ ದಶರಥನು ರಾಮನಿಗೆ ರಾಜ್ಯವನ್ನು ಕೊಟ್ಟು ತಾನು ಸಂತೋಷವನ್ನನುಭವಿಸದೆ ಮೃತನಾದುದನ್ನು ಬೀಜಬಿತ್ತಿದವನಿಗೆ ಫಲಾನುಭವವಿಲ್ಲದೆ ಇದ್ದುದಕ್ಕೂ ಹೋಲಿಸಿರುವುದೆಂದು ಗ್ರಹಿಸಬೇಕು, ಮತ್ತು ಇಲ್ಲಿ ಭರತನು ರಾಮನನ್ನು ಕುರಿತು "ಈಗ ನೀನು ನನ್ನನ್ನು ಪಾಲಿಸದಿದ್ದಾಗಲೇ, ನಮ್ಮ ತಂದೆಯಾದ ದಶರಥನು ನಿನ್ನನ್ನು ಕಷ್ಟಪಟ್ಟು ಬೆಳಸಿ ಪಟ್ಟಾಭಿಷಿಕ್ತನನ್ನಾಗಿ ಮಾಡಿ, ನೀನು ರಾಜ್ಯಪರಿಪಾಲನ ಮಾಡುವುದನ್ನು ನೋಡಿ ಆನಂದಿಸಬೇಕೆಂದು ಕೋರುತ್ತಿದ್ದ ಕೋರಿಕೆಯೆಲ್ಲವೂ ನಿಷ್ಪ್ರಯೋಜನವಾಗಿ ಹೋಗುವುವು" ಎಂದು ಹೇಳಿದುದಾಗಿ ಗ್ರಹಿಸಬೇಕು.

ಗಿಡವು, ಸ್ವಲ್ಪಕಾಲದ ಮೇಲೆ ದೊಡ್ಡದಾಗಿ ಬೆಳೆದು, ಏರುವುದಕ್ಕಸಾಧ್ಯವಾಗಿ, ವಿಸ್ತಾರವಾದ ಶಾಖೆಗಳನ್ನು ಹಿಡಿಸಿ, ಬಹಳ ದೊಡ್ಡದಾಗಿ, ವಿಶೇಷವಾಗಿ ಪುಷ್ಪಗಳನ್ನೂ ತೋರಿಸಿ, ಕೊನೆಗೆ ಫಲಕಾಲದಲ್ಲಿ ಫಲವನ್ನು ಕೊಡದಿದ್ದರೆ ಆ ಗಿಡವನ್ನು ಕಷ್ಟಪಟ್ಟು ಬೆಳೆಸಿದವನಿಗೆ ಹೇಗೆತಾನೇ ತೃಪ್ತಿಯುಂಟಾಗುವುದು? ಇದನ್ನೇ, ನಮ್ಮ ರಾಜ್ಯದ ಸ್ಥಿತಿಗೆ ಹೋಲಿಸಿ ನೋಡು! ನಮ್ಮೆಲ್ಲರಿಗೂ ಪೋಷಕನಾಗಿ, ಪುರುಷಶ್ರೇಷ್ಠನೆನಿಸಿಕೊಂಡಿರುವ ನೀನು, ನಿನಗೆ ದಾಸಭೂತ ರಾದ ನಮ್ಮೆಲ್ಲರನ್ನೂ ಪಾಲಿಸದಿದ್ದರೆ ನಾನು ಈಗ ಹೇಳಿದ ಉಪಮಾನಕ್ಕೆ ಅನುಗುಣವಾದ ಅರ್ಥಗಳೆಲ್ಲವೂ ನಿನಗೇ ಚೆನ್ನಾಗಿ ತಿಳಿದುಬರುವುದು. ಎಲೈ ಮಹಾರಾಜನೇ! ಶತ್ರುನಿಗ್ರಾಹಕನಾದ ನೀನು ರಾಜ್ಯದಲ್ಲಿ ಪಟ್ಟಾಭಿಷಿಕ್ತನಾಗಿ ಸೂರ್ಯನಂತೆ ಪ್ರಕಾಶಿಸುತ್ತಿರು! ಪ್ರಮುಖರಾದ ಪುರಜನರೆಲ್ಲರೂ ನಿನ್ನನ್ನು ನೋಡಿ ಸಂತೋಷಪಡಲಿ! ಮದಿಸಿದ ಆನೆಗಳೆಲ್ಲವೂ ಪಟ್ಟಣಕ್ಕೆ ಹೋಗುವ ನಿನ್ನನ್ನು ಹಿಂಬಾಲಿಸುತ್ತ ಅತ್ಯಾನಂದದಿಂದ ಗರ್ಜಿಸಲಿ. ಅಂತಃಪುರಸ್ತ್ರೀಯ ರೆಲ್ಲರೂ ತಮ್ಮ ತಮ್ಮ ಮನಸ್ಸಿನ ವ್ಯಾಕುಲತೆಯನ್ನು ಬಿಟ್ಟು ಸಂತೋಷಿಸಲಿ! ನೀನು ಹಿಂತಿರುಗಿ ಅಯೋಧ್ಯೆಗೆ ಹೊರಡಬೇಕು" ಎಂದನು. ಹೀಗೆ ಭರತನು ರಾಮನನ್ನು ಪ್ರಾರ್ಥಿಸಿ ಹೇಳಿದ ಮಾತನ್ನು ಕೇಳಿ, ಅಲ್ಲಿದ್ದ ಪ್ರಜಾಸಮುದಾಯ ವೆಲ್ಲವೂ, "ಭಲೆ! ಭಲೆ?" ಎಂದು ಕೊಂಡಾಡುತ್ತಿದ್ದರು. ಆಗ ಭರತನು ತನ್ನ ಪ್ರಾರ್ಥನೆಯನ್ನು ರಾಮನು ಅಂಗೀಕರಿಸುವನೋ ಇಲ್ಲವೋ ಎಂದು ಶಂಕಿಸಿ ದುಃಖದಿಂದ ಬಿಡದೆ ಪ್ರಲಾಪಿಸುತ್ತಲೇ ಇದ್ದನು. ಹೀಗೆ ದುಃಖಿಸುತ್ತಿರುವ ಯಶಸ್ವಿಯಾದ ಭರತನನ್ನು ನೋಡಿ ಧೀಮಂತನಾಗಿಯೂ, ಮಹಾಧೀರ ನಾಗಿಯೂ ಇರುವ ರಾಮನು ಮೃದುವಾಕ್ಯಗಳಿಂದ ಸಮಾಧಾನಪಡಿಸುತ್ತ, "ಎಲೈ ವತ್ಸನೆ! ಲೋಕದಲ್ಲಿ ಮನುಷ್ಯನಿಗೆ ಸ್ವಾತಂತ್ರ್ಯವೆಂಬುದು ಸ್ವಲ್ಪ ವಾದರೂ ಇಲ್ಲವು. ಮನುಷ್ಯನು ಸ್ವತಂತ್ರಿಸಿ ಯಾವ ಕಾರ್ಯವನ್ನೂ ಮಾಡಲಾರನು. ಆತನು ಒಂದು ಕಡೆಯಿಂದ ಮತ್ತೊಂದು ಕಡೆಗೆ ಹೋಗ ಬೇಕಾದರೂ ದೈವಪ್ರೇರಣೆಯಿಲ್ಲದೆ ಹೋಗಲಾರನು. ದೈವವೇ ಪುರುಷನನ್ನು ಆಕರ್ಷಿಸುವುದು. ಆದುದರಿಂದ ನನ್ನನ್ನು ಕೈಕೇಯಿಯು ಕಾಡಿಗೆ ಕಳುಹಿಸಿ ಬಿಟ್ಟಳೆಂಬ ಭ್ರಾಂತಿಯನ್ನು ಬಿಟ್ಟುಬಿಡು! ಮತ್ತು ತಂದೆಯು ಸ್ವರ್ಗಸ್ಥನಾದುದ ಕ್ಕಾಗಿಯೂ ನಾವು ದುಃಖಿಸುವುದುಚಿತವಲ್ಲ. ಲೋಕದಲ್ಲಿ ಮನುಷ್ಯನು ಅನೇಕ

ವಿಧದಿಂದ ಎಷ್ಟೇ ಹಣವನ್ನು ಸಂಪಾದಿಸಿಟ್ಟರೂ ಕೊನೆಗೆ ಆ ಧನವೆಲ್ಲವೂ ಯಾವುದೋ ಒಂದು ವಿಧದಲ್ಲಿ ನಾಶಹೊಂದಿಯೇ ತೀರಬೇಕು. ಎಷ್ಟೇ ಉತ್ತಮ ಸ್ಥಿತಿಗೆ ಬಂದವನಾದರೂ ನೀಚಸ್ಥಿತಿಗೆ ಬರಬೇಕಾಗುವುದು. ಕೂಡಾಟದ ಸಂಭ್ರಮಗಳೆಲ್ಲವೂ ಕೊನೆಗೆ ಅಗಲಿಕೆಯಲ್ಲಿಯೇ ಪರ್ಯವಸಾನವನ್ನು ಹೊಂದು ವುವು. ಎಷ್ಟೇ ಉತ್ತಮಜೀವನವಾಗಿದ್ದರೂ ಮರಣದಲ್ಲಿಯೇ ಮುಗಿಯಬೇಕು. ಲೋಕಸ್ವಭಾವವೇ ಹೀಗಿರುವುದರಿಂದ ನಮ್ಮ ತಂದೆಯು ಮರಣಹೊಂದಿದು ದಕ್ಕಾಗಿ ನಾವು ಚಿಂತಿಸಿ ಫಲವೇನು? ಚೆನ್ನಾಗಿ ಮಾಗಿದಮೇಲೆ ಹಣ್ಣುಗಳು ಮರದಿಂದ ಉದಿರಿಬೀಳಬೇಕಾದುದೊಂದೇ ಕಾರ್ಯವಲ್ಲವೆ? ಅದರಂತೆಯೇ ಈ ಪ್ರಪಂಚದಲ್ಲಿ ಹುಟ್ಟಿದವನಿಗೆ ಮರಣಕ್ಕಿಂತಲೂ ಬೇರೆ ಭಯವೆಂಬುದೇ ಇಲ್ಲವು. ಬಲವಾದ ಕಂಬಗಳುಳ್ಳ ಮನೆಯೂ ಕೂಡ ಕಾಲಕ್ರಮದಿಂದ ಶಿಥಿಲವಾಗಿ ಹಾಳು ಬೀಳುವಂತೆ, ಮನುಷ್ಯರೂ ಜರಾಮರಣಗಳಿಗೆ ಈಡಾಗಿ ನಾಶವನ್ನು ಹೊಂದುವರು. ಕಳೆದುಹೋದ ರಾತ್ರಿಯು ಎಂದಿಗೂ ಹಿಂತಿರುಗಿಬರಲಾರದು. ಯಮುನಾ ಪ್ರವಾಹವೂ ಕೂಡ ಜಲಸಮೃದ್ಧವಾದ ಸಮುದ್ರಕ್ಕೆ ಹೋಗಿ ಸೇರುವುದೇ ಹೊರತು ಅಲ್ಲಿಂದ ಸ್ವಲ್ಪದೂರವಾದರೂ ಹಿಂತಿರುಗಿ ಬರಲಾರದು. ಬೇಸಗೆಯಲ್ಲಿ ಸೂರ್ಯಕಿರಣವು ಎಡೆಬಿಡದೆ ನೆಲದ ಮೇಲಿನ ನೀರನ್ನು ಹೀರು ತ್ತಿರುವಂತೆ ಕಳೆದುಹೋಗುತ್ತಿರುವ ಹಗಲು ರಾತ್ರಿಗಳೆರಡೂ ಅವಿಚ್ಛಿನ್ನವಾಗಿ ಮನುಷ್ಯನ ಆಯುಃ ಪ್ರಮಾಣವನ್ನು ಹೀರುತ್ತಿರುವುವು. ನೀನು ನಡೆಯು ವಾಗಲೂ, ನಿಂತಿರುವಾಗಲೂ, ಕ್ಷಣಕ್ಷಣಕ್ಕೂ ನಿನ್ನ ಆಯುಸ್ಸು ಕ್ಷೀಣಿಸು ತ್ತಿರುವುದಲ್ಲವೆ? ಹೀಗಿರುವಾಗ ಒಬ್ಬೊಬ್ಬರೂ ತಮ್ಮ ತಮ್ಮ ಅವಸ್ಥೆಗಾಗಿಯೇ ದುಃಖಿಸಬೇಕಾಗಿರುವುದಲ್ಲವೆ? ಇನ್ನು ಇತರರಿಗಾಗಿ ನೀನು ಚಿಂತಿಸುವುದು ನ್ಯಾಯವೆ? ನಿನ್ನ ಗತಿಯೇ ಹೀಗಿರುವಾಗ ಮತ್ತೊಬ್ಬರ ಚಿಂತೆಯು ನಿನಗೇಕೆ? ಎಲೆ ವತ್ಸನೆ! ಮೃತ್ಯುವೆಂಬುದು ಮನುಷ್ಯನನ್ನು ಯಾವಾಗಲೂ ಬಿಟ್ಟು ಹೋಗತಕ್ಕುದಲ್ಲ. ನಡೆಯುವವರೊಡನೆ ಅದೂ ನಡೆದು ಬರುವುದು. ಕುಳಿ ತಿರುವಾಗ ಸಂಗಡಲೇ ಅದೂ ಕುಳಿತುಕೊಳ್ಳುವುದು. ಬಹುದೂರ ಪ್ರಯಾಣ ಮಾಡಿ ಹೋದರೂ ಮೃತ್ಯುವು ಸಂಗಡಲೇ ಸುತ್ತಿಬರುವುದು. ಮನುಷ್ಯನಿಗೆ ನಿಮಿಷಮಾತ್ರವಾದರೂ ಮೃತ್ಯುವನ್ನು ತಪ್ಪಿಸಿಕೊಂಡು ಹೋಗುವುದು ಸಾಧ್ಯವಲ್ಲ. ಎಲೆ ವತ್ಸನೆ! "ಯಾವಾಗಲೋ ಬಂದೊದಗುವ ಮೃತ್ಯುವಿನ

ಚಿಂತೆಯಿಂದ ಈಗಲೇ ಕಳವಳಿಸುವುದೇಕೆ?" ಎಂದು ನೀನು ಶಂಕಿಸಬಹುದು. ಮನುಷ್ಯನಿಗೆ ದೇಹವೆಲ್ಲವೂ ಸುಕ್ಕುಬಿದ್ದು, ತಲೆಯ ಕೂದಲುಗಳೆಲ್ಲವೂ ನರೆತು, ಮುಪ್ಪಿನಿಂದ ಮೈಯ್ಯೆಲ್ಲವೂ ಜೀರ್ಣವಾದಮೇಲೆ ಯಾವ ಉಪಾಯದಿಂದ ತಾನೇ ಆ ಜರೆಯನ್ನು ಪರಿಹರಿಸಿಕೊಳ್ಳಬಲ್ಲನು? ಅದನ್ನು ನೀಗಿಸುವುದು ಯಾರಿಗೂ ಸಾಧ್ಯವಲ್ಲ. ಆದುದರಿಂದ ಶಕ್ತಿಯಿರುವಾಗಲೇ ಆತ್ಮಜ್ಞಾನಕ್ಕೆ ಒಬ್ಬೊಬ್ಬನೂ ಪ್ರಯತ್ನಿಸಬೇಕು. ಲೋಕದಲ್ಲಿ ಮನುಷ್ಯನು ಹಣವನ್ನು ಸಂಪಾದಿಸಬೇಕೆಂಬ ಅಕ್ಷೋತ್ತರದಿಂದ ಎಷ್ಟು ಹೊತ್ತಿಗೆ ಸೂರ್ಯೋದಯವಾಗುವುದೆಂದು ನಿರೀಕ್ಷಿಸುತ್ತಿದ್ದು ಬೆಳಗಾದುದನ್ನು ನೋಡಿ ಸಂತೋಷಪಡುವನು. ಹಾಗೆಯೇ ಕಾಮೋಪಭೋಗಗಳನ್ನನುಭವಿಸುವವನು, ಆತ್ಯಾತುರದಿಂದ ರಾತ್ರಿಯಾಗುವುದನ್ನೇ ಕಾದುಕೊಂಡಿದ್ದು ಸೂರ್ಯನು ಅಸ್ತಮಿಸಿದುದನ್ನು ನೋಡಿ ಆಗಲೂ ಸಂತೋಷದಿಂದುಬ್ಬುವನು. ಈ ಉದಯಾಸ್ತಮಯಕಾಲಗಳೇ ತಮ್ಮತಮ್ಮ ಆಯುಸ್ಸನ್ನು ಕ್ಷೀಣಿಸುತ್ತಿರುವುದೆಂಬುದನ್ನು ಲೋಕದಲ್ಲಿ ಯಾರೂ ಎಣಿಸಲಾರರು. ಹೀಗೆಯೇ ಒಂದೊಂದು ಋತುಗಳು ತಲೆದೋರುವಾಗಲೂ, ಮನುಷ್ಯನು ಆಯಾ ಭೋಗಕಾಲವು ಬಂತೆಂದು ಸಂತೋಷದಿಂದ ಉಬ್ಬುವನೇ ಹೊರತು, ಈ ಋತುಗಳು ಸುತ್ತಸುತ್ತಿ ಬಂದಷ್ಟೂ ತಮ್ಮ ಆಯುಃಪ್ರಮಾಣವು ತಗ್ಗುತ್ತಾ ಬರುವುದೆಂಬ ಪರ್ಯಾಲೋಚನೆಯು ಯಾರಿಗೂ ಇರುವುದಿಲ್ಲ. ಮಹಾಸಮುದ್ರದಲ್ಲಿ ಎಷ್ಟೋ ಮರದ ತುಂಡುಗಳು ಪ್ರವಾಹವೇಗದಿಂದ ಬಂದು ಬೀಳುವುವು. ಈ ತುಂಡುಗಳು ಆ ಸಮುದ್ರಮಧ್ಯದ ಅಲೆಗಳ ವೇಗಕ್ಕೆ ಸಿಕ್ಕಿ ಕ್ಷಣಕಾಲದವರೆಗೆ ಒಂದಕ್ಕೊಂದು ಸೇರಿದ್ದು ಹಾಗೆಯೇ ಚದುರಿಹೋಗುವುವು. ಇದರಂತೆಯೇ ಹೆಂಡಿರಾಗಲಿ, ಮಕ್ಕಳಾಗಲಿ, ಬಂಧುಗಳಾಗಲಿ, ಹಣವಾಗಲಿ, ಈ ಪ್ರಪಂಚವೆಂಬ ಮಹಾ ಸಮುದ್ರದಲ್ಲಿ, ಕಾಲಗತಿಯೆಂಬ ಅಲೆಗಳಿಂದ, ಅಲ್ಲಲ್ಲಿ ಒಂದಾಗಿ ಕ್ಷಣಕಾಲದವರೆಗೆ ಸೇರಿಸಲ್ಪಟ್ಟಿದ್ದು, ಇದ್ದಕ್ಕಿದ್ದ ಹಾಗೆ ಅಗಲಿಸಲ್ಪಟ್ಟು ಪರಸ್ಪರ ಸಂಬಂಧವೇ ಇಲ್ಲದಂತೆ ಹೋಗುವುವು. ಆದುದರಿಂದ ಈ ಬಂಧುತ್ವದ ಸಂಬಂಧವೆಂಬುದು ಎಂದಿಗೂ ಸ್ಥಿರವಾದುದಲ್ಲ. ಎಂದಿದ್ದರೂ ಕೊನೆಗೆ ಪರಸ್ಪರವಿಯೋಗವೆಂಬುದು ನಿಜವು. ಈ ಲೋಕದಲ್ಲಿ ಯಾವ ಪ್ರಾಣಿಯಾದರೂ ತನ್ನ ಇಷ್ಟದಂತೆ ನಡೆಯುವುದಕ್ಕೆ ಸಾಧ್ಯವಿಲ್ಲ. ಆದುದರಿಂದ ಸತ್ತವರಿಗಾಗಿ ನಾವು ಎಷ್ಟು ದುಃಖಿಸಿದರೂ ಅವರನ್ನು ಬದುಕಿಸುವುದಕ್ಕಾದೀತೆ!

ಎಂದಿಗೂ ಸಾಧ್ಯವಲ್ಲ. ಇನ್ನೂ ಒಂದು ದೃಷ್ಟಾಂತವನ್ನು ಹೇಳುವೆನು ಕೇಳು. ಒಬ್ಬ ಮನುಷ್ಯನು ದಾರಿಯಲ್ಲಿ ಬರುತ್ತಿರುವ ಕೆಲವು ಮಾರ್ಗಸ್ಥರ ಗುಂಪನ್ನು ನೋಡಿ "ನಾನೂ ನಿಮ್ಮ ಸಂಗಡಲೇ ಬರುವೆನು" ಎಂದು ಹೇಳಿ, ಅವರನ್ನು ಹಿಂಬಾಲಿಸುವಂತೆ, ಇದಕ್ಕೆ ಮೊದಲು ತಮ್ಮ ತಮ್ಮ ಹಿರಿಯರು ಅವಲಂಬಿಸಿದ ದಾರಿಯನ್ನು ಹಿಡಿದು ಹೋಗುವುದೇ ಮುಂದಿನವರ ಕೆಲಸವೆಂಬುದು ನಿಜವು. ಎಷ್ಟು ಮಾತ್ರಕ್ಕೂ ಆ ಮಾರ್ಗವನ್ನು ಬಿಡಬಾರದು. ಆ ದಾರಿಯಲ್ಲಿ ಹೋದವರಿಗೆ ಎಂದಿಗೂ ಅಪಾಯವಿಲ್ಲವು. ಪ್ರತಿಯೊಬ್ಬರೂ ಆ ದಾರಿಯನ್ನೇ ಹಿಡಿದು ಹೋಗಬೇಕಾಗಿರುವಾಗ ಅದಕ್ಕಾಗಿ ದುಃಖಿಸುವುದೇಕೆ? ಪ್ರವಾಹದಂತೆ ವಯಸ್ಸೆಂಬುದು ಮುಂದೆ ಮುಂದೆ ಹೋಗುತ್ತಿರುವುದೇ ಹೊರತು ಹಿಂತಿರುಗಿ ಬರಲಾರದು. ಹೀಗಿರಲು, ತಾನು ಬದುಕಿರುವಷ್ಟರಲ್ಲಿ ಪರಲೋಕಶ್ರೇಯಸ್ಸಿಗೆ ಬೇಕಾದ ಉಪಾಯವನ್ನು ತಾನು ಸಿದ್ಧಪಡಿಸಿಕೊಳ್ಳಬೇಕಲ್ಲವೆ? ಹೀಗೆ ಸುಖ ಹೇತುವಾದ ಧರ್ಮವನ್ನುಗಳಿಸತಕ್ಕವರೇ ಮನುಷ್ಯರೆನಿಸುವುದು. ಇತರರೆಲ್ಲರೂ ಮೃಗಗಳು. ಧರ್ಮಾತ್ಮನಾದ ನಮ್ಮ ತಂದೆಯು, ಶ್ರೇಯಸ್ಕರವಾದ ಅನೇಕ ಯಾಗಗಳನ್ನು ನಡೆಸಿ, ಉಚಿತ ದಕ್ಷಿಣೆಗಳನ್ನು ಕೊಟ್ಟು, ಆ ಪುಣ್ಯಾತಿಶಯ ದಿಂದ ಸ್ವರ್ಗವನ್ನು ಸೇರಿರುವನು. ಭೃತ್ಯರನ್ನು ಪ್ರೀತಿಯಿಂದ ಪೋಷಿಸಿದುದ ರಿಂದಲೂ, ಪ್ರಜೆಗಳನ್ನು ಧರ್ಮದಿಂದ ಪಾಲಿಸಿದುದರಿಂದಲೂ, ಧರ್ಮದಿಂದ ಅರ್ಥಾರ್ಜನೆಯನ್ನು ಮಾಡುತ್ತಿದ್ದುದರಿಂದಲೂ ನಮ್ಮ ತಂದೆಯು ಸ್ವರ್ಗಸ್ಥ ನಾಗಿರುವನು. ಮತ್ತು ಇಷ್ಟಾಪೂರ್ತಗಳೆಂಬ ಸತ್ಕರ್ಮಗಳಿಂದಲೂ ನಮ್ಮ ತಂದೆಗೆ ಸ್ವರ್ಗಲೋಕವು ಲಭಿಸಿರುವುದು. ಆತನು ಮಾಡದ ಯಾಗಗಳಿಲ್ಲ. ಆತನು ಅನುಭವಿಸದ ಭೋಗಗಳಿಲ್ಲ. ಇದರ ಮೇಲೆ ಬಹುಕಾಲದವರೆಗೂ ಜೀವಿಸಿಯೂ ಇದ್ದನು. ಎಲೆ ವತ್ಸನೆ! ನಮ್ಮ ವಂಶದ ಹಿರಿಯರೆಲ್ಲರಿಗಿಂತಲೂ ಹೆಚ್ಚು ಕಾಲದ ವರೆಗೂ ಬದುಕಿದ್ದು, ಅನೇಕ ಭೋಗಗಳನ್ನನುಭವಿಸಿ, ಸಜ್ಜನರಿಗೆಲ್ಲಾ ಮೇಲೆ ನಿಸಿಕೊಂಡಿದ್ದು, ಕೊನೆಗೆ ಸ್ವರ್ಗಸ್ಥನಾದ ನಮ್ಮ ತಂದೆಗೋಸ್ಕರ ನಾವು ದುಃಖಿಸ ಬಹುದೆ? ಜೀರ್ಣವಾದ ಈ ಮನುಷ್ಯ ದೇಹವನ್ನು ಬಿಟ್ಟು, ಆತನು ದಿವ್ಯ ದೇಹದಿಂದ ಕೂಡಿ ಈಗ ಬ್ರಹ್ಮಲೋಕದಲ್ಲಿ ವಿಹರಿಸುತ್ತಿರುವನಲ್ಲವೆ? ಆತನಿಗಾಗಿ ನಾವು ದುಃಖಿಸುವುದೇಕೆ? ಇಷ್ಟು ಸರ್ವೋತ್ತಮವಾದ ಪದವಿಯಲ್ಲಿರುವ ಆ ತಂದೆಗಾಗಿ ಬುದ್ಧಿವಂತನಾಗಿಯೂ ಪ್ರಾಜ್ಞನಾಗಿಯೂ, ಇರುವ ನಿನ್ನಂತವನು

ದುಃಖಿಸಬಹುದೆ? ಎಲೆ ವತ್ಸನೆ! ಯಾವುದಕ್ಕಾದರೇನು? ಪ್ರಾಜ್ಞನಾಗಿಯೂ, ಧೀರನಾಗಿಯೂ ಇರುವ ಪುರುಷನು ಯಾವ ಅವಸ್ಥೆಗಳಲ್ಲಿಯೂ ಹೀಗೆ ದುಃಖಿಸಬಾರದು. ಹೀಗಿರುವಾಗ ಧೀರನಾದ ನಿನ್ನಂತವನು ಕಣ್ಣೀರು ಬಿಟ್ಟು ಅಳುವುದೆಂದರೇನು? ದುಃಖಿಸಬೇಡ! ಸಮಾಧಾನವನ್ನು ಹೊಂದು! ಪಟ್ಟಣಕ್ಕೆ ಹಿಂತಿರುಗಿ ಹೋಗಿ ನಮ್ಮ ಪ್ರಜೆಗಳನ್ನು ಕ್ಷೇಮದಿಂದ ಪಾಲಿಸುತ್ತಿರು! ಜಿತೇಂದ್ರಿಯನಾದ ನಮ್ಮ ತಂದೆಯು ಹೇಳಿದ ಮಾತನ್ನು ನೀನು ನಡೆಸಬೇಡವೆ? ನನ್ನಂತೆಯೇ ನೀನೂ ಆತನಿಗೆ ಪುತ್ರನಲ್ಲವೆ? ಪುಣ್ಯಾತ್ಮನಾದ ಆತನ ಆಜ್ಞಾನುಸಾರವಾಗಿಯೇ ನಾನು ಈ ಕಾಡಿನಲ್ಲಿರುವೆನೆಂಬುದನ್ನರಿಯೆಯಾ? ತಂದೆಯಾಜ್ಞೆಯನ್ನು ಮೀರಿ ನಡೆಯುವುದು ನಮ್ಮಿಬ್ಬರಿಗೂ ನ್ಯಾಯವಲ್ಲ! ಆತನೇ ನಮಗೆ ಸರ್ವ ವಿಧ ಬಂಧುವು. ಪಿತೃವಚನ ಪರಿಪಾಲನಾರ್ಥವಾಗಿಯೇ ನಾನು ಈ ವನವಾಸವೆಂಬ ಸತ್ಕರ್ಮವನ್ನು ನಡೆಸುತ್ತಿರುವೆನು. ಪರಲೋಕಾಪೇಕ್ಷೆಯುಳ್ಳವನು ತಂದೆಯ ಆಜ್ಞೆಯನ್ನು ತಪ್ಪದೆ ನಡೆಸಬೇಕೆಂಬುದನ್ನರಿಯೆಯಾ? ಎಲೈ ಪುರುಷಶ್ರೇಷ್ಠನೆ! ನಮ್ಮ ತಂದೆಯು ತನ್ನ ಗುರುಜನಗಳಲ್ಲಿ ಹೇಗೆ ನಡೆಯುತ್ತಿದ್ದನೆಂಬುದನ್ನು ಮನಸ್ಸಿನಲ್ಲಿ ಪರ್ಯಾಲೋಚಿಸು. ಅದರಂತೆಯೇ ನೀನೂ ತಂದೆಯಾಜ್ಞೆಯನ್ನು ಗೌರವಿಸಿ ಅದನ್ನನುಸರಿಸಿ ನಡೆಯುವವನಾಗು" ಎಂದನು. ಮಹಾತ್ಮನಾಗಿಯೂ, ಧೀರನಾಗಿಯೂ ಇರುವ ರಾಮನು ತಮ್ಮನಾದ ಭರತನಿಗೆ ಹೀಗೆ ಪಿತೃವಾಕ್ಯಪರಿಪಾಲನವನ್ನು ಮಾಡಬೇಕೆಂಬ ಬುದ್ಧಿವಾದಗಳನ್ನು ಹೇಳಿ ಒಂದು ಕ್ಷಣ ಕಾಲದವರೆಗೆ ಸುಮ್ಮನಿದ್ದನು.

ಇದು ನೂರೈದನೆಯ ಸರ್ಗವು.

ಭರತನು ರಾಮನನ್ನು ಪುನಃ ಪ್ರಾರ್ಥಿಸಿದುದು. ವಸಿಷ್ಠನೂ, ಕೌಸಲ್ಯಾದಿಗಳೂ, ಮಂತ್ರಿ ಮೊದಲಾದವರೂ ರಾಮನನ್ನು ಪ್ರಾರ್ಥಿಸಿದುದು.

ಹೀಗೆ ರಾಮನು ಯುಕ್ತಿಯುಕ್ತವಾದ ಮಾತಿನಿಂದ ಸಮಾಧಾನವನ್ನು ಹೇಳಿ ಸುಮ್ಮನಿರಲು, ಭರತನು ಪುನಃ ರಾಮನನ್ನು ನೋಡಿ, ಧರ್ಮಯುಕ್ತವಾದ ಬೇರೊಂದು ದಾರಿಯನ್ನು ಹಿಡಿದು ಮೃದುವಾಕ್ಯಗಳಿಂದ "ಎಲೈ ಆರ್ಯನೆ!

ಲೋಕದಲ್ಲಿ ನಿನ್ನಂತವನು ಬೇರೆ ಯಾವನುಂಟು? ದುಃಖದಿಂದ ನೀನು ಕೊರಗ ತಕ್ಕವನಲ್ಲ! ಸಂತೋಷದಿಂದ ನೀನು ಉಬ್ಬತಕ್ಕವನೂ ಅಲ್ಲ! ದುಃಖಸುಖ ಗಳೆರಡೂ ನಿನ್ನ ಮೇಲೆ ತಮ್ಮ ಶಕ್ತಿಯನ್ನು ತೋರಿಸಲಾರವು. ನಿನ್ನನ್ನು ಸರ್ವಜ್ಞನೆಂದು ಮಹಾತ್ಮರೂ ಪೂಜಿಸುವರು. ಹೀಗಿದ್ದರೂ ನೀನು ಹಿರಿಯರನ್ನು ಗೌರವಿಸುವುದಕ್ಕಾಗಿ ಒಂದೊಂದು ವಿಷಯವನ್ನೂ ಅವರನ್ನೇ ಕೇಳಿ ಸಂದೇಹ ವನ್ನು ತೀರಿಸಿಕೊಳ್ಳುವಂತೆ ನಟಿಸುತ್ತಿರುವೆ. ಸತ್ತವನಮೇಲೆ ದ್ವೇಷಬುದ್ಧಿ ಯನ್ನು ಬಿಟ್ಟುಬಿಡುವ ಹಾಗೆಯೇ ಬದುಕಿರುವವನ ಮೇಲೆಯೂ ದ್ವೇಷವಿಲ್ಲ ದಿರುವುದು, ಇಲ್ಲದ ವಸ್ತುವಿನಲ್ಲಿ ಆಸೆಯನ್ನಿಡದಂತೆ ಇರುವ ವಸ್ತುವಿನಲ್ಲಿಯೂ ಆಸೆಯನ್ನಿಡದಿರುವುದು. ಈ ಎರಡು ವಿಧವಾದ ಮನೋದಾರ್ಢ್ಯವು ಭೂಮಿ ಯಲ್ಲಿ ಯಾವನಿಗುಂಟೋ ಆತನು ಯಾವುದಕ್ಕೂ ಸ್ವಲ್ಪವಾದರೂ ಪರಿತಪಿಸ ಲಾರನು. ಆದ್ದರಿಂದ ನೀನು ಹೇಳಿದಂತೆ ನನಗೆ ದುಃಖಲೇಶವೂ ಇಲ್ಲವು. "ಹಾಗಿದ್ದರೆ ಹೀಗೆ ಸಂಕಟಪಡುವುದೇಕೆ?" ಎಂದು ನೀನು ಕೇಳಬಹುದು. ಎಲೈ ಪುರುಷಶ್ರೇಷ್ಠನೆ! ಯಾವನು ತ್ರಿಕಾಲಜ್ಞನಾಗಿರುವನೋ, ಅಥವಾ ಯಾವನು ಜೀವಾತ್ಮಪರಮಾತ್ಮಸ್ವರೂಪಗಳನ್ನು ಚೆನ್ನಾಗಿ ಬಲ್ಲನೋ, ಅಂತವನು ಇಂತಹ ವ್ಯಸನಕಾಲಗಳಲ್ಲಿಯೂ ದುಃಖಿಸಲಾರನೆಂಬುದೇನೋ ನಿಜವು. ಹಾಗೆಯೇ ನೀನು ಯಾವಭಾಗಕ್ಕೂ ದುಃಖಿಸದಿರುವುದೇ ನ್ಯಾಯವು. ಆದರೆ ನೀನು ದುಃಖಿಸದಿದ್ದಮಾತ್ರಕ್ಕೆ ನಿನ್ನ ಕಷ್ಟವನ್ನು ನೋಡಿ ನಾನು ಹೇಗೆ ಸಹಿಸಲಿ? ಎಲೈ ಮಹಾತ್ಮನೆ! ನೀನಾದರೋ ದೇವಸಮಾನನು. ಸತ್ವಗುಣ ಸಂಪನ್ನನು. ಮಹಾಮಹಿಮೆಯುಳ್ಳವನು. ಸತ್ಯಪ್ರತಿಜ್ಞೆಯುಳ್ಳವನು. ಲೋಕದಲ್ಲಿ ನಿನಗೆ ತಿಳಿಯದುದೊಂದೂ ಇಲ್ಲವು. ಎಲ್ಲವನ್ನೂ ಚೆನ್ನಾಗಿ ವಿಮರ್ಶಿಸತಕ್ಕವನು. ಬಹಳ ಧೀಮಂತನು. ಈ ಸದ್ಗುಣರಾಶಿಗಳೆಲ್ಲವೂ ನಿನ್ನಲ್ಲಿ ತುಂಬಿರುವುವು. ಈ ಭೂಲೋಕದ ಉತ್ಪತ್ತಿವಿನಾಶಗಳೆಲ್ಲವನ್ನೂ ತಿಳಿದ ಇಂತಹ ನೀನು, ನನ್ನಂತವರಿಗೆ ಸಹಿಸಬಾರದ ಈ ಮಹಾದುಃಖವನ್ನುಂಟುಮಾಡ ಬಹುದೇ! ನೀಚಳಾದ ನನ್ನ ತಾಯಿಯು ನಾನಿಲ್ಲದ ಕಾಲದಲ್ಲಿ ನನಗೋಸ್ಕರ ವಾಗಿ ಈ ಪಾಪಕೃತ್ಯವನ್ನು ನಡೆಸಿಬಿಟ್ಟಳು. ಇದು ನನಗೆ ಎಂದಿಗೂ ಸಮ್ಮತ ವಲ್ಲ. ನೀನು ಕೋಪವನ್ನು ಬಿಟ್ಟು ನನ್ನಲ್ಲಿ ಪ್ರಸನ್ನನಾಗಬೇಕು. ನಾನಾದರೋ ಈಗ ಧರ್ಮಪಾಶಕ್ಕೆ ಕಟ್ಟುಬಿದ್ದಿರುವೆನು. ಆದುದರಿಂದಲೇ ಮಹಾಪಾಪಿಯಾದ

*

ಈ ನನ್ನ ತಾಯಿಯು ಶಿಕ್ಷಾರ್ಹಳಾಗಿದ್ದರೂ ಆಕೆಯನ್ನು ತೀವ್ರವಾದ ದಂಡನೆಯಿಂದ ಕೊಲ್ಲದೆ ಬಿಟ್ಟಿರುವೆನು. ಲೋಕಪವಿತ್ರವಾದ ವಂಶದಲ್ಲಿ ಹುಟ್ಟಿ, ಶುದ್ಧಾಚಾರವುಳ್ಳ ದಶರಥನಿಗೆ ಮಗನಾಗಿ ಜನಿಸಿ, ಧರ್ಮಗಳೆಲ್ಲವನ್ನೂ ತಿಳಿದಿರುವ ನಾನು ಲೋಕನಿಂದಿತವಾದ ಅಧರ್ಮಕಾರ್ಯಕ್ಕೆ ಹೇಗೆ ಪ್ರವರ್ತಿಸಲಿ? ಇಷ್ಟೇ ಅಲ್ಲದೆ ನಮ್ಮ ತಂದೆಯಾದ ದಶರಥನೇ ನನಗೆ ಪರಮಗುರುವು. ಆತನು ಯಾಗಾದಿಕ್ರಿಯೆಗಳನ್ನು ನಡೆಸಿದವನು. ಇದರಮೇಲೆ ವಯೋವೃದ್ಧನು ಮತ್ತು ನಮ್ಮೆಲ್ಲರಿಗೂ ಆತನೇ ರಾಜನು. ಅವನು ಲೋಕಾಂತರವನ್ನು ಸೇರಿಬಿಟ್ಟಿರುವನು. ತಂದೆಯಾದ ಆತನು ನಮಗೆ ದೈವಸಮಾನನೆಂದು ತಿಳಿದೇ ಆತನನ್ನು ಈ ಸಭೆಯಲ್ಲಿ ನಿಂದಿಸುವುದಕ್ಕೆ ನನ್ನ ಮನಸ್ಸು ಹಿಂತೆಗೆಯುತ್ತಿರುವುದು. ಲೋಕದಲ್ಲಿ ಧರ್ಮಜ್ಞನಾದ ಯಾವನು ತಾನೇ ಒಬ್ಬ ಹೆಂಗಸಿನ ಸಂತೋಷಕ್ಕಾಗಿ ಧರ್ಮಾರ್ಥಗಳೆರಡಕ್ಕೂ ಹಾನಿಯನ್ನು ತರುವ ಈ ಪಾಪಕಾರ್ಯಕ್ಕೆ ಪ್ರಯತ್ನಿಸುವನು? ಕೊನೆಗಾಲಕ್ಕೆ ತಕ್ಕಂತೆ ಮನುಷ್ಯನ ಬುದ್ಧಿಯು ಕೆಟ್ಟು ಹೋಗುವುದೆಂಬ ಲೋಕವಾರ್ತೆಯು ಈ ನಮ್ಮ ತಂದೆಯ ದುಷ್ಕೃತ್ಯದಿಂದ ಚೆನ್ನಾಗಿ ನಿದರ್ಶನಕ್ಕೆ ಬಂದಂತಾಯಿತು. ಎಲೈ ರಾಮನೆ! ಕೈಕೇಯಿಯ ಕೋಪವನ್ನು ನೋಡಿ ಭಯದಿಂದಲೋ ಆಕೆಯಲ್ಲಿ ಮೋಹದಿಂದಲೋ, ಸಾಹಸಬುದ್ಧಿಯಿಂದಲೋ ನಮ್ಮ ತಂದೆಯು ನಡೆಸಿಬಿಟ್ಟ ಈ ಧರ್ಮಾತಿಕ್ರಮವನ್ನು ನೀನು ಚೆನ್ನಾಗಿ ಪರ್ಯಾಲೋಚಿಸಿ ಅದನ್ನು ತಪ್ಪಿಸಬೇಕು. ಆತನ ದುರ್ಮಾರ್ಗವನ್ನು ಸನ್ಮಾರ್ಗಕ್ಕೆ ತರುವುದು ನಿನಗೆ ಸೇರಿದುದಲ್ಲವೆ? ತಂದೆಯು ಮಾಡಿದ ಧರ್ಮಾತಿಕ್ರಮವನ್ನು ಯಾವ ಪುತ್ರನು ತಿದ್ದುವುದಕ್ಕೆ ಯತ್ನಿಸುವನೋ ಆತನೇ ಸತ್ಪುತ್ರನೆನಿಸುವನು. ಹಾಗಿಲ್ಲದವನು ಪುತ್ರನೆನಿಸುವುದೇ ಇಲ್ಲವು. ನಿನಗೆ ಆ ಅಪವಾದವು ಬರಬಾರದಲ್ಲವೆ? ತಂದೆಯು ಸಜ್ಜನರಿಗೆ ನಿಂದಿತವಾದ ಯಾವುದೋ ಒಂದು ಪಾಪಕಾರ್ಯವನ್ನು ಮಾಡಿದಮಾತ್ರಕ್ಕೆ ಆ ಅಪವಾದಕ್ಕೆ ನೀನೂ ಭಾಗಿಯಾಗಬಾರದಲ್ಲವೆ? ಮುಖ್ಯವಾಗಿ ಕೈಕೇಯಿಯನ್ನೂ ನನ್ನನ್ನೂ ನಮ್ಮ ತಂದೆಯನ್ನೂ ನಮ್ಮ ಇಷ್ಟಮಿತ್ರಬಂಧುಗಳೆಲ್ಲರನ್ನೂ, ನಮ್ಮ ದೇಶದ ಸಮಸ್ತಪ್ರಜೆಗಳನ್ನೂ ಅಪಾಯವಿಲ್ಲದೆ ಕಾಪಾಡಬೇಕಾದುದು ನಿನ್ನ ಭಾರವಾಗಿರಲಿಲ್ಲವೆ? ಅಣ್ಣಾ! ಈ ಅರಣ್ಯವಾಸವೆಲ್ಲಿ? ಕ್ಷತ್ರಿಯ ಧರ್ಮವೆಲ್ಲಿ? ಈ ಜಡೆಗಳೆಲ್ಲಿ? ರಾಜ್ಯರಕ್ಷಣೆಯೆಲ್ಲಿ? ಹೀಗೆ ಕುಲಕ್ಕೂ ಸ್ವರೂಪಕ್ಕೂ ವಿರುದ್ಧವಾದ

ಕಾರ್ಯವನ್ನು ನಡೆಸುವುದು ನಿನಗೆ ಉಚಿತವೆ? ಎಂದಿಗೂ ನಿನಗುಚಿತವಲ್ಲ! ಕ್ಷತ್ರಿಯನಾಗಿ ಹುಟ್ಟಿದಮೇಲೆ ಆತನಿಗೆ ಪಟ್ಟಾಭಿಷೇಕವೆಂಬುದು ಮೊದಲನೆಯ ಧರ್ಮವು. ಇದರಿಂದಲೇ ಕ್ಷತ್ರಿಯನು ಪ್ರಜಾಪರಿಪಾಲನಕ್ಕೆ ಯೋಗ್ಯತೆಯನ್ನು ಪಡೆಯುವನು. ಹೀಗಿರುವಾಗ ಕ್ಷತ್ರಿಯನಾಗಿ ಹುಟ್ಟಿದವನು ಯಾವನುತಾನೇ, ತ್ಯಾಗಭೋಗಗಳಿಂದ ಕೂಡಿ ಪ್ರತ್ಯಕ್ಷಫಲವನ್ನು ತೋರಿಸತಕ್ಕ ಪ್ರಜಾಪಾಲನವೆಂಬ ಪರಲೋಕಶ್ರೇಯಸ್ಸಾಧನಭೂತವಾದ ಸ್ವಧರ್ಮವನ್ನು ಬಿಟ್ಟು ಅಪ್ರತ್ಯಕ್ಷವಾಗಿ, ಅಂಗಲೋಪಾದಿಗಳುಂಟಾಗಬಹುದಾದುದರಿಂದ ಸಂದೇಹಾಸ್ಪದವಾದ ಫಲಸಿದ್ಧಿಯುಳ್ಳುದಾಗಿ, ಲಕ್ಷಣಗಳಿಲ್ಲದುದರಿಂದ ನಿರೂಪಿಸಲಸಾಧ್ಯವಾಗಿ, ಕಾಲಾಂತರಫಲಪ್ರದವಾದ ತಾಪಸಧರ್ಮವನ್ನಾಚರಿಸುವನು! ಕ್ಷತ್ರಿಯನಿಗೆ ಈ ಧರ್ಮವು ಯಾವ ಪ್ರಮಾಣದಿಂದಲೂ ವಿಹಿತವಾದುದಲ್ಲ. ಒಂದುವೇಳೆ ನೀನು ವಿಶೇಷಕ್ಲೇಶಕರವಾದ ಧರ್ಮವನ್ನೇ ಆಚರಿಸಬೇಕೆಂಬ ಉತ್ಸಾಹವುಳ್ಳವನಾಗಿರುವಪಕ್ಷದಲ್ಲಿ ರಾಜ್ಯಭಾರವನ್ನು ವಹಿಸಿ, ಚತುರ್ವರ್ಣದವರೂ ಅವರವರ ಸ್ವಧರ್ಮವನ್ನು ಬಿಡದೆ ನಡೆಯುವಂತೆ ನಿಯಮಿಸಿ ಧರ್ಮದಿಂದ ರಾಜ್ಯವನ್ನು ಪಾಲಿಸು. ಇದೂ ಕ್ಲೇಶಕರವಾದುದೇ ಹೊರತು ಸುಲಭವಲ್ಲ. ಧರ್ಮಜ್ಞರು ನಾಲ್ಕುವಿಧವಾದ ಆಶ್ರಮಗಳಲ್ಲಿಯೂ ಗೃಹಸ್ಥಾಶ್ರಮವೇ ಶ್ರೇಷ್ಠವೆಂದು ಹೇಳುವರಲ್ಲವೆ? ಆ ಗೃಹಸ್ಥಾಶ್ರಮವನ್ನು ನೀನು ಹೇಗೆ ಬಿಡಬಹುದು? ವಿದ್ಯೆಯಲ್ಲಿಯಾಗಲಿ, ವಯಸ್ಸಿನಲ್ಲಿಯಾಗಲಿ, ಕ್ರಮದಲ್ಲಿಯಾಗಲಿ ನಿನಗಿಂತಲೂ ನಾನು ಹಿಂದಾಗಿರುವೆನು. ಎಲ್ಲಾ ಭಾಗಗಳಲ್ಲಿಯೂ ನನಗಿಂತಲೂ ಹಿರಿಯನಾದ ನೀನಿರುವಾಗ ನಾನು ಹೇಗೆ ರಾಜ್ಯವನ್ನು ಪಾಲಿಸಬಲ್ಲೆನು? ಒಂದುವೇಳೆ ನೀನು "ನಿನ್ನಂತೆಯೇ ನಾನೂ ಚಿಕ್ಕವನಲ್ಲವೆ?" ಎಂದು ಕೇಳಬಹುದು. ನಾನು ವಯಸ್ಸಿನಲ್ಲಿ ಮಾತ್ರವೇ ಚಿಕ್ಕವನಲ್ಲ. ಗುಣದಲ್ಲಿಯೂ ಬುದ್ಧಿಯಲ್ಲಿಯೂ ನಿನಗಿಂತಲೂ ನಾನು ಬಹಳ ಕೀಳಾದವನು. ನನ್ನ ಸ್ಥಿತಿಯೂ ಬಹಳ ಹೀನವಾದುದು. ಇದರಮೇಲೆ ನಿನ್ನನ್ನು ಬಿಟ್ಟು ನಾನು ಬದುಕಿರುವುದೇ ಸಾಧ್ಯವೆಂದು ನನಗೆ ತೋರಿಲ್ಲ. ಇನ್ನು ರಾಜ್ಯವನ್ನು ಹೇಗೆ ನಡೆಸಬಲ್ಲೆನು? ಎಲೈ ಧರ್ಮಜ್ಞನೆ! ನೀನು ನಿಜಧರ್ಮವನ್ನವಲಂಬಿಸಿ, ಬಂಧುಗಳೊಡಗೂಡಿ, ನಿಷ್ಕಂಟಕವಾದ ನಿನ್ನ ತಂದೆಯ ರಾಜ್ಯವನ್ನು ಎಚ್ಚರಿಕೆಯಿಂದ ಚೆನ್ನಾಗಿ ಪರಿಪಾಲಿಸುತ್ತಿರು! ಪ್ರಜೆಗಳೆಲ್ಲರೂ ಮಂತ್ರಜ್ಞರಾದ ವಸಿಷ್ಠಾದಿಗಳೊಡನೆಯೂ

ಋತ್ವಿಕ್ಕುಗಳೊಡನೆಯೂ ಸೇರಿ ನಿನಗೆ ಇಲ್ಲಿಯೇ ಸಮಂತ್ರಕವಾಗಿ ಪಟ್ಟಾಭಿಷೇಕವನ್ನು ನಡೆಸಲಿ! ದೇವೇಂದ್ರನು ಲೋಕಗಳೆಲ್ಲವನ್ನೂ ಜಯಿಸಿದಮೇಲೆ ದೇವತೆಗಳಿಂದ ಅಭಿಷಿಕ್ತನಾದಂತೆ, ನೀನೂ ನಮ್ಮಿಂದ ಅಭಿಷಿಕ್ತನಾಗಿ ಪ್ರಜಾಪಾಲನಾರ್ಥವಾಗಿ ಅಯೋಧ್ಯೆಗೆ ಪ್ರಯಾಣಮಾಡು! ದೇವರ್ಷಿಪಿತೃ ಋಣಗಳೆಂಬ ಮೂರು ಋಣವನ್ನೂ ತೀರಿಸಿಕೊಂಡು, ಶತ್ರುಗಳೆಲ್ಲರನ್ನೂ ಹುಟ್ಟಡಗಿಸಿ, ಇಷ್ಟಬಂಧುಗಳ ಕೋರಿಕೆಗಳೆಲ್ಲವನ್ನೂ ಈಡೇರಿಸಿಕೊಟ್ಟು, ನಮ್ಮ ರಾಜ್ಯವನ್ನೂ ನನ್ನನ್ನೂ ರಕ್ಷಿಸುತ್ತಿರು! ಈಗಲೇ ನಿನ್ನ ಅಭಿಷೇಕೋತ್ಸವವನ್ನು ನೋಡಿ ನಿನ್ನ ಮಿತ್ರರೆಲ್ಲರೂ ಆನಂದಿಸಲಿ! ಈಗಲೇ ನಿನ್ನ ಅಭಿಷೇಕ ವೃತ್ತಾಂತವನ್ನು ಕೇಳಿ ನಿನ್ನ ಶತ್ರುಗಳೆಲ್ಲರೂ ಭಯದಿಂದ ದಿಕ್ಕುದಿಕ್ಕಿಗೆ ಓಡಿಹೋಗಲಿ! ಎಲೈ ಆರ್ಯನೆ! ನನ್ನ ತಾಯಿಗುಂಟಾಗಿರುವ ಲೋಕನಿಂದೆಯನ್ನೂ ತಪ್ಪಿಸಿ, ನಮ್ಮ ತಂದೆಯನ್ನೂ ದೋಷರಹಿತನನ್ನಾಗಿ ಮಾಡು. ಇದೋ! ನಾನು ತಲೆ ತಗ್ಗಿಸಿ ಪ್ರಣಾಮಮಾಡಿ ಬೇಡುವೆನು. ಲೋಕರಕ್ಷಕನಾದ ಪರಮಾತ್ಮನು ಪ್ರಾಣಿವರ್ಗದಲ್ಲಿ ಹೇಗೋ ಹಾಗೆ, ನೀನು ನನ್ನಲ್ಲಿಯೂ ಬಂಧುಗಳಲ್ಲಿಯೂ, ಇನ್ನೂ ಇಲ್ಲಿರುವ ಸಮಸ್ತ ಜನರಲ್ಲಿಯೂ ಅನುಗ್ರಹವನ್ನು ತೋರಿಸು! ನಾನು ಇಷ್ಟು ಪ್ರಾರ್ಥಿಸಿಕೊಂಡರೂ ಕೇಳದೆ ನೀನು ಕಾಡಿನಲ್ಲಿಯೇ ಇರುವುದಾದರೆ ನಾನೂ ನಿನ್ನೊಡನೆಯೇ ಇರುವೆನು" ಎಂದನು. ಹೀಗೆ ಭರತನು ಸಾಂತ್ವವಾಕ್ಯಗಳನ್ನು ಹೇಳಿ ತಲೆಯನ್ನು ತಗ್ಗಿಸಿ ಪ್ರಾರ್ಥಿಸುತ್ತಿದ್ದರೂ, ಧೀರನಾದ ರಾಮನು ಪಿತೃವಾಕ್ಯ ಪರಿಪಾಲನವ್ರತದಲ್ಲಿಯೇ ದೃಢಸಂಕಲ್ಪವುಳ್ಳವನಾಗಿ ಅಯೋಧ್ಯೆಗೆ ಹಿಂತಿರುಗಲು ಇಷ್ಟಪಡಲೇ ಇಲ್ಲ. ಅಲ್ಲಿದ್ದ ಜನರೆಲ್ಲರೂ ಆ ರಾಮನ ಅದ್ಭುತವಾದ ಮನಸ್ಥೈರ್ಯವನ್ನು ನೋಡಿ ಸಂತೋಷದಲ್ಲಿಯೂ ದುಃಖದಲ್ಲಿಯೂ ತೂಗಾಡುತಿದ್ದರು. ಆಗ ರಾಮನನ್ನು ಪ್ರಾರ್ಥಿಸುತ್ತಿರುವ ಭರತನನ್ನು ನೋಡಿ ಅಲ್ಲಿದ್ದ ಋತ್ವಿಕ್ಕುಗಳೂ, ಪುರಜನರೂ, ಸಂಕಟದಿಂದ ಗೋಳಿಡುತ್ತಿರುವ ಮಾತೆಯರೂ ಭರತನನ್ನು ಕೊಂಡಾಡುತ್ತ, ತಾವೂ ರಾಮನನ್ನು ಬಾರಿ ಬಾರಿಗೂ ಪ್ರಾರ್ಥಿಸುತಿದ್ದರು.

ಇದು ನೂರಾರನೆಯ ಸರ್ಗವು.

ಭರತನು ದಶರಥನಲ್ಲಿ ದೋಷಾರೋಪಣಮಾಡಲು ರಾಮನು ಅದನ್ನು ಖಂಡಿಸಿ ತಂದೆಯು ಧರ್ಮವನ್ನೇ ಆಚರಿಸಿದನೆಂದು ಉಪಪಾದಿಸಿದುದು.

ಹೀಗೆ ಭರತನು ರಾಮನನ್ನು ಗೌರವಿಸಿ ಸಮಾಧಾನ ವಾಕ್ಯಗಳನ್ನು ಹೇಳುತ್ತ ಆತನನ್ನು ನಿರ್ಬಂಧಿಸುತ್ತಿರಲು ಆ ಮಾತುಗಳನ್ನು ಕೇಳಿ ರಾಮನು ತನ್ನ ಬಂಧುಗಳ ಮುಂದೆಯೇ ಆತನನ್ನು ಕುರಿತು "ವತ್ಸ ಭರತನೆ! ನೀನು ನನಗೆ ಹೇಳಿದ ಮಾತುಗಳೇನೋ ಯುಕ್ತವಾಗಿಯೇ ಇರುವುದು. ರಾಜಶ್ರೇಷ್ಠನಾಗಿದ್ದ ದಶರಥನಿಗೆ ಕೈಕೇಯಿಯಲ್ಲಿ ಹುಟ್ಟಿದ ನೀನು ಈ ಮಾತುಗಳನ್ನಾಡಿ ನನ್ನಲ್ಲಿ ವಿನಯವನ್ನು ತೋರಿಸುವುದು ಯುಕ್ತವೇ ಸರಿ! ಅದು ಹಾಗಿರಲಿ! ಎಲೈ ವತ್ಸನೆ! ಇನ್ನೊಂದು ವಿಷಯವನ್ನು ಹೇಳುವೆನು ಕೇಳು. [1] ಪೂರ್ವದಲ್ಲಿ

---

[1] ಇಲ್ಲಿ ಕೆಲವು ಆಕ್ಷೇಪಣೆಗಳು ಕಂಡುಬರುವುವು. ಏನೆಂದರೆ:—ಕೈಕೇಯಿಯು ತನ್ನ ವಿವಾಹ ಕಾಲದಲ್ಲಿ ತನ್ನ ಮಗನಿಗಾಗಿ ಕನ್ಯಾಶುಲ್ಕವಾಗಿಯೇ ಶಪಥಮಾಡಿಕೊಡಲ್ಪಟ್ಟಿರುವ ರಾಜ್ಯವನ್ನು ಈಗ ಭರತನಿಗೆ ಕೊಡಿಸುವುದಕ್ಕಾಗಿ, ವರರೂಪದಿಂದ ನಿರ್ಬಂಧಿಸಿದುದೇಕೆ? ಎಂದರೆ, ಆ ವೃತ್ತಾಂತವು ನಡೆದು ಬಹುಕಾಲವಾದುದರಿಂದಲೂ ಆಗ ತನಗೆ ಬಾಲ್ಯವಾಗಿದ್ದುದರಿಂದಲೂ, ಅದರ ಗಮನವಿಲ್ಲದೆ, ಈಗ ಸ್ವಲ್ಪಕಾಲದಲ್ಲಿ ನಡೆದ ವರಪ್ರದಾನವನ್ನೇ ವ್ಯಾಜವಾಗಿಟ್ಟುಕೊಂಡು ಕೇಳಿದುದಾಗಿ ಗ್ರಹಿಸಬೇಕು. ಇದಲ್ಲದೆ ಕೈಕೇಯಿಗೆ ಈಗ ಸ್ವಲ್ಪಕಾಲದ ಹಿಂದೆ ನಡೆದ ಈ ವರದಾನ ವೃತ್ತಾಂತವೂ ಮರೆತುಹೋಗಿದ್ದುದರಿಂದಲೇ ಮಂಥರೆಯು ಇವಳಿಗೆ ದುರ್ಬೋಧನೆಯನ್ನು ಮಾಡುವಾಗ "ಕಿಂ ನ ಸ್ಮರಸಿ ಕೈಕೇಯಿ" ಎಂದು ಈ ವರಗಳನ್ನು ಜ್ಞಾಪಿಸಿರುವಳು. ಹೀಗೆ ಸಮೀಪದಲ್ಲಿ ನಡೆದ ವಿಷಯವನ್ನೇ ಮರೆತುಬಿಟ್ಟಿರುವ ಕೈಕೇಯಿಗೆ ಬಹುಕಾಲದ ವೃತ್ತಾಂತವು ಮರೆತುಹೋಗುವುದೇನೂ ಆಶ್ಚರ್ಯವಲ್ಲ. ಮತ್ತು ಇಲ್ಲಿ "ದಶರಥನು ಮೊದಲೇ ತನ್ನ ವಿವಾಹ ಕಾಲದಲ್ಲಿ ಕನ್ಯಾಶುಲ್ಕಕ್ಕಾಗಿ ಕೈಕೇಯಿಯ ಮಗನಿಗೆ ಕೊಡುವುದಾಗಿ ಒಪ್ಪಿದ್ದ ರಾಜ್ಯವನ್ನು ರಾಮನಿಗೆ ಕೊಡಬೇಕೆಂದು ಪ್ರಯತ್ನಿಸಿದುದು ತಪ್ಪಿತವಲ್ಲವೆ? ಇದರಿಂದ ದಶರಥನು ಅಸತ್ಯವನ್ನು ಹೇಳಿದಂತಾಗಲಿಲ್ಲವೆ? ಎಂದು ಆಕ್ಷೇಪಣೆಯುಂಟಾಗಬಹುದು. ಆದರೆ " ಉದ್ವಾಹಕಾಲೇ ರತಿಸಂಪ್ರಯೋಗೇ ಪ್ರಾಣಾತ್ಯಯೇ ಸರ್ವಧನಾಪಹಾರೇ! ವಿಪ್ರಸ್ಯ ಚಾರ್ಥೇಪ್ಯನೃತಂ ವದೇಯುಃ ಪಂಚಾನೃತಾನ್ಯಾಹುರಪಾತಕಾನಿ " ಎಂಬ ನೀತಿ ವಾಕ್ಯವನ್ನನುಸರಿಸಿ, ವಿವಾಹ ಕಾಲದಲ್ಲಿಯೂ, ರತಿಕಾಲದಲ್ಲಿಯೂ ಪ್ರಾಣಕ್ಕೆ ಅಪಾಯವುಂಟಾದಾಗಲೂ, ತನ್ನ ಸಮಸ್ತ ಧನವೂ ಕಳವು ಹೋಗುವ ಸಂದರ್ಭಗಳಲ್ಲಿಯೂ, ಬ್ರಾಹ್ಮಣರಿಗೆ ಉಪಕಾರವನ್ನು ಮಾಡಬೇಕಾದ ಸಂದರ್ಭಗಳಲ್ಲಿಯೂ, ಸುಳ್ಳು ಹೇಳಿದರೂ ದೋಷವಿಲ್ಲವೆಂದು ಸಿದ್ಧವಾಗುವುದು.

ನಮ್ಮ ತಂದೆಯು ನಿನ್ನ ತಾಯಿಯನ್ನು ಮದುವೆಯಾದ ಕಾಲದಲ್ಲಿಯೇ ನಿನ್ನ ಮಾತಾಮಹನಾದ ಕೇಕಯ ರಾಜನಿಗೆ, ಅವನ ಮಗಳ ಹೊಟ್ಟೆಯಲ್ಲಿ ಹುಟ್ಟಿದ ಮಗನಿಗೇ ತನ್ನ ರಾಜ್ಯವನ್ನು ಕೊಡುವುದಾಗಿ ಪ್ರತಿಜ್ಞೆ ಮಾಡಿ ಕೊಟ್ಟಿರುವನು. ಇದಲ್ಲದೆ ಹಿಂದೆ ದೇವಾಸುರಯುದ್ಧದಲ್ಲಿ ನಮ್ಮ ತಂದೆಯು ನಿನ್ನ ತಾಯಿಯ ಸಾಹಸಕ್ಕೆ ಮೆಚ್ಚಿ ಕೆಲವು ವರಗಳನ್ನು ಕೊಡುವುದಾಗಿಯೂ ವಾಗ್ದಾನಮಾಡಿ ರುವನು. ಇವೆಲ್ಲವನ್ನೂ ಮನಸ್ಸಿನಲ್ಲಿಟ್ಟುಕೊಂಡೇ ಯಶಸ್ವಿನಿಯಾದ ನಿನ್ನ ತಾಯಿಯು ತನಗೆ ಪ್ರತಿಜ್ಞೆ ಮಾಡಿಕೊಟ್ಟ ಆ ಎರಡು ವರಗಳನ್ನು ಕೊಡ ಬೇಕೆಂದು ಕೇಳಿರುವಳು. ಈ ವರಗಳನ್ನು ಕೇಳುವುದಕ್ಕೆ ಮೊದಲೇ ಆಕೆಯು ತಾನು ಕೇಳಿದುದನ್ನು ತಪ್ಪದೇ ನಡೆಸಿಕೊಡುವುದಾಗಿ ನಮ್ಮ ತಂದೆಯಿಂದ ಶಪಥ ಮಾಡಿಸಿಯೂ ಇರುವಳು. ಆ ಎರಡು ವರಗಳಲ್ಲಿ ಒಂದಕ್ಕೆ ನಿನಗೆ ರಾಜ್ಯವನ್ನು ಕೊಡಬೇಕೆಂದೂ, ಮತ್ತೊಂದಕ್ಕೆ ನನ್ನನ್ನು ಕಾಡಿಗೆ ಕಳುಹಿಸಬೇಕೆಂದೂ ಕೇಳಿರುವಳು. ನಮ್ಮ ತಂದೆಯು, ಕೊಟ್ಟ ಮಾತಿಗೆ ಕಟ್ಟುಬಿದ್ದು, ಅವಳಿಗೆ ಸಲ್ಲಿಸಬೇಕಾದ ಎರಡು ವರಗಳ ಸಾಲಗಳನ್ನು ತೀರಿಸಿಕೊಂಡಿರುವನು. ಈ ಕಾರಣದಿಂದಲೇ ನನ್ನನ್ನು ಹದಿನಾಲ್ಕು ವರ್ಷಗಳವರೆಗೆ ಕಾಡಿನಲ್ಲಿದ್ದು ಬರ ಬೇಕೆಂದೂ ನಿಯಮಿಸಿರುವನು. ಇದೆಲ್ಲವೂ ವರದಾನದಿಂದ ಸಂಭವಿಸಿದುದೇ ಹೊರತು ನಮ್ಮ ತಂದೆಯು ಕಾಮವಶದಿಂದ ಮಾಡಿದ ಕೆಲಸವೆಂದೆಣಿಸಬೇಡ! ಆತನ ಮಾತಿನಂತೆಯೇ ನಾನು ಸೀತಾಲಕ್ಷ್ಮಣರೊಡನೆ ಈ ನಿರ್ಜನವಾದ ಕಾಡಿಗೆ ಬಂದು ವಾಸಮಾಡುತ್ತಿರುವೆನು. ಈಗ ಇದನ್ನು ತಪ್ಪಿಸುವುದಕ್ಕೆ ಯಾರಿಂದ ತಾನೇ ಸಾಧ್ಯವು? ತಂದೆಯ ಸತ್ಯವನ್ನು ಕಾಪಾಡಿಡಬೇಕಾದುದು ಮಕ್ಕಳಾದ ನಮಗೆ ಅವಶ್ಯಕರ್ತವ್ಯವಲ್ಲವೆ? ಆದುದರಿಂದ, ಎಲೈ ವತ್ಸನೆ!

ಆದುದರಿಂದ ದಶರಥನು ತನ್ನ ವಿವಾಹ ಕಾಲದಲ್ಲಿ ಸುಳ್ಳಾಡಿದುದು ದೋಷವಲ್ಲವೆಂಬ ಭಾವದಿಂದಲೇ, ಹೀಗೆ ನ್ಯಾಯವಾಗಿ ರಾಮನಿಗೆ ಸೇರಿಸಬೇಕಾದ ರಾಜ್ಯವನ್ನು ಅವನಿಗೇ ಕೊಡುವುದಾಗಿ ಪ್ರಯತ್ನಿಸಿದನು. "ಆದರೆ ಕೇಕಯರಾಜನಾದರೂ ದಶರಥನನ್ನು ನಿರ್ಬಂಧಿಸ ಬೇಕಾಗಿತ್ತಲ್ಲವೆ?" ಎಂದರೆ ಆ ಕೇಕಯರಾಜನೂ ಕೂಡ ರಾಮನ ಗುಣಗಳನ್ನು ನೋಡಿ, ಆತನೇ ಕೋಸಲರಾಜ್ಯಾಧಿಪತ್ಯಕ್ಕರ್ಹನೆಂಬ ಭಾವವನ್ನಿಟ್ಟು ತನ್ನ ಮೊಮ್ಮಗನಾದ ಭರತನಿಗೆ ರಾಜ್ಯವನ್ನು ಕೊಡಿಸಬೇಕೆಂದು ಪ್ರಯತ್ನಿಸಲಿಲ್ಲವೆಂದು ಗ್ರಹಿಸಬೇಕು. ಸುಮಂತ್ರಾದಿ ಮಂತ್ರಿ ಗಳೂ ಇವೆಲ್ಲವನ್ನೂ ಚೆನ್ನಾಗಿ ಬಲ್ಲವರಾದುದರಿಂದ ದಶರಥನ ಪ್ರಯತ್ನಕ್ಕೆ ಅನುಸರಿಸಿ ಸುಮ್ಮನಿದ್ದರೆಂದೂ ಗ್ರಹಿಸಬೇಕು.

ನೀನೂ ತಂದೆಯ ಸತ್ಯವನ್ನು ಕಾಪಾಡುವುದಕ್ಕೆ ಪ್ರಯತ್ನಿಸು. ಆತನ ಮಾತಿಗೆ ವಿರೋಧವಾಗಿ ನಡೆಯಬೇಡ! ಅಯೋಧ್ಯೆಗೆ ಹೋಗಿ ಈಗಲೇ ರಾಜ್ಯಾಭಿಷೇಕ ವನ್ನು ವಹಿಸು. ಈ ಭೂಮಂಡಲಕ್ಕೆ ಪ್ರಭುವಾಗಿ ಧರ್ಮಜ್ಞನಾಗಿ ರಾಜನೆನಿಸಿ ಕೊಂಡಿದ್ದ ನಮ್ಮ ತಂದೆಯ ಸಾಲವನ್ನು ತೀರಿಸಿ ಆತನನ್ನು ಋಣಮುಕ್ತನನ್ನಾಗಿ ಮಾಡು. ಒಂದು ವೇಳೆ ಆತನಲ್ಲಿ ನಿನಗೆ ಕೋಪವಿದ್ದರೂ ನನಗಾಗಿ ನೀನು ರಾಜ್ಯವನ್ನು ವಹಿಸು! ನಿನ್ನ ತಾಯಿಯನ್ನೂ ಸಂತೋಷಪಡಿಸು. ಎಲೆ ವತ್ಸನೆ! ಪೂರ್ವದಲ್ಲಿ ಗಯವೆಂಬ ಕ್ಷೇತ್ರದಲ್ಲಿ ಯಾಗ ಮಾಡುತ್ತಿದ್ದ ಮಹಾ ಯಶಸ್ವಿ ಯಾದ ಗಯನೆಂಬುವನು ಹೇಳಿದ ನೀತಿವಾಕ್ಯವನ್ನು ನೀನು ಕೇಳಿಲ್ಲವೆ? ಆತನು ತಂದೆತಾಯಿಗಳ ವಿಷಯದಲ್ಲಿ ಹೇಗೆ ನಡೆದುಕೊಳ್ಳಬೇಕೆಂಬುದನ್ನು ವ್ಯಕ್ತವಾಗಿ ಹೇಳಿರುವನಲ್ಲವೆ? ಪುನ್ನಾಮವಾದ ನರಕದಿಂದ ತಂದೆತಾಯಿಗಳನ್ನು ತಪ್ಪಿಸಿ ಕಾಪಾಡುವವನೇ ಪುತ್ರನೆನಿಸುವನು. ಅವರ ಹೆಸರಿನಲ್ಲಿ ಇಷ್ಟಾಪೂರ್ತ ಗಳೆಂಬ ಸತ್ಕಾರ್ಯಗಳನ್ನು ನಡೆಸಿ ಆ ಪಿತೃಗಳನ್ನು ಪುಣ್ಯಲೋಕಕ್ಕೆ ಸೇರಿಸು ವವನೇ ಪುತ್ರನೆನಿಸುವನು. ಲೋಕದಲ್ಲಿ ತಂದೆತಾಯಿಗಳು ಮಕ್ಕಳಾಗಬೇಕೆಂದು ಅಪೇಕ್ಷಿಸುವುದೇಕೆ? ಆ ಮಕ್ಕಳೆಲ್ಲರೂ ಗುಣಶಾಲಿಗಳಾಗಿಯೂ, ವಿದ್ಯಾ ವಂತರಾಗಿಯೂ, ಇರಬೇಕೆಂಬುದಲ್ಲದೆ ಅನೇಕ ಪುತ್ರರಲ್ಲಿ ಒಬ್ಬನಾದರೂ ಗಯೆಗೆ ಹೋಗಿ ಪಿತೃಗಳಿಗೆ ತೃಪ್ತಿಯನ್ನುಂಟುಮಾಡಬೇಕೆಂಬುದೇ ಅವರ ಮುಖ್ಯೋದ್ದೇಶವು. ಇದಕ್ಕಾಗಿಯೇ ತಂದೆತಾಯಿಗಳು ಹೆಚ್ಚಾಗಿ ಸಂತಾನ ವನ್ನಪೇಕ್ಷಿಸುವರು. ಸಮಸ್ತ ರಾಜರ್ಷಿಗಳೂ ಹೀಗೆಯೇ ನಿಶ್ಚಯಿಸಿರುವರು. ಆದುದರಿಂದ ಎಲೈ ಪುರುಷಶ್ರೇಷ್ಠನಾದ ಭರತನೆ! ನಮ್ಮ ತಂದೆಯನ್ನು ನರಕ ದಿಂದ ತಪ್ಪಿಸಿ ರಕ್ಷಿಸು! ಈಗಲೇ ನೀನು ಅಯೋಧ್ಯೆಗೆ ಹೊರಟು, ಶತ್ರುಘ್ನ ನೊಡನೆಯೂ, ಇತರ ಬ್ರಾಹ್ಮಣರೊಡನೆಯೂ ಸೇರಿ ಧರ್ಮಪರಿಪಾಲನದಿಂದ ದೇಶದ ಪ್ರಜೆಗಳನ್ನು ಸಂತೋಷಪಡಿಸು. ಇತ್ತಲಾಗಿ ನಾನೂ ಈ ಸೀತೆ ಯೊಡನೆಯೂ ಲಕ್ಷ್ಮಣನೊಡನೆಯೂ ಕೂಡಿ ದಂಡಕಾರಣ್ಯಕ್ಕೆ ಹೋಗುವೆನು. ವತ್ಸ ಭರತನೆ! ನೀನು ಅತ್ತಲಾಗಿ ಅಯೋಧ್ಯೆಯಲ್ಲಿ ಪ್ರಭುವಾಗಿದ್ದು ಧರ್ಮ ಪರಿಪಾಲನದಿಂದ ಪ್ರಜೆಗಳನ್ನು ಸಂತೋಷಪಡಿಸು! ನಾನೂ ಅತ್ತಲಾಗಿ ಕಾಡಿ ನಲ್ಲಿರುವ ಮೃಗಗಳನ್ನು ರಂಜಿಸುತ್ತ ಕ್ರೂರಮೃಗಗಳನ್ನು ಶಿಕ್ಷಿಸಿ ಇಲ್ಲಿನ ಪ್ರಭುತ್ವವನ್ನು ನಡೆಸುತ್ತಿರುವೆನು. ಮನಸ್ಸಿನಲ್ಲಿ ಸ್ವಲ್ಪವೂ ಚಿಂತೆಯನ್ನಿಟ್ಟು

ಕೊಳ್ಳದೆ ಸಂತೋಷದಿಂದ ಈಗಲೇ ನೀನು ಅಯೋಧ್ಯೆಗೆ ಹೋಗು! ನಾನೂ ಸಂತೋಷದಿಂದಲೇ ದಂಡಕಾರಣ್ಯದಲ್ಲಿದ್ದು ಬರುವೆನು. ಎಲೆ ವತ್ಸನೆ! ಅತ್ತಲಾಗಿ ನಿನ್ನ ತಲೆಯ ಮೇಲೆ ನಮ್ಮ ರಾಜ್ಯ ಚಿಹ್ನವಾದ ಶ್ವೇತಚ್ಛತ್ರವು ನಿನಗೆ ಬಿಸಿಲಿನ ತಾಪವನ್ನು ನೀಗಿಸಿ ತಂಪಾದ ನೆರಳನ್ನುಂಟುಮಾಡಲಿ! ನಾನೂ ಇತ್ತಲಾಗಿ ಅದಕ್ಕಿಂತಲೂ ಅತಿಶಯವಾದ ಈ ಕಾಡುಮರಗಳ ತಂಪಾದ ನೆರಳಿನಲ್ಲಿ ನಿನಗಿಂತಲೂ ಮೇಲೆ ಸುಖದಿಂದಿರುವೆನು. ಅಲ್ಲಿ ನಿನಗೆ ಮಹಾಧೀಮಂತನಾದ ಶತ್ರುಘ್ನನು ಸಹಾಯಕವಾಗಿರುವನು. ಇಲ್ಲಿ ನನಗೆ ಪ್ರಾಣ ಸ್ನೇಹಿತನಂತಿರುವ ಲಕ್ಷ್ಮಣನು ಬೇಕಾದ ಸಹಾಯಗಳನ್ನು ಮಾಡುತ್ತಿರುವನು. ಎಲೆ ವತ್ಸನೆ! ಒಂದು ವಿಷಯವನ್ನು ಮಾತ್ರ ಮುಖ್ಯವಾಗಿ ಮನಸ್ಸಿನಲ್ಲಿಡು! ದಶರಥನಿಗೆ ನಾವು ನಾಲ್ಕುಮಂದಿಯೂ ಮಕ್ಕಳಾಗಿ ಹುಟ್ಟಿರುವೆವು. ಲೋಕವೆಲ್ಲವೂ ನಮ್ಮನ್ನು ಸತ್ಪುತ್ರರೆಂದು ಕೊಂಡಾಡುತ್ತಿರುವುದು. ನಾವೆಲ್ಲರೂ ಯಾವ ಕಾರ್ಯವನ್ನಾದರೂ ಸಾಧಿಸುವುದಕ್ಕೆ ಸಮರ್ಥರಾಗಿರುವೆವು. ಹೀಗಿರುವಾಗಲೂ ನಮ್ಮ ತಂದೆಯ ಸತ್ಯವನ್ನು ನಾವು ಕಾಪಾಡಬೇಡವೇ? ಇದು ನಮ್ಮ ಅವಶ್ಯ ಕರ್ತವ್ಯವಲ್ಲವೇ? ಆದುದರಿಂದ ಎಲೆ ಭರತನೆ! ನಾವಿಬ್ಬರೂ ನಮನಮಗೆ ನಿರ್ಣೀತವಾದ ಕಾರ್ಯವನ್ನು ಸಂತೋಷದಿಂದ ನಡೆಸಿಬಿಡುವೆವು" ಎಂದನು.

ಇದು ನೂರೇಳನೆಯ ಸರ್ಗವು.

ರಾಮನು ಭರತನನ್ನು ವಾದದಿಂದ ಮಾತಾಡದ ಹಾಗೆ ಮಾಡಿ
ದುದನ್ನು ನೋಡಿ ಜಾಬಾಲಿಮುನಿಯು ನಾಸ್ತಿಕ್ಯ ವಾದ
ದಿಂದ ರಾಮನ ಮನಸ್ಸನ್ನು ಹಿಂತಿರುಗಿಸುವುದಕ್ಕೆ
ಪ್ರಯತ್ನಿಸಿದುದು.

ಹೀಗೆ ರಾಮನು ಭರತನಿಗೆ ಪಿತೃವಾಕ್ಯಪರಿಪಾಲನವೆಂಬ ಧರ್ಮವನ್ನು ಬೋಧಿಸಿ ಸಮಾಧಾನಪಡಿಸುತ್ತಿರುವುದನ್ನು ನೋಡಿ ಅಲ್ಲಿದ್ದ ಜಾಬಾಲಿಯೆಂಬ ಬ್ರಾಹ್ಮಣೋತ್ತಮನೊಬ್ಬನು, ಹೇಗಾದರೂ ರಾಮನನ್ನು ಹಿಂತಿರುಗಿಸಿ ಕರೆದು ಕೊಂಡು ಹೋಗಬೇಕೆಂಬುದಕ್ಕಾಗಿ ಧರ್ಮಜ್ಞನಾದ ಆ ರಾಮನಿಗೆ ಧರ್ಮ ವಿರುದ್ಧವಾದ ನಾಸ್ತಿಕವಾದಗಳನ್ನು ಹೇಳಲಾರಂಭಿಸಿ, 'ರಾಮಾ! ಇದೀಗ

ಬಹಳ ಚೆನ್ನಾಯಿತು ! ನಿನಗೂ ಹೀಗೆ ನಿರರ್ಥಕವಾದ ಬುದ್ಧಿಯುಂಟಾಗಬಹುದೆ ? ವಿವೇಕಿಯಾಗಿ ಬುದ್ಧಿಶಾಲಿಯೆನಿಸಿಕೊಂಡ ನೀನೂ ಹೀಗೆ ಏನೂ ತಿಳಿಯದ ಸಾಮಾನ್ಯ ಮನುಷ್ಯನಂತೆ ಮರುಳಾಗಬಹುದೆ ? ಈ ಹುಚ್ಚುತನವನ್ನು ಬಿಟ್ಟು ಬಿಡು ! ಯಾವನಿಗೆ ಯಾವನು ನಂಟನು ? ಯಾರಿಂದ ಯಾರಿಗೇನಾಗಬೇಕು ? ಮನುಷ್ಯನು ಹುಟ್ಟುವಾಗಲೂ ಒಬ್ಬನೇ ಹುಟ್ಟುವನು ! ಸಾಯುವಾಗಲೂ ಒಬ್ಬನೇ ಸಾಯುವನು. ಹೀಗಿರುವಾಗ "ನನ್ನ ತಂದೆ, ನನ್ನ ತಾಯಿ" ಎಂಬ ದುರಭಿಮಾನದಿಂದ ಹಿಗ್ಗುವವನು ಹುಚ್ಚನಲ್ಲವೆ? ಲೋಕದಲ್ಲಿ ಯಾರಿಗೆ ಯಾರಾಗುವರು ? ಒಬ್ಬರಿಗೊಬ್ಬರಿಗೆ ಸಂಬಂಧವೇನು ? ಊರಿಂದೂರಿಗೆ ಪ್ರಯಾಣಮಾಡುವವನು ದಾರಿಯಲ್ಲಿ ಯಾವುದಾದರೂ ಒಂದು ಸತ್ರದಲ್ಲಿ ಯಾಗಲಿ, ಗ್ರಾಮದಲ್ಲಿಯಾಗಲಿ ವಿಶ್ರಾಂತಿಗಾಗಿ ಇಳಿಯುವನು. ಅಲ್ಲಿಯೇ ಆ ರಾತ್ರಿಯಲ್ಲಿ ಮಲಗಿರುವುದೂ ಉಂಟು. ಬೆಳಗಾದ ಕೂಡಲೆ ಆತನು ಅವೆಲ್ಲ ವನ್ನೂ ಬಿಟ್ಟು ತನ್ನ ದಾರಿಯನ್ನು ಹಿಡಿದು ತಾನು ಹೊರಟು ಹೋಗುವ ನಲ್ಲವೆ? ಅಲ್ಲಿಂದ ಬಿಟ್ಟು ಹೋದಮೇಲೆ ಅವನಿಗೆ ಆ ಸತ್ರದ ಚಿಂತೆಯೇಕೆ ? ಅದರಂತೆಯೇ ಮನುಷ್ಯರಿಗೆ ತಂದೆ, ತಾಯಿ, ಬಂಧು, ಬಳಗ, ಮನೆ, ಮಠವೆಂಬು ದೆಲ್ಲವೂ ಸ್ವಲ್ಪಕಾಲದ ಕೂಡಾಟಕ್ಕೇ ಹೊರತು ಬೇರೆಯಲ್ಲ. ವಿವೇಕಿಗಳಾದವರು ಇದಕ್ಕಾಗಿ ಹಿಗ್ಗುವುದೂ ಇಲ್ಲ. ಆದುದರಿಂದ ಎಲೈ ರಾಮನೆ ! ನಿನಗೆ ತಂದೆಯಿಂದ ಬಂದ ರಾಜ್ಯವನ್ನು ಬಿಟ್ಟು ಕಾಡಿಗೆ ಹೋಗಿ ಕಷ್ಟಪಡುವುದು ಸರ್ವಥಾ ಉಚಿತ ವಲ್ಲ. ನಿನ್ನ ವಯಸ್ಸೇನು ? ನಿನ್ನ ಕುಲವೇನು ? ನಿನ್ನ ಸಾಮರ್ಥ್ಯವೇನು ? ಇವೆಲ್ಲವನ್ನೂ ಪರ್ಯಾಲೋಚಿಸಿ ನೋಡು ! ನಿನಗೆ ವನವಾಸವೆಂಬುದು ಎಂದಿಗೂ ಉಚಿತವಲ್ಲ. ಈ ಪ್ರಯತ್ನವನ್ನು ಬಿಟ್ಟುಬಿಡು ! ಭಾಗ್ಯಸಮೃದ್ಧ ವಾದ ಅಯೋಧ್ಯೆಗೆ ಹೋಗಿ ಪಟ್ಟಾಭಿಷೇಕವನ್ನು ವಹಿಸು ! ಆ ಪುರದೇವತೆಯೇ ನಿನ್ನನ್ನು ಇದಿರುನೋಡುತ್ತ ವ್ರತವನ್ನು ಹಿಡಿದು ಕಾದಿರುವಳು. ರಾಮಾ ! ನೀನು ರಾಜಕುಮಾರನಲ್ಲವೆ ? ಇದು ನಿನಗೆ ಸಮಸ್ತರಾಜಭೋಗಗಳನ್ನೂ ಸ್ವೇಚ್ಛೆಯಾಗಿ ಅನುಭವಿಸತಕ್ಕ ಯೌವನಕಾಲವಲ್ಲವೆ ? ಬಹಳ ಚೆನ್ನಾಯಿತು ! ಅಯೋಧ್ಯೆಗೆ ಹಿಂತಿರುಗು ! ಸ್ವರ್ಗದಲ್ಲಿ ದೇವೇಂದ್ರನು ಹೇಗೋಹಾಗೆ ಬೇಕಾದ ಭೋಗಗಳನ್ನನುಭವಿಸುತ್ತ ಸಂತೋಷದಿಂದಿರು ! ದಶರಥನಾರು ? ನೀನಾರು ? ಅವನೊಬ್ಬ ರಾಜನು. ನೀನೊಬ್ಬ ರಾಜನು. ಇಷ್ಟುಮಾತ್ರವಲ್ಲದೆ ಅವನಿಗೂ

ನಿನಗೂ ಸಂಬಂಧವೇನು? ಅವನೇ ಬೇರೆ! ನೀನೇ ಬೇರೆ! ನಿಮ್ಮಿಬ್ಬರಿಗೂ ಏನೂ ಸಂಬಂಧವಿಲ್ಲ. ಆದುದರಿಂದ ನಾನು ಹೇಳಿದಂತೆ ಕೇಳು. ಪುತ್ರೋತ್ಪತ್ತಿಗೆ ತಂದೆಯೆಂಬವನು ಕೇವಲ ಸಾಧನಮಾತ್ರವೇ ಹೊರತು ಬೇರೆಯಲ್ಲ. ಋತುಮತಿಯಾದ ತಾಯಿಯಿಂದ ಧರಿಸಲ್ಪಟ್ಟ ಬಿಳೀರಕ್ತ ಬಿಂದುವು ಮಾತ್ರವೇ ಮನುಷ್ಯನ ಉತ್ಪತ್ತಿಗೆ ಮುಖ್ಯಕಾರಣವು. ಮನುಷ್ಯನಾಗಿ ಹುಟ್ಟಿದವನು ಕೊನೆಗಾಲಕ್ಕೆ ಎಲ್ಲಿ ಹೋಗಿ ಸೇರಬೇಕೋ ಆ ಪಂಚಭೂತಗಳಲ್ಲಿಯೇ ನಿನ್ನ ತಂದೆಯು ಹೋಗಿ ಸೇರಿಬಿಟ್ಟಿರುವನು. ಪ್ರಪಂಚದ ನಡೆವಳಿಕೆಯೇ ಹೀಗಿರುವುದು. ಅಯ್ಯೋ! ನೀನು ಕೇವಲ ಭ್ರಾಂತಿಯಿಂದ ಮರುಳಾಗಿರುವೆ! ಭಾಗ್ಯವಿದ್ದಾಗ ಭೋಗಗಳನ್ನನುಭವಿಸಬೇಕು! ಹಾಗಿಲ್ಲದೆ ಕೇವಲ ಧರ್ಮಾರ್ಜನೆಗಾಗಿಯೂ ದ್ರವ್ಯಾರ್ಜನೆಗಾಗಿಯೂ ಕಷ್ಟಪಡುವವರನ್ನು ನೋಡಿದರೆ ನನಗೆ ಬಹಳ ಪರಿತಾಪವುಂಟಾಗುವುದು. ಅಂತವರಿಗೆ ಇಲ್ಲಿಯೂ ಸುಖವಿಲ್ಲ. ಪರಲೋಕದಲ್ಲಿಯೂ ಸುಖವಿಲ್ಲ. ಲೋಕದಲ್ಲಿ ಜನಗಳ ಅಜ್ಞಾನವನ್ನು ನಾನೇನೆಂದು ಹೇಳಲಿ! ಅಷ್ಟಕಾಶ್ರಾದ್ಧಗಳೆಂದೂ, ಅಬ್ದಿಕಶ್ರಾದ್ಧಗಳೆಂದೂ ನಿರರ್ಥಕವಾಗಿ ವೆಚ್ಚಮಾಡುವರು. ಅದರಿಂದ ತಾವೂ ತಿಂದಹಾಗಲ್ಲ. ಸತ್ತವರ ಹೆಸರನ್ನು ಹೇಳಿ ಅನ್ನಹಾಕುವರು. ಸತ್ತವನು ತಿನ್ನುವುದು ಹೇಗೆ? ಪಿಂಡವನ್ನು ಹಾಕಿದುದರಿಂದ ಪ್ರಯೋಜನವೇನು? ಅಥವಾ ಸತ್ತವನ ಹೆಸರನ್ನು ಹೇಳಿ ಮತ್ತೊಬ್ಬನಿಗೆ ಅನ್ನವನ್ನು ಹಾಕಿಬಿಟ್ಟಮಾತ್ರಕ್ಕೆ ಏನಾದಹಾಗಾಯಿತು? ಒಬ್ಬನ ಹೊಟ್ಟೆಯನ್ನು ತುಂಬಿಸುವುದಕ್ಕಾಗಿ ಮತ್ತೊಬ್ಬನಿಗೆ ಅನ್ನವನ್ನು ಹಾಕುವುದುಂಟೆ? ಅದರಿಂದ ಅವನಿಗೆ ತೃಪ್ತಿಯುಂಟುಮಾಡಿದಂತಾಗುವುದೆ? ಹಾಗಿದ್ದರೆ ಊರು ಬಿಟ್ಟು ಹೋಗಿರುವ ನಮ್ಮ ಇಷ್ಟಬಂಧುಮಿತ್ರರ ಹೊಟ್ಟೆಯನ್ನು ತುಂಬುವುದಕ್ಕಾಗಿ ಕಣ್ಣಿಗೆ ಸಿಕ್ಕಿದ ಬೇರೆ ಯಾರನ್ನಾದರೂ ಕರೆದು ಏಕೆ ಅನ್ನವನ್ನು ಹಾಕಬಾರದು? ರಾಮಾ! ಆದುದರಿಂದ ಈ ಶ್ರಾದ್ಧಾದಿಗಳಿಂದೇನೂ ಪ್ರಯೋಜನವಿಲ್ಲ. ಇದಕ್ಕಾಗಿ ವಿಧಿಸಲ್ಪಟ್ಟಿರುವ ಶಾಸ್ತ್ರಗಳನ್ನು ನೀನು ನಂಬಬೇಡ! ಉಪಾಯಶಾಲಿಗಳಾದ ಕೆಲವು ವೈದಿಕರು ಇತರರಿಂದ ಹಣವನ್ನು ಕಿತ್ತುಕೊಳ್ಳುವುದಕ್ಕಾಗಿಯೇ ಹೀಗೆ "ಯಾಗಮಾಡಬೇಕು! ದಾನಮಾಡಬೇಕು! ತಪಸ್ಸುಮಾಡಬೇಕು! ಯಾವುದರಲ್ಲಿಯೂ ಆಸೆಯನ್ನಿಡಬಾರದು" ಎಂಬಿವೇ ಮೊದಲಾದ ವಿಧಿಗಳನ್ನು ಕಾಣಿಸಿ, ದೊಡ್ಡದೊಡ್ಡ ಗ್ರಂಥಗಳನ್ನು ಬರೆದಿಟ್ಟಿ

ರುವರು. ಆದುದರಿಂದ ರಾಮಾ! ಪರಲೋಕವೆಂಬ ಭ್ರಾಂತಿಯನ್ನೇ ಬಿಟ್ಟು ಬಿಡು! ಇದಿರಿಗೆ ಕಾಣುವುದನ್ನು ಮಾತ್ರ ನಂಬು! ಪರೋಕ್ಷವಿಷಯಗಳನ್ನು ನಂಬಬೇಡ! ಸರ್ವಜನಸಮ್ಮತವಾದ ಈ ಬುದ್ಧಿಯನ್ನೇ ಮುಂದಿಟ್ಟುಕೊಂಡು ಭರತನ ಕೋರಿಕೆಯಂತೆ ರಾಜ್ಯವನ್ನಂಗೀಕರಿಸಿ ಬೇಕಾದ ಭೋಗಗಳನ್ನನು ಭವಿಸುತ್ತ ಸುಖದಿಂದಿರು" ಎಂದನು.

ಇದು ನೂರೆಂಟನೆಯ ಸರ್ಗವು.

ರಾಮನು ಜಾಬಾಲಿಯ ಮತವನ್ನು ನಿರಾಕರಿಸಿ, ವೈದಿಕ ಮತವನ್ನು ಸ್ಥಾಪಿಸಿದುದು.

ದೃಢಮನಸ್ಸುಳ್ಳವರಿಗೆಲ್ಲಾ ಮೇಲೆನಿಸಿಕೊಂಡ ರಾಮನಾದರೋ ಜಾಬಾಲಿಯು ಹೇಳಿದ ಈ ಮಾತುಗಳೆಲ್ಲವನ್ನೂ ಕೇಳಿ, ಆತನಲ್ಲಿ ಭಕ್ತಿಯನ್ನೂ, ತನ್ನ ದೃಢಬುದ್ಧಿಯನ್ನೂ ಬಿಡದೆ, ಆತನನ್ನು ಕುರಿತು, "ಎಲೈ ಬ್ರಾಹ್ಮ ಣೋತ್ತಮನೆ! ನೀನು ನನಗೆ ಕ್ಷೇಮಚಿಂತಕನಾಗಿ, ನನಗೆ ಪ್ರಿಯವನ್ನುಂಟು ಮಾಡಬೇಕೆಂದು ಅಕಾರ್ಯವನ್ನು ಕಾರ್ಯದಂತೆಯೂ, ಅಪಥ್ಯವಾದ ವಿಷಯ ಗಳನ್ನೇ ಪಥ್ಯದಂತೆಯೂ ನಿರೂಪಿಸಿ ಹೇಳಿರುವೆಯೇ ಹೊರತು ಬೇರೆಯಲ್ಲ. ಪಾಪಕಾರ್ಯಗಳಲ್ಲಿ ಬಿದ್ದು ಮರ್ಯಾದೆಯನ್ನು ಮೀರಿ, ಕೆಟ್ಟ ನಡತೆಯಲ್ಲಿ ರುವವನಿಗೆ ಸಜ್ಜನರ ಗೋಷ್ಠಿಯಲ್ಲಿ ಎಂದಿಗೂ ಮಾನವುಂಟಾಗಲಾರದು. ಮನುಷ್ಯನು ಉತ್ತಮಕುಲದವನೇ? ಅಥವಾ ನೀಚಕುಲದವನೇ, ನಿಜವಾದ ವೀರ್ಯವುಳ್ಳವನೇ, ಅಥವಾ ಕೇವಲ ಗರ್ವವುಳ್ಳವನೇ, ಶುಚಿಯೇ ಅಥವಾ ಅಶುಚಿಯೇ, ಎಂಬುದನ್ನು ಅವನವನ ನಡತೆಯೇ ತೋರಿಸಿಕೊಡುವುದು. ನಾನು ಅನಾರ್ಯನಾಗಿ ಆರ್ಯನಂತೆಯೂ, ಅಶುಚಿಯಾಗಿ ಶುಚಿಯಂತೆಯೂ, ಸಾಧು ಲಕ್ಷಣಗಳೊಂದೂ ಇಲ್ಲದವನಾಗಿ ಸಾಧುವಿನಂತೆಯೂ, ದುಶ್ಶೀಲನಾಗಿ ಸುಶೀಲನಂತೆಯೂ ನಟಿಸುತ್ತ, ಧರ್ಮವ್ಯಾಜದಿಂದ ಲೋಕನಿಂದಿತವಾದ ಅಧರ್ಮಕ್ಕೆ ಪ್ರವರ್ತಿಸಬೇಕೆಂದು ಹೇಳುವೆಯಾ! ಲೋಕದ ನಡತೆಗೂ ಶಾಸ್ತ್ರ ವಿಧಿಗೂ ವಿರುದ್ಧವಾಗಿ ಶ್ರೇಯಸ್ಕರವಲ್ಲದ ಈ ಮಾರ್ಗವನ್ನು ನಾನು ಹಿಡಿದರೆ,

ಯುಕ್ತಾಯುಕ್ತ ವಿವೇಕವುಳ್ಳ ಯಾವ ಪುರುಷನು ತಾನೇ ನನ್ನನ್ನು ಗೌರವಿಸುವನು? ಆಗ ಲೋಕವೆಲ್ಲವೂ ನನ್ನನ್ನು ದುರ್ವೃತ್ತನೆಂದೂ, ಲೋಕನಿಂದಿತನೆಂದೂ ಹೀಗಳೆಯದಿರುವುದೆ! ನಾನು ಆಡಿದ ಮಾತಿಗೆ ತಪ್ಪಿ, ಈ ಹೀನವೃತ್ತಿಯನ್ನವಲಂಬಿಸಿದರೆ, ಆಮೇಲೆ ನಾನು ಯಾರನ್ನು ತಾನೇ ಸರಿಯಾದ ನಡತೆಯಲ್ಲಿರಿಸಬಲ್ಲೆನು? ನನಗೂ ಬೇರೆ ಯಾವ ರೀತಿಯಿಂದ ಸ್ವರ್ಗಾದಿಪುಣ್ಯಲೋಕಗಳು ಸಿದ್ಧಿಸುವುವು? ರಾಜನಾದ ನನ್ನನ್ನು ನೋಡಿ ಈ ಸಮಸ್ತಲೋಕವೂ ತಮ್ಮ ತಮ್ಮ ಸ್ವೇಚ್ಛಾನುಸಾರವಾಗಿ ನಡೆಯಲಾರಂಭಿಸಿಬಿಡುವುದಲ್ಲವೆ? “ರಾಜನಂತೆಯೇ ಪ್ರಜೆಗಳು” ಎಂಬ ಲೋಕವಾರ್ತೆಯನ್ನು ನೀನು ಕೇಳಿಲ್ಲವೆ? ಸತ್ಯ ಮತ್ತು ಅಹಿಂಸೆಯೆಂಬುವೆರಡೇ ಪುರಾತನವಾದ ರಾಜಧರ್ಮವು. ರಾಜ್ಯವೆಂಬುದು ಸತ್ಯದಲ್ಲಿಯೇ ಅಡಗಿರುವುದು. ಲೋಕವೆಲ್ಲವೂ ಸತ್ಯದಿಂದಲೇ ನಿಂತಿರುವುದು. ದೇವತೆಗಳಾಗಲಿ, ಋಷಿಗಳಾಗಲಿ ಸತ್ಯವೊಂದನ್ನೇ ಮೇಲಾದ ಧರ್ಮವೆಂದೆಣಿಸಿರುವರು. ಸತ್ಯವಾದಿಯಾದವನಿಗೆ ಯಾವಾಗಲೂ ಉತ್ತಮಗತಿಯು ತಪ್ಪದು. ಸುಳ್ಳಾಡುವವನನ್ನು ಕಂಡಾಗ ಸರ್ಪವನ್ನು ಕಂಡಂತೆ ಜನರು ನಡುಗುವರು. ಸತ್ಯವೇ ಲೋಕದಲ್ಲಿ ಉತ್ತಮವಾದ ಧರ್ಮವು. ಸತ್ಯವೆಂಬುದೇ ಸ್ವರ್ಗಕ್ಕೆ ಮೂಲವು. ಲೋಕದಲ್ಲಿ ಸತ್ಯವೆಂಬುದೇ ಪರದೈವವು. ಭಾಗ್ಯಲಕ್ಷ್ಮಿಯೂ ಸತ್ಯವನ್ನೇ ಆಶ್ರಯಿಸಿರುವುದು. ಸಮಸ್ತಕ್ಕೂ ಸತ್ಯವೇ ಮೂಲವು. ಸತ್ಯಕ್ಕಿಂತಲೂ ಮೇಲಾದ ಪದವಿಯೊಂದೂ ಇಲ್ಲವು. ದಾನವಾಗಲಿ, ಧರ್ಮಕಾರ್ಯಗಳಾಗಲಿ, ಯಜ್ಞಯಾಗಾದಿಗಳಾಗಲಿ, ತಪಸ್ಸಾಗಲಿ, ವೇದಗಳಾಗಲಿ, ಸಮಸ್ತವೂ ಸತ್ಯದಲ್ಲಿಯೇ ಅಡಗಿರುವುವು. ಆದುದರಿಂದ ಸತ್ಯವನ್ನು ಎಂದಿಗೂ ಬಿಡಬಾರದು. ಪ್ರಪಂಚದಲ್ಲಿ ಈ ಸತ್ಯದ ಬಲದಿಂದ ಲೋಕವನ್ನಾಳುವವನೊಬ್ಬನು! ಕುಲವನ್ನಾಳುವವನೊಬ್ಬನು! ಸ್ವರ್ಗಪದವಿಯಲ್ಲಿರುವವನೊಬ್ಬನು; ಹೀಗಿರುವಾಗ ನಾನು ನಮ್ಮ ತಂದೆಯ ಸತ್ಯವನ್ನು ಕಾಪಾಡುವುದಕ್ಕೂ ಹಿಂಜರಿಯಬಹುದೆ? ಸತ್ಯವೆಂಬುದೇ ನನ್ನ ಮುಖ್ಯವಾದ ಪ್ರತಿಜ್ಞೆಯು. ಸತ್ಯದಿಂದಲೇ ನಾನು ಕಟ್ಟಲ್ಪಟ್ಟಿರುವೆನು. ಆದುದರಿಂದ ಲೋಭದಿಂದಾಗಲಿ, ಅಜ್ಞಾನದಿಂದಾಗಲಿ ನಾನು ಎಂದಿಗೂ ನನ್ನ ತಂದೆಯ ಸತ್ಯದ ಕಟ್ಟನ್ನು ಮುರಿಯಲಾರೆನು. ಇದು ನಿಜವು. ಅಸತ್ಯಸಂಧನಾಗಿ ಸ್ಥಿರಮನಸ್ಸಿಲ್ಲದೆ ಚಪಲ ಬುದ್ಧಿಯುಳ್ಳವನನ್ನು ದೇವತೆಗಳಾಗಲಿ, ಪಿತೃಗಳಾಗಲಿ,

ಆದರಿಸಲಾರರೆಂದು ನಾನು ಕೇಳಿರುವೆನು. ಸತ್ಯರೂಪವಾದ ಧರ್ಮವೇ ಆತ್ಮನನ್ನು ಎಡೆಬಿಡದೆ ಅನುವರ್ತಿಸುತ್ತಿರುವುದೆಂದು ನನಗೆ ತೋರಿರುವುದು. ಸತ್ಪುರುಷರು ಬಹುಕಾಲದಿಂದ ಆಚರಿಸಿಕೊಂಡು ಬಂದ ಈ ಜಟಾವಲ್ಕಲಾದಿ ಭಾರಗಳೆಲ್ಲವೂ ಸತ್ಯರೂಪವಾದ ಧರ್ಮಕ್ಕಾಗಿಯೇ ಅಂಗೀಕರಿಸ್ಪಲಟ್ಟಿರುವುದೇ ಹೊರತು ಬೇರೆಯಲ್ಲ. ಕ್ಷತ್ರಿಯ ಧರ್ಮದಲ್ಲಿ ಅಧರ್ಮವೇ ಹೆಚ್ಚಾಗಿಯೂ, ಧರ್ಮವು ಸ್ವಲ್ಪವಾಗಿಯೂ ಇರುವುದು. ಆ ಕ್ಷತ್ರಿಯ ಧರ್ಮವನ್ನು ಅಲ್ಪ ಬುದ್ಧಿಯುಳ್ಳವರೂ, ಕ್ರೂರಸ್ವಭಾವವುಳ್ಳವರೂ, ಲೋಭಿಗಳೂ, ಪಾಪಕರ್ಮಿ ಗಳೂ, ಅಪೇಕ್ಷಿಸುವರೇ ಹೊರತು, ಈ ದುರ್ಗುಣಗಳೊಂದೂ ಇಲ್ಲದವರು ಎಂದಿಗೂ ಆದಕ್ಕಾಸೆಪಡಲಾರರು. ಆದುದರಿಂದ ನಾನು ಸತ್ಯವನ್ನು ಬಿಟ್ಟಾದರೂ ರಾಜ್ಯವನ್ನು ಕೈಕೊಳ್ಳಬೇಕೆಂದು ಆಸೆಪಡುವವನಲ್ಲ. ಲೋಕದಲ್ಲಿ ಮನುಷ್ಯನು ಮೊದಲು ಪಾಪಕಾರ್ಯವನ್ನು ಮನಸ್ಸಿನಲ್ಲಿ ನಿಶ್ಚಯಿಸುವನು. ಅದನ್ನೇ ಕೈ ಯ್ಯಿಂದ ಮಾಡುವನು. ಅದಕ್ಕಾಗಿ ನಾಲಿಗೆಯಿಂದ ಸುಳ್ಳಾಡುವನು. ಹೀಗೆ ತ್ರಿಕರಣಗಳೂ ಪಾಪಕ್ಕೆ ಆಶ್ರಯವಾಗಿರುವುವು. ಭೂಸಂಪತ್ತಾಗಲಿ, ಕೀರ್ತಿ ಸಂಪತ್ತಾಗಲಿ, ಪೌರುಷವಾಗಲಿ, ಲಕ್ಷ್ಮಿಯಾಗಲಿ ಯಾವ ಶ್ರೇಯಸ್ಸಾದರೂ ತ್ರಿಕರಣಶುದ್ಧಿಯಿಂದ ಸತ್ಯವನ್ನು ಬಿಡದಿರುವ ಪುರುಷನಲ್ಲಿಯೇ ಸೇರುವುದು. ಅಂತಹ ಪುರುಷನು ಸ್ವರ್ಗಸ್ಥನಾದರೂ ಸತ್ಯವು ಅವನನ್ನು ಹಿಂಬಾಲಿಸಿ ಹೋಗು ವುದು. ಆದುದರಿಂದ ಸತ್ಯವನ್ನು ಪ್ರತಿಯೊಬ್ಬನೂ ಅವಲಂಬಿಸಬೇಕು. ಎಲೈ ಬ್ರಾಹ್ಮಣನೇ ! ನೀನು ನನಗೆ ಯಾವುದು ಹಿತಕರವಾದ ಕಾರ್ಯವೆಂದು ಯುಕ್ತಿ ಯುಕ್ತವಾಗಿ ಹೇಳಿದೆಯೋ; ಅದು ಯಾರಿಗೂ ಆದರಣೀಯವಲ್ಲವು. ಈ ನಿನ್ನ ಮಾತನ್ನು ಯಾರೂ ಗೌರವಿಸಲಾರರು. ಆದುದರಿಂದ ಪರೋಕ್ಷವಾದ ಫಲ ವನ್ನು ನಂಬದೆ, ಪ್ರತ್ಯಕ್ಷ ಫಲಕ್ಕೆ ಪ್ರಯತ್ನಿಸಬೇಕೆಂದು ನೀನು ಹೇಳಿದ ಉಪ ದೇಶವು ಎಂದಿಗೂ ಉಚಿತವಲ್ಲವು. ಮತ್ತು ಭರತನ ಪ್ರಾರ್ಥನೆಯಂತೆ ನಾನು ರಾಜ್ಯವನ್ನಂಗೀಕರಿಸಬೇಕೆಂದು ಹೇಳಿದೆಯಲ್ಲವೇ ? ಹಿಂದೆ ತಂದೆಯ ಸಮೀಪದಲ್ಲಿ ನಾನು ಕಾಡಿನಲ್ಲಿರುವುದಾಗಿ ಪ್ರತಿಜ್ಞೆಮಾಡಿ ಬಂದಿರುವೆನು. ಈಗ ಆ ತಂದೆ ಯಾಜ್ಞೆಯನ್ನೂ ತಿರಸ್ಕರಿಸಿ, ಮಾತಿಗೂ ತಪ್ಪಿದವನಾಗಿ, ಈ ಭರತನ ಮಾತನ್ನು ನಡೆಸಬೇಕೆಂದರೆ ಹೇಗೆ ತಾನೇ ಉಚಿತವು ? ನನ್ನ ತಂದೆಯ ಮುಂದೆ ನಾನು ಸ್ಥಿರಪ್ರತಿಜ್ಞೆಯನ್ನು ಮಾಡಿ ಬಂದಿರುವೆನು. ಕೈಕೇಯಿಯೂ ಅದನ್ನು

ಕೇಳಿದಾಗ ಎಷ್ಟೋ ಸಂತೋಷಪಟ್ಟಿರುವಳು. ಹೀಗೆ ತಂದೆತಾಯಿಗಳಿಬ್ಬರಿಗೂ ಸಂತೋಷಕರವಾದ ಈ ಪ್ರತಿಜ್ಞೆಯನ್ನು ತಪ್ಪಿ ನಡೆಯುವುದು ಎಂದಿಗೂ ಉಚಿತವಲ್ಲ. ನಾನು ಕಾರ್ಯಾಕಾರ್ಯಗಳನ್ನು ಸ್ವಲ್ಪಮಟ್ಟಿಗಾದರೂ ವಿಮರ್ಶಿಸಬೇಕಲ್ಲವೆ? ಆದುದರಿಂದ ಕೃತ್ರಿಮಬುದ್ಧಿಯನ್ನು ಬಿಟ್ಟು ಶ್ರದ್ಧೆಯಿಂದ ಶುದ್ಧಸ್ವಭಾವವುಳ್ಳವನಾಗಿ, ವನವಾಸದಲ್ಲಿದ್ದು ವನ್ಯಾಹಾರಗಳನ್ನೇ ಭುಜಿಸುತ್ತ, ಅದರಿಂದಲೇ ಪಂಚೇಂದ್ರಿಯಗಳಿಗೂ ತೃಪ್ತಿಯನ್ನುಂಟುಮಾಡುತ್ತಿರುವೆನು. ಪವಿತ್ರವಾದ ಆ ಕಂದಮೂಲ ಫಲಪುಷ್ಪಾದಿಗಳಿಂದಲೇ ಪಿತೃದೇವತೆಗಳಿಗೂ ತೃಪ್ತಿಯನ್ನುಂಟುಮಾಡಿ, ಅವರ ಅನುಗ್ರಹವನ್ನೂ ಸಂಪಾದಿಸುವೆನು. ಅದರಿಂದ ಪಿತೃವಚನಪರಿಪಾಲನವೆಂಬ ಮಹಾವ್ರತವನ್ನು ನಡೆಸಿದಂತಾಗುವುದು. ದೇಹಯಾತ್ರೆಯನ್ನು ಮಾಡುವುದಕ್ಕೆ ಇದಕ್ಕಿಂತ ಉತ್ತಮವಾದ ದಾರಿಯು ನನಗೆ ಬೇರೆ ಯಾವುದೂ ತೋರಲಿಲ್ಲ. ಅಷ್ಟಕಾದಿಶ್ರಾದ್ಧಗಳನ್ನುದಾಹರಿಸಿ ನೀನು ಕರ್ಮಗಳೆಲ್ಲವೂ ನಿಷ್ಫಲವೆಂದು ಹೇಳಿದೆಯಲ್ಲವೆ? ಮನುಷ್ಯನು ಈ ಕರ್ಮಭೂಮಿಯಲ್ಲಿರುವವರೆಗೂ, ವೇದವಿಹಿತವಾದ [1] ಶುಭ ಕರ್ಮಗಳನ್ನು ಅವಶ್ಯವಾಗಿ ಮಾಡಿಯೇ ತೀರಬೇಕು. ಅಗ್ನಿ, ವಾಯು, ಚಂದ್ರ, ಈ ಮೂವರೂ ಈ ಕರ್ಮಭೂಮಿಯಲ್ಲಿ ನಡೆಸಿದ ಸತ್ಕರ್ಮಗಳ ಫಲದಿಂದಲೇ ಈಗಿನ ತಮ್ಮ ಪದವಿಯನ್ನು ಪಡೆದಿರುವರು. ಆದುದರಿಂದ ಕರ್ಮವು ಎಂದಿಗೂ ನಿಷ್ಫಲವಾಗತಕ್ಕುದಲ್ಲ. ದೇವೇಂದ್ರನೂ ನೂರು ಯಾಗಗಳನ್ನು ಮಾಡಿಯೇ ಸ್ವರ್ಗಾಧಿಪತ್ಯವನ್ನು ಪಡೆದಿರುವನು ಮಹರ್ಷಿಗಳೂ ಉಗ್ರ ತಪಸ್ಸಿನಿಂದಲೇ ಸ್ವರ್ಗಾದಿ ಪುಣ್ಯಲೋಕಗಳನ್ನು ಪಡೆದಿರುವರು" ಎಂದನು. ಹೀಗೆ ತೇಜಸ್ವಿಯಾದ ಆ ರಾಜಕುಮಾರನು ಜಾಬಾಲಿಯೊಡನೆ ತರ್ಕಿಸುತ್ತ, ಆತನ ನಾಸ್ತಿಕ್ಯವಾದಗಳನ್ನು ಕೇಳಿ ಸಹಿಸಲಾರದೆ, ಪುನಃ ಇದ್ದಕ್ಕಿದ್ದ ಹಾಗೆ ಮಿತಿಮೀರಿ ಕೋಪಗೊಂಡು, ಆತನ ಮಾತುಗಳನ್ನು ಖಂಡಿಸುತ್ತ, ಅವನನ್ನು ಕುರಿತು, 'ಎಲೈ ಬ್ರಾಹ್ಮಣನೆ! ಇದೀಗ ಚೆನ್ನಾಯಿತು. ಸತ್ಯ, ಧರ್ಮ, ಪರಾಕ್ರಮ, ಭೂತದಯೆ, ಪಿತೃವಾಕ್ಯ, ಬ್ರಾಹ್ಮಣಪೂಜೆ, ದೇವತಾರ್ಚನೆ, ಅತಿಥಿ

[1] ಇದರಿಂದ ಶಾಸ್ತ್ರವಿಹಿತ ಕರ್ಮಗಳಿಗೆ ತಪ್ಪದೆ ಫಲವು ಲಭಿಸುವುದೆಂದೂ, ದೇಶಾಂತರಗತನಾದವನಿಗೆ ಶ್ರಾದ್ಧದಿಂದ ತೃಪ್ತಿಯನ್ನು ಮಾಡಬೇಕೆಂಬುದು ಶಾಸ್ತ್ರಸಿದ್ಧವಲ್ಲದುದರಿಂದ ಅದಕ್ಕೆ ಫಲವು ಲಭಿಸಲಾರದೆಂದೂ ಭಾವವು.

ಸತ್ಕಾರಗಳು, ಇವೆಲ್ಲವೂ ಸ್ವರ್ಗಪ್ರಾಪ್ತಿಗೆ ಮಾರ್ಗವೆಂಬುದಾಗಿ ಸತ್ಪುರುಷರು ಹೇಳುವರು. ಆದುದರಿಂದಲೇ ಬ್ರಾಹ್ಮಣರು ಈ ಅರ್ಥವನ್ನು ಯಥಾವತ್ತಾಗಿ ತಿಳಿದು, ಐಕಮತ್ಯದಿಂದಲೂ, ಎಚ್ಚರಿಕೆಯಿಂದಲೂ, ಶಾಸ್ತ್ರಮರ್ಯಾದೆಯಿಂದಲೂ, ತಮ್ಮ ತಮ್ಮ ಆಶ್ರಮಧರ್ಮಗಳಿಗೆ ತಕ್ಕಂತೆ ಸತ್ಕಾರ್ಯಗಳನ್ನು ನಡೆಸುತ್ತ ಸ್ವರ್ಗಾದಿಲೋಕಗಳಿಗೆ ಮಾರ್ಗವನ್ನು ಹುಡುಕುವರು. ಆ ಬ್ರಾಹ್ಮಣ ಜಾತಿಯಲ್ಲಿ ಹುಟ್ಟಿದ ನಿನಗೆ ವೇದವಿರುದ್ಧವಾದ ಈ ದುರ್ಬುದ್ಧಿಯೇಕೆ ಬಂದಿತು.? ಹೊರಗೆ ವೈದಿಕನಂತೆ ನಟಿಸುತ್ತ, ಅಂತರಂಗದಲ್ಲಿ ಮಹಾ ನಾಸ್ತಿಕನಾಗಿ, ಚಾರ್ವಾಕಮತವನ್ನವಲಂಬಿಸಿರುವ ನೀನು, ನಿನ್ನ ಈ ನಾಸ್ತಿಕ ಬುದ್ಧಿಯನ್ನು ಇತರರಿಗೂ ಉಪದೇಶಿಸುವುದಕ್ಕಾಗಿ ಊರೂರು ತಿರುಗುತ್ತಿರುವ ಹಾಗಿದೆ. ಧರ್ಮದಿಂದ ಬಹಿಷ್ಕೃತನಾದ ನಿನ್ನನ್ನು ನನ್ನ ತಂದೆಯಾದ ದಶರಥನು ಹತ್ತಿರದಲ್ಲಿರಿಸಿಕೊಂಡಿದ್ದುದೇ ಮಹಾದೋಷಾಸ್ಪದವೆಂದು ನನಗೆ ತೋರಿರುವುದು. ಕಳ್ಳನನ್ನು ಹೇಗೋ ಹಾಗೆ ವೇದಬಾಹ್ಯನಾದ ಬುದ್ಧನನ್ನು ನಿರಾಕರಿಸಿಡಬೇಕಾದುದೇ ನ್ಯಾಯವಲ್ಲವೆ? ನಾಸ್ತಿಕನನ್ನೂ ಆ ಬುದ್ಧನಂತೆಯೇ ತಿಳಿಯಬೇಕು. ನಾಸ್ತಿಕನಾದವನನ್ನು ವೇದಬಾಹ್ಯನೆಂದೇ ಹೇಳಬೇಕು. ಪಂಡಿತರು ಅಂತವನ ಮುಖವನ್ನೂ ನೋಡಬಾರದು.[1] ನಿನಗಿಂತಲೂ ಪೂರ್ವಿಕರಾದ ಆರ್ಯರೂ, ನಿನಗಿಂತಲೂ ಉತ್ತಮರಾದವರೂ, ಅನೇಕ ಶುಭಕರ್ಮಗಳನ್ನು ಮಾಡಿ, ಇಹಪರಲೋಕಗಳೆರಡನ್ನೂ ಜಯಿಸಿ, ಈಗಲೂ ಆಕಾಶದಲ್ಲಿ

---

[1] ಇದರಿಂದ ಪ್ರತ್ಯಕ್ಷವು ಮಾತ್ರ ವೇದಪ್ರಮಾಣವಲ್ಲವೆಂದೂ, ಮಹಾಜನ ಪರಿಗೃಹಿತವಾಗಿರುವುದರಿಂದ ಅಪೌರುಷೇಯವಾಗಿ ಪ್ರತ್ಯಕ್ಷವ್ಯತಿರಿಕ್ತಗಳಾದ ವೇದಾರ್ಥಗಳಿಗೂ ಪ್ರಾಮಾಣ್ಯವುಂಟೆಂದೂ ಸಿದ್ಧವಾಗುವುದು. ಆದರೆ ವೇದಗಳು ಅಪೌರುಷೇಯವೆಂದು ಹೇಗೆ ನಿರ್ಧರಿಸಬಹುದು? ಎಂದರೆ, ವೇದವಿಹಿತಕರ್ಮಗಳು ಬಹುಕಾಲದಿಂದ ಎಡೆಬಿಡದೆ ಸಂಪ್ರದಾಯಸಿದ್ಧವಾಗಿ ಬಂದಿರುವುದರಿಂದಲೂ, ಈ ವೇದಕರ್ತರು ಯಾರೆಂಬುದನ್ನು ಊಹಿಸುವುದಕ್ಕೂ ಅಸಾಧ್ಯವಾಗಿರುವುದರಿಂದಲೂ, ಅವುಗಳನ್ನು ಅಪೌರುಷೇಯವೆಂದೇ ನಿರ್ಧರಿಸಬೇಕು. ಸೂರ್ಯಾಗ್ನಿ ಚಂದ್ರ ನಕ್ಷತ್ರಾದಿಗಳ ಫಲಭೋಗವು ಪ್ರತ್ಯಕ್ಷ ಸಿದ್ಧವಾಗಿಯೇ ಇರುವುದರಿಂದ ವೈದಿಕ ಕರ್ಮಗಳು ಫಲವನ್ನು ಕೊಡುವುವೆಂದೇ ಸಿದ್ಧವಾಗುವುದೆಂದು ಭಾವವು.

[1] ಗ್ರಹನಕ್ಷತ್ರಾದಿ ರೂಪಗಳಿಂದ ಪ್ರಕಾಶಿಸುತ್ತಿರುವರಲ್ಲವೆ? ಆದುದರಿಂದಲೇ ಬ್ರಾಹ್ಮಣರು ಶುಭಕರ್ಮಗಳನ್ನೂ, ಯಜ್ಞಯಾಗಾದಿಗಳನ್ನೂ, ತಪೋದಾನಾದಿಗಳನ್ನೂ ಅಕ್ಕರೆಯಿಂದ ನಡೆಸುವರು. ಧರ್ಮಪರಾಯಣರಾಗಿ, ಸತ್ಪುರುಷ ಸಹವಾಸವುಳ್ಳವರಾಗಿ ತೇಜಸ್ವಿಗಳಾಗಿ, ಉದಾರಿಗಳಾಗಿ, ಅಹಿಂಸೆ ಶುಚಿತ್ವ ಮುಂತಾದ ಸದ್ಗುಣಗಳಿಂದ ಭರಿತರಾದ ಮಹರ್ಷಿಗಳೇ ತ್ರಿಲೋಕಗಳಲ್ಲಿಯೂ ಪೂಜ್ಯರೆನಿಸುವರು" ಎಂದನು. ಹೀಗೆ ಅತ್ಯಂತ ಕೋಪಾವೇಶದಿಂದ ನುಡಿಯುತ್ತಿರುವ ಮಹಾತ್ಮನಾದ ರಾಮನನ್ನು ನೋಡಿ, ಜಾಬಾಲಿಯು ವಿನಯದಿಂದ ಸಮಾಧಾನಪಡಿಸುತ್ತ, ಯಥಾರ್ಥವಾಗಿಯೂ, ಆಸ್ತಿಕಮತ ಪ್ರತಿಪಾದಕವಾಗಿಯೂ, ಸತ್ಪುರುಷರಿಗೆ ಹಿತವಾಗಿಯೂ ಇರುವ ಮಾತುಗಳಿಂದ, "ಎಲೈ ರಾಮನೆ! ನಾನು ಹೇಳಿದ ಮಾತುಗಳು ನಾಸ್ತಿಕವಾದಗಳೆಂದೆಣಿಸಬೇಡ! ನನ್ನನ್ನು ನಾಸ್ತಿಕನೆಂದೂ ತಿಳಿಯಬೇಡ. ಪರಲೋಕವಿಲ್ಲವೆಂಬುದು ನಿಜವಾಗಿಯೂ ನನ್ನ ಮತವಲ್ಲವು. ಇಷ್ಟೇ ಅಲ್ಲ! ಬೇರೆ ಯಾರಾದರೂ ನಾಸ್ತಿಕವನ್ನು ಆಡುತ್ತಿದ್ದರೆ ಅದನ್ನು ನಾನು ಕೇಳಿಯೂ ಸಹಿಸಲಾರೆನು. ಆಗಲೇ ಆಸ್ತಿಕವಾದಗಳಿಂದ ಅವರ ಬಾಯನ್ನು ಅಡಗಿಸುವೆನು. ಆದರೆ ಈಗ ನಾನು ನಿನಗೆ ಹೇಳಿದುದಕ್ಕೆ ಕಾರಣವೇ ಬೇರೆ! ಧರ್ಮಸಂಕಟಕಾಲವು ಬಂದಾಗ ಮಾತ್ರವೇ ಕಾರ್ಯಸಿದ್ಧಿಗಾಗಿ ಈ ನಾಸ್ತಿಕವಾದವನ್ನು ಮಾಡುವೆನೇ ಹೊರತು, ನಿಜವಾಗಿ ನಾನು ಅಂತವನಲ್ಲವು. ಎಲೈ ರಾಮನೆ! ಈಗ ನಮ್ಮ ಅಯೋಧ್ಯೆಗೆ ಮಹಾ ಸಂಕಟಕಾಲವು ಪ್ರಾಪ್ತವಾದುದರಿಂದಲೇ, ಹೇಗಾದರೂ ನಿನ್ನನ್ನು ಹಿಂತಿರುಗಿಸಿ ಅಲ್ಲಿಗೆ ಕರೆದು ಕೊಂಡುಹೋಗಬೇಕೆಂಬುದಕ್ಕಾಗಿ ಈ ನಾಸ್ತಿಕವಾದಗಳನ್ನು ಆರಂಭಿಸಿದೆನೇ ಹೊರತು ಬೇರೆಯಲ್ಲ" ಎಂದನು.

ಇದು ನೂರೊಂಬತ್ತನೆಯ ಸರ್ಗವು

---

[1] ಇಲ್ಲಿ "ಸುಕೃತಾಂ ವಾ ಏತಾನಿ ಜ್ಯೋತೀಗ್ಂಷಿ ಯನ್ನಕ್ಷತ್ರಾಣಿ" ಎಂಬ ಶ್ರುತಿ ಪ್ರಮಾಣದಿಂದ ಈಗ ಗ್ರಹನಕ್ಷತ್ರಾದಿಗಳೆಲ್ಲವೂ ತಮ್ಮ ತಮ್ಮ ಕರ್ಮಫಲದಿಂದಲೇ ಈ ಪದವಿಯನ್ನು ಅನುಭವಿಸುತ್ತಿರುವರೆಂದು ಸಿದ್ಧವಾಗುವುದು.

ವಸಿಷ್ಠನು ರಾಮನಿಗೆ ಕೋಪ ಸಮಾಧಾನಮಾಡಿ, ಮನುವಂಶದ ರಾಜರ ಪೂರ್ವಾಚಾರವನ್ನು ನಿದರ್ಶಿಸಿ, ಜ್ಯೇಷ್ಠನೇ ರಾಜ್ಯಾರ್ಹನೆಂದು ಬೋಧಿಸಿ, ರಾಮನನ್ನು ಹಿಂತಿರುಗಿಸುವುದಕ್ಕೆ ಪ್ರಯತ್ನಿಸಿದುದು.

ರಾಮನು ಜಾಬಾಲಿಯ ಮಾತಿಗೆ ಕೋಪಗೊಂಡಿರುವುದನ್ನು ನೋಡಿ ವಸಿಷ್ಠನು ಆತನನ್ನು ಕುರಿತು "ವತ್ಸ ರಾಮನೆ! ಈ ಜಾಬಾಲಿಯು ನಾಸ್ತಿಕನೆಂದೆಣಿಸಬೇಡ! ಮನುಷ್ಯನಿಗೆ ಪರಲೋಕವುಂಟೆಂಬುದೂ, ಅವನವನ ಕರ್ಮಫಲವು ಮುಗಿದೊಡನೆಯೇ ಅಲ್ಲಿಂದ ಹಿಂತಿರುಗಿ ಭೂಮಿಯಲ್ಲಿ ಹುಟ್ಟುವನೆಂಬುದೂ ಈತನಿಗೆ ತಿಳಿಯದ ವಿಷಯವಲ್ಲ. ನಿನ್ನನ್ನು ಹೇಗಾದರೂ ಹಿಂತಿರುಗಿಸಿ ಅಯೋಧ್ಯೆಗೆ ಕರೆದುಕೊಂಡು ಹೋಗಬೇಕೆಂಬುದಕ್ಕಾಗಿಯೇ ಈತನು ಈ ಮಾತನ್ನಾಡಿರುವನು. ಎಲೈ ರಾಜಕುಮಾರನೆ! ಈಗ ನಾನು ಲೋಕೋತ್ಪತ್ತಿಯ ಕ್ರಮವನ್ನು ಹೇಳುವೆನು. ಕೇಳು. ಮೊದಲು ಈ ಪ್ರಪಂಚವೆಲ್ಲವೂ ಜಲಮಯವಾಗಿದ್ದಿತು. ಆಮೇಲೆ ಭೂಮಿಯು ಸೃಷ್ಟಿಸಲ್ಪಟ್ಟಿತು. ಅದರಲ್ಲಿ ಮೊದಲು ಸ್ವಯಂಭುವಾದ ಬ್ರಹ್ಮನೂ ದೇವತೆಗಳೂ ಅವತರಿಸಿದರು. ಆಗ ಶ್ರೀಮನ್ನಾರಾಯಣನು ವರಾಹರೂಪವನ್ನೆತ್ತಿ ಆ ಜಲದಿಂದ ಭೂಮಿಯನ್ನುದ್ಧರಿಸಿದನು. ಆಮೇಲೆ ಬ್ರಹ್ಮನು ಮರೀಚಿ ಮೊದಲಾದ ತನ್ನ ಪುತ್ರರೊಡಗೂಡಿ ಈ ಪ್ರಪಂಚವನ್ನು ಸೃಷ್ಟಿಸಿದನು. ಆ ಬ್ರಹ್ಮನು ಪರಬ್ರಹ್ಮನಿಂದ ಹುಟ್ಟಿದನು. ಆ ಪರಬ್ರಹ್ಮನಾದರೋ ಪ್ರವಾಹರೂಪದಿಂದ ನಿತ್ಯನಾಗಿರುವನು. ಇತರರಿಗಿಂತಲೂ ಚಿರಸ್ಥಾಯಿಯಾಗಿರುವನು. ತನ್ನ ಸ್ಥಾನದಿಂದಲೇ ಮೋಕ್ಷವನ್ನು ಹೊಂದುವನಾದುದರಿಂದ ನಾಶರಹಿತನೆನಿಸಿಕೊಂಡಿರುವನು. ಆತನಿಂದ ಮರೀಚಿಯು ಹುಟ್ಟಿದನು. ಮರೀಚಿಯಿಂದ ಕಶ್ಯಪನೂ, ಕಶ್ಯಪನಿಂದ ಸೂರ್ಯನೂ, ಸೂರ್ಯನಿಂದ ವೈವಸ್ವತಮನುವೂ ಕ್ರಮವಾಗಿ ಜನಿಸಿದರು. ಆ ವೈವಸ್ವತನೇ ಮೊದಲು ರಾಜನಾಗಿದ್ದನು. ಆತನಿಗೆ ಇಕ್ಷ್ವಾಕುವೆಂಬ ಪುತ್ರನು ಹುಟ್ಟಿದನು. ಆ ವೈವಸ್ವತಮನುವು ಮೊದಲು ಸಂಪತ್ಸಮೃದ್ಧವಾದ ಈ ಭೂಮಿಯನ್ನು ಇಕ್ಷ್ವಾಕುವಿಗೆ ಕೊಟ್ಟನು. ಆ ಇಕ್ಷ್ವಾಕುವೇ ಅಯೋಧ್ಯೆಯಲ್ಲಿ ಆಳಿದ ಮೊದಲನೆಯ ರಾಜನೆಂದು ತಿಳಿ. ಆ ಇಕ್ಷ್ವಾಕುವಿನ ಹೊಟ್ಟೆಯಲ್ಲಿ ಶ್ರೀಮಂತನಾದ ಕುಕ್ಷಿಯೆಂಬುವನು ಜನಿಸಿ ಲೋಕವಿಖ್ಯಾತನಾದನು. ಆ ಕುಕ್ಷಿಗೆ ವೀರನಾದ ವಿಕುಕ್ಷಿಯು ಮಗನಾದನು. ಆ ವಿಕುಕ್ಷಿಯಿಂದ ತೇಜಸ್ವಿಯಾಗಿಯೂ, ಪರಾಕ್ರಮ

ಶಾಲಿಯಾಗಿಯೂ ಇರುವ ಬಾಣಸು ಜನಿಸಿದನು. ಆ ಬಾಣನಿಂದ ಯಶಸ್ವಿಯಾದ ಅನರಣ್ಯನೆಂಬುವನು ಹುಟ್ಟಿ, ಸತ್ಪುರುಷರಿಗೆಲ್ಲಾ ಮೇಲೆನಿಸಿಕೊಂಡು ರಾಜ್ಯವನ್ನು ಪಾಲಿಸುತ್ತಿದ್ದನು. ಈತನ ಧರ್ಮಪ್ರಭುತ್ವದಲ್ಲಿ ಅನಾವೃಷ್ಟಿ ಮೊದಲಾದ ಈತಿಬಾಧೆಗಳೊಂದೂ ಇಲ್ಲದೆ ಕಾಲ ಕಾಲಕ್ಕೆ ಮಳೆಯು ಸುರಿಯುತ್ತಿತ್ತು. ದುರ್ಭಿಕ್ಷವೆಂಬ ಮಾತೇ ಇರಲಿಲ್ಲವು. ಆಗ ಚೋರಭಯವೆಂಬುದೂ ಇಲ್ಲವು. ಆ ಅನರಣ್ಯನಿಂದ ಪೃಥುವೆಂಬವನೂ, ಅವನಿಂದ ತ್ರಿಶಂಕುವೂ ಜನಿಸಿದರು. ವೀರನಾದ ಈ ತ್ರಿಶಂಕುವು ಬಹಳ ಸತ್ಯಸಂಧನೆನಿಸಿಕೊಂಡಿದ್ದು ಶರೀರದೊಡನೆಯೇ ಸ್ವರ್ಗವನ್ನು ಹೊಂದಿದನು. ಈತನಿಂದ ಯಶಸ್ವಿಯಾದ ಯುವನಾಶ್ವನೆಂಬವನು ಹುಟ್ಟಿ, ದುಂದುವೆಂಬ ರಾಕ್ಷಸನನ್ನು ಕೊಂದು, ದುಂದುಮಾರನೆಂಬ ಖ್ಯಾತಿಯನ್ನು ಪಡೆದನು. ಈ ಯುವನಾಶ್ವನಿಂದ ಮಾಂಧಾತನೂ, ಮಾಂಧಾತನಿಂದ ಸುಸಂಧಿಯೂ ಹುಟ್ಟಿದರು. ಈ ಸುಸಂಧಿಗೆ ಧ್ರುವಸಂಧಿ, ಪ್ರಸೇನಜಿತ್ತು ಎಂಬ ಇಬ್ಬರು ಮಕ್ಕಳಾದರು. ಅವರಲ್ಲಿ ಧ್ರುವಸಂಧಿಗೆ ಭರತನೆಂಬ ಮಗನಾದನು, ಆ ಭರತನಿಂದ ಅಸಿತನು ಹುಟ್ಟಿದನು. ಆ ಅಸಿತನಿಗೆ ಸಾಮಂತರಾಜರಾಗಿದ್ದ ಹೈಹಯರು, ಕಾಲಜಂಘರು, ಶಶಿಬಿಂದುಗಳು, ಎಂಬ ಮೂವರು, ಶತ್ರುಗಳಾದರು. ಅವರೆಲ್ಲರನ್ನೂ ಅಸಿತನು ಇದಿರಿಸಿ ಯುದ್ಧಮಾಡುತ್ತಿರುವಾಗ ಪರಾಜಿತನಾಗಿ ಕಾಡಿಗೆ ಓಡಿಸಲ್ಪಟ್ಟನು. ಹೀಗೆ ಅವನು ರಾಜ್ಯಭ್ರಷ್ಟನಾಗಿ ಹಿಮವತ್ಪರ್ವತಕ್ಕೆ ಹೋಗಿ, ಅಲ್ಲಿಗೂ ಶತ್ರುಗಳು ತನ್ನನ್ನು ಬೆನ್ನುಹತ್ತಿಬರುವರೆಂಬ ಭಯದಿಂದ ಮುನಿವೃತ್ತಿಯನ್ನವಲಂಬಿಸಿ ವಿರಕ್ತನಾಗಿದ್ದುಬಿಟ್ಟನು. ಆತನ ಹೆಂಡತಿಯರಿಬ್ಬರೂ ಗರ್ಭಿಣಿಯರಾಗಿದ್ದರೆಂದು ಪ್ರವಾದವಿದ್ದಿತು. ಅವರಲ್ಲಿ ಒಬ್ಬಳು ತನ್ನ ಸವತಿಯ ಗರ್ಭವನ್ನು ಕೆಡಿಸಬೇಕೆಂಬ ಅಸೂಯೆಯಿಂದ ಆ ಸವತಿಗೆ ವಿಷಮಿಶ್ರವಾದ ಭಕ್ಷ್ಯವನ್ನು ಕೊಟ್ಟಳು. ಈ ವಿಷಭಕ್ಷಣವನ್ನು ಮಾಡಿದವಳಿಗೆ ಕಾಳಿಂದಿಯೆಂದು ಹೆಸರು. ಈ ಸಂದರ್ಭದಲ್ಲಿ ಭೃಗುವಂಶದಲ್ಲಿ ಹುಟ್ಟಿದ ಚ್ಯವನನೆಂಬ ಮಹರ್ಷಿಯು ಆ ಹಿಮವತ್ಪರ್ವತದಲ್ಲಿರುತ್ತಿದ್ದನು. ಕಾಳಿಂದಿಯು ಆ ಋಷಿಯ ಬಳಿಗೆ ಹೋಗಿ ನಮಸ್ಕರಿಸಿ ತನಗೆ ಸುಪುತ್ರನನ್ನು ಕೊಡುವಂತೆ ಪ್ರಾರ್ಥಿಸಲು, ಆ ಬ್ರಾಹ್ಮಣನು ಆಕೆಯನ್ನು ಕುರಿತು, “ಎಲೆ, ದೇವಿ! ನಿನಗೆ ಧೀಮಂತನಾಗಿಯೂ, ಲೋಕಪ್ರಸಿದ್ಧನಾಗಿಯೂ, ಧಾರ್ಮಿಕನಾಗಿಯೂ ಸದಾಚಾರ ಸಂಪನ್ನನಾಗಿಯೂ ಇರುವ

ಸತ್ಪುತ್ರನೊಬ್ಬನು ಹುಟ್ಟುವನು" ಎಂದು ಅನುಗ್ರಹಿಸಿದನು. ಅದಕ್ಕಾಗಿ ರಾಜನೂ ರಾಜಪತ್ನಿಯೂ ಬಹಳ ಸಂತೋಷಿಸಿ, ಪ್ರದಕ್ಷಿಣ ನಮಸ್ಕಾರಗಳಿಂದ ಆ ಋಷಿಯನ್ನು ಪೂಜಿಸಿ ತಮ್ಮ ಆಸ್ಥಾನಕ್ಕೆ ಹಿಂತಿರುಗಿದರು. ಕೆಲವು ದಿನದಲ್ಲಿಯೇ ಆಕೆಯ ಗರ್ಭದಿಂದ ಬ್ರಹ್ಮದೇವನಿಗೆ ಸಮಾನನಾದ ಕುಮಾರನು ಹುಟ್ಟಿದನು. ಆದರೆ ಈಕೆಗೆ ಸವತಿಯು ಕೊಟ್ಟ ವಿಷವೂ ಆ ಶಿಶುವಿನೊಡನೆಯೇ ಕೆಳಗೆ ಬಿದ್ದಿತು. ಹೀಗೆ ವಿಷದೊಡನೆ ಹುಟ್ಟಿದುದರಿಂದ ಆತನಿಗೆ ಸಗರನೆಂದು ಹೆಸರಾಯಿತು. ಈ ಸಗರನು ಯಜ್ಞದೀಕ್ಷೆಯನ್ನು ಕೈಕೊಂಡು ಯಜ್ಞಾಶ್ವವನ್ನು ಬಿಟ್ಟಾಗ, ಅದು ತಪ್ಪಿಸಿಕೊಂಡು ಹೋಗಲು, ಹುಡುಕಿ ತರುವುದಕ್ಕಾಗಿ ತನ್ನ ಮಕ್ಕಳನ್ನು ಕಳುಹಿಸಿದನು. ಆ ಸಗರಪುತ್ರರಿಂದಲೇ ಈ ಸಮುದ್ರವು ತೋಡಲ್ಪಟ್ಟಿತು. ಸಗರನಿಗೆ ಅಸಮಂಜನೆಂಬ ಬೇರೊಬ್ಬ ಮಗನಿದ್ದುದಾಗಿ ನಾವು ಕೇಳಿರುವೆವು. ಆತನು ಬಹಳ ಪಾಪಕಾರ್ಯಗಳನ್ನು ಮಾಡುತ್ತಿದ್ದುದರಿಂದ ತಂದೆಯು ಅವನನ್ನು ಕಾಡಿಗೋಡಿಸಿಬಿಟ್ಟನು. ಆ ಅಸಮಂಜನಿಂದ ಅಂಶುಮಂತನೂ, ಆತನಿಂದ ದಿಲೀಪನೂ, ದಿಲೀಪನಿಂದ ಭಗೀರಥನೂ, ಆ ಭಗೀರಥನಿಂದ ಕಕುತ್ಸ್ಥನೂ ಕ್ರಮವಾಗಿ ಜನಿಸಿದರು. ಆತನಿಂದಲೇ ಈಗಲೂ ನಿಮಗೆ ಕಾಕುತ್ಸ್ಥರೆಂಬ ಪ್ರಸಿದ್ಧಿಯುಂಟಾಗಿರುವುದು. ಆತನ ಮಗನು ರಘುವು. ಆತನಿಂದ ನಿಮಗೆ ರಾಘವರೆಂಬ ಪ್ರಸಿದ್ಧಿಯೂ ಬಂದಿರುವುದು. ಆ ರಘುವಿಗೆ ಮಹಾತೇಜಸ್ವಿಯಾದ ಪುತ್ರನೊಬ್ಬನು ಹುಟ್ಟಿದನು. ಆತನಿಗೆ ಪ್ರವೃದ್ಧನೆಂದೂ, ಪುರುಷಾದಕನೆಂದೂ ಕಲ್ಮಾಷಪಾದನೆಂದೂ, ಸೌದಾಸನೆಂದೂ, ಲೋಕದಲ್ಲಿ ಹೆಸರುಂಟಾಯಿತು. ಆ ಕಲ್ಮಾಷಪಾದನಿಗೆ ಶಂಖಣನೆಂಬ ಪುತ್ರನು ಪ್ರಸಿದ್ಧನಾಗಿದ್ದನು. ಆ ಶಂಖಣನು [1] ತಂದೆಯಾದ ಕಲ್ಮಾಷಪಾದನನ್ನೇ ಇದಿರಿಸಿ, ಆ ತಂದೆಯಿಂದ ಸೇನಾಸಮೇತನಾಗಿ ನಾಶಹೊಂದಿದನು. ಆ ಶಂಖಣನ ಮಗನು ಸುದರ್ಶನನು. ಆ ಸುದರ್ಶನನಿಂದ ಅಗ್ನಿವರ್ಣನೂ, ಆತನಿಂದ ಶೀಘ್ರಗನೂ ಅವನಿಂದ ಮರುವೂ, ಆ ಮರುವಿನಿಂದ ಪ್ರಶುಶ್ರುಕನೂ ಜನಿಸಿದರು. ಪ್ರಶುಶ್ರುಕನಿಗೆ ಅಂಬರೀಷನೆಂಬ ಮಗನು ಹುಟ್ಟಿದನು. ಆತನಿಂದ ಮಹಾವೀರನೆನಿಸಿಕೊಂಡ ನಹುಷನು ಹುಟ್ಟಿದನು. ಆ ನಹುಷನಿಗೆ ಪರಮ ಧಾರ್ಮಿಕ

---

[1] ವಸಿಷ್ಠ ಶಾಪದಿಂದ ಕಲ್ಮಾಷಪಾದನಿಗೆ ರಾಕ್ಷಸತ್ವವುಂಟಾಯಿತು. ಇವನು ತನ್ನ ಮಗನನ್ನೇ ಕೊಂದುಬಿಟ್ಟನು.

ನೆನಿಸಿಕೊಂಡಿದ್ದ ನಾಭಾಗನೆಂಬ ಪುತ್ರನಾದನು. ಆ ನಾಭಾಗನಿಗೆ ಅಜ ಸುವ್ರತ ರೆಂಬ ಇಬ್ಬರು ಮಕ್ಕಳು ಹುಟ್ಟಿದರು. ಅವರಲ್ಲಿ ಜ್ಯೇಷ್ಠನಾದ ಅಜನೇ ನಿನ್ನ ಪಿತಾಮಹನು. ಧರ್ಮಾತ್ಮನಾದ ದಶರಥನು ಆತನಿಂದ ಹುಟ್ಟಿದವನು. ರಾಮ ನೆಂದು ಲೋಕಪ್ರಖ್ಯಾತನಾದ ನೀನು ಆ ದಶರಥನ ಜ್ಯೇಷ್ಠಕುಮಾರನು. ವತ್ಸ ರಾಮನೇ! ಈ ವಂಶಪ್ರವರವನ್ನು ಕೇಳಿದುದರಿಂದಲೇ ನಿಮ್ಮ ಕುಲಾಚಾರವು ಹೇಗೆಂಬುದನ್ನು ನೀನು ಚೆನ್ನಾಗಿ ತಿಳಿದುಕೊಂಡಿರಬಹುದು. ದಶರಥನಿಗೆ ನೀನೇ ಜ್ಯೇಷ್ಠಪುತ್ರನಾದುದರಿಂದ ಕೋಸಲರಾಜ್ಯವು ನಿನಗೇ ಸೇರತಕ್ಕುದು. ಆದುದರಿಂದ ನಿನ್ನ ರಾಜ್ಯವನ್ನು ನೀನೇ ಕೈಕೊಂಡು ಪ್ರಜೆಗಳನ್ನು ಪಾಲಿಸು ತ್ತಿರು. ಇದುವರೆಗೆ ನಿಮ್ಮ ವಂಶದಲ್ಲಿ ಜ್ಯೇಷ್ಠನಿರುವಾಗ ಕನಿಷ್ಠನಿಗೆ ಪಟ್ಟಾಭಿ ಷೇಕವನ್ನು ಮಾಡಿದುದೇ ಇಲ್ಲವು. ಪಟ್ಟಾಭಿಷೇಕವೆಂಬುದು ಜ್ಯೇಷ್ಠನಿಗೆ ಸಲ್ಲ ತಕ್ಕುದು. ಆದುದರಿಂದ ನಿನ್ನ ವಂಶಪರಂಪರೆಯಾಗಿ ಬಂದ ಜ್ಯೇಷ್ಠಾಭಿಷೇಚನ ವೆಂಬ ಕುಲಧರ್ಮವನ್ನು ಧರ್ಮಜ್ಞನಾದ ನೀನೇ ತಪ್ಪಿಸುವುದುಚಿತವಲ್ಲ. ಎಲೈ ಕೀರ್ತಿವಂತನೇ! ನೀನೂ ನಿನ್ನ ತಂದೆಯಂತೆಯೇ ಸಮೃದ್ಧವಾದ ಮತ್ತು ಅನೇಕ ಜನಪದಗಳಿಂದ ಕೂಡಿದ ಈ ಭೂಮಂಡಲವನ್ನು ಧರ್ಮದಿಂದ ಪಾಲಿಸು ತ್ತಿರು" ಎಂದನು.

ಇದು ನೂರಹತ್ತನೆಯ ಸರ್ಗವು.

ವಸಿಷ್ಠನು ಆಚಾರ್ಯನಾದ ತನ್ನ ಮಾತನ್ನಾದರೂ ಗೌರವಿಸಿ ಅಯೋಧ್ಯೆಗೆ ಹಿಂತಿರುಗುವಂತೆ ರಾಮನನ್ನು ನಿರ್ಬಂಧಿಸಿದುದು. ರಾಮನು ಆಚಾರ್ಯವಾಕ್ಯಕ್ಕಿಂತಲೂ ಪಿತೃವಾಕ್ಯವು ಮೇಲೆಂಬು ದನ್ನು ನಿರೂಪಿಸಿದುದು. ಭರತನ ಸ್ಥಂಡಿಲಶಯನವು. ರಾಮನ ಸಮಾಧಾನವು.

ರಾಜಪುರೋಹಿತನಾದ ವಸಿಷ್ಠನು ರಾಮನಿಗೆ ಈ ಕುಲಧರ್ಮವನ್ನು ತಿಳಿಸಿ ದರೂ, ಆ ರಾಮನು ತಂದೆಯಾಜ್ಞೆಗೆ ಈ ಕುಲಧರ್ಮವು ವಿರುದ್ಧವಾಗಿರುವುದ ರಿಂದ, ಸುಮ್ಮನಿರುವನೆಂದು ವಸಿಷ್ಠನು ಭಾವಿಸಿ, ಪುನಃ ಧರ್ಮಯುಕ್ತವಾದ ಮಾತಿನಿಂದ ಆತನನ್ನು ಕುರಿತು "ಎಲೈ ಕಾಕುತ್ಸ್ಥನೆ! ಈ ಪ್ರಪಂಚದಲ್ಲಿ

ಹುಟ್ಟಿದ ಪ್ರತಿಯೊಬ್ಬ ಮನುಷ್ಯನಿಗೂ ಆಚಾರ್ಯನು, ತಂದೆ, ತಾಯಿ ಎಂಬ ಮೂವರು ಮುಖ್ಯ ಗುರುಗಳುಂಟು. ಅವರಲ್ಲಿ ತಂದೆತಾಯಿಗಳಿಬ್ಬರೂ ಆ ಪುರುಷನ ದೇಹೋತ್ಪತ್ತಿಗೆ ಮಾತ್ರವೇ ಕಾರಣರಾಗಿರುವರು. [1] ಆಚಾರ್ಯನಾದರೋ, ಅವನಿಗೆ ಅವಶ್ಯವಾದ ಜ್ಞಾನವನ್ನು ಕೊಡುವನಾದುದರಿಂದ, ಆತನಿಗೆ ಗುರುವೆಂದೇ ಹೆಸರು. ಗುರುವೆಂಬ ಶಬ್ದದಿಂದಲೇ ತಂದೆತಾಯಿಗಳಿಗಿಂತಲೂ ಈತನು ದೊಡ್ಡವನೆಂದು ವ್ಯಕ್ತವಾಗುವುದು. ಎಲೈ ರಾಮನೆ! ನಾನು ಯಾರೆಂದು ಬಲ್ಲೆಯಾ? ನಿನಗೆ ಮಾತ್ರವೇ ಅಲ್ಲದೆ ನಿನ್ನ ತಂದೆಗೂ ನಾನೇ ಗುರುವು. ಅವರ ಮಾತಿಗಿಂತಲೂ ನನ್ನ ಮಾತನ್ನು ಹೆಚ್ಚಾಗಿ ಗೌರವಿಸಬೇಕು. ಹಾಗೆ ನಡೆಯುತ್ತಿದ್ದರೆ ಮಾತ್ರವೇ ನೀನು ಸತ್ಪುರುಷರ ಮರ್ಯಾದೆಯನ್ನು ಮೀರದವನಾಗುವೆಯೇ ಹೊರತು, ನನ್ನ ಮಾತನ್ನೂ ನೀನು ಅತಿಕ್ರಮಿಸಿದರೆ ನೀನು ಧರ್ಮವನ್ನು ಮೀರಿದಂತೆಯೇ ಆಗುವುದು. ನೀನು ನಡೆಸಬೇಕಾದ ಧರ್ಮಗಳು ಇನ್ನೂ ಬೇರೆಯುಂಟು. ಇದೋ! ಈ ಬ್ರಾಹ್ಮಣರೂ, ಈ ಪುರಜನರೂ, ಈ ಕ್ಷತ್ರಿಯ ವೈಶ್ಯ ಶೂದ್ರರೂ ನಿನ್ನ ಕಡೆಯವರು. ಇವರನ್ನು ಪಾಲಿಸುವುದೇ ನಿನ್ನ ಮುಖ್ಯ ಧರ್ಮವು. ಈ ಧರ್ಮವನ್ನು ಅನುಷ್ಠಿಸಿದರೆ ಮಾತ್ರವೇ ನೀನು ಸತ್ಪುರುಷರ ಮರ್ಯಾದೆಯನ್ನು ಮೀರದವನಾಗುವೆ. ಇದೋ! ಇಲ್ಲಿ ವೃದ್ಧರಾಗಿಯೂ, ಪರಮಧಾರ್ಮಿಕರಾಗಿಯೂ ಇರುವ ನಿನ್ನ ಮಾತೆಯರನ್ನು ನೋಡು! ಇವರ ಶುಶ್ರೂಷೆಯನ್ನು ಬಿಟ್ಟು ಹೋಗುವುದಕ್ಕಿಂತಲೂ ನಿನಗೆ ಬೇರೊಂದು ಧರ್ಮಾತಿಕ್ರಮವುಂಟೇ? ತಾಯಿಯ ಶುಶ್ರೂಷೆಯೇ ಮಕ್ಕಳಿಗೆ ಮೊದಲನೆಯ ಧರ್ಮವು. ಅದನ್ನು ನಡೆಸುತ್ತ, ಮಾತೆಯರಿಗೆ ವಿಧೇಯನಾಗಿ ನೀನು ನಡೆದುಕೊಳ್ಳುತಿದ್ದರೆ ಮಾತ್ರವೇ ಸನ್ಮಾರ್ಗವನ್ನು ಅತಿಕ್ರಮಿಸದವನಾಗುವೆ. ಎಲೈ ರಘುವಂಶೋತ್ತಮನೆ! [2] ಸತ್ಯಧರ್ಮ

---

1 "ಸ ಹಿ ವಿದ್ಯಾತಸ್ತಂ ಜನಯತಿ ತಚ್ಛ್ರೇಷ್ಠಂ ಜನ್ಮ" ಎಂಬ ಶ್ರುತಿಪ್ರಮಾಣವನ್ನನುಸರಿಸಿ, ವಿದ್ಯೆಯಿಂದ ಉತ್ತಮವಾದ ಜನ್ಮವನ್ನು ಕೊಡುವ ಆಚಾರ್ಯನನ್ನು ತಂದೆತಾಯಿಗಳಿಗಿಂತಲೂ ಗೌರವಿಸಬೇಕೆಂದು ಭಾವವು.

2 ನೀನು ಸತ್ಯವನ್ನು ಅತಿಕ್ರಮಿಸಬಾರದೆಂದು ಹೇಗೆ ಹೇಳುವೆಯೋ, ಹಾಗೆಯೇ ಧರ್ಮವನ್ನು ಅತಿಕ್ರಮಿಸದಿರಬೇಡವೆ? ಸರ್ವೇಶ್ವರ ಸ್ವರೂಪನಾದ ನಿನಗೆ ಆಶ್ರಿತಪಾರತಂತ್ರ್ಯವೆಂಬುದು ಸ್ವಾಭಾವಿಕ ಧರ್ಮವಾದುದರಿಂದ ಆ ಧರ್ಮವನ್ನೂ ನೀನು ನಡೆಸಬೇಕೆಂದು ಭಾವವು.

ಗಳನ್ನು ಅನುಷ್ಠಿಸುವುದರಲ್ಲಿ ನೀನು ಶೂರನೆಂಬುದೇನೋ ನಿಜವು. ಆದರೆ ಈ ಭರತನು ನಿನ್ನಲ್ಲಿಗೆ ಬಂದು, ನೀನು ಪಟ್ಟವನ್ನು ಕಟ್ಟಿಕೊಳ್ಳಬೇಕೆಂದೂ, ಈ ವಿಷಯದಲ್ಲಿ ತನ್ನ ತಾಯಿಯಾದ ಕೈಕೇಯಿಗೂ ತಾನು ಸಮಾಧಾನಪಡಿಸಿರುವೆನೆಂದೂ ಅನೇಕ ವಿಧದಲ್ಲಿ ನಿನ್ನನ್ನು ಪ್ರಾರ್ಥಿಸುತ್ತಿರುವನಲ್ಲವೆ? ಹೀಗೆ ಆತ್ಮಭೂತನಾದ ನಿನ್ನ ತಮ್ಮನನ್ನು ನೀನು ಅತಿಕ್ರಮಿಸಿಹೋಗದೆ, ಆತನ ಮಾತನ್ನು ನಡೆಸಿಕೊಟ್ಟರೆ ಮಾತ್ರವೇ ಸದಾಚಾರವನ್ನು ಮೀರದವನಾಗುವೆ! ನೀನು ನಿಜವಾಗಿಯೂ ಸತ್ಯಧರ್ಮಪರಾಯಣನಾಗಿದ್ದರೆ, ಇವರೆಲ್ಲರ ಮಾತುಗಳನ್ನೂ ನಡೆಸುವುದೇ ನಿನ್ನ ಮುಖ್ಯಧರ್ಮವು. ಆಶ್ರಿತಪಾರತಂತ್ರ್ಯವೆಂಬುದು ಸತ್ಯಧರ್ಮಗಳಂತೆಯೇ ಮುಖ್ಯವಾದುದಲ್ಲವೆ? ಆದುದರಿಂದ ಹೀಗೆ ದೈನ್ಯದಿಂದ ಯಾಚಿಸುವ ಭರತನ ಮಾತನ್ನು ನೀನು ಈಡೇರಿಸಿಕೊಡಬೇಡವೆ?" ಎಂದನು. ಹೀಗೆ ಆಚಾರ್ಯನಾದ ವಸಿಷ್ಠನು ಅನುನಯಪೂರ್ವಕವಾಗಿ ಹೇಳಿದ ಮಾತುಗಳನ್ನು ಕೇಳಿ, ಪುರುಷಶ್ರೇಷ್ಠನಾದ ರಾಮನು ಮುಂದೆ ಕುಳಿತಿದ್ದ ಆತನನ್ನು ನೋಡಿ "ಎಲೈ ಆರ್ಯನೆ! ತಂದೆತಾಯಿಗಳು ಮೊದಲು ಮಕ್ಕಳನ್ನು ಪಡೆಯುವುದಕ್ಕಾಗಿ ಎಷ್ಟೋ ವ್ರತೋಪವಾಸಗಳನ್ನೂ, ದೇವತಾರಾಧನೆಗಳನ್ನೂ ನಡೆಸುವರು. ಮಕ್ಕಳು ಹುಟ್ಟಿದಮೇಲೆ ಅವರನ್ನು ಪೋಷಿಸುವುದಕ್ಕೆ ಎಷ್ಟೋ ಕಷ್ಟಪಡುವರು. ಅವರಿಗೆ ಸ್ನಾನಮಾಡಿಸುವುದು, ಅವರನ್ನು ಮುದ್ದಾಡುವುದು, ಅವರಿಗೆ ಹಿತವಾಕ್ಯಗಳನ್ನು ಹೇಳುವುದು, ಇವೇ ಮೊದಲಾದ ಮಹೋಪಕಾರವನ್ನು ಮಾಡಿದ ತಂದೆತಾಯಿಗಳಿಗೆ, ಮಕ್ಕಳು ತಕ್ಕಂತೆ ಯಾವ ಪ್ರತ್ಯುಪಕಾರವನ್ನು ತಾನೇ ಮಾಡಬಲ್ಲರು? ತಂದೆ ತಾಯಿಗಳು ಮಾಡಿದ ಈ ಉಪಕಾರಕ್ಕೆ ತಕ್ಕ ಪ್ರತ್ಯುಪಕಾರವನ್ನು ಯಾವ ಮಕ್ಕಳೂ ಮಾಡಲಾರರು. ಎಲೈ ಮಹಾತ್ಮನೆ! ತಂದೆತಾಯಿಗಳು ದೇಹೋತ್ಪತ್ತಿಗೆ ಮಾತ್ರವೇ ಕಾರಣಭೂತರೆಂದು ನೀನು ಹೇಳಿದೆಯಲ್ಲವೆ? ನಿನ್ನ ಮಾತಿನಂತೆಯೇ ಆಗಲಿ! [1] ದೇಹವೇ

---

[1] "ಶರೀರಮಾದ್ಯಂ ಖಲು ಧರ್ಮಸಾಧನಂ" ಎಂಬಂತೆ, ಸಮಸ್ತ ಧರ್ಮಗಳಿಗೂ ಸಾಧನಭೂತವಾದ ದೇಹವನ್ನೇ ನಮಗೆ ಕೊಡುವವರಾದುದರಿಂದಲೂ, ನಾವು ಅಜ್ಞಾನದಶೆಯಿಂದ ಶೈಶವಬಾಲ್ಯಾವಸ್ಥೆಯಲ್ಲಿರುವಾಗ ಸರ್ವಪ್ರಕಾರದಿಂದಲೂ ನಮ್ಮನ್ನು ರಕ್ಷಿಸುವವರಾದುದರಿಂದಲೂ ಆಚಾರ್ಯರಿಗಿಂತಲೂ ಅನೇಕ ವಿಧದಲ್ಲಿ ಉಪಕಕಾರಕರಾದ ತಂದೆ ತಾಯಿಗಳ ಮಾತನ್ನು ಗುರುವಾಕ್ಯಕ್ಕಿಂತಲೂ ಹೆಚ್ಚಾಗಿ ಗೌರವಿಸಬೇಕೆಂದು ಭಾವವು. ಇದಕ್ಕಾಗಿಯೇ

ಸರ್ವಧರ್ಮಕ್ಕೂ ಕಾರಣಭೂತವು. ಅಂತಹ ದೇಹವನ್ನೇ ಅವರು ನಮಗೆ ಕೊಟ್ಟಿರುವಾಗ, ಅದಕ್ಕಿಂತಲೂ ನಮಗೆ ಹೆಚ್ಚಾದ ಬೇರೆ ಉಪಕಾರವನ್ನು ಲೋಕದಲ್ಲಿ ಯಾರು ತಾನೇ ಮಾಡಬಲ್ಲರು? ಆದುದರಿಂದ ಗುರುವಿಗಿಂತಲೂ ತಂದೆತಾಯಿಗಳೇ ಮೇಲೆಂದು ನನ್ನ ಮತವು. ಆ ದಶರಥರಾಜನೇ ನನ್ನ ದೇಹೋತ್ಪತ್ತಿಗೆ ಕಾರಣನು. ಆತನಿಗೆ ನಾನು ಯಾವ ಪ್ರತಿಜ್ಞೆಯನ್ನು ಮಾಡಿಕೊಟ್ಟಿದ್ದೆನೋ, ಅದನ್ನು ಎಂದಿಗೂ ತಪ್ಪಿಸಲಾರೆನು. ಮೊದಲೇ ಆತನಿಗೆ ಮಾತುಕೊಟ್ಟಿರುವೆನಾದುದರಿಂದ ಈಗ ನಿನ್ನ ಮಾತನ್ನಾಗಲಿ, ತಾಯಿಯ ಮಾತನ್ನಾಗಲಿ, ನನ್ನ ಪ್ರಿಯಸಹೋದರನಾದ ಭರತನ ಮಾತನ್ನಾಗಲಿ ನಾನು ನಡೆಸಲಾರೆನು" ಎಂದನು. ಅದನ್ನು ಕೇಳಿ ಸಮೀಪದಲ್ಲಿದ್ದ ಭರತನು ಬಹು ದುಃಖಿತನಾಗಿ, ಸುಮಂತ್ರನನ್ನು ನೋಡಿ "ಎಲೈ ಸೂತನೆ! ಇನ್ನೇನು? ಈ ನೆಲದಮೇಲೆ ದರ್ಭಾಸನಗಳನ್ನು ಹಾಸಿಡು? ರಾಮನು ಕೇವಲ ಸಮಾಧಾನ ವಾಕ್ಯಗಳಿಂದಲೇ ನನ್ನಲ್ಲಿ ಪ್ರಸನ್ನನಾಗುವಂತೆ ತೋರಲಿಲ್ಲ! ಅವನು ನನ್ನಲ್ಲಿ ಪ್ರಸನ್ನನಾಗಿ ಅನುಗ್ರಹಿಸುವವರೆಗೂ ಆತನ ಮುಂದೆ ಅಡ್ಡಲಾಗಿ ಮಲಗಿ ಬಿಡುವೆನು. ಬಡ್ಡಿಯಾಸೆಗಾಗಿ ತನ್ನಲ್ಲಿದ್ದ ಹಣವೆಲ್ಲವನ್ನೂ ಇತರರಿಗೆ ಸಾಲ ಕೊಟ್ಟ ಬ್ರಾಹ್ಮಣನು, ತನ್ನಲ್ಲಿ ಸಾಲತೆಗೆದವರು ಹಿಂತಿರುಗಿ ಕೊಡದಿದ್ದಾಗ ಅವರ ಮನೆಯ ಬಾಗಿಲಿಗೆ ಅಡ್ಡಲಾಗಿ, ನಿದ್ರಾಹಾರಗಳನ್ನು ಬಿಟ್ಟು ದೈನ್ಯದಿಂದ ಮಲಗಿಬಿಡುವಂತೆ, ರಾಮನು ಅಯೋಧ್ಯೆಗೆ ಬರುವವರೆಗೂ ನಾನೂ ಆಹಾರ ವನ್ನು ಬಿಟ್ಟು ಮುಖಕ್ಕೆ ಮುಸುಕುಹಾಕಿಕೊಂಡು ಈ ಪರ್ಣಶಾಲೆಯ ಬಾಗಿಲಲ್ಲಿಯೇ ಮಲಗಿಬಿಡುವೆನು" ಎಂದನು. ಆದರೆ ಸುಮಂತ್ರನು ಭರತನ ಮಾತನ್ನು ನಡೆಸದೆ ಈ ವಿಷಯದಲ್ಲಿಯೂ ರಾಮನ ಅನುಜ್ಞೆಯನ್ನೇ ಇದಿರು ನೋಡುತ್ತಿದ್ದನು. ಹೀಗೆ ಸುಮ್ಮನಿರುವ ಸುಮಂತ್ರನನ್ನು ನೋಡಿ ಬೇಸರ ಗೊಂಡು, ಭರತನು ತಾನೇ ದರ್ಭೆಗಳನ್ನು ಸಂಗ್ರಹಿಸಿತಂದು ನೆಲದಮೇಲೆ ಹಾಸಿ ಮಲಗಿಬಿಟ್ಟನು. ಆಗ ಮಹಾತೇಜಸ್ವಿಯಾಗಿಯೂ, ರಾಜರ್ಷಿಗಳಿಗೆಲ್ಲಾ ಮೇಲಾಗಿಯೂ ಇರುವ ರಾಮನು ಹೀಗೆ ದೀನದೆಶೆಯಲ್ಲಿರುವ ಭರತನನ್ನು ನೋಡಿ "ವತ್ಸ ಭರತನೆ! ಇದೇನು? ನಾನು ನಿನಗೆ ಯಾವ ವಿಧದಲ್ಲಿ

"ಮಾತೃದೇವೋ ಭವ, ಪಿತೃದೇವೋ ಭವ, ಆಚಾರ್ಯದೇವೋ ಭವ" ಎಂದು ತಂದೆ ತಾಯಿಗಳನ್ನು ಮೊದಲು ಪ್ರಧಾನವಾಗಿ ಹೇಳಿ ಆಮೇಲೆ ಆಚಾರ್ಯನನ್ನು ಹೇಳಿದೆ.

ಅಪಕಾರಿಯಾಗಿರುವೆನು? ನೀನು ಹೀಗೆ ಅಡ್ಡಲಾಗಿ ಮಲಗುವುದೆಂದರೇನು? ಬ್ರಾಹ್ಮಣನು ಮಾತ್ರವೇ ತನ್ನಲ್ಲಿ ಸಾಲ ತೆಗೆದುಕೊಂಡು ಮೋಸಮಾಡಿದವರ ಬಾಗಿಲಿಗಡ್ಡಲಾಗಿ ಮಲಗುವುದುಂಟು. ಅಭಿಷೇಕಾರ್ಹರಾದ ಕ್ಷತ್ರಿಯರಿಗೆ ಈ ಕೃತ್ಯವು ಎಂದಿಗೂ ಉಚಿತವಲ್ಲ. ಎಲೈ ಪುರುಷಶ್ರೇಷ್ಠನೆ! ಏಳು! ಕಠಿಣವಾದ ಈ ವ್ರತವನ್ನು ಬಿಟ್ಟುಬಿಡು! ಶೀಘ್ರದಲ್ಲಿಯೇ ಅಯೋಧ್ಯಾಪುರಿಗೆ ಹೊರಡು" ಎಂದನು. ಭರತನಾದರೋ ಆ ದರ್ಭಾಸ್ತರಣದ ಮೇಲೆ ಹಾಗೆಯೇ ಕುಳಿತುಕೊಂಡು, ತನ್ನ ಸುತ್ತಲೂ ಇದ್ದ ಪುರವಾಸಿಗಳನ್ನೂ, ದೇಶವಾಸಿಗಳನ್ನೂ ನೋಡಿ, ಎಲೈ ಪ್ರಜೆಗಳಿರಾ! ನೀವಾದರೂ ನಮ್ಮಣ್ಣನಿಗೆ ಸಮಾಧಾನವನ್ನು ಹೇಳಬಾರದೆ? ಇದೇಕೆ ಇನ್ನೂ ಸುಮ್ಮನಿರುವಿರಿ?" ಎಂದನು. ಇದನ್ನು ಕೇಳಿ ಅವರಲ್ಲಿ ಕೆಲವರು, ಮಹಾತ್ಮನಾದ ಭರತನನ್ನು ನೋಡಿ "ಎಲೈ ರಾಜಕುಮಾರನೆ! ಈ ರಾಮನು ಸತ್ಯಸಂಧನೆಂಬುದನ್ನು ನಾವು ಚೆನ್ನಾಗಿ ಬಲ್ಲೆವು. ಇವನು ಹೇಳಿದ ಮಾತುಗಳು ಅವನ ಸ್ವಭಾವಕ್ಕೆ ಅನುಗುಣವಾಗಿಯೇ ಇರುವುದು. ಈತನ ಮನಸ್ಸೆಲ್ಲವೂ ತಂದೆಯಾಜ್ಞೆಯಲ್ಲಿಯೇ ಸ್ಥಿರವಾಗಿ ನೆಲೆಗೊಂಡಿರುವುದು, ಇವನನ್ನು ಈಗ ಇಲ್ಲಿಂದ ಹಿಂತಿರುಗಿಸಬೇಕೆಂದರೆ ನಮ್ಮಲ್ಲಿ ಯಾರಿಗೂ ಸಾಧ್ಯವಲ್ಲ" ಎಂದರು. ರಾಮನು ಈ ಮಾತುಗಳನ್ನು ಕೇಳಿ, ಸಂತೋಷದಿಂದ ಭರತನನ್ನು ನೋಡಿ "ವತ್ಸ ಭರತನೆ! ನೋಡಿದೆಯಾ? ಇವರೆಲ್ಲರೂ ಧರ್ಮದೃಷ್ಟಿಯುಳ್ಳವರು. ನಿನ್ನಲ್ಲಿ ಪ್ರೇಮವುಳ್ಳವರಾಗಿಯೂ ಇರುವರು. ಇವರ ಮಾತನ್ನಾದರೂ ನೀನು ಪಾಲಿಸಬೇಡವೆ? ನಾನು ಹೇಳಿದುದಕ್ಕೆ ಅನುಗುಣವಾಗಿಯೇ ಇವರೂ ಹೇಳುತ್ತಿರುವರಲ್ಲವೆ? ಇನ್ನಾದರೂ ನೀನು ಚೆನ್ನಾಗಿ ಪರ್ಯಾಲೋಚಿಸಿ ನೋಡು! ನೀನು ಮುಂದೆ ನಡೆಸಬೇಕಾದ ಕಾರ್ಯವೇನೆಂಬುದನ್ನು ಮನಸ್ಸಿನಲ್ಲಿ ಚೆನ್ನಾಗಿ ನಿರ್ಧರಿಸು! ಕೇವಲ ಹಠದಿಂದ ಪ್ರಯೋಜನವಿಲ್ಲವು. [1] ಕ್ಷತ್ರಿಯರಿಗೆ ಯೋಗ್ಯವಲ್ಲದ ಪ್ರತ್ಯುಪವೇಶವೆಂಬ

---

[1] ಇದಕ್ಕೆ "ಮಾಂ ಚ ಸ್ಪೃಶ ತಥೋದಕಂ" ಎಂದು ಮೂಲವು. ಪ್ರತ್ಯುಪವೇಶವೆಂದರೆ ದಾರಿಗಡ್ಡಲಾಗಿ ಮಲಗಿಬಿಟ್ಟು, ಸಾಲಗಾರರನ್ನು ಅತ್ತಿತ್ತ ಬಿಡದಹಾಗೆ ನಿರೋಧಿಸುವುದು. ಈ ಕಾರ್ಯವು ಕ್ಷತ್ರಿಯರಿಗೆ ಉಚಿತವಲ್ಲದುದರಿಂದ ಈ ಅಕೃತ್ಯಕ್ಕೆ ಪ್ರಾಯಶ್ಚಿತ್ತರೂಪವಾಗಿ ತನ್ನನ್ನೂ, ಶುದ್ಧ ಜಲವನ್ನೂ ಮುಟ್ಟಬೇಕೆಂದು ರಾಮನು ಭರತನಿಗೆ ಹೇಳಿದುದಾಗಿ ಗ್ರಹಿಸಬೇಕು. ಆದರೆ ತನಗಿಂತಲೂ ಹಿರಿಯರಾದ ವಸಿಷ್ಠಾದಿಗಳಿರುವಾಗ ತನ್ನನ್ನು

ಈ ಕೃತ್ಯವನ್ನು ನೀನು ನಡೆಸಿದುದೇ ಮಹಾದೋಷವು. ಅದಕ್ಕೆ ಪ್ರಾಯಶ್ಚಿತ್ತ ರೂಪವಾಗಿ, (ಇನ್ನುಮೇಲೆ ಹೀಗೆ ಮಾಡುವುದಿಲ್ಲವೆಂದು ಶಪಥರೂಪವಾಗಿ) ಶುದ್ಧಜಲವನ್ನೂ ನನ್ನನ್ನೂ ಸ್ಪರ್ಶಿಸು" ಎಂದನು. ಇದನ್ನು ಕೇಳಿ ಭರತನು ಆತನ ಆಜ್ಞೆಯಂತೆಯೇ ಎದ್ದು ನಿಂತು, ಜಲವನ್ನು ಮುಟ್ಟಿ ಬಂದು, ಆಮೇಲೆ ಅಲ್ಲಿದ್ದವರನ್ನು ಕುರಿತು "ಇಲ್ಲಿರತಕ್ಕ ಬ್ರಾಹ್ಮಣರೂ, ಮಂತ್ರಿಗಳೂ, ಪುರವಾಸಿಗಳೂ, ಈಗ ನಾನು ಹೇಳುವ ಮಾತನ್ನು ಗಮನಿಸಿ ಕೇಳಿರಿ! ನಾನು ರಾಜ್ಯಕ್ಕಾಗಿ ತಂದೆಯನ್ನು ನಿರ್ಬಂಧಿಸಿದವನೂ ಅಲ್ಲ! ರಾಜ್ಯಪ್ರಾಪ್ತಿಗಾಗಿ ನನ್ನ ತಾಯಿಯನ್ನು ಪ್ರೇರಿಸಿದವನೂ ಅಲ್ಲ! ಪರಮಧಾರ್ಮಿಕನಾದ ನನ್ನ ಅಣ್ಣನಾದ ಈ ರಾಮನನ್ನು ರಾಜ್ಯದಿಂದ ಹೊರಡಿಸಿ ಕಾಡಿಗಟ್ಟುವುದಕ್ಕೆ ನಾನು ಎಷ್ಟುಮಾತ್ರಕ್ಕೂ ಅನುಮತಿಸಿದವನೂ ಅಲ್ಲ! ಈತನು ಕಾಡಿನಲ್ಲಿರುವುದು ಈಗಲೂ ನನಗೆ ಸಮ್ಮತವಲ್ಲ! ಹಾಗಿದ್ದರೂ ತಂದೆಯ ಆಜ್ಞೆಗಾಗಿ ಕಾಡಿನಲ್ಲಿ ಅವಶ್ಯವಾಗಿದ್ದು ಬರಬೇಕೆಂಬ ನಿರ್ಬಂಧವಿದ್ದ ಪಕ್ಷದಲ್ಲಿ, ಆ ಕಾರ್ಯವನ್ನು ನಾನೇ ನಡೆಸಲು ಸಿದ್ಧನಾಗಿರುವೆನು. ಪಿತೃವಾಕ್ಯಪರಿಪಾಲನಕ್ಕಾಗಿ ನಾನೇ ಹದಿನಾಲ್ಕು ವರ್ಷಗಳವರೆಗೆ ಕಾಡಿನಲ್ಲಿದ್ದು ಬರುವೆನು. ನನಗೆ ಬದಲಾಗಿ ರಾಮನೇ ರಾಜ್ಯವನ್ನು ಪಾಲಿಸುತ್ತಿರಲಿ! ಆಗಲೂ ನಾವಿಬ್ಬರೂ ತಂದೆಯಾಜ್ಞೆಯನ್ನು ಪಾಲಿಸಿದಂತೆಯೇ ಆಗುವುದಿಲ್ಲವೆ?" ಎಂದನು. ಇದನ್ನು ಕೇಳಿ ಧರ್ಮಾತ್ಮನಾದ ರಾಮನು, ತನ್ನ ತಮ್ಮನ ಮನೋದಾರ್ಢ್ಯಕ್ಕೆ ಮೆಚ್ಚಿದವನಾಗಿ, ಮುಂದಿದ್ದ ಪುರವಾಸಿಗಳನ್ನು ನೋಡಿ "ಎಲೈ ಪೂಜ್ಯರೆ! ತಂದೆಯು ಬದುಕಿರುವಾಗ ಯಾವುದನ್ನು ವಿಕ್ರಯಿಸಿಬಿಟ್ಟನೋ, ಯಾವುದನ್ನು ಒತ್ತೆಯಿಟ್ಟನೋ, ಯಾವುದನ್ನು ಕ್ರಯಕ್ಕೆ ತೆಗೆದಿರುವನೋ, ಅವೊಂದನ್ನೂ ಮಾರ್ಪಡಿಸುವುದಕ್ಕೆ ಮಕ್ಕಳಿಗೆ ಎಷ್ಟುಮಾತ್ರವೂ ಸಾಧ್ಯವಿಲ್ಲವೆಂಬುದನ್ನು ನೀವರಿಯಿರಾ! ನಮ್ಮ ತಂದೆಯು ವನವಾಸವೆಂಬ ಅಮೂಲ್ಯದ್ರವ್ಯವೊಂದನ್ನು ನನ್ನಲ್ಲಿ ಒತ್ತೆಯಿಟ್ಟಿರುವನು. ಅದಕ್ಕೆ ಪ್ರತಿಯಾಗಿ ನನ್ನಿಂದ ರಾಜ್ಯವನ್ನು ತೆಗೆದುಕೊಂಡು ಈ ಭರತನ ವಶಕ್ಕೆ ಕೊಟ್ಟಿರುವನು. ಅದನ್ನು ತಪ್ಪಿಸುವುದಕ್ಕೆ ಈಗ ನಮ್ಮಲ್ಲಿ

ಸ್ಪರ್ಶಿಸಿ ಶುದ್ಧನಾಗೆಂದು ರಾಮನು ಹೇಳಬಹುದೆ" ಎಂದರೆ, ಭರತನಿಗೆ ತನ್ನಲ್ಲಿ ಸಂಪೂರ್ಣವಾದ ಪ್ರೀತಿಯಿರುವುದರಿಂದ "ಇನ್ನುಮೇಲೆ ಹೀಗೆ ಮಾಡುವುದಿಲ್ಲ" ವೆಂದು ಪ್ರಮಾಣಮುಟ್ಟಿ ಶಪಥಮಾಡಿಕೊಡೆಂದು ಹೇಳಿದುದಾಗಿಯೂ ಅರ್ಥಾಂತರವು ಗ್ರಾಹ್ಯವು.

ಯಾರಿಗೂ, ಶಕ್ಯವಲ್ಲ! ನಾನೇ ಆ ವನವಾಸವನ್ನು ನಿರ್ವಹಿಸುವುದಕ್ಕೆ ಶಕ್ತನಾಗಿರುವಾಗ, ನನಗೆ ಪ್ರತಿಯಾಗಿ ಆ ಕಾರ್ಯಕ್ಕೆ ಬೇರೊಬ್ಬನನ್ನು ನಿಯಮಿಸುವುದೂ ಯುಕ್ತವಲ್ಲ! ಒಬ್ಬರಲ್ಲಿ ನಂಬಿಕೆಯಿಂದ ಕೊಟ್ಟ ವಸ್ತುವನ್ನು ಅವರು ಮತ್ತೊಬ್ಬರಲ್ಲಿಡುವುದು ಬಹಳ ಹೀನಕಾರ್ಯವು. ಅದರಿಂದ ಲೋಕಾಪವಾದವೂ ಬರುವುದು. ಕೈಲಾಗದವರೇ ಈ ಅಕಾರ್ಯಕ್ಕೆ ಪ್ರಯತ್ನಿಸುವರು. ಕೈಕೇಯಿಯೂ ಯುಕ್ತವಾಗಿಯೇ ಹೇಳಿರುವಳು. ನಮ್ಮ ತಂದೆಯು ನಡೆಸಿದ ಕಾರ್ಯವೂ ಧರ್ಮಯುಕ್ತವಾಗಿಯೇ ಇರುವುದು. ನಾವಿಬ್ಬರೂ ಇದಕ್ಕೆ ಲೋಪವನ್ನು ತಂದು, ನಮಗಿಷ್ಟಬಂದಂತೆ ಹೀನಪಕ್ಷವನ್ನವಲಂಬಿಸಿದರೆ, ನಮ್ಮ ತಂದೆಯನ್ನು ಅಸತ್ಯದಲ್ಲಿ ಬೀಳಿಸಿದಂತಾಗುವುದಲ್ಲವೆ? ಭರತನು ಬಹಳ ತಾಳ್ಮೆಯುಳ್ಳವನೆಂದೂ, ಗುರುಗಳನ್ನು ಪೂಜಿಸಿದವನೆಂದೂ ನಾನು ಚೆನ್ನಾಗಿ ಬಲ್ಲೆನು. ಸತ್ಯಸಂಧನಾಗಿಯೂ, ಮಹಾತ್ಮನಾಗಿಯೂ ಇರುವ ಆ ಭರತನಿಗೆ ಸಮಸ್ತವಿಧದಲ್ಲಿಯೂ ಶ್ರೇಯಸ್ಸುಂಟಾಗುವುದರಲ್ಲಿ ಸಂದೇಹವೇ ಇಲ್ಲ! ಎಲೈ ಮಹನೀಯರೆ! ಇನ್ನು ಹೆಚ್ಚಾಗಿ ಹೇಳಿದುದರಿಂದೇನು? ನನ್ನ ವನವಾಸಕಾಲವು ತೀರಿದೊಡನೆಯೇ ಸ್ವಲ್ಪವೂ ಸಾವಕಾಶಮಾಡದೆ ನಾನು ಕಾಡಿನಿಂದ ಹಿಂತಿರುಗಿಬಂದು, ಧರ್ಮಶೀಲನಾದ ಈ ಭರತನೊಡಗೂಡಿಯೇ ರಾಜ್ಯವನ್ನು ಪಾಲಿಸುವೆನು. ಇದು ನಿಜವು ಎಂದನು. ಆಮೇಲೆ ಭರತನನ್ನು ನೋಡಿ, "ಎಲೈ ವತ್ಸನೆ! ನಿನ್ನ ತಾಯಿಯಾದ ಕೈಕೇಯಿಯು ರಾಜನಿಂದ ವರವನ್ನು ಪಡೆದಿರುವಳು. ತಾಯಿಯಾದ ಅವಳ ಇಷ್ಟಾನುಸಾರವಾಗಿ ಅವಳ ಮಾತನ್ನು ಗೌರವಿಸುವುದಕ್ಕಾಗಿಯೇ ನಾನು ಕಾಡಿಗೆ ಹೊರಟುಬಂದೆನು. ಅದರಂತೆಯೇ ನೀನೂ ಅಣ್ಣನಾದ ನನ್ನ ಮಾತನ್ನು ಗೌರವಿಸತಕ್ಕವನಾಗಿದ್ದರೆ, ನಾನು ಹೇಳುವಂತೆ ಅಯೋಧ್ಯೆಗೆ ಹೋಗಿ ಪಟ್ಟಾಭಿಷಿಕ್ತನಾಗಿ, ನಮ್ಮ ತಂದೆಯ ಸತ್ಯವನ್ನು ಪಾಲಿಸಿ ಆತನನ್ನು ಅಸತ್ಯದಿಂದ ಬಿಡಿಸು" ಎಂದನು.

ಇದು ನೂರಹನ್ನೊಂದನೆಯ ಸರ್ಗವು.

ರಾಮನು ಭರತನನ್ನು ಸಮಾಧಾನಪಡಿಸಿ ಅಯೋಧ್ಯೆಗೆ ಪ್ರಯಾಣಮಾಡಿಸಿದುದು.

ಎಣೆಯಿಲ್ಲದ ತೇಜಸ್ಸಿನಿಂದ ಪ್ರಕಾಶಿಸುತ್ತಿರುವ ಅಣ್ಣತಮ್ಮಂದಿರ ಸಲ್ಲಾಪಗಳನ್ನೂ, ಅವರ ಸಮಾಗಮವನ್ನೂ ನೋಡಿ, ಅಲ್ಲಿದ್ದ ಮಹರ್ಷಿಗಳೆಲ್ಲರೂ ಆಶ್ಚರ್ಯದಿಂದ ರೋಮಾಂಚಿತರಾಗಿದ್ದರು. ಇದಕ್ಕೆ ಮೊದಲೇ ಅಂತರ್ಹಿತರಾಗಿ ಅಲ್ಲಿದ್ದ ರಾಜರ್ಷಿಗಳೂ, ಸಿದ್ಧರೂ, ದೇವರ್ಷಿಗಳೂ, ಕಕುತ್ಸ್ಥ ವಂಶಕ್ಕೆ ತಿಲಕಪ್ರಾಯರಾಗಿಯೂ, ಮಹಾತ್ಮರಾಗಿಯೂ ಇದ್ದ ಆ ಸಹೋದರರನ್ನು ನೋಡಿ, "ಎಲೈ ಮಹಾತ್ಮರೆ! ನಮಗೆ ನಿಮ್ಮಿಬ್ಬರ ಸಂಭಾಷಣವನ್ನೂ ಕೇಳಿದುದರಿಂದುಂಟಾದ ಸಂತೋಷಕ್ಕೆ ಪಾರವೇ ಇಲ್ಲದಿರುವುದು. ನಮ್ಮ ಮನಸ್ಸೆಲ್ಲವೂ ನಿಮ್ಮ ಮೇಲೆ ನಟ್ಟುಹೋಗಿರುವುದು. ಹೀಗೆ ಧರ್ಮಜ್ಞರಾಗಿಯೂ, ಧರ್ಮಾನುಷ್ಠಾನಪರರಾಗಿಯೂ ಇರುವ ನಿಮ್ಮಿಬ್ಬರನ್ನು ಪುತ್ರರನ್ನಾಗಿ ಪಡೆದ ದಶರಥನೇ ಧನ್ಯನು" ಎಂದು ಸ್ತುತಿಸುತ್ತ, ಮುಂದೆ ನಡೆಯಬೇಕಾದ ರಾವಣವಧವನ್ನು ಮನಸ್ಸಿನಲ್ಲಿಟ್ಟುಕೊಂಡು, ಅವರೆಲ್ಲರೂ ಏಕಕಂಠವಾಗಿ, ರಾಜಶ್ರೇಷ್ಠನಾದ ಭರತನನ್ನು ಕುರಿತು, "ಎಲೈ ಭರತನೆ! ನೀನು ಸತ್ಕುಲದಲ್ಲಿ ಹುಟ್ಟಿದವನು. ಮಹಾಪ್ರಾಜ್ಞನು. ಸದಾಚಾರಸಂಪತ್ತುಳ್ಳವನು. ಅಪಾರವಾದ ಕೀರ್ತಿಯುಳ್ಳವನು. ನಿನ್ನ ತಂದೆಗೆ ನೀನು ಶ್ರೇಯಸ್ಸನ್ನು ಕೋರುವುದಾದರೆ ರಾಮನು ಹೇಳಿದಂತೆ ನಡೆಸಬೇಕಾದುದೇ ನಿನಗೆ ಅವಶ್ಯವು. ಹಾಗೆಯೇ ರಾಮನೂ ತಂದೆಯ ಋಣವನ್ನು ತೀರಿಸಿ ಕೃತಾರ್ಥನಾಗಬೇಕೆಂಬುದೇ ನಮ್ಮ ಕೋರಿಕೆ. ದಶರಥನು ಕೈಕೇಯಿಯ ಋಣವನ್ನು ತೀರಿಸಿದುದರಿಂದ ಸ್ವರ್ಗಲೋಕವನ್ನು ಪಡೆದಿರುವನು. ಆತನು ಕೈಕೇಯಿಗೆ ತೀರಿಸಿದ ಸಾಲವನ್ನು ನೀವು ತಪ್ಪಿಸಿಬಿಟ್ಟರೆ ಆತನು ಸ್ವರ್ಗಭ್ರಷ್ಟನಾಗುವನು" ಎಂದರು. ಹೀಗೆ ಸಿದ್ಧ ಗಂಧರ್ವ ಮಹರ್ಷಿಗಳೆಲ್ಲರೂ ಭರತನಿಗೆ ಬುದ್ಧಿವಾದವನ್ನು ಹೇಳಿ ತಮ್ಮ ತಮ್ಮ ಸ್ಥಾನಗಳಿಗೆ ಹೊರಟರು. ರಾಮನು ಇವರ ಮಾತನ್ನು ಕೇಳಿ ಬಹಳ ಸಂತೋಷಪಟ್ಟು ಅವರೆಲ್ಲರನ್ನೂ ತಕ್ಕ ರೀತಿಯಿಂದ ಪೂಜಿಸಿ ಸತ್ಕರಿಸಿದನು. ಆಗ ಭರತನಾದರೋ ದುಃಖದಿಂದಲೂ, ಭಯದಿಂದಲೂ ನಡುಗುತ್ತಿರುವ ಮೈಯುಳ್ಳವನಾಗಿ, ರಾಮನ ಮುಂದೆ ಕೈಮುಗಿದು ನಿಂತು,

ತೊದಲು ಮಾತುಗಳಿಂದ, "ಅಣ್ಣಾ ! ಯಾರೇನು ಹೇಳಿದರೂ ಹೇಳಲಿ! ರಾಜ ವಂಶದಲ್ಲಿ ಹುಟ್ಟಿದವನಿಗೆ ರಾಜ್ಯಪರಿಪಾಲನವೇ ಮುಖ್ಯ ಧರ್ಮವು. ಅದರ ಮೇಲೆ ಜ್ಯೇಷ್ಠನಿಗೆ ಪಟ್ಟಾಭಿಷೇಕವನ್ನು ನಡೆಸುವುದೇ ಹಿಂದಿನಿಂದ ಅನುಸರಿಸಿ ಬಂದ ನಮ್ಮ ಕುಲಧರ್ಮವು. ಇವೆರಡನ್ನೂ ನೀನು ಚೆನ್ನಾಗಿ ಪರ್ಯಾಲೋಚಿಸು! ನನ್ನ ತಾಯಿಯು ತನ್ನ ಮೊದಲಿನ ದುರ್ಬುದ್ಧಿಯನ್ನು ಬಿಟ್ಟು ಈಗ ನಿನ್ನ ಮುಂದೆ ಪ್ರಾರ್ಥಿಸುತ್ತಿರುವುದನ್ನು ಗಮನಿಸು! ಅದಕ್ಕನುಸಾರವಾಗಿ ನಡೆಯುವುದೇ ನಿನಗುಚಿತವು. ಇದೂ ಅಲ್ಲದೆ ಮಹತ್ತಾದ ಈ ರಾಜ್ಯವನ್ನು ರಕ್ಷಿಸುವುದಕ್ಕೂ ನಾನು ಸಮರ್ಥನಲ್ಲ! ನಮ್ಮಲ್ಲಿ ಅನುರಕ್ತರಾದ ಈ ಪ್ರಜೆಗಳ ಮನಸ್ಸನ್ನು ಸಂತೋಷಪಡಿಸುವ ಮಾರ್ಗವೂ ನನಗೆ ತಿಳಿಯದು! ನಾನು ಏಕಾಕಿಯಾಗಿ ಯಾವ ಕೆಲಸವನ್ನೂ ಮಾಡಲಾರೆನು! ನಮ್ಮ ಬಂಧುಗಳೂ, ನಮ್ಮ ಮಿತ್ರರೂ, ನಮ್ಮ ಶ್ರೇಯಃಕಾಂಕ್ಷಿಗಳೂ, ಮೇಘವನ್ನು ಇದಿರು ನೋಡುತ್ತಿರುವ ಕೃಷಿಜೀವಿಗಳಂತೆ, ನಿನ್ನನ್ನೇ ಅತ್ಯಾತುರದಿಂದ ಇದಿರುನೋಡು ತ್ತಿರುವರು. ನೀನು ರಾಜಪದವಿಗೆ ಬರುವುದನ್ನೇ ನಿರೀಕ್ಷಿಸುತ್ತಿರುವರು. ನಿನಗೆ ತಿಳಿಯದುದೊಂದೂ ಇಲ್ಲವು. ನೀನೇ ಈ ರಾಜ್ಯವನ್ನಂಗೀಕರಿಸಿ ಸ್ಥಿರವಾಗಿ ಪಾಲಿಸು. ನೀನು ಈ ನಮ್ಮ ಕೋಸಲರಾಜ್ಯವೊಂದನ್ನೇ ಅಲ್ಲದೆ ಈ ಮೂರು ಲೋಕವನ್ನಾಳುವುದಕ್ಕೂ ಶಕ್ತಿಯುಳ್ಳವನು" ಎಂದು ಹೇಳುತ್ತ, ಆ ರಾಮನನ್ನು ಹಿಂತಿರುಗಿಸುವುದಕ್ಕೆ ಬೇರೊಂದುಪಾಯವನ್ನೂ ಕಾಣದೆ, ಆ ರಾಮನ ಎರಡು ಕಾಲುಗಳನ್ನೂ ಹಿಡಿದು ಸಾಷ್ಟಾಂಗಪ್ರಣಾಮವನ್ನು ಮಾಡಿ ಅನೇಕ ವಿಧದಲ್ಲಿ ಪ್ರಾರ್ಥಿಸಿದನು. ಆಗ ಶ್ಯಾಮವರ್ಣನಾಗಿಯೂ, ಕಮಲದಳದಂತೆ ಕಣ್ಣುಳ್ಳವನಾಗಿಯೂ, ಮದಿಸಿದ ಹಂಸದಂತೆ ಇಂಪಾದ ಸ್ವರವುಳ್ಳವನಾಗಿಯೂ ಇರುವ ತಮ್ಮನಾದ ಆ ಭರತನನ್ನು ರಾಮನು ಮೇಲಕ್ಕೆತ್ತಿ ಕರೆದು ತೊಡೆಯಮೇಲೆ ಕುಳ್ಳಿರಿಸಿಕೊಂಡು "ಎಲೈ ವತ್ಸನೆ! ನಿನಗೆ ಸಹಜವಾದ ಬುದ್ಧಿಯೂ, ಗುರು ಶಿಕ್ಷೆಯಿಂದ ಬಂದ ಬುದ್ಧಿಯೂ ಮೊದಲೇ ಸಿದ್ಧಿಸಿರುವುವು. ಆದುದರಿಂದ ಈ ಭೂಮಂಡಲವೆಲ್ಲವನ್ನೂ ಪಾಲಿಸುವುದಕ್ಕೂ ನೀನು ಶಕ್ತನಾಗಿರುವೆ! ಪ್ರಧಾನ ಮಂತ್ರಿಗಳೊಡನೆಯೂ, ಮಿತ್ರರೊಡನೆಯೂ, ಬುದ್ಧಿವಂತರಾದ ಅಧಿಕಾರಿಗಳೊಡನೆಯೂ ಕೂಡಿ ಸಮಸ್ತಕಾರ್ಯಗಳನ್ನೂ ಚೆನ್ನಾಗಿ ಆಲೋಚಿಸಿ, ನಡೆಸಬೇಕಾದ ಉತ್ತಮಕಾರ್ಯಗಳನ್ನು ನಡೆಸು! ಮುಖ್ಯವಾಗಿ ಒಂದು

ವಿಷಯವನ್ನು ಹೇಳುವೆನು ಕೇಳು. ಒಂದುವೇಳೆ ಚಂದ್ರಕಾಂತಿಯು ಚಂದ್ರನನ್ನು ಬಿಟ್ಟು ಹೋದರೂ ಹೋಗಬಹುದು. ಹಿಮವತ್ಪರ್ವತವು ಹಿಮವನ್ನು ಬಿಟ್ಟರೂ ಬಿಡಬಹುದು. ಸಮುದ್ರವು ತನ್ನ ಮೇರೆಯನ್ನು ಮಾರಿದರೂ ಮಾರಬಹುದು. ನಾನು ಮಾತ್ರ ತಂದೆಗೆ ಮಾಡಿಕೊಟ್ಟ ಪ್ರತಿಜ್ಞೆಯನ್ನು ಎಂದಿಗೂ ಮಾರ ಲಾರೆನು. ಕಾಮದಿಂದಲೋ, ಲೋಭದಿಂದಲೋ, ನಿನ್ನ ತಾಯಿಯು ನಿನಗಾಗಿ ಈ ಕಾರ್ಯವನ್ನು ಮಾಡಿರಬಹುದೆಂದು ಹೇಳಿದೆಯಲ್ಲ? ಅದನ್ನು ನೀನು ಮನಸ್ಸಿನಲ್ಲಿರಿಸಬೇಡ! ಆಕೆಯಲ್ಲಿ ನೀನು ಮಾತೃಭಕ್ತಿಯನ್ನು ಬಿಡಬಾರದು” ಎಂದನು! ಸೂರ್ಯನಂತೆ ಮಹಾತೇಜಸ್ವಿಯಾಗಿಯೂ, ಪಾಡ್ಯದ ಚಂದ್ರನಂತೆ ದಿನದಿನಕ್ಕೆ ವೃದ್ಧಿಹೊಂದತಕ್ಕವನಾಗಿಯೂ ಇರುವ ರಾಮನು, ಹೀಗೆ ತನಗೆ ಬುದ್ಧಿವಾದಗಳನ್ನು ಹೇಳುತಿರುವುದನ್ನು ಕೇಳಿ ಭರತನು, “ಅಣ್ಣಾ! ನಾನಿನ್ನೇನು ಹೇಳಲಿ! [1] ಇದೋ! ಇಲ್ಲಿ ಸುವರ್ಣಮಯವಾದ ನಿನ್ನ ಪಾದುಕೆ ಗಳೆರಡೂ ಇರುವುವಲ್ಲವೆ? ಇವುಗಳಲ್ಲಿ ನಿನ್ನ ಎರಡು ಪಾದಗಳನ್ನೂ ಇಡು! ಈ ಪಾದುಕೆಗಳೇ ಸಮಸ್ತ ಲೋಕದ ಯೋಗಕ್ಷೇಮವನ್ನೂ ನಡೆಸಬಲ್ಲುವು” ಎಂದನು. ಆಗ ರಾಮನು ಆ ಪಾದುಕೆಗಳಮೇಲೆ ತನ್ನ ಪಾದಗಳೆರಡನ್ನೂ ಇಟ್ಟು, ಅದರಿಂದ ಒಡನೆಯೇ ಕೆಳಗಿಳಿದು ಅವೆರಡನ್ನೂ ಭರತನಿಗೆ ತೆಗೆದು ಕೊಟ್ಟನು. ಭರತನು ಅವುಗಳಿಗೆ ಸಾಷ್ಟಾಂಗಪ್ರಣಾಮವನ್ನು ಮಾಡಿ, ಎದ್ದುನಿಂತು, ರಾಮನಿಗೆ ಕೈಮುಗಿಯುತ್ತ “ಅಣ್ಣಾ! ನಿನ್ನ ವನವಾಸಕಾಲದ ಅವಧಿಯು ಹದಿನಾಲ್ಕುವರ್ಷಗಳಲ್ಲವೆ? ಅದುವರೆಗೂ ನಾನು ಜಡೆಯನ್ನು ಧರಿಸಿ ನಾರುಮಡಿಯನ್ನುಟ್ಟು ಫಲಮೂಲಗಳನ್ನೇ ತಿನ್ನುತ್ತ, ಸಮಸ್ತರಾಜ್ಯ ಭಾರಗಳನ್ನೂ ಈ ನಿನ್ನ ಪಾದುಕೆಗಳಿಗೊಪ್ಪಿಸಿ, ನಮ್ಮ ಅಯೋಧ್ಯೆಗೆ ಹೊರ ಗಾಗಿಯೇ ಇದ್ದು ನಿನ್ನ ಆಗಮನವನ್ನೇ ಇದಿರುನೋಡುತ್ತಿರುವೆನು. ಆದರೆ ಒಂದು ವಿಷಯವನ್ನು ಮಾತ್ರ ನಿನ್ನಲ್ಲಿ ವಿಜ್ಞಾಪಿಸುವೆನು. ಹದಿನಾಲ್ಕು

---

[1] ಭರತನು ಹಿಂತಿರುಗಿ ಹೋಗುವಾಗ, ಭರದ್ವಾಜನೊಡನೆ ಚಿತ್ರಕೂಟದಲ್ಲಿ ನಡೆದ ಸಂಗತಿಯನ್ನು ಹೇಳುತ್ತ, “ವಸಿಷ್ಠನು ರಾಮನನ್ನು ಕುರಿತು ಆತನ ಪಾದುಕೆಗಳನ್ನು ನನಗೆ ಕೊಡುವಂತಾಗಿ ಹೇಳಿದನು” ಎಂದು ಸೂಚಿಸಿರುವುದರಿಂದ ಇಲ್ಲಿ ವಸಿಷ್ಠನು ರಾಮನಿಗೆ ಪಾದುಕೆಗಳನ್ನು ಕೊಡೆಂದು ನಿಯಮಿಸಿದಮೇಲೆಯೇ ಭರತನು ಹಾಗೆ ಪ್ರಾರ್ಥಿಸಿದುದಾಗಿ ತಿಳಿಯಬರುವುದು.

ವರ್ಷಗಳು ಕಳೆದ ಮಾರನೆಯ ದಿನದ ಪ್ರಾತಃಕಾಲದಲ್ಲಿ ಪುನಃ ನಿನ್ನನ್ನು ನಾನು ನೋಡದಿದ್ದ ಪಕ್ಷದಲ್ಲಿ, ನಾನು ಆ ಕ್ಷಣವೇ ಅಗ್ನಿಪ್ರವೇಶವನ್ನು ಮಾಡಿಬಿಡುವೆನು. ಇದು ನಿಜವು" ಎಂದನು. ರಾಮನು ಅದಕ್ಕೊಪ್ಪಿ, ಸಂತೋಷದಿಂದ ಭರತನನ್ನೂ ಶತ್ರುಘ್ನನನ್ನೂ ಆಲಿಂಗಿಸಿಕೊಂಡು, ಪುನಃ ಭರತನನ್ನು ನೋಡಿ "ಎಲೈ ವತ್ಸನೆ! ನಿನ್ನ ತಾಯಿಯಾದ ಕೈಕೇಯಿಯನ್ನು ಮಾತ್ರ ನೀನು ಗೌರವಿಸಿ ಕಾಪಾಡುತ್ತಿರಬೇಕು. ಅವಳ ವಿಷಯದಲ್ಲಿ ನಿನಗಿರುವ ಕೋಪವನ್ನು ಬಿಟ್ಟುಬಿಡು! ಇದೋ! ನನ್ನ ಮೇಲೆಯೂ, ಈ ಸೀತೆಯ ಮೇಲೆಯೂ ಆಣೆಯಿಟ್ಟು ಹೇಳುವೆನು" ಎಂದು ಹೇಳಿ ಕಣ್ಣಿನಲ್ಲಿ ಧಾರೆ ಧಾರೆಯಾಗಿ ನೀರನ್ನು ಸುರಿಸುತ್ತ ಆ ಭರತನನ್ನು ಕಳುಹಿಸಿಕೊಟ್ಟನು. ಆಮೇಲೆ ಪರಾಕ್ರಮಿಯಾಗಿಯೂ ಧರ್ಮಜ್ಞನಾಗಿಯೂ ಇರುವ ಭರತನು, ಆ ರಾಮ ಪಾದುಕೆಗಳನ್ನು ಪುಷ್ಪಾದಿಗಳಿಂದಲಂಕರಿಸಿ, ಅವುಗಳನ್ನು ಪೂಜಿಸಿ, ರಾಮನಿಗೆ ಪ್ರದಕ್ಷಿಣವನ್ನು ಮಾಡಿ, ಆ ಪಾದುಕೆಗಳೆರಡನ್ನೂ ಶತ್ರುಂಜಯವೆಂಬ ತನ್ನ ಪಟ್ಟದಾನೆಯ ತಲೆಯಮೇಲೇರಿಸಿದನು. ಇತ್ತಲಾಗಿ ಹಿಮವತ್ಪರ್ವತದಂತೆ ಸ್ವಧರ್ಮದಲ್ಲಿ ಸ್ಥಿರವಾಗಿ ನೆಲಸಿದ ರಘುವಂಶವರ್ಧಕನಾದ ರಾಮನು, ಅಲ್ಲಿಗೆ ಬಂದಿದ್ದ ಮಂತ್ರಿಪುರೋಹಿತಾದಿಗಳೆಲ್ಲರನ್ನೂ ಯಥೋಚಿತವಾಗಿ ಮನ್ನಿಸಿ, ಪುರವಾಸಿಗಳಿಗೂ ಸಮಾಧಾನವನ್ನು ಹೇಳಿ, ಅವರೆಲ್ಲರನ್ನೂ ಕಳುಹಿಸಿಕೊಟ್ಟನು. ಹಾಗೆಯೇ ಕೌಸಲ್ಯೆಯೇ ಮೊದಲಾದ ಮಾತೃವರ್ಗವೆಲ್ಲವೂ ರಾಮನನ್ನು ಬಿಟ್ಟು ಹೋಗಲಾರದ ದುಃಖದಿಂದ ಕಣ್ಣೀರುಬಿಡುತ್ತಿರಲು, ರಾಮನು ಅವರೊಬ್ಬೊಬ್ಬರುಗಳಿಗೂ ಬಂದು ನಮಸ್ಕರಿಸಿ, ಸಮಾಧಾನಮಾಡಿ ಕಳುಹಿಸಿ, ತಾನೂ ದುಃಖದಿಂದ ಗಟ್ಟಿಯಾಗಿ ಪ್ರಲಾಪಿಸುತ್ತ ತನ್ನ ಪರ್ಣಶಾಲೆಯನ್ನು ಪ್ರವೇಶಿಸಿದನು.

ಇದು ನೂರಹನ್ನೆರಡನೆಯ ಸರ್ಗವು.

ಭರತನು ಅಯೋಧ್ಯೆಗೆ ಹೊರಟುದು.

ಆಗ ಭರತನು ಪಟ್ಟದಾನೆಯಮೇಲೆ ಇರಿಸಿದ್ದ ರಾಮಪಾದುಕೆಯನ್ನು ತೆಗೆದು ತನ್ನ ತಲೆಯಮೇಲಿಟ್ಟುಕೊಂಡು, ಪರಮಸಂತೋಷದಿಂದ ಶತ್ರುಘ್ನ ನೊಡಗೂಡಿ ರಥವನ್ನೇರಿದನು. ವಸಿಷ್ಠನೂ ವಾಮದೇವನೂ, ವ್ರತನಿಷ್ಠನಾದ ಜಾಬಾಲಿಯೂ, ಮಂತ್ರಜ್ಞರಾದ ಮಂತ್ರಿಗಳೂ ಮುಂದೆ ಹೊರಟರು. ಇವರೆಲ್ಲರೂ ಹೊರಟುಬರುವಾಗ, ರಾಮನಿಗೆ ನಿವಾಸಸ್ಥಾನವಾದ ಆ ಚಿತ್ರಕೂಟ ಪರ್ವತವನ್ನು ಪ್ರದಕ್ಷಿಣಮಾಡಿ, ಅದರ ಪೂರ್ವದಿಕ್ಕಿನ ಮಾರ್ಗವಾಗಿ ಸೀತಾ ರಾಮರ ಜಲಕ್ರೀಡೆಗಳಿಂದ ರಮಣೀಯವಾದ ಮಂದಾಕಿನೀ ನದಿಗೆ ಬಂದರು. ಹೀಗೆ ಭರತನು ಸೇನೆಯೊಡಗೂಡಿ ಆ ಪರ್ವತದ ಚಿತ್ರವಿಚಿತ್ರಗಳಾದ ಧಾತು ವಿಶೇಷಗಳನ್ನು ನೋಡುತ್ತ, ಅದರ ಪಕ್ಕದ ದಾರಿಯನ್ನು ಹಿಡಿದು ಬರುತಿದ್ದನು. ದಾರಿಯಲ್ಲಿ ಆ ಚಿತ್ರಕೂಟಪರ್ವತಕ್ಕೆ [1] ಸಮೀಪವಾಗಿ ಭರದ್ವಾಜ ಮಹರ್ಷಿಯು ಆಗಾಗ ತನ್ನ ನಿವಾಸಕ್ಕಾಗಿ ಏರ್ಪಡಿಸಿಕೊಂಡಿದ್ದ ಒಂದು ಆಶ್ರಮ ಪ್ರದೇಶವನ್ನು ಕಂಡನು. ಆಗ ಇವನು ಆ ಆಶ್ರಮದೊಳಗೆ ಪ್ರವೇಶಿಸಿ, ರಥದಿಂದಿಳಿದು, ಅಲ್ಲಿದ್ದ ಮಹರ್ಷಿಯ ಪಾದಕ್ಕೆ ನಮಸ್ಕರಿಸಿದನು. ಹೀಗೆ ನಮಸ್ಕರಿಸುತ್ತಿರುವ ಭರತನನ್ನು ನೋಡಿ ಭರದ್ವಾಜನು ಆತನ ಪ್ರತ್ಯಾಗಮನಕ್ಕಾಗಿ ಬಹಳ ಸಂತೋಷಪಟ್ಟು "ವತ್ಸ ಭರತಾ! ರಾಮನನ್ನು ಕಂಡಿದ್ದೆಯಾ? ನೀನು ಹೋದ ಕೆಲಸವೇನಾಯಿತು?" ಎಂದು ಕೇಳಿದನು. ಅದಕ್ಕಾ ಭರತನು "ಎಲೈ

---

[1] ಭರದ್ವಾಜಾಶ್ರಮವು ಚಿತ್ರಕೂಟಕ್ಕೆ ದೂರದಲ್ಲಿರುವಹಾಗೆ ಹಿಂದೆ ಕಾಣಿಸಿದೆ. ಇಲ್ಲಿ ಸಮೀಪವೆಂದು ಹೇಳುವುದಕ್ಕೆ ಕಾರಣವೇನೆಂದರೆ, ಭರದ್ವಾಜಾಶ್ರಮವನ್ನು ಬಿಟ್ಟಮೇಲೆ, ಯಮುನಾನದಿಯನ್ನು ದಾಟಿದುದಾಗಿ ಈ ಸರ್ಗದಲ್ಲಿಯೇ ಹೇಳಲ್ಪಡುವುದರಿಂದ, ಯಮುನಾ ತೀರದಲ್ಲಿಯೂ ಭರದ್ವಾಜನಿಗೆ ಬೇರೊಂದಾಶ್ರಮವಿತ್ತೆಂದು ಸೂಚಿತವಾಗುವುದು. ಈ ಆಶ್ರಮವು ಚಿತ್ರಕೂಟಕ್ಕೆ ಸಮೀಪವಾಗಿರುವುದು, ಭರದ್ವಾಜನು ಚಿತ್ರಕೂಟ ವೃತ್ತಾಂತವನ್ನು ಶಿಷ್ಯರ ಮೂಲಕವಾಗಿ ತಿಳಿದುಕೊಳ್ಳಬೇಕೆಂಬ ಆತುರದಿಂದ, ಈ ಆಶ್ರಮಕ್ಕೆ ಬಂದು ನಿರೀಕ್ಷಿಸುತ್ತಿದ್ದನೆಂದು ಮಹೇಶ್ವರತೀರ್ಥ ವ್ಯಾಖ್ಯಾನವು. ಚಿತ್ರಕೂಟದಿಂದ ಬರುವ ದಾರಿಯ ರಾಮಣೀಯಕವನ್ನು ನೋಡುತ್ತಾ ವಿನೋದದಿಂದ ಬರುತ್ತಿದ್ದ ಭರತನಿಗೆ, ಬಹು ದೂರದಲ್ಲಿದ್ದ ಭರದ್ವಾಜಾಶ್ರಮವು ಸಮೀಪದಲ್ಲಿದ್ದಂತೆಯೇ ಕಂಡುಬಂದಿತೇ ಹೊರತು ನಿಜವಾಗಿಯೂ ಭರದ್ವಾಜಾಶ್ರಮವು ಚಿತ್ರಕೂಟಕ್ಕೆ ಸಮೀಪದಲ್ಲಿರಲಿಲ್ಲವೆಂದು ಗೋವಿಂದರಾಜ ವ್ಯಾಖ್ಯಾನವು.

ಪೂಜ್ಯನೆ! ರಾಮನು ದೃಢಸಂಕಲ್ಪವುಳ್ಳವನಲ್ಲವೇ? ರಾಜ್ಯವನ್ನು ಕೈಕೊಳ್ಳ ಬೇಕೆಂದು ನಾನೂ, ಗುರುವಾದ ವಸಿಷ್ಠನೂ ಅನೇಕ ವಿಧದಲ್ಲಿ ಆತನನ್ನು ಪ್ರಾರ್ಥಿಸಿದೆವು. ಎಷ್ಟು ಪ್ರಾರ್ಥಿಸಿದರೇನು? ಆತನು ನಮ್ಮೆಲ್ಲರ ಆಗಮನ ವನ್ನು ನೋಡಿ ಅದಕ್ಕೆ ಮಾತ್ರ ತಾನು ಸಂತೋಷಿಸಿದನೇ ಹೊರತು, ನಮ್ಮ ಕೋರಿಕೆಯನ್ನು ಮಾತ್ರ ನಡೆಸಲಿಲ್ಲ. ನಾವೆಲ್ಲರೂ ಅವನನ್ನು ನಿರ್ಬಂಧಿಸಿ ಪ್ರಾರ್ಥಿಸುತ್ತಿದ್ದಾಗ, ಅವನು ನಮ್ಮ ಕುಲಗುರುವಾದ ವಸಿಷ್ಠನನ್ನು ನೋಡಿ "ಎಲೈ ಪೂಜ್ಯನೆ! ನಾನು ತಂದೆಗೆ ಮಾಡಿಕೊಟ್ಟ ಪ್ರತಿಜ್ಞೆಯೊಂದನ್ನೇ ಪಾಲಿಸುವೆನು. ಕೈಕೇಯಿಗಾಗಿ ನನ್ನ ತಂದೆಯು ನನ್ನನ್ನು ಹದಿನಾಲ್ಕು ವರ್ಷಗಳವರೆಗೆ ಕಾಡಿಗೆ ಕಳುಹಿಸುವುದಾಗಿ ಮಾತುಕೊಟ್ಟಿರುವನು. ಹಾಗೆಯೇ ನಾನೂ ಅವರಿಬ್ಬರಿಗೂ ಮಾತು ಕೊಟ್ಟು ಬಂದಿರುವೆನು. ಈಗ ನಾನು ಆ ಪ್ರತಿಜ್ಞೆಯನ್ನು ಪಾಲಿಸಬೇಕಾದುದೇ ಆವಶ್ಯಕಾರ್ಯವು!" ಎಂದನು. ಅದಕ್ಕಾಗಿ ವಸಿಷ್ಠನು ರಾಮನನ್ನು ಕುರಿತು ಯುಕ್ತಿಯುಕ್ತವಾದ ಮಾತುಗಳಿಂದ "ಎಲೈ ರಾಮನೆ! ನೀನು ಎಲ್ಲವನ್ನೂ ಬಲ್ಲವನಾದುದರಿಂದ ನಾನು ನಿನಗೆ ಹೇಳಿ ತಿಳಿಸ ಬೇಕಾದುದೊಂದೂ ಇಲ್ಲವು. ನಿನ್ನ ಸುವರ್ಣಮಯವಾದ ಪಾದುಕೆಗಳೆರಡನ್ನೂ ಈತನಿಗೆ ಕೊಡು. ಈ ಪಾದುಕೆಗಳೇ ಅಯೋಧ್ಯೆಯ ಯೋಗಕ್ಷೇಮಗಳನ್ನು ನಿರ್ವಹಿಸಬಲ್ಲುವು" ಎಂದನು. ವಸಿಷ್ಠನ ಈ ಮಾತನ್ನು ಕೇಳಿ ರಾಮನು ಪೂರ್ವಾಭಿಮುಖವಾಗಿ ನಿಂತು, ಈ ತನ್ನ ಪಾದುಕೆಗಳ ಮೇಲೆ ಕಾಲನ್ನಿಟ್ಟು ಅವುಗಳನ್ನು ನನ್ನ ವಶಕ್ಕೆ ಕೊಟ್ಟನು. ಆಮೇಲೆ ನಾನು ಮಹಾತ್ಮನಾದ ಆ ರಾಮನ ಅನುಜ್ಞೆಯನ್ನು ಪಡೆದು, ರಾಜ್ಯ ರಕ್ಷಣಾರ್ಥವಾಗಿ ಅವನು ನನ್ನ ವಶಕ್ಕೆ ಕೊಟ್ಟ ಪಾದುಕೆಗಳನ್ನು ತೆಗೆದುಕೊಂಡು ಹಿಂತಿರುಗಿ ಬಂದೆನು. ಈಗ ಇಲ್ಲಿಂದ ಅಯೋಧ್ಯೆಗೆ ಹೋಗುವೆನು" ಎಂದನು. ಮಹಾತ್ಮನಾದ ಭರತನು ಹೇಳಿದ ಈ ಶುಭ ವಾಕ್ಯವನ್ನು ಕೇಳಿ ಭರದ್ವಾಜನು ಅನುನಯದಿಂದ ಆ ಭರತನನ್ನು ನೋಡಿ "ವತ್ಸ ಭರತನೆ! ಉತ್ತಮವಾದ ಆಚಾರವೂ, ಮೇಲಾದ ನಡತೆಯೂ ಉಳ್ಳವರಲ್ಲಿ ಮೇಲೆನಿಸಿಕೊಂಡಿರುವ ನಿನಗೆ ಇದೇನೂ ಆಶ್ಚರ್ಯವಲ್ಲ. ಹಳ್ಳದಲ್ಲಿಯೇ ನೀರು ನಿಲ್ಲುವುದು ಸ್ವಾಭಾವಿಕವಾಗಿರುವಂತೆ, ಜ್ಯೇಷ್ಠಾನು ವರ್ತನವೆಂಬ ವ್ರತವು ನಿನ್ನಲ್ಲಿರುವುದೇನೂ ಅತಿಶಯವಲ್ಲ. ದಶರಥನಿಗೆ, ಧರ್ಮಜ್ಞನಾಗಿಯೂ, ಧರ್ಮಪರಾಯಣನಾಗಿಯೂ ಇರುವ ನಿನ್ನಂತಹ

ಸತ್ಪುತ್ರನಿರುವುದರಿಂದ ಆತನು ಮೃತನಾಗಿದ್ದರೂ ಬದುಕಿರುವಂತೆಯೇ ಎಣಿಸು ವೆನು" ಎಂದನು. ಮಹಾತ್ಮನಾದ ಭರದ್ವಾಜನು ಹೇಳಿದ ಮಾತನ್ನು ಕೇಳಿ ಭರತನು ವಿನಯದಿಂದ ಆ ಮಹರ್ಷಿಗೆ ಕೈಮುಗಿದು, ಅವನ ಪಾದಗಳನ್ನು ಹಿಡಿದು ನಮಸ್ಕರಿಸಿ, ಮುಂದಿನ ಪ್ರಯಾಣಕ್ಕೆ ಅವನ ಅನುಮತಿಯನ್ನು ನಿರೀಕ್ಷಿಸುತಿದ್ದು ಅವನು ಅನುಜ್ಞೆಯನ್ನು ಕೊಟ್ಟಮೇಲೆ ಬಾರಿಬಾರಿಗೂ ಅವನನ್ನು ಪ್ರದಕ್ಷಿಣೆಮಾಡಿ ಅಯೋಧ್ಯೆಯ ಕಡೆಗೆ ಹೊರಟನು. ಆ ಭರತನ ಸೈನಿಕರು ಆನೆ ಕುದುರೆಗಳನ್ನೂ ಬಂಡಿಗಳನ್ನೂ ಇತರ ವಾಹನಗಳನ್ನೂ ಏರಿ ಭರತನನ್ನು ಹಿಂಬಾಲಿಸಿ ಹೊರಟರು. ಹೀಗೆಯೇ ಪ್ರಯಾಣಮಾಡಿ ಬಂದು, ದಾರಿಯಲ್ಲಿದ್ದ ದಿವ್ಯನದಿಯಾದ ಯಮುನೆಯನ್ನು ದಾಟಿ, ಮುಂದೆ ಪವಿತ್ರವಾದ ನೀರುಳ್ಳ ಗಂಗಾನದಿಯನ್ನು ಕಂಡರು. ನಿರ್ಮಲವಾದ ನೀರಿನಿಂದ ತುಂಬಿದ ಅಂದವಾದ ಆ ಗಂಗಾನದಿಯನ್ನು ಭರತನು ಸಪರಿವಾರನಾಗಿ ದಾಟಿ, ಆ ಸೈನಿಕರೊಡನೆಯೇ ಶೃಂಗಿಬೇರಪುರವನ್ನು ಮುಟ್ಟಿದನು. ಆಗಲೇ ಅಲ್ಲಿಂದ ಹೊರಟು ಮುಂದೆ ಅಯೋಧ್ಯಾನಗರಿಯನ್ನು ಕಂಡನು. ತನ್ನ ತಂದೆಯಿಂದಲೂ, ಅಣ್ಣನಿಂದಲೂ ವಿರಹಿತವಾದ ಆ ಪಟ್ಟಣವನ್ನು ನೋಡಿದೊಡನೆಯೇ ಭರತನಿಗೆ ಮಿತಿಮೀರಿದ ದುಃಖವುಂಟಾಯಿತು. ಆಗ ಸಾರಥಿಯನ್ನು ನೋಡಿ "ಎಲೈ ಸುಮಂತ್ರನೆ! ನಮ್ಮ ಅಯೋಧ್ಯಾನಗರಿಯು ಕಾಣುತ್ತಿರುವುದು ನೋಡು! ರಾಮವಿಯೋಗ ದಿಂದ ಇದರ ಕಳೆಯೇ ಕೆಟ್ಟುಹೋಗಿ ಹಾಳು ಬಿದ್ದಂತೆ ತೋರುತ್ತಿರುವುದು. ಇದರ ರೂಪವೇ ಬದಲಿ ಹೋಗಿರುವುದು. ಇದರಲ್ಲಿ ಸ್ವಲ್ಪವಾದರೂ ಉಲ್ಲಾಸ ವಿರುವಂತೆ ಕಾಣಲಿಲ್ಲ. ಬಹುದೀನಸ್ಥಿತಿಯನ್ನು ಹೊಂದಿರುವುದು. ಇದರ ಸ್ವರವೂ ಅಡಗಿಹೋದಂತೆ ಕಾಣುವುದು. ನಮ್ಮ ಅಯೋಧ್ಯಾನಗರಿಗೆ ಎಂತಹ ದುಃಸ್ಥಿತಿಯು ಬಂದೊದಗಿರುವುದು ನೋಡಿದೆಯಾ?" ಎಂದನು.

ಇದು ನೂರಹದಿಮೂರನೆಯ ಸರ್ಗವು.

*

※ ಅಯೋಧ್ಯೆಯ ದುಃಸ್ಥಿತಿಯನ್ನು ನೋಡಿ ಭರತನು ದುಃಖಿಸಿದುದು. ※

ಯಶಸ್ವಿಯಾಗಿಯೂ, ಧೀರನಾಗಿಯೂ ಇರುವ ಭರತನು ಗಂಭೀರವಾದ ರಥಚಕ್ರಧ್ವನಿಯೊಡನೆ ಮುಂದೆ ಮುಂದೆ ಬರುತ್ತ, ಶೀಘ್ರದಲ್ಲಿಯೇ ಅಯೋಧ್ಯಾ ಪುರಿಯನ್ನು ಮುಟ್ಟಿ, ಆ ಪಟ್ಟಣ ಪ್ರವೇಶವನ್ನು ಮಾಡುವಾಗ, ಅಲ್ಲಲ್ಲಿ ಬೆಕ್ಕು ಗಳೂ, ಗೂಗೆಗಳೂ ನಿರಾತಂಕವಾಗಿ ಸಂಚರಿಸುತಿದ್ದುದನ್ನು ಕಂಡನು ! ಮನುಷ್ಯ ಸಂಚಾರವೇ ಇರಲಿಲ್ಲ. ಆನೆಕುದುರೆಗಳೊಂದಾದರೂ ಕಣ್ಣಿಗೆ ಬೀಳಲಿಲ್ಲ. ಕೇವಲ ಕಾಂತಿಹೀನವಾಗಿ ಕೃಷ್ಣಪಕ್ಷದ ರಾತ್ರಿಯಂತೆ ಕಾಣುತಿತ್ತು. ಆಗ ಭರತನಿಗೆ ಆ ಪಟ್ಟಣದ ಪೂರ್ವಸ್ಥಿತಿಯು ಸ್ಮರಣೆಗೆ ಬಂದಿತು. ಮೊದಲು ಅತಿಶಯವಾದ ಕಾಂತಿ ವಿಶೇಷದಿಂದ ಜ್ವಲಿಸುತ್ತಿದ್ದ ಚಂದ್ರಪತ್ನಿಯಾದ ರೋಹಿಣಿಯು, ಅಂಗಾರಕ ಗ್ರಹದಿಂದ ಪೀಡಿತಳಾಗಿ ಒಂಟಿಯಾಗಿ ಪರಿತಪಿಸುವಂತೆಯೂ ಮೊದಲು ಜಲಸಮೃದ್ಧಿಯಿಂದ ಉಕ್ಕುತ್ತಿದ್ದ ಗಿರಿನದಿಯು ಬಿಸಿಲಿನಿಂದ ಒಣಗಿ, ಒಳಗೊಳಗೆ ತತ್ತಳಿಸುತ್ತಿರುವ ಜಲಜಂತುಗಳಿಂದ ಕೂಡಿರುವಂತೆಯೂ, ಮೊದಲು ಸುವರ್ಣ ರೇಖೆಯಂತೆ ಜಾಜ್ವಲ್ಯಮಾನವಾದ ಜ್ವಾಲೆಯಿಂದ ನಗುತ್ತಿದ್ದ ಹೋಮಾಗ್ನಿಯು, ದಧಿ ಮೊದಲಾದ ಹವಿಸ್ಸುಗಳಿಂದ ಹೋಮಮಾಡಿದಾಗ ಉರಿಯಡಗಿರು ವಂತೆಯೂ, ಮೊದಲು ಚತುರಂಗಗಳಿಂದ ಕೂಡಿ ಉತ್ಸಾಹದಿಂದ ಜಯ-ಪ್ರಯಾಣಮಾಡುತ್ತಿದ್ದ ಸೈನ್ಯವು, ಮಹಾಯುದ್ಧದಲ್ಲಿ ಹತರಾದ ಸೈನಿಕ ರಿಂದಲೂ, ಮುರಿದುಬಿದ್ದ ಆಯುಧಗಳಿಂದಲೂ, ಸತ್ತುಬಿದ್ದ ಆನೆಕುದುರೆಗಳಿಂ ದಲೂ, ತುಮುರುತುಮುರಾಗಿ ಒಡೆದು ಬಿದ್ದಿರುವ ಧ್ವಜರಥಾದಿಗಳಿಂದಲೂ ಕಾಂತಿಹೀನವಾಗಿರುವಂತೆಯೂ, ಮೊದಲು ನೊರೆಯಿಂದಲೂ, ಮಹಾಘೋಷ ದಿಂದಲೂ ಉಬ್ಬಿ ಬರುತ್ತಿದ್ದ ಸಮುದ್ರತರಂಗಗಳು ಗಾಳಿಯಿಲ್ಲದಾಗ ಸದ್ದಡಗಿ ಶಾಂತವಾಗಿರುವಂತೆಯೂ, ಯಾಗದ ಕೊನೆಯ ದಿನವು ಮುಗಿದು, ಋತ್ವಿಕ್ಕು ಗಳೆಲ್ಲರೂ ತಮ್ಮ ತಮ್ಮ ಸಾಮಗ್ರಿಗಳನ್ನು ಸಾಗಿಸಿಕೊಂಡು ಹೋದಮೇಲೆ ನಿಶ್ಶಬ್ದವಾಗಿರುವ ಯಜ್ಞಶಾಲೆಯಂತೆಯೂ, ತಮ್ಮ ಗುಂಪಿಗೆ ಪ್ರಧಾನವಾದ ಹೋರಿಯು ತಪ್ಪಿಸಿಕೊಂಡು ಹೋದುದಕ್ಕಾಗಿ ಅದನ್ನೇ ಚಿಂತಿಸುತ್ತ, ತಮ್ಮ ಮೇವನ್ನೂ ಬಿಟ್ಟು ತತ್ತಳಿಸುತ್ತಿರುವ ಹಸುಗಳ ಮಂದೆಯಂತೆಯೂ, ಕಾಂತಿಯನ್ನು ಕೊಡುವ ಪದ್ಮರಾಗಾದಿಮಣಿಗಳಿಲ್ಲದ ಮುತ್ತಿನಸರದಂತೆಯೂ, ಪುಣ್ಯಕ್ಷಯದಿಂದ ಕಾಂತಿಹೀನವಾಗಿ ಆಕಾಶದಿಂದ ಕೆಳಗೆ ಬಿದ್ದಿರುವ ನಕ್ಷತ್ರ

ದಂತೆಯೂ, ಮೊದಲು ಪುಷ್ಪಸಮೃದ್ಧಿಯಿಂದಲೂ, ಭ್ರಮರಗಳ ಝೇಂಕಾರ ಧ್ವನಿಯಿಂದಲೂ ಅತಿ ಮನೋಹರವಾಗಿದ್ದು, ವಸಂತಋತುವು ಮುಗಿದಮೇಲೆ ಬೇಸಗೆಯಲ್ಲಿ ಕಾಡುಗಿಚ್ಚಿನ ಜ್ವಾಲೆಗೆ ಸಿಕ್ಕಿಬಿದ್ದ ವನಲತೆಯಂತೆಯೂ, ಆ ಅಯೋಧ್ಯೆಯು ಕಾಂತಿಹೀನವಾಗಿ ಕಾಣುತ್ತಿರುವುದನ್ನು ನೋಡಿದನು. ಮತ್ತು ಆ ಪಟ್ಟಣದ ರಾಜಮಾರ್ಗದಲ್ಲಿ ಜನಸಂಚಾರವೇ ಇರಲಿಲ್ಲ. ಕ್ರಯವಿಕ್ರಯಾದಿಗಳೊಂದೂ ಇಲ್ಲದೆ ಅಂಗಡಿಗಳೆಲ್ಲವೂ ಮುಚ್ಚಲ್ಪಟ್ಟಿದ್ದುವು. ಮೇಘದಿಂದ ಮರೆಸಲ್ಪಟ್ಟ ಚಂದ್ರನಿಂದಲೂ, ನಕ್ಷತ್ರಗಳಿಂದಲೂ ಕೂಡಿದ ಆಕಾಶದಂತೆ ಕಾಂತಿಹೀನವಾಗಿತ್ತು, ಮತ್ತು ಉತ್ತಮವಾದ ಪಾನದ್ರವ್ಯಗಳೊಂದೂ ಇಲ್ಲದೆ ನಿರ್ಜನವಾಗಿ, ಪಾನಪಾತ್ರಗಳೆಲ್ಲವೂ ಒಡೆದು, ಮದ್ಯಪಾನದಿಂದ ಜನರೆಲ್ಲರೂ ಮದಿಸಿ ಸತ್ತುಬಿದ್ದಿರುವಾಗ ಕಳೆಗುಂದಿದ ಪಾನಭೂಮಿಯಂತೆಯೂ, ಹಳ್ಳತಿಟ್ಟುಗಳಿಂದಲೂ ಬಿರುಕುಗಳಿಂದಲೂ, ಒಡೆದುಹೋದ ಪಾತ್ರೆಗಳಿಂದಲೂ ಕೂಡಿ ಸ್ವಲ್ಪವಾದರೂ ಕುಡಿಯುವುದಕ್ಕೆ ನೀರಿಲ್ಲದೆ ಹಾಳುಬಿದ್ದಿರುವ ಅರವಟ್ಟಿಗೆಯಂತೆಯೂ, ಎಳೆದು ಕಟ್ಟಲ್ಪಟ್ಟ ವಿಸ್ತಾರವಾದ ನಾಣುಳ್ಳುದಾಗಿ ಯುದ್ಧಭೂಮಿಯಲ್ಲಿ ಶತ್ರುಗಳಿಂದ ಕತ್ತರಿಸಲ್ಪಟ್ಟು ನಿಷ್ಪ್ರಯೋಜನವಾಗಿ ಬಿದ್ದಿರುವ ಧನುರ್ಲತೆಯಂತೆಯೂ, ಯುದ್ಧಸಮರ್ಥವಾದ ಕುದುರೆಯು ರಾವುತನಿಂದ ನಡೆಸಲ್ಪಡುತಿದ್ದು, ಬಹಳವಾಗಿ ಬಳಲಿ ಕೊನೆಗೆ ದುರ್ಬಲವಾಗಿ ಏರುವುದಕ್ಕೂ ಯೋಗ್ಯವಲ್ಲದೆ, ಜೀನು ಮುಂತಾದ ಸಾಮಗ್ರಿಗಳೆಲ್ಲವನ್ನೂ ಕಳಚಿಟ್ಟ ಕುದುರೆಯ ಮರಿಯಂತೆಯೂ, ನೀರೊಣಗಿ ಹೋದುದರಿಂದ, ಮತ್ಸ್ಯಕೂರ್ಮಾದಿ ಜಲಜಂತುಗಳೆಲ್ಲವೂ ಒಳಗೆ ತತ್ತಳಿಸುತ್ತಿರಲು, ನೈದಿಲೆ ಮೊದಲಾದ ನೀರು ಹೂಗಳೆಲ್ಲವೂ ಕಂದಿಬಿದ್ದಿರಲು, ದಡವು ಮುರಿದು ಕಾಂತಿಹೀನವಾಗಿ ಕಾಣುತ್ತಿರುವ ತಾವರೆಕೊಳದಂತೆಯೂ, ಮನಸ್ಸಿಗೆ ಸಂತೋಷವಿಲ್ಲದುದರಿಂದ ಚಂದನಾದ್ಯನುಲೇಪನಗಳನ್ನೂ ಬಿಟ್ಟು, ನಿಯತವಾದ ಆಭರಣಗಳೂ ಇಲ್ಲದೆ, ದುಃಖದಿಂದ ಕಂದಿದ ಮನುಷ್ಯದೇಹದಂತೆಯೂ, ವರ್ಷಾಕಾಲದಲ್ಲಿ ಸೂರ್ಯನು ಮೇಘದಿಂದ ಮರೆಸಲ್ಪಟ್ಟಿರುವಾಗ ಅಳಿಸಿಹೋದ ಆತನ ಪ್ರಭೆಯಂತೆಯೂ, ಕೇವಲ ಕಾಂತಿಹೀನವಾಗಿರುತ್ತಿತ್ತು. ಶ್ರೀಮಂತನಾಗಿಯೂ, ದಶರಥಪುತ್ರನಾಗಿಯೂ ಇರುವ ಭರತನು, ರಥಸ್ಥನಾಗಿಯೇ ಮುಂದೆಮುಂದೆ ಹೋಗುತ್ತಾ, ಆ ರಥವನ್ನು ನಡೆಸುತಿದ್ದ ಸಾರಥಿಯನ್ನು ಕುರಿತು, "ಎಲೆ ಸೂತನೆ! ಇದೇನು?

ಮೊದಲು ಈ ಅಯೋಧ್ಯೆಯಲ್ಲಿ ಗೀತವಾದಿತ್ರಾದಿ ಧ್ವನಿಗಳು ಬಹುಗಂಭೀರವಾಗಿ ಎಲ್ಲೆಲ್ಲಿಯೂ ಕೇಳಿಸುತಿದ್ದುವು. ಈಗಲಾದರೋ ಆ ಶಬ್ದವೇ ಸಂಪೂರ್ಣವಾಗಿ ಅಡಗಿಹೋಗಿರುವುದು. ಮೊದಲು ಈ ಪಟ್ಟಣದಲ್ಲಿ ಪಾನಭೂಮಿಗಳಿಂದ ಹೊರಡತಕ್ಕ ಮದ್ಯದ ವಾಸನೆಗಳೂ, ಪುಷ್ಪದ ವಾಸನೆಯೂ, ಅಗುರು ಧೂಪಾದಿಗಳ ಸುಗಂಧವೂ, ಎಲ್ಲೆಲ್ಲಿಯೂ ವ್ಯಾಪಿಸಿ ಎಷ್ಟೋ ಆನಂದವನ್ನುಂಟು ಮಾಡುತ್ತಿದ್ದುವು. ಈಗ ಅದೊಂದೂ ಕಾಣುವುದಿಲ್ಲ. ಮೊದಲು ಕುದುರೆ ಮೊದಲಾದ ವಾಹನಗಳ ಧ್ವನಿಯೂ, ಆನೆಗಳ ಗರ್ಜನವೂ, ರಥದ ಚೀತ್ಕಾರವೂ ಎಡೆಬಿಡದೆ ಕೇಳಿಸುತ್ತಿದ್ದುವು. ರಾಮನು ಇಲ್ಲಿಂದ ಹೊರಟುಹೋದಂದಿನಿಂದ ಇಲ್ಲಿನ ಶಬ್ದವೇ ಅಡಗಿಹೋದಂತೆ ಕಾಣುವುದು. ನಮ್ಮ ಅಣ್ಣನಾದ ರಾಮನು ಕಾಡಿಗೆ ಹೋದಮೇಲೆ ನಡುಪ್ರಾಯವುಳ್ಳವರೂ ಕೂಡ, ತಾವು ಅನುಭವಿಸ ಬೇಕಾದ ಭೋಗಗಳಲ್ಲಿಯೇ ನಿರಾಶೆಯುಳ್ಳವರಾಗಿ, ಚಂದನಾದ್ಯನುಲೇಪನ ಗಳನ್ನೂ, ಪುಷ್ಪಾದ್ಯಲಂಕಾರಗಳನ್ನೂ ಬಿಟ್ಟು ದುಃಖದಿಂದ ಪರಿತಪಿಸುತ್ತಿರು ವರು. ರಾಮನು ಹೋದಂದಿನಿಂದ, ಮೊದಲಿನಂತೆ ಚೆನ್ನಾಗಿ ಅಲಂಕರಿಸಿಕೊಂಡು ಸಂಚಾರಾರ್ಥವಾಗಿ ಹೊರಗೆ ಹೊರಡುವವರನ್ನೇ ಕಾಣಲಿಲ್ಲ. ನಮ್ಮ ಪಟ್ಟಣ ದಲ್ಲಿ ಯಾವುದೊಂದುತ್ಸವಗಳೂ ನಡೆಯುವಂತೆ ತೋರಲಿಲ್ಲ. ಎಲೆ ಸೂತನೆ! ಅಣ್ಣನಾದ ರಾಮನು ಇಲ್ಲಿಂದ ಕಾಡಿಗೆ ಹೋಗುವಾಗ, ಈ ಪಟ್ಟಣದ ಕಳೆ ಯನ್ನೂ ತನ್ನ ಸಂಗಡಲೇ ಕರೆದುಕೊಂಡು ಹೋದಂತೆಯೇ ಎಣಿಸಬೇಕಾಗಿದೆ. ಅವಿಚ್ಛಿನ್ನವಾದ ಮಳೆಯಿಂದ ಕೂಡಿ, ಕತ್ತಲೆ ಕವಿದಿರುವ ಶುಕ್ಲಪಕ್ಷದ ರಾತ್ರಿ ಯಂತೆ, ಈ ಅಯೋಧ್ಯಾನಗರಿಯ ಪ್ರಕಾಶವು ಈಗ ಸ್ವಲ್ಪವಾದರೂ ಹೊರಗೆ ಕಾಣಿಸುವುದಿಲ್ಲವಲ್ಲಾ! ಇನ್ನು ನನ್ನಣ್ಣನಾದ ರಾಮನು ಹಿಂತಿರುಗಿಬಂದು ಯಾವಾಗ ಈ ಅಯೋಧ್ಯೆಯನ್ನು ಪ್ರವೇಶಿಸುವನೋ? ಬೇಸಗೆಯಲ್ಲಿ ಬಿಸಿಲಿ ನಿಂದ ತತ್ತಳಿಸುತ್ತಿರುವ ಪ್ರಾಣಿವರ್ಗಕ್ಕೆ ತಂಪಾದ ಮಳೆಯನ್ನು ಸುರಿಸುತ್ತಿರುವ ಮೇಘಪರಂಪರೆಯು ಹೇಗೋ ಹಾಗೆ, ಆತನು ಈ ಅಯೋಧ್ಯೆಯನ್ನು ಪ್ರವೇಶಿಸಿ ಜನಗಳಿಗೆ ಯಾವಾಗ ಸಂತೋಷವನ್ನುಂಟುಮಾಡುವನೋ? ರಾಮಾಗಮನ ವೆಂಬ ಮಹೋತ್ಸವವು ಯಾವಾಗ ಲಭಿಸುವುದೋ! ಚೆನ್ನಾಗಿ ತಮ್ಮ ತಮ್ಮ ದೇಹವನ್ನಲಂಕರಿಸಿಕೊಂಡು ಬೀದಿಗಳಲ್ಲಿ ಬೆಡಗಿನಿಂದ ನಡೆಯುತಿದ್ದ ತರುಣರು, ಈಗ ತಮ್ಮ ಸಂಚಾರವನ್ನೇ ನಿಲ್ಲಿಸಿಬಿಟ್ಟಿರುವುದರಿಂದ, ಈ ರಾಜಮಾರ್ಗಗಳಿಗೆ

ಕಳೆಯೇ ಇಲ್ಲದಂತಿರುವುದು. ಆಹಾ! ಈ ನಮ್ಮ ನಗರಿಗೆ ಯಾವ ದುರವಸ್ಥೆಯು ಬಂದೊದಗಿತು ನೋಡಿದೆಯಾ!" ಎಂದನು. ಹೀಗೆ ಭರತನು ಅನೇಕ ವಿಧದಲ್ಲಿ ಚಿಂತಿಸಿ ಕೊರಗುತ್ತಾ, ಸಿಂಹವಿಲ್ಲದ ಗುಹೆಯಂತೆ ರಾಜನಿಲ್ಲದ ತನ್ನ ತಂದೆಯ ಅರಮನೆಯನ್ನು ಪ್ರವೇಶಿಸಿದನು. ಮಹಾತ್ಮನಾಗಿಯೂ ಧೀರನಾಗಿಯೂ ಇರುವ ಭರತನು, [1] ದೇವಾಸುರಯುದ್ಧದಲ್ಲಿ ದೇವತೆಗಳೆಲ್ಲರೂ ಪರಾಜಿತರಾಗಿ ಹೋದ ಮೇಲೆ, ಸೂರ್ಯನೂ ರಾಹುಗ್ರಸ್ತನಾಗಿರುವಾಗ, ಹಗಲಿರುಳೆಂಬ ವಿಭಾಗವೇ ಇಲ್ಲದಿದ್ದ ದಿನದಂತೆ, ಜನರಹಿತವಾಗಿಯೂ, ಕಾಂತಿಹೀನವಾಗಿಯೂ ಇರುವ ಅಲ್ಲಿನ ಅಂತಃಪುರವನ್ನು ನೋಡಿ ಮತ್ತಷ್ಟು ದುಃಖಿತನಾಗಿ ಕಣ್ಣೀರು ಬಿಡುತ್ತಿದ್ದನು.

ಇದು ನೂರಹದಿನಾಲ್ಕನೆಯ ಸರ್ಗವು.

ಭರತನು ಅಯೋಧ್ಯೆಯನ್ನು ಬಿಟ್ಟು ಬಂದು ನಂದಿಗ್ರಾಮದಲ್ಲಿ ರಾಮಪಾದುಕೆಗಳನ್ನು ಮುಂದಿಟ್ಟುಕೊಂಡು ರಾಜ್ಯ ಪರಿಪಾಲನವನ್ನು ಮಾಡಿದುದು.

ಪಾದುಕಾ ಪಟ್ಟಾಭಿಷೇಕವು

ತನ್ನ ಹಿರಿಯಣ್ಣನಲ್ಲಿ ಪೂರ್ಣಭಕ್ತಿಯೆಂಬ ವ್ರತವನ್ನೇ ದೃಢವಾಗಿ ಹಿಡಿದಿರತಕ್ಕ ಆ ಭರತನು, ಮಾತೆಯರೆಲ್ಲರನ್ನೂ ಆ ಅಯೋಧ್ಯೆಯ ಅಂತಃಪುರದಲ್ಲಿರಿಸಿ ರಾಮವಿಯೋಗದಿಂದ ಎಡೆಬಿಡದೆ ದುಃಖಿಸುತ್ತ, ತನ್ನನ್ನು ಸುತ್ತಿಬರುತ್ತಿದ್ದ ಗುರುಜನಗಳನ್ನು ಕುರಿತು, "ಎಲೈ ಪೂಜ್ಯರೆ! ನಾನು ಇಲ್ಲಿರಲಾರೆನು.

---

[1] ಪೂರ್ವದಲ್ಲಿ ದೇವಾಸುರರಿಗೆ ದೊಡ್ಡ ಯುದ್ಧವು ನಡೆದಾಗ, ದೇವತೆಗಳೆಲ್ಲರೂ ಅಸುರರಿಂದ ಪರಾಜಿತರಾದರು. ಈ ಕಾಲಕ್ಕೆ ಸರಿಯಾಗಿ ಸೂರ್ಯನೂ ರಾಹುವಿನಿಂದ ಹಿಡಿಯಲ್ಪಟ್ಟು ಮರೆಸಿಹೋಗಿದ್ದನು. ಆಗ ಕೆಲವು ಕಾಲದವರೆಗೆ ಹಗಲಿರುಳೆಂಬ ಭೇದವೇ ತಿಳಿಯಲಿಲ್ಲ. ಆಮೇಲೆ ಬ್ರಹ್ಮನು ಅತ್ರಿಮಹಾಮುನಿಯನ್ನು ಪ್ರೇರಿಸಲು, ಅತ್ರಿಮಹರ್ಷಿಯು ಸೂರ್ಯಾಧಿಕಾರವನ್ನು ವಹಿಸಿ ಏಳು ದಿವಸಗಳವರೆಗೆ ತನ್ನ ಬ್ರಹ್ಮತೇಜಸ್ಸಿನಿಂದ ಪ್ರಪಂಚವನ್ನು ಬೆಳಗುತ್ತಿದ್ದನೆಂದು ಪುರಾಣ ಕಥೆಯುಂಟು.

ನಂದಿಗ್ರಾಮಕ್ಕೆ ಹೋಗಿ ಅಲ್ಲಿಯೇ ಇರಬೇಕೆಂದುದ್ದೇಶಿಸಿರುವೆನು. ತಾವೆಲ್ಲರೂ ಇದಕ್ಕೆ ಅನುಮತಿಸಬೇಕು. ನಾನು ಅಲ್ಲಿದ್ದರೆ ನನ್ನ ಅಣ್ಣನಾದ ರಾಮನ ಅಗಲಿಕೆಯಿಂದಾದ ಈ ದುಃಖವನ್ನು ಸ್ವಲ್ಪಮಟ್ಟಿಗಾದರೂ ಸಹಿಸಬಹುದು. ಮಹಾಯಶಸ್ವಿಯಾದ ರಾಮನೇ ಈ ಅಯೋಧ್ಯೆಗೆ ರಾಜನಾಗಿರಬೇಕಾದುದರಿಂದ, ಆತನಿಲ್ಲದ ಈ ಅಯೋಧ್ಯೆಯನ್ನು ನೋಡುತ್ತಿದ್ದಷ್ಟೂ ನನ್ನ ದುಃಖವು ಮಿತಿಮೀರಿಹೋಗುತ್ತಿರುವುದು. ಆದುದರಿಂದ ನಾನು ಅಲ್ಲಿಯೇ ಇದ್ದು ರಾಜ್ಯನಿರ್ವಹಣಕ್ಕಾಗಿ ಅಣ್ಣನ ಪ್ರತ್ಯಾಗಮನವನ್ನೇ ನಿರೀಕ್ಷಿಸುತ್ತಿರುವೆನು." ಎಂದನು. ಭರತನು ಹೇಳಿದ ಈ ಶುಭವಾಕ್ಯವನ್ನು ಕೇಳಿ ಅಲ್ಲಿದ್ದ ಮಂತ್ರಿಗಳೂ, ಪುರೋಹಿತನಾದ ವಸಿಷ್ಠನೂ ಅವನನ್ನು ನೋಡಿ, "ಎಲೈ ಮಹಾತ್ಮನಾದ ಭರತನೆ! ನೀನು ಹೇಳಿದ ವಿಷಯವು ಬಹಳ ಶ್ಲಾಘನೀಯವಾಗಿಯೇ ಇರುವುದು. ವಿಶೇಷವಾದ ಭ್ರಾತೃವಾತ್ಸಲ್ಯವುಳ್ಳ ನೀನಲ್ಲದೆ ಲೋಕದಲ್ಲಿ ಹೀಗೆ ಹೇಳುವವರು ಬೇರೆ ಯಾರುಂಟು? ನಿನ್ನ ಮಾತುಗಳು ನಿನ್ನ ಗುಣಕ್ಕನುರೂಪಗಳಾಗಿಯೇ ಇರುವುವು. ಬಂಧುಗಳಲ್ಲಿ ಬಹಳ ಪ್ರೇಮವುಳ್ಳವನಾಗಿಯೂ, ಒಡಹುಟ್ಟಿದವರಲ್ಲಿ ವಿಶೇಷ ವಾತ್ಸಲ್ಯವುಳ್ಳವನಾಗಿಯೂ, ಸತ್ಪುರುಷರ ಮಾರ್ಗವನ್ನು ಎಡೆಬಿಡದೆ ಅನುವರ್ತಿಸಿದವನಾಗಿಯೂ ಇರುವ ನಿನ್ನ ಈ ಸದುದ್ದೇಶಕ್ಕೆ, ಯಾರು ತಾನೇ ಅಡ್ಡಿಮಾಡಬಲ್ಲರು? ಎಂದರು. ಹೀಗೆ ಆ ಮಂತ್ರಿಗಳೆಲ್ಲರೂ ತನ್ನ ಉದ್ದೇಶಕ್ಕೆ ಒಡಂಬಟ್ಟು ಪ್ರಿಯವಾಕ್ಯಗಳನ್ನಾಡುತ್ತಿರಲು, ಭರತನು ಬಹಳ ಸಂತೋಷಪಟ್ಟು, ಸಮೀಪದಲ್ಲಿದ್ದ ಸಾರಥಿಯನ್ನು ನೋಡಿ "ಎಲೈ ಸೂತನೆ, ರಥವನ್ನು ಸಿದ್ಧಪಡಿಸಿಡು!" ಎಂದನು. ಆಮೇಲೆ ಅವನು ಸಂತೋಷದಿಂದ ತನ್ನ ಮಾತೆಯರೆಲ್ಲರಿಗೂ ಕ್ರಮವಾಗಿ ನಮಸ್ಕರಿಸಿ, ಅವರ ಅನುಮತಿಯನ್ನೂ ಪಡೆದು ಬಂದು, ಶತ್ರುಘ್ನನೊಡಗೂಡಿ ರಥವನ್ನೇರಿದನು. ಹೀಗೆ ಭರತಶತ್ರುಘ್ನರಿಬ್ಬರೂ ಪರಮಸಂತೋಷದಿಂದ ರಥವನ್ನೇರಿ ಮಂತ್ರಿಪುರೋಹಿತಾದಿಗಳಿಂದ ಪರಿವೃತರಾಗಿ ವೇಗದಿಂದ ಹೊರಟರು. ಮುಂಭಾಗದಲ್ಲಿ ವಸಿಷ್ಠಾದಿ ಬ್ರಾಹ್ಮಣಶ್ರೇಷ್ಠರೂ, ಇತರ ಗುರುಜನಗಳೂ ಹೊರಟರು. ಇವರೆಲ್ಲರೂ ಪೂರ್ವಾಭಿಮುಖವಾಗಿ ಹೊರಟು ನಂದಿಗ್ರಾಮದ ಕಡೆಗೆ ಬರುತ್ತಿದ್ದರು. ಭರತನು ಹೋಗುತ್ತಿರುವಾಗ, ಅವನು ಅಪೇಕ್ಷಿಸದಿದ್ದರೂ ಆನೆ ಕುದುರೆಗಳೇ ಮೊದಲಾದ ಚತುರಂಗ ಸೈನ್ಯಗಳೂ ಅವನನ್ನು ಹಿಂಬಾಲಿಸಿ ಬರುತ್ತಿದ್ದುವು. ಹಾಗೆಯೇ

ಅಯೋಧ್ಯಾವಾಸಿಗಳೂ ಅವನ ಹಿಂದೆ ಹೊರಟುಬಂದರು. ಭ್ರಾತೃವತ್ಸಲನಾಗಿಯೂ ಧರ್ಮಾತ್ಮನಾಗಿಯೂ ಇರುವ ಆ ಭರತನಾದರೋ, ರಥದಲ್ಲಿ ಕುಳಿತಹಾಗೆಯೇ ರಾಮನ ಪಾದುಕೆಗಳೆರಡನ್ನೂ ತಲೆಯಮೇಲಿಟ್ಟುಕೊಂಡು ನಂದಿಗ್ರಾಮಾಭಿಮುಖನಾಗಿ ಹೊರಟುಬರುತ್ತ, ಆ ಗ್ರಾಮವನ್ನು ಪ್ರವೇಶಿಸಿ, ಅಲ್ಲಿ ರಥದಿಂದಿಳಿದು ಸಮೀಪದಲ್ಲಿದ್ದ ಗುರುಗಳನ್ನು ಕುರಿತು, "ಎಲೈ ಪೂಜ್ಯರೆ! ನಮ್ಮಣ್ಣನು ಈ ರಾಜ್ಯವನ್ನು ನ್ಯಾಸರೂಪವಾಗಿ ನನ್ನಲ್ಲಿಟ್ಟಿರುವನು. ಸುವರ್ಣಮಯವಾದ ಆತನ ಈ ಪಾದುಕೆಗಳೇ ರಾಜ್ಯದ ಯೋಗಕ್ಷೇಮಗಳನ್ನು ವಹಿಸತಕ್ಕವುಗಳಾಗಿರುವುವು. ಆತನು ತನಗೆ ಪ್ರತಿನಿಧಿಯಾಗಿ ಇವುಗಳನ್ನು ಇಲ್ಲಿಗೆ ಕಳುಹಿಸಿಕೊಟ್ಟಿರುವನು. ಇಷ್ಟೇಹೊರತು ರಾಜ್ಯಕ್ಕೂ ನನಗೂ ಯಾವ ಸಂಬಂಧವೂ ಇಲ್ಲವು" ಎಂದು ಹೇಳಿ, ಆಮೇಲೆ ಆ ಪಾದುಕೆಗಳೆರಡನ್ನೂ ತಲೆಯಲ್ಲಿ ಇಟ್ಟುಕೊಂಡಹಾಗೆಯೇ ಸುತ್ತಲೂ ನಿಂತಿದ್ದ ಪ್ರಜೆಗಳೆಲ್ಲರನ್ನೂ ಕುರಿತು ದುಃಖದಿಂದ "ಎಲೈ ಪ್ರಜೆಗಳಿರಾ! ಇದೋ! ಇವೆರಡೂ ಆರ್ಯನಾದ ನಮ್ಮಣ್ಣನ ಪಾದುಕೆಗಳು. ಇವುಗಳಿಗೆ ನಮ್ಮ ರಾಜಚಿಹ್ನವಾದ ಶ್ವೇತಚ್ಛತ್ರವನ್ನು ಹಿಡಿಯಿರಿ! ಆರ್ಯನಾದ ರಾಮನ ಈ ಪಾದುಕೆಗಳೇ ರಾಜ್ಯಧರ್ಮಗಳನ್ನು ನಿರ್ವಹಿಸುವುವು. ನಮ್ಮಣ್ಣನು ನನ್ನಲ್ಲಿ ಪ್ರೇಮದಿಂದ ಇವುಗಳನ್ನು ನ್ಯಾಸರೂಪವಾಗಿ ನನ್ನಲ್ಲಿರಿಸಿರುವನು. ಆರ್ಯನು ಹಿಂತಿರುಗಿ ಬರುವವರೆಗೂ ಈ ನ್ಯಾಸವನ್ನು ನಾನು ಕಾಪಾಡುತಿದ್ದು, ಅವನು ಬಂದಕೂಡಲೇ ಈ ಪಾದುಕೆಗಳನ್ನು ನನ್ನ ಕೈಯಿಂದಲೇ ಆತನ ಪಾದಕಮಲಗಳಿಗೆ ತುಡಿಸಿ, ಈ ಸುವರ್ಣಪಾದುಕೆಗಳಿಂದಲಂಕರಿಸಲ್ಪಟ್ಟ ಆತನ ಪಾದಗಳನ್ನು ನೋಡಿ ಸಂತೋಷಿಸುವೆನು. ಆತನಿಗೆ ಅವನ ರಾಜ್ಯವನ್ನೊಪ್ಪಿಸಿಬಿಟ್ಟಮೇಲೆಯೇ ನನ್ನ ಮೇಲಿನ ಭಾರವನ್ನಿಳುಹಿದಂತಾಗುವುದು. ಆಗ ನಾನು ನಿರ್ಭರನಾಗಿ ಅವನಲ್ಲಿಯೇ ಶಿಷ್ಯವೃತ್ತಿಯನ್ನವಲಂಬಿಸಿ ಆತನೊಡನೆ ಸಂತೋಷದಿಂದಿರುವೆನು. ನಮ್ಮ ಅಣ್ಣನು ನನ್ನಲ್ಲಿ ನ್ಯಾಸರೂಪವಾಗಿ ಇಟ್ಟಿರುವ ಅವನ ಈ ಎರಡು ಪಾದುಕೆಗಳನ್ನೂ, ಅವನ ರಾಜ್ಯವನ್ನೂ, ಅವನ ಅಯೋಧ್ಯೆಯನ್ನೂ ಆತನಿಗೊಪ್ಪಿಸಿದಹೊರತು ನನಗೆ ಪಾಪವಿಮೋಚನವಿಲ್ಲ. ರಾಮನು ಪಟ್ಟಾಭಿಷಿಕ್ತನಾಗುವುದನ್ನೂ, ಈ ನಮ್ಮ ದೇಶವಾಸಿಗಳೆಲ್ಲರೂ ಸಂತೋಷದಿಂದ ಉಕ್ಕುತ್ತಿರುವುದನ್ನೂ ನೋಡುವವರೆಗೆ ನನ್ನ ಮನಸ್ಸಿಗೆ ನೆಮ್ಮದಿಯಿಲ್ಲ. ಆಗಿನ ಸಂತೋಷವು ನನಗೆ

ರಾಜ್ಯಲಾಭಕ್ಕಿಂತಲೂ ನಾಲ್ಕುಮಡಿ ಹೆಚ್ಚಾಗುವುದು" ಎಂದನು. ಹೀಗೆ ಮಹಾಯಶಸ್ವಿಯಾದ ಭರತನು ಬಹುದೈನ್ಯದಿಂದ ಪ್ರಲಾಪಿಸುತ್ತ, ಮಂತ್ರಿಗಳೊಡಗೂಡಿ ಆ ನಂದಿಗ್ರಾಮದಲ್ಲಿಯೇ ರಾಜ್ಯವನ್ನು ನಡೆಸುವುದಾಗಿ ಉದ್ದೇಶಿಸಿದನು. ತಾನು ಜಡೆಯನ್ನೂ ನಾರುಮಡಿಯನ್ನೂ ಧರಿಸಿ ಮುನಿವೇಷದಿಂದಿದ್ದು, ತನ್ನ ಸಮಸ್ತ ಸೈನ್ಯಗಳನ್ನೂ ಅಲ್ಲಿಯೇ ನೆಲೆಗೊಳಿಸಿದನು. ಭ್ರಾತೃವತ್ಸಲನಾದ ಆ ಭರತನು ತನ್ನ ಅಣ್ಣನು ಹಿಂತಿರುಗಿ ಬರುವುದನ್ನೂ, ತನ್ನ ಪ್ರತಿಜ್ಞೆಯು ಕೊನೆಮುಟ್ಟುವುದನ್ನೂ ನಿರೀಕ್ಷಿಸುತ್ತ, ಅಣ್ಣನು ತನಗೆ ಹೇಳಿದ್ದ ಬುದ್ಧಿವಾದಗಳನ್ನೇ ಮನಸ್ಸಿನಲ್ಲಿಟ್ಟು ನಡೆಸುತ್ತ ಆ ನಂದಿಗ್ರಾಮದಲ್ಲಿಯೇ ನಿಂತುಬಿಟ್ಟನು. ಆಗ ಆತನು ಶ್ರೀರಾಮಪಾದುಕೆಗಳೆರಡನ್ನೂ ಸಿಂಹಾಸನದಲ್ಲಿರಿಸಿ ಅವುಗಳಿಗೆ ಕ್ರಮವಾಗಿ ರಾಜ್ಯಾಭಿಷೇಕವನ್ನು ಮಾಡಿ ಆ ಗ್ರಾಮದಲ್ಲಿಯೇ ಇರುತ್ತ, ಪ್ರತಿದಿನವೂ ತಾನು ನಡೆಸತಕ್ಕ ರಾಜಶಾಸನಗಳೆಲ್ಲವನ್ನೂ ಆಗಾಗ ಆ ಪಾದುಕೆಗಳ ಮುಂದೆ ನಿಂತು ವಿಜ್ಞಾಪಿಸುತ್ತಿದ್ದನು. ಹೀಗೆ ಶ್ರೀಮಂತನಾದ ಭರತನು ಅಣ್ಣನಾದ ರಾಮನ ಪಾದುಕೆಗಳಿಗೆ ಬಹು ವೈಭವದಿಂದ ಪಟ್ಟಾಭಿಷೇಕವನ್ನು ನಡೆಸಿ, ತಾನು ಆ ಪಾದುಕೆಗಳಿಗೆ ಪರತಂತ್ರನಾಗಿಯೇ ಇದ್ದು ರಾಜ್ಯಕಾರ್ಯಗಳನ್ನು ನಿರ್ವಹಿಸುತ್ತಿದ್ದನು. ಯಾವ ರಾಜ್ಯಕಾರ್ಯವು ಒಂದೊದಗಿದರೂ ಭರತನು, ಅವುಗಳನ್ನು ಮೊದಲು ಆ ರಾಮಪಾದುಕೆಗಳಿಗೆ ನಿವೇದಿಸಿ, ಆಮೇಲೆಯೇ ತಾನು ಅದರಲ್ಲಿ ಪ್ರವರ್ತಿಸುತ್ತಿದ್ದನು.

ಇದು ನೂರಹದಿನೈದನೆಯ ಸರ್ಗವು.

ರಾಕ್ಷಸಬಾಧೆಗಾಗಿ ಋಷಿಗಳು ಚಿತ್ರಕೂಟವನ್ನು ಬಿಟ್ಟು
ಬೇರೆ ಆಶ್ರಮಗಳಿಗೆ ಹೊರಟುಹೋದುದು.

ಇತ್ತಲಾಗಿ ಭರತನು ಹೊರಟುಬಂದುಬಿಟ್ಟಮೇಲೆ, ಅತ್ತಲಾಗಿ ರಾಮನು ಆ ಚಿತ್ರಕೂಟದ ತಪೋವನದಲ್ಲಿಯೇ ಕೆಲವು ದಿವಸಗಳವರೆಗೆ ವಾಸಮಾಡುತ್ತಿದ್ದನು. ಈ ನಡುವೆ ಅಲ್ಲಿನ ತಪಸ್ವಿಗಳು ಮನಸ್ಸಿನಲ್ಲಿ ಏನೋ ಭಯದಿಂದಲೂ,

ಕಳವಳದಿಂದಲೂ ತತ್ತಳಿಸುತ್ತಿರುವಹಾಗೆ ಕಂಡುಬಂದಿತು. ಅದರಲ್ಲಿಯೂ ಮುಖ್ಯವಾಗಿ ತನ್ನ ಆಶ್ರಮದಸುತ್ತಲೂ ಪರ್ಣಶಾಲೆಯನ್ನು ಕಟ್ಟಿಕೊಂಡು, ತನ್ನನ್ನೇ ಆಶ್ರಯಿಸಿಕೊಂಡಿದ್ದ ಕೆಲವು ಋಷಿಗಳು ಬಹಳವಾಗಿ ಭಯದಿಂದ ಕಳವಳಿಸುತ್ತಿರುವುದನ್ನುಕಂಡನು. ಆದರೆ ಈ ಋಷಿಗಳು ತಮ್ಮ ಮನಸ್ಸಿನಲ್ಲಿರುವ ಭಯಕಾರಣವನ್ನು ರಾಮನಿಗೆ ತಿಳಿಸುವುದಕ್ಕೂ ಅಂಜಿದವರಾಗಿ, ತಮ್ಮೊಳಗೆ ತಾವು ಒಬ್ಬರಿಗೊಬ್ಬರು ಕಣ್ಣುಸನ್ನೆಗಳಿಂದಲೂ, ಹುಬ್ಬುಸನ್ನೆಯಿಂದಲೂ, ಕೈಬೆರಳುಗಳನ್ನು ಅಲ್ಲಾಡಿಸುವುದರಿಂದಲೂ ಮಾತಾಡಿಕೊಳ್ಳುತಿದ್ದರು. ಒಬ್ಬರಿಗೊಬ್ಬರು ಆಗಾಗ ಗೊಣಗುಟ್ಟುವುದನ್ನೂ ನೋಡಿ, ರಾಮನು, ತನ್ನಿಂದ ಅಲ್ಲಿನ ಆಶ್ರಮವಾಸಿಗಳಿಗೆ ಯಾವ ಬಾಧೆಯುಂಟಾಯಿತೋ ಎಂದು ತನಗೆ ತಾನೇ ಸಂದೇಹಿಸುತ್ತಿದ್ದನು. ಕೊನೆಗೆ ಆ ಋಷಿಗಳಿಗೆಲ್ಲಾ ಪ್ರಮುಖನಾದ ಕುಲಪತಿಯ ಬಳಿಗೆ ತಾನೇ ಹೋಗಿ, ಆತನಿಗೆ ವಿನಯದಿಂದ ಕೈಮುಗಿದು, "ಪೂಜ್ಯನೆ! ನಾನು ಇಲ್ಲಿರುವುದರಿಂದ ನಿಮಗೇನೂ ಬಾಧೆಯುಂಟಾಗಿಲ್ಲವಷ್ಟೆ? ಇಲ್ಲಿನ ಋಷಿಗಳು ಮನಸ್ಸಿನಲ್ಲಿ ಏನೋ ಅಸಮಾಧಾನ ಹೊಂದಿರುವುದಾಗಿ ಕಾಣುತ್ತಿದೆ. ನನ್ನ ನಡೆಯಲ್ಲಿ ನಿಮ್ಮ ಮನಸ್ಸಿಗೆ ಬೇಸರವನ್ನು ಹುಟ್ಟಿಸತಕ್ಕ ವ್ಯತ್ಯಾಸವೇನೂ ಇಲ್ಲವಷ್ಟೆ? ನನ್ನ ತಮ್ಮನಾದ ಲಕ್ಷ್ಮಣನಾದರೂ ಅಜ್ಞಾನವಶದಿಂದ ನಿಮ್ಮಲ್ಲಿ ಏನಾದರೂ ಅಪಚಾರಪಟ್ಟಿರುವನೆ? ಲಕ್ಷ್ಮಣನ ನಡತೆಯು ನಿಮಗೇನಾದರೂ ಸರಿಬೀಳಲಿಲ್ಲವೆ? ಅಥವಾ ನನ್ನ ಪ್ರಿಯಪತ್ನಿಯಾದ ಸೀತೆಯು ನನ್ನ ಉಪಚಾರದಲ್ಲಿಯೇ ಮೈಮರೆತು, ನಿಮ್ಮ ಶುಶ್ರೂಷೆಯಲ್ಲಿ ಏನಾದರೂ ಅನಾದರವನ್ನು ತೋರಿಸಿದಳೆ? ಅಥವಾ ಅವಳು ನಿಮ್ಮಲ್ಲಿ ಉಚಿತವಾದ ಮರ್ಯಾದೆಯನ್ನು ಮೀರಿನಡೆದಳೆ?" ಎಂದು ಕೇಳಿದನು. ಇದನ್ನು ಕೇಳಿ ಮುಪ್ಪಿನಿಂದಲೂ, ತಪಸ್ಸಿನಿಂದಲೂ ಬಹಳ ಜರ್ಝರಿತವಾದ ಮೈಯ್ಯುಳ್ಳವನಾಗಿಯೂ, ಜ್ಞಾನವೃದ್ಧನಾಗಿಯೂ ಇರುವ ಆ ಋಷಿಯು, ಸರ್ವಭೂತದಯಾಪರನೆನಿಸಿಕೊಂಡಿರುವ ರಾಮನನ್ನು ನೋಡಿ, "ವತ್ಸ, ರಾಮನೆ! ಚೆನ್ನಾಯಿತು! ಇದೇನು ಹೀಗೆ ಹೇಳುವೆ? ಶುಭಸ್ವಭಾವವುಳ್ಳ ಸೀತೆಯು ನಮ್ಮಲ್ಲಿ ಅತಿಕ್ರಮಿಸುವುದೆಂದರೇನು? ಹಾಗೆ ನಾವು ಮನಸ್ಸಿನಲ್ಲಿಯೂ ಎಣಿಸಬಾರದು. ಅದರಲ್ಲಿಯೂ ತಪಸ್ವಿಗಳಾದ ನಮ್ಮ ವಿಷಯದಲ್ಲಿ ಎಂದಿಗೂ ಹಾಗೆ ಮಾಡಲಾರಳು. ನಿನ್ನ ನಿಮಿತ್ತವಾಗಿ ಇಲ್ಲಿನ ತಾಪಸರಿಗೆ ರಾಕ್ಷಸರಿಂದ ಬಹಳ

ಉಪದ್ರವವುಂಟಾಗುತ್ತಿರುವುದು. ಅದಕ್ಕಾಗಿ ಭಯಪಟ್ಟು ಒಬ್ಬರಿಗೊಬ್ಬರು ರಹಸ್ಯಗಳನ್ನಾಡಿಕೊಳ್ಳುತ್ತಿರುವರು. ಇಲ್ಲಿಗೆ ಸಮೀಪದಲ್ಲಿ ಖರನೆಂಬ ರಾಕ್ಷಸನೊಬ್ಬನಿರುವನು. ಅವನು ರಾವಣನಿಗೆ ಒಡಹುಟ್ಟಿದ ತಮ್ಮನು. ಅವನು ಆಗಾಗ ಬಂದು ಜನಸ್ಥಾನವೆಂಬ ಈ ಪ್ರದೇಶದಲ್ಲಿರುವ ತಾಪಸರನ್ನೆಲ್ಲಾ ಬಾಧಿಸುತ್ತಿರುವನು. ಅವನು ಯಾರಿಗೂ ಅಂಜುವವನಲ್ಲ. ಪರಮಘಾತುಕ ಸ್ವಭಾವವುಳ್ಳವನು. ಮನುಷ್ಯರನ್ನು ಕಂಡಾಗ ಅವರನ್ನು ಒಟ್ಟಿಗೆ ನುಂಗಿಬಿಡುವನು. ಆತನ ಗರ್ವಕ್ಕೆ ಕೊನೆಮೊದಲಿಲ್ಲ. ಪರಮಪಾಪಿಯು. ನಮ್ಮಂತಹ ಬಡಮುನಿಗಳ ಪಾಡು ಹಾಗಿರಲಿ! ನಿನ್ನನ್ನೇ ಆತನು ಲಕ್ಷ್ಯಮಾಡಲಾರನು. ನೀನು ಈ ನಮ್ಮಾಶ್ರಮಕ್ಕೆ ಕಾಲಿಟ್ಟುದು ಮೊದಲು, ಅವನ ಕಡೆಯ ರಾಕ್ಷಸರು ಸಹಿಸಲಾರದೆ, ಗುಂಪುಗುಂಪಾಗಿ ಇಲ್ಲಿಗೆ ಬಂದು ನಮ್ಮನ್ನು ಪೀಡಿಸುತ್ತಿರುವರು. ಮತ್ತು ಅವರು ತಮ್ಮ ಮಾಯೆಯಿಂದ ಬಹಳ ಅಸಹ್ಯವಾಗಿಯೂ, ಕ್ರೂರವಾಗಿಯೂ, ಭಯಂಕರವಾಗಿಯೂ, ಇರುವ ಬಗೆಬಗೆಯಾದ ವಿಕಾರರೂಪಗಳನ್ನು ತೋರಿಸಿ, ಅದರಿಂದಲೇ ನಮಗೆ ಅರ್ಧಪ್ರಾಣವಾಗುವಹಾಗೆ ಮಾಡಿಬಿಡುವರು. ಇದರ ಮೇಲೆ ಅವರಲ್ಲಿ ಕೆಲವರು ಕೆಲವು ಋಷಿಗಳ ಮುಂದೆಯೇ ನಿರ್ಭಯವಾಗಿ ನಿಂತು, ಹೇಯವಾದ ಮತ್ತು ಅಶುಚಿಯಾದ ಪದಾರ್ಥಗಳನ್ನು ಅವರಮೇಲೆ ಬೀಸಿ ಬಡಿಯುವರು. ಮತ್ತೆ ಕೆಲವು ರಾಕ್ಷಸರು ನಮ್ಮ ಆಶ್ರಮಪ್ರದೇಶಗಳಲ್ಲಿ ಅಲ್ಲಲ್ಲಿ ಯಾರಿಗೂ ತಿಳಿಯದಂತೆ ಮರೆಸಿಕೊಂಡಿದ್ದು, ದುರ್ಬಲರಾದ ಋಷಿಗಳಮೇಲೆ ಬಿದ್ದು ಅವರನ್ನು ಕೊಲ್ಲುತ್ತ ವಿನೋದಿಸುವರು. ಅವರು ತಪಸ್ವಿಗಳ ಹೋಮಸಾಧನಗಳೆಲ್ಲವನ್ನೂ ಅತ್ತಿತ್ತ ತೆಗೆದು ಬಿಸುಡುವರು. ಹೋಮಾಗ್ನಿಗೆ ನೀರು ಸುರಿದು ನಂದಿಸಿಬಿಡುವರು. ಹೋಮಕಲಶಗಳನ್ನು ಒಡೆದು ಹಾಕುವರು. ಈ ದುಷ್ಕೃತ್ಯಗಳಿಂದ ಮಹರ್ಷಿಗಳ ಯಜ್ಞಕಾರ್ಯಕ್ಕೆ ಅವಕಾಶವನ್ನು ಕೊಡುವುದಿಲ್ಲ. ಈ ದುರಾತ್ಮರ ಹಾವಳಿಯನ್ನು ತಡೆಯಲಾರದುದಕ್ಕಾಗಿ, ಇಲ್ಲಿನ ಋಷಿಗಳು ಈ ಆಶ್ರಮವನ್ನೇ ಬಿಟ್ಟು ಹೋಗಬೇಕೆಂದು ನನಗೆ ಪ್ರೇರಿಸುತ್ತಿರುವರು. ಎಲೈ ರಾಮನೆ! ಹೀಗೆ ಈ ದುಷ್ಟರು ನಮ್ಮ ನಿತ್ಯಕರ್ಮಗಳನ್ನು ಕೆಡಿಸುತ್ತಿರುವುದು ಮಾತ್ರವೇ ಅಲ್ಲದೆ, ಮೇಲೆ ಬಿದ್ದು ಆಗಾಗ ಶರೀರಹಿಂಸೆಯನ್ನೂ ಮಾಡುವುದರಿಂದ ಈ ಆಶ್ರಮವನ್ನು ಬಿಟ್ಟು ಹೋಗುವುದೇ ಮೇಲೆಂದು ನನಗೂ ತೋರಿರುವುದು. ಇಲ್ಲಿಗೆ ದೂರದಲ್ಲಿ

ಸಮೃದ್ಧವಾದ ಫಲಮೂಲಾದಿಗಳಿಂದ ತುಂಬಿ, ಬಹು ರಮಣೀಯವಾಗಿರುವ ನಮ್ಮ ಹಳೆಯ ಆಶ್ರಮವೊಂದುಂಟು. ಇದನ್ನು ಬಿಟ್ಟು ಆ ನಮ್ಮ ಆಶ್ರಮವನ್ನೇ ಆಶ್ರಯಿಸಬೇಕೆಂದಿರುವೆವು. ನಾನು ಇವರೆಲ್ಲರನ್ನೂ ಕರೆದುಕೊಂಡು ಅಲ್ಲಿಗೇ ಹೊರಟುಹೋಗುವೆನು. ವತ್ಸ ರಾಮನೆ! ಆ ದುಷ್ಟರಾಕ್ಷಸನು ನಿನಗೂ ಒಂದುವೇಳೆ ಕೇಡನ್ನು ಮಾಡಬಹುದು. ನಿನಗೆ ಇಷ್ಟವಿದ್ದರೆ ನೀನೂ ನಮ್ಮೊಡನೆಯೇ ಬಂದುಬಿಡು! ನೀನೇನೋ ಬಹಳ ಎಚ್ಚರಿಕೆಯುಳ್ಳವನು. ಮತ್ತು ಯಾವುದಕ್ಕೂ ಹೆದರುವವನಲ್ಲ. ನೀನು ಸಮರ್ಥನಾಗಿಯೂ ಇರುವೆ! ಆದರೂ ನಿನ್ನ ಹೆಂಡತಿಯನ್ನೂ ಇಟ್ಟುಕೊಂಡು ಇಲ್ಲಿರುವುದೇನೋ ಕಷ್ಟವೆಂದು ನನಗೆ ತೋರಿರುವುದು" ಎಂದನು. ಹೀಗೆ ಆ ತಪಸ್ವಿಯು ಭಯಗ್ರಸ್ತನಾಗಿ ಹೇಳಿದುದನ್ನು ಕೇಳಿ, ರಾಮನು ಅವನಿಗೆ ಅನೇಕ ಸಮಾಧಾನಗಳನ್ನು ಹೇಳಿದರೂ, ಅವನು ಅಲ್ಲಿ ನಿಲ್ಲುವುದಕ್ಕೊಪ್ಪಲಿಲ್ಲ. ಕೊನೆಗೆ ಆ ಋಷಿಯು ರಾಮನಿಗೇ ಸಮಾಧಾನವನ್ನು ಹೇಳಿ ಆತನನ್ನೊಪ್ಪಿಸಿ, ಅವನ ಅನುಮತಿಯನ್ನು ಪಡೆದು, ತನ್ನ ಕಡೆಯ ಋಷಿಗಳೆಲ್ಲರೊಡನೆ ಆ ಆಶ್ರಮವನ್ನು ಬಿಟ್ಟು ಹೊರಟುಹೋದನು. ರಾಮನಾದರೋ ಆ ಋಷಿಗಳೆಲ್ಲರನ್ನೂ ಯಥೋಚಿತವಾಗಿ ಮನ್ನಿಸಿ, ತಾನೂ ಅವರನ್ನು ಸ್ವಲ್ಪ ದೂರದವರೆಗೆ ಹಿಂಬಾಲಿಸಿ ಹೋಗಿ, ಅವರೆಲ್ಲರಿಗೂ ನಮಸ್ಕರಿಸಿ ಸಂತುಷ್ಟರಾದ ಅವರ ಅನುಜ್ಞೆಯನ್ನು ಪಡೆದು, ಅವರ ಬುದ್ಧಿವಾದಗಳೆಲ್ಲವನ್ನೂ ವಿನಯದಿಂದ ಕೇಳಿ, ತನ್ನ ಪುಣ್ಯಾಶ್ರಮದ ಕಡೆಗೆ ಹಿಂತಿರುಗಿದನು. ಇಲ್ಲಿಗೆ ಬಂದಮೇಲೆ ಋಷಿಗಳಿಲ್ಲದೆ ನಿರ್ಜನವಾದ ಆ ಆಶ್ರಮವನ್ನು ರಾಮನು ಆಗಲೇ ಬಿಡಬೇಕಾಗಿದ್ದರೂ, ಋಷಿಗಳ ವಾಸಸ್ಥಳವೆಂಬ ಪ್ರೇಮದಿಂದ ಅದನ್ನು ಕ್ಷಣಮಾತ್ರವೂ ಬಿಟ್ಟು ಹೋಗಲಾರದೆ, ಎಚ್ಚರಿಕೆಯಿಂದಿರುತ್ತಿದ್ದನು. ಮುನಿವೃತ್ತಿಯನ್ನು ಯಥಾವಿಧಿಯಾಗಿ ಅನುಸರಿಸುತಿದ್ದ ಆ ರಾಮನನ್ನು ಗುಣಾಢ್ಯರಾಗಿದ್ದ ಆ ತಾಪಸರೆಲ್ಲರೂ ಅಲ್ಲಿರುವವರೆಗೂ ಎಡೆಬಿಡದೆ ಅನುಸರಿಸುತ್ತಿದ್ದರು.

ಇಲ್ಲಿಗೆ ನೂರಹದಿನಾರನೆಯ ಸರ್ಗವು.

☀ ರಾಮನು ಅತ್ರಿಮುನಿಯ ಆಶ್ರಮವನ್ನು ಪ್ರವೇಶಿಸಿದುದು. ☀

ಋಷಿಗಳೆಲ್ಲರೂ ಹೊರಟುಹೋದಮೇಲೆ ರಾಮನಿಗೂ ಆ ಚಿತ್ರಕೂಟದ ವಾಸವು ಮನಸ್ಸಿಗೊಪ್ಪಲಿಲ್ಲ. ತನ್ನ ಸಹವಾಸಿಗಳು ಬಿಟ್ಟು ಹೋದರೆಂಬುದೊಂದೇ ಅಲ್ಲದೆ, ಇನ್ನೂ ಅನೇಕ ಕಾರಣಗಳಿಂದ ಆತನ ಮನಸ್ಸಿಗೂ ಆ ಸ್ಥಳವನ್ನು ಬಿಟ್ಟು ಹೋಗುವುದೇ ಉತ್ತಮವೆಂದು ತೋರಿತು. ಏಕೆಂದರೆ, ತಾನು ಆ ಸ್ಥಳದಲ್ಲಿಯೇ ಭರತನನ್ನೂ, ತನ್ನ ಮಾತೆಯರನ್ನೂ, ಪುರವಾಸಿಗಳನ್ನೂ ನೋಡಿದ್ದುದರಿಂದ, ಆಗಾಗ ಅವರ ಸ್ಮರಣವು ಮನಸ್ಸಿಗೆ ಬಂದು ದುಃಖವುಂಟಾಗಬಹುದೆಂದೂ, ಆ ಪ್ರದೇಶವನ್ನು ನೋಡುತಿದ್ದ ಹಾಗೆಲ್ಲಾ ಹಿಂದಿನ ಸ್ಮರಣೆಯು ಬರುವುದೆಂದೂ ತೋರಿತು. ಮತ್ತು ಮಹಾತ್ಮನಾದ ಭರತನ ಸೈನ್ಯವು ಅಲ್ಲಲ್ಲಿ ಬಂದು ಬೀಡು ಬಿಟ್ಟುದರಿಂದ, ಆ ಸೈನ್ಯದ ಆನೆ ಕುದುರೆ ಮುಂತಾದುವುಗಳು ಆ ತಪೋವನವೆಲ್ಲವನ್ನೂ ಕೆಡಿಸಿಬಿಟ್ಟಿದ್ದುವು ತಮ್ಮ ಮಲಮೂತ್ರಾದಿಗಳಿಂದ ಆಶ್ರಮಪ್ರದೇಶವೆಲ್ಲವನ್ನೂ ಅಶುಚಿಯಾಗಿ ಮಾಡಿದ್ದುವು. ಆದುದರಿಂದ ಆ ಸ್ಥಳವನ್ನು ಬಿಡುವುದೇ ಮೇಲೆಂದು ತೋರಿತು. ಹಾಗೆಯೇ ಅವನು ಮನಸ್ಸಿನಲ್ಲಿ ನಿರ್ಧರಿಸಿಕೊಂಡು, ಸೀತಾ ಲಕ್ಷ್ಮಣರನ್ನು ಕರೆದುಕೊಂಡು [1] ಅಲ್ಲಿಂದ ಹೊರಟನು. ಹೀಗೆ ಪ್ರಯಾಣಮಾಡಿ ಹೋಗುತ್ತಿರುವಾಗ ದಾರಿಯಲ್ಲಿ ಅತ್ರಿಮಹಾಮುನಿಯ ಆಶ್ರಮವನ್ನು ನೋಡಿ, ಅದರೊಳಗೆ ಪ್ರವೇಶಿಸಿ, ಆ ಮಹರ್ಷಿಗೆ ನಮಸ್ಕರಿಸಿದನು ಆ ಋಷಿಯಾದರೋ ರಾಮನನ್ನು ಪುತ್ರವಾತ್ಸಲ್ಯದಿಂದ ಆದರಿಸಿ ತಾನಾಗಿಯೇ ಆತನಿಗೆ ಸಮಸ್ತ ವಿಧವಾದ ಅತಿಥಿ

---

[1] ಇಲ್ಲಿ ಈ ಕೆಳಗಿನ ವಿಷಯಗಳನ್ನು ಗಮನಿಸಬೇಕಾದುದವಶ್ಯವು. ಭರತನು ಜ್ಯೇಷ್ಠಮಾಸದಲ್ಲಿ ಅಯೋಧ್ಯೆಯಿಂದ ಚಿತ್ರಕೂಟಕ್ಕೆ ಹೊರಟುಬಂದು ಆಗಲೇ ಅಲ್ಲಿಂದ ಹಿಂತಿರುಗಿಬಿಟ್ಟನು. ಆಗ ಮಳೆಗಾಲವು ಸನ್ನಿಹಿತವಾಗಿದ್ದುದರಿಂದ ರಾಮನು ಕಾರ್ತಿಕಮಾಸದ ಕೊನೆಯವರೆಗೂ ಆ ಚಿತ್ರಕೂಟದಲ್ಲಿಯೇ ಇರುತಿದ್ದು, ಕೆಲವು ದಿನಗಳಮೇಲೆ ಆ ಚಿತ್ರಕೂಟವನ್ನು ಬಿಟ್ಟು ದಂಡಕಾರಣ್ಯಕ್ಕೆ ಹೊರಟನೇ ಹೊರತು, ಭರತನು ಚಿತ್ರಕೂಟವನ್ನು ಬಿಟ್ಟು ಅಯೋಧ್ಯೆಗೆ ಹಿಂದಿರುಗಿದೊಡನೆಯೇ ರಾಮನು ದಂಡಕಾರಣ್ಯದಕಡೆಗೆ ಹೊರಡಲಿಲ್ಲವೆಂದು ಗ್ರಹಿಸಬೇಕು. ಇದಕ್ಕನುಸಾರವಾಗಿ ಪದ್ಮಪುರಾಣದಲ್ಲಿಯೂ ಭರತನು ಅಯೋಧ್ಯೆಗೆ ಹಿಂತಿರುಗಿದನೆಂದು ಹೇಳಿದಮೇಲೆ ಕಾಕಾಸುರವೃತ್ತಾಂತವು ಹೇಳಲ್ಪಟ್ಟಿರುವುದು.

ಸತ್ಕಾರಗಳನ್ನೂ ನಡೆಸಿ, ಲಕ್ಷ್ಮಣನನ್ನೂ ಮಹಾಭಾಗೆಯಾದ ಸೀತೆಯನ್ನೂ ಪ್ರಿಯವಾಕ್ಯಗಳಿಂದ ಮನ್ನಿಸಿದನು. ಆಮೇಲೆ ಧರ್ಮಜ್ಞನಾಗಿಯೂ, ಸರ್ವಭೂತ ದಯಾಪರನಾಗಿಯೂ ಇರುವ ಆ ಋಷಿಯು, ಲೋಕಪೂಜ್ಯಳಾದ ತನ್ನ ಪತ್ನಿಯನ್ನು ಕರೆದು ಅವಳಿಗೆ ಅವರನ್ನು ತೋರಿಸಿದನು. ಆ ಋಷಿಪತ್ನಿಯು ಅವರೆಲ್ಲರನ್ನೂ ಪ್ರಿಯವಾಕ್ಯಗಳಿಂದ ಆದರಿಸಿದಳು. ಆಮೇಲೆ ಆ ಅತ್ರಿಮಹಾ ಮುನಿಯು ಸೀತೆಯನ್ನು ನೋಡಿ "ಎಲೆ ಭದ್ರೆ! ಈ ಅನಸೂಯೆಯು ಮಹಾಮಹಿಮೆಯುಳ್ಳವಳು, ಬಹಳ ತಪೋನಿಷ್ಠಳು, ಧರ್ಮಾನುಷ್ಠಾನದಲ್ಲಿಯೇ ನಿರತಳಾದವಳು. ಆದುದರಿಂದ ಈಕೆಗೆ ನೀನು ನಮಸ್ಕರಿಸು" ಎಂದನು. ಆಮೇಲೆ ರಾಮನನ್ನು ನೋಡಿ ಆತನಿಗೂ ತಪಸ್ವಿನಿಯಾದ ಅನಸೂಯೆಯನ್ನು ನಿರ್ದೇಶಿಸಿ ತೋರಿಸಿ "ಎಲೈ ಶುದ್ಧಾತ್ಮನೆ! ಇವಳ ಮಹಿಮೆಯನ್ನು ಬಲ್ಲೆಯಾ? ಮೊದಲು ಒಂದಾನೊಂದು ಕಾಲದಲ್ಲಿ ಹತ್ತು ವರ್ಷಗಳವರೆಗೆ ಮಳೆಯಿಲ್ಲದೆ ಮಹಾಕ್ಷಾಮವೊಂದುಂಟಾಯಿತು. ಬಿಸಿಲಿನ ಬೇಗೆಯಿಂದ ಲೋಕವೆಲ್ಲವೂ ಎಡೆಬಿಡದೆ ದಗ್ಧವಾಗುತಿತ್ತು. ಆಗ ಈಕೆಯು ತನ್ನ ಮಹಿಮೆಯಿಂದ ಋಷಿಗಳಿಗಾಗಿ ಫಲಮೂಲಗಳನ್ನು ಸೃಷ್ಟಿಸಿ, ಒಣಗಿಹೋಗಿದ್ದ ಗಂಗಾನದಿಯನ್ನು ಕೂಡ ಜಲಪೂರ್ಣವಾಗಿ ಪ್ರವಹಿಸುವಂತೆ ಮಾಡಿದಳು. ಈಕೆಯು ಹತ್ತುಸಾವಿರ ವರ್ಷಗಳವರೆಗೆ ಏಕಾಗ್ರಚಿತ್ತದಿಂದ ಮಹಾತಪಸ್ಸನ್ನು ಮಾಡಿದವಳು. ಕೃಚ್ಛ್ರ ಚಾಂದ್ರಾಯಣಾದಿವ್ರತಗಳನ್ನು ಅನೇಕವಾಗಿ ನಡೆಸಿ, ಋಷಿಗಳಿಗುಂಟಾಗುತಿದ್ದ ತಪೋವಿಘ್ನಗಳೆಲ್ಲವನ್ನೂ ನೀಗಿಸಿರುವಳು. ಮತ್ತು ಮೊದಲೊಂದಾವರ್ತಿ ದೇವತೆಗಳ ಕಾರ್ಯಾರ್ಥವಾಗಿ ತ್ವರೆಪಡಬೇಕಾದ ಸಂದರ್ಭದಲ್ಲಿ ಹತ್ತು ರಾತ್ರಿಗಳನ್ನು ಒಂದೇ ರಾತ್ರಿಯಂತೆ ಮಾಡಿದ ಮಹಾಮಹಿಮೆಯುಳ್ಳವಳು. ಬಹಳ ಉಗ್ರವಾದ ತಪಸ್ಸುಗಳೆಲ್ಲವನ್ನೂ ನಡೆಸಿರುವವಳು. ಈಕೆಗೆ ವ್ರತನಿಯಮಗಳೆಂಬುದೇ ಮುಖ್ಯವಾದ ಅಲಂಕಾರವು. ಈಕೆಯನ್ನು ನೀನು ತಾಯಿಯಂತೆ ಗೌರವಿಸಿ ಪೂಜಿಸಬೇಕು. ಇದರಿಂದ ನಿನಗೆ ಶ್ರೇಯಸ್ಸುಂಟು. ಪರಾನುಗ್ರಹಾರ್ಥವಾಗಿ ಅನೇಕ ಕರ್ಮಗಳನ್ನು ಮಾಡಿಯೂ ತಾನು ಅಸೂಯೆಯಿಲ್ಲದವಳಾದುದರಿಂದಲೂ ಮತ್ತು ಆರಾಧ್ಯವಾದ ಅನೇಕ ಪಾತಿವ್ರತ್ಯಕರ್ಮಗಳನ್ನು ನಡೆಸಿ, ಬೇರೆ ಸ್ತ್ರೀಯರಿಗೆ ತನ್ನಂತೆ ನಡೆಯುವುದು ಶಕ್ಯವೇ ಅಲ್ಲವೆಂದು ತೋರಿಸಿಬಿಟ್ಟಿರುವುದರಿಂದ, ಅವರ ಅಸೂಯೆಗೂ ಪಾತ್ರಳಾಗಿಲ್ಲವೆಂಬ ಖ್ಯಾತಿ

ಗೊಂಡಿರುವುದರಿಂದಲೂ ಈಕೆಯನ್ನು ಅನಸೂಯೆಯೆಂದು ಕರೆಯುವರು. ಸಮಸ್ತಪ್ರಾಣಿಗಳಿಗೂ ಈಕೆಯು ನಮಸ್ಕಾರ್ಯಳಾಗಿರುವಳು. ಮಹಾಯಶಸ್ವಿನಿಯಾಗಿ, ವೃದ್ಧಳಾಗಿ, ಕೋಪರಹಿತಳಾಗಿರುವ ಈ ಅನಸೂಯೆಗೆ ನಮಸ್ಕರಿಸುವಂತೆ ಸೀತೆಗೂ ಹೇಳು" ಎಂದನು ಆ ಮಹರ್ಷಿಯ ವಾಕ್ಯವನ್ನು ಕೇಳಿ ರಾಮನು "ಎಲೈ ಮಹಾತ್ಮನೆ! ನಿನ್ನಾಜ್ಞೆಯಂತೆಯೇ ಆಗಲಿ" ಎಂದು ಹೇಳಿ, ಸೀತೆಯ ಕಡೆಗೆ ತಿರುಗಿ "ಎಲೆ ರಾಜಪುತ್ರಿ! ಈ ಮಹರ್ಷಿಯ ಆಜ್ಞೆಯನ್ನು ಕೇಳಿದೆಯಾ? ತಪಸ್ವಿನಿಯಾದ ಈ ಅನಸೂಯೆಗೆ ನಮಸ್ಕರಿಸು. ನಿನಗೆ ಇದರಿಂದ ಶ್ರೇಯಸ್ಸುಂಟು" ಎಂದನು ಆಗ ಸೀತೆಯು ತನಗೆ ಶ್ರೇಯಃಕಾಂಕ್ಷಿಯಾಗಿ ರಾಮನು ಕೊಟ್ಟ ಆಜ್ಞೆಯನ್ನು ಶಿರಸಾವಹಿಸಿ, ಆ ಅತ್ರಿಪತ್ನಿಗೆ ವಿನಯದಿಂದ ಪ್ರದಕ್ಷಿಣ ಮಾಡಿದಳು. ಅಂಗಾಂಗಗಳೆಲ್ಲವೂ ಸಡಿಲಬಿದ್ದು, ದೇಹದ ಚರ್ಮವೆಲ್ಲವೂ ಸುಕ್ಕಿದ್ದು, ಮುಪ್ಪಿನಿಂದ ನರೆತ ತಲೆಕೂದಲುಳ್ಳವಳಾಗಿ, ಬಿರುಗಾಳಿಗೆ ಸಿಕ್ಕಿದ ಬಾಳೆಯಗಿಡದಂತೆ ನಡುಗುತ್ತಿರುವ ಮೈಯ್ಯುಳ್ಳವಳಾಗಿ ಮಹಾಭಾಗಳಾಗಿ ಪತಿವ್ರತೆಯೆನಿಸಿಕೊಂಡಿರುವ ಆ ಅನಸೂಯೆಗೆ ಸೀತೆಯು ತನ್ನ ಹೆಸರನ್ನು ತಿಳಿಸಿ ನಮಸ್ಕರಿಸಿದಳು. ಹೀಗೆ ನಮಸ್ಕಾರಮಾಡಿದಮೇಲೆ ಆಕೆಯ ಮುಂದೆ ಸಂತೋಷದಿಂದ ಕೈಮುಗಿದು ನಿಂತುಕೊಂಡು, "ಎಲೌ ಪೂಜ್ಯಳೆ! ನಿನಗೆ ಕ್ಷೇಮವೆ?" ಎಂದು ಕುಶಲಪ್ರಶ್ನೆಮಾಡಿದಳು. ಆಗ ಅನಸೂಯೆಯು ಮಹಾತ್ಮಳಾಗಿಯೂ, ಧರ್ಮಜ್ಞಳಾಗಿಯೂ ಇರುವ ಸೀತೆಯನ್ನು ನೋಡಿ ಪರಮಸಂತುಷ್ಟಳಾಗಿ, ಪ್ರಿಯವಾಕ್ಯಗಳಿಂದ ಅವಳನ್ನು ಮನ್ನಿಸುತ್ತ "ಎಲೆ ವತ್ಸೆ! ಭಾಗ್ಯವಶದಿಂದ ನೀನು ನಿನ್ನ ಪಾತಿವ್ರತ್ಯ ಧರ್ಮವನ್ನು ಎಚ್ಚರಿಕೆಯಿಂದ ಕಾಪಾಡಿಕೊಂಡು ಬರುತ್ತಿರುವೆ. ಲೋಕದಲ್ಲಿ ನಿನ್ನಂತೆ ಮಹಾಪತಿವ್ರತೆಯರು ಯಾರುಂಟು? ನೀನು ನಿನ್ನ ಬಂಧು ಜನಗಳನ್ನೂ ತೊರೆದು, ರಾಜಕುಮಾರಿಯೆಂಬ ಹೆಮ್ಮೆಯನ್ನೂ, ಐಶ್ವರ್ಯವನ್ನೂ, ಇನ್ನೂ ಉಳಿದ ಭೋಗಸಾಮಗ್ರಿಗಳೆಲ್ಲವನ್ನೂ ಬಿಟ್ಟು, ಪತಿಯಾದ ರಾಮನನ್ನೇ ಅನುವರ್ತಿಸಿ, ಕಾಡಿನಲ್ಲಿ ಕಷ್ಟಕ್ಕೆ ಸಿಕ್ಕಿಬಿದ್ದಿರುವ ಆತನನ್ನು ಬಿಡದೆ ಹಿಂಬಾಲಿಸಿ ಬಂದಿರುವೆಯಲ್ಲಾ! ಸ್ತ್ರೀಯಾದ ನಿನಗೆ ಇದೊಂದು ಭಾಗ್ಯವೇ ಹೊರತು ಬೇರೆಯಲ್ಲ! ಲೋಕದಲ್ಲಿ ಸ್ತ್ರೀಯರಿಗೆ ಪತಿಯೇ ದೈವವು. ಪತಿಯು ರಾಜ್ಯದಲ್ಲಿದ್ದರೂ, ಅಥವಾ ಕಾಡಿನಲ್ಲಿದ್ದರೂ, ಆತನು ಪಾಪಿಯಾಗಿದ್ದರೂ, ಪುಣ್ಯಾತ್ಮನಾಗಿದ್ದರೂ,

ದರಿದ್ರನಾದರೂ, ಧನಿಕನಾದರೂ, ಆತನನ್ನು ಬಿಡದೆ ಪ್ರೀತಿಯಿಂದಿರುವ ಸ್ತ್ರೀಯರಿಗೆ ಉತ್ತಮಲೋಕವು ಎಂದಿಗೂ ತಪ್ಪುವುದಿಲ್ಲ! ಪತಿಯಾದವನು ಕೇವಲ ದುಸ್ಸ್ವಭಾವವುಳ್ಳವನಾಗಿದ್ದರೂ, ಯುಕ್ತಾಯುಕ್ತ ವಿವೇಚನೆಯನ್ನು ಬಿಟ್ಟು ಹುಚ್ಚನಂತೆ ಸ್ವೇಚ್ಛೆಯಾಗಿ ನಡೆಯುವವನಾಗಿದ್ದರೂ, ಬಡವನಾಗಿದ್ದರೂ ಪೂಜ್ಯಸ್ವಭಾವವುಳ್ಳ ಸ್ತ್ರೀಯರು ಆತನನ್ನೇ ಪರದೈವವೆಂದು ಭಾವಿಸಬೇಕು. ಎಲೆ ವೈದೇಹಿ! ನಾನು ಎಷ್ಟೆಷ್ಟುವಿಧದಲ್ಲಿ ಆಲೋಚಿಸಿನೋಡಿದರೂ, ಪತಿಯನ್ನು ಬಿಟ್ಟರೆ, ಸ್ತ್ರೀಯರಿಗೆ ಮಹಾತಪಸ್ಸಿನಂತೆ ಅಕ್ಷಯವಾಗಿ, ಸರ್ವಾವಸ್ಥೆಗಳಲ್ಲಿಯೂ ರಕ್ಷಿಸತಕ್ಕ ಬೇರೆ ಬಂಧುವೊಬ್ಬನಾದರೂ ತೋರಲಿಲ್ಲ! ಕಾಮಪರವಶರಾಗಿ ತಮ್ಮ ಗಂಡಂದಿರನ್ನೇ ತಮ್ಮ ಕೈಕೆಳಗಿಟ್ಟುಕೊಂಡು ಪರಪುರುಷರನ್ನು ಮನಸ್ಸಿನಲ್ಲಿ ಕೋರುತ್ತಿರುವ ದುಷ್ಟಸ್ತ್ರೀಯರಿಗೆ ಇದರ ಗುಣಾವಗುಣಗಳು ತಿಳಿಯವು. ಅಂತಹ ಸ್ತ್ರೀಯರು ಇಹಲೋಕದಲ್ಲಿ ಅಪಕೀರ್ತಿಯನ್ನು ಹೊಂದಿ, ಪರಲೋಕಕ್ಕೂ ಭ್ರಷ್ಟರಾಗಿ ನರಕದಲ್ಲಿ ಬೀಳುವರು. ಲೋಕದಲ್ಲಿ ಯುಕ್ತಾಯುಕ್ತವನ್ನು ತಿಳಿದ ನಿನ್ನಂತಹ ಉತ್ತಮ ಸ್ತ್ರೀಯರೇ ಸ್ವರ್ಗದಲ್ಲಿ ವಿಹರಿಸುವರು. ಆದುದರಿಂದ ನೀನು ಈಗಿನಂತೆಯೇ ಪತಿಯನ್ನನುವರ್ತಿಸುತ್ತ, ಪತಿವ್ರತಾನಿಯಮವನ್ನನುಸರಿಸಿ ಆತನಿಗೆ ಸಹಧರ್ಮಚಾರಿಣಿಯಾಗಿರು. ಇದರಿಂದ ನೀನು ಅಪಾರವಾದ ಕೀರ್ತಿಗೂ ಧರ್ಮಕ್ಕೂ ಪಾತ್ರಳಾಗುವೆ" ಎಂದಳು.

ಇದು ನೂರಹದಿನೇಳನೆಯ ಸರ್ಗವು.

ಸೀತೆಯು ಅನಸೂಯೆಯಿಂದುಪದೇಶಿಸಲ್ಪಟ್ಟ ಪಾತಿವ್ರತ್ಯ ಧರ್ಮವನ್ನನುಮೋದಿಸಿ, ಆಕೆಗೆ ತನ್ನ ಸ್ವಯಂವರ ಕಥೆಯನ್ನು ಹೇಳಿದುದು.

ಅನಸೂಯೆಯು ಹೀಗೆ ಹೇಳಿದ ಬುದ್ಧಿವಾದಗಳನ್ನು ಸೀತೆಯು ಕೇಳಿ, ಅದೆಲ್ಲವನ್ನೂ ಗುಣವಾಗಿ ಕೈಕೊಂಡು, ಆ ತಪಸ್ವಿನಿಯನ್ನು ಪೂಜಿಸಿ ಪ್ರಿಯವಾಕ್ಯದಿಂದ ಆಕೆಯನ್ನು ಕುರಿತು "ಎಲೆ ಆರ್ಯೆ! ಪೂಜ್ಯಳಾದ ನೀನು ಶಿಷ್ಯಪ್ರಾಯಳಾದ ನನಗೆ ಈ ಬುದ್ಧಿವಾದಗಳನ್ನು ಹೇಳಿದುದು ಸಹಜವಾಗಿಯೇ ಇರುವುದು. ಸ್ತ್ರೀಯರಿಗೆ ಪತಿಯೇ ಪರವಸ್ತುವೆಂಬುದನ್ನು ನಾನೂ ತಿಳಿದೇ ಇರುವೆನು. ಒಂದುವೇಳೆ ಪತಿಯಾದವನು ಮರ್ಯಾದೆಯನ್ನು ಮೀರಿ ನಡೆದರೂ,

ಪತ್ನಿಯು ಆತನಲ್ಲಿ ಗುಣದೋಷಗಳ ಭೇದವನ್ನೆಣಿಸದೆ, ಆತನನ್ನೇ ಪರದೈವವೆಂದು ಭಾವಿಸಿ ಉಪಚರಿಸುತ್ತಿರಬೇಕೆಂಬುದರಲ್ಲಿ ತಡೆಯೇ ಇಲ್ಲವು. ಹೀಗಿರುವಾಗ ಸದ್ಗುಣಸಂಪನ್ನನಾಗಿ, ದಯಾಳುವಾಗಿ, ಜಿತೇಂದ್ರಿಯನಾಗಿ, ನನ್ನಲ್ಲಿ ಪರಮಪ್ರೇಮವುಳ್ಳವನಾಗಿ, ಧರ್ಮಾತ್ಮನೆನಿಸಿಕೊಂಡಿರುವ ನನ್ನ ಪ್ರಿಯನನ್ನು ನಾನು ಹೇಗೆ ಸೇವಿಸಬೇಕೆಂಬುದನ್ನು ನನಗೆ ಇತರರು ಹೇಳಿ ತಿಳಿಸಬೇಕೆ? ಆತನು ನನಗೆ ತಾಯಿಯಂತೆ ಹಿತಕರನಾಗಿಯೂ, ತಂದೆಯಂತೆ ನನ್ನ ಶ್ರೇಯಃಕಾಂಕ್ಷಿಯಾಗಿಯೂ ಇರುವವನಲ್ಲವೆ! ಮಹಾಬಲನಾದ ಆ ರಾಮನು ಹೆತ್ತ ತಾಯಿಯಾದ ಕೌಸಲ್ಯೆಯಲ್ಲಿ ಹೇಗೆ ವರ್ತಿಸುವನೋ ಹಾಗೆಯೇ ಮಹಾರಾಜನ ಅಂತಃಪುರದಲ್ಲಿರುವ, ಇತರ ಸ್ತ್ರೀಯರಲ್ಲಿಯೂ, ವರ್ತಿಸುತ್ತಿರುವನು. ಪಿತೃವತ್ಸಲನಾದ ಮತ್ತು ಧರ್ಮಜ್ಞನಾದ ಆ ವೀರನು, ತನ್ನ ತಂದೆಯಾದ ದಶರಥನು ಒಂದಾವರ್ತಿ ಕಣ್ಣಿಟ್ಟು ನೋಡಿದ ಇತರ ಸಾಮಾನ್ಯ ಸ್ತ್ರೀಯ ವಿಷಯದಲ್ಲಿ ಕೂಡ ತಾಯಿಯ ಭಾವನೆಯನ್ನಿಟ್ಟು ಶುಶ್ರೂಷೆ ಮಾಡುವನು. ಇದಕ್ಕೆಮೊದಲು ನಾನು ಭಯಂಕರವಾದ ಈ ವನಕ್ಕೆ ಪ್ರಯಾಣಮಾಡಿ ಹೊರಟುಬರುವಾಗಲೇ, ನಮ್ಮ ಅತ್ತೆಯಾದ ಕೌಸಲ್ಯೆಯು ನನಗೆ ಪಾತಿವ್ರತ್ಯಧರ್ಮವನ್ನು ಕುರಿತು ಅನೇಕ ವಿಧದಲ್ಲಿ ಉಪದೇಶಿಸಿರುವಳು. ಅವುಗಳನ್ನು ನಾನು ಇನ್ನೂ ಮನಸ್ಸಿನಲ್ಲಿಯೇ ಇಟ್ಟಿರುವೆನು. ಮತ್ತು ನನ್ನ ಪಾಣಿಗ್ರಹಣದಲ್ಲಿ ಅಗ್ನಿಹೋತ್ರ ಸಾನ್ನಿಧ್ಯದಲ್ಲಿಯೇ ನನ್ನ ತಾಯಿಯು ನನಗೆ ಪಾತಿವ್ರತ್ಯೋಪದೇಶವನ್ನು ಮಾಡಿರುವಳು. ಎಲೈ ಧರ್ಮಚಾರಿಣಿಯೇ! ನಿನ್ನ ಮಾತುಗಳಿಂದ ಅವೆಲ್ಲವೂ ಈಗ ನನಗೆ ಹೊಸದಾಗಿ ತೋರಿಸಲ್ಪಟ್ಟುವು. ಸ್ತ್ರೀಯರಿಗೆ ಪತಿಶುಶ್ರೂಷೆಗಿಂತಲೂ ಬೇರೆ ತಪಸ್ಸಿಲ್ಲವು. ಸಾವಿತ್ರಿಯೆಂಬವಳು ಪತಿಶುಶ್ರೂಷೆಯಿಂದಲೇ ಈಗಲೂ ಸ್ವರ್ಗದಲ್ಲಿ ಪೂಜಿಸಲ್ಪಡುತ್ತಿರುವಳು. ನಮಗೆ ಅಷ್ಟು ದೂರದ ನಿದರ್ಶನವೇಕೆ? ನೀನೂ ಹಾಗೆಯೇ ಪತಿಶುಶ್ರೂಷೆಯೆಂಬ ಧರ್ಮದಲ್ಲಿದ್ದುದರಿಂದಲೇ ಸ್ವರ್ಗವನ್ನು ಪಡೆದವಳಲ್ಲವೆ? ಎಲ್ಲಾ ಸ್ತ್ರೀಯರಿಗೂ ಮೇಲೆನಿಸಿಕೊಂಡು, ದೇವತಾಸ್ವರೂಪದಿಂದ ಆಕಾಶದಲ್ಲಿರುವ ರೋಹಿಣಿಯೂ ಕೂಡ ಚಂದ್ರನನ್ನು ಬಿಟ್ಟು ಒಂದು ಮುಹೂರ್ತವಾದರೂ ಹೊರಗೆ ಕಾಣತಕ್ಕವಳಲ್ಲ. ಹೀಗೆಯೇ ದೃಢವಾದ ಪಾತಿವ್ರತ್ಯವನ್ನು ಹಿಡಿದಿರುವ ಎಷ್ಟೋ ಉತ್ತಮ ಸ್ತ್ರೀಯರು ತಮ್ಮ ತಮ್ಮ ಪುಣ್ಯಕರ್ಮದಿಂದ ಸ್ವರ್ಗಾದಿಲೋಕಗಳಲ್ಲಿ ಪೂಜಿಸಲ್ಪಡುತ್ತಿರುವರು." ಎಂದಳು.

ಇದನ್ನು ಕೇಳಿ ಅನಸೂಯೆಯು ಪರಮ ಸಂತುಷ್ಟಳಾಗಿ, ಪ್ರೀತಿಯಿಂದ ಆ ಸೀತೆಯ ತಲೆಯನ್ನಾಘ್ರಾಣಿಸಿ, ಅವಳನ್ನು ಮತ್ತಷ್ಟು ಪ್ರೋತ್ಸಾಹಿಸುವಂತೆ ಒಂದಾನೊಂದು ಮಾತನ್ನು ಹೇಳುವಳು. "ಎಲೆ ವತ್ಸೆ! ನಾನು ನಾನಾ ವಿಧ ವಾದ ನಿಯಮಗಳನ್ನು ನಡೆಸಿ ಗಳಿಸಿಟ್ಟಿರುವ ತಪೋಬಲವು ಈಗಲೂ ನನಗೆ ಸ್ವಾಧೀನವಾಗಿರುವುದು. ಕಾಡಿನಲ್ಲಿ ಹೀಗೆ ಕಷ್ಟಪಡುತ್ತಿರುವಾಗಲೂ ಬೇಸರ ಗೊಳ್ಳದೆ, ಪತಿಸೇವೆಯೊಂದರಿಂದಲೇ ಹಿಗ್ಗುತ್ತ, ಈಗಲೂ ಹಸನ್ಮುಖಿಯಾಗಿರುವ ನಿನ್ನ ಸುಗುಣಗಳಿಗಾಗಿ ನಾನು ಬಹಳ ಸಂತೋಷಪಟ್ಟಿರುವೆನು. ನನ್ನ ತಪೋ ಬಲದಿಂದ ನಿನಗೆ ಇನ್ನೂ ಮೇಲೆ ಮೇಲೆ ಶ್ರೇಯಸ್ಸನ್ನು ಕೂಡಿಸಬೇಕೆಂದಿ ರುವೆನು. ನಿನ್ನ ಮಾತುಗಳು ನಿನ್ನ ಸುಸ್ವಭಾವಕ್ಕೆ ಅನುಗುಣಗಳಾಗಿಯೇ ಇರುವುವು. ಇವು ನನಗೆ ಎಷ್ಟೋ ಆನಂದವನ್ನುಂಟುಮಾಡಿವೆ. ನಾನು ನಿನ್ನಲ್ಲಿ ಪ್ರಸನ್ನಳಾಗಿರುವೆನು. ನಿನಗೆ ನನ್ನಿಂದಾಗಬೇಕಾದುದೇನು ? ಹೇಳು" ಎಂದಳು. ಇದನ್ನು ಕೇಳಿ ಸೀತೆಯು ಆಶ್ಚರ್ಯಭರಿತಳಾಗಿ, ಮಂದಹಾಸದೊಡನೆ ಕೂಡಿ, ಮಹಾತಪಸ್ವಿನಿಯಾದ ಅನಸೂಯೆಯನ್ನು ಕುರಿತು, "ಆರ್ಯೆ! ಇನ್ನು ನಿನ್ನಿಂದ ನನಗಾಗಬೇಕಾದುದೇನು ? ನಿನ್ನ ಈ ಪ್ರಿಯವಾಕ್ಯಗಳೇ ಸಾಕು" ಎಂದಳು. ಇದನ್ನು ಕೇಳಿ ಧರ್ಮಜ್ಞಳಾದ ಆ ಅನಸೂಯೆಗೆ ಸೀತೆಯಲ್ಲಿ ಮತ್ತಷ್ಟು ಪ್ರೇಮವು ಹೆಚ್ಚಿತು. ಆಗ ಆ ಸೀತೆಯನ್ನು ಕುರಿತು "ಆಹಾ! ಎಲೆ ಸೀತೆ! ಲೋಕಾದ್ಭುತವಾದ ನಿನ್ನ ಸೌಜನ್ಯದಿಂದ ನನಗುಂಟಾಗಿರುವ ಈ ಅಪಾರವಾದ ಸಂತೋಷವನ್ನು ನಾನು ಸಫಲಗೊಳಿಸದೆ ಇರಲಾರೆನು! ಈ ಪುಷ್ಪವನ್ನು ನೋಡು! ಇದೋ ಈ ವಸ್ತ್ರಾಭರಣಗಳನ್ನು ನೋಡು! ಇದೋ! ಇಲ್ಲಿ ಚಂದನಾದ್ಯನುಲೇಪಗಳನ್ನು ನೋಡು! ನಾನು ಅನುಗ್ರಹಿಸಿ ಕೊಡುವ ಈ ಅಲಂಕಾರಸಾಮಗ್ರಿಗಳಿಂದ ನಿನ್ನ ದೇಹವನ್ನಲಂಕರಿಸು! ಇವು ನಿನ್ನ ದೇಹಕ್ಕೆ ಅನುರೂಪವಾಗಿರುವುವು. ಮತ್ತು ಈ ಪುಷ್ಪಾದಿಗಳನ್ನು ಸಾಮಾನ್ಯವೆಂದೆಣಿಸ ಬೇಡ! ಇವು ಎಂದೆಂದಿಗೂ ಬಾಡತಕ್ಕವುಗಳಲ್ಲ! ನಿನ್ನದೆ ಶಾಶ್ವತವಾದ ಅಲಂಕಾರವಾಗುವುವು. ಎಲೆ ಜನಕಪುತ್ರಿ! ದಿವ್ಯವಾದ ಈ ಅಂಗರಾಗದಿಂದ ನೀನು ದೇಹವನ್ನಲಂಕರಿಸಿಕೊಂಡು, ಪತಿಸಾನ್ನಿಧ್ಯದಲ್ಲಿದ್ದರೆ ಶ್ರೀಮಹಾಲಕ್ಷ್ಮಿ ಯಿಂದ ವಿಷ್ಣುವಿಗೆ ಹೇಗೋ ಹಾಗೆ ನಿನ್ನಿಂದ ನಿನ್ನ ಪತಿಗೂ ಒಂದು ಕಾಂತಿ ವಿಶೇಷವುಂಟು. ಇವು ನಿಮಗೆ ಸಮಸ್ತಶ್ರೇಯಸ್ಸುಗಳಿಗೂ ಕಾರಣವಾದುದ

ರಿಂದ ಇವುಗಳನ್ನಂಗೀಕರಿಸು ” ಎಂದಳು. ಆಗ ಸೀತೆಯಾದರೋ ಅನಸೂಯೆಯು ತನಗೆ ಪ್ರೀತಿಯಿಂದ ಕೊಟ್ಟ ವಸ್ತ್ರಾಭರಣಾದಿಗಳನ್ನೂ, ಆ ಹೂ ಗಂಧ ಮುಂತಾದುವುಗಳನ್ನೂ ಸಂತೋಷದಿಂದ ಸ್ವೀಕರಿಸಿ, ಆ ತಪಸ್ವಿನಿಗೆ ಕೈಮುಗಿದು ನಮಸ್ಕರಿಸಿ ಮುಂದೆ ಕುಳಿತಳು. ಆಮೇಲೆ ಅನಸೂಯೆಯು ಸೀತೆಯೊಡನೆ ಬೇರೆ ಬೇರೆ ಪ್ರಿಯಕಥೆಗಳನ್ನಾಡುತ್ತಿರುವಾಗ ಆಕೆಯನ್ನು ಕುರಿತು ಪ್ರಶ್ನೆ ಮಾಡುವಳು. “ಎಲೆ ಸೀತೆ! ಯಶಸ್ವಿಯಾದ ಈ ರಾಮನು ನಿನ್ನನ್ನು ಸ್ವಯಂವರದಲ್ಲಿ ವರಿಸಿದನೆಂಬ ಸುದ್ದಿಯು ಯಾವಾಗಲೋ ನನ್ನ ಕಿವಿಗೆ ಬಿದ್ದಹಾಗಿದೆ! ಅದರ ವಿಚಾರವನ್ನು ನಿನ್ನಿಂದ ವಿಸ್ತಾರವಾಗಿ ಕೇಳಿ ತಿಳಿಯಬೇಕೆಂದು ನನಗೆ ಆಸೆ ಹುಟ್ಟಿರುವುದು. ಆದುದರಿಂದ ನೀನು ಅಲ್ಲಿ ನಡೆದುದನ್ನು ನಡೆದಹಾಗೆಯೇ ನನಗೆ ವಿವರವಾಗಿ ತಿಳಿಸಬೇಕು.” ಎಂದಳು. ಅದಕ್ಕಾ ಸೀತೆಯು ಧರ್ಮಪರಾಯಣಳಾದ ಅನಸೂಯೆಯನ್ನು ಕುರಿತು “ಎಲೌ ಪೂಜ್ಯಳೆ! ಹಾಗೆ ನಿನಗೆ ಕುತೂಹಲವಿದ್ದರೆ ಹೇಳುವೆನು ಕೇಳು” ಎಂದು ಹೇಳಿ ಆ ಕಥೆಯನ್ನು ಹೇಳಲಾರಂಭಿಸಿದಳು! “ಆರ್ಯೆ! ಕೇಳು! ಮಿಥಿಲಾನಗರಕ್ಕೆ ಅಧಿಪತಿಯಾದ ಜನಕನೆಂಬ ರಾಜನುಂಟು. ಆತನು ಮಹಾವೀರನು! ಸಮಸ್ತ ಧರ್ಮಗಳನ್ನೂ ಬಲ್ಲವನು. ಅವನು, ತನ್ನ ಕ್ಷತ್ರಿಯ ಧರ್ಮವನ್ನವಲಂಬಿಸಿ ನ್ಯಾಯರೀತಿಯಿಂದ ಭೂಮಿಯನ್ನು ಪಾಲಿಸುತ್ತಿರುವನು. ಆತನು ಹಿಂದೆ ಒಂದಾನೊಂದು ಕಾಲದಲ್ಲಿ ಒಂದು ಯಾಗವನ್ನಾರಂಭಿಸಿ, ಯಜ್ಞಭೂಮಿಯನ್ನು ಶೋಧಿಸುವುದಕ್ಕಾಗಿ ನೇಗಿಲಿನಿಂದ ನೆಲವನ್ನು ಉಳುವುದಕ್ಕೆ ತೊಡಗಿದನು. ಹೀಗೆ ಉಳುತ್ತಿರುವಾಗ ಭೂಮಿಯನ್ನು ಭೇದಿಸಿಕೊಂಡು ನಾನು ಮೇಲೆದ್ದು ಕಾಣಿಸಿಕೊಂಡೆನು. ಯಜ್ಞಮಾಡುವವನು ಯಾಗವಿಧಿಯನ್ನನುಸರಿಸಿ [1] ಹದಿನಾಲ್ಕು ಹಿಡಿಗಳ ಪ್ರಮಾಣವಷ್ಟು ಓಷಧಿಗಳನ್ನು ಯಜ್ಞಭೂಮಿಯಲ್ಲಿ ಬಿತ್ತಬೇಕೆಂಬ ನಿಯಮದಂತೆ, ಆ ಕಾರ್ಯದಲ್ಲಿ ಉದ್ಯುಕ್ತನಾಗಿದ್ದ ನನ್ನ ತಂದೆಯು, ಆಕಸ್ಮಿಕವಾಗಿ ನೆಲದ ಮಣ್ಣಿನಿಂದ ಮೇಲೆದ್ದು ಬಂದ ಧೂಳಿನಿಂದ ಮಲಿನವಾದ ದೇಹವುಳ್ಳ ನನ್ನನ್ನು ನೋಡಿ ಆಶ್ಚರ್ಯದಿಂದ ಬೆರಗಾಗಿದ್ದನು. ಆತನು ಅದುವರೆಗೆ ಸಂತಾನವಿಲ್ಲದವನಾಗಿದ್ದುದ

---

1 “ಯಾ ಜಾತಾ ಓಷಧಯೋ ದೇವೇಭ್ಯಃ ” ಇತ್ಯಾದಿ ಮಂತ್ರೋಕ್ತಪ್ರಕಾರವಾಗಿ ಯಜ್ಞಕರ್ತನು ಭೂಮಿಯನ್ನುತ್ತು ಹದಿನಾಲ್ಕು ಹಿಡಿಗಳಷ್ಟು ಓಷಧಿಗಳನ್ನು ಬಿತ್ತಬೇಕೆಂದು ತಿಳಿದುಬರುವುದು.

ರಿಂದಲೂ, ಮಕ್ಕಳನ್ನು ಕಂಡರೆ ಬಹಳ ಪ್ರೀತಿಯುಳ್ಳವನಾಗಿದ್ದುದರಿಂದಲೂ ನನ್ನನ್ನು ಕೈಹಿಡಿದೆತ್ತಿ ತನ್ನ ತೊಡೆಯ ಮೇಲೆ ಕುಳ್ಳಿರಿಸಿಕೊಂಡು, ನನ್ನನ್ನು ಮಗಳೆಂದೇ ಭಾವಿಸಿ ಪ್ರೀತಿಯಿಂದ ಲಾಲಿಸುತ್ತಿದ್ದನು. ನನ್ನಲ್ಲಿ ಆತನಿಗುಂಟಾದ ಪ್ರೇಮಕ್ಕೆ ಪಾರವೇ ಇರಲಿಲ್ಲ! ಇಷ್ಟರಲ್ಲಿ ಆತನ ಕಿವಿಗೆ ಆಕಾಶವಾಣಿಯೊಂದು ಕೇಳಿಸಿತು. “ಎಲೈ ರಾಜನೆ! ನೀನು ಈ ಕನ್ನಿಕೆಯನ್ನು ಪುತ್ರಿಯೆಂದು ಭಾವಿಸಿದುದು ಯುಕ್ತವಾಗಿಯೇ ಇರುವುದು. ನಿಜ ಧರ್ಮವನ್ನನುಸರಿಸಿ ಈಕೆಯು ನಿನ್ನ ಪುತ್ರಿಯಾಗಿಯೇ ಇರುವಳು” ಎಂಬೀ ಮಾತು ಆತನ ಕಿವಿಗೆ ಬಿದ್ದಿತು. ಆಗ ಜನಕನು ಎಣೆಯಿಲ್ಲದ ಈ ಅಮಾನುಷ ವಾಕ್ಯವನ್ನು ಕೇಳಿ, ಪರಮ ಸಂತೋಷದಿಂದ ಕೂಡಿದವನಾಗಿ ನನ್ನನ್ನು ಕರೆದುಕೊಂಡು ತನ್ನ ಅರಮನೆಗೆ ಬಂದನು. ಅಂದಿನಿಂದ ಮಹಾಭ್ಯುದಯವನ್ನು ಹೊಂದಿ ಶೋಭಿಸುತ್ತಿದ್ದನು. ನನ್ನ ತಂದೆಯಾದ ಆ ಜನಕನು ನನ್ನನ್ನು ಕರೆತಂದೊಡನೆಯೇ ತನ್ನ ಜ್ಯೇಷ್ಠ ಭಾರ್ಯೆಯ ವಶಕ್ಕೊಪ್ಪಿಸಿದನು. ಆಕೆಯು ಬಹುಕಾಲದಿಂದ ಮಕ್ಕಳಿಲ್ಲದೆ ತಪಿಸುತ್ತಿದ್ದುದರಿಂದ, ನನ್ನನ್ನು ಬಹುಪ್ರೇಮದಿಂದ ಸ್ವೀಕರಿಸಿ, ತನ್ನ ಹೊಟ್ಟೆಯಲ್ಲಿ ಹುಟ್ಟಿದ ಮಗಳೆಂದೇ ಭಾವಿಸಿ ಪೋಷಿಸುತ್ತ ಬಂದಳು. ಹೀಗೆ ಕೆಲವು ಕಾಲವು ಕಳೆಯಲು, ಒಮ್ಮೆ ನನ್ನ ತಂದೆಯು ನನ್ನನ್ನು ನೋಡಿದಾಗ, ನನಗೆ ವಿವಾಹ ಯೋಗ್ಯವಾದ ವಯಸ್ಸು ಪ್ರಾಪ್ತವಾಗಿರುವುದೆಂದು ಆತನ ಮನಸ್ಸಿಗೆ ತೋರಿತು. ಪತಿಸಂಯೋಗವಿಲ್ಲದೆ ಬಿಟ್ಟಿರಬಾರದ ನನ್ನ ಯೌವನಾವಸ್ಥೆಯನ್ನು ನೋಡಿ ಆತನ ಮನಸ್ಸಿನಲ್ಲಿ ಚಿಂತೆಯು ಹುಟ್ಟಿತು. ಆಗ ಆತನಿಗುಂಟಾದ ಚಿಂತೆಯು ಸಾಮಾನ್ಯವಾದುದಲ್ಲ. ತನ್ನಲ್ಲಿದ್ದ ಅಲ್ಪಸ್ವಲ್ಪ ಹಣವನ್ನೂ ಕಳೆದುಕೊಂಡ ಬಡವನಂತೆ ಆತನು ಬಹಳ ಚಿಂತಾಗ್ರಸ್ತನಾಗಿ ಕಳವಳಿಸುತ್ತಿದ್ದನು. ಅಮ್ಮಾ! ಲೋಕದಲ್ಲಿ ಯಾರಿಗಾದರೇನು? ಹೆಣ್ಣು ಮಕ್ಕಳನ್ನು ಪಡೆದವನು ಮಹೇಂದ್ರನಿಗೆ ಸಮಾನನಾಗಿದ್ದರೂ, ತನಗೆ ಸಮಾನರಾದವರಿಂದ ತಿರಸ್ಕಾರವನ್ನು ಹೊಂದಬೇಕಾಗುವುದು. ಕೊನೆಗೆ ಒಂದೊಂದು ವೇಳೆ ತನಗಿಂತ ಕೀಳಾದವರೂ ತನ್ನನ್ನು ತಿರಸ್ಕರಿಸುವರು. ಈ ಕಾರಣದಿಂದಲೇ ನನ್ನ ತಂದೆಯು ತನಗೆ ಅಂತಹ ಅವಮಾನವು ಪ್ರಾಪ್ತವಾಗುವ ಕಾಲವು ಸನ್ನಿಹಿತವಾಯಿತೆಂದು ತಿಳಿದು, ದುಃಖ ಸಮುದ್ರದಲ್ಲಿ ಮುಳುಗಿ, ತೆಪ್ಪವಿಲ್ಲದವನು ದಡವನ್ನು ಸೇರಲಾರದೆ ನಡುನೀರಿನಲ್ಲಿ ತತ್ತಳಿಸುವಂತೆ ನೆಮ್ಮದಿಯಿಲ್ಲದಿದ್ದನು. ಇದರ ಮೇಲೆ ನಾನು ಮನುಷ್ಯಗರ್ಭ

ದಿಂದಲೂ ಹುಟ್ಟಿದವಳಲ್ಲದೆ, ಅಯೋನಿಜೆಯಾಗಿದ್ದುದರಿಂದ, ನನಗೆ ತಕ್ಕ ವರನನ್ನು ಎಲ್ಲಿ ಸಂಪಾದಿಸುವುದೆಂಬ ಚಿಂತೆಯೇ ಆತನ ಮನಸ್ಸಿನಲ್ಲಿ ಸಂಪೂರ್ಣವಾಗಿ ನೆಲೆಗೊಂಡಿತ್ತು. ಎಷ್ಟೆಷ್ಟು ಯೋಚಿಸಿದರೂ ಆತನ ಮನಸ್ಸಿಗೆ ನಿರ್ಧರವು ತೋರಲಿಲ್ಲ. ಹೀಗೆ ಅಹೋರಾತ್ರವೂ ಚಿಂತಿಸುತ್ತಿರುವಾಗ ಆತನ ಮನಸ್ಸಿಗೆ ಒಂದಾನೊಂದು ಆಲೋಚನೆಯು ಹುಟ್ಟಿತು. ಸ್ವಯಂವರ ರೂಪದಿಂದ ನನಗೆ ವಿವಾಹವನ್ನು ನಡೆಸಿಬಿಡುವುದಾಗಿ ನಿಶ್ಚಯಿಸಿಕೊಂಡನು. [1] ಮೊದಲು ಒಂದಾನೊಂದು ಮಹಾಯಜ್ಞದಲ್ಲಿ ತೃಪ್ತಿಹೊಂದಿ ಪ್ರಸನ್ನರಾದ ದೇವತೆಗಳು ವರುಣನ ಮೂಲಕವಾಗಿ ನಮ್ಮ ವಂಶದ ರಾಜನಿಗೆ ಒಂದಾನೊಂದು ಮಹಾಧನುಸ್ಸನ್ನೂ, ಅಕ್ಷಯಬಾಣಗಳುಳ್ಳ ಎರಡು ಬತ್ತಳಿಕೆಗಳನ್ನೂ ಅನುಗ್ರಹಿಸಿಕೊಟ್ಟಿದ್ದರು. ಅದು ಬಹಳ ಭಾರವುಳ್ಳದಾಗಿದ್ದುದರಿಂದ ಕೇವಲ ಮನುಷ್ಯಮಾತ್ರರು ಎಷ್ಟೇ ಪ್ರಯತ್ನಪಟ್ಟರೂ ಅದನ್ನು ಆಡಿಸುವುದಕ್ಕೂ ಆಗುತ್ತಿರಲಿಲ್ಲ. ಆದುದರಿಂದ ಯಾವ ರಾಜರೂ ಸ್ವಪ್ನದಲ್ಲಿಯಾಗಲಿ ಅದನ್ನು ಎತ್ತಿ ಬಗ್ಗಿಸಲಾರರು. ಅದನ್ನು ತಿಳಿದು ಸತ್ಯವಾದಿಯಾದ ನನ್ನ ತಂದೆಯು, ದೇಶದೇಶದ ರಾಜರೆಲ್ಲರನ್ನೂ ಕರೆಸಿ ಸಭೆಕೂಡಿಸಿ, ಅವರ ನಡುವೆ ಆ ಧನುಸ್ಸನ್ನು ತರಿಸಿಟ್ಟು "ಇದೋ! ಈ ಧನುಸ್ಸನ್ನು ನೋಡಿರಿ! ನಿಮ್ಮಲ್ಲಿ ಯಾವ ವೀರನು ಈ ಧನುಸ್ಸನ್ನೆತ್ತಿ ನಾಣೇರಿಸುವನೋ ಆತನಿಗೆ ನನ್ನ ಮಗಳನ್ನು ಕೊಟ್ಟು ವಿವಾಹಮಾಡುವೆನು. ಇದರಲ್ಲಿ ಸಂದೇಹವಿಲ್ಲವು" ಎಂದು ಸಾರಿದನು. ಇದನ್ನು ಕೇಳಿ ಅಲ್ಲಿದ್ದ ರಾಜರೆಲ್ಲರೂ ಒಬ್ಬೊಬ್ಬರಾಗಿ ಮುಂದೆ ಬಂದು ಆ ಧನುಸ್ಸಿನ ಆಕಾರವನ್ನು ನೋಡಿ ಭಗ್ನಮನೋರಥರಾಗಿ, ಅದನ್ನು ಕೈಯಿಂದಲೂ ಎತ್ತಲಾರದೆ ಕೊನೆಗೆ ಆ ಧನುಸ್ಸಿಗೆ ಕೈಮುಗಿದು ಹಿಂದಿರುಗಿ ಹೋಗುತ್ತಿದ್ದರು. ಬಹು ಕಾಲದ ಮೇಲೆ ಸತ್ಯಪರಾಕ್ರಮಿಯಾಗಿಯೂ, ತೇಜಸ್ವಿಯಾಗಿಯೂ ಇರುವ ಈ ರಾಮನು, ತನ್ನ ತಮ್ಮನಾದ ಈ ಲಕ್ಷ್ಮಣನೊಡನೆ ವಿಶ್ವಾಮಿತ್ರನನ್ನು

---

[1] ಪೂರ್ವದಲ್ಲಿ ದಕ್ಷಯಜ್ಞಕಾಲದಲ್ಲಿ ಶಿವನಿಂದ ಪೀಡಿತರಾದ ದೇವತೆಗಳು, ಆ ಶಿವನನ್ನೇ ಪ್ರಾರ್ಥಿಸಿ ಆತನ ಕೈಯಲ್ಲಿದ್ದ ಧನುಸ್ಸನ್ನು ತಮಗೆ ಕೊಟ್ಟುಬಿಡಬೇಕೆಂದು ಕೇಳಿದರು. ಶಿವನು ಆ ಧನುಸ್ಸನ್ನು ದೇವತೆಗಳಿಗೆ ಕೊಡುವಾಗ ಅದನ್ನು ದೇವರಾತನಿಗೆ ಕೊಡುವಂತೆ ಹೇಳಿ ಕೊಟ್ಟನು. ಆಮೇಲೆ ದೇವತೆಗಳು ವರುಣನ ಮೂಲಕವಾಗಿ ಆ ಧನುಸ್ಸನ್ನು ಜನಕವಂಶಕ್ಕೆ ಸೇರಿದ ದೇವರಾತನಿಗೆ ಕೊಡಿಸಿದರೆಂದು ಪುರಾಣಕಥೆಯು.

ಮುಂದಿಟ್ಟುಕೊಂಡು ನನ್ನ ತಂದೆಯ ಯಜ್ಞವನ್ನು ನೋಡಬೇಕೆಂದು ನಮ್ಮ ಪಟ್ಟಣಕ್ಕೆ ಬಂದನು. ಹೀಗೆ ಅತಿಥಿಯಾಗಿ ಬಂದ ವಿಶ್ವಾಮಿತ್ರನನ್ನು ನನ್ನ ತಂದೆಯು ಉಚಿತ ರೀತಿಯಿಂದ ಸತ್ಕರಿಸಿದಮೇಲೆ, ಆ ಮಹರ್ಷಿಯು ನನ್ನ ತಂದೆಯನ್ನು ನೋಡಿ "ಎಲೈ ರಾಜನೇ! ಇದೋ! ಇವರಿಬ್ಬರೂ ದಶರಥ ರಾಜನ ಮಕ್ಕಳು. ಇವರಿಬ್ಬರೂ ನಿನ್ನ ಧನುಸ್ಸನ್ನು ನೋಡಬೇಕೆಂದಿರುವರು. ನಿನಗೆ ದೇವತಾನುಗ್ರಹದಿಂದ ಬಂದಿರುವ ಆ ದಿವ್ಯ ಧನುಸ್ಸನ್ನು ಇವರಿಗೂ ಒಂದಾವರ್ತಿ ತೋರಿಸಿಬಿಡು" ಎಂದನು. ಆ ಬ್ರಾಹ್ಮಣೋತ್ತಮನ ಮಾತನ್ನು ಕೇಳಿ ನನ್ನ ತಂದೆಯು ಆ ದಿವ್ಯ ಧನುಸ್ಸನ್ನು ಇವರ ಮುಂದೆ ತರಿಸಿಟ್ಟನು. ವೀರ್ಯವಂತನಾದ ರಾಮನು ಆ ಧನುಸ್ಸನ್ನು ನೋಡುತ್ತಿರುವವನಂತೆಯೇ, ರೆಪ್ಪೆಬಡಿಯುವಷ್ಟರಲ್ಲಿ ಅದನ್ನು ಕೈಯಿಂದೆತ್ತಿ ಬಗ್ಗಿಸಿ ನಾಣೇರಿಸಿಕಟ್ಟಿ ಎಳೆಯು ವುದಕ್ಕೂ ಪ್ರಯತ್ನಿಸಿದನು. ಹೀಗೆ ಆ ನಾಣನ್ನು ಎಳೆಯುವಾಗ, ಈತನ ಶಕ್ತಿಗೆ ತಡೆಯಲಾರದೆ ಆ ಧನುರ್ದಂಡವು ನಡುವೆ ಮುರಿದು ಹೋಗಿ ಎರಡು ತುಂಡಾಗಿ ಬಿದ್ದಿತು. ಇದರಿಂದುಂಟಾದ ಮಹಾಶಬ್ದವು ಸಿಡಿಲು ಬಡಿದಂತೆ ಬಹು ಭಯಂಕರವಾಗಿ ಸುತ್ತಲೂ ವ್ಯಾಪಿಸಿತು. ಆ ಕ್ಷಣವೇ ಸತ್ಯಸಂಧನಾದ ನನ್ನ ತಂದೆಯು ನನ್ನನ್ನು ರಾಮನ ಕೈಗೆ ಒಪ್ಪಿಸುವುದಕ್ಕಾಗಿ ಧಾರೆಯೆರೆಯಬೇಕೆಂದು ಜಲಕುಂಭವನ್ನು ಕೈಯ್ಯಲ್ಲಿ ಹಿಡಿದು ನಿಂತಿದ್ದನು. ಹೀಗೆ ಜನಕನು ಆತುರ ಪಡುತ್ತಿರುವುದನ್ನು ನೋಡಿ ರಾಮನು, ಆಗಲೇ ನನ್ನನ್ನು ಪರಿಗ್ರಹಿಸುವುದಕ್ಕೆ ಇಷ್ಟಪಡಲಿಲ್ಲ! ಅಯೋಧ್ಯಾಧಿಪತಿಯಾದ ತನ್ನ ತಂದೆಯಾದ ದಶರಥನ ಅಭಿಪ್ರಾಯವನ್ನು ಕೇಳದೆ ತಾನು ನನ್ನನ್ನು ಪರಿಗ್ರಹಿಸಲಾರೆನೆಂದು ಹೇಳಿ ಬಿಟ್ಟನು. ಆಗ ತಂದೆಯು ವೃದ್ಧನಾದ ನನ್ನ ಮಾವನನ್ನು ಕರೆಸಿ ಆತನ ಅನುಮತಿಯಿಂದ ನನ್ನನ್ನು ರಾಮನಿಗೆ ವಿವಾಹಮಾಡಿಕೊಟ್ಟನು. ಇಷ್ಟೇ ಅಲ್ಲ. ನನ್ನ ತಂಗಿಯಾದ ಊರ್ಮಿಳೆಯೆಂಬವಳೊಬ್ಬಳಿರುವಳು. ಆಕೆಯು ಪತಿ ವ್ರತಾಧರ್ಮವನ್ನು ಬಹಳ ಚೆನ್ನಾಗಿ ಬಲ್ಲವಳು. ಲೋಕ ಮೋಹಕವಾದ ರೂಪವುಳ್ಳವಳು. ಅವಳನ್ನೂ ನನ್ನ ತಂದೆಯು ಈ ಲಕ್ಷ್ಮಣನಿಗೆ ವಿವಾಹ ಮಾಡಿಕೊಟ್ಟನು. ಇದೇ ನಮ್ಮ ಸ್ವಯಂವರವೃತ್ತಾಂತವು. ಆ ಸ್ವಯಂವರ ದಲ್ಲಿ ನಾನು ಮಹಾತ್ಮನಾದ ಈತನ ಕೈಗೆ ಸೇರಿದ ವೃತ್ತಾಂತವೆಲ್ಲವನ್ನೂ ತಿಳಿ ಸಿರುವೆನು. ಎಲೈ ಆರ್ಯೆ! ನಾನು ಸತ್ಯ ಪರಾಕ್ರಮಿಗಳಲ್ಲಿ ಮೇಲೆನಿಸಿಕೊಂಡ

ಈ ನನ್ನ ಪತಿಯಲ್ಲಿ ಧರ್ಮರೀತಿಯಿಂದ ಅನುರಕ್ತಳಾಗಿಯೇ ಇರುವೆನು." ಎಂದಳು.

ಇದು ನೂರಹದಿನೆಂಟನೆಯ ಸರ್ಗವು

ರಾಮನು ಆ ರಾತ್ರಿಯನ್ನು ಋಷ್ಯಾಶ್ರಮದಲ್ಲಿಯೇ ಕಳೆದು, ಪ್ರಾತಃಕಾಲದಲ್ಲಿ ಎದ್ದು, ಆಹ್ನಿಕಗಳನ್ನು ನಡೆಸಿ ದಂಡಕಾರಣ್ಯಕ್ಕೆ ಹೊರಟುದು.

ಧರ್ಮಜ್ಞಳಾದ ಅನಸೂಯೆಯು ಈ ಸ್ವಯಂವರಚರಿತ್ರವನ್ನು ಕೇಳಿ ಸಂತೋಷಗೊಂಡು, ಕೈನೀಡಿ ಸೀತೆಯನ್ನಪ್ಪಿಕೊಂಡು, ಪ್ರೀತಿಯಿಂದ ಆಕೆಯ ತಲೆಯನ್ನಾಘ್ರಾಣಿಸಿ "ಎಲೆ ವತ್ಸೆ !. ಸ್ಫುಟಾಕ್ಷರಗಳುಳ್ಳುದಾಗಿಯೂ, ಕಿವಿಗಿಂಪಾಗಿಯೂ ಇರುವ ಈ ನಿನ್ನ ಮಾತುಗಳನ್ನು ಕೇಳುವಾಗಲೇ ನನಗೆ ಮೈಮರೆಯುವಷ್ಟು ಆನಂದವುಂಟಾಗುವುದು. ಅದರಲ್ಲಿಯೂ ನಿನ್ನ ಅದ್ಭುತವಾದ ಸ್ವಯಂವರ ಚರಿತ್ರೆಯನ್ನು ಕೇಳುವಾಗ ಇನ್ನು ಹೇಳತಕ್ಕುದೇನು ? ಈಗಲೀಗ ಅದರ ಪೂರ್ವೋತ್ತರಗಳೆಲ್ಲವನ್ನೂ ನಿನ್ನಿಂದ ನಾನು ಚೆನ್ನಾಗಿ ಕೇಳಿದಂತಾಯಿತು. ಈ ಕಥೆಯು ನನಗೆ ಎಷ್ಟೋ ಆನಂದವನ್ನುಂಟುಮಾಡಿತು. ಎಲೆ ವತ್ಸೆ, ಅದು ಹಾಗಿರಲಿ ! ಇದೋ ಸೂರ್ಯನು ಅಸ್ತಂಗತನಾಗುತ್ತಿರುವನು. ಮಂಗಳಕರವಾದ ರಾತ್ರಿಯು ಸನ್ನಿಹಿತವಾಗುತ್ತಿರುವುದು. ಹಗಲೆಲ್ಲವೂ ಆಹಾರಾರ್ಥವಾಗಿ ಅಲ್ಲಲ್ಲಿ ಸಂಚರಿಸುತ್ತಿದ್ದ ಹಕ್ಕಿಗಳು ನಿದ್ರಾತುರದಿಂದ ತಮ್ಮ ತಮ್ಮ ಗೂಡಿಗೆ ಹೋಗಿ ಸೇರುತ್ತಿರುವುದರಿಂದ, ಅವುಗಳ ಕಲಕಲಧ್ವನಿಯು ಹೊರಡುತ್ತಿರುವುದನ್ನು ಕೇಳಿದೆಯಾ ? ಇದೋ ! ಇಲ್ಲಿ ನೋಡು ! ಈ ಮಹರ್ಷಿಗಳು ಸಾಯಂಕಾಲ ಸ್ನಾನವನ್ನು ಮಾಡಿ, ತೊಯ್ದ ಮೈಯುಳ್ಳವರಾಗಿ, ಕೈಯ್ಯಲ್ಲಿ ಜಲಕುಂಭಗಳನ್ನಿಟ್ಟುಕೊಂಡು, ನೆನೆದ ನಾರುಮಡಿಗಳೊಡನೆಯೇ ಆಶ್ರಮಕ್ಕೆ ಗುಂಪು ಗುಂಪಾಗಿ ಬರುತ್ತಿರುವರು. ಅದೋ ! ಅಲ್ಲಿ ಕೆಲವು ಋಷಿಗಳು ಅಗ್ನಿ ಕಾರ್ಯವನ್ನು ನಡೆಸುವಾಗ ಶಾಸ್ತ್ರೋಕ್ತವಾಗಿ ಹೋಮ ಮಾಡಿದ ಹವಿಸ್ಸುಗಳಿಂದ ಹೊಗೆಯು ಹೊರಡುತ್ತಿರುವುದು ನೋಡು ! ಆ ಧೂಮವು, ಪಾರಿವಾಳದ ಮೈಯಂತೆ ಎಳಗೆಂಪುಳ್ಳುದಾಗಿ ಗಾಳಿಯಿಂದ ನಾಲ್ಕು ಕಡೆಗೂ ಚದರಿಸಲ್ಪಡುತ್ತಿರುವುದು. ದಿಕ್ಕುಗಳೆಲ್ಲವೂ ಸ್ಪಷ್ಟವಾಗಿ ಕಾಣಿಸ

ದಿರುವುದರಿಂದ ವಿಶೇಷವಾಗಿ ಎಲೆಗಳಿಲ್ಲದ ಈ ವೃಕ್ಷಗಳೂ ಕೂಡ ಹತ್ತಿರದಲ್ಲಿ ನೋಡುವಾಗಲೂ ಎಲೆಗಳಿಂದ ದಟ್ಟವಾಗಿ ತುಂಬಿದಂತೆ ಕಾಣುವುವು. ರಾತ್ರಿಯಲ್ಲಿ ಸಂಚರಿಸತಕ್ಕ ಭೂತ ಬೇತಾಳ ರಾಕ್ಷಸ ಪಿಶಾಚಾದಿಗಳೂ, ಇತರ ಕ್ರೂರಮೃಗಗಳೂ ಅಲ್ಲಲ್ಲಿ ಸಂಚರಿಸುತ್ತಿರುವುವು. ನಮ್ಮ ತಪೋವನದ ಮೃಗಗಳು ಅಗ್ನಿವೇದಿಕೆಯ ಪ್ರದೇಶಗಳಲ್ಲಿ ಮಲಗಿರುವುದನ್ನು ನೋಡು. ಎಲೆ ಸೀತೆ! ಇನ್ನು ನಕ್ಷತ್ರಗಳಿಂದಲಂಕರಿಸಲ್ಪಟ್ಟ ರಾತ್ರಿಯೂ ಗೋಚರಿಸಿಬಿಟ್ಟಳು. ಚಂದ್ರಿಕೆಯಿಂದಲಂಕರಿಸಲ್ಪಟ್ಟ ಚಂದ್ರನೂ ಆಕಾಶದಲ್ಲಿ ಉದಿಸಿಬಿಟ್ಟನು. ನೀನು ಹೋಗು! ರಾಮನ ಸಮೀಪದಲ್ಲಿರು. ನಿನ್ನ ಇಂಪಾದ ಮಾತುಗಳನ್ನು ಕೇಳಿ ನನಗೆ ಪರಮಸಂತೋಷವಾಯಿತು. ಎಲೆ ವತ್ಸೆ! ಇದೋ ಈ ವಸ್ತ್ರಾಭರಣಗಳನ್ನೂ ಅನುಲೇಪನಗಳನ್ನೂ ನೀನು ಸ್ವೀಕರಿಸಿ ನನ್ನಿದಿರಾಗಿಯೇ ನಿನ್ನ ದೇಹವನ್ನಲಂಕರಿಸಿಕೊಂಡು ನನಗೆ ಸಂತೋಷವನ್ನುಂಟುಮಾಡು. ಈ ದಿವ್ಯಾಲಂಕಾರಗಳಿಂದ ನಿನ್ನ ದೇಹವು ಅಲಂಕೃತವಾದುದನ್ನು ನೋಡಿದ ಹೊರತು ನನ್ನ ಮನಸ್ಸು ನಿಲ್ಲದು" ಎಂದಳು. ಇದನ್ನು ಕೇಳಿ ಆ ಸೀತೆಯು ತನ್ನ ದೇಹವನ್ನಲಂಕರಿಸಿಕೊಂಡು ದಿವ್ಯಸ್ತ್ರೀಯಂತೆ ಕಾಣುತ್ತ, ಆಕೆಯ ಪಾದಗಳನ್ನು ಹಿಡಿದು ನಮಸ್ಕರಿಸಿ ರಾಮನ ಸಮೀಪವನ್ನು ಸೇರುವುದಕ್ಕಾಗಿ ಹೊರಟಳು. ಹೀಗೆ ಅಲಂಕೃತಳಾಗಿ ಬಂದ ಸೀತೆಯನ್ನು ನೋಡಿ ರಾಮನು ತಪಸ್ವಿನಿಯಾದ ಅನಸೂಯೆಯು ತಮ್ಮಲ್ಲಿ ತೋರಿಸಿದ ಪ್ರೀತಿಗಾಗಿ ಪರಮಸಂತೋಷದಿಂದಿದ್ದನು. ಆಮೇಲೆ ಸೀತೆಯು ತನಗೆ ಅನಸೂಯೆಯು ಕೊಟ್ಟ ಪಾರಿತೋಷಿಕಗಳನ್ನೆಲ್ಲಾ ರಾಮನಿಗೆ ತೋರಿಸಿ, ಅಲ್ಲಿ ನಡೆದ ವೃತ್ತಾಂತಗಳೆಲ್ಲವನ್ನೂ ವಿಸ್ತಾರವಾಗಿ ತಿಳಿಸಿದಳು. ಮನುಷ್ಯಮಾತ್ರರಿಗೆ ದುರ್ಲಭವಾದ ಈ ಸತ್ಕಾರಗಳನ್ನು ಕೇಳಿ ರಾಮಲಕ್ಷ್ಮಣರಿಬ್ಬರೂ ಬಹಳ ಸಂತೋಷದಿಂದಿದ್ದರು. ಆಮೇಲೆ ರಾಮನು ಅಲ್ಲಿನ ಮಹರ್ಷಿಗಳಿಂದ ಅನೇಕ ವಿಧದಲ್ಲಿ ಸತ್ಕರಿಸಲ್ಪಟ್ಟವನಾಗಿ, ಪರಮ ಸಂತೋಷದಿಂದ ಆ ರಾತ್ರಿಯನ್ನು ಅಲ್ಲಿಯೇ ಕಳೆದನು. ಮಹರ್ಷಿಗಳ ಸಹವಾಸದಿಂದ ಅತಿಪವಿತ್ರವೆನಿಸಿಕೊಂಡ ಆ ರಾತ್ರಿಯು ಕಳೆದು ಬೆಳಗಾಗಲು, ಋಷಿಗಳೆಲ್ಲರೂ ಪ್ರಾತಃಕಾಲದಲ್ಲಿ ಸ್ನಾನಮಾಡಿ ಅಗ್ನಿಕಾರ್ಯವನ್ನು ನಡೆಸಿದ ಮೇಲೆ, ಪುರುಷಶ್ರೇಷ್ಠರಾದ ರಾಮಲಕ್ಷ್ಮಣರಿಬ್ಬರೂ ಆ ಋಷಿಗಳ ಬಳಿಗೆ ಬಂದು "ಎಲೈ ಪೂಜ್ಯರೇ! ನಾವು ಹೋಗಿಬರುವೆವು.

ನಮಗೆ ಅನುಜ್ಞೆಯನ್ನು ಕೊಡಬೇಕು” ಎಂದರು. ಧರ್ಮಾನುಷ್ಠಾನಪರರಾದ ಆ ಮಹರ್ಷಿಗಳು ರಾಮಲಕ್ಷ್ಮಣರನ್ನು ಕುರಿತು ಆ ವನದಲ್ಲಿ ಆಗಾಗ ತಮಗೆ ಸಂಭವಿಸುತಿದ್ದ ರಾಕ್ಷಸ ಬಾಧೆಯನ್ನು ತಿಳಿಸುವುದಕ್ಕಾಗಿ, ವ್ಯಾಜಾಂತರದಿಂದ “ವತ್ಸ ರಾಮನೆ! ಈ ಘೋರಾರಣ್ಯದಲ್ಲಿ ಮನುಷ್ಯರನ್ನೇ ನುಂಗಿಬಿಡತಕ್ಕ ನಾನಾರೂಪವುಳ್ಳ ರಾಕ್ಷಸರಿರುವರು. ಇಲ್ಲಿ ರಕ್ತವನ್ನೇ ತಮ್ಮ ಆಹಾರವಾಗಿಟ್ಟು ಕೊಂಡಿರುವ ಕ್ರೂರಮೃಗಗಳೂ ಅನೇಕವಾಗಿರುವುವು. ಋಷಿಗಳು ಮೈಲಿಗೆ ಯಿಂದಾಗಲಿ ಅಜಾಗ್ರತೆಯಿಂದಾಗಲಿ ಇರುವ ಸಮಯವನ್ನು ನೋಡಿ ಮೇಲೆ ಬಿದ್ದು ಆ ಋಷಿಗಳನ್ನು ತಿಂದುಬಿಡುವರು. ಅವರನ್ನಡಗಿಸುವ ಭಾರವು ನಿನಗೆ ಸೇರಿದೆ. ವತ್ಸ ರಾಮನೆ! ಇದೋ ನೋಡು! ಋಷಿಗಳು ತಮ್ಮ ಆಹಾರಾರ್ಥ ವಾಗಿ ಕಾಡಿನಲ್ಲಿ ಹಣ್ಣು ಹಂಪಲುಗಳನ್ನೂ, ಗೆಡ್ಡೆಗೆಣಸುಗಳನ್ನೂ ಸಂಗ್ರಹಿಸಿ ತರುವುದಕ್ಕಾಗಿ ಹೋಗಿರುವ ದಾರಿಯೇ ಇದು. ಇದೇ ದಾರಿಯನ್ನು ಹಿಡಿದು ಹೋಗಿ, ನೀನು ದುರ್ಗಮವಾದ ಆ ದಂಡಕಾರಣ್ಯವನ್ನು ಪ್ರವೇಶಿಸುವುದು ಚಿತವು” ಎಂದರು. ಹೀಗೆ ತಪಸ್ವಿಗಳೆಲ್ಲರೂ ವಿನಯದಿಂದ ಕೇಳಿಕೊಳ್ಳುತ್ತ, ಮಂಗಳಾಶೀರ್ವಾದಗಳನ್ನು ಮಾಡಲು, ಪರಂತಪನಾದ ರಾಮನು ಅವೆಲ್ಲವನ್ನೂ ಶಿರಸಾವಹಿಸಿ, ಸೀತಾಲಕ್ಷ್ಮಣರೊಡಗೂಡಿ ಸೂರ್ಯನು ಮೇಘಮಂಡಲವನ್ನು ಪ್ರವೇಶಿಸುವಂತೆ ದಂಡಕಾರಣ್ಯವನ್ನು ಪ್ರವೇಶಿಸಿದನು.

ಇದು ನೂರಹತ್ತೊಂಬತ್ತನೆಯ ಸರ್ಗವು.

ಇಲ್ಲಿಗೆ ಅಯೋಧ್ಯಾಕಾಂಡವು ಮುಗಿದುದು.

ಮಂಗಳಂ.